॥ ಶ್ರೀ ॥

ಪಾಣಿನೀಯ ಪ್ರವೇಶಿಕಾ

ಲಘುಸಿದ್ಧಾಂತಕೌಮುದೀ

(ಕನ್ನಡ ವ್ಯಾಖ್ಯಾನ)

(ಭಾಗ ೧—ಸಂಜ್ಞಾ, ಸಂಧಿ ಮತ್ತು ಸುಬಂತ ಪ್ರಕರಣಗಳು)

ವಿದ್ವಾನ್ ಜಿ. ವಿಷ್ಣುಮೂರ್ತಿ ಭಟ್ಟ
ಮೈಸೂರು

ಬೆಲೆ : ರೂ. ೩—೭೫—೦

ಪಾಣಿನೀಯ ಪ್ರವೇಶಿಕಾ

ಲಘುಸಿದ್ಧಾಂತ ಕೌಮುದೀ

ಕನ್ನಡ ವ್ಯಾಖ್ಯಾನ

(ಮೊದಲನೆಯ ಭಾಗ)

ಲೇಖಕ:—

ಜಿ. ವಿಷ್ಣುಮೂರ್ತಿಭಟ್ಟ.

ವ್ಯಾಕರಣ, ಸಾಹಿತ್ಯ, ತರ್ಕ, ಕನ್ನಡ ವಿದ್ವಾನ್.
ರಾಷ್ಟ್ರಭಾಷಾ ವಿಶಾರದ
ಅಲಂಕಾರ ಶಾಸ್ತ್ರ ಸಹಾಯೋಪಾಧ್ಯಾಯ.
ಶ್ರೀನುನ್ಮಹಾರಾಜ ಸಂಸ್ಕೃತಮಹಾಪಾಠಶಾಲಾ
ಮೈಸೂರು.

ಎಲ್ಲಾ ಹಕ್ಕೂ ಕಾದಿರಿಸಿದೆ.

(ಪ್ರಥಮ ಮುದ್ರಣ)

ಕೆ. ವೆಂಕಟಸುಬ್ಬಯ್ಯ.
ಪ್ರಿಂಟರ್,
ಶ್ರೀ ವಿನಾಯಕ್ ಪ್ರಿಂಟಿಂಗ್ ವರ್ಕ್ಸ್, ಮೈಸೂರು.

ಬೆಲೆ 3—8—0

—: ಶ್ರೀಃ :—

ಶ್ರೀ ಗುರುವರ್ಯರ ಆಶೀರ್ವಚನ

ಭಾರತದ ಸಂಸ್ಕೃತಿಯೆಂಬ ನಂದಾದೀಪವನ್ನು ಬೆಳಗಿಸುವ ಶ್ರುತಿಸ್ಮೃತಿ ಇತಿಹಾಸಾದಿಗಳಿಗೆ ಸಂಸ್ಕೃತ ವ್ಯಾಕರಣವು ಮುಖದಂತೆ ಪ್ರಧಾನವಾಗಿದೆ. ಸಕಲ ಸಂಸ್ಕೃತ ವಾಙ್ಮಯದ ಜ್ಞಾನವು ಪಾಣಿನಿಯ ವ್ಯಾಕರಣದಿಂದಲೇ ಆಗಬೇಕು, ಪಾಣಿನಿ ಮಹರ್ಷಿಗಳು ಲೌಕಿಕ ವೈದಿಕ ಎರಡೂ ಶಬ್ದಗಳ ವ್ಯುತ್ಪತ್ತಿಯನ್ನು ನಿರ್ವಚನ ಮಾಡಿರುವುದರಿಂದ ಇತರ ವೈಯಾಕರಣರಿಗೆ ಅಗ್ರೇಸರರಾಗಿರುತ್ತಾರೆ. ವಿಷ್ಣು ಮೂರ್ತಿಭಟ್ಟರು ಬಹು ಶ್ರದ್ಧೆಯಿಂದ ನನ್ನಲ್ಲಿ ಕ್ರಮವಾಗಿ ವ್ಯಾಕರಣವನ್ನು ಅಧ್ಯಯನ ಮಾಡಿರುತ್ತಾರೆ. ಈ ವ್ಯಾಕರಣ ಶಾಸ್ತ್ರದಲ್ಲಿ ಪೂರ್ಣ ಪಾಂಡಿತ್ಯವನ್ನು ಪಡೆದು ಇವರು ಈಗ ಸಂಕ್ಷಿಪ್ತವಾಗಿ ಪಾಣಿನಿಯ ವ್ಯಾಕರಣವನ್ನು ಸಾರವತ್ತಾಗಿ ತಿಳಿಸುವ ಲಘು ಸಿದ್ಧಾಂತ ಕೌಮುದೀ ಎಂಬ ಗ್ರಂಥಕ್ಕೆ ಕನ್ನಡದಲ್ಲಿ ವ್ಯಾಖ್ಯಾನ ಬರೆದಿರುತ್ತಾರೆ. ಸಂಸ್ಕೃತ ಭಾಷಾ ಜ್ಞಾನವನ್ನು ಬಯಸುವವರೆಲ್ಲರೂ ಮೊದಲು ಓದಬೇಕಾದ ಗ್ರಂಥವೆಂದರೆ ಲಘು ಸಿದ್ಧಾಂತ ಕೌಮುದೀ. ಅದನ್ನು ಈಗ ಸುಲಭವಾಗಿ ಕನ್ನಡಿಗರೆಲ್ಲರಿಗೂ ತಿಳಿಯುವಂತೆ ಕನ್ನಡದಲ್ಲಿ ಬರೆದು ಸಕಲರಿಗೂ ಉಪಕಾರವಾಗುವಂತೆ ಮಾಡಿರುವ ಇವರ ಪರಿಶ್ರಮವು ಶ್ಲಾಘನೀಯವಾಗಿದೆ. ಈ "**ಪಾಣಿನೀಯ ಪ್ರವೇಶಿಕಾ**" ಗ್ರಂಥವು ಎಲ್ಲಾ ವಿಧದಿಂದಲೂ ಇಡೀ ಕರ್ಣಾಟಕ ಪ್ರಾಂತ್ಯದಲ್ಲಿಯೂ ಪ್ರಕಾಶಿತವಾಗಿ ಜನಪ್ರಿಯವಾಗಲೆಂದೂ ಕನ್ನಡಿಗರೆಲ್ಲರೂ ಇದರಿಂದ ಪೂರ್ಣ ಪ್ರಯೋಜನವನ್ನು ಹೊಂದಿ ಸಂಸ್ಕೃತ ವಾಙ್ಮಯ ಜ್ಞಾನವನ್ನು ಪಡೆದು ಸುಸಂಸ್ಕೃತರಾಗಲೆಂದೂ ಹಾರೈಸುತ್ತೇನೆ.

(ಸಹಿ)

ತಾ|| 30-11-56
ಮೈಸೂರು

ಪಂಡಿತರತ್ನಮ್ ಮಹಾವಿದ್ವಾ
ನೆರೂರು ಕೃಷ್ಣಾಚಾರ್ಯ
ವಿಶ್ರಾಂತ ವ್ಯಾಕರಣ ಪ್ರಧಾನೋಪಾಧ್ಯಾಯರು
ಶ್ರೀಮನ್ಮಹಾರಾಜ ಸಂಸ್ಕೃತ ಮಹಾಪಾಠಶಾಲಾ
ಮೈಸೂರು

ನಿವೇದನಮ್.

ಸದ್ಬುದ್ಧಿಪ್ರಚೋದಕರಾದ ಶ್ರೀಗುರುವರ ಬ್ರ. ಶ್ರೀ. ಕ. ಶ್ರೀನಿವಾಸಾಚಾರ್ಯರನ್ನೂ ಬ್ರ. ಶ್ರೀ. ನೆರೂರು ಕೃಷ್ಣಾಚಾರ್ಯರನ್ನೂ ಮನಸಾ, ಶಿರಸಾ ವಂದಿಸಿ ನಾಲ್ಕು ಮಾತುಗಳನ್ನು ಬರೆಯಲು ಬಯಸುತ್ತೇನೆ.

ನಮ್ಮ ಭಾರತದ ಸಕಲಭಾಷೆಗಳಿಗೂ ಸಂಸ್ಕೃತವೇ ಮೂಲ ಭೂತವಾದುದೆಂದು ಸಕಲರಿಗೂ ತಿಳಿದ ವಿಷಯ. ದಕ್ಷಿಣದ ಭಾಷೆಗಳ ವಿಷಯದಲ್ಲಿ ಇದು ವಿವಾದಾಸ್ಪದವಾದರೂ ಗಂಗಾಯಮುನೆಯರ ಸಂಗಮದಂತೆ ಅನಾದಿಯಿಂದಲೂ ನಮ್ಮ ಮಾತೃಭಾಷೆಗಳಲ್ಲಿ ಸಂಸ್ಕೃತಪದಗಳು ಸಂಮಿಶ್ರಿತವಾಗಿ ಭೇದಕ್ಕೆ ಅವಕಾಶವಿಲ್ಲದಂತೆ ಹಾಸು ಹೊಕ್ಕಾಗಿ ಬೆರೆತು ಒಂದಾಗಿ ತೋರುತ್ತಿವೆ. ನಮ್ಮ ಕನ್ನಡ ಭಾಷೆಯು ಸಂಸ್ಕೃತ ಸಂಮಿಶ್ರಣದಿಂದ ಎಷ್ಟು ಉಜ್ವಲವಾಗಿದೆಯೆಂಬುದು ಪಂಪ, ಜಗನ್ನಾಥ, ಕುಮಾರವ್ಯಾಸ ಮುಂತಾದ ಉದ್ದಾಮಕವಿಗಳ ಸರಸ ಕಾವ್ಯಗಳ ಪರಿಶೀಲನೆಯಿಂದ ಅಭಿವ್ಯಕ್ತವಾಗುತ್ತದೆ. ಸಂಸ್ಕೃತ ವ್ಯಾಕರಣನಿಯಮಗಳನ್ನಳವಡಿಸಿಕೊಂಡೇ ನಮ್ಮ ದೇಶೀಯ ಭಾಷಾವ್ಯಾಕರಣಗಳು ರಚಿತವಾಗಿವೆ ಎಂದು ವಿಮರ್ಶಕರಿಗೆ ತಿಳಿದ ವಿಷಯವೇ. ಭಟ್ಟಾಕಳಂಕನ ಶಬ್ದಾನುಶಾಸನ ವೆಂಬ ಕನ್ನಡ ವ್ಯಾಕರಣ ಗ್ರಂಥವು ಸಂಸ್ಕೃತಭಾಷೆಯಲ್ಲೇ ಬರೆಯಲ್ಪಟ್ಟುದುದರಿಂದ ಆಗ ಸಂಸ್ಕೃತಕನ್ನಡಗಳ ಬಾಂಧವ್ಯ ಎಷ್ಟರಮಟ್ಟಿಗೆ ಇತ್ತೆಂಬುದು ವ್ಯಕ್ತವಾಗುತ್ತದೆ. ಸಂಸ್ಕೃತಭಾಷೆಯು ವ್ಯಾಕರಣನಿಯಮದಿಂದ ಸುಬದ್ಧವಾದುದರಿಂದಲೇ ಇಂದಿಗೂ ಯಾವ ಭಾಷೆಗಳ ಆಘಾತಕ್ಕೂ ಒಳಗಾಗದೆ ಅಚ್ಚಳಿಯದೆ ಕಂಗೊಳಿಸುತ್ತಿದೆ.

ಪದಗಳ ಪ್ರಕೃತಿಪ್ರತ್ಯಯಾದಿಗಳನ್ನು ನಿರ್ವಚನ ಮಾಡುವ ಶಾಸ್ತ್ರಕ್ಕೆ ವ್ಯಾಕರಣ ಶಾಸ್ತ್ರವೆಂದು ಹೆಸರು. ಬ್ರಾಹ್ಮಣವಾಕ್ಯಗಳಲ್ಲಿ ವಚನ, ವಿಭಕ್ತಿಮುಂತಾದ ಪದಗಳು ವ್ಯವಹೃತವಾಗಿರುವುದರಿಂದ ವೇದಕಾಲದಲ್ಲಿಯೇ ಇದು ಪ್ರಸಿದ್ಧವಾಗಿತ್ತೆಂದು ತಿಳಿಯುತ್ತದೆ. " ಎಲ್ಲಾ ಪದಗಳೂ ಧಾತುವಿನಿಂದಲೇ (ಕ್ರಿಯಾಪದ) ಆಗಿವೆಯೆಂಬ ಶಾಕಟಾಯನರ ಮಾತನ್ನು ಯಾಸ್ಕರು ಉದಾಹರಿಸಿರುತ್ತಾರೆ. ಇದರಿಂದ ಪವಿತ್ರವಾದ ಈ ವ್ಯಾಕರಣವು ಯಾಸ್ಕರ ನಿರುಕ್ತಕ್ಕಿಂತ ಪೂರ್ವದಲ್ಲಿಯೇ ನಾನಾ ಋಷಿಗಳಿಂದ ವಿಸ್ತರಗೊಳಿಸಲ್ಪಟ್ಟಿರುವುದೆಂದು ತಿಳಿಯುತ್ತದೆ. ಶಾನಕರ ಪ್ರಾತಿಶಾಖ್ಯ ಗ್ರಂಥದಲ್ಲಿರುವ ಪ್ರತ್ಯಯಗಳ ಕೃತ್ತದ್ಧಿತ ವಿಭಾಗದಿಂದ ನಿರುಕ್ತಾದಿಗಳಿಗಿಂತಲೂ ಈ ಸಂಜ್ಞೆಗಳು ಪ್ರಾಚೀನವೆನ್ನಬೇಕು. ರಾಮಾಯಣದಲ್ಲಿ ನವ ವ್ಯಾಕರಣಗಳೂ ಪ್ರಸಕ್ತವಾದುದರಿಂದ ಪಾಣಿನಿಯ ವ್ಯಾಕರಣವು ರಾಮಾಯಣಕ್ಕಿಂತ ಪ್ರಾಚೀನವಾದುದೆಂದು ಹೇಳಬಹುದು.

ಮಹಾಭಾಷ್ಯದಲ್ಲಿ ಆಪಿಶಲ, ಕಾಶಕೃತ್ಸ್ನ ಮುಂತಾದವರ ನಾಮ ನಿರ್ದಿಷ್ಟವಾದುದರಿಂದ ಆ ಕಾಲದಲ್ಲಿ ನವವ್ಯಾಕರಣಗಳೂ ಉಪಲಬ್ಧವಾಗುತ್ತಿತ್ತೆಂದು ತಿಳಿಯುತ್ತದೆ. ಆದರೆ ಅವೆಲ್ಲವೂ ವೈದಿಕ ಶಬ್ದಗಳನ್ನು ನಿರ್ವಚನ ಮಾಡಿರುವುದರಿಂದ, ಕೇವಲ ಕೆಲವು ಲೌಕಿಕ ಶಬ್ದಗಳ ವ್ಯುತ್ಪತ್ತಿಯನ್ನು ತಿಳಿಸಿರುವುದರಿಂದಲೂ ಪಾಣಿನಿಗಳು ಈ ಎರಡೂ ಶಬ್ದಗಳ ನಿರ್ವಚನವನ್ನು ಮಾಡಿ ತೋರಿಸಿರುವುದದರಿಂದಲೂ ಇವರ ವ್ಯಾಕರಣಕ್ಕೆ ಸರ್ವ ತ್ರೈಷ್ಠತೆ ಪ್ರಾಪ್ತವಾಗಿದೆ. ಇದರಿಂದಲೇ ಉಭಯ ಶಬ್ದಜ್ಞಾನವುಂಟಾಗುತ್ತಿರುವಾಗ ಜನರ ಉಪೇಕ್ಷೆಯಿಂದಲೇ ಇತರ ವ್ಯಾಕರಣಗಳು ನಷ್ಟವಾಗಿರಬಹುದು. ಪಾಣಿನಿಗಳ ಸೂತ್ರವಿನ್ಯಾಸ ಕ್ರಮವು ಅಸದೃಶವಾದುದೆಂದು ಶ್ರೀ ಶಂಕರಾಚಾರ್ಯ ಮುಂತಾದ ವಿಭೂತಿ ಪುರುಷರೇ ಶ್ಲಾಘಿಸಿರುತ್ತಿರುವಾಗ ಈಗಿನ ಪಾಶ್ಚಾತ್ಯವಿಮರ್ಶಕರು ಹೊಗಳುವುದು ವಿಶೇಷವೇನಲ್ಲ. ಈ ವ್ಯಾಕರಣ ಸಿದ್ಧಾಂತಗಳನ್ನು ವ್ಯಾಡಿಯೆಂಬುವನು ಲಕ್ಷ ಶ್ಲೋಕಗಳಿಂದ ವಿವರಿಸಿರುವನೆಂದು ಕಥಾ ಸರಿತ್ಸಾಗರದಿಂದ ತಿಳಿಯುತ್ತದೆ. ಪಾಣಿನಿಗಳ ಮುಂದೆ ವ್ಯಾಖ್ಯಾ ಗ್ರಂಥಗಳ ಪ್ರಾಬಲ್ಯವು ಹೆಚ್ಚಾಯಿತು. ವರರುಚಿಗಳು (ಕಾತ್ಯಾಯನಿ) ಈ ಸೂತ್ರಗಳಿಗೆ ವಾರ್ತಿಕಗಳನ್ನು ರಚಿಸಿರುತ್ತಾರೆ. ಇವರು ಸಮಕಾಲಿಕರೆಂದು ಕಥಾಸರಿತ್ಸಾಗರದಿಂದ ತಿಳಿದು ಬಂದರೂ ವಿಮರ್ಶಕರು ಇದನ್ನು ಅಂಗೀಕರಿಸುವುದಿಲ್ಲ. ಸುಮಾರು ಕ್ರಿಸ್ತಪೂರ್ವ ಆರನೇ ಶತಮಾನ, ಅಥವಾ 4ನೇ ಶತಮಾನ ಪಾಣಿನಿಯ ಕಾಲವೆಂದೂ, ಅವರ ಅಭಿಪ್ರಾಯ. ಕ್ರಿಸ್ತಪೂರ್ವ ಮೂರನೇ ಶತಮಾನ ವರರುಚಿಯ ಕಾಲವೆಂದೂ ಅವರ ಅಭಿಪ್ರಾಯ. ಕ್ರಿಸ್ತಪೂರ್ವ ಎರಡನೇ ಶತಮಾನದಲ್ಲಿ ಪತಂಜಲಿ ಮಹರ್ಷಿಗಳು ಇವುಗಳಿಗೆ ಮಹಾಭಾಷ್ಯವನ್ನು ರಚಿಸಿದರು. ಈ ಸೂತ್ರಗಳಿಗೆ ಅನೇಕರು ವಾರ್ತಿಕಗಳನ್ನು ಬರೆದಿರುತ್ತಾರೆಂದು ಅವರ ಭಾಷ್ಯಪರಿಶೀಲನೆಯಿಂದ ತಿಳಿಯುತ್ತದೆ. ಭಾಷೆಯು ಬದಲಾವಣೆ ಹೊಂದುತ್ತಿದ್ದುದರಿಂದಲೂ, ಉತ್ತರೋತ್ತರ ಈ ಋಷಿಗಳು ಶಬ್ದ ವ್ಯತ್ಯಾಸವನ್ನು ತೋರಿಸಿರುವುದರಿಂದಲೂ ಈ ಮುನಿತ್ರಯರ ಕಾಲದಲ್ಲಿ ಅಂತರವಿರಲೇಬೇಕು. ಪಾಣಿನಿಗಿಂತ ವರರುಚಿಗಳು ಅರ್ವಾಚೀನರೆಂದೂ ವಾಕ್ಷಿಣಾತ್ಯರೆಂದೂ ಮಹಾಭಾಷ್ಯ ಪರಿಶೀಲನೆಯಿಂದಲೇ ವ್ಯಕ್ತವಾಗುತ್ತದೆ. ಮಹಾಭಾಷ್ಯದಿಂದ ವ್ಯಾಕರಣದ ನಿಷ್ಕೃಷ್ಟ ಜ್ಞಾನವುಂಟಾಗುವುದಲ್ಲದೆ ಲೌಕಿಕ ನ್ಯಾಯಗಳೂ, ವ್ಯವಹಾರಗಳೂ ವಿಷಯಪ್ರದರ್ಶನ ಶೈಲಿ ಮುಂತಾದವುಗಳೂ ತಿಳಿಯುತ್ತವೆ. ಸರ್ವ ಶಾಸ್ತ್ರ ಗ್ರಾಹ್ಯವಾದುದರಿಂದ ಇದಕ್ಕೆ ಮಹತ್ವ ಬಂದಿದೆ. ಇದರಿಂದಲೇ " ಮಹಾ ಭಾಷ್ಯಂ ವಾ ಪಠನೀಯಮ್, ಮಹಾರಾಜ್ಯಂ ವಾ ಪಾಲನೀಯಮ್ " ಎಂಬ ನಾಣ್ನುಡಿ ಪ್ರಚುರವಾಗಿದೆ. ಈ ಮಹಾಭಾಷ್ಯಕ್ಕೆ ಕೈಯಟರು ಪ್ರದೀಪವೆಂಬ ವ್ಯಾಖ್ಯಾನವನ್ನು ಬರೆದು ಭಾಷ್ಯಾಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಈ ಪ್ರದೀಪಕ್ಕೆ ನಾಗೇಶಭಟ್ಟರು ಉದ್ಯೋತವೆಂಬ ವ್ಯಾಖ್ಯಾನವನ್ನು ಬರೆದು ಭಾಷ್ಯಸಿದ್ಧಾಂತವನ್ನು ಇನ್ನೂ ಸುಲಭವಾಗಿ ತಿಳಿಯುವಂತೆ ಮಾಡಿರುತ್ತಾರೆ. ಆಮೇಲೆ ಭರ್ತೃಹರಿ

ಎಂಬ ವೈಯಾಕರಣನು ಸೂತ್ರ ಭಾಷ್ಯಾಭಿಪ್ರಾಯಗಳಿಂದ ವೈಯಾಕರಣ ಸಿದ್ಧಾಂತವನ್ನು ವಾಕ್ಯಪದೀಯವೆಂಬ ಗ್ರಂಥದಲ್ಲಿ ವಿವರಿಸಿ ಭಾಷ್ಯೋಪಕ್ಷಿಪ್ತವಾದ ವೈಯಾಕರಣ ಸ್ಫೋಟವಾದವನ್ನು ಪ್ರಪ್ರಥಮವಾಗಿ ವ್ಯಕ್ತಪಡಿಸಿದನು. ಸ್ಫೋಟಸಿದ್ಧಾಂತವೆಂಬ ಗ್ರಂಥವನ್ನು ಆಮೇಲೆ ಮಂಡನ ಮಿಶ್ರರು ಬರೆದಿರುತ್ತಾರೆ. ವಾಮನ, ಜಯಾದಿತ್ಯರು ಸೇರಿ ಸೂತ್ರಗಳಿಗೆ ಕಾಶಿಕಾ ಎಂಬ ವೃತ್ತಿ ಗ್ರಂಥವನ್ನು ಬರೆದಿರುತ್ತಾರೆ. ಇದಕ್ಕೆ ಪದಮಂಜರಿಯೆಂಬ ಭಾಷ್ಯಾಶಯಗಳನ್ನೇ ವ್ಯಕ್ತಪಡಿಸುವ ವಿಸ್ತಾರವಾದ ವ್ಯಾಖ್ಯಾನ ಗ್ರಂಥವನ್ನು ಹರದತ್ತನು ರಚಿಸಿರುತ್ತಾನೆ.

ಹೀಗೆ ಅನೇಕ ವೈಯಾಕರಣರು ವೃತ್ತಿ ವ್ಯಾಖ್ಯಾನ ಗ್ರಂಥಗಳನ್ನು ಬರೆದರೂ ಅವೆಲ್ಲವೂ ಸೂತ್ರ ಕ್ರಮವನ್ನೇ ಅನುಸರಿಸಿರುವುದರಿಂದ ಅದರಂತೆ ಶಬ್ದ ಪ್ರಕ್ರಿಯೆ ತಿಳಿಯುವುದು ಕ್ಲಿಷ್ಟವಾದುದರಿಂದ ಧರ್ಮಕೀರ್ತಿಯೆಂಬ ಜೈನ ವೈಯಾಕರಣನು ಸುಲಭವಾದ ಬೇರೆ ರೀತಿಯನ್ನವಲಂಬಿಸಿ ವೃತ್ತಿ ಗ್ರಂಥವನ್ನು ಬರೆದನು. ಆ ಕ್ರಮವನ್ನೇ ಅನೇಕ ವೈಯಾಕರಣರು ಅನುಸರಿಸುತ್ತಾ ಬಂದುದರಿಂದ ಶ್ರೀಭಟ್ಟೋಜಿದೀಕ್ಷಿತರೂ ಆ ಕ್ರಮದಿಂದಲೇ ಸಿದ್ಧಾಂತ ಕೌಮುದಿಯೆಂಬ ಗ್ರಂಥವನ್ನು ಬರೆದು ಲೋಕೋಪಕಾರ ಮಾಡಿರುತ್ತಾರೆ. ಇವರು ಸೂತ್ರ ಕ್ರಮವನ್ನು ಅನುಸರಿಸಿಯೂ (ಶಬ್ದ ಕೌಸ್ತುಭ) ಬೃಹದ್ವ್ಯಾಖ್ಯಾನ ಮಾಡಿರುವುದಲ್ಲದೆ ವೈಯಾಕರಣ ಸಿದ್ಧಾಂತವನ್ನು ತಿಳಿಸುವ ಸ್ವತಂತ್ರ ಗ್ರಂಥಗಳನ್ನು ರಚಿಸಿರುತ್ತಾರೆ. ಇವರ ಗ್ರಂಥಗಳಿಗೆ ಭಾಷ್ಯದಂತೆ ನಾಗೇಶಭಟ್ಟರು ವಿಸ್ತಾರವಾಗಿ ವ್ಯಾಖ್ಯಾನ ಮಾಡಿದುದಲ್ಲದೆ ಮಂಜೂಷಾ ಎಂಬ ಗ್ರಂಥದಲ್ಲಿ ವೈಯಾಕರಣರ ಎಲ್ಲಾ ಸಿದ್ಧಾಂತಗಳನ್ನು ಪರ ಮತಖಂಡನಪೂರ್ವಕವಾಗಿಯೂ ಪ್ರತಿಪಾದಿಸಿರುತ್ತಾರೆ. ಅನೇಕ ಶಾಸ್ತ್ರ ಗ್ರಂಥಗಳನ್ನೂ ಬರೆದಿರುವುದರಿಂದ ಇವರ ಪಾಂಡಿತ್ಯ ಪ್ರಕರ್ಷವು ಅಗಾಧವಾಗಿದೆ. ಹೀಗೆ ಇನ್ನೂ ಅನೇಕ ವೈಯಾಕರಣರು ವ್ಯಾಕರಣ ಸಿದ್ಧಾಂತ ಪ್ರತಿಪಾದಕ ಗ್ರಂಥಗಳನ್ನೂ ವ್ಯಾಖ್ಯಾನ ಗ್ರಂಥಗಳನ್ನೂ ರಚಿಸಿ ವ್ಯಾಕರಣ ಶಾಸ್ತ್ರವನ್ನು ಅಪಾರ ಅನಂತವನ್ನಾಗಿ ಮಾಡಿರುತ್ತಾರೆ.

ಆದರೆ, ಸಂಸ್ಕೃತ ಭಾಷಾ ಜ್ಞಾನವನ್ನು ಅಪೇಕ್ಷಿಸುವ ಬಾಲಕರಿಗೆ ಇವೆಲ್ಲವೂ ಮೊದಲು ಕ್ಲಿಷ್ಟವಾಗಿರುವುದರಿಂದ, ಬಾಲಕರ ಉಪಯೋಗಕ್ಕಾಗಿ ಭಟ್ಟೋಜಿದೀಕ್ಷಿತರ ಶಿಷ್ಯರಾದ ಶ್ರೀ ವರದರಾಜರು ಹದಿನೇಳನೆಯ ಶತಮಾನದಲ್ಲಿ ಲಘು ಸಿದ್ಧಾಂತ ಕೌಮುದಿಯೆಂಬ ಗ್ರಂಥವನ್ನು ಬರೆದಿರುತ್ತಾರೆ. ಇವರು ಪಾಣಿನಿ ಸೂತ್ರಗಳಲ್ಲಿ ಅತ್ಯುಪಯುಕ್ತವಾದವುಗಳನ್ನೇ ಆರಿಸಿಕೊಂಡು ಅವುಗಳಿಗೆ ಸರಳ ಸಂಸ್ಕೃತ ಭಾಷೆಯಲ್ಲಿ ವೃತ್ತಿ ಮತ್ತು ಉದಾಹರಣೆಗಳನ್ನು ಬರೆದು ಬಾಲಕರಿಗೆ ಸುಲಭವಾಗಿ ತಿಳಿಯುವಂತೆ ಮಾಡಿರುತ್ತಾರೆ. ಈ ಗ್ರಂಥವು ಸೂತ್ರ ವೃತ್ತಿ ಕ್ರಮಗಳಲ್ಲಿಲ್ಲಿ ಸಿದ್ಧಾಂತ ಕೌಮುದಿಯ ಕ್ರಮವನ್ನು ಅನುಸರಿಸಿದರೂ ಪ್ರಕರಣ ನಿರ್ವೇಶಕ್ರಮದಲ್ಲಿ ಸ್ವಾತಂತ್ರ್ಯವನ್ನು ಪಡೆ

ದಿದೆ. ಅನಾಂತರ ಪ್ರಕರಣಗಳನೇಕವಿದ್ದರೂ ಮುಖ್ಯವಾಗಿ ಎಂಟನ್ನು ಪರಿಗಣಿಸ
ಬಹುದು. ಇವುಗಳಲ್ಲಿ ಉತ್ತರೋತ್ತರಗಳಿಗೆ ಪೂರ್ವ ಪೂರ್ವಗಳ ಸಾಪೇಕ್ಷವಿರುವು
ದರಿಂದ ಇಲ್ಲಿನ ಕ್ರಮವು ಸಮಂಜಸವಾಗಿದೆ. ಸಂಜ್ಞಾ ಪ್ರಕರಣವು ಎಲ್ಲಾ ಪ್ರಕರಣ
ಗಳಿಗೂ ಬೇಕಾದುದರಿಂದ ಮೊದಲು ಹೇಳಿದೆ. ಸಂಧಿಗಳು ಸುಬಂತಾದಿಗಳಲ್ಲಿ ಅಪೇಕ್ಷಿತ
ಗಳಾದುದರಿಂದ ಎರಡನೆಯದಾಗಿ ಹೇಳಿದೆ. ನಾಮಪದದ ಮೇಲೂ ತಿಙ್ ಪ್ರತ್ಯಯ
ಗಳನ್ನು ಹೇಳುವುದರಿಂದ ತಿಙನ್ತಕ್ಕಿಂತ ಮೊದಲು ಸುಬನ್ತ ವಿವೃತವಾಗಿದೆ. ಧಾತು
ಗಳ ಮೇಲೆ ಕೃತ್‌ಪ್ರತ್ಯಯ ವಿಧಾನ ಮಾಡುವುದರಿಂದ ತಿಙನ್ತವಾದ ಮೇಲೆ ಕೃದಂತ
ಪ್ರಕರಣ ಹೇಳಿದೆ. ಕೃದಂತ, ನಾಮಗಳ ಮೇಲೆ ತದ್ಧಿತ ಪ್ರತ್ಯಯಗಳನ್ನು ವಿಧಾನ
ಮಾಡುವುದರಿಂದ ತದ್ಧಿತ ಪ್ರಕರಣವನ್ನು ಆಮೇಲೆ ಹೇಳಿರುತ್ತಾನೆ. ಕೃದಂತ ತದ್ಧಿ
ತಾಂತ ಪದಗಳಿಂದ ಸಮಾಸ ಮಾಡುವುದರಿಂದ ಸಮಾಸ ಪ್ರಕರಣ ತದ್ಧಿತವಾದ
ಮೇಲೆ ಹೇಳಿದೆ. ಸ್ತ್ರೀ ಪ್ರತ್ಯಯಗಳನ್ನು ಸಮಾಸದ ಮೇಲೂ ಹೇಳುವುದರಿಂದ
ಕೊನೆಗೆ ಅವುಗಳನ್ನು ವಿವರಿಸಿರುತ್ತಾನೆ. ವ್ಯಾಕರಣದ ಆಳವಾದ ಜ್ಞಾನಕ್ಕೆ
ಸಿದ್ಧಾಂತ ಕೌಮುದ್ಯಾದಿ ಗ್ರಂಥಗಳನ್ನು ವ್ಯಾಸಂಗ ಮಾಡಬೇಕಾದರೂ ಸಂಸ್ಕೃತ
ಭಾಷಾ ಜ್ಞಾನಕ್ಕೆ ಈ ಲಘು ಸಿದ್ಧಾಂತ ಕೌಮುದೀ ಗ್ರಂಥದ ಅಧ್ಯಯನ ಪರ್ಯಾಪ್ತ
ವಾಗಿದೆ.

ಈ ಗ್ರಂಥವು ಭಾರತದ ಪ್ರಮುಖ ಭಾಷೆಗಳಾದ ಹಿಂದೀ, ಬಂಗಾಳಿ, ಆಂಧ್ರ
ಮುಂತಾದ ಭಾಷೆಗಳಲ್ಲಿ ಭಾಷಾಂತರಿತವಾಗಿ ಆಯಾಯ ಪ್ರಾಂತದ ಜನರಿಗೆ ಸಂಸ್ಕೃ
ತವನ್ನು ಕಲಿಯಲು ಬಹು ಸಹಾಯಕವಾಗಿದೆ. ಪ್ರಕೃತ ಕನ್ನಡ ಬಂಧುಗಳೆಲ್ಲರಿಗೂ
ಸಂಸ್ಕೃತ ಭಾಷಾ ಜ್ಞಾನವು ಸುಲಭವಾಗಿ ಉಂಟಾಗಲು ಸಹಾಯವಾಗಲೆಂಬ ಮಹ
ದುದ್ದೇಶದಿಂದ ನಾನು ಈ ಗ್ರಂಥಕ್ಕೆ ಕನ್ನಡದಲ್ಲಿ ಸರಳ ವ್ಯಾಖ್ಯಾನವನ್ನು ಬರೆಯುವ
ಸಾಹಸ ಮಾಡಿರುತ್ತೇನೆ. ಉಭಯ ಭಾಷಾಭಿಮಾನಿಗಳು ಆದರಿಂದ ಸ್ವೀಕರಿಸುವ
ರೆಂದೂ, ಈ ಗ್ರಂಥದ ಅಧ್ಯಯನದಿಂದ ಎಲ್ಲರೂ ಸಂಸ್ಕೃತ ಭಾಷಾ ಜ್ಞಾನವನ್ನು
ಅನಾಯಾಸವಾಗಿಯೇ ಹೊಂದುವರೆಂಬ ಭರವಸೆಯಿಂದಲೂ, **ವಿಶಾಲ ಕರ್ಣಾಟಕದ
ನವೋದಯದ ಸುಸಮಯದಲ್ಲಿ ಕನ್ನಡ ಬಾಂಧವರ ಮುಂದೆ ಇದನ್ನು
ಇಟ್ಟಿರುತ್ತೇನೆ.** ಇಂಥದೊಂದು ವ್ಯಾಕರಣ ಗ್ರಂಥವು ಕನ್ನಡದಲ್ಲಿ ರಚಿತವಾಗುವುದು
ಇದೇಮೊದಲೆಂದು ತೋರುತ್ತದೆ. "ಗಚ್ಛತಃ ಸ್ಖಲನಂ ಭವತ್ಯೇವ" ಎಂಬ ಸೂಕ್ತಿಯಂತೆ
ಅಲ್ಪಜ್ಞನಾದ ನನ್ನ ಈ ವ್ಯಾಖ್ಯಾನದಲ್ಲಿ ಲೋಪದೋಷಗಳು ಸಂಭವಿಸಿರಬಹುದು.
ಸಹೃದಯರು ಅವುಗಳನ್ನು ತಿದ್ದಿಕೊಳ್ಳುವುದಲ್ಲದೆ ಕೃಪೆಯಿಟ್ಟು ತೋರಿಸಿಕೊಟ್ಟಲ್ಲಿ
ಮುಂದಿನ ಮುದ್ರಣದಲ್ಲಿ ಅವುಗಳನ್ನು ಸರಿಪಡಿಸಿಕೊಳ್ಳಲು ಉಪಕಾರವಾಗುತ್ತದೆ.

"ಸದಸಿ ಕಥನಂ ಚಾಪ್ಯುಪಕೃತೇಃ" ಎಂಬ ಸೂಕ್ತಿಯಂತೆ ಮೊದಲಿನಿಂದಲೂ ನನಗೆ
ಈ ಗ್ರಂಥವನ್ನು ಬರೆಯಲು ಪ್ರೋತ್ಸಾಹವನ್ನಿತ್ತು ಈಗ ಪ್ರಕಾಶಪಡಿಸಲೂ ಉದಾರ
ಸಹಾಯವನ್ನು ಮಾಡಿರುವ ಮಹಾರಾಜಕಾಲೇಜಿನ ಫಿಲಾಸಫಿ ಉಪಪ್ರಾಧ್ಯಾಪಕ
ಶ್ರೀ ವಿ. ಮುದಲಿಂಗಣ್ಣ ಎಂ. ಎ. ಮತ್ತು ಮಹಾರಾಜಕಾಲೇಜಿನ ಹಿಂದೀ
ಅಧ್ಯಾಪಕರಾದ ಮ. ದೇವೇಗೌಡ, ಎಂ. ಎ. ಇವರಿಬ್ಬರ ಉಪಕಾರವನ್ನು ಎಷ್ಟು
ಸ್ಮರಿಸಿದರೂ ಅಲ್ಪವೇ. ಇವರಿಗೂ ಇನ್ನೂ ಸಾನಾರೀತಿಯಿಂದ ಸಹಾಯವನ್ನು
ಒದಗಿಸಿರುವ ನನ್ನ ಮಿತ್ರವೃಂದಕ್ಕೂ ತಿರಣಿಯಾಗಿರುತ್ತೇನೆ. ವ್ಯಾಕರಣಶಬ್ದಗಳು
ಕ್ಲಿಷ್ಟವಾದರೂ ತಾಳ್ಮೆಯಿಂದ ಸರಿಯಾಗಿ ನೋಡಿ ಅಂದವಾಗಿ ಮುದ್ರಿಸಿಕೊಟ್ಟ
ಶ್ರೀ ವಿನಾಯಕ ಪ್ರೆಸ್ಸಿನ ಮಾಲಿಕರಾದ ಶ್ರೀ ಕೆ. ವೆಂಕಟಸುಬ್ಬಯ್ಯನವರಿಗೂ ಕೃತಜ್ಞತೆ
ಗಳನ್ನು ಸಲ್ಲಿಸುತ್ತೇನೆ.

ಗ್ರಂಥಪ್ರಕಾಶನಕ್ಕೆ ಸಾಕಷ್ಟು ಕಾಲಾವಕಾಶವು ಇಲ್ಲದಿದ್ದುದರಿಂದ ಕೆಲವು ಲೋಪ
ದೋಷಗಳು ತಲೆ ಹಾಕಿವೆ, ಅವುಗಳನ್ನು ಸಾಧ್ಯವಾದಷ್ಟು ಕ್ರೋಡೀಕರಿಸಿ ಕೊನೆಯಲ್ಲಿ
ತೋರಿಸಿದೆ. ಅಭ್ಯಾಸಿಗಳು ಅವುಗಳನ್ನು ನೋಡಿ ಸರಿಪಡಿಸಿ ಓದಿಕೊಳ್ಳಬೇಕೆಂದು
ಪ್ರಾರ್ಥಿಸುತ್ತೇನೆ.

ಕನ್ನಡಮಾತೆಯ ಅಡಿದಾವರೆಗಳಲ್ಲಿ ಸಮರ್ಪಿಸಿರುವ ಈ ಗ್ರಂಥವನ್ನು
ಕನ್ನಡ ಬಂಧುಗಳೆಲ್ಲರೂ ಆದರಿಸಿ ಪರಿಶೀಲಿಸಿ ಇದರಿಂದ ಸಂಸ್ಕೃತಭಾಷಾಜ್ಞಾನವನ್ನು
ಪಡೆದು ಸುಸಂಸ್ಕೃತರಾಗಿ ನವೋದಿತಕರ್ಣಾಟಕವನ್ನು ಉಜ್ವಲಗೊಳಿಸಲು ಸಮರ್ಥ
ರಾಗಲೆಂದು ಭಗವಂತನನ್ನು ಪ್ರಾರ್ಥಿಸುತ್ತೇನೆ.

ಶ್ರೀಮನ್ಮಹಾರಾಜ ಸಂಸ್ಕೃತ ಮಹಾಪಾಠಶಾಲಾ
ಮೈಸೂರು
ತಾ || 1-11-56

ಸಜ್ಜನ ವಿಧೇಯ,
ಜಿ. ವಿಷ್ಣುಮೂರ್ತಿಭಟ್ಟ.
ಲೇಖಕ

ಎಮ್. ಎಮ್. ಭಟ್ಟ, ಯಲೂಗಾರು
ಪೋಃ ಕಾನಸೂರು, ತಾ|| ಸಿದ್ದಾಪುರ.

ವಿಷಯಾನುಕ್ರಮಣಿಕೆ (ಪೂರ್ವಾರ್ಧ)

		ಪುಟ
1.	ಸಂಜ್ಞಾ ಪ್ರಕರಣಮ್	1–19
2.	ಅಚ್‌ಸಂಧಿಃ	20–63
3.	ಹಲ್‌ಸಂಧಿಃ	64–91
4.	ವಿಸರ್ಗಸಂಧಿಃ	92–102
5.	ಅಜಂತ ಪುಲ್ಲಿಂಗ ಪ್ರಕರಣಮ್	103–201
6.	ಅಜಂತ ಸ್ತ್ರೀಲಿಂಗ ಪ್ರಕರಣಮ್	202–223
7.	ಅಜಂತ ನಪುಂಸಕಲಿಂಗಪ್ರಕರಣಮ್	224–239
8.	ಹಲಂತ ಪುಲ್ಲಿಂಗ ಪ್ರಕರಣಮ್	240–342
9.	ಹಲಂತ ಸ್ತ್ರೀಲಿಂಗ ಪ್ರಕರಣಮ್	343–352
10.	ಹಲಂತ ನಪುಂಸಕ ಲಿಂಗ ಪ್ರಕರಣಮ್	353–365
11.	ಅವ್ಯಯ ಪ್ರಕರಣಮ್	366–373

॥ ಶ್ರೀ ಗಣೇಶಾಯ ನಮಃ ॥

॥ ಪಾಣಿನೀಯಪ್ರವೇಶಿಕಾ ॥

ಲಘುಸಿದ್ಧಾಂತ ಕೌಮುದೀ

ಕನ್ನಡ ವ್ಯಾಖ್ಯಾನ

ಮಂಗಳಾದಿಯಾಗಿಯೂ ಮಂಗಳಾಂತನಾಗಿಯೂ ಇರುವ ಗ್ರಂಥಗಳು ಬೇಗ ಪ್ರಖ್ಯಾತಗಳಾಗುತ್ತವೆಯೆಂಬ ಭಾಷ್ಯಕಾರರ ಸೂಕ್ತಿಯನ್ನನುಸರಿಸಿ ಗ್ರಂಥಕಾರನು ಮಂಗಳವನ್ನು ಮಾಡಿ ಮುಂದೆ ಈ ಗ್ರಂಥವನ್ನು ಓದುವವರೂ ಮಂಗಳವನ್ನು ಮೊದಲು ಆಚರಿಸಿ ಓದಿದರೆ ಸಂಪೂರ್ಣ ವ್ಯಾಕರಣವಿಷಯವನ್ನು ತಿಳಿಯಲು ಸಮರ್ಥರಾಗುವರೆಂದು ತಾನು ಮಾಡಿದ ಮಂಗಳವನ್ನು ಗ್ರಂಥದ ಆದಿಯಲ್ಲಿ ಬರೆದಿರುತ್ತಾನೆ.

ಲಘುಸಿದ್ಧಾಂತ ಕೌಮುದೀ

ನತ್ವಾ ಸರಸ್ವತೀಂ ದೇವೀಂ ಶುದ್ಧಾಂ ಗುಣ್ಯಾಂ ಕರೋಮ್ಯಹಮ್
ಪಾಣಿನೀಯಪ್ರವೇಶಾಯ ಲಘುಸಿದ್ಧಾಂತಕೌಮುದೀಮ್ ॥

ದೋಷರಹಿತಳೂ ಪ್ರಶಸ್ತಗುಣಯುಕ್ತಳೂ ಪ್ರಕಾಶಮಾನಳೂ ಆದ ಸರಸ್ವತಿಯನ್ನು ನಮಸ್ಕರಿಸಿ ನಾನು (ವರದರಾಜನು) (ಬಾಲಕರಿಗೆ) ಪಾಣಿನಿಯವ್ಯಾಕರಣಶಾಸ್ತ್ರದಲ್ಲಿ ಪ್ರವೇಶಿಸಲು (ತಿಳಿಯಲು) ಲಘುಸಿದ್ಧಾಂತ ಕೌಮುದೀ ಎಂಬ ಗ್ರಂಥವನ್ನು ಮಾಡುತ್ತೇನೆ.

ಮಂಗಳವೆಂದರೆ ಇಷ್ಟದೇವತೆಯನ್ನು ವಿಘ್ನಪರಿಹಾರಕ್ಕಾಗಿ ಪ್ರಾರ್ಥಿಸುವುದು. ಹೀಗೆ ಪ್ರಾರ್ಥಿಸುತ್ತಾ ಅಲ್ಲಿ ಗ್ರಂಥದ ವಿಷಯಾದಿಗಳನ್ನು ನಿರ್ದೇಶಿಸುವುದೂ ಪದ್ಧತಿಯಾಗಿದೆ. ಇಲ್ಲಿ ವಿದ್ಯಾಧಿದೇವತೆಯಾದ ಸರಸ್ವತಿಯ ಧ್ಯಾನವೇ ಮಾಡಲ್ಪಟ್ಟಿದೆ. ಗ್ರಂಥದ ವಿಷಯಾದಿಗಳನ್ನು ಮೊದಲು ಹೇಳದಿದ್ದರೆ ಬೇಗನೆ ಶಿಷ್ಯರಿಗೆ ಅವರಲ್ಲಿ ಪ್ರವೃತ್ತಿಯುಂಟಾಗುವುದಿಲ್ಲ. ಅದಕ್ಕೋಸ್ಕರ ವಿಷಯ, ಪ್ರಯೋಜನ, ಅಧಿಕಾರಿ, ಸಂಬಂಧ, ಈ ನಾಲ್ಕನ್ನು ಮೊದಲು ಹೇಳುತ್ತಾರೆ. ಇದಕ್ಕೆ ಅನುಬಂಧಚತುಷ್ಟಯವೆಂದು ಹೆಸರು. ಮಂಗಳಶ್ಲೋಕದಲ್ಲಿ ಇವೂ ನಿರ್ದಿಷ್ಟವಾಗಿವೆ. ಪಾಣಿನಿಯ ವ್ಯಾಕರಣ ಸಿದ್ಧಾಂತಗಳನ್ನು ಸಂಕ್ಷೇಪವಾಗಿ ಪ್ರತಿಪಾದಿಸುವುದು ವಿಷಯ. ಅದರಲ್ಲಿ ಪ್ರವೇಶ ಅಂದರೆ ಅದರ ಜ್ಞಾನವೇ ಪ್ರಯೋಜನ. ಇದನ್ನು ತಿಳಿಯಬೇಕೆಂದು ಬಯಸುವ ಬಾಲರೇ ಅಧಿಕಾರಿಗಳು. ಬಾಲರೆಂದರೆ ಇಲ್ಲಿ ಚಿಕ್ಕವರು ಮಾತ್ರವೆಂದಲ್ಲ. ಶಾಸ್ತ್ರಾಂತರಜ್ಞಾನವುಳ್ಳವರಾದರೂ ತಿಳಿಯದ ವ್ಯಾಕರಣ ಸಿದ್ಧಾಂತವುಳ್ಳವರು, ಎಂದರ್ಥ. ಪ್ರತಿಪಾದ್ಯ ಪ್ರತಿಪಾದಕ ಮುಂತಾದ ಸಂಬಂಧಗಳನ್ನು ಊಹಿಸಿಕೊಳ್ಳಬೇಕು. ಹೀಗೆ ನಾಲ್ಕೂನಿರ್ದಿಷ್ಟವಾದರೆ ಎಲ್ಲರೂ ಬೇಗನೆ ಆದರಿಸುತ್ತಾರೆ. ಮಂಗಳ ಮಾಡಿ ವಿಷಯಾದಿಗಳನ್ನು ನಿರ್ದೇಶಿಸಿ ಮೊದಲು ಸಾಮಾನ್ಯ ಉಪಯುಕ್ತವಾಗುವ ಸಂಜ್ಞೆಗಳನ್ನು ತಿಳಿಸಲು ಸಂಜ್ಞಾಪ್ರಕರಣವನ್ನು ಆರಂಭಿಸುತ್ತಾನೆ.

ಅಥ ಸಂಜ್ಞಾ ಪ್ರಕರಣಮ್

ಅ ಇ ಉ ಣ್ ೧ ॥ ಋ ಌ ಕ್ ೨ ॥ ಏ ಓ ಙ್ ೩ ॥ ಐ ಔ ಚ್ ೪॥ ಹ ಯ ವ ರ ಟ್ ೫॥ ಲ ಣ್ ೬ ॥ ಞ ಮ ಙ ಣ ನ ಮ್ ೭ ॥ ಝ ಭ ಞ್ ೮ ॥ ಘ ಢ ಧ ಷ್ ೯ ॥ ಜ ಬ ಗ ಡ ದ ಶ್ ೧೦॥ ಖ ಫ ಛ ಠ ಥ ಚ ಟ ತ ವ್ ೧೧॥ ಕ ಪ ಯ್ ೧೨॥ ಶ ಷ ಸ ರ್ ೧೩॥ ಹ ಲ್ ೧೪॥ ಇತಿ ಮಾಹೇಶ್ವರಾಣಿ ಸೂತ್ರಾಣಿ ॥

ಇವು ಹದಿನಾಲ್ಕು ಮಹೇಶ್ವರನಿಂದ ಬಂದ ಸೂತ್ರಗಳು. ವ್ಯಾಕರಣಶಾಸ್ತ್ರವೆಂದರೆ ಪದಸಂಸ್ಕಾರವನ್ನು ತಿಳಿಸುವ ಶಾಸ್ತ್ರ. ವರ್ಣವಿಲ್ಲದೇ ಪದವಾಗುವುದಿಲ್ಲ. ಆದುದರಿಂದ ಸಂಸ್ಕೃತ ವ್ಯಾಕರಣದಲ್ಲಿ ವ್ಯವಹೃತವಾದ ವರ್ಣಗಳು ಇಷ್ಟೇ ಎಂದು ತಿಳಿಸಲು ಮೊದಲು ಅಕ್ಷರಗಳನ್ನು ನಿರ್ದೇಶಿಸುತ್ತಾನೆ. ಇವು

ಪಾಣಿನಿಗೆ ಶಿವನ ವರಪ್ರಸಾದದಿಂದ ಲಬ್ಧವಾಯಿತೆಂದು "**ನೃತ್ತಾವಸಾನೇ ನಟರಾಜರಾಜೋ ನನಾದ ಢಕ್ಕಾಂ ನವಪಂಚವಾರಂ । ಉದ್ಧರ್ತುಕಾಮಃ ಸನಕಾದಿಸಿದ್ಧಾನೇತದ್ವಿಮರ್ಶೇ ಶಿವಸೂತ್ರಜಾಲಮ್॥**ಎಂದು ನಂದಿಕೇಶ್ವರಕಾರಿಕೆಯಲ್ಲಿ ವಿವೃತವಾಗಿದೆ. ತಾಂಡವ ನೃತ್ಯ ಕಾಲದಲ್ಲಿ ವರನಿನು ಲೋಕಕಲ್ಯಾಣಕ್ಕಾಗಿ ಡಮರು ಧ್ವನಿಯ ನೆಪದಿಂದ ಇವುಗಳನ್ನು ಉಪದೇಶಿಸಿದನೆಂದರ್ಥ. ಆದ್ದರಿಂದಲೇ ಇದಕ್ಕೆ ಅಕ್ಷರ ಸಮಾಮ್ನಾಯ (ವೇದ) ವೆಂದು ಹೆಸರು ಬಂದಿದೆ. ಎಲ್ಲರಿಂದಲೂ ಮೊದಲು ಗ್ರಹಿಸಲು ಯೋಗ್ಯವಾದವುಗಳು. ಇಲ್ಲಿ ಸಲನತ್ತಿರದು ಅಕ್ಷರಗಳು ಇವೆ. ಕೆಲವು ಪದಗಳ ರೂಪಸಿದ್ಧಿಗಾಗಿ ಹಕಾರವು ಎರಡು ಬಾರಿ ನಿರ್ದಿಷ್ಟವಾಗಿದೆ. ವ್ಯಾಕರಣ ಶಾಸ್ತ್ರಕ್ಕೆ ಇವು ಶಿರಸ್ಸಿನಂತಿದ್ದರೂ ಇವುಗಳಿಗೆ ಯಾವುದೊಂದೂ ಅರ್ಥವಿಲ್ಲದಿರುವುದರಿಂದ ಇವುಗಳನ್ನು ಮೊದಲು ಇಲ್ಲಿ ಏಕೆ ಹೇಳಿದುದು ? ಎಂಬ ಶಂಕೆ ಬಂದರೆ ಅದಕ್ಕೆ ಸಮಾಧಾನ ಹೇಳುತ್ತಾನೆ.

॥ ಅಣಾದಿ ಸಂಜ್ಞಾರ್ಥಾನಿ ॥

ಅಣ್ ಆದಿಃ ಯಾಸಾಂ ತಾಃ ಅಣಾದಯಃ।ಅಣಾದಯಶ್ಚ ತಾಃ ಸಂಜ್ಞಾಶ್ಚ ಅಣಾದಿಸಂಜ್ಞಾಃ । ಅಣಾದಿಸಂಜ್ಞಾಃ ಅರ್ಥಃ(ಪ್ರಯೋಜನಂ)ಯೇಷಾಂ ತಾನಿ ಅಣಾದಿ ಸಂಜ್ಞಾರ್ಥಾನಿ॥ ಇದು ನಿಗ್ರಹವಾಕ್ಯ. ಸಮಾಸದ ಅರ್ಥವನ್ನು ತಿಳಿಸುವ ವಾಕ್ಯಕ್ಕೆ ನಿಗ್ರಹವೆಂದು ಹೆಸರು. ಅಣ್ ಮುಂತಾದ ಸಂಜ್ಞೆಗಳೇ ಪ್ರಯೋಜನವಾಗಿ ಇರುವವುಗಳು ಈ ಸೂತ್ರಗಳು. ಇವುಗಳಿಂದ ಮಾಡಿದ ಅಣ್ ಅಕ್ ಮುಂತಾದ ಸಂಜ್ಞೆಗಳು ವ್ಯಾಕರಣದಲ್ಲಿ ಮುಖ್ಯವಾಗಿ ವ್ಯವಹರಿಸಲ್ಪಡುತ್ತವೆ. ಈ ಸಂಜ್ಞೆಗಳಿಗೆ ಈ ಸೂತ್ರಗಳು ಕಾರಣವಾಗಿರುವುದರಿಂದ ಪ್ರಯೋಜನವುಳ್ಳವುಗಳಾದುವು. ಆದುದರಿಂದ ಮೊದಲು ಹೇಳಿದೆ.

ಅಣ್ ಅಕ್ ಮುಂತಾದ ಸಂಜ್ಞೆಗಳನ್ನು ಮಾಡುವುದು ಹೇಗೆಂಬುದನ್ನು ವಿವರಿಸುತ್ತಾನೆ.

॥ ಏಷಾಮಂತ್ಯಾ ಇತಃ ॥

ಅಂತೇ ಭವಃ ಅಂತ್ಯಃ । ಕೊನೆಯಲ್ಲಿರುವುದು ಎಂದರ್ಥ. ಈ ಹದಿನಾಲ್ಕು ಸೂತ್ರಗಳ ಕೊನೆಯಲ್ಲಿರುವ ವರ್ಣಗಳಿಗೆ ಇತ್ ಎಂಬ ಸಂಜ್ಞೆ ಬರುತ್ತದೆ. ಈ ಇತ್ತಿನಿಂದ ಮುಂದೆ ಅಣ್ ಅಚ್ ಮುಂತಾದ ಸಂಜ್ಞೆಗಳನ್ನು ಮಾಡುವ ಕ್ರಮವನ್ನು ಸೂತ್ರದಿಂದ ಹೇಳುತ್ತಾನೆ.

ಹಕಾರಾದಿಷ್ವಕಾರ ಉಚ್ಚಾರಣಾರ್ಥಃ । ಲಣ್ ಮಧ್ಯೇ ತ್ವಿತ್ಸಂಜ್ಞಕಃ॥
ಹಯವರಟ್ ಮುಂತಾದ ಸೂತ್ರಗಳಲ್ಲಿ ವ್ಯಂಜನಗಳು ನಿರ್ದಿಷ್ಟವಾಗಿವೆ. ವ್ಯಂಜ

ನವು ಅರ್ಧ ಮಾತ್ರೆಯ ಸ್ವರೂಪವಿದೆ. ಹಕಾರಾದಿಗಳಲ್ಲಿರುವ ಅಕಾರವು ಸುಖೋ
ಚ್ಚಾರಣೆಗೋಸ್ಕರ ಹೇಳಿದೆ. ಇಲ್ಲವಾದರೆ ಹ್ ಯ್ ವ್ ಎಂದು ಕಷ್ಟದಿಂದ ಉಚ್ಚ
ರಿಸಬೇಕಾಗುತ್ತದೆ **ಲಣ್** ಸೂತ್ರದಲ್ಲಿ ಮಾತ್ರ ಲಕಾರದ ಮೇಲಿರುವ ಅಕಾರವು ಇತ್ ಸಂ
ಜ್ಞೆಯನ್ನು ಹೊಂದುತ್ತದೆ. **' ಉರಣ್‌ರಪರಃ '** ಎಂಬ ಸೂತ್ರದಲ್ಲಿ ರ ಎಂಬ
ಒಂದು ವಿಶೇಷ ಸಂಜ್ಞೆಯನ್ನು ಮಾಡಬೇಕಾದುದರಿಂದ ಇದೊಂದಕ್ಕೆ ಮಾತ್ರ ಇತ್ ಸಂ
ಜ್ಞೆಯನ್ನು ಹೇಳಿದೆ. ಹೀಗೆ ಹೇಳಿದ ವಾಕ್ಯಗಳ ಅರ್ಥಗಳು ಪಾಣಿನಿಯ ಸೂತ್ರ
ದಿಂದಲೇ ಬಂದುವೆಂದು ಪ್ರಮಾಣಕ್ಕೋಸ್ಕರ ಆ ಅರ್ಥಗಳನ್ನು ಕೊಡುವ ಸೂತ್ರ
ಗಳನ್ನು ಹೇಳುತ್ತಾನೆ.

(ಅಂತ್ಯಕ್ಕೆ ಇತ್ ಸಂಜ್ಞೆ ಹೇಳುವ ಸೂತ್ರ)

೧. ಹಲನ್ತ್ಯಮ್ ॥ ೧-೩-೩ ॥

॥ ಉಪದೇಶೇ ಅನ್ತ್ಯಂ ಹಲ್ ಇತ್ ಸ್ಯಾತ್ ॥

ಹಲ್ ಅಂತ್ಯಂ ಎಂದು ಎರಡುಪದಗಳಿರುವ ಸೂತ್ರ. **"ಅಲ್ಪಾಕ್ಷರಮಸಂದಿಗ್ಧಂ ಸಾರವದ್ವಿಶ್ವತೋಮುಖಂ। ಅಸ್ತೋಭಮನವದ್ಯಂ ಚ ಸೂತ್ರಂ ಸೂತ್ರವಿದೋ ವಿದುಃ '** ಎಂಬುದಾಗಿ ಕಡಿಮೆ ಅಕ್ಷರವುಳ್ಳದ್ದಾಗಿಯೂ, ಸಂದೇಹಾಸ್ಪದವಾಗದೆಯೂ, ಸಾರವತ್ತಾದ ಅರ್ಥೋಪೇತವಾಗಿಯೂ, ನಾನಾರೀತಿಯಿಂದ ವ್ಯಾಖ್ಯಾನ ಮಾಡಲ್ಪು ಬರುವಂತೆಯೂ, ವಿಶೇಷ, ಸಾಮಾನ್ಯದೋಷವರ್ಜಿತವಾಗಿಯೂ ಇರುವುದೇ ಸೂತ್ರ ಸ್ವರೂಪವು. ಪಾಣಿನಿಯ ಸೂತ್ರಗಳು ಈ ಸಕಲಾಂಶಗಳನ್ನೂ ಒಳಗೊಂಡಿವೆ.

ಸೂತ್ರಗಳಲ್ಲಿ ಆರು ರೀತಿ ಇವೆ. **" ಸಂಜ್ಞಾ ಚ ಪರಿಭಾಷಾ ಚ ವಿಧಿರ್ನಿಯಮ ಏವ ಚ। ಅತಿದೇಶೋಽಧಿಕಾರಶ್ಚ ಷಡ್ವಿಧಂ ಸೂತ್ರಲಕ್ಷಣಂ "** ॥ ಸಂಜ್ಞಾ ಸೂತ್ರ, ಪರಿಭಾಷಾಸೂತ್ರ, ವಿಧಿಸೂತ್ರ, ನಿಯಮಸೂತ್ರ, ಅತಿದೇಶಸೂತ್ರ, ಅಧಿಕಾರಸೂತ್ರವೆಂದು ವಿಭಾಗಿಸಿರುತ್ತಾರೆ. ಇದರ ಸ್ವರೂಪವನ್ನು ಆಗಾಗ ಬಂದಲ್ಲಿ ವಿವರಿಸುತ್ತೇವೆ. ಪ್ರಕೃತಸೂತ್ರವು ಸಂಜ್ಞೆಯನ್ನು ಹೇಳುವುದಾದುದರಿಂದ ಸಂಜ್ಞಾ ಸೂತ್ರವೆನಿಸುತ್ತದೆ. ಸೂತ್ರದ ಅರ್ಥವನ್ನು ವಿವರಿಸುವ ವಾಕ್ಯಕ್ಕೆ **ವೃತ್ತಿ**ಯೆಂದು ಹೆಸರು. ವಾಕ್ಯಾರ್ಥಪೂರ್ತಿಯಾಗಲು ಈ ಸೂತ್ರದಲ್ಲಿ ಪದಗಳಿಲ್ಲವಾದರೆ ಹಿಂದಿನ ಸೂತ್ರಗಳಿಂದ ಬೇಕಾದ ಪದಗಳನ್ನು ತೆಗೆದುಕೊಳ್ಳಬೇಕು. ಇದಕ್ಕೆ **ಅನುವೃತ್ತಿ** ಯನ್ನುತ್ತಾರೆ, ಮುಂದಿನ ಸೂತ್ರದಿಂದ ತೆಗೆದುಕೊಳ್ಳುವುದಾದರೆ **ಅಪಕರ್ಷ**ವೆನ್ನುತ್ತಾರೆ. ಯಾವ ವಿಭಕ್ತ್ಯಂತವಾಗಿ ತೆಗೆದುಕೊಳ್ಳುತ್ತೇವೋ ಅವೇರೀತಿ ಪ್ರಕೃತ ಇರಬೇಕೆಂಬ ನಿಯಮವಿಲ್ಲ. ಬೇಕಾದ ಹಾಗೆ ವಿಪರಿಣಾಮ ಮಾಡಿಕೊಳ್ಳಬಹುದು.

ಪ್ರಕೃತ **ಉಪದೇಶೇಽಜನುನಾಸಿಕ ಇತ್** ಎಂಬ ಸೂತ್ರದಿಂದ **ಉಪದೇಶೇ, ಇತ್** ಎಂಬ ಎರಡುಪದಗಳು ಅನುವೃತ್ತವಾಗುತ್ತವೆ. **ಸೂತ್ರಾರ್ಥ:**—ಉಪದೇಶದಲ್ಲಿ ಕೊನೆಯಲ್ಲಿರುವ ಹಲ್ (ವ್ಯಂಜನ) ವರ್ಣಗಳು ಇತ್ ಆಗುತ್ತವೆ. ಅವುಗಳಿಗೆ ಇತ್ ಎಂಬ ಒಂದು ಸಂಜ್ಞೆ ಬರುತ್ತದೆ. ಒಂದು ವಾಕ್ಯಜ್ಞಾನವಾಗಬೇಕಾದರೆ ಮೊದಲು ಅದರಲ್ಲಿ ಸೇರಿರುವ ಪದಗಳ ಜ್ಞಾನವಾಗಬೇಕು. ಇಲ್ಲಿ ಉಪದೇಶವೆಂದರೇನು ಎಂಬ ಜಿಜ್ಞಾಸೆ ಬರುತ್ತದೆ ಆದುದರಿಂದ ಉಪದೇಶಸ್ವರೂಪವನ್ನು ಹೇಳುತ್ತಾನೆ.

ಉಪದೇಶ ಆದ್ಯೋಚ್ಚಾರಣಮ್

ಉಪದೇಶವೆಂದರೆ ಆದಿಯ ಉಚ್ಚಾರಣೆ. ಉಪದೇಶವೆಂಬಲ್ಲಿ ಉಪ ಎಂಬ ಉಪಸರ್ಗವೂ ಘಞಂತವಾದ ದಿಶ ಧಾತುವೂ ಇದೆ. ಉಪಸರ್ಗಕ್ಕೆ ಆದಿಯೆಂತಲೂ ಧಾತುವಿಗೆ ಉಚ್ಚಾರಣೆಯೆಂತಲೂ ಅರ್ಥವಾಗುತ್ತದೆ. ವ್ಯಾಕರಣಶಾಸ್ತ್ರವನ್ನು ರಚಿಸಿದ ಆಚಾರ್ಯರ ಉಚ್ಚಾರಣೆಯೇ ಮೊದಲನೆಯ ಉಚ್ಚಾರಣೆಯಾಗುತ್ತದೆ. ಎಲ್ಲದಕ್ಕೂ ಮೊದಲು ಉಚ್ಚರಿಸಲ್ಪಟ್ಟ ವರ್ಣಸಮಾಮ್ನಾಯವೂ ಉಪದೇಶವಾಗುತ್ತದೆ. ಇದನ್ನೇ ಪ್ರಾಚೀನರು ಕಾರಿಕೆಯಿಂದ ವಿವರಿಸಿರುತ್ತಾರೆ.

1 2 3 4 5 6
" ಧಾತು ಸೂತ್ರ ಗಣೋಣಾದಿ ವಾಕ್ಯಲಿಂಗಾನುಶಾಸನಮ್ ॥
7 8 9
ಆಗಮಪ್ರತ್ಯಯಾದೇಶಾ ಉಪದೇಶಾಃ ಪ್ರಕೀರ್ತಿತಾಃ"

ಕ್ರಿಯಾವಾಚಕ, ಸೂತ್ರ, ಗಣ, ಶಾಕಟಾಯನಪ್ರಣೀತ ಉಣಾದಿಸೂತ್ರ, ವಾರ್ತಿಕ, ಲಿಂಗಾನುಶಾಸನ, ಆಗಮ, ಪ್ರತ್ಯಯ, ಆದೇಶ, ಇವುಗಳಿಗೆ ಉಪದೇಶವೆಂದು ಹೆಸರು. ಇವೆಲ್ಲವೂ ಮೊದಲು ಉಚ್ಚರಿಸಲ್ಪಟ್ಟವೆ. ಪ್ರಕೃತ ಹದಿನಾಲ್ಕು ಮಾಹೇಶ್ವರಸೂತ್ರಗಳ ಅಂತ್ಯದಲ್ಲಿರುವ ವರ್ಣಗಳಿಗೆ ಇತ್‌ಸಂಜ್ಞೆ ಬರುತ್ತದೆ. ಸೂತ್ರದಲ್ಲಿಲ್ಲದೇ ಇರುವ ಪದಗಳನ್ನು ಸೇರಿಸಿ ಸೂತ್ರಾರ್ಥವನ್ನು ಹೇಳಿದುದು ಹೇಗೆ ? ಎಂಬುದಕ್ಕೆ ಸಮಾಧಾನವನ್ನು ಹೇಳುತ್ತಾನೆ.

ಸೂತ್ರೇಷ್ವದೃಷ್ಟಂ ಪದಂ ಸೂತ್ರಾನ್ತರಾದನುವರ್ತನೀಯಂ ಸರ್ವತ್ರ ॥

ಸೂತ್ರದಲ್ಲಿಲ್ಲದ ಪದವು ಎಲ್ಲೆಡೆಗಳಲ್ಲಿಯೂ ಬೇರೆ ಸೂತ್ರದಿಂದ ಅನುವರ್ತಿಸಲ್ಪಡಬೇಕು. ಬೇಕಾದ ಅರ್ಥವನ್ನು ಹೇಳಲು ಆಯಾಯ ಹಿಂದಿನ ಯಾ ಮುಂದಿನ ಸೂತ್ರಗಳಿಂದ ಪದಗಳನ್ನು ತೆಗೆದುಕೊಳ್ಳಬೇಕು. ಈ ವಿಷಯ ಹಿಂದೆ ವಿವೃತವಾಗಿದೆ. ಇತ್ ಸಂಜ್ಞೆಯುಳ್ಳ ವರ್ಣಗಳಿಗೆ ಲೋಪವನ್ನು ಹೇಳುತ್ತಾನೆ. ಆಗ ಲೋಪವೆಂದ

ರೇನು ಎಂಬುದನ್ನು ತಿಳಿಸಲು ಸಂಜ್ಞಾ ಸೂತ್ರವನ್ನು ಮೊದಲು ಹೇಳುತ್ತಾನೆ.

(ಲೋಪಸಂಜ್ಞಾ ವಿಧಾಯಕ ಸೂತ್ರ)

೨. ಅದರ್ಶನಂ ಲೋಪಃ ॥೧೧೧೬೦॥

ಪ್ರಸಕ್ತಸ್ಯಾದರ್ಶನಂ ಲೋಪಸಂಜ್ಞಂ ಸ್ಯಾತ್ ॥

ಅದರ್ಶನಂ, ಲೋಪಃ। ಎರಡು ಪದವುಳ್ಳ ಸೂತ್ರ. ಅದರ್ಶನವೆಂದರೆ ತೋರ ದಿರುವುದು ಎಂಬರ್ಥವಾಗುತ್ತದೆ. ಶಬ್ದಶಾಸ್ತ್ರದಲ್ಲಿ ಇದು ಕೂಡದಿರುವುದರಿಂದ ದರ್ಶನವೆಂದರೆ ಶಬ್ದವಿಷಯಕ ಶ್ರವಣವೆಂದು ಇಲ್ಲಿ ಹೇಳಬೇಕು. **ದರ್ಶನ. ಸ್ಯಾಭಾವಃ ಅದರ್ಶನಂ । ' ಸ್ಥಾನೇಂತರತಮಃ '** ಎಂಬ ಸೂತ್ರದಿಂದ ಸ್ಥಾನಿನೀ ಎಂಬ ಪದವು ಅನುವೃತ್ತವಾಗುತ್ತದೆ. ಸ್ಥಾನವೆಂದರೆ ಉಚ್ಚಾರಣ ಪ್ರಸಕ್ತಿ. ಆನ ಸೂತ್ರಾರ್ಥಃ—ಸಾಸ್ತದಿಂದ ಯಾವುದಾದರೂ ಶಬ್ದಕ್ಕಾಗಲೀ ವರ್ಣಕ್ಕಾಗಲೀ ಶ್ರವಣ ಪ್ರಸಕ್ತಿ ಬಂದಾಗ ಶ್ರವಣವಾಗದಿರುವುದಕ್ಕೆ ಲೋಪವೆಂದು ಹೆಸರು. ಉಚ್ಚಾರಣೆ ಮಾಡದಿರುವುದೆಂದು ಅರ್ಥ. ಈ ಲೋಪ ಸಂಜ್ಞೆಗೆ ಪ್ರಯೋಜನವನ್ನು ಹೇಳುತ್ತಾನೆ.

(ಇತ್ತಿಗೆ ಲೋಪ ಹೇಳುವ ಸೂತ್ರ)

೩. ತಸ್ಯ ಲೋಪಃ ॥ ೧-೩-೯ ॥

॥ತಸ್ಯೇತೋ ಲೋಪಃ ಸ್ಯಾತ್॥

ಎರಡು ಪದಗಳುಳ್ಳ ಸೂತ್ರ. ಇದರ ಹಿಂದಿನ ಎಂಟು ಸೂತ್ರಗಳಲ್ಲಿ ಇತ್ ಸಂಜ್ಞೆಯನ್ನು ಹೇಳುತ್ತಾ ಬಂದಿರುವುದರಿಂದ ಇಲ್ಲಿ ತಚ್ಛಬ್ದವು ಹಿಂದಿನದನ್ನು ಪರಾಮರ್ಶಿಸುವುದರಿಂದ ಆ ಇತ್ ಸಂಜ್ಞೆಯುಳ್ಳದ್ದಕ್ಕೆ ಲೋಪ ಬರುತ್ತದೆ ಎಂದು ಸೂತ್ರಾರ್ಥವಾಗುತ್ತದೆ. ಅವುಗಳಿಗೆ ಕಾರ್ಯದಲ್ಲಿ ಉಚ್ಚಾರಣೆ ಇಲ್ಲವೆಂದರ್ಥ. ಪ್ರಕೃತ ಹದಿನಾಲ್ಕು ಸೂತ್ರಗಳ ಅಂತ್ಯ ವರ್ಣಗಳಿಗೆ ಇತ್ ಸಂಜ್ಞೆ ಇರುವುದರಿಂದ ಅವುಗಳಿಗೆ ಲೋಪ ಬರುತ್ತದೆ. ಹಾಗಾದರೆ ಅವುಗಳ ಉಚ್ಚಾರಣೆಗೆ ಪ್ರಯೋಜನವೇನು? ಅಂದರೆ ಅವುಗಳಿಗೆ ಪ್ರಯೋಜನವನ್ನು ತೋರಿಸುತ್ತಾನೆ.

॥ ಣಾದಯೋಽಣಾದ್ಯರ್ಥಾಃ ॥

॥ ಅಣಾದಿಃ ಅರ್ಥಃ (ಪ್ರಯೋಜನಂ) ಯೇಷಾಂ ತೇ ಅಣಾದ್ಯರ್ಥಾಃ ॥

ಕೊನೆಯಲ್ಲಿರುವ ಣ್ ಕ್ ಮುಂತಾದವುಗಳು ಅಣ್ ಅಕ್ ಎಂಬಿವೇಮುಂತಾದ ಸಂಜ್ಞೆಗಳನ್ನುಂಟುಮಾಡುವುದರಿಂದ ಪ್ರಯೋಜನವುಳ್ಳವುಗಳು. ಇವುಗಳಿಂದ ಕೆಲವು

ಸಂಜ್ಞೆಗಳಾಗುವುದರಿಂದ ವೈಯರ್ಥ್ಯವಿಲ್ಲ. ಈ ಸಂಜ್ಞೆಗಳನ್ನು ಮಾಡುವರೀತಿ ಹೇಗೆಂಬುದನ್ನು ಮುಂದಿನ ಸೂತ್ರದಿಂದ ವಿವರಿಸುತ್ತಾನೆ.

(ಪ್ರತ್ಯಾಹಾರವನ್ನು ಹೇಳುವ ಸೂತ್ರ)

೪. ಆದಿರಂತ್ಯೇನ ಸಹೇತಾ ॥ ೧-೧-೭೧

॥ ಅಂತ್ಯೇನೇತಾ ಸಹಿತ ಆದಿರ್ಮಧ್ಯಗಾನಾಂ ಸ್ವಸ್ಯ ಚ ಸಂಜ್ಞಾ ಸ್ಯಾತ್॥

ಆದಿಃ, ಅಂತ್ಯೇನ, ಸಹ, ಇತಾ ಎಂದು ನಾಲ್ಕುಪದಗಳುಳ್ಳ ಸೂತ್ರ. **' ಸ್ವಂ ರೂಪಂ ಶಬ್ದಸ್ಯಾಶಬ್ದ ಸಂಜ್ಞಾ '** ಎಂಬ ಸೂತ್ರದಿಂದ ಸ್ವಂ ಎಂಬ ಪದವು ಅನುವೃತ್ತವಾಗಿ ಷಷ್ಠ್ಯಂತವಾಗಿ ಪರಿಣತವಾಗುತ್ತದೆ. ಸ್ವಸ್ಯ ಎಂದಾಗುತ್ತದೆ. ಆದಿಯೆಂದರೆ ತನಗೆ ಪೂರ್ವದಲ್ಲಿಲ್ಲವೆ ಪರದಲ್ಲಿರುವುದು. ಅಂತ್ಯವೆಂದರೆ ತನಗೆ ಪರದಲ್ಲಿ ಇಲ್ಲವೆ ಪೂರ್ವದಲ್ಲಿರುವುದು. ಆದಿ ಅಂತವೆನ್ನುವ ವರ್ಣಗಳ ಪೂರ್ವಾಪರಗಳನ್ನು ತಿಳಿದುಕೊಳ್ಳಬೇಕು. ಆದಿ ಅಂತ್ಯವೆಂದಮೇಲೆ ಮಧ್ಯವೆಂಬುದು ಆಕ್ಷೇಪದಿಂದಲೇ ಲಬ್ಧವಾಗುತ್ತದೆ. ಸೂತ್ರಾರ್ಥಃ—ಅಂತ್ಯವಾದ ಇತ್ ವರ್ಣದಿಂದ ಕೂಡಿಕೊಂಡು ಹೇಳಿದ ಆದಿವರ್ಣವು ತನಗೂ ಮಧ್ಯದಲ್ಲಿರುವ ವರ್ಣಗಳಿಗೂ ಸಂಜ್ಞೆಯಾಗುತ್ತದೆ. ಇಲ್ಲಿ ಸ್ವಸ್ಯ ಎಂಬುದು ಪ್ರಧಾನವಾದ ಆದಿ ಎಂಬಲ್ಲಿ ಮಾತ್ರ ಅನ್ವಯ ಹೊಂದುತ್ತದೆ. ಇತಾ ಎಂದು ತೃತೀಯಾಂತವಾಗಿ ಹೇಳಿದುದರಿಂದ ಅದು ಅಪ್ರಧಾನ. ಆದುದರಿಂದ ಸ್ವಸ್ಯ ಅಂದರೆ ಇತ್ ಆಗುವುದಿಲ್ಲ. ಹೀಗೆ ಸಂಜ್ಞೆ ಮಾಡುವುದನ್ನು ಹೇಳಿ ಅದರಿಂದಾದ ಪ್ರಯೋಜನವನ್ನು ಹೇಳುತ್ತಾನೆ.

ಯಥಾ ಅಣಿತಿ ಅ ಇ ಉ ವರ್ಣಾನಾಂ ಸಂಜ್ಞಾ ।
ಏವಮಚ್ ಹಲ್ ಅಲ್ ಇತ್ಯಾದಯಃ ॥

ವರ್ಣ ಸಮಾಮ್ನಾಯದಲ್ಲಿ ಅ ಇ ಉಣ್ ಎಂದು ಮೊದಲನೇ ಸೂತ್ರ. ಇಲ್ಲಿ ಅಂತ್ಯವಾದ ಇತ್ ಣಕಾರ. ಇದರೊಡನೆ ಹೇಳಿದ ಆದಿಯೆಂದರೆ ಅಕಾರ. ಆಗ ಅಣ್ ಎಂದಾಗುತ್ತದೆ, ಅದು ತನಗೂ ಮಧ್ಯದಲ್ಲಿರುವುದಕ್ಕೂ ಸಂಜ್ಞೆಯಾಗುತ್ತದೆ ಎಂದುದರಿಂದ ಅ ಇ ಉ ಈ ಮೂರು ವರ್ಣಗಳಿಗೆ ಸಂಜ್ಞೆಯಾಗುತ್ತದೆ. ಹಾಗೇ ಅಚ್ ಎಂದರೆ ಒಂಭತ್ತು ವರ್ಣಗಳಿಗೂ ಹಲ್ ಎಂದರೆ ಮೂವತ್ತಮೂರು ವರ್ಣಗಳಿಗೂ ಅಲ್ ಎಂದರೆ ಕೊನೆಯ ಲಕಾರದಿಂದ ಹೇಳಿರುವುದರಿಂದ ಎಲ್ಲಾ ವರ್ಣಗಳಿಗೂ ಸಂಜ್ಞೆಯಾಗುತ್ತದೆ. ಹೀಗೆ **'ಆದಿರಂತ್ಯೇನ ಸಹೇತಾ '** ಸೂತ್ರದಿಂದ ಮಾಡಿದಸಂಜ್ಞೆಗಳಿಗೆ **ಪ್ರತ್ಯಾಹಾರ**ಗಳೆಂದು ಹೆಸರು. **'ಪ್ರತ್ಯಾಹ್ರಿಯಂತೇ ವರ್ಣಾ ಯತ್ರ '** ಎಂಬ ವ್ಯುತ್ಪತ್ತಿಯಿಂದ ಅನೇಕ ವರ್ಣಗಳನ್ನು ಸಂಕ್ಷೇಪದಿಂದ ಹೇಳುವುದೆಂದರ್ಥ. ಅ ಇ ಉ ಎಂದು ಹೇಳಲು ಅಣ್ ಎಂದರೆ ಲಘುವಾಗಿ ಹೇಳಿದಂತಾಗು

ತ್ತದೆ. ಹೀಗೆ ಪ್ರತ್ಯಾಹಾರಗಳನ್ನು ಅನೇಕ ಮಾಡಬಹುದಾದರೂ ವ್ಯಾಕರಣ [illegible] ದಲ್ಲಿ ಬಳಕೆಯಲ್ಲಿರುವವಗಳು ನಲವತ್ತೆರಡು ಮಾತ್ರ. ಣಕಾರದಿಂದ ಒಂದು ಅಣ್ ಎಂದಾಗುತ್ತದೆ. ಅಕ್ ಇಕ್ ಉಕ್ ಎಂದು ಕಕಾರದಿಂದ ಮೂರು. ಏಚ್ ಎಂದು ಐಕಾರದಿಂದ ಒಂದು ಮಾತ್ರ. ಚಕಾರದಿಂದ ಅಚ್, ಇಚ್ ಏಚ್ ಐಚ್, ಎಂದು ನಾಲ್ಕು. ಟಕಾರದಿಂದ ಅಟ್ ಒಂದೇ ಆಗುತ್ತದೆ. ಪರಣಕಾರದಿಂದ ಅಣ್ ಇಣ್ ಯಣ್, ಎಂದು ಮೂರು. ಮಕಾರದಿಂದ ನಾಲ್ಕು ಅಮ್, ಯಮ್, ಐಮ್ ಐಮ್, ಐಕಾರದಿಂದ ಒಂದು ಯಇ್. ಷಕಾರದಿಂದ ಎರಡು. ಝಷ್, ಭಷ್ ಶಕಾರದಿಂದ ಆರು. ಅಶ್, ಹಶ್, ವಶ್, ಝಶ್, ಜಶ್, ಬಶ್. ವಕಾರದಿಂದ ಒಂದು ಛಣ್. ಯಕಾರದಿಂದ ಐದು. ಯಯ್, ಮಯ್, ಝಯ್, ಖಯ್, ಚಯ್, ರೇಫದಿಂದ ಐದು. ಯರ್, ಝರ್, ಖರ್, ಚರ್, ಶರ್. ಲಕಾರದಿಂದ ಆರು. ಅಲ್, ಹಲ್, ವಲ್, ರಲ್, ಝಲ್, ಶಲ್. ಹೀಗೆ ನಲವತ್ತೆರಡು ಪ್ರತ್ಯಾಹಾರಗಳು ಮಾತ್ರ ಉಪಯೋಗವನ್ನು ಹೊಂದುತ್ತವೆ. ಅಚ್ ಎಂದರೆ ಸ್ವರದ ಒಂಭತ್ತು ವರ್ಣಗಳಿಗೂ ಹಲ್ ಎಂದರೆ ವ್ಯಂಜನ ಮೂವತ್ತಮೂರು ವರ್ಣಗಳಿಗೂ ಸಂಜ್ಞೆಯಾಗುತ್ತದೆ. ಈಗ ಸ್ವರಗಳ ವಿಭಾಗವನ್ನು ಸೂತ್ರದಿಂದ ವಿವರಿಸುತ್ತಾನೆ.

(ಹ್ರಸ್ವ ದೀರ್ಘ ಪ್ಲುತ ಸಂಜ್ಞಾ ವಿಧಾಯಕ ಸೂತ್ರ)

೫. ಊಕಾಲೋಽಜ್ಝ್ರಸ್ವದೀರ್ಘಪ್ಲುತಃ ॥೧-೨-೨೭॥

ಉಶ್ಚ ಊಶ್ಚ ಊಷಿಶ್ಚ ವಃ । ವಾಂ ಕಾಲ ಇವ ಕಾಲೋ ಯಸ್ಯ ಸೋಽಚ್ ಕ್ರಮಾತ್ ಹ್ರಸ್ವ ದೀರ್ಘ ಪ್ಲುತಸಂಜ್ಞಃ ಸ್ಯಾತ್ ॥

ಊಕಾಲಃ, ಅಚ್, ಹ್ರಸ್ವದೀರ್ಘಪ್ಲುತಃ, ಎಂದು ಮೂರು ಪದಗಳುಳ್ಳ ಸೂತ್ರ. ಊಕಾಲವೆಂಬುದಕ್ಕೆ ವಃ ಕಾಲ ಇವ ಕಾಲೋ, **ಯಸ್ಯ ಸಃ ಊಕಾಲಃ** ಎಂದು ವಿಗ್ರಹವಾಕ್ಯ. ವೃತ್ತಿಯಲ್ಲಿ ಬರೆದುದು ಫಲಿತಾರ್ಥ ಮಾತ್ರ. ವಿಗ್ರಹವಲ್ಲ. ವಃ ಅಂದರೆ ಉಕಾರದ ಬಹುವಚನ. ಅದನ್ನು ನಡೆಸಿದರೆ ಉಃ ಊ ವಃ ಎಂದಾಗುತ್ತದೆ. **ಹ್ರಸ್ವಶ್ಚ ದೀರ್ಘಶ್ಚ ಪ್ಲುತಶ್ಚ ಹ್ರಸ್ವದೀರ್ಘಪ್ಲುತಃ** ಇಲ್ಲಿ ಎರಡು ರೀತಿ ಸಮಾಸ ಮಾಡಿದರೂ ಈ ರೂಪವಾಗುವುದಿಲ್ಲ. ಇತರೇತರ ಯೋಗದ್ವಂದ್ವ ಸಮಾಸದಲ್ಲಿ ಏಕವಚನತಪ್ಪಾಗುತ್ತದೆ. ಸಮಾಹಾರ ದ್ವಂದ್ವದಲ್ಲಿ ಏಕವಚನ ಬರುವುದಾದರೂ ನಪುಂಸಕವಾಗಬೇಕಾಗುತ್ತದೆ. ಇಂಥಾ ಸಂದರ್ಭಗಳಲ್ಲಿ ಆರ್ಷ ಪ್ರಯೋಗವೆಂದು ಒಂದೇ ಸಮಾಧಾನವಲ್ಲದೆ ಬೇರೆ ಉತ್ತರವಿಲ್ಲ. ಇಲ್ಲಿ ಉ ಊ ಊಷಿ ಎಂದು ಕೋಳಿಯ ಕೂಗಿನ ಅನುಕರಣೆಯೆಂದು ತಿಳಿಯಬೇಕು. ಇಲ್ಲವಾದರೆ ಉಕಾರಕ್ಕೆ ಸಾಮ್ಯ ಸಮಂಜಸವಾಗುವುದಿಲ್ಲ. ಆದುದರಿಂದ ಒಂದು ಮಾತ್ರೆಯುಳ್ಳ

ಹ್ರಸ್ವ ಮಾತ್ರೆಯುಳ್ಳ ಮೂರು ಮಾತ್ರೆಯುಳ್ಳ ಕೋಳಿಕೂಗಿನ ಅನುಕರಣೆ ಸಮಂಜಸ [illegible] ಅಗ ಒಂದು ಮಾತ್ರೆಯುಳ್ಳ ಉ ಎಂಬ ಕೋಳಿಕೂಗಿನ ಅನುಕರಣೆಯನ್ನು ಉಚ್ಚರಿಸಲು ಎಷ್ಟು ಸಮಯ ಬೇಕಾಗುತ್ತದೆಯೋ ಅಷ್ಟು ಸಮಯದಿಂದ ಉಚ್ಚರಿಸುವ ಸ್ವರಕ್ಕೆ ಹ್ರಸ್ವವೆಂದೂ. ಗೆಯೆ ಎರಡು ಮಾತ್ರೆಯುಳ್ಳ ಊ ಎಂಬುದಕ್ಕೆ ಬೇಕಾಗುವ ಸಮಯದಷ್ಟು ಸಮಯವುಳ್ಳದಕ್ಕೆ ದೀರ್ಘವೆಂದೂ. ಮೂರು ಮಾತ್ರೆಯುಚ್ಚಾರಣೆಯಷ್ಟು ಸಮಯವುಳ್ಳದಕ್ಕೆ ಪ್ರತಿವೆಂದೂ ಸಂಜ್ಞೆ ಬರುತ್ತದೆ ಎಂದು ಸೂತ್ರಾರ್ಥವಾಗುತ್ತದೆ. ಒಂದು ಮಾತ್ರೆಯುಳ್ಳದಕ್ಕೆ ಹ್ರಸ್ವವೆಂದೂ. ಎರಡುಮಾತ್ರೆಯುಳ್ಳದಕ್ಕೆ ದೀರ್ಘವೆಂದೂ. ಮೂರುಮಾತ್ರೆಯುಳ್ಳದಕ್ಕೆ ಪ್ರತಿವೆಂದೂ ಸ್ವರಗಳನ್ನು ಮೂರು ವಿಧಗಳಾಗಿ ವಿಂಗಡಿಸಿದಂತಾಗುತ್ತದೆ. ವ್ಯಂಜನಗಳಿಗೆ ಅರ್ಧಮಾತ್ರಾಕಾಲವಿರುವುದರಿಂದ ಅವುಗಳಿಗೆ ಈ ವಿಭಾಗವಿಲ್ಲ. ಈ ಹ್ರಸ್ವ, ದೀರ್ಘ, ಪ್ಲುತಗಳು ತಿರುಗಿ ಒಂದೊಂದೂ ಪ್ರತ್ಯೇಕ ಮೂರು ವಿಧವಾಗುತ್ತದೆ ಎಂದು ಹೇಳುತ್ತಾನೆ.

ಸ ಪ್ರತ್ಯೇಕಮುದಾತ್ತಾದಿ ಭೇದೇನ ತ್ರಿಧಾ ॥

ಹೀಗೆ ಹ್ರಸ್ವಾದಿಸಂಜ್ಞೆಯನ್ನು ಹೊಂದಿದ ಸ್ವರವು ಪ್ರತ್ಯೇಕವಾಗಿ ಒಂದೊಂದೂ ಉದಾತ್ತ ಅನುದಾತ್ತ, ಸ್ವರಿತ, ವೆಂಬ ಭೇದದಿಂದ ಮೂರುವಿಧವಾಗುತ್ತದೆ. ಆಗ ಒಂದೊಂದೂ ಒಂಭತ್ತು ವಿಧಗಳಾಗುತ್ತವೆ. ಉದಾತ್ತಾದಿಸ್ವರೂಪವನ್ನು ಹೇಳುತ್ತಾನೆ.

(ಉದಾತ್ತ ಸಂಜ್ಞೆ ಹೇಳುವ ಸೂತ್ರ)

೬. ಉಚ್ಚೈರುದಾತ್ತಃ ॥ ೧-೨-೨೯ ॥

ಉಚ್ಚೈಃ ಉದಾತ್ತಃ ॥ ಎರಡುಪದವುಳ್ಳ ಸೂತ್ರ. ವರ್ಣಗಳವಿವರಣ ಪ್ರಕರಣವಾದುದರಿಂದ ಇಲ್ಲಿ **ಉಚ್ಚೈಃ** ಅಂದರೆ ವರ್ಣೋತ್ಪತ್ತಿಸ್ಥಾನಗಳ ಮೇಲ್ಭಾಗವೆಂದರ್ಥವಾಗುತ್ತದೆ. ತಾಲುಮುಂತಾದ ಸ್ಥಾನಗಳ ಮೇಲ್ಭಾಗದಲ್ಲಿ ಉಚ್ಚರಿಸಲ್ಪಟ್ಟ ಸ್ವರಗಳಿಗೆ ಉದಾತ್ತವೆಂದು ಹೆಸರು.

(ಅನುದಾತ್ತ ಸಂಜ್ಞೆ ಹೇಳುವಸೂತ್ರ.)

೭. ನೀಚೈರನುದಾತ್ತಃ ॥ ೧-೨-೩೦ ॥

ನೀಚೈಃ ಅನುದಾತ್ತಃ ॥ ಎರಡು ಪದಗಳುಳ್ಳ ಸೂತ್ರ. ಹಿಂದಿನಂತೆಯೇ **ನೀಚೈಃ** ಎಂದರೆ ಕೆಳಭಾಗವೆಂದರ್ಥ. ತಾಲ್ವಾದಿಸ್ಥಾನಗಳ ಕೆಳಭಾಗದಲ್ಲಿ ಉಚ್ಚರಿಸಲ್ಪಡುವ ಸ್ವರಗಳಿಗೆ ಅನುದಾತ್ತವೆಂದು ಹೆಸರು.

(ಸ್ವರಿತಸಂಜ್ಞೆ ಹೇಳುವಸೂತ್ರ)

ಹ್ರಸ್ವ ಮಾತ್ರೆ ಭವೇಲ್ ಹ್ರಸ್ವೋ ದ್ವಿಮಾತ್ರೋ ದೀರ್ಘ ಉಚ್ಚಿತ
ತ್ರಿಮಾತ್ರಸ್ತು ಪ್ಲುತಿಜ್ಞೇಯ ವ್ಯಂಜನಂ ಚಾರ್ಧಮಾತ್ರಿಕಂ ॥ ೧ ॥

೮. ಸಮೂಹಾರಃ ಸ್ವರಿತಃ ॥೧-೨-೩೧॥

ಎರಡು ಪದವುಳ್ಳ ಸೂತ್ರ. ಹಿಂದಿನ ಎರಡು ಸೂತ್ರಗಳಿಂದ ಉದಾತ್ತ ಅನುದಾತ್ತವೆಂಬ ಎರಡು ಪದಗಳು ಅನುವೃತ್ತವಾಗುತ್ತವೆ. ಇಲ್ಲಿ ಅರ್ಥಸಾಮಂಜಸ್ಯಕ್ಕೋಸ್ಕರ ಅವುಗಳ ಧರ್ಮವನ್ನು ತೆಗೆದುಕೊಳ್ಳಬೇಕು. ಯಾವ ಸ್ವರದಲ್ಲಿ ಉದಾತ್ತತ್ವ ಅನುದಾತ್ತತ್ವ ರೂಪಗಳಾದ ವರ್ಣ ಧರ್ಮಗಳು ಸಂಮಿಶ್ರಣವನ್ನು ಹೊಂದುತ್ತವೆಯೋ ಆ ಸ್ವರವು ಸ್ವರಿತವಾಗುತ್ತದೆ. ಅರ್ಧಭಾಗ ಉದಾತ್ತಧರ್ಮದಿಂದಲೂ ಉಳಿದ ಅರ್ಧಭಾಗ ಅನುದಾತ್ತ ಧರ್ಮದಿಂದಲೂ ಕೂಡಿರುವುದೇ ಸ್ವರಿತಲಕ್ಷಣ. ಸ್ವರ ನಿಯಮ ಲೋಕದಲ್ಲಿಲ್ಲವಾದುದರಿಂದ ವೈದಿಕಶಬ್ದಗಳೇ ಉದಾಹರಣೆಯಾಗುತ್ತವೆ. ಇವು ಸಿದ್ಧಾಂತಕೌಮುದಿಯಲ್ಲಿ ವಿವೃತವಾಗಿವೆ. ಹೀಗೆ ಒಂಭತ್ತು ವಿಧಗಳಾದ ಮೇಲೆ ಪುನಃ ಪ್ರತ್ಯೇಕ ಎರಡು ಭೇದಗಳನ್ನು ಹೇಳುತ್ತಾನೆ.

ಸ ನವವಿಧೋಽಪಿ ಪ್ರತ್ಯೇಕಮನುನಾಸಿಕಾನನುನಾಸಿಕತ್ವಾಭ್ಯಾಂ ದ್ವಿಧಾ॥

ಹೀಗೆ ಉದಾತ್ತಾದಿ ಭೇದವನ್ನು ಹೊಂದಿ ಒಂದೊಂದು ಸ್ವರವು ಒಂಭತ್ತು ವಿಧವಾದರೂ ತಿರುಗಿ ಒಂದೊಂದು ಪ್ರತ್ಯೇಕವಾಗಿ ಅನುನಾಸಿಕತ್ವ, ಅನನುನಾಸಿಕತ್ವ ಧರ್ಮಗಳಿಂದ ಎರಡು ವಿಧವಾಗುತ್ತದೆ. ಆಗ ಒಂದು ಸ್ವರವು ಹದಿನೆಂಟು ವಿಧವಾಗುತ್ತದೆ. ಅನುನಾಸಿಕವೆಂದರೇನು ಎಂಬುದನ್ನು ಸೂತ್ರದಿಂದ ವಿವರಿಸುತ್ತಾನೆ.

(ಅನುನಾಸಿಕ ಸಂಜ್ಞೆ ಹೇಳುವ ಸೂತ್ರ)

೯. ಮುಖನಾಸಿಕಾವಚನೋಽನುನಾಸಿಕಃ ॥೧-೧-೮॥

ಮುಖಸಹಿತನಾಸಿಕಯೋಚ್ಚಾರ್ಯಮಾಣೋ ವರ್ಣೋಽನುನಾಸಿಕ–
ಸಂಜ್ಞಃ ಸ್ಯಾತ್ ।

ಮುಖನಾಸಿಕಾವಚನಃ, ಅನುನಾಸಿಕಃ ॥ ಎರಡು ಪದಗಳುಳ್ಳ ಸೂತ್ರ. ಮುಖಸಹಿತಾ ನಾಸಿಕಾ, ಮುಖನಾಸಿಕಾ. (ಮಧ್ಯನುಪದಲೋಪವಾದ ಸಮಾಸ. ಹೀಗೆ ಮಾಡಿದೆ ದ್ವಂದ್ವ ಮಾಡಿದರೆ ಹ್ರಸ್ವ ಬರಬೇಕಾಗುತ್ತದೆ.) **ಉಚ್ಯತೇ (ಉಚ್ಚಾರ್ಯತೇ) ಇತಿ ವಚನಃ** (ವಚ್ ಧಾತುವಿಗೆ ಕರ್ಮಣಿಯಲ್ಲಿ **ಲ್ಯುಟ್** ಪ್ರತ್ಯಯ. ಲ್ಯುಟಿಗೆ ಅನಾದೇಶ) **ಮುಖನಾಸಿಕಯಾ ವಚನಃ ಮುಖನಾಸಿಕಾ ವಚನಃ** । ಇಲ್ಲಿ ಮುಖವೆಂದರೆ ವರ್ಣೋತ್ಪತ್ತಿ ಸ್ಥಾನಗಳು ಎಂದರ್ಥ. ಆಗ ಸೂತ್ರಾರ್ಥ. ವರ್ಣೋತ್ಪತ್ತಿ ಸ್ಥಾನಗಳಿಂದ ಕೂಡಿಕೊಂಡ ಮೂಗಿನಿಂದ ಉಚ್ಚರಿಸಲ್ಪಡುವ ವರ್ಣಕ್ಕೆ ಅನುನಾಸಿಕವೆಂಬ ಸಂಜ್ಞೆ ಬರುತ್ತದೆ. ಹೀಗೆ ಅನುನಾಸಿಕ

ಅನನುನಾಸಿಕವೆಂದು ವಿಂಗಡಿಸಿದ ಮೇಲೆ ಎಲ್ಲಾ ಸ್ವರಗಳು ಹದಿನೆಂಟು ವಿಧಗಳಾಗಬೇಕಾಗುತ್ತದೆ ಆದರೆ ಒಂಭತ್ತು ಸ್ವರಗಳಿಗೆ ಹದಿನೆಂಟು ಭೇದಗಳಿಲ್ಲ. ಆದುದರಿಂದ ಯಾವಯಾವ ಸ್ವರಕ್ಕೆ ಎಷ್ಟು ಭೇದಗಳಾಗುತ್ತವೆ ಎಂಬುದನ್ನು ಸ್ಪಷ್ಟಪಡಿಸುತ್ತಾನೆ.

ತದಿತ್ಥಮ್– ಅ ಇ ಉ ಋ ಌ ವಿಷಾಂ ವರ್ಣಾನಾಂ ಪ್ರತ್ಯೇಕಮ್ಷಾದಶ ಭೇದಾಃ । ೩ವರ್ಣಸ್ಯ ದ್ವಾದಶ, ತಸ್ಯ ದೀರ್ಘಾಭಾವಾತ್ । ಏಚಾಮಪಿ ದ್ವಾದಶ, ತೇಷಾಂ ಹ್ರಸ್ವಾಭಾವಾತ್ ।

ಇದುವರೆಗೆ ಹೇಳಿದ ಸ್ವರಭೇದಗಳು ಹೀಗೆ ವ್ಯವಸ್ಥಿತವಾಗಿವೆ. ಅ ಇ ಉ ಋ ಌ, ಈ ನಾಲ್ಕುವರ್ಣಗಳಿಗೆ ಮಾತ್ರ ಪ್ರತ್ಯೇಕವಾಗಿ ಹದಿನೆಂಟು ಭೇದಗಳಾಗುತ್ತವೆ. ಅ ಎಂಬುದೊಂದು ಮೊದಲು **ಹ್ರಸ್ವ ದೀರ್ಘ, ಪ್ಲುತ**ವೆಂದೂ ಮೂರುವಿಧವಾಗಿ ಅದು ಒಂದೊಂದೂ ಉದಾತ್ತ, ಅನುದಾತ್ತ, ಸ್ವರಿತವೆಂದು ಮೂರು ರೀತಿಯಾಗುವುದರಿಂದ ಒಂಭತ್ತಾಗಿಯೂ, ಈ ಒಂಭತ್ತು ಒಂದೊಂದೂ ಅನುನಾಸಿಕ, ಅನನುನಾಸಿಕವೆಂದು ಎರಡುವಿಧವಾಗುವುದರಿಂದ ಹದಿನೆಂಟುತರವಾಯಿತು. ಹೀಗೆ ಉಳಿದ ಮೂರೂ ಆಗುತ್ತವೆ. ೩ಕಾರಕ್ಕಾದರೋ ಹನ್ನೆರಡುಪ್ರಕಾರ ಮಾತ್ರ. ಅದಕ್ಕೆ ದೀರ್ಘವಿಲ್ಲ. ಇದಕ್ಕೆ **ಹೋತ್ಕೃ**ಕಾರವೆಂಬ ಭಾಷ್ಯದ ಉದಾಹರಣೆಯೇ ಪ್ರಮಾಣ. **ಹೋತೃ** + ೩ಕಾರವೆಂದಿರುವಾಗ ಸವರ್ಣದೀರ್ಘಸಂಧಿಯಾಗುತ್ತದೆ. ಇದಕ್ಕೆ ದೀರ್ಘವಿದ್ದಿದ್ದರೆ ಋಕಾರವನ್ನೇಕೆ ಹೇಳಬೇಕು. ಅದುದರಿಂದ ೩ಕಾರಕ್ಕೆ ದೀರ್ಘವಿಲ್ಲವೆಂದು ತಿಳಿಯಬೇಕು. ಆಗ **ಹ್ರಸ್ವ**ದ ಆರುಭೇದಗಳೂ **ಪ್ಲುತ**ದ ಆರುಭೇದಗಳೂ ಸೇರಿ ಹನ್ನೆರಡು ಮಾತ್ರವಾಗುತ್ತದೆ. ಹೀಗೆ **ಏಚ್** ಅಂದರೆ ಏ ಓ ಐ ಔ ಇವುಗಳಿಗೂ ಪ್ರತ್ಯೇಕವಾಗಿ ಹನ್ನೆರಡೇ ಭೇದಗಳು. ಇವುಗಳಿಗೆ **ಹ್ರಸ್ವ**ವಿಲ್ಲದಿರುವುದೇ ಕಾರಣ. ಆಗ ಇದರ ಆರು ಭೇದಗಳು ಕಡಿಮೆಯಾಗುತ್ತವೆ. ಮಾಹೇಶ್ವರಸೂತ್ರದಲ್ಲಿ ದೀರ್ಘವಾಗಿ ಉಚ್ಚರಿಸಿರುವುದೇ **ಹ್ರಸ್ವ**ವಿಲ್ಲವೆಂದು ಸೂಚಿಸುತ್ತದೆ.

ಮುಂದೆ ಕಾರ್ಯವಿಧಾಯಕ ಸೂತ್ರಗಳಲ್ಲಿ ಅಕಾರಾದಿಗಳು ನಿರ್ದಿಷ್ಟವಾದರೆ ಅವುಗಳಭೇದಗಳಿಗೂ ಗ್ರಹಣವಿದೆಯೆಂದು ಹೇಳುತ್ತಾನೆ. ಅದು ಹೇಗೆ? ಯಾವುದು ನಿರ್ದಿಷ್ಟವಾಗಿದೆಯೋ ಅದಕ್ಕೆ ಮಾತ್ರ ಕಾರ್ಯಹೇಳುವುದು ಸಹಜ. ಅದಕ್ಕೋಸ್ಕರ ಅ ಎಂದರೆ ಅದು ತನ್ನ ಹದಿನೆಂಟು ಭೇದಗಳನ್ನೂ ತೆಗೆದುಕೊಳ್ಳುತ್ತದೆಂದು ತಿಳಿಸಲು **ಅಣುದಿತ್ಸವರ್ಣಸ್ಯೆಚಾಪ್ರತ್ಯಯಃ** ಎಂಬ ಸೂತ್ರವನ್ನು ಹೇಳುತ್ತಾನೆ. ಅಲ್ಲಿ ಸವರ್ಣ ಪದದ ಜ್ಞಾನಬೇಕಾದುದರಿಂದ ಮೊದಲು ಸವರ್ಣವನ್ನು ತಿಳಿಸುವ ಸೂತ್ರವನ್ನು ವಿವರಿಸುತ್ತಾನೆ.

(ಸವರ್ಣಸಂಜ್ಞೆ ಹೇಳುವಸೂತ್ರ)

೧೦. ತುಲ್ಯಾಸ್ಯಪ್ರಯತ್ನಂ ಸವರ್ಣಮ್ ॥ ೧-೧-೯ ॥

ತಾಲ್ವಾದಿಸ್ಥಾನಮಾಭ್ಯಂತರಪ್ರಯತ್ನಶ್ಚೇತ್ಯೇತದ್ದ್ವಯಂ ಯಸ್ಯಯೇನ ತುಲ್ಯಂ ತನ್ಮಿಥಃ ಸವರ್ಣಸಂಜ್ಞಂ ಸ್ಯಾತ್ ॥

ತುಲ್ಯಾಸ್ಯಪ್ರಯತ್ನಂ, ಸವರ್ಣಂ ॥ ದ್ವಿಪದಸೂತ್ರ. **ಅಸ್ಯಂತಿ (ಉಚ್ಚಾರ್ಯಂತಿ) ವರ್ಣಾನ್ ಅನೇನ ಇತಿ ಆಸ್ಯಂ** । ಯಾವುದರಿಂದ ವರ್ಣಗಳು ಉಚ್ಚರಿಸಲ್ಪಡುತ್ತವೆಯೋ, (ಇದರಿಂದ ವರ್ಣಗಳನ್ನು ಉಚ್ಚರಿಸುತ್ತಾರೆ.) ಅದು ಆಸ್ಯ, **ಆಸ್ಯೇ ಭವಂ ಆಸ್ಯಂ** । ಮುಖದಲ್ಲಿರುವ ವರ್ಣೋತ್ಪತ್ತಿಸ್ಥಾನಗಳಾದ ತಾಲ್ವಾದಿಗಳು. **ಪ್ರಕೃಷ್ಟೋ ಯತ್ನಃ ಪ್ರಯತ್ನಃ** । ಆಭ್ಯಂತರಪ್ರಯತ್ನವೇ ಉತ್ಕೃಷ್ಟವಾದ ಯತ್ನ. **ಆಸ್ಯಂ ಚ ಪ್ರಯತ್ನಶ್ಚ ಆಸ್ಯ ಪ್ರಯತ್ನೌ । ತುಲ್ಯೌ ಆಸ್ಯ ಪ್ರಯತ್ನೌ ಯಸ್ಯ ತತ್ ತುಲ್ಯಾಸ್ಯಪ್ರಯತ್ನಮ್** ॥ ಸನಮಾನವಾದ ತಾಲ್ವಾದಿಸ್ಥಾನವೂ ಆಭ್ಯಂತರ ಪ್ರಯತ್ನವೂ ಈ ಎರಡು ಯಾವುದಕ್ಕೆ ಯಾವುದರೊಡನೆ ಸಾಮ್ಯವಿದೆಯೋ ಅವುಗಳು ಪರಸ್ಪರ ಸವರ್ಣಸಂಜ್ಞೆಯನ್ನು ಹೊಂದುತ್ತವೆ. ಯಾವ ವರ್ಣಗಳಿಗೆ ಒಂದೇ ಸ್ಥಾನವೂ ಒಂದೇ ಪ್ರಯತ್ನವಿರುತ್ತದೆಯೋ ಅವುಗಳು ಪರಸ್ಪರ ಸವರ್ಣಗಳಾಗುತ್ತವೆ. ಪ್ರಕೃತ ಅಕಾರದ ಹದಿನೆಂಟು ಭೇದಗಳಿಗೆ ಒಂದೇ ಕಂಠಸ್ಥಾನವೂ ವಿವೃತವೆಂಬ ಆಭ್ಯಂತರ ಪ್ರಯತ್ನವೂ ಇರುವುದರಿಂದ ಅಕಾರದ ಸವರ್ಣ ಹದಿನೆಂಟೂ ಆಗುತ್ತವೆ. ಹೀಗೆ ಹೇಳಿದರೆ ಋಕಾರ ಮತ್ತು �less ಕಾರಗಳಿಗೆ ಬೇರೆ ಬೇರೆ ಸ್ಥಾನಗಳನ್ನು ಮುಂದೆ ಹೇಳುವುದರಿಂದ ಅವುಗಳಿಗೆ ಪರಸ್ಪರ ಸಂಜ್ಞೆ ಬಾರದೇ ಹೋಗಬೇಕಾಗುತ್ತದೆ. ಅವುಗಳ ಸವರ್ಣದಿಂದ ಕಾರ್ಯವಾಗಬೇಕು. ಅದಕ್ಕೋಸ್ಕರ ವಾರ್ತಿಕಕಾರರು ಸೂತ್ರ ರಚಿಸಿರುವುದನ್ನು ಹೇಳುತ್ತಾನೆ.

(ವಾ ೧) ಋ �less ವರ್ಣಯೋರ್ಮಿಥಃ ಸಾವರ್ಣ್ಯಂ ವಾಚ್ಯಮ್ ॥

ಇದಕ್ಕೆ ವಾರ್ತಿಕಸೂತ್ರವೆಂದು ಹೆಸರು. **"ಉಕ್ತಾನುಕ್ತದುರುಕ್ತ ಚಿಂತನಾತ್ಮಕಂ ವಾಕ್ಯಂ ವಾರ್ತಿಕಂ"** ಎಂದು ವಾರ್ತಿಕಲಕ್ಷಣ. ಪಾಣಿನಿಯು ಹೇಳಿದ ಸೂತ್ರದಲ್ಲಿ, ಸಾಮಂಜಸ್ಯ ಹೇಳದೇ ಇರುವ ಅಂಶ, ಅಧಿಕವಾಗಿರುವ ಅಂಶ, ಇವುಗಳನ್ನು ವಿಚಾರ ಮಾಡುವ ವಾಕ್ಯಕ್ಕೆ ವಾರ್ತಿಕವೆಂದು ಹೆಸರು. 'ತುಲ್ಯಾಸ್ಯಪ್ರಯತ್ನಂ ಸವರ್ಣಂ' ಎಂಬಲ್ಲಿ ಹೇಳಿದ ಸವರ್ಣಸಂಜ್ಞೆಯು ಸಾಕಾಗಲಿಲ್ಲ. ಆದುದರಿಂದ ಅಧಿಕವಾಗಿ ಸವರ್ಣಸಂಜ್ಞೆಯು ಇಲ್ಲಿ ಹೇಳಿದೆ. ಋಕಾರ �less ಕಾರಗಳಿಗೆ ಭಿನ್ನಸ್ಥಾನವಾದರೂ ಪರಸ್ಪರ ಸವರ್ಣಸಂಜ್ಞೆಯನ್ನು ಹೇಳಬೇಕು ಎಂದು ವಾರ್ತಿಕದ ಅರ್ಥ. ಆಗ ಋ ಎಂದರೆ ತನ್ನ ಹದಿನೆಂಟಕ್ಕಲ್ಲದೆ less ಕಾರದ ಹನ್ನೆರಡಕ್ಕೂ ಸವರ್ಣವಾಗುತ್ತದೆ.

ಸಮಾನವಾದ ಸ್ಥಾನವೂ ಸಮಾನವಾದ ಆಭ್ಯಂತರ ಪ್ರಯತ್ನವೂ ಎಂದು ಸೂತ್ರದಲ್ಲಿ ಹೇಳಿದೆ. ಸ್ಥಾನಪ್ರಯತ್ನಗಳನ್ನು ತಿಳಿಯುವುದು ಹೇಗೆ? ಅದಕ್ಕೋಸ್ಕರ ಪಾಣಿನಿಯ ಶಿಕ್ಷಾಪ್ರಜನನವನ್ನು ಸಂಗ್ರಹವಾಗಿ ಹೇಳಲು ಆರಂಭಿಸುತ್ತಾನೆ—

ಅಕುಹವಿಸರ್ಜನೀಯಾನಾಂ ಕಂಠಃ । ಇಚುಯಶಾನಾಂ ತಾಲು । ಋಟುರಷಾಣಾಂ ಮೂರ್ಧಾ । �less ತುಲಸಾನಾಂ ದಂತಾಃ । ಉಪೂಪಧ್ಮಾನೀಯಾನಾಮೋಷ್ಠೌ । ಞಮುಜಿಣನಾನಾಂ ನಾಸಿಕಾ ಚ । ಏದೈತೋಃ ಕಂಠತಾಲು । ಓದೌತೋಃ ಕಂಠೋಷ್ಠಮ್ । ವಕಾರಸ್ಯ ದಂತೋಷ್ಠಮ್ । ಜಿಹ್ವಾಮೂಲೀಯಸ್ಯ ಜಿಹ್ವಾಮೂಲಮ್ । ನಾಸಿಕಾ ಅನುಸ್ವಾರಸ್ಯ ॥

ಇದು ವರ್ಣೋತ್ಪತ್ತಿಸ್ಥಾನಕೋಷ್ಠಕ. ಅ ಅಂದರೆ ಲೋಕಪ್ರಸಿದ್ಧಿಯಿಂದ ಅದರ ಹದಿನೆಂಟು ಭೇದಗಳನ್ನೂ **ಕು** ಅಂದರೆ ಕವರ್ಗವನ್ನೂ ತಿಳಿದುಕೊಳ್ಳಬೇಕು. ಅಕಾರದ ಹದಿನೆಂಟು ಭೇದಗಳಿಗೂ, ಕವರ್ಗಕ್ಕೂ ಹಕಾರ ಮತ್ತು ವಿಸರ್ಗಕ್ಕೆ ಕಂಠಸ್ಥಾನ ಇಕಾರದ ಹದಿನೆಂಟು ಭೇದಗಳಿಗೂ ಚವರ್ಗಕ್ಕೂ ಯಕಾರ ಶಕಾರಗಳಿಗೂ ತಾಲು ಸ್ಥಾನ (ಹಲ್ಲಿನ ಮೇಲ್ಭಾಗ). ಋಕಾರದ ಹದಿನೆಂಟು ಪ್ರಕಾರಗಳಿಗೂ ಟವರ್ಗಕ್ಕೂ ರೇಷಷಕಾರಗಳಿಗೂ ಮೂರ್ಧಾಸ್ಥಾನ (ತಾಲುವಿನ ಮೇಲ್ಭಾಗ). less ಕಾರದ ಹನ್ನೆರಡು ಭೇದಗಳಿಗೂ ತವರ್ಗಕ್ಕೂ ಲಸಗಳಿಗೂ ದಂತಸ್ಥಾನ. ಉಕಾರದ ಹದಿನೆಂಟು ಭೇದಗಳಿಗೂ ಪವರ್ಗಕ್ಕೂ ಉಪಧ್ಮಾನೀಯಕ್ಕೂ (ಈ ಸಂಜ್ಞೆಯನ್ನು ಮುಂದೆ ವಿವರಿಸುತ್ತಾನೆ—ಗಪ ಗಫ ಇವರ ಸ್ವರೂಪ) ಓಷ್ಠಸ್ಥಾನ (ತುಟಿ). ಇನ್ನು ಎರೆಡೆರಡು ಸ್ಥಾನವುಳ್ಳ ವರ್ಣಗಳನ್ನು ಹೇಳುತ್ತಾನೆ. ಞಮುಜಿಣನ ಈ ಐದು ವರ್ಣಗಳಿಗೆ ಹಿಂದೆ ಆಯಾಯ ಸ್ಥಾನಗಳಲ್ಲದೆ ನಾಸಿಕಸ್ಥಾನವೂ ಹೆಚ್ಚಾಗಿದೆ. ಏಕಾರ ಐಕಾರಗಳಿಗೆ ಕಂಠ ಮತ್ತು ತಾಲುಸ್ಥಾನ. ಓಔಗಳಿಗೆ ಕಂಠ ಮತ್ತು ಓಷ್ಠಸ್ಥಾನಗಳು. ವಕಾರಕ್ಕೆ ದಂತ ಮತ್ತು ಓಷ್ಠಸ್ಥಾನ. ಜಿಹ್ವಾಮೂಲೀಯಕ್ಕೆ (ಇದನ್ನೂ ಮುಂದೆ ವಿವರಿಸುತ್ತಾನೆ. ಕ ಕ ಖವೆಂದು ಇದರ ಸ್ವರೂಪ.) ನಾಲಿಗೆಯ ಬುಡ. ಅನುಸ್ವಾರಕ್ಕೆ ನಾಸಿಕಸ್ಥಾನ. ಹೀಗೆ ಇವುಗಳು ವರ್ಣಗಳು ಹುಟ್ಟುವ ಸ್ಥಾನಗಳು. ಇನ್ನು ಪ್ರಯತ್ನಗಳನ್ನು ವಿವರಿಸುತ್ತಾನೆ.

ಯತ್ನೋ ದ್ವಿಧಾ—ಆಭ್ಯಂತರೋ ಬಾಹ್ಯಶ್ಚ । ಆದ್ಯಃ ಪಂಚಧಾ—ಸ್ಪೃಷ್ಟ + ಈಷತ್‌ಸ್ಪೃಷ್ಟ + ಈಷದ್ವಿವೃತ + ವಿವೃತ + ಸಂವೃತ-ಭೇದಾತ್ । ತತ್ರ ಸ್ಪೃಷ್ಟಂ ಪ್ರಯತ್ನಂ ಸ್ಪರ್ಶಾನಾಮ್ ।

ಈಷತ್‌ಸ್ಪೃಷ್ಟಮಂತಃಸ್ಥಾನಾಮ್ । ಈಷದ್ವಿವೃತಮೂಷ್ಮಣಾಮ್ । ವಿವೃತಂ ಸ್ವರಾಣಾಮ್ । ಹ್ರಸ್ವಸ್ಯಾವರ್ಣಸ್ಯ ಪ್ರಯೋಗೇ ಸಂವೃತಮ್ । ಪ್ರಕ್ರಿಯಾದಶಾಯಾಂ ತು ವಿವೃತಮೇವ ॥

ಹಿಂದೆ ಪ್ರಕೃಷ್ಟಪ್ರಯತ್ನ ಆಭ್ಯಂತರವೆಂದುದರಿಂದ ಬೇರೆ ಯತ್ನವಿದೆ ಎಂದು ಹೇಳಿದಂತಾಗುತ್ತದೆ. ಆದುದರಿಂದ ಯತ್ನವಿಭಾಗವನ್ನು ಹೇಳುತ್ತಾನೆ. ಮೊದಲು ಆಭ್ಯಂತರ, ಬಾಹ್ಯವೆಂದು ಯತ್ನವು ಎರಡು ವಿಧ. ಮೊದಲನೆಯ ಆಭ್ಯಂತರ ಪ್ರಯತ್ನವು **ಸ್ಪೃಷ್ಟ, ಈಷತ್‌ಸ್ಪೃಷ್ಟ, ಈಷದ್ವಿವೃತ, ವಿವೃತಸಂವೃತ್ತ**ವೆಂದು ಐದು ವಿಧವಾಗಿದೆ. ಈ ಐದರಲ್ಲಿ ಸ್ಪರ್ಶಾಕ್ಷರಗಳಿಗೆ (ಇಲ್ಲಿ ಹೇಳುವ ಸಂಜ್ಞೆಗಳನ್ನು ಮುಂದೆ ವಿವರಿಸುತ್ತಾನೆ.) **ಸ್ಪೃಷ್ಟ** ಪ್ರಯತ್ನ. ಅಂತಃಸ್ಥವರ್ಣಗಳಿಗೆ **ಈಷತ್‌ಸ್ಪೃಷ್ಟ**ಪ್ರಯತ್ನ. ಊಷ್ಮವರ್ಣಗಳಿಗೆ **ಈಷದ್ವಿವೃತ**ಪ್ರಯತ್ನ. ಸ್ವರಗಳಿಗೆ **ವಿವೃತ**ಪ್ರಯತ್ನ. ಹ್ರಸ್ವಾಕಾರಕ್ಕೆ ಮಾತ್ರ ಪ್ರಯೋಗಕಾಲದಲ್ಲಿ **ಸಂವೃತ**ಪ್ರಯತ್ನ. ಪ್ರಕ್ರಿಯಾಕಾಲದಲ್ಲಿ (ಕಾರ್ಯಮಾಡುವಾಗ) ಹಿಂದೆ ಹೇಳಿದ **ವಿವೃತ**ಪ್ರಯತ್ನವೇ. ಬಾಹ್ಯಪ್ರಯತ್ನದ ಭೇದಗಳನ್ನು ಹೇಳುತ್ತಾನೆ.

ಬಾಹ್ಯಪ್ರಯತ್ನಸ್ತ್ವೇಕಾದಶಧಾ—ವಿವಾರಃ ಸಂವಾರಃ ಶಾಸ್ವಃ ನಾದೋ ಘೋಷೋಽಘೋಷೋಽಲ್ಪಪ್ರಾಣೋ ಮಹಾಪ್ರಾಣ ಉದಾತ್ತೋಽನುದಾತ್ತಃ ಸ್ವರಿತಶ್ಚೇತಿ ॥ ಖರೋ ವಿವಾರಾಃ ಶ್ವಾಸಾ ಅಘೋಷಾಶ್ಚ । ಹಶಃ ಸಂವಾರಾ ನಾದಾ ಘೋಷಾಶ್ಚ । ವರ್ಗಾಣಾಂ ಪ್ರಥಮತೃತೀಯಪಂಚಮಾ ಯಣಶ್ಚಾಲ್ಪಪ್ರಾಣಾಃ । ವರ್ಗಾಣಾಂ ದ್ವಿತೀಯಚತುರ್ಥೌ ಶಲಶ್ಚ ಮಹಾಪ್ರಾಣಾಃ ॥

ಬಾಹ್ಯಪ್ರಯತ್ನವು ಹನ್ನೊಂದು ವಿಧವಾಗಿದೆ. ವಿವಾರ, ಸಂವಾರ, ಶ್ವಾಸ, ನಾದ, ಘೋಷ, ಅಘೋಷ, ಅಲ್ಪಪ್ರಾಣ, ಮಹಾಪ್ರಾಣ, ಉದಾತ್ತ, ಅನುದಾತ್ತ, ಸ್ವರಿತವೆಂದು ಅವುಗಳ ಹೆಸರು. **ಖರ್** ವರ್ಣಗಳಿಗೆ (ಖ, ಫ, ಛ, ಠ, ಥ, ಚ, ಟ, ತ, ಕಪ, ಶ. ಷ, ಸ,) ವಿವಾರ, ಶ್ವಾಸ, ಅಘೋಷನೆಂದು ಮೂರು ಪ್ರಯತ್ನಗಳು. ಹಶ್ ವರ್ಣಗಳಿಗೆ (ಹ, ಯ, ವ, ರ, ಲ, ಞ, ಮ, ಜ, ಣ, ನ, ಝ, ಭ, ಘ, ಢ, ಧ, ಜ, ಬ, ಗ, ಡ, ದ) ಸಂವಾರ, ನಾದ, ಘೋಷನೆಂದು ಮೂರು ಪ್ರಯತ್ನಗಳು. ವರ್ಗದ ಒಂದನೆಯ, ಮೂರನೆಯ, ಐದನೆಯ ವರ್ಣಗಳೂ ಯಣ್ (ಯ, ವ, ರ, ಲ,) ವರ್ಣಗಳೂ ಅಲ್ಪ ಪ್ರಾಣಪ್ರಯತ್ನವುಳ್ಳವುಗಳು. ವರ್ಗದ ಎರಡನೆಯ ಮತ್ತು ನಾಲ್ಕನೆಯ ವರ್ಣಗಳಿಗೂ, ಶಲ್ ವರ್ಣಗಳಿಗೂ (ಶ, ಷ, ಸ, ಹ) ಮಹಾಪ್ರಾಣ ಪ್ರಯತ್ನವು. ಸ್ವರಗಳಿಗೆ ಉದಾತ್ತ ಅನುದಾತ್ತ ಸ್ವರಿತ ಪ್ರಯತ್ನಗಳು ಹಿಂದೆಯೇ ಹೇಳಿವೆ. ಇದು ಬಾಹ್ಯ

ಪ್ರಯತ್ನವಿವೇಕ. ಆಯಾಯ ಯತ್ನಗಳನ್ನು ಹೇಳುವಾಗ ಹೇಳಿದ ಸಂಜ್ಞೆಗಳ ಸ್ವರೂಪವನ್ನು ವಿವರಿಸುತ್ತಾನೆ.

ಕಾದಯೋ ಮಾವಸಾನಾಃ ಸ್ಪರ್ಶಾಃ । ಯಣೋಽನ್ತಸ್ಥಾಃ । ಶಲ ಊಷ್ಮಾಣಃ । ಅಚಃ ಸ್ವರಾಃ । ಅ ಕ ಅ ಖ ಇತಿ ಕಖಾಭ್ಯಾಂ ಪ್ರಾಗರ್ಧವಿಸರ್ಗಸದೃಶೋ ಜಿಹ್ವಾಮೂಲೀಯಃ । ಅ ಪ ಅ ಫ ಇತಿ ಪಫಾಭ್ಯಾಂ ಪ್ರಾಗರ್ಧವಿಸರ್ಗಸದೃಶ ಉಪಧ್ಮಾನೀಯಃ । ಅಂ ಅಃ ಇತ್ಯಚಃ ಪರಾವನುಸ್ವಾರವಿಸರ್ಗೌ ॥

ಕಕಾರದಿಂದ ಆರಂಭಿಸಿ ಮಕಾರದವರೆಗಿರುವ (ವರ್ಗೀಯಾಕ್ಷರಗಳು) ವರ್ಣಗಳಿಗೆ **'ಸ್ಪರ್ಶ'**ವೆಂದು ಹೆಸರು. ಯವರಲ ಈ ನಾಲ್ಕು ವರ್ಣಗಳಿಗೆ **'ಅಂತಸ್ಥ'**ವೆಂದು ಹೆಸರು. ಶಷಸಹ ಈ ನಾಲ್ಕು ವರ್ಣಗಳಿಗೆ **'ಊಷ್ಮಾ'**ವೆಂದು ಹೆಸರು. ಅಚ್ (9) ವರ್ಣಗಳಿಗೆ ಸ್ವರವೆಂದು ಹೆಸರು. ಕ ಮತ್ತು ಖ ವರ್ಣಗಳ ಹಿಂದೆ ಅರ್ಧ ವಿಸರ್ಗದಂತಿರುವ ವರ್ಣಕ್ಕೆ **'ಜಿಹ್ವಾಮೂಲೀಯ'**ವೆಂದು ಹೆಸರು. ಪಫಗಳ ಹಿಂದೆ ಅರ್ಧ ವಿಸರ್ಗದಂತಿರುವ ವರ್ಣಗಳಿಗೆ **'ಉಪಧ್ಮಾನೀಯ'**ವೆಂದು ಹೆಸರು. ಅಕಾರಾದಿಗಳ ಪರದಲ್ಲಿರುವ (ಸ್ವರದ) ಬಿಂದುವಿಗೆ **'ಅನುಸ್ವಾರ'**ವೆಂದೂ ಎರಡು ಚಿಕ್ಕ ಬಿಂದುಗಳಿಗೆ **'ವಿಸರ್ಗ'**ವೆಂದೂ ಹೆಸರು. ಹೀಗೆ ಸ್ಥಾನ ಪ್ರಯತ್ನವಿವೇಕವು ಶಿಕ್ಷಾದಲ್ಲಿ ಹೇಳಿದಂತೆ ವಿವರಿಸಿದೆ. ಇಲ್ಲಿ ಸವರ್ಣಸಂಜ್ಞೆಗೆ ಬಾಹ್ಯಪ್ರಯತ್ನದ ಅಪೇಕ್ಷೆ ಇಲ್ಲವಾದರೂ ಮುಂದೆ ಸಂಧಿಪ್ರಕರಣದಲ್ಲಿ ಅತ್ಯಂತ ಸಾಮ್ಯವಿಚಾರ ಮಾಡುತ್ತಾನೆ. ಆಗ ಈ ಬಾಹ್ಯಪ್ರಯತ್ನದ ಅಪೇಕ್ಷೆ ಬೇಕಾಗುತ್ತದೆ. ಆದುದರಿಂದ ಯತ್ನವಿಭಾಗ ಮಾಡುವಾಗ ಕ್ರಮಪ್ರಾಪ್ತವಾದುದರಿಂದಲೂ ವಿವರಿಸಿರುತ್ತಾನೆ. ಈಗ **'ತುಲ್ಯಾಸ್ಯಪ್ರಯತ್ನಂ ಸವರ್ಣಂ'** ಎಂಬುದರಿಂದ ಒಂದು ವರ್ಣಕ್ಕೆ ಎಷ್ಟು ಸವರ್ಣವಿದೆ ಎಂದು ಗೊತ್ತಾಗುತ್ತದೆ. ಆದರೆ ಕಾರ್ಯವಿಧಾಯಕಸೂತ್ರದಲ್ಲಿ ಅಕಾರಾದಿಗಳು ಉಪಾತ್ತವಾದರೆ ಅವುಗಳ ಸವರ್ಣಗಳನ್ನೂ ತೆಗೆದುಕೊಳ್ಳಬೇಕೆಂಬುದು ತಿಳಿಯುವುದಿಲ್ಲ. ಅದಕ್ಕೋಸ್ಕರ ಸವರ್ಣಗಳನ್ನೂ ತೆಗೆದುಕೊಳ್ಳಬೇಕೆಂದು ಬೋಧಿಸುವ ಸೂತ್ರವನ್ನು ಹೇಳುತ್ತಾನೆ.

(ಸವರ್ಣಗ್ರಾಹಕಸೂತ್ರ)

೧೧. ಅಣುದಿತ್ಸವರ್ಣಸ್ಯ ಚಾಪ್ರತ್ಯಯಃ ॥ ೧-೧-೬೯ ॥

ಪ್ರತೀಯತೇ ವಿಧೀಯತ ಇತಿ ಪ್ರತ್ಯಯಃ। ಅವಿಧೀಯಮಾನೋಽಣುದಿಚ್ಚ

ಸವರ್ಣಸ್ಯ ಸಂಜ್ಞಾಸ್ಯಾತ್ । ಅತ್ರೈವಾಣ್ ಪರೇಣ ಣಕಾರೇಣ ।
ಕುಚುಟುತುಪು ವಿತೇ ಉದಿತಃ ।

ಅಣ್, ಉದಿತ್, ಸವರ್ಣಸ್ಯ, ಚ, ಅಪ್ರತ್ಯಯಃ । ಐದು ಪದಗಳುಳ್ಳ ಸೂತ್ರ. ಉತ್ ಇತ್ ಯಸ್ಯ ಸಃ ಉದಿತ್. ಪ್ರತೀಯತೇ ಇತಿ ಪ್ರತ್ಯಯಃ ॥ ಪ್ರತೀಯತ್ತಿ ಎಂದರೆ ತೋರುವುದು ಎಂದರ್ಥವಾಗುತ್ತದೆ. ಹಾಗೇ ಪ್ರತ್ಯಯವೆಂದರೆ ಅಣಾದಿ ಗಳಾಗುತ್ತವೆ. ಈ ರೀತಿ ಅರ್ಥಗಳನ್ನು ಹೋಗಲಾಡಿಸಲು ಪ್ರತೀಯತೇ ಎಂಬುದಕ್ಕೆ ವಿಧೀಯತೇ ಎಂದು ಅರ್ಥ ವಿವರಿಸುತ್ತಾನೆ. ವಿಧಿಸಲ್ಪಡುವುದು ಎಂದು ಅರ್ಥ ನ ಪ್ರತ್ಯಯಃ ಅಪ್ರತ್ಯಯಃ ವಿಧಿಸಲ್ಪಡದೇ ಇರುವುದು. ಉದಿತ್ತೆಂದರೆ ವರ್ಗೀಯಾ. ಕ್ಷರಗಳೆಂದು ಮುಂದೆ ವಿವರಿಸುತ್ತಾನೆ. ಆಗ ಸೂತ್ರಾರ್ಥ ವಿಧಿಸಲ್ಪಡದೇ ಇರುವ ಅಣ್ ಅಕ್ಷರಗಳೂ (ಸ್ವರ 9. ಯವರಲಗಳೂ) ಉದಿತ್ ವರ್ಣಗಳೂ ತಮ್ಮ ವರ್ಣ ಗಳಿಗೆ ಸಂಜ್ಞೆಯಾಗುತ್ತವೆ. ಮುಂದೆ "ಇಕೋ ಯಣ್ ಅಚಿ" ಸೂತ್ರದಿಂದ ಯಣ್ ಕಾರ್ಯ ಹೇಳುತ್ತಾನೆ. ಆಲ್ಲಿ ಇಕ್ ಎಂದರೆ ಇ ಉ ಋ ಌ ನಾಲ್ಕು ಆಗುತ್ತವೆ. ಈ ಸೂತ್ರವಿಲ್ಲವಾದರೆ ಆ ನಾಲ್ಕು ಮಾತ್ರ ಗೃಹೀತವಾಗುತ್ತಿತ್ತು. ವರ್ಣಸಮಾ ಮ್ನಾಯದಲ್ಲಿ ಆ ನಾಲ್ಕು ಮಾತ್ರ ಹೇಳಲ್ಪಟ್ಟಿವೆ. ಈಗ ಈ ಸೂತ್ರವು ತನ್ನ ಸವರ್ಣಕ್ಕೂ ಸಂಜ್ಞೆಯಾಗುತ್ತದೆ ಎಂದುದರಿಂದ ಇ ಎಂದರೆ ಅದರ ಹದಿನೆಂಟು ಭೇದಗಳನ್ನೂ ತೆಗೆದುಕೊಳ್ಳಬೇಕು. ಹಾಗೆ ಮುಂದಿನ ವರ್ಣಗಳೂ ತಮ್ಮ ಭೇದ ಗಳನ್ನು ತೆಗೆದುಕೊಳ್ಳುತ್ತವೆ. ಆಲ್ಲಿ ಇಕ್ ಎಂಬುದು ಉದ್ದೇಶವಾದುದರಿಂದ ವಿಧಿಸ ಲ್ಪಡುವುದಿಲ್ಲ ಯಣ್ ವಿಧಿಸಲ್ಪಡುವುದರಿಂದ ವರ್ಣ ಸಮಾಮ್ನಾಯದಲ್ಲಿ ಹೇಳಿದ (ಅನನುನಾಸಿಕ) ಯ ವ ರ ಲ ನಾಲ್ಕು ವರ್ಣಗಳು ಮಾತ್ರ ಗೃಹೀತವಾಗುತ್ತವೆ. ಹೀಗೆಯೇ 'ತ್ಯದಾದೀನಾಮಃ' ಎಂಬಲ್ಲಿ ಅ ಎಂದು ವಿಧಿಸುವುದರಿಂದ ಆಲ್ಲಿ ಅ ಮಾತ್ರ ಬರುತ್ತದೆ. ಇದು ಅಪ್ರತ್ಯಯ ಎಂಬುದರಿಂದ ತಿಳಿಯುತ್ತದೆ. ಹೀಗೆ ಕಾರ್ಯ ವಿಧಾಯಕ ಸೂತ್ರದಲ್ಲಿ ಒಂದು ವರ್ಣ ಹೇಳಿದರೆ ಅದರ ಎಲ್ಲಾ ಭೇದಗಳನ್ನು ತೆಗೆದು ಕೊಳ್ಳಬೇಕೆಂದು ಈ ಸೂತ್ರ ತಿಳಿಸುತ್ತದೆ. ಇಲ್ಲಿ ಅಣ್ ಎಂದು ಹೇಳಿದೆ. ವರ್ಣ ಸಮಾಮ್ನಾಯದಲ್ಲಿ ಣ ಕಾರ ಎರಡು ಕಡೆ ಉಚ್ಚಾರಿತವಾಗಿದೆ. ಆಗ ಅಣ್ ಎಂದರೆ ಪೂರ್ವಣಕಾರವಾದರೂ ಆಗಬಹುದು, ಪರಣಕಾರವಾದರೂ ಆಗಬಹುದು ಹೀಗೆ ಸಂಶಯ ಬಂದರೆ ಅದಕ್ಕೆ ಸಮಾಧಾನವನ್ನು "ಅತ್ರೈವಾಣ್"—ಎಂಬ ವಾಕ್ಯ ದಿಂದ ಹೇಳುತ್ತಾನೆ. ಇದೊಂದು ಸೂತ್ರದಲ್ಲಿ ಮಾತ್ರ ಅಣ್ ಎಂದರೆ ಪರಣಕಾರ ದಿಂದ ಮಾಡಿದ (ಲಣ್ ಣಕಾರ) ಪ್ರತ್ಯಾಹಾರ ತೆಗೆದುಕೊಳ್ಳಬೇಕು. ಇನ್ನು ಬೇರೆ ಕಡೆ ಎಲ್ಲಿಯಾದರೂ ಅಣ್ ಎಂದರೆ ಪೂರ್ವಣಕಾರದಿಂದಲೇ (ಅ ಇ ಉಣ್) ಹೇಳ ಬೇಕು. ಇದನ್ನು ತಿಳಿಸಲು ಪ್ರಾಚೀನರು ಒಂದು ಶ್ಲೋಕವನ್ನು ಹೇಳುತ್ತಾರೆ. "ಪೂರ್ವೇಣೈವಾಣ್ ಗ್ರಹಾಃ ಸರ್ವೇ ಪರೇಣೈವೇಣ್‌ಗ್ರಹಾ ಮತಾಃ ॥ ಋತೇಣುದಿತ್ಸ

ವರ್ಣಸ್ಯೇತ್ಯೇತದೇಕಂ ಪರೇಣ ತು ॥" ಎಲ್ಲಾ ಕಡೆಗಳಲ್ಲಿಯೂ ಅಣ್ ಎಂದರೆ ಪೂರ್ವಣಕಾರದಿಂದಲೇ ಹೇಳಬೇಕು. ಇಣ್ ಎಂದರೆ ಯಾವಾಗಲೂ ಪರಣಕಾರ ದಿಂದಲೇ ಹೇಳಿದೆ ಎಂದು ತಿಳಿಯಬೇಕು. 'ಅಣುದಿತ್ ಸವರ್ಣಸ್ಯ ಚಾಪ್ರತ್ಯಯಃ' ಎಂಬಲ್ಲಿ ಮಾತ್ರ ಈ ನಿಯಮವಿಲ್ಲ. ಇಲ್ಲಿ ಮಾತ್ರ ಅಣ್ ಎಂದರೆ ಪರಣ ಕಾರವೇ ಹೇಳಿದೆ ಎಂದು ತಿಳಿಯಬೇಕು. ಈಗ ಅಣ್ ಎಂದರೆ ನಿಶ್ಚಿತವಾಯಿತು. ಉದಿತ್ ಎಂದರೆ ಏನು ಎಂಬ ಶಂಕೆ ಬಂದರೆ ಅದಕ್ಕೆ ಸಮಾಧಾನ ಹೇಳುತ್ತಾನೆ. ಸ್ಥಾನ ವಿವೇಚನೆ ಮಾಡುವಾಗ ಕು, ಚು, ಟು, ತು, ಪು, ಎಂದು ಹೇಳಿದೆ. ಆಯಾಯಾ ವರ್ಗಗಳು ಈ ಸಂಜ್ಞೆಗಳಿಂದ ಬೋಧಿತವಾಗಿವೆ. ಕು, ಎಂದರೆ ಕವರ್ಗ. ಹೀಗೆ ಚು ಮುಂತಾದುವನ್ನು ತಿಳಿಯಬೇಕು. ಈಗ ಸೂತ್ರಜ್ಞಾನದಿಂದುಂಟಾದ ಫಲಿತಾರ್ಥವನ್ನು ವಿವರಿಸುತ್ತಾನೆ.

ತದೇವಮ್—ಅ ಇತ್ಯಷ್ಟಾದಶಾನಾಂ ಸಂಜ್ಞಾ । ತಥೈಕಾರೋಕಾರೌ॥
ಋಕಾರಸ್ತ್ರಿಂಶತಃ । ಏವಂ ಲೃಕಾರೋಪಿ । ಏಚೋ ದ್ವಾದಶಾ–
ನಾಮ್ । ಅನುನಾಸಿಕಾನನುನಾಸಿಕಭೇದೇನ ಯವಲಾ ದ್ವಿಧಾ ;
ತೇನಾನನುನಾಸಿಕಾಸ್ತೇ ದ್ವಯೋರ್ದ್ವಯೋಸ್ಸಂಜ್ಞಾ ॥

"ಅಣುದಿತ್ ಸವರ್ಣಸ್ಯ ಚಾಪ್ರತ್ಯಯಃ" ಎಂಬ ಸೂತ್ರದಿಂದುಂಟಾದ ಅರ್ಥಸಾರ ಹೀಗಿದೆ. ಅ ಎಂದು ಅಕಾರ ಎಲ್ಲಿಯಾದರೂ ಕಾರ್ಯಕ್ಕೋಸ್ಕರ ಉಪಾತ್ತವಾದರೆ ಅದರ ಹದಿನೆಂಟುಭೇದಗಳನ್ನು ತೆಗೆದುಕೊಳ್ಳಬೇಕು. ಹಾಗೆಯೇ ಇಕಾರ ಉಕಾರ ಗಳು. (ಇವೆರಡೂ ತಮ್ಮ ತಮ್ಮ ಹದಿನೆಂಟು ಭೇದಗಳನ್ನು ತೆಗೆದುಕೊಳ್ಳುತ್ತವೆ.) ಋಕಾರವು ಮೂವತ್ತಕ್ಕೆ ಸಂಜ್ಞೆಯಾಗುತ್ತದೆ. ಋಕಾರ ೠಕಾರಗಳಿಗೆ ಸಾವರ್ಣ್ಯ ಹೇಳಿದುದರಿಂದ ೠಕಾರದ ಹನ್ನೆರಡೂ ಸೇರಿ ಮೂವತ್ತು ಎಂದು ತಿಳಿಯಬೇಕು. ಹೀಗೆಯೇ ಲೃಕಾರವೂ ಕೂಡಾ ಲೃಕಾರದ ಹನ್ನೆರಡು ಭೇದಗಳು ಋಕಾರದ ಹದಿನೆಂಟುಭೇದಗಳು ಹೀಗೆ ಮೂವತ್ತಕ್ಕೆ ಸಂಜ್ಞೆಯಾಗುತ್ತದೆ. ಏ ಓ ಐ ಔ ಗಳು ತಮ್ಮ ತಮ್ಮ ಹನ್ನೆರಡು ಭೇದಗಳಿಗೆ ಸಂಜ್ಞೆಯಾಗುತ್ತವೆ. (ಅವುಗಳಿಗೆ ಹ್ರಸ್ವ ವಿಲ್ಲದಿರುವುದರಿಂದ ಹನ್ನೆರಡು ಭೇದಗಳು ಮಾತ್ರವೆಂದು ಹಿಂದೆ ಹೇಳಿದೆ). ಅಣ್ ಎಂದರೆ ಪರಣಕಾರ ತೆಗೆದುಕೊಳ್ಳಬೇಕೆಂದುದರಿಂದ ಅಣಿನಲ್ಲಿ ಹಯವರಲವರ್ಣಗಳೂ ಸೇರಿರುತ್ತವೆ. ಅವುಗಳಿಗೆ ಬೇರೆ ಭೇದವಿಲ್ಲದಿರುವುದರಿಂದ ಸವರ್ಣಗ್ರಾಹಕಗಳು ಹೇಗಾಗುತ್ತವೆ ? ಎಂಬ ಶಂಕೆಗೆ ಸಮಾಧಾನ ಹೇಳುತ್ತಾನೆ. ಹ ರ ಎಂಬವುಗಳು ಮಧ್ಯೆ ಇದ್ದರೂ ವ್ಯರ್ಥವೇ. ಯವಲಗಳು ಮಾತ್ರ ಅನುನಾಸಿಕ, ಅನನುನಾಸಿಕವೆಂದು ಎರಡುಪ್ರಕಾರವಾದುದರಿಂದ ಅನನುನಾಸಿಕ ಯವಲಗಳು ಎಲ್ಲಿಯಾದರೂ ಉಪಾತ್ತ ಗಳಾದರೆ ಅವುಗಳು ತಮ್ಮ ತಮ್ಮ ಎರಡು ಭೇದಗಳನ್ನೂ ಬೋಧಿಸುತ್ತವೆ. ಹಿಗೇ

ವರ್ಣವಿಭಾಗವನ್ನೂ, ಸ್ಥಾನಗಳನ್ನೂ ಸವರ್ಣ ಸಂಜ್ಞೆಯನ್ನೂ, ಸವರ್ಣ ಗ್ರಾಹ್ಯವನ್ನೂ ತಿಳಿಸಿ ಅತ್ಯುಪಯುಕ್ತವಾದ ಸಂಧಿ ಪ್ರಕರಣದಲ್ಲಿ ಬರುವ ಕೆಲವು ಸಂಜ್ಞೆಗಳನ್ನು ಹೇಳುತ್ತಾನೆ.

(ಸಂಹಿತಾಸಂಜ್ಞೆ ಹೇಳುವ ಸೂತ್ರ)

೧೪. ಪರಃ ಸಂನಿಕರ್ಷಃ ಸಂಹಿತಾ ॥ ೧-೪-೧೦೯ ॥

ವರ್ಣಾನಾಮತಿಶಯಿತಃ ಸಂನಿಧಿಃ ಸಂಹಿತಾಸಂಜ್ಞಃ ಸ್ಯಾತ್ ॥

ಮೂರು ಪದವುಳ್ಳ ಸೂತ್ರ. ಪರಃ ಎಂದರೆ ಅತಿಶಯದಿಂದ ಕೂಡಿರುವುದು. ಸಂನಿಕರ್ಷವೆಂದರೆ ಸಾಮೀಪ್ಯ. ಅರ್ಧ ಮಾತ್ರಾಕಾಲಕ್ಕಿಂತಲೂ ಹೆಚ್ಚಿನ ಕಾಲ ವ್ಯವಧಾನವಿಲ್ಲದಿರುವುದು. ವರ್ಣಪ್ರಕರಣವಾದುದರಿಂದ ವರ್ಣಗಳಿಗೆ ಎಂಬ ಲಬ್ಧವಾಗುತ್ತದೆ. ಆಗ **ಸೂತ್ರಾರ್ಥ**. ವರ್ಣಗಳಿಗೆ ಅತ್ಯಂತ ಸಾಮೀಪ್ಯವೇನಿವೆಯೋ ಅದಕ್ಕೆ ಸಂಹಿತಾ ಎಂಬ ಸಂಜ್ಞೆ ಬರುತ್ತದೆ. ಒಂದು ವರ್ಣ ಹೇಳಿ ಒಂದು ನಿಮಿಷವಾದಮೇಲೆ ಇನ್ನೊಂದು ವರ್ಣ ಹೇಳುವುದಾದರೆ ಆಗ ಅಲ್ಲಿ ಸಂಹಿತಾ ಬರುವುದಿಲ್ಲ.

(ಸಂಯೋಗಸಂಜ್ಞೆ ಹೇಳುವ ಸೂತ್ರ)

೧೫. ಹಲೋಽನನ್ತರಾಃ ಸಂಯೋಗಃ ॥ ೧-೧-೭ ॥

ಅಜ್ಭಿರವ್ಯಹಿತಾ ಹಲಃ ಸಂಯೋಗಸಂಜ್ಞಾಃ ಸ್ಯುಃ ॥

ಹಲಃ, ಅನಂತರಾಃ, ಸಂಯೋಗಃ ॥ ಮೂರುಪದವುಳ್ಳ ಸೂತ್ರ. " ಅಂತರ ಮನಕಾಶಾವಧಿ ಪರಿಧಾನಾಂತರ್ಧಿಭೇದತಾದಥ್ಯೇ" ಎಂದು ಅಮರವಿರುವುದರಿಂದ ಅಂತರವೆಂದರೆ ಇಲ್ಲಿ ವ್ಯವಧಾನವೆಂದರ್ಥ. ಅವಿದ್ಯಮಾನಂ ಅಂತರಂ (ವ್ಯವಧಾನಂ) ಯೇಷಾಂ ತೇ ಅನಂತರಾಃ। ವಿಜಾತೀಯ ವರ್ಣಗಳಿಂದ ವ್ಯವಧಾನವಿಲ್ಲದಿರುವವುಗಳು. ಹಲಿಗೆ (ವ್ಯಂಜನಕ್ಕೆ) ವಿಜಾತೀಯವಾದವುಗಳು ಸ್ವರಗಳು. ಈಗ **ಸೂತ್ರಾರ್ಥ** ಮಧ್ಯದಲ್ಲಿ ಅಚ್ (ಸ್ವರ) ಗಳಿಂದ ವ್ಯವಧಾನವಿಲ್ಲದಿರುವ ಹಲ್ ವರ್ಣಗಳಿಗೆ ಸಂಯೋಗ ವೆಂಬ ಸಂಜ್ಞೆ ಬರುತ್ತದೆ. ಇಲ್ಲಿ ವರ್ಣಗಳ ಸಮುದಾಯಕ್ಕೆ ಸಂಜ್ಞೆ ಹೇಳಬೇಕು. "ಸಂಯುಜ್ಯಂತೇ ಅಸ್ಮಿನ್ ಸಮುದಾಯೇ ವರ್ಣಾಃ ಇತಿ" ಸಂಯೋಗಃ। ಹೀಗೆ ಅನ್ವರ್ಥ ಸಂಜ್ಞೆಯಾದುದರಿಂದ ಪ್ರತ್ಯೇಕವರ್ಣಗಳಿಗೆ ಇಲ್ಲ. ಸುಧ್ + ಯ್ + ಉಪಾಸ್ಯಃ ಇಲ್ಲಿ ಧ+ಯ್‌ಗಳಿಗೆ ಸಂಯೋಗ ಸಂಜ್ಞಾ.

(ಪದಸಂಜ್ಞೆ ಹೇಳುವಸೂತ್ರ)

೧೪. ಸುಪ್ತಿಜನ್ತಂ ಪದಮ್ ॥ ೧-೪-೧೪ ॥

ಸುಬಂತಂ ತಿಙಂತಂ ಚ ಪದಸಂಜ್ಞಂ ಸ್ಯಾತ್ ॥

ಸುಪ್ತಿಙಂತಂ, ಪದಂ ॥ ಎರಡುಪದಗಳುಳ್ಳ ಸೂತ್ರ. ಸುಪ್ ಚ ತಿಙ್ ಚ ಸುಪ್ತಿಙೌ। ಸುಪ್ತಿಙೌ ಅಂತೇ ಯಸ್ಯ ತತ್ ಸುಪ್ತಿಙಂತಂ ॥ " ಸ್ವೌಜಸ್....ಪ್ " ಎಂದು ಮುಂದೆ ನಾಮ ವಿಭಕ್ತಿಗಳನ್ನು ಹೇಳುತ್ತಾನೆ. ಅಲ್ಲಿ ಹೇಳುವ ಇಪ್ಪತ್ತೊಂದು ಪ್ರತ್ಯಯಗಳಿಗೆ ಸುಪ್ ಎಂದು ಹೆಸರು. " ತಿಪ್‌ತಸ್....ಙ್ " ಎಂದು ಹದಿನೆಂಟು ಪ್ರತ್ಯಯಗಳನ್ನು ಕ್ರಿಯಾಪದದ ಮೇಲೆ ವಿಧಿಸುತ್ತಾನೆ. ಆ ಹದಿನೆಂಟಕ್ಕೆ ತಿಙ್ ಎಂದು ಹೆಸರು. ಇವುಕೊನೆಯಲ್ಲಿರುವವುಗಳು ಸುಪ್ತಿಙಂತಗಳು. "ದ್ವಂದ್ವಾಂತೇಶ್ರ್ಯಯಮಾಣಂ ಪದಂ ಪ್ರತ್ಯೇಕಮಭಿ ಸಂಬಧ್ಯತೇ " ಎಂಬ ನ್ಯಾಯದಿಂದ ದ್ವಂದ್ವ ಸಮಾಸ ಮಾಡಿ ಅದರಮೇಲೆ ಯಾವುದಾದರೂ ಪದ ಹೇಳುವುದಾದರೆ ಆ ಪದವು ಆ ದ್ವಂದ್ವದಲ್ಲಿರುವ ಎಲ್ಲಾ ಪದಗಳ ಕೊನೆಯಲ್ಲಿಯೂ ಬರುತ್ತದೆ ಎಂದುದರಿಂದ ಇಲ್ಲಿ ಸುಪ್ ತಿಙ್‌ಗಳಿಗೆ ದ್ವಂದ್ವಮಾಡಿ ಕೊನೆಯಲ್ಲಿ ಅಂತವೆಂದು ಹೇಳಿರುವುದರಿಂದ ಸುಬಂತ, ತಿಙಂತವೆಂದಾಗುತ್ತದೆ. **ಸೂತ್ರಾರ್ಥ**—ಸುಪೇಕೊನೆಯಲ್ಲಿರುವ ಶಬ್ದಕ್ಕೂ ತಿ ಙೀ ಕೊನೆಯಲ್ಲಿರುವ ಶಬ್ದಕ್ಕೂ ಪದವೆಂಬ ಸಂಜ್ಞೆ ಬರುತ್ತದೆ. ಈ ಸುಪ್‌ತಿಙ್ ಪ್ರತ್ಯಯಗಳಿಗೆ ವಿಭಕ್ತಿಪ್ರತ್ಯಯಗಳೆಂದು ಮುಂದೆ ಸಂಜ್ಞೆ ಹೇಳುತ್ತಾನೆ. ವಿಭಕ್ತ್ಯಂತವಾದ ಶಬ್ದಕ್ಕೆ ಪದವೆಂದು ಹೆಸರು. ರಾಮಃ ಇದು ಸುಬಂತವಾದುದರಿಂದ ಪದ. ಭವತಿ ಇದು ತಿಙಂತವಾದುದರಿಂದ ಪದವಾಗುತ್ತದೆ.

ಇತಿ ಸಂಜ್ಞಾಪ್ರಕರಣಮ್

ಈ ರೀತಿ ಕೆಲವು ಮುಖ್ಯವಾದ ಸಂಜ್ಞೆಗಳನ್ನು ಬೋಧಿಸಿರುವುದರಿಂದ ಇದಕ್ಕೆ ಸಂಜ್ಞಾ ಪ್ರಕರಣವೆಂದು ಹೆಸರು. ಇತಿ ಎಂಬುದು ಸಮಾಪ್ತಿಯನ್ನು ಸೂಚಿಸುತ್ತದೆ. ಹೀಗೆ ಸಂಜ್ಞಾ ಪ್ರಕರಣವು ಮುಗಿಯಿತು.

ಅಥಾಚ್ ಸಂಧಿಃ

(ಯಣ್ ಸಂಧಿಃ)

ಸ್ವರಗಳಿಗೆ ಬರುವ ಸಂಧಿಗಳನ್ನು ವಿವರಿಸುತ್ತಾನೆ. ಮೊದಲು ಯಣ್ (ಯ ವ ರ ಲ) ಎಂಬುದನ್ನು ವಿಧಿಸುವುದರಿಂದ ಯಣ್ ಸಂಧಿ. ಇಲ್ಲಿ ಅನೇಕ ಸಂಧಿಗಳನ್ನು ಹೇಳುವುದರಿಂದ ಯಾವುದನ್ನು ವಿಧಿಸುತ್ತಾನೋ ಅದೇ ಹೆಸರಿನ ಸಂಧಿಯನ್ನು ಹೇಳಬೇಕು.

(ಯಣ್ ಸಂಧಿ ಹೇಳುವ ಸೂತ್ರ)

೧೫. ಇಕೋ ಯಣಚಿ ॥ ೬-೧-೭೭ ॥

ಇಕಃ ಸ್ಥಾನೇ ಯಣ್ ಸ್ಯಾದಚಿ ಸಂಹಿತಾಯಾಂ ವಿಷಯೇ ॥ ಸುಧೀ+ಉಪಾಸ್ಯಃ ಇತಿ ಸ್ಥಿತೇ ॥

ಇಕಃ ಯಣ್, ಅಚಿ । ತ್ರಿಪದ ಸೂತ್ರ. ಇಕಃ ಎಂಬುದು ಷಷ್ಠೀ. ಅಚಿ ಎಂಬುದು ಸಪ್ತಮೀ. "ಷಷ್ಠೀ ಸ್ಥಾನೇಯೋಗಾ" ಎಂಬ ಪರಿಭಾಷೆಯಿಂದ ಸ್ಥಾನೇ ಎಂದು ಲಭ್ಯವಾಗುತ್ತದೆ. "ಸಂಹಿತಾಯಾಮ್" ಎಂದು ಅಧಿಕಾರ. ಅಧಿಕಾರ ವೆಂದರೆ ಉತ್ತರದಲ್ಲಿ ಸಂಬಂಧ. ತನ್ನ ಸ್ಥಳದಲ್ಲಿ ಕಾರ್ಯ ಹೇಳದೆ ಉತ್ತರ ಸೂತ್ರದಲ್ಲಿ ತಾನು ಹೋಗಿ ತಾನೂ ಸೇರಿ ಒಂದು ವಾಕ್ಯಾರ್ಥವನ್ನುಂಟುಮಾಡುತ್ತದೆ. "ಸಂಹಿತಾಯಾಂ" ಎಂಬುದು ವಾಕ್ಯಾರ್ಥವನ್ನು ಹೇಳುವುದಿಲ್ಲ. ಮುಂದೆ ಹೇಳುವ ಕಾರ್ಯಗಳೆಲ್ಲವೂ ಸಂಹಿತೆಯಲ್ಲಿ ಬರುತ್ತವೆ ಎಂಬರ್ಥವನ್ನು ತಿಳಿಸುತ್ತದೆ. ಅತಿಶಯವಾದ ವರ್ಣಗಳ ಸಾಮೀಪ್ಯಕ್ಕೆ ಸಂಹಿತಾವೆಂದು ಹಿಂದೆ ಹೇಳಿದೆ. **ಸೂತ್ರಾರ್ಥ**:– ಅತಿಶಯವಾದ ವರ್ಣ ಸಾಮೀಪ್ಯವಿರುವಾಗ ಇಕ್ಕಿನ ಸ್ಥಾನಕ್ಕೆ ಅಚ್ ವರ್ಣ ಪರದಲ್ಲಿರುವಾಗ ಯಣ್ ಆದೇಶ ಬರುತ್ತದೆ. ಸುಧೀ+ಉಪಾಸ್ಯಃ ಎಂಬುದು ಸೂತ್ರಕ್ಕೆ ಲಕ್ಷ್ಯ. ಇಲ್ಲಿ ಸುಧೀ ಎಂಬಲ್ಲಿ ಉ ಈ ಎರಡೂ ಇವೆ. ಇವು ಇಕ್ ವರ್ಣಗಳು. ಇವುಗಳಿಗೆ ಉ ಆ ಅ ಹೀಗೆ ಮೂರು ಅಚ್ ಪರದಲ್ಲಿನೆ. ಇಲ್ಲಿ ಇನೆರಡೂ ವಿಧಿಸಲ್ಪಡದಿರುವುದರಿಂದ ಅವುಗಳ ಎಲ್ಲಾ ಭೇದಗಳನ್ನೂ ತೆಗೆದುಕೊಳ್ಳಬೇಕು. ಆದರೂ ಸಕಾರದ ಮೇಲಿರುವ ಉಕಾರಕ್ಕೂ ಅಚ್ ಪರದಲ್ಲಿರುವುದರಿಂದ ಯಣ್ ಬರಲಿ ಎಂಬ ಶಂಕೆ ಬರುತ್ತದೆ. ಪರವೆಂದರೆ ಹೇಗಿದ್ದರೂ ಸಾಕೆಂಬ ಅರ್ಥವಾಗುವುದರಿಂದ ಅವ್ಯವಹಿತ ಪರದಲ್ಲಿಯೇ ಇರಬೇಕು ಎಂಬ ನಿಯಮನನ್ನು ತಿಳಿಸುವ ಸೂತ್ರವನ್ನು ಹೇಳುತ್ತಾನೆ.

(ಪೂರ್ವಕ್ಕೆ ಕಾರ್ಯನಿಯಮಿಸುವ ಸೂತ್ರ)

೧೬. ತಸ್ಮಿನ್ನಿತಿ ನಿರ್ದಿಷ್ಟೇ ಪೂರ್ವಸ್ಯ ॥ ೧-೧-೬೬ ॥

ಸಪ್ತಮೀನಿರ್ದೇಶೇನ ವಿಧೀಯಮಾನಂ ಕಾರ್ಯಂ ವರ್ಣಾಂತರೇಣಾವ್ಯವಹಿತಸ್ಯ ಪೂರ್ವಸ್ಯ ಬೋಧ್ಯಮ್ ॥

ಇದಕ್ಕೆ ಪರಿಭಾಷಾ ಸೂತ್ರವೆಂದು ಹೆಸರು. "ಅನಿಯಮೇ ನಿಯಮಕಾರಿಣತ್ವಂ" ಎಂದು ಪರಿಭಾಷೆಯ ಲಕ್ಷಣ. ನಿಯಮವಿಲ್ಲದ ಕಡೆಯಲ್ಲಿ ನಿಯಮವನ್ನು ತಿಳಿಸುವ ಸೂತ್ರ. ಇಕೋ ಯಣಚಿ ಎಂಬಲ್ಲಿ ನಿಯಮವಿಲ್ಲದೆ ವ್ಯವಹಿತ ಅವ್ಯವಹಿತ ಪರವಾದರೂ ಬರುತ್ತದೆ ಎಂದಾಗ ಈ ಸೂತ್ರವು ನಿಯಮವನ್ನು ಮಾಡುತ್ತದೆ. ತಸ್ಮಿನ್, ಇತಿ, ನಿರ್ದಿಷ್ಟೇ ಪೂರ್ವಸ್ಯ ಎಂದು ನಾಲ್ಕುಪದಗಳುಳ್ಳ ಸೂತ್ರ. ತಸ್ಮಿನ್ ಎಂದರೆ ಸಕಲಕಾರ್ಯವಿಧಾನ ಮಾಡುವ ಸೂತ್ರದಲ್ಲಿರುವ ಸಪ್ತಮ್ಯಂತಕ್ಕೆ ಅನುಕರಣ ಸಪ್ತಮ್ಯಂತಪದದಿಂದ ತೋರುವ ಅರ್ಥ. "ಇಕೋಯಣಚಿ" ಎಂಬಲ್ಲಿ ಅಚ್ ಎಂಬುದರಿಂದ ಬೋಧಿತವಾದ ಅ ಇ ಮುಂತಾದುವುಗಳು. ನಿರ್ದಿಷ್ಟೇ ಎಂಬಲ್ಲಿ ನಿರ್ ಎಂಬ ಉಪಸರ್ಗದ ಪರದಲ್ಲಿರುವ ದಿಶ್ ಧಾತುವಿಗೆ ಕ್ತ ಪ್ರಯ ಬಂದಿದೆ. ನಿರ್ ಎಂಬುದು ನೈರಂತರ್ಯವನ್ನೂ ದಿಶ್ ಧಾತುವು ಉಚ್ಚಾರಣಾರ್ಥವನ್ನೂ ಹೇಳುತ್ತದೆ. ಆಗ **ಸೂತ್ರಾರ್ಥ**. ಸಪ್ತಮ್ಯಂತ ಪದವನ್ನು ಉಚ್ಚರಿಸಿ ವಿಧಿಸಲ್ಪಡುವ ಕಾರ್ಯವು ಆ ಸಪ್ತಮ್ಯಂತಾರ್ಥದ ಅವ್ಯವಹಿತ ಪೂರ್ವದಲ್ಲಿರುವುದಕ್ಕೆ ಬರುತ್ತದೆ ಎಂದು ತಿಳಿಯಬೇಕು. ವ್ಯವಧಾನವು ಇಲ್ಲಿ ವರ್ಣದಿಂದ ಸಪ್ತಮ್ಯಂತಕ್ಕೂ ಕಾರ್ಯವನ್ನು ಹೊಂದುವ ಸ್ಥಾನಿಗೂ ಮಧ್ಯದಲ್ಲಿ ಯಾವ ವರ್ಣದ ವ್ಯವಧಾನವೂ ಇಲ್ಲದಿರುವಾಗ ಬರುತ್ತದೆ. ಹೀಗೆ ಮುಂದೆಯೂ ಎಲ್ಲಿಯಾದರೂ ಸಪ್ತಮ್ಯಂತವನ್ನು ಹೇಳಿ ಕಾರ್ಯ ವಿಧಾನ ಮಾಡಿದರೆ ಅದರ ಅವ್ಯವಹಿತ ಪೂರ್ವಕ್ಕೇ ಕಾರ್ಯ ಬರುತ್ತದೆ ಎಂದು ಈ ಪರಿಭಾಷೆಯನ್ನು ಅಲ್ಲಿ ಹೇಳಿ ತಿಳಿದುಕೊಳ್ಳಬೇಕು. ಹೀಗೆ ಹೇಳಿದ ಮೇಲೆ ಈ ಸಪ್ತಮ್ಯಂತಾರ್ಥವು ಸ್ಥಾನಿಯ ಅವ್ಯವಹಿತ ಪರದಲ್ಲಿರಬೇಕೆಂದು ಅರ್ಥಾತ್ ಸಿದ್ಧವಾಗುತ್ತದೆ. ಆದುದರಿಂದ ಮುಂದೆ ಸಪ್ತಮ್ಯಂತ್ಯವಿರುವ ಸೂತ್ರಾರ್ಥವನ್ನು ಬರೆಯುವಾಗ ಪರೇ ಎಂದೇ ಹೇಳುತ್ತಾ ಹೋಗುತ್ತಾನೆ. ಇಲ್ಲಿಯೂ ಕೂಡ ಅಚ್ಚಿನ ಅವ್ಯವಹಿತ ಪೂರ್ವದಲ್ಲಿರುವ ಇಕ್ಕಿಗೆ ಯಣ್ ಬರುತ್ತದೆ ಎಂದುದರಿಂದ ಅಚ್ ಪರದಲ್ಲಿರುವಾಗ ಇಕ್ಕಿಗೆ ಯಣ್ ಎಂದು ಅರ್ಥವಾಗುತ್ತದೆ. ಇದು ಪರಿಭಾಷೆಯಿಂದ ಬಂದ ಫಲಿತಾರ್ಥ. ಶಾಸ್ತ್ರೀಯವಾಗಿ ಹೇಳುವುದಾದರೆ ಅಚ್‌ಅವ್ಯವಹಿತಪೂರ್ವವೃತ್ತಿಯಾದ ಇಕ್ಕಿನ ಸ್ಥಾನದಲ್ಲಿ ಯಣ್ ಆದೇಶ ಬರುತ್ತದೆ ಎಂದೇ ಹೇಳಬೇಕು. ಈಗ ಉಕಾರದ ಪೂರ್ವದಲ್ಲಿರುವ (ಧಕಾರದ ಪರದಲ್ಲಿರುವ) ಈ ರೂಪವಾದ ಇಕ್ಕಿಗೇ ಯಣ್ ಬರುತ್ತದೆ ಎಂದು ನಿಶ್ಚಿತವಾದ ಅರ್ಥವಾಗುತ್ತದೆ. ಯಣ್ ಎಂಬಲ್ಲಿ ಯ ವ ರ ಲ ಎಂದು

ನಾಲ್ಕು ವರ್ಣಗಳಿಗೆ. ಅದಕ್ಕೆಲ್ಲ ಸ್ಥಾನ ಸಾಮ್ಯವಿರುವುದರಿಂದ ಈ ಕಾರಕ್ಕೆ ಯಕಾರವೇ ಬರುತ್ತದೆ. "ಕಾಲುಯಸ್ಥಾನಾ ತಾಲು" ಎಂದು ಹೇಳಿರುವುದರಿಂದ ಅಷ್ಟಡ್ಡ ವರ್ಣಗಳಿಗೂ ತಾಲು ಸ್ಥಾನದಿಂದ ಸಾಮ್ಯವಿದೆ. ಸ್ಥಾನಸಾಮ್ಯವಿರುವ ಯಕಾರವೇ ಬರಬೇಕೆಂಬ ನಿಯಮವು ಹೇಗೆ ಲಭ್ಯವಾಗುತ್ತದೆ? ಎಂದರೆ ಅದನ್ನು ನಿಯಮಿಸುವ ಪರಿಭಾಷೆಯನ್ನು ಹೇಳುತ್ತಾನೆ.

(ಸದೃಶ ಆದೇಶ ಹೇಳುವ ಸೂತ್ರ)

೧೭. ಸ್ಥಾನೇಽನ್ತರತಮಃ ॥ ೧-೧-೫೦ ॥

ಪ್ರಸಂಗೇ ಸತಿ ಸದೃಶತಮಃ ಆದೇಶಃ ಸ್ಯಾತ್ । ಸುಧ್+ಯ್+ಉಪಾಸ್ಯ ಇತಿ ಜಾತೇ ॥

ಸ್ಥಾನೇ, ಅಂತರತಮಃ ಎಂಬ ದ್ವಿಪದ ಸೂತ್ರ. ಹಿಂದಿನಂತೇ ನಿಯಮ ಮಾಡುವುದರಿಂದ ಇದೂ ಪರಿಭಾಷಾ ಸೂತ್ರ. ಸ್ಥಾನವೆಂದರೆ ಪ್ರಸಂಗ. ಪ್ರಸಂಗವೆಂದರೆ ಉಚ್ಚಾರಣ ಪ್ರಸಕ್ತಿ. "ಅತಿಶಯಿತಃ ಅಂತರಃ ಅಂತರತಮಃ" । ಅಂತರವೆಂದರೆ ಸದೃಶವೆಂದರ್ಥ. **ಸೂತ್ರಾರ್ಥ**. ಒಂದು ಸ್ಥಾನಿಗೆ ಉಚ್ಚಾರಣಾಪ್ರಸಕ್ತಿ ಇದ್ದು ಅದಕ್ಕೆ ಅನೇಕ ಆದೇಶಗಳು ಪ್ರಾಪ್ತವಾದರೆ ಅತ್ಯಂತ ಸದೃಶವಾದ ಆದೇಶವೇ ಬರುತ್ತದೆ. ತಾಲುಸ್ಥಾನ ಸಾಮ್ಯದಿಂದ ಈ ಕಾರಕ್ಕೆ ಯಕಾರವೇ ಅತ್ಯಂತ ಸದೃಶವಾದುದರಿಂದ ಯಕಾರವೇ ಬರುತ್ತದೆ. ಆಗ ಸುಧ್+ಯ್+ಉಪಾಸ್ಯ ಎಂದು ರೂಪವಾಗುತ್ತದೆ. ಸ್ಥಾನ, ಅರ್ಥ, ಗುಣ, ಪ್ರಮಾಣ, ಈ ನಾಲ್ಕರಿಂದ ಸ್ಥಾನಿಯ, ಸಾಮ್ಯವನ್ನು ನೋಡಬೇಕೆಂದು ಭಾಷ್ಯಕಾರರು ಹೇಳಿರುತ್ತಾರೆ. ಅನೇಕ ರೀತಿಯಿಂದ ಸಾಮ್ಯ ಬರುವುದಾದರೆ ಅಲ್ಲಿ ಸ್ಥಾನ ಸಾಮ್ಯದಿಂದ ಬರುವುದನ್ನೇ ಹೇಳಬೇಕು. ಗುಣವೆಂದರೆ ಬಾಹ್ಯ ಪ್ರಯತ್ನ. ಪ್ರಮಾಣವೆಂದರೆ ಮಾತ್ರಾಸಾದೃಶ್ಯ. ಇಲ್ಲಿ ಸ್ಥಾನಸಾಮ್ಯವೊಂದೇ ಪ್ರಸಕ್ತವಾದುದರಿಂದ ವಿವಾದಕ್ಕೆ ಅವಕಾಶವಿಲ್ಲ. ಅರ್ಥಾದಿಗಳಿಗೆ ಉದಾಹರಣೆಗಳನ್ನು ಅಲ್ಲಲ್ಲಿ ಪ್ರಸಕ್ತಿ ಬಂದಾಗ ವಿವರಿಸುತ್ತೇನೆ. ಸುಧ್+ಉಪಾಸ್ಯಃ ಎಂಬಲ್ಲಿ ಆದೇಶಯಕಾರ ಪರವಾದಾಗ ಧಕಾರಕ್ಕೆ ದ್ವಿತ್ವವನ್ನು ಹೇಳುತ್ತಾನೆ.

(ಯರಿಗೆ ದ್ವಿತ್ವ ಹೇಳುವ ಸೂತ್ರ)

೧೮. ಅನಚಿ ಚ ॥ ೮-೪-೪೭ ॥

ಅಚಃ ಪರಸ್ಯ ಯರೋ ದ್ವೇ ವಾ ಸ್ತೋ ನ ತ್ವಚಿ ॥ ಇತಿ ಧಕಾರಸ್ಯ ದ್ವಿತ್ವೇನ ಸುಧ್ಧ್+ಯ್+ಉಪಾಸ್ಯ ಇತಿ ಜಾತೇ ॥

"ಅಸಿ, ಚ ನಿಷೇಧ ಪರಕ್ಕೆ ಯಣಾದೇಶಕ್ಕೆ ಪೂರ್ವ" ಎಂಬ ಪರಿಭಾಷೆಯಿಂದ ಅಚ್ ಪರವಿರುವ ಯರ್ ವರ್ಣಗಳಿಗೆ "ಅಚೋರಹಾಭ್ಯಾಂದ್ವೇ" ಎಂಬ ಸೂತ್ರದಿಂದ ಅಚ್ ಎಂಬ ಪರಿಭಾಷೆಯಿಂದ ಪರವೂ ದ್ವಿತ್ವವೂ ಅನಿವಾರ್ಯವಾಗುತ್ತದೆ. ನ ಅಚ್, ಅನಚ್, ತಸ್ಮಿನ್ ಅನಚಿ ಅಚ್ ಪರವಲ್ಲಿ ಇಲ್ಲದೇ ಇರುವಾಗ ಎಂದು ಪ್ರತಿಷೇಧಾರ್ಥವನ್ನು ಕೊಡಬೇಕು. ಸರ್ವತ್ರ ಸಮಾಸವಾದಾಗ ಸಾಮಾನ್ಯವಾಗಿ ಅದಲ್ಲದೆ ಅದರಂತಿರುವುದು ಎಂದರ್ಥವಾಗುತ್ತದೆ. ಅಬ್ರಾಹ್ಮಣಾ ಎಂದರೆ ಬ್ರಾಹ್ಮಣನಲ್ಲದ ಮನುಷ್ಯನೆಂದರ್ಥ. ಇದಕ್ಕೆ ಪರ್ಯುದಾಸವೆಂಬ ಹೆಸರು. ನಞ್‌ನಲ್ಲಿ ಎರಡು ವಿಧ. ಪರ್ಯುದಾಸಾರ್ಥಕವಾದ ನಞ್ ಪ್ರತಿಷೇಧಾರ್ಥಕವಾದ ನಞ್ ಪ್ರತಿಷೇಧವೆಂದರೆ ಅಭಾವ. ಇಲ್ಲಿ ಪರ್ಯುದಾಸಾರ್ಥವನ್ನು ಸ್ವೀಕರಿಸಿದರೆ ಅಚ್ ಇಲ್ಲದೆ ಅಚಿನಂತಿರುವ ಹಲ್ ಪರವಲ್ಲಿ ಇರಬೇಕೆಂದು ಎಂದರ್ಥವಾಗುವುದರಿಂದ ರಾಮಾತ್ ಎಂಬಲ್ಲಿ ತಕಾರಕ್ಕೆ ಪರವಲ್ಲಿ ಏನೂ ಇಲ್ಲವಾದುದರಿಂದ ದ್ವಿತ್ವ ಬಾರದೇ ಹೋಗಬೇಕಾಗುತ್ತದೆ. ಅಚ್ ಇಲ್ಲದಿರುವಾಗ ಎಂದು ಪ್ರತಿಷೇಧಾರ್ಥವನ್ನು ಸ್ವೀಕರಿಸಿದರೆ ಎಲ್ಲಿಯೂ ದೋಷ ಬರುವುದಿಲ್ಲ. ರಾಮಾತ್ ಎಂಬಲ್ಲಿ ತಕಾರದ ಪರವಲ್ಲಿ ಯಾವುದೂ ಇಲ್ಲ. ಆದುದರಿಂದ ದ್ವಿತ್ವ ಬರುತ್ತದೆ. ಪ್ರಕೃತ ಯರಃ ಎಂಬುದು ಷಷ್ಠ್ಯಂತವಾದುದರಿಂದ ಯರ್ ವರ್ಣಗಳಿಗೆ (ಸ್ಥಾನದಲ್ಲಿ) ಎಂದರ್ಥವಾಗುತ್ತದೆ. ಅಚಃ ಎಂಬುದು ಪಂಚಮ್ಯಂತವಾದುದರಿಂದ "ತಸ್ಮಾದಿತ್ಯುತ್ತರಸ್ಯ" ಎಂಬ ಪರಿಭಾಷೆಯಿಂದ ಅಚಿನ ಅನ್ಯವಹಿತ ಪರಕ್ಕೆ ಎಂದರ್ಥವಾಗುತ್ತದೆ. ಈ ಪರಿಭಾಷೆಯು "ತಸ್ಮಿನ್ನಿತಿನಿರ್ದಿಷ್ಟೇ ಪೂರ್ವಸ್ಯ" ಎಂಬ ಪರಿಭಾಷೆಗೆ ವಿರುದ್ಧವಾದ ಅರ್ಥವನ್ನು ಹೇಳುತ್ತದೆ. ಮುಂದೆ ಇದನ್ನು ವಿವರಿಸುತ್ತಾನೆ. ಈ ಎರಡು ಪರಿಭಾಷೆಗಳೂ ಹೆಚ್ಚಾಗಿ ಸೂತ್ರಗಳಲ್ಲಿ ಬರುವುದರಿಂದ ಅವುಗಳ ನಿರ್ಣಯವನ್ನು ಹೀಗೆ ತಿಳಿಯಬೇಕು. ಪಂಚಮ್ಯಂತವು ಸೂತ್ರದಲ್ಲಿ ಉಪಾತ್ತವಾದರೆ ಅದರ ಅನ್ಯವಹಿತಪರಕ್ಕೆ ಕಾರ್ಯವೂ ಸಪ್ತಮ್ಯಂತ ಉಪಾತ್ತವಾದರೆ ಅದರ ಅನ್ಯವಹಿತ ಪೂರ್ವಕ್ಕೆ ಕಾರ್ಯವೂ ಬರುತ್ತವೆ. ಎರಡೂಒಂದುಕಡೆ ಬಂದರೆ ಪಂಚಮ್ಯಂತಕ್ಕೇ ಪ್ರಾಬಲ್ಯವಿರುವುದರಿಂದ ಪರಕ್ಕೇ ಕಾರ್ಯ ಬರುತ್ತದೆಂದೂ ಸಪ್ತಮ್ಯಂತವು ಷಷ್ಠ್ಯಂತವಾಗಿ ವಿಪರಿಣಾಮಗೊಳ್ಳುವುದೆಂದೂ ತಿಳಿಯಬೇಕು. ಈಗ **ಸೂತ್ರಾರ್ಥ**–ಅಚ್ಚಿನ ಅನ್ಯವಹಿತ ಪರವಲ್ಲಿರುವ ಯರ್ ವರ್ಣಗಳಿಗೆ (ಯವರಬ್+ಶಷಸರ್) ಅಚ್‌ಪರವಲ್ಲಿಲ್ಲದಿರುವಾಗ ದ್ವಿತ್ವ ಬರುತ್ತದೆ. ಪ್ರಕೃತ ಅಚ್ ಎಂದರೆ ಸಕಾರದ ಮೇಲಿರುವ ಉಕಾರ. ಅದರ ಪರವಲ್ಲಿರುವ ಯರ್ ವರ್ಣ ಧಕಾರ. ಇದಕ್ಕೆ ಯಕಾರಪರವಲ್ಲಿದ್ದರೂ ಅಚ್‌ಪರವಲ್ಲಿ ಇಲ್ಲದಿರುವುದರಿಂದ ದ್ವಿತ್ವ. ಹೀಗೆ ಧಕಾರಕ್ಕೆ ದ್ವಿತ್ವಬಂದು ಸುಧ್ಧ್+ಯ್+ಉಪಾಸ್ಯಃ ಎಂದು ರೂಪವಾದಾಗ ಪೂರ್ವದ ಧಕಾರಕ್ಕೆ ದಕಾರಾದೇಶವನ್ನು ವಿಧಿಸುತ್ತಾನೆ.

(ಜಶ್ತ್ವವಿಧಾಯಕ ಸೂತ್ರ)

೧೯. ಝಲಾಂ ಜಶ್ ಝಶಿ ॥ ೮-೪-೫೩ ॥

ಸ್ಪಷ್ಟಮ್ । ಇತಿ ಪೂರ್ವಧಕಾರಸ್ಯ ದಕಾರಃ

ತ್ರಿಪದಸೂತ್ರ ಅನುವೃತ್ತ್ಯಾದಿಗಳಿಲ್ಲದಿರುದರಿಂದ ಸೂತ್ರಾರ್ಥವು ಸುಲಭವಾಗಿ ತಿಳಿಯುವುದರಿಂದ ವೃತ್ತಿಯಲ್ಲಿ ಸ್ಪಷ್ಟಂ ಎಂದು ಹೇಳಿದೆ. ಝಷಿ ಎಂಬುದು ಸಪ್ತಮಿಯಾದುದರಿಂದ "ತಸ್ಮಿನ್ನಿತಿನಿರ್ದಿಷ್ಟೇ ಪೂರ್ವಸ್ಯ" ಎಂಬ ಪರಿಭಾಷೆಯಿಂದ ಆವ್ಯವಹಿತಪೂರ್ವಕ್ಕೆ ಕಾರ್ಯವೆಂದು ತಿಳಿಯುತ್ತದೆ. **ಸೂತ್ರಾರ್ಥ**–ಝಲ್‌ವರ್ಣಗಳಿಗೆ ಝಶ್ ವರ್ಣಗಳು ಅವ್ಯವಹಿತ ಪರದಲ್ಲಿರುವಾಗ ಜಶ್‌ವರ್ಣಗಳು ಆದೇಶವಾಗಿ ಬರುತ್ತವೆ. ಇಲ್ಲಿ ಝಲ್, ಪೂರ್ವಧಕಾರ. ಅದಕ್ಕೆ ಝಶ್ ಅಂದರೆ ಧಕಾರ ಪರದಲ್ಲಿರುವುದರಿಂದ ಜಶ್ ವರ್ಣ ಆದೇಶ. ಧಕಾರಕ್ಕೆ ಸ್ಥಾನಸಾಮ್ಯದಿಂದ ಜಶಿನಲ್ಲಿ ದಕಾರವೇ ಬರುತ್ತದೆ. ಆಗ ಸುದ್‌ಧ್‌ಯ್+ಉಪಾಸ್ಯಃ ಎಂದು ರೂಪವಾಗುತ್ತದೆ.

ಹೀಗಿರುವಾಗ ಇಲ್ಲಿ ಧಕಾರದ ಪರದಲ್ಲಿರುವ ಯಕಾರಕ್ಕೆ ಲೋಪವನ್ನು ಆಶಂಕಿಸಿ ಲೋಪವನ್ನು ವಿಧಿಸುವ ಸೂತ್ರವನ್ನು ಹೇಳುತ್ತಾನೆ.

(ಸಂಯೋಗಾಂತಕ್ಕೆ ಲೋಪಹೇಳುವ ಸೂತ್ರ)

೨೦. ಸಂಯೋಗಾಂತಸ್ಯ ಲೋಪಃ ॥ ೮-೨-೨೩ ॥

ಸಂಯೋಗಾಂತಂ ಯತ್ಪದಂ ತದಂತಸ್ಯ ಲೋಪಃ ಸ್ಯಾತ್ ॥

ಸಂಯೋಗಾಂತಸ್ಯ, ಲೋಪಃ ॥ ದ್ವಿಪದ ಸೂತ್ರ. ಪದಸ್ಯ ಎಂಬ ಅಧಿಕಾರದಲ್ಲಿ ಹೇಳಿರುವುದರಿಂದ "ಪದಸ್ಯ" ಎಂದು ಅನುವೃತ್ತವಾಗುತ್ತದೆ. "ಸಂಯೋಗಃ ಅಂತ್ಯಸ್ಯ ತತ್, ಸಂಯೋಗಾಂತಮ್, ತಸ್ಯ ಸಂಯೋಗಾಂತಸ್ಯ" । **ಸೂತ್ರಾರ್ಥ**–ಸಂಯೋಗವೇ ಅಂತವಾಗಿರುವ ಯಾವ ಪದವಿದೆಯೋ ಅದರ ಅಂತಕ್ಕೆ ಲೋಪವಾಗುತ್ತದೆ. ಇಲ್ಲಿ ಸಂಯೋಗನೇ ಅಂತವಾದ ಪದಕ್ಕೆ ಲೋಪಬರುತ್ತದೆ ಎಂದು ಅರ್ಥವಾದರೂ ಮುಂದೆಹೇಳುವ ಪರಿಭಾಷೆಯ ಅರ್ಥವನ್ನು ಮನಸ್ಸಿನಲ್ಲಿಟ್ಟು ಸೂತ್ರಾರ್ಥವನ್ನು ಹೇಳಿರುತ್ತಾನೆ. ಸಂಯೋಗನೇ ಅಂತವಾದ ಪದವೆಂದರೆ ಸುದ್‌ಧ್‌ಯ್ ಎಂಬ ಪದ. ಅದರ ಅಂತ ಯಕಾರ. ಅದಕ್ಕೆ ಈ ಸೂತ್ರವು ಲೋಪವನ್ನು ಹೇಳುತ್ತದೆ.

ಸಂಯೋಗನೇ ಅಂತವಾದ ಪದದ ಅಂತ್ಯಕ್ಕೆ ಲೋಪವೆಂದು ಸೂತ್ರಾರ್ಥ ಹೇಳಿದೆ. ಅಂತಕ್ಕೆ ಎಂದು ಹೇಳುವ ಪದವು ಸೂತ್ರದಲ್ಲಿ ಇಲ್ಲ. ಅನುವೃತ್ತಿಯಿಂದಲೂ ಲಬ್ಧವಾಗುವುದಿಲ್ಲ. ಆದುದರಿಂದ ಪದದ ಅಂತ್ಯಕ್ಕೆ ಲೋಪವೆಂದು ಹೇಗೆ ಹೇಳಿದೆ? ಅಂದರೆ ಪರಿಭಾಷೆಯಿಂದ ಆ ಅರ್ಥವು ಲಬ್ಧವಾಗಿದೆ ಎಂದು ಆ ಪರಿಭಾಷೆಯನ್ನು ಹೇಳುತ್ತಾನೆ.

(ಅಂತ್ಯಕ್ಕೆ ಕಾರ್ಯನಿಯಮಿಸುವ ಸೂತ್ರ)

೨೧. ಅಲೋಽನ್ತ್ಯಸ್ಯ ॥ ೧-೧-೫೨ ॥

ಷಷ್ಠೀನಿರ್ದಿಷ್ಟೋಽಂತ್ಯಸ್ಯ ಅಲಃ ಆದೇಶಃ ಸ್ಯಾತ್ ॥

ಅಲಃ, ಅಂತ್ಯಸ್ಯ ॥ ದ್ವಿಪದ ಸೂತ್ರ. "ಷಷ್ಠೀಸ್ಥಾನೇಯೋಗಾ" ಎಂಬುದರಿಂದ ಷಷ್ಠೀ, ಸ್ಥಾನೇ, ಎಂಬುವು ಅನುವೃತ್ತವಾಗುತ್ತವೆ. ಷಷ್ಠೀ ಎಂಬ ಪ್ರಥಮಾಂತವು ತೃತೀಯಾಂತವಾಗಿ ವಿಪರಿಣತವಾಗುತ್ತದೆ. ನಿರ್ದಿಷ್ಟಸ್ಯ ಎಂದು ಅಧ್ಯಾಹಾರ ಮಾಡಿಕೊಳ್ಳಬೇಕು. ಸ್ಥಾನೇ ಎಂಬಲ್ಲಿಯೂ ವಿಧೀಯಮಾನಃ ಎಂದು ಅಧ್ಯಾಹಾರ ಮಾಡಿಕೊಳ್ಳಬೇಕು. ಅಲಃ ಎಂಬುದು ಷಷ್ಠ್ಯಂತಪದ. **ಸೂತ್ರಾರ್ಥ**. ಯಾವುದಾದರೊಂದರ ಸ್ಥಾನಕ್ಕೆ ವಿಧಿಸಲ್ಪಟ್ಟ ಆದೇಶವು ಷಷ್ಠೀನಿರ್ದಿಷ್ಟವಾದುದರ ಅಂತ್ಯವಾದ ಅಲ್ ವರ್ಣಕ್ಕೆ ಬರುತ್ತದೆ. ಪ್ರಕೃತ ಸಂಯೋಗಾಂತವಾದ ಪದದ ಸ್ಥಾನದಲ್ಲಿ ಲೋಪ ರೂಪ ಆದೇಶವು ವಿಧಿಸಲ್ಪಟ್ಟಿದೆ. ಈ ಲೋಪಾದೇಶವು ಷಷ್ಠೀ ನಿರ್ದಿಷ್ಟವಾದ ಸಂಯೋಗಾಂತ ಪದದ ಅಂತ್ಯವಾದ ಅಲ್ ಎಂದರೆ ಯಕಾರಕ್ಕೆ ಬರುತ್ತದೆ ಎಂದು ನಿಶ್ಚಿತವಾಗುತ್ತದೆ.

ಇತಿ ಯಲೋಪೇ ಪ್ರಾಪ್ತೇ

ಹೀಗೆ ಪಾಣಿನಿಯ ಸೂತ್ರದ ಪ್ರಕಾರವಾಗಿ ಸುದ್‌ಧ್‌ಯ್+ಉಪಾಸ್ಯ ಎಂಬಲ್ಲಿ ಯಕಾರಕ್ಕೆ ಲೋಪಪ್ರಾಪ್ತವಾದರೆ ವಾರ್ತಿಕದಿಂದ ಅದಕ್ಕೆ ನಿಷೇಧವನ್ನು ಹೇಳುತ್ತಾನೆ.

ವಾ॥ (ಯಣಃ ಪ್ರತಿಷೇಧೋ ವಾಚ್ಯಃ) ಸುದ್ಧ್ಯುಪಾಸ್ಯಃ ॥

ಸಂಯೋಗಾಂತಪದದ ಅಂತ್ಯಕ್ಕೆ ಲೋಪ ಬರುವುದಾದರೆ ಯಣ್ ವರ್ಣಗಳಿಗೆ ನಿಷೇಧವು ಹೇಳಲ್ಪಡಬೇಕು. ಸಂಯೋಗಾಂತವು ಯವರಲವರ್ಣಗಳಾದರೆ ಲೋಪ ಬರುವುದಿಲ್ಲವೆಂದರ್ಥ. ಪ್ರಕೃತ ಸಂಯೋಗದ ಅಂತ್ಯವು ಯಕಾರ (ಯಣ್) ವಾದುದರಿಂದ ಲೋಪ ಬರುವುದಿಲ್ಲ. ವರ್ಣಗಳನ್ನು ಒಟ್ಟಿಗೆ ಸೇರಿಸಿದರೆ ಸುದ್ಧ್ಯುಪಾಸ್ಯಃ ಎಂಬ ರೂಪವಾಗುತ್ತದೆ. ಪಂಡಿತರಿಂದ ಸೇವಿಸಲ್ಪಡುವವನು ಎಂದು ಅರ್ಥ.

ಇಕ್ ಎಂಬಲ್ಲಿ ಇಕಾರಕ್ಕೆ ಉದಾಹರಣೆಯನ್ನು ತೋರಿಸಿ ಉಳಿದ ಉ, ಋ, ಌ ವರ್ಣಗಳಿಗೆ ಬಂದ ಯಣ್ ಸಂಧಿಯನ್ನು ತೋರಿಸುತ್ತಾನೆ.

ಮದ್ವರಿಃ । ಧಾತ್ರಂಶಃ । ಲಾಕೃತಿಃ ।

ಮಧು+ಅರಿಃ ಎಂದಿರುವಾಗ 'ಇಕೋ ಯಣಚಿ' ಎಂಬ ಸೂತ್ರದಿಂದ ಉಕಾರ ರೂಪವಾದ ಇಕ್ಕಿಗೆ ಅಕಾರರೂಪ ಅಚ್‌ಪರವಾದುದರಿಂದ ಉಕಾರಕ್ಕೆ ಓಷ್ಠ್ಯಸ್ಥಾನ ಸಾಮ್ಯವುಳ್ಳ ವಕಾರಾದೇಶ ಬರುತ್ತದೆ. ಮಧ್ವ್+ಅರಿಃ ಎಂದಾದಮೇಲೆ, ಅನಚಿಚ್ಚ ಎಂಬ ಸೂತ್ರದಿಂದ ಅಚ್ಚಿನ ಪರವಲ್ಲಿರುವ ಧಕಾರಕ್ಕೆ ದ್ವಿತ್ವ ಬಂದರೆ ಮಧ್ಧ್ವ್ + ಅರಿಃ ಎಂದಾಗುತ್ತದೆ. ಆಗ 'ಝಲಾಂಜಶ್‌ಝಶಿ' ಎಂಬುದರಿಂದ ಪೂರ್ವಧ್ ಕಾರಕ್ಕೆ ಜಶ್ತ್ವದಿಂದ ದಕಾರಾದೇಶ. ಹಿಂದಿನಂತೆ 'ಸಂಯೋಗಾಂತಸ್ಯ ಲೋಪಃ' ಸೂತ್ರದಿಂದ ವಕಾರಕ್ಕೆ ಲೋಪ ಪ್ರಾಪ್ತವಾದರೆ ಯಣ್ ಆದುದರಿಂದ 'ಯಣಃ ಪ್ರತಿಷೇಧೋ ವಾಚ್ಯಃ' ಎಂಬ ವಾರ್ತಿಕದಿಂದ ನಿಷೇಧ. ಮದ್ಧ್ವ್ + ಅರಿಃ ಎಂದಿರುವಾಗ ಸೇರಿಸಿದರೆ ಮದ್ಧ್ವರಿಃ ಎಂದಾಗುತ್ತದೆ. ಮಧು ಎಂಬ ರಾಕ್ಷಸನನ್ನು ಸಂಹರಿಸಿದ ವಿಷ್ಣುವೆಂದರ್ಥ. ಧಾತೃ+ಅಂಶಃ ಎಂದಿರುವಾಗ ಋಕಾರಕ್ಕೆ ಹಿಂದಿನಂತೆ ಯಣ್ ಬಂದರೆ ಧಾತ್‌ರ್+ಅಂಶಃ ಎಂದಾದಮೇಲೆ, ಅನಚಿಚ ಸೂತ್ರದಿಂದ ದ್ವಿತ್ವ ಬಂದರೆ ಧಾತ್‌ತ್‌ರ್+ಅಂಶಃ ಎಂದಾಗುತ್ತದೆ. ಇಲ್ಲಿ ಝಲ್ ವರ್ಣಕ್ಕೆ ಝಶ್ ವರ್ಣಪರವಲ್ಲಿಲ್ಲದಿರುವುದರಿಂದ ಜಶ್ತ್ವ ಬರುವುದಿಲ್ಲ. ಹಿಂದಿನಂತೆ ರೇಫಯ್ಯ ಣಾದುದರಿಂದ ಲೋಪ ನಿಷೇಧ. ಧಾತ್ರಂಶಃ ಎಂದು ರೂಪವಾಗುತ್ತದೆ. ಬ್ರಹ್ಮನ ಭಾಗವೆಂದರ್ಥ. ಇ+ಆಕೃತಿಃ ಎಂದಿರುವಾಗ ಯಣ್ ಬಂದರೆ ಲ್+ಆಕೃತಿಃ ಎಂದಾಗುತ್ತದೆ. ಇಲ್ಲಿ ದ್ವಿತ್ವಾದಿಗಳಿಗೆ ನಿಮಿತ್ತವಿಲ್ಲದಿರುವುದರಿಂದ ಯಾವುದೂ ಬರುವುದಿಲ್ಲ. ಸೇರಿಸಿದರೆ ಲಾಕೃತಿಃ ಎಂದಾಗುತ್ತದೆ. ಲೃಕಾರದಂತೆ ಆಕಾರವುಳ್ಳದು ಲಾಕೃತಿಃ ಎಂದೆನಿಸುತ್ತದೆ ಇಲ್ಲಿ ಲಕಾರಕ್ಕೆ ಸ್ಥಾನ ಸಾಮ್ಯದಿಂದ ವಕಾರಾದೇಶವೂ ಬರಬಹುದು. ಆದರೆ ವಕಾರಕ್ಕೆ ಉಕಾರ ಸ್ಥಳದಲ್ಲಿ ಚಾರಿತಾರ್ಥ್ಯವಿರುವುದರಿಂದಲೂ ಯಥಾಸಂಖ್ಯದಿಂದಲೂ ಲಕಾರಾದೇಶವೇ ಬರುತ್ತದೆಂದು ತಿಳಿಯಬೇಕು.

ಇಲ್ಲಿಗೆ ಯಣ್‌ಸಂಧಿ ಮುಗಿಯಿತು

ಯಾಂತಾದೇಶ, ವಾಂತಾದೇಶ ಸಂಧಿಃ—

೨೨. ಏಚೋಽಯವಾಯಾವಃ ॥ ೬-೧-೭೮ ॥

ಏಚಃ ಕ್ರಮಾದಯ್ ಅವ್ ಅಯ್ ಆವ್ ಏತೇ ಸ್ಯುರಚಿ ॥

ಏಚಃ, ಅಯವಾಯಾವಃ। ಎರಡು ಪದಗಳುಳ್ಳ ಸೂತ್ರ. ಅಯ್‌ಚ, ಅವ್‌ಚ, ಆಯ್‌ಚ, ಆವ್‌ಚ ಅಯವಾಯಾವಃ। ಇಕೋ ಯಣಚಿ ಎಂಬ ಸೂತ್ರದಿಂದ ಅಚಿ ಎಂಬುದು ಅನುವೃತ್ತವಾಗುತ್ತದೆ. ಆಗ **ಸೂತ್ರಾರ್ಥ:**– ಏಚಿಗೆ (ಏ ಓ ಐ ಔ) ಅಚ್ ಪರದಲ್ಲಿರುವಾಗ ಕ್ರಮವಾಗಿ ಅಯ್, ಅವ್, ಆಯ್, ಆವ್ ಎಂಬ ಆದೇಶಗಳು ಬರುತ್ತವೆ. ಏ ಕಾರಕ್ಕೆ ಅಚ್ ಪರವಾದರೆ ಅಯ್ ಎಂಬ ಆದೇಶವೂ

ಓಕಾರಕ್ಕೆ ಅವ್ ಆದೇಶವೂ, ಐಕಾರಕ್ಕೆ ಆಯ್, ಆದೇಶವೂ, ಔ ಕಾರಕ್ಕೆ ಆವ್ ಎಂಬ ಆದೇಶವೂ ಬರುತ್ತವೆ, ಇಲ್ಲಿ ಏ ಐ ಗಳಿಗೆ ಯಾಂತವಾದ ಆದೇಶವೂ ಓ ಔ ಕಾರಗಳಿಗೆ ವಾಂತವಾದ ಆದೇಶವೂ ಬರುವುದರಿಂದ ಯಾಂತಾದೇಶ ವಾಂತದೇಶ ಸಂಧಿಯೆಂದು ಹೆಸರು.

ಸೂತ್ರದ ವೃತ್ತಿ ಬರೆಯುವಾಗ ಕ್ರಮವಾಗಿ ಬರುತ್ತವೆ ಎಂದು ಹೇಳಿದೆ. ಇದು ಅನುವೃತ್ತಿಯಿಂದ ಬಂದ ಅರ್ಥವಲ್ಲ. ಅದಕ್ಕೋಸ್ಕರ ಕ್ರಮವನ್ನು ತಿಳಿಸುವ ಪರಿಭಾಷೆಯನ್ನು ಹೇಳುತ್ತಾನೆ.

(ಸಂಖ್ಯಾಕ್ರಮವನ್ನು ಸೂಚಿಸುವ ಪರಿಭಾಷಾ ಸೂತ್ರ)

೨೩. ಯಥಾಸಂಖ್ಯಮನುದೇಶಃ ಸಮಾನಾನಾಮ್ ।೧-೩-೧೦।

ಸಮಸಂಬಂಧೀ ವಿಧಿರ್ಯಥಾಸಂಖ್ಯಂ ಸ್ಯಾತ್। ಹರಯೇ। ವಿಷ್ಣವೇ। ನಾಯಕಃ । ಪಾವಕಃ ॥

ಯಥಾಸಂಖ್ಯಂ, ಅನುದೇಶಃ, ಸಮಾನಾನಾಮ್ ॥ ತ್ರಿಪದ ಸೂತ್ರ. ಸಮಾನಾಂ ಎಂಬಲ್ಲಿ ಸಂಬಂಧ ಸಾಮಾನ್ಯಾರ್ಥದಲ್ಲಿ ಷಷ್ಠೀ. ಅನುದೇಶವೆಂದರೆ ವಿಧಾನ=ವಿಧಿ. " ಸಂಖ್ಯಾಂ ಅನತಿಕ್ರಮ್ಯ ಯಥಾಸಂಖ್ಯಂ." **ಸೂತ್ರಾರ್ಥ:**– ಸಂಖ್ಯೆಯಿಂದ ಸಾಮ್ಯವಿರುವವುಗಳಿಗೆ ವಿಧಿಸಿರುವ ಕಾರ್ಯವು ಸಂಖ್ಯಾಕ್ರಮವನ್ನು ಮೀರದೆ ಬರುತ್ತದೆ. ಒಂದನೇದಕ್ಕೆ ಒಂದನೇದೂ ಎರಡನೇದಕ್ಕೆ ಎರಡನೆಯ ಆದೇಶವೂ ಬರುತ್ತದೆಂದು ಹೀಗೆ ಕ್ರಮವನ್ನು ಹೇಳಬೇಕು. ಪ್ರಕೃತ ಸ್ಥಾನಿ ಮತ್ತು ಆದೇಶಗಳಿಗೆ ಸಂಖ್ಯಾ ಸಾಮ್ಯವಿರುವುದರಿಂದ ಈ ಪರಿಭಾಷೆಯು ಅಲ್ಲಿ ಬಂದು ಕ್ರಮವನ್ನು ಹೇಳಿರುವುದರಿಂದ ವೃತ್ತಿಯಲ್ಲಿ "ಕ್ರಮಾತ್" ಎಂದು ಹೇಳಿರುವುದು ಸಮಂಜಸವಾಗಿದೆ. ಹರಯೇ ಮುಂತಾದವುಗಳು ಉದಾಹರಣೆಗಳು. ಹರಿ ಶಬ್ದದ ಚತುರ್ಥೀ ಏಕವಚನದಲ್ಲಿ ಹರಿ+ಏ ಎಂದಿರುವಾಗ "ಘೇರ್ಙಿತಿ" ಎಂಬಸೂತ್ರದಿಂದ ರಿ ಎಂಬಲ್ಲಿರುವ ಇಕಾರಕ್ಕೆ ಏಕಾರ (ಗುಣ) ಬರುತ್ತದೆ. ಹರೇ+ಏ ಎಂದು ರೂಪವಾದಾಗ ಆದು ಈ ಸೂತ್ರಕ್ಕೆ ಲಕ್ಷ್ಯ. ಇಲ್ಲಿ ಏಕಾರಕ್ಕೆ ಅಚ್ (ಏ) ಪರವಾದುದರಿಂದ ಆದೇಶದಲ್ಲಿ ಮೊದಲನೆಯದಾದ ಅಯ್ ಬರುತ್ತದೆ. ಆದೇಶವು ಶತ್ರುವಿನಂತೆ ಸ್ಥಾನಿಯನ್ನು ತೆಗೆದುಹಾಕಿ ಬರುವುದರಿಂದ ಏಕಾರ ಹೋಗಿ ಹರ್+ಅಯ್+ಏ ಎಂದಾಗಿ ಸೇರಿಸಿದರೆ, ಹರಯೆ ಎಂಬ ರೂಪವಾಗುತ್ತದೆ. ಓಕಾರಕ್ಕೆ ವಿಷ್ಣವೇ ಎಂಬುದು ಉದಾಹರಣೆ. ಹಿಂದಿನಂತೇ ವಿಷ್ಣೋ+ಏ ಎಂದಿರುವಾಗ ಓಕಾರಕ್ಕೆ ಎರಡನೆಯ ಅವ್ ಆದೇಶ ಬಂದರೆ ವಿಷ್ಣ್+ಅವ್+ಏ ಎಂಬುದಾಗಿ ಸೇರಿಸಿದರೆ ವಿಷ್ಣವೇಎಂದಾಗುತ್ತದೆ.

ನಾಯಕಃ ಇದು ಏಕಾರಕ್ಕೆ ಉದಾಹರಣೆ. ನೀ (ಞಿ) ಧಾತುವಿಗೆ ಣ್ವುಲ್ ಪ್ರತ್ಯಯ ಮಾಡಿದಾಗ ಪ್ರತ್ಯಯಕ್ಕೆ ಅಕಾದೇಶ. ಣಿತ್ವಾದುದುದರಿಂದ ಅದನ್ನು ನಿಮಿತ್ತೀಕರಿಸಿ ಧಾತುವಿನ ಈ ಕಾರಕ್ಕೆ ವೃದ್ಧಿ (ಐ) ಬಂದರೆ ನೈ+ಅಕಃ ಎಂದಿರುವಾಗ ಸಮುನ್ವಯ. ಆಯ್ ಆದೇಶ ಬಂದರೆ ನ್+ಆಯ್+ಅಕಃ, ನಾಯಕಃ ಎಂದಾಗುತ್ತದೆ. ಓಕಾರಕ್ಕೆ ಪಾವಕಃ ಎಂಬುದು ಉದಾಹರಣೆ. ಪಾವಕವೆಂದರೆ ಅಗ್ನಿ. ಪೂ (ಞಿ) ಧಾತುವಿಗೆ ಹಿಂದಿನಂತೆ ಪ್ರತ್ಯಯ ಬಂದರೆ ವೃದ್ಧಿ. ಪೌ+ಅಕಃ ಓಕಾರಕ್ಕೆ ಆವ್ ಆದೇಶ. ಪ್+ಆವ್+ಅಕಃ=ಪಾವಕಃ ಎಂದಾಗುತ್ತದೆ.

(ಯಕಾರಾದಿ ಪ್ರತ್ಯಯ ನಿಮಿತ್ತಕವಾಂತಾದೇಶ ಹೇಳುವ ಸೂತ್ರ)

೧೪. ವಾಂತೋ ಯಿ ಪ್ರತ್ಯಯೇ ॥ ೬-೧-೭೯ ॥

ಯಕಾರಾದೌ ಪ್ರತ್ಯಯೇ ಪರೇ ಓದೌತೋರವ್ ಆವ್ ಏತೌಸ್ತಃ ॥

ಗವ್ಯಮ್ । ನಾವ್ಯಮ್ ॥

ಅಚ್ ಪರದಲ್ಲಿ ಇಲ್ಲದಿರುವಾಗಲೂ ಕೆಲವು ಕಡೆ ವಾಂತಾದೇಶವನ್ನು ವಿಧಿಸಲು ಈ ಸೂತ್ರ ಹೇಳಿದೆ. ವಾಂತಃ, ಯಿ, ಪ್ರತ್ಯಯೇ ॥ ತ್ರಿಪದ ಸೂತ್ರ. ಯಿ ಎಂಬುದು ಯಕಾರದ ಸಪ್ತಮೀ ಏಕವಚನರೂಪ. ಅದು ಪ್ರತ್ಯಯೇ ಎಂಬುದಕ್ಕೆ ವಿಶೇಷಣ. ಯಾವುದಾದರೊಂದನ್ನು ಇನ್ನೊಂದು ಶಬ್ದಕ್ಕೆ ವಿಶೇಷಣ ಮಾಡಿ ಕಾರ್ಯ ಹೇಳುವುದಾದರೆ ಅಲ್ಲಿ ಆ ವಿಶೇಷಣವೇ ಅಂತವಾಗಿರುವುದಕ್ಕೆ ಕಾರ್ಯ ಬರುತ್ತದೆ ಎಂದು ತಿಳಿಯಬೇಕು. "ಯೇನವಿಧಿಸ್ತದಂತಸ್ಯ" ಎಂಬ ಪರಿಭಾಷೆಯಿಂದ ಈ ಅರ್ಥವು ಲಭ್ಯವಾಗುತ್ತದೆ. ಹಾಗೆಯೇ ಇಲ್ಲಿ ಹೇಳುವುದಾದರೆ ಯಕಾರಾಂತ ಪ್ರತ್ಯಯ ಪರವಾದಾಗ ಎಂಬ ಅರ್ಥವಾಗುತ್ತಿತ್ತು. ಆದರೆ ಆ ಪರಿಭಾಷೆಗೆ ಅಪವಾದವಾಗಿ "ಯಸ್ಮಿನ್ವಿಧಿಸ್ತದಾದಾವಲ್ಗ್ರಹಣೇ" ಎಂಬ ಪರಿಭಾಷೆಯು ಉಕ್ತವಾಗಿದೆ. ಸಪ್ತಮ್ಯಂತವಾಗಿ ಒಂದು ವರ್ಣವು ಹೇಳಲ್ಪಟ್ಟು ಅದು ಸಪ್ತಮ್ಯಂತವಾದ ಇನ್ನೊಂದು ಶಬ್ದಕ್ಕೆ ವಿಶೇಷಣ ಮಾಡಲ್ಪಟ್ಟರೆ (ತದಂತಕ್ಕೆ ಅಪವಾದವಾಗಿ) ಆ ವರ್ಣವೇ ಆದಿಯಲ್ಲಿರುವ ವಿಶೇಷ್ಯವೆಂದು ಪರಿಭಾಷೆಯು ತಿಳಿಸುತ್ತದೆ. ಪ್ರಕೃತ ಯಿ ಎಂಬುದು ಸಪ್ತಮ್ಯಂತವಾದ ವರ್ಣವಾಗಿ ಪ್ರತ್ಯಯೇ ಎಂಬುದಕ್ಕೆ ವಿಶೇಷಣವಾದುದರಿಂದ ಯಕಾರವೇ ಆದಿಯಾಗಿರುವ ಪ್ರತ್ಯಯ ಪರವಾದಾಗ ಎಂಬ ಅರ್ಥವಾಗುತ್ತದೆ. ವ್ ಅಂತ್ಯೋ ಯಸ್ಯ ಸಃ ವಾಂತಃ । ವಕಾರವೇ ಅಂತವಾದ ಆದೇಶವೆಂದರೆ ಹಿಂದೆ ಹೇಳಿದ ಅವ್ ಆವ್ ಆಗುತ್ತವೆ. ಅವು ಯಾವುದರ ಸ್ಥಾನಕ್ಕೆ ಬರುತ್ತವೆ ಎಂದು ಆಕಾಂಕ್ಷಾ ಬಂದರೆ ಅರ್ಥಾತ್ ಓಕಾರ ಔಕಾರಗಳಿಗೇ ಎಂದು ಸಿದ್ಧವಾಗುತ್ತದೆ. ಹಿಂದೆ ಅವುಗಳೇ ಸ್ಥಾನಿಗಳೆಂದು ಹೇಳಿದೆ. **ಸೂತ್ರಾರ್ಥ.** ಯಕಾರವೇ ಆದಿಯಲ್ಲಿರುವ ಪ್ರತ್ಯಯ

ಪರವಾದಾಗ ಓಕಾರ ಔಕಾರಗಳಿಗೆ (ಕ್ರಮವಾಗಿ) ಅವ್ ಆವ್ ಆದೇಶಗಳು ಬರುತ್ತವೆ. ಗವ್ಯಮ್ । ಓಕಾರಕ್ಕೆ ಉದಾಹರಣೆ. ಗೋವಿನ ವಿಕಾರ ಎಂಬರ್ಥದಲ್ಲಿ ಯತ್ ಪ್ರತ್ಯಯ ಬಂದು ಗೋ+ಯ ಎಂದಿರುವಾಗ ಯಕಾರಾದಿ ಪ್ರತ್ಯಯ ಪರವಾದುದರಿಂದ ಓಕಾರಕ್ಕೆ ಅವಾದೇಶ ಬಂದರೆ ಗ್+ಅವ್+ಯ, ಗವ್ಯ ಎಂದಾಗುತ್ತದೆ. ಸಾಮಾನ್ಯಾರ್ಥದಲ್ಲಿ ನಪುಂಸಕಲಿಂಗ ಹೇಳಿದೆ. ಔಕಾರಕ್ಕೆ ನಾವ್ಯಂ ಎಂಬುದು ಉದಾಹರಣೆ. ನಾವಾ ತಾರ್ಯಂ । ದೋಣಿಯಿಂದ ದಾಟಿಸಲ್ಪಡುವುದು. " ನೌವಯೋಧರ್ಮ..... " ಎಂಬ ಸೂತ್ರದಿಂದ ಯತ್ ಪ್ರತ್ಯಯ ನೌ+ಯ ಎಂದಿರುವಾಗ ಔಕಾರಕ್ಕೆ ಆವಾದೇಶ ಬಂದರೆ ನ್+ಆವ್+ಯ, ನಾವ್ಯ. ಹಿಂದಿನಂತೆ ಸಾಮಾನ್ಯಾರ್ಥದಲ್ಲಿ ನಪುಂಸಕ ನಿರ್ದೇಶ. ನಾವ್ಯಮ್.

(ಯಕಾರಾದಿ ಪದ ಪರವಾದಾಗ ಅವಾದೇಶ ವಿಧಿಸುವ ವಾರ್ತಿಕ)

ವಾ॥ (ಅಧ್ವ ಪರಿಮಾಣೇ ಚ॥)

॥ ಗವ್ಯೂತಿಃ ॥

ಅಧ್ವಪರಿಮಾಣೇ, ಚ । ದ್ವಿಪದ ವಾರ್ತಿಕ. ' ಗೋರ್ಯೂತೌ ಛಂದಸ್ಯುಪಸಂಖ್ಯಾನಮ್ ' ಎಂದು ಇದರ ಹಿಂದಿನ ವಾರ್ತಿಕ. ಅಲ್ಲಿಂದ ಗೋಃ, ಯೂತ್ಕೌ, ಎಂದೂ, ' ಉಪಸಂಖ್ಯಾನಂ ' ಎಂಬುದೂ ಅನುವೃತ್ತವಾಗುತ್ತವೆ. ಉಪಸಂಖ್ಯಾನವೆಂದರೆ ಹೆಚ್ಚಿಗೆ ಹೇಳುವುದು. ಪಾಣಿನಿಯು ಹೇಳಿರುವುದು ಸಾಕಾಗದಿರುವುದರಿಂದ ಇದನ್ನೂ ಸೇರಿಸಿ ಹೆಚ್ಚಿಗೆ ಹೇಳಬೇಕು ಎಂದರ್ಥ. ಅಧ್ವಪರಿಮಾಣವೆಂದರೆ ಮಾರ್ಗದ ಪರಿಮಾಣ ವಿಶೇಷ. **ವಾರ್ತಿಕಾರ್ಥ.** ಗೋ ಶಬ್ದಕ್ಕೆ ಯೂತಿ ಎಂಬ ಶಬ್ದ ಪರವಾದಾಗ ಮಾರ್ಗಪರಿಮಾಣ ವಿಶೇಷರೂಪ ಅರ್ಥ ತೋರುವಾಗ ಓಕಾರಕ್ಕೆ ಅವಾದೇಶವನ್ನು ಹೇಳಬೇಕು. ಗವ್ಯೂತಿಃ. ಉದಾಹರಣೆ. ಹಸುವು ಕೂಗಿದರೆ ಎಲ್ಲಿಯವರೆಗೆ ಕೇಳುವುದೋ ಅಷ್ಟು ಉದ್ದವಾದ ಮಾರ್ಗ. ' ಗವ್ಯೂತಿಃ ಸ್ತ್ರೀ ಕ್ರೋಶಯುಗಮ್ ' ಎಂದು ಅಮರ. ಎರಡುಮೈಲು ಮಾರ್ಗ. ಗೋ+ಯೂತಿಃ ಎಂದಿರುವಾಗ ಓಕಾರಕ್ಕೆ ಅವಾದೇಶ. ಗ್+ಅವ್+ಯೂತಿಃ = ಗವ್ಯೂತಿಃ. ಯಕಾರಾದಿ ಪ್ರತ್ಯಯವಾಗದಿರುವುದರಿಂದ ಹಿಂದಿನ ಸೂತ್ರದಿಂದ ಬರುವುದಿಲ್ಲ. ಯೂತಿ ಎಂಬುದು ಯಕಾರಾದಿಪದ. ಆದುದರಿಂದ ವಾರ್ತಿಕಕಾರರು ಹೆಚ್ಚಾಗಿ ಹೇಳಿರುತ್ತಾರೆ.

(ಗುಣಸಂಜ್ಞೆಯನ್ನು ವಿಧಿಸುವ ಸೂತ್ರ)

೧೫. ಅದೇಙ್ ಗುಣಃ ॥ ೧-೧-೨ ॥

ಅತ್ ಏಙ್ ಚ ಗುಣಸಂಜ್ಞಃ ಸ್ಯಾತ್ ॥

ಅದೇಜ್, ಗುಣಃ । ದ್ವಿಪದ ಸೂತ್ರ. ಅಚ್ಚ (ತ್+ಚ) ಏಜ್ ಚ ತದ್ಯೋಃ ಸಮಾಹಾರಃ ಅದೇಜ್. ಸಂಜ್ಞಾಧಿಕಾರದಲ್ಲಿ ಹೇಳಿರುವುದರಿಂದ ಸಂಜ್ಞಾ ಎಂಬುದು ಲಭ್ಯವಾಗುತ್ತದೆ. ಅತ್ ಎಂದರೆ ಹ್ರಸ್ವಾಕಾರ ಅತ್ ಎಂದಾಗ ಬೇರೆ ಭೇದಗಳನ್ನು ತೆಗೆದುಕೊಳ್ಳಬಾರದೆಂದು ಮುಂದಿನ ಸೂತ್ರವು ಹೇಳುತ್ತದೆ. ಏಜ್ ಪ್ರತ್ಯಾಹಾರ (ಏಕಾರ ಓಕಾರ) **ಸೂತ್ರಾರ್ಥ** ಹ್ರಸ್ವಾಕಾರ ಏಕಾರ ಓಕಾರಗಳಿಗೆ ಗುಣ ಎಂಬ ಸಂಜ್ಞೆ ಬರುತ್ತದೆ. ಮುಂದೆ ಎಲ್ಲಿಯಾದರೂ ಗುಣ ಎಂದು ಹೇಳಿದರೆ ಈ ಮೂರು ವರ್ಣಗಳು ಬರುತ್ತವೆಂದು ತಿಳಿಯಬೇಕು. ಇದು ಸಂಜ್ಞೆಯನ್ನು ಹೇಳುವ ಸೂತ್ರ. ಅತ್ ಎಂದರೆ ' ಅಣ್‌ಉದಿತ್ಸವರ್ಣಸ್ಯ ಚಾಪ್ರತ್ಯಯಃ ' ಎಂಬ ಸೂತ್ರದಿಂದ ಅಕಾರದ ಹದಿನೆಂಟು ಭೇದಗಳೂ ಏಕೆ ಬರುವುದಿಲ್ಲ ಕೇವಲ ಹ್ರಸ್ವಾಕಾರವೆಂದು ಸೂತ್ರದಲ್ಲಿ ಹೇಳಿದುದು ಹೇಗೆ ? ಅಂದರೆ ಅದನ್ನು ತಿಳಿಸುತ್ತಾನೆ.

(ಸ್ವರಗಳ ಭೇದ ಸಂಕೋಚವನ್ನು ತಿಳಿಸುವ ಸೂತ್ರ)

೨೬. ತಪರಸ್ತತ್ಕಾಲಸ್ಯ ॥೧-೧-೭೦॥

ತಃ ಪರೋ ಯಸ್ಮಾತ್ಸ ಚ ತಾತ್ಪರಶ್ಚೋಚ್ಚಾರ್ಯಮಾಣಸಮಕಾಲ-ಸ್ಯೈವ ಸಂಜ್ಞಾ ಸ್ಯಾತ್ ॥

ಇದು ನಿಯಮವನ್ನು ವಿಧಿಸುವುದರಿಂದ ಪರಿಭಾಷಾ ಸೂತ್ರ. ತಪರಃ, ತತ್ಕಾಲಸ್ಯ । ದ್ವಿಪದ ಸೂತ್ರ. ತಪರಃ ಎಂಬುದು ಆವೃತ್ತವಾಗುತ್ತದೆ. ಅಂದರೆ ತಪರಃ ತಪರಃ ಎಂದು ಎರಡು ಬಾರಿ ಹೇಳಿಕೊಳ್ಳಬೇಕು. ಒಂದಕ್ಕೆ ತಪರೋ ಯಸ್ಮಾತ್ ಸಃ ತಪರಃ । ಎಂದು ವಿಗ್ರಹ. ಇನ್ನೊಂದಕ್ಕೆ ತಾತ್ ಪರಃ ತಪರಃ । ಎಂದು ವಿಗ್ರಹ. ತಕಾರನೇ ಪರದಲ್ಲಿರುವುದು ಒಂದು, ತಕಾರದ ಪರದಲ್ಲಿರುವುದು ಇನ್ನೊಂದು. ಅತ್ ಮೊದಲಿನದಕ್ಕೆ ಉದಾಹರಣೆ. ತ್+ಏಜ್ ಇದು ಎರಡನೆಯದಕ್ಕೆ ಉದಾಹರಣೆ. ತಸ್ಯ ಕಾಲ ಇವ ಕಾಲಃ ಯಸ್ಯ ಸಃ ತತ್ಕಾಲಃ. ತಸ್ಯ ತತ್ಕಾಲಸ್ಯ । ತಪರವಾಗಿರುವ ವರ್ಣವನ್ನು ಉಚ್ಚರಿಸಲು ಎಷ್ಟು ಕಾಲ ಬೇಕೋ ಅಷ್ಟು ಕಾಲವುಳ್ಳದ್ದಕ್ಕೆ ಎಂದರ್ಥವಾಗುತ್ತದೆ. ಆಗ **ಸೂತ್ರಾರ್ಥ**. ಯಾವ ವರ್ಣದ ಪರದಲ್ಲಿ ತಕಾರವಿದೆಯೋ, ಅದೂ, ತಕಾರದ ಪರದಲ್ಲಿರುವುದೂ (ಎರಡನೇ ತಪರ) ಉಚ್ಚರಿಸಲ್ಪಡುವ ವರ್ಣದ ಸಮಕಾಲವುಳ್ಳದ್ದಕ್ಕೇ ಸಂಜ್ಞೆಯಾಗುತ್ತದೆ. ಅದು ಹ್ರಸ್ವವಾದರೆ ಕೇವಲ ಏಕಮಾತ್ರಾಕಾಲವುಳ್ಳದ್ದಕ್ಕೇ ಸಂಜ್ಞೆಯಾಗುತ್ತದೆ. ದೀರ್ಘ ಪ್ಲುತವನ್ನು ತೆಗೆದುಕೊಳ್ಳಬಾರದು. ತಪರ ದೀರ್ಘವಾಗಿದ್ದರೆ ದ್ವಿಮಾತ್ರಾಕಾಲವುಳ್ಳದ್ದಕ್ಕೆ ಮಾತ್ರ ಸಂಜ್ಞೆಯಾಗುತ್ತದೆ. ಅತ್ ಎಂದರೆ ಕೇವಲ ಹ್ರಸ್ವಾಕಾರದ ಆರು ಭೇದಗಳಿಗೆ ಮಾತ್ರ ಸಂಜ್ಞೆ. ಇಲ್ಲಿ ಅತ್ ಎಂದರೆ ಅದರ ಭೇದಗಳನ್ನು ತೆಗೆದುಕೊಳ್ಳಬೇಕು ಎಂಬುದು "ಅಣುದಿತ್ಸವರ್ಣಸ್ಯ ಚಾಪ್ರತ್ಯಯಃ"

ಎಂಬ ಸೂತ್ರದಿಂದಲೇ ತಿಳಿಯುತ್ತಿರುವಾಗ ಈ ಸೂತ್ರವು ಕೇವಲ ಅದನ್ನು ಉಚ್ಚರಿಸುವ ಕಾಲವುಳ್ಳದ್ದನ್ನೇ ತೆಗೆದುಕೊಳ್ಳಬೇಕು ಎಂದು ನಿಯಮ ಮಾಡುವುದರಿಂದ ನಿಯಮ ಸೂತ್ರ. ಪ್ರಕೃತ "ಅದೇಜ್ ಗುಣಃ" ಎಂಬಲ್ಲಿ ಅ+ತ್+ಏಜ್ ಎಂದು ಭೇದ ಮಾಡಿದರೆ ಹೊಸಲಿನ ಮೇಲೆ ದೀಪವಿಟ್ಟಂತೆ ತಕಾರವು ಎರಡು ಕಡೆಗೂ ಅನ್ವಯ ಹೊಂದುತ್ತದೆ. ತಕಾರದಲ್ಲಿ ಅನ್ವಯ ಹೊಂದಿದರೆ ಮೊದಲನೆಯ ವಿಗ್ರಹಾರ್ಥವುಳ್ಳ ತಪರ. ಸಜಾನಲ್ಲಿ ಅನ್ವಯ ಹೊಂದಿದರೆ ತಾತ್ಪರವಾದುದರಿಂದ ತಪರ. ಇಲ್ಲಿ ಅ ಎಂದು ಹ್ರಸ್ವವಾಗಿ ಉಚ್ಚರಿಸಿರುವುದರಿಂದ ಅತ್ ಎಂದರೆ ಕೇವಲ ಹ್ರಸ್ವಾಕಾರ ಮಾತ್ರವೆಂದು ತಿಳಿಯಬೇಕು. ಹಾಗೆಯೇ ತ್+ಏಜ್ ಎಂದು ದೀರ್ಘ ಮಾತ್ರ ಹೇಳಿರುವುದರಿಂದ ದೀರ್ಘಗೆಳಾದ ಏಕಾರ ಓಕಾರ ಮಾತ್ರ ಗುಣ ಸಂಜ್ಞೆಯನ್ನು ಹೊಂದುತ್ತವೆಂದು ತಿಳಿಯಬೇಕು.

ಹೀಗೆ ಹ್ರಸ್ವವಾದ ಅಕಾರ, ದೀರ್ಘವಾದ ಏಕಾರ ಓಕಾರಗಳಿಗೆ ಗುಣವೆಂಬ ಸಂಜ್ಞೆಯನ್ನು ಹೇಳಿದ ಮೇಲೆ ಆ ಗುಣ ಸಂಜ್ಞೆಗೆ ಉಪಯೋಗವನ್ನು ಹೇಳುತ್ತಾನೆ.

(ಗುಣಸಂಧಿಯನ್ನು ವಿಧಿಸುವ ಸೂತ್ರ)

೨೭. ಆದ್ಗುಣಃ ॥ ೬-೧-೮೭ ॥

ಅವರ್ಣಾದಚಿ ಪರೇ ಪೂರ್ವಪರಯೋರೇಕೋ ಗುಣ ಆದೇಶಃ ಸ್ಯಾತ್। ಉಪೇಂದ್ರಃ । ಗಂಗೋದಕಮ್ ॥

ಇಲ್ಲಿ ಗುಣಸಂಧಿಯನ್ನು ಹೇಳುತ್ತಾನೆ. ಅತ್ ಗುಣಃ । ದ್ವಿಪದ ಸೂತ್ರ. ' ಇಕೋ ಯಣಚಿ' ಎಂಬುದರಿಂದ ಅಚಿ ಎಂಬ ಸಪ್ತಮಿಯವು ಅನುವೃತ್ತವಾಗುತ್ತದೆ. ' ಏಕಃ ಪೂರ್ವಪರಯೋಃ ' ಎಂಬುದು ಅಧಿಕಾರ ಸೂತ್ರ. ಈ ಸೂತ್ರದ ಮೇಲೆ ಹೇಳುವ ಕಾರ್ಯಗಳೆಲ್ಲವೂ ಪೂರ್ವ ಮತ್ತು ಪರಗಳ ಸ್ಥಾನದಲ್ಲಿ ಒಂದೇ ಆದೇಶವಾಗಿ ಬರುತ್ತದೆ ಎಂದು ಈ ಅಧಿಕಾರ ಸೂತ್ರದ ಅರ್ಥ. ಸ್ಥಾನಿ ಮತ್ತು ನಿಮಿತ್ತಗಳಿರಡರ ಸ್ಥಾನದಲ್ಲಿಯೂ ಒಂದೇ ಆದೇಶ ಬರುತ್ತದೆ. ಅಚಿ ಎಂಬುದು ಸಪ್ತಮಿಯಾದುದರಿಂದ ' ತಸ್ಮಿನ್ನಿತಿನಿರ್ದಿಷ್ಟೇ ಪೂರ್ವಸ್ಯ ' ಎಂಬ ಪರಿಭಾಷೆಯಿಂದ ಅಚಿನ ಅವ್ಯವಹಿತ ಪೂರ್ವದಲ್ಲಿರುವುದಕ್ಕೆ ಕಾರ್ಯ. ಚ್‌ಪರದಲ್ಲಿರುವಾಗ ಎಂದು ತಾತ್ಪರ್ಯಾರ್ಥ. **ಸೂತ್ರಾರ್ಥ** ಅವರ್ಣದಿಂದ ಅವ್ಯವಹಿತಪರದಲ್ಲಿ ಅಚ್ ಬಂದರೆ ಪೂರ್ವಪರಗಳೆರಿಡರ ಸ್ಥಾನದಲ್ಲಿಯೂ ಒಂದೇ ಗುಣ (ಅ, ಏ, ಓ) ಆದೇಶ ಬರುತ್ತದೆ. (ಪೂರ್ವದ ಅಕಾರಕ್ಕೂ ಪರದ ಅಚ್ಚಿಗೂ ಒಟ್ಟಿಗೆ ಒಂದೇ ಗುಣರೂಪ ಆದೇಶ) ಇಲ್ಲಿ ಆತ್ ಎಂದರೆ ಅಕಾರದ ಪಂಚಮೀ ಏಕವಚನರೂಪ. ತಪರವಲ್ಲ. ಇದು ವಿಧಿಸಲ್ಪಡದಿರುವುದರಿಂದ ' ಅಣುದಿತ್ಸವರ್ಣಸ್ಯ ಚಾಪ್ರತ್ಯಯಃ ' ಸೂತ್ರದಿಂದ ಅಕಾರದ ಹದಿನೆಂಟು ಭೇದಗಳನ್ನೂ ತೆಗೆದು

ಕೊಳ್ಳಬೇಕು. ಉಪ+ಇಂದ್ರಃ ಎಂದಿರುವಾಗ ಪಕಾರದಮೇಲಿರುವ ಅಕಾರಕ್ಕೆ ಇ ಎಂಬ ಅಚ್ ಅವ್ಯವಹಿತ ಪರದಲ್ಲಿರುವುದರಿಂದ ಅಕಾರ ಮತ್ತು ಇಕಾರಗಳ ಸ್ಥಾನದಲ್ಲಿ ಒಂದು ಗುಣ ಆದೇಶ ಬರುತ್ತದೆ. 'ಸ್ಥಾನೇಂತರತಮಃ' ಎಂಬ ಪರಿಭಾಷೆಯಿಂದ ಅಕಾರಕ್ಕೆ ಕಂಠಸ್ಥಾನವಾದುದರಿಂದಲೂ ಇಕಾರಕ್ಕೆ ತಾಲುಸ್ಥಾನವಾದುದರಿಂದಲೂ ಗುಣಗಳಾದ ಅ, ಏ, ಓ, ಗಳಲ್ಲಿ ಕಂಠತಾಲು ಸ್ಥಾನವುಳ್ಳ ಏಕಾರವೇ ಬರುತ್ತದೆ. ಉಪ್+ಏ+ನ್ದ್ರಃ = ಉಪೇಂದ್ರಃ ಎಂದು ರೂಪವಾಗುತ್ತದೆ. ಗಂಗಾ+ಉದಕಮ್ ಎಂದಿರುವಾಗ ಆಕಾರಕ್ಕೆ ಉಕಾರ ರೂಪವಾದ ಅಚ್‌ಪರವಾದುದರಿಂದ ಅವುಗಳ ಸ್ಥಾನದಲ್ಲಿ ಕಂಠ ಓಷ್ಠ್ಯಸಾಮ್ಯವುಳ್ಳ ಓಕಾರ ರೂಪಗುಣವು ಏಕಾದೇಶವಾಗಿ ಬರುತ್ತದೆ. ಗಂಗ್+ಓ+ದಕಮ್ = ಗಂಗೋದಕಮ್. ಅಚ್ ಎಂದರೆ ಅಕಾರಾದಿ ಒಂಭತ್ತು ವರ್ಣಗಳು ಆಕಾರಕ್ಕೆ ಅಕಾರ ಪರವಾದಾಗ ಗುಣವು ಈ ಸೂತ್ರದಿಂದ ಪ್ರಾಪ್ತವಾದರೂ ಇದಕ್ಕೆ ಅಪವಾದವಾಗಿ ಸವರ್ಣದೀರ್ಘ ಸಂಧಿಯನ್ನು ಮುಂದೆ ಹೇಳುತ್ತಾನೆ. ಹಾಗೆಯೇ ಏ ಓ ಐ ಔ ಗಳು ಪರವಾದಾಗ ಇದಕ್ಕೆ ಅಪವಾದವಾಗಿ ವೃದ್ಧಿ ಸಂಧಿಯನ್ನು ಹೇಳುತ್ತಾನೆ. ಆಗ ಅಚಿನಲ್ಲಿ ಉಳಿದಿರುವುದು ಈ ಉ ಋ �less ಎಂದು ನಾಲ್ಕು ವರ್ಣಗಳು ಮಾತ್ರ. ಅವುಗಳಲ್ಲಿ ಇ ಉ ಪರವಾದಾಗ ಉದಾಹರಣೆಯನ್ನು ಹೇಳಿದ್ದಾಯಿತು. ಋ �less ಪರವಾದಾಗ ಉದಾಹರಣೆಗಳನ್ನು ಹೇಳಬೇಕು. ಅಕಾರ ಋಕಾರ ಸ್ಥಾನದಲ್ಲಿ ಬರುವ ಗುಣ ಯಾವುದು? ಅಕಾರಕ್ಕೆ ಕಂಠಸ್ಥಾನ ಋಕಾರಕ್ಕೆ ಮೂರ್ಧಸ್ಥಾನ. ಕಂಠ ಮೂರ್ಧಸ್ಥಾನವುಳ್ಳದ್ದು ಗುಣದಲ್ಲಿ ಯಾವುದೂ ಇಲ್ಲ. ಹೀಗೆಯೇ �less ಕಾರಕ್ಕೆ ದಂತಸ್ಥಾನವಾದುದರಿಂದ ಕಂಠದಂತ ಸ್ಥಾನಿಕವಾದ ಗುಣವಿಲ್ಲ. ಸ್ವಲ್ಪ ಸಾಮ್ಯವಿರುವ ಗುಣ ಬರುತ್ತದೆ ಎಂದರೆ ಮೂರೂ ಕಂಠಸ್ಥಾನ ಸಾಮ್ಯದಿಂದ ಬರಬೇಕಾಗುತ್ತದೆ. ಆದಕ್ಕೋಸ್ಕರ ಋಕಾರ �less ಕಾರ ಸ್ಥಾನಕ್ಕೆ ಬರುವ ನಿಶ್ಚಿತವಾದ ಆದೇಶವನ್ನು ತಿಳಿಸಲು ಮೊದಲು ಅಚ್ಚಿಗೆ ಅನುನಾಸಿಕ ಭಾವವನ್ನು ಹೇಳಿ ಅದಕ್ಕೆ ಇತ್ ಸಂಜ್ಞೆ ಹೇಳುತ್ತಾನೆ.

(ಸ್ವರಕ್ಕೆ ಅನುನಾಸಿಕ ಸಂಜ್ಞೆಯನ್ನು ವಿಧಿಸುವ ಸೂತ್ರ)

೨೮. ಉಪದೇಶೇಽಜನುನಾಸಿಕ ಇತ್ ॥೧-೩-೨॥

ಉಪದೇಶೇಽಜನುನಾಸಿಕೋಽಜಿತ್ಸಂಜ್ಞಃ ಸ್ಯಾತ್ ।

ಉಪದೇಶೇ, ಅಚ್, ಅನುನಾಸಿಕಃ, ಇತ್ ।ನಾಲ್ಕು ಪದಗಳುಳ್ಳ ಸೂತ್ರ. ಉಪದೇಶ ಎಂದರೆ ಮೊದಲಿನ ಉಚ್ಚಾರಣೆ. ಧಾತು ಸೂತ್ರಾದಿಗಳೆಂದು ಹಿಂದೆ ಹೇಳಿದೆ. ಉಪದೇಶದಲ್ಲಿರುವ ಅನುನಾಸಿಕವಾವ ಅಜ್ವರ್ಣವು ಇತ್ಸಂಜ್ಞೆಯನ್ನು ಹೊಂದುತ್ತವೆ.

ಸೂತ್ರಾದಿಗಳಲ್ಲಿ ಇದು ಅನುನಾಸಿಕ, ಇದು ಅನನುನಾಸಿಕವೆಂದು ತಿಳಿಯುವುದು

ಹೇಗೆ? ಸೂತ್ರಾದಿಗಳನ್ನು ಉಚ್ಚರಿಸಿದವರು ಪಾಣಿನಿ ಮುಂತಾದವರು ಈಗ ಇಲ್ಲ. ಇದ್ದಿದ್ದರೆ ಅವರ ಉಚ್ಚಾರಣೆಯಿಂದ ತಿಳಿಯಬಹುದು. ಆದುದರಿಂದ ಅನುನಾಸಿಕವನ್ನು ತಿಳಿಯುವ ರೀತಿಯನ್ನು ಹೇಳುತ್ತಾನೆ.

ಪ್ರತಿಜ್ಞಾನುನಾಸಿಕ್ಯಾಃ ಪಾಣಿನೀಯಾಃ। ಲಣ್ ಸೂತ್ರಸ್ಥಾವರ್ಣೇನ ಸಹೋಚ್ಚಾರ್ಯಮಾಣೋ ರೇಫೋ ರಲಯೋಃ ಸಂಜ್ಞಾ ॥

ಪ್ರತಿಜ್ಞಾಯತೆ ಇತಿ ಪ್ರತಿಜ್ಞಾ । ತಿಳಿಯಲ್ಪಡುವುದು. ಅನುನಾಸಿಕಸ್ಯ ಭಾವಃ ಆನುನಾಸಿಕ್ಯಂ । ಅನುನಾಸಿಕದ ಭಾವ. ಪ್ರತಿಜ್ಞಾ ಆನುನಾಸಿಕ್ಯಂ ಯೇಷಾಂತೇ ಪ್ರತಿಜ್ಞಾನುನಾಸಿಕ್ಯಾಃ । ತಿಳಿಯಲ್ಪಡುವ ಅನುನಾಸಿಕದ ಭಾವವುಳ್ಳವರು. ಪಾಣಿನಿನಾ ಪ್ರೋಕ್ತಂ ಪಾಣಿನೀಯಮ್ । ತದಧೀಯತೆ ವಿದಂತಿ ವಾ ಪಾಣಿನೀಯಾಃ ॥ ಪಾಣಿನಿಯಿಂದ ಹೇಳಲ್ಪಟ್ಟುದನ್ನು ತಿಳಿಯವವರು ಅಥವಾ ಓದುವವರು ಪಾಣಿನೀಯರು. ಪಾಣಿನಿಯ ಶಿಷ್ಯರೇ ತಿಳಿಯಲ್ಪಡುವ ಅನುನಾಸಿಕ ಭಾವವುಳ್ಳವರು. ಪಾಣಿನಿಯಿಂದ ಶಿಷ್ಯ ಪರಂಪರೆಯಿಂದ ಈ ಅನುನಾಸಿಕ ಭಾವವು ಉಪದೇಶಿಸಲ್ಪಡುವುದರಿಂದ ನಮ್ಮ ಗುರುಗಳಿಂದ ತಿಳಿದುಕೊಳ್ಳಬೇಕು. ಪ್ರಕೃತ ಅನುನಾಸಿಕವಾದ ಅಚ್ಚಿಗೆ ಇತ್ ಸಂಜ್ಞೆ ಹೇಳಿದುದಕ್ಕೆ ಪ್ರಯೋಜನವನ್ನು ಮುಂದಿನ ವಾಕ್ಯದಿಂದ ವಿವರಿಸುತ್ತಾನೆ. ಲಣ್ ಸೂತ್ರದಲ್ಲಿರುವ ಅಕಾರವು ಅನುನಾಸಿಕವೆಂದು ಉಪದಿಷ್ಟವಾಗಿದೆ. ಆದುದರಿಂದ ಅದಕ್ಕೆ ಇತ್ ಸಂಜ್ಞಾ ಬರುತ್ತದೆ. ಈಗ ಇತ್ತಾದ ಅಕಾರದೊಡನೆ "ಹಯವರಟ್" ಎಂಬಲ್ಲಿರುವ ರ ಎಂಬುದನ್ನು ಸೇರಿಸಿದರೆ ರ ಎಂದಾಗುತ್ತದೆ. "ಆದಿರಂತ್ಯೇನ ಸಹೇತಾ" ಎಂಬುದರಿಂದ ರ ಎಂಬುದು ಈಗ ಪ್ರತ್ಯಾಹಾರವಾದುದರಿಂದ ರ ಲ ಈ ಎರಡು ವರ್ಣಗಳಿಗೆ ಸಂಜ್ಞೆಯಾಗುತ್ತದೆ. ಲಣ್ ಸೂತ್ರದಲ್ಲಿರುವ ಅಕಾರದೊಡನೆ ಉಚ್ಚರಿಸಲ್ಪಡುವ ರ ಎಂಬುದು ರ ಲ ಎರಡು ವರ್ಣಗಳಿಗೆ ಸಂಜ್ಞೆಯಾಗುತ್ತದೆ ಎಂದು ವಾಕ್ಯದ ಅರ್ಥ. ಹೀಗೆ ರ ಪ್ರತ್ಯಾಹಾರ ಸಿದ್ಧವಾದ ಮೇಲೆ ಅದರಿಂದಾಗುವ ಪ್ರಯೋಜನವನ್ನು ಹೇಳುತ್ತಾನೆ.

(ಋ �less ವರ್ಣಗಳಿಗೆ ಬರುವ ಸ್ವರನಿಯಮವನ್ನು ವಿಧಿಸುವ ಸೂತ್ರ)

೨೯. ಉರಣ್ ರಪರಃ ॥೧-೧-೫೧॥

ಋ ಇತಿ ತ್ರಿಂಶತಃ ಸಂಜ್ಞೇತ್ಯುಕ್ತಮ್।ತತ್ಸ್ಥಾನೇ ಯೋಽಣ್ ಸ ರಪರಃ ಸನ್ನೇವ ಪ್ರವರ್ತತೇ। ಕೃಷ್ಣರ್ದ್ಧಿಃ । ತವಲ್ಕಾರಃ ॥

ಉಃ, ಅಣ್, ರಪರಃ । ತ್ರಿಪದ ಸೂತ್ರ. ಉಃ ಎಂಬುದು ಋಕಾರದ ಷಷ್ಠೀ. "ಋ �less ವರ್ಣಯೋಃ ಮಿಥಃ ಸಾವರ್ಣ್ಯಂ ವಾಚ್ಯಮ್" ಎಂದುದರಿಂದ ಋಕಾರ

ವೆಂದರೆ ಅದರ ಮೂವತ್ತು ಭೇದಗಳನ್ನು ತೆಗೆದುಕೊಳ್ಳಬೇಕು. "ಷಷ್ಠೀ ಸ್ಥಾನೇ ಯೋಗಾ " ಎಂಬ ಸೂತ್ರದಿಂದ ಸ್ಥಾನೇ ಎಂಬುದು ಅನುವೃತ್ತವಾಗುತ್ತದೆ. **ಸೂತ್ರಾರ್ಥ.** ಋಕಾರದ ಸ್ಥಾನದಲ್ಲಿ ಯಾವ ಅಣ್ ಬರುತ್ತದೆಯೋ ಅದು ರಪರವಾಗಿಯೇ ಬರುತ್ತದೆ. ರ ಎಂದರೆ ಪ್ರತ್ಯಾಹಾರವಾದುದರಿಂದ ರ ಲ ವೆಂದಾಗುತ್ತದೆ. ರಃಪರೋ ಯಸ್ಮಾತ್ ಸಃ ರಪರಃ । ರಶಿರಸ್ಕವಾಗಿಯೂ ಲಶಿರಸ್ಕವಾಗಿಯೂ ಬರುತ್ತದೆ. ಇಲ್ಲಿ ಅಣ್ ಎಂದರೆ ಪೂರ್ವಣಕಾರದಿಂದ ಮಾಡಿದ ಪ್ರತ್ಯಾಹಾರ. ಅ ಇ ಉ ಮಾತ್ರ ಬರುತ್ತದೆ. ಎಂದಾದುದರಿಂದ ಐ ಔ ಏ ಓ ಮುಂತಾದುವು ಬರುವುದಿಲ್ಲ. ಋಕಾರ ೃಕಾರ ಸ್ಥಾನಗಳಿಗೆ ಬರುವುದಾದರೆ ಅಣ್ ಮಾತ್ರ. ಅದೂ ರಪರನಾಗಿ ಬರುವುದು ಎಂದು ನಿಯಮ ಮಾಡುತ್ತದೆ. ಇಲ್ಲಿ ಸ್ಥಾನಸಾಮ್ಯದಿಂದ ಋಕಾರ ಸ್ಥಾನಕ್ಕೆ ಗುಣನಾದ ಅಕಾರವು ರಪರವಾಗಿ (ಅರ್) ಯೂ ೃಕಾರ ಸ್ಥಾನಕ್ಕೆ ಗುಣನಾದ ಅಕಾರವು ಲಪರವಾಗಿಯೂ (ಅಲ್) ಬರುತ್ತದೆ ಎಂದು ತಿಳಿಯಬೇಕು. ಪ್ರಕೃತ ಕೃಷ್ಣ + ಋದ್ಧಿಃ ಎಂದಿರುವಾಗ ಅಕಾರಕ್ಕೆ ಅಚ್ಚಾದ ಋಕಾರ ಪರವಾದುದರಿಂದ ಅಕಾರ ಮತ್ತು ಋಕಾರಕ್ಕೆ ಆಕಾರ ರೂಪಗುಣವು ಬರುತ್ತದೆ. ಬರುವಾಗ ಈ ನಿಯಮದಿಂದ ರ ಪರವಾಗಿಯೇ ಬರುವುದರಿಂದ ಅರ್ ಆದೇಶ. ಕೃಷ್ಣ್ + ಅರ್ ದ್ಧಿಃ = ಕೃಷ್ಣರ್ದ್ಧಿಃ ಎಂದು ರೂಪವಾಗುತ್ತದೆ. ಹಾಗೆಯೇ ತವ + ೃಕಾರಃ ಎಂದಿರುವಾಗ ಅ ಮತ್ತು ೃಕಾರ ಸ್ಥಾನದಲ್ಲಿ ಲಪರವಾಗಿ ಬಂದರೆ ಅಲ್ ಆದೇಶ ಬರುತ್ತದೆ. ತವ್ + ಅಲ್ ಕಾರಃ = ತವಲ್ಕಾರಃ

(ಪದಾಂತ ಯಕಾರವಕಾರ ಲೋಪನಿಧಾಯಕ ಸೂತ್ರ)

೩೦. ಲೋಪಃ ಶಾಕಲ್ಯಸ್ಯ ॥೮-೩-೧೯॥

ಅವರ್ಣಪೂರ್ವಯೋಃ ಪದಾಂತಯೋರ್ಯವಯೋರ್ಲೋಪೋ ವ್ಯಾಶಿ ಪರೇ ॥

ಲೋಪಃ, ಶಾಕಲ್ಯಸ್ಯ ॥ ದ್ವಿಪದ ಸೂತ್ರ. "ಭೋಭಗೋ ಅಘೋ..... ಯೋಶಿ" ಎಂಬಸೂತ್ರದಿಂದ "ಅಪೂರ್ವಸ್ಯ", "ಅಶಿ", ಎಂಬ ಪದಗಳೂ "ವ್ಯೋರ್ಲಘು ಪ್ರಯತ್ನತರಃ ಶಾಕಟಾಯನಸ್ಯ" ಎಂಬುದರಿಂದ "ವ್ಯೋಃ" ಎಂಬುದೂ ಅನುವೃತ್ತವಾಗುತ್ತವೆ. ಅಪೂರ್ವಸ್ಯ ಎಂಬುದು "ವ್ಯೋಃ" ಎಂಬುದಕ್ಕೆ ವಿಶೇಷಣ. ದ್ವಿವಚನಕ್ಕೆ ವಿಶೇಷಣವಾದುದರಿಂದ ಅದನ್ನೂ ದ್ವಿವಚನಾಂತವಾಗಿ ವಿಪರಿಣಾನು ಮಾಡಿಕೊಳ್ಳಬೇಕು. ವ್ ಚ ಯ್ ಚ ವ್ಯಾ. ತಯೋಃ ವ್ಯೋಃ । ಅಃ ಪೂರ್ವಃ ಯಾಭ್ಯಾಂ ಅಪೂರ್ವಾ । ತಯೋಃ ಅಪೂರ್ವಯೋಃ । ಅಕಾರವೇ ಪೂರ್ವದಲ್ಲಿರುವ ಯಕಾರವಕಾರಗಳಿಗೆ ಎಂದರ್ಥ. "ಪದಸ್ಯ" ಎಂಬುದು ಅಧಿಕಾರ. ಅದಕ್ಕೆ

ವ್ಯೋಃ ಎಂಬುದು ವಿಶೇಷಣ. ವಿಶೇಷಣ ಮಾಡಿದಾಗ ಅವೇ ಅಂತ್ಯವಾಗಿ ಉಳ್ಳದ್ದು ಎಂಬರ್ಥವಾಗುತ್ತದೆ. ಅವರ್ಣಪೂರ್ವವಾದ ಯಕಾರಾಂತ ವಕಾರಾಂತಪದಕ್ಕೆ ಶಾಕಲ್ಯರ ಮತದಲ್ಲಿ ಲೋಪವೆಂದರ್ಥ. "ಅಲೋಂತ್ಯಸ್ಯ" ಪರಿಭಾಷೆಯಿಂದ ಅದರ ಅಂತ್ಯಕ್ಕೆ ಲೋಪ. ಈ ಪರಿಭಾಷೆಯಿಂದ ಲಬ್ಧವಾದ ಅರ್ಥವನ್ನು ಸೇರಿಸಿ ವೃತ್ತಿಯಲ್ಲಿ ಹೇಳಿದೆ. **ಸೂತ್ರಾರ್ಥ.** ಅಕಾರವೇ ಪೂರ್ವದಲ್ಲಿರುವ ಪದದ ಕೊನೆಯಲ್ಲಿರುವ ಯಕಾರವಕಾರಗಳಿಗೆ ಅಶ್ ಪರದಲ್ಲಿರುವಾಗ ವಿಕಲ್ಪವಾಗಿ ಲೋಪ ಬರುತ್ತದೆ. ಇಲ್ಲಿ ಶಾಕಲ್ಯರ ಮತದಲ್ಲಿ ಲೋಪವೆಂದುದರಿಂದ ಇತರರ ಮತದಲ್ಲಿ ಲೋಪವಿಲ್ಲವೆಂದು ತಿಳಿಯುತ್ತದೆ. ಆದುದರಿಂದ ವಾ ಅಂದರೆ ವಿಕಲ್ಪವೆಂದು ಹೇಳಿದೆ. ಹರೇ + ಇಹ ಎಂದಿರುವಾಗ "ಏಙೋಯವಾಯಾವಃ" ಸೂತ್ರದಿಂದ (ಇ) ಅಚ್ ಪರವಾದುದರಿಂದ ಏಕಾರಕ್ಕೆ ಅಯಾದೇಶ. ಹರಯ್ + ಇಹ ಎಂದು ರೂಪವಾದಾಗ ಈ ಸೂತ್ರಕ್ಕೆ ಲಕ್ಷ್ಯ. ಇಲ್ಲಿ ಯಕಾರ ಪದಾಂತದಲ್ಲಿ ಇದೆ. ಅದರ ಪೂರ್ವದಲ್ಲಿ ಅಕಾರವಿದೆ ಪರದಲ್ಲಿ ಅಶ್ (ಇ) ಇದೆ. ಆದುದರಿಂದ ಶಾಕಲ್ಯರ ಮತದಿಂದ ಯಕಾರಕ್ಕೆ ಲೋಪ ಬಂದರೆ ಹರ + ಇಹ ಎಂದು ರೂಪವಾಗುತ್ತದೆ, ಬಾರದಿದ್ದರೆ ಹರಯಿಹ ಎಂದಾಗುತ್ತದೆ. ಹಾಗೆಯೇ ವಿಷ್ಣೋ + ಇಹ ಎಂದಿರುವಾಗ ಹಿಂದಿನಂತೆ ಓಕಾರಕ್ಕೆ ಅವ್ ಆದೇಶ ಬಂದರೆ ವಿಷ್ಣವ್ + ಇಹ ಎಂದಿರುವಾಗ ವಕಾರಲೋಪಕ್ಕೆ ಉದಾಹರಣೆ. ಅಪೂರ್ವವಾದ ಪದಾಂತವಾದ ವಕಾರವಿದ್ದು ಅದಕ್ಕೆ ಅಶ್ ಪರವಾದುದರಿಂದ ಲೋಪ ಬಂದರೆ ವಿಷ್ಣ + ಇಹ ಎಂದೂ ಬಾರದಿದ್ದರೆ ವಿಷ್ಣವಿಹ ಎಂದೂ ರೂಪವಾಗುತ್ತದೆ. ಸೂತ್ರದಲ್ಲಿ ವ್ಯೋಃ ಎಂದು ವಕಾರಯಕಾರ ಕ್ರಮವಾಗಿ ಹೇಳಿದರೂ ವೃತ್ತಿಯಲ್ಲಿಯೂ ಉದಾಹರಣೆಯಲ್ಲಿಯೂ ಯಕಾರವಕಾರವೆಂದು ಹೇಳಿದೆ. ವರ್ಣಸಮಾಮ್ನಾಯದಲ್ಲಿ ಯವ ಎಂದಿರುವುದರಿಂದ ಈ ರೀತಿ ವ್ಯತ್ಯಾಸ ಮಾಡಿದೆ.

ಹರೇ + ಏಹಿ ಎಂದಿರುವಾಗ ಏಕಾರಕ್ಕೆ ಅಯಾದೇಶ ಬಂದು ಶಾಕಲ್ಯರ ಮತದ ಪ್ರಕಾರ ಯಕಾರಕ್ಕೆ ಲೋಪ ಬಂದಮೇಲೆ ಹರ + ಏಹಿ ಎಂದಾದಾಗ "ಓಮಾಙೋಶ್ಚ" ಎಂಬ ಸೂತ್ರದಿಂದ ಪರರೂಪ ಸಂಧಿಯು ಬರಬೇಕಾಗುತ್ತದೆ. ಏಹಿ ಎಂಬಲ್ಲಿ ಆ + ಇಹಿ ಏಹಿ ಎಂದಾಗಿದೆ. ಅಲ್ಲಿ ಆ ಎಂಬುದು ಆಜ್ಞಿನ ಆಕಾರ. ಈಗ ಅದು ಪರವಾದುದರಿಂದ ಅ ಮತ್ತು ಏ ಸ್ಥಾನದಲ್ಲಿ ಏ ರೂಪವಾದ ಪರರೂಪವು ಒಂದೇ ಆದೇಶವಾಗಿ ಬರಬೇಕಾಗುತ್ತದೆ. ಹಾಗೆಯೇ ವಿಷ್ಣೋ + ಇಹ ಎಂಬಲ್ಲಿ ಓಕಾರಕ್ಕೆ ಅವಾದೇಶ ಮಾಡಿದ ಮೇಲೆ ಈ ಸೂತ್ರದಿಂದ ವಕಾರಕ್ಕೆ ಲೋಪ ಮಾಡಿದಾಗ ವಿಷ್ಣ + ಇಹ ಎಂದಾದಾಗ ಅಕಾರಕ್ಕೆ ಇಕಾರ ಪರವಾದುದರಿಂದ "ಆದ್ಗುಣಃ" ಎಂಬುದರಿಂದ ಗುಣವು ಏಕಾದೇಶವಾಗಿ ಬರಬೇಕಾಗುತ್ತದೆ. ಅದನ್ನು ತಪ್ಪಿಸಲು ಉಪಾಯವನ್ನು ಹೇಳಲು ಅಸಿದ್ಧವನ್ನು ಬೋಧಿಸುವ ಸೂತ್ರವನ್ನು ಹೇಳುತ್ತಾನೆ.

(ಒಂದು ಸೂತ್ರಕ್ಕೆ ಇನ್ನೊಂದು ಸೂತ್ರವು ಅಸಿದ್ಧವಾಗುವುದನ್ನು ಹೇಳುವ ಸೂತ್ರ)

೩೧. ಪೂವತ್ರಾಸಿದ್ಧಮ್ ॥ ೮-೨-೧॥

ಸಪಾದಸಪ್ತಾಧ್ಯಾಯೀಂ ಪ್ರತಿ ತ್ರಿಪಾದ್ಯಸಿದ್ಧಾ, ತ್ರಿಪಾದ್ಯಾಮಪಿ ಪೂರ್ವಂ ಪ್ರತಿ ಪರಂ ಶಾಸ್ತ್ರಮಸಿದ್ಧಮ್ ॥ ಹರ ಇಹ, ಹರಯಿಹ। ವಿಷ್ಣ ಇಹ, ವಿಷ್ಣವಿಹ ॥

ಪೂರ್ವತ್ರ, ಅಸಿದ್ಧಮ್ ॥ ದ್ವಿಪದ ಸೂತ್ರ. ಇದು ಅಧಿಕಾರ ಸೂತ್ರ. ಆದುದರಿಂದ ಮುಂದಿನ ಸೂತ್ರಗಳಲ್ಲಿ ಇದು ಹೋಗಿ ಏಕವಾಕ್ಯದಿಂದ ನ್ಯನಸ್ಥಿಯನ್ನು ಸೂಚಿಸುತ್ತದೆ. ಪಾಣಿನಿಯ ಎಂಟು ಅಧ್ಯಾಯಗಳಲ್ಲಿ ಎರಡು ವಿಭಾಗಗಳನ್ನು ಮಾಡಿ ಕೊಳ್ಳಬೇಕು. ಈ ಸೂತ್ರವು ಎಂಟನೇ ಅಧ್ಯಾಯದ ಎರಡನೇ ಪಾದದ ಮೊದಲಿನ ಸೂತ್ರವಾದುದರಿಂದ ಇದರ ಮುಂದಿರುವ ಸೂತ್ರಗಳು ಒಂದು ಗುಂಪೂ ಹಿಂದಿರುವ ಸೂತ್ರಗಳು ಒಂದು ಗುಂಪೂ ಎಂದು ತಿಳಿಯಬೇಕು. ಆಗ ಏಳು ಅಧ್ಯಾಯ ಮತ್ತು ಎಂಟನೇ ಅಧ್ಯಾಯದ ಮೊದಲಿನ ಪಾದ ಒಂದು ಗುಂಪು. ಇದಕ್ಕೇ ಸಪಾದ ಸಪ್ತಾಧ್ಯಾಯಿಯೆಂದು ಹೆಸರು. ಎಂಟನೇ ಅಧ್ಯಾಯದ ಮೂರು ಪಾದದಲ್ಲಿ ಹೇಳಿದ ಸೂತ್ರಗಳು ಒಂದು ಗುಂಪು. ಇವುಗಳಿಗೆ ತ್ರಿಪಾದಿಯೆಂದು ಹೆಸರು. ಇಲ್ಲಿ ಎರಡು ವಾಕ್ಯ ಮಾಡಿಕೊಂಡು ಅರ್ಥ ಹೇಳಬೇಕು. ಪೂರ್ವತ್ರ ಅಂದರೆ ಇದರ ಹಿಂದಿನವುಗಳನ್ನು ಕುರಿತು ಮುಂದಿನವುಗಳು ಅಸಿದ್ಧವಾಗುತ್ತವೆ. ಇದರೂ ಇಲ್ಲದಂತೆ ಆಗುತ್ತವೆ. ಅಂದರೆ ಸಪಾದ ಸಪ್ತಾಧ್ಯಾಯಿಯನ್ನು ಕುರಿತು ತ್ರಿಪಾದಿ ಅಸಿದ್ಧವಾಗುತ್ತದೆ. ತ್ರಿಪಾದಿಯಿಂದ ಮಾಡಿದ ಕಾರ್ಯವು ಸಪಾದ ಸಪ್ತಾಧ್ಯಾಯಿಗೆ ಗೊತ್ತಿರುವುದಿಲ್ಲ ವೆಂದು ತಾತ್ಪರ್ಯ. ಇದು ಮೊದಲನೇ ವಾಕ್ಯದ ಅರ್ಥ. ಈ ಸೂತ್ರವು ಮುಂದೆ ತ್ರಿಪಾದಿಯಲ್ಲಿ ಒಂದೊಂದು ಸೂತ್ರದಲ್ಲಿಯೂ ಹೋಗುವುದರಿಂದ ಅಲ್ಲಿಯೂ ಪೂರ್ವವನ್ನು ಕುರಿತು ಪರವು ಅಸಿದ್ಧ. ಪರ ಸೂತ್ರದಿಂದ ಕಾರ್ಯಮಾಡಿದರೂ ಪೂರ್ವದ ಸೂತ್ರಕ್ಕೆ ಗೊತ್ತಿರುವುದಿಲ್ಲವೆಂದರ್ಥ. ಪ್ರಕೃತ ಹರಯ್ ಇಹ, ವಿಷ್ಣವ್ ಇಹ ಎಂಬಲ್ಲಿ "ಲೋಪಃ ಶಾಕಲ್ಯಸ್ಯ" ಎಂಬ ಸೂತ್ರದಿಂದ ಯಕಾರ ವಕಾರಗಳಿಗೆ ಲೋಪ ಮಾಡಿದೆಯಷ್ಟೆ. ಈ ಸೂತ್ರವು ತ್ರಿಪಾದಿಯಲ್ಲಿರುವುದರಿಂದ ಸಪಾದ ಸಪ್ತಾಧ್ಯಾಯಿಗೆ ಇದು ಇವೆಯೆಂದು ಗೊತ್ತಿರುವುದಿಲ್ಲ. ಪರರೂಪವಿಧಾಯಕ ಸೂತ್ರವೂ (ಓಮಾಜಿಶೋಶ್ಚ) ಗುಣವಿಧಾಯಕ ಸೂತ್ರವೂ (ಆದ್ಗುಣಃ) ಸಪಾದ ಸಪ್ತಾಧ್ಯಾಯಿಯಲ್ಲಿವೆ. ಲೋಪವಾದುದು ಗೊತ್ತಿಲ್ಲವೆಂದಮೇಲೆ ಅವುಗಳು ಅಲ್ಲಿ ಯಕಾರವಕಾರ ಇವೆಯೆಂದೇ ತಿಳಿದಿರುತ್ತವೆ. ಆಗ ಅಕಾರಕ್ಕೆ ಅಜಿ, ಅಕಾರಕ್ಕೆ ಅಚ್ ಪರವಾಗಿಲ್ಲವಾದುದರಿಂದ ಹಲ್ ಪರವಾದುದರಿಂದ ಪರರೂಪ, ಗುಣಸಂಧಿಗಳು ಬರುವುದಿಲ್ಲ. ಹಾಗೆಯೆ ಇರುತ್ತವೆ. ಆದುದರಿಂದ ಲೋಪವಿರುವ ಒಂದು ರೂಪ, ಲೋಪವಿಲ್ಲದ ಒಂದುರೂಪ

ಹೀಗೆ ಎರಡೇ ರೂಪಗಳಾಗುತ್ತವೆ. ಅದನ್ನೇ ಹರ ಇಹ ಇತ್ಯಾದಿಗಳಿಂದ ತೋರಿಸುತ್ತಾನೆ. ಅಕಾರಕ್ಕೆ ಏಚ್ ಪರವಾದರೆ ಗುಣಸಂಧಿಗೆ ಅಪವಾದವಾಗಿ ವೃದ್ಧಿಸಂಧಿಯನ್ನು ಹೇಳಲು ವೃದ್ಧಿ ಸಂಜ್ಞೆಯನ್ನು ಹೇಳುತ್ತಾನೆ.

(ವೃದ್ಧಿಸಂಜ್ಞಾ ವಿಧಾಯಕ ಸೂತ್ರ)

೩೨. ವೃದ್ಧಿರಾದೈಚ್ ॥೧-೧-೧॥

ಆದೈಚ್ಚ ವೃದ್ಧಿಸಂಜ್ಞಃ ಸ್ಯಾತ್ ॥

ವೃದ್ಧಿಃ ಆದೈಚ್ ॥ ದ್ವಿಪದ ಸೂತ್ರ. ಆಚ್ಚ ಐಚ್ಚ ತಯೋಃ ಸಮಾಹಾರಃ ಆದೈಚ್. ಇಲ್ಲಿ ಆತ್ ಎಂಬುದೂ ಐಚ್ ಎಂಬುದೂ ತಪರ. ಆತ್ ಪಂಚಮೀ ಏಕವಚನನಲ್ಲ. ತಪರವಾದುದರಿಂದ " ತಪರಸ್ತತ್ಕಾಲಸ್ಯ " ಎಂಬ ಸೂತ್ರದಿಂದ ದೀರ್ಘವನ್ನು ಮಾತ್ರ ತೆಗೆದುಕೊಳ್ಳಬೇಕು. ಅವುಗಳ ಭೇದಗಳನ್ನು ತೆಗೆದಕೊಳ್ಳಬಾರದು. ಆತ್ ಎಂಬುದು ತಕಾರವೇಪರವಾಗಿ ಉಳ್ಳದ್ದು. ಐಚ್ ಎಂಬುದು (ತ್+ಐಚ್) ತಕಾರದ ಪರದಲ್ಲಿರುವುದು. **ಸೂತ್ರಾರ್ಥ.** ದೀರ್ಘವಾದ ಆಕಾರವೂ ಐ, ಔ ಗಳೂ ವೃದ್ಧಿ ಸಂಜ್ಞೆಯನ್ನು ಹೊಂದುತ್ತವೆ. ಇನ್ನು ಎಲ್ಲಿಯಾದರೂ ವೃದ್ಧಿ ಬರುತ್ತದೆ ಎಂದರೆ ಆ ಐ, ಔ ಗಳಲ್ಲಿ ಯಾವುದಾದರೂ ಬರುತ್ತದೆ ಎಂದು ತಿಳಿಯಬೇಕು. ಸಂಜ್ಞೆ ಹೇಳಿದುದಕ್ಕೆ ಪ್ರಯೋಜನ ಹೇಳುತ್ತಾನೆ.

(ವೃದ್ಧಿ ಸಂಧಿಯನ್ನು ಹೇಳುವ ಸೂತ್ರ)

೩೩. ವೃದ್ಧಿರೇಚಿ ॥ ೬-೧-೮೮ ॥

ಆದೇಚಿ ಪರೇ ವೃದ್ಧಿರೇಕಾದೇಶಃ ಸ್ಯಾತ್ ॥ ಗುಣಾಪವಾದಃ ।

ಕೃಷ್ಣೈಕತ್ವಮ್ । ಗಂಗೌಘಃ । ದೇವೈಶ್ವರ್ಯಮ್ । ಕೃಷ್ಣಾತ್ಕಂ-ಠ್ಯಮ್ ॥

ವೃದ್ಧಿಃ, ಏಚಿ ॥ ದ್ವಿಪದಸೂತ್ರ. " ಆದ್ಗುಣಃ " ಎಂಬುದರಿಂದ ಆತ್ ಎಂಬ ಪಂಚಮ್ಯಂತ ಪದವು ಅನುವೃತ್ತವಾಗುತ್ತದೆ. ಏಚ್ ಪ್ರತ್ಯಾಹಾರ. ಸಪ್ತಮ್ಯಂತವಾದುದರಿಂದ ಪರದಲ್ಲಿರಬೇಕು ಎಂದು ಅರ್ಥವಾಗುತ್ತದೆ. " ಏಕಃ ಪೂರ್ವಪರಯೋಃ " ಎಂಬ ಅಧಿಕಾರವಿರುವುದರಿಂದ ವೃದ್ಧಿಯು ಪೂರ್ವ ಪರಗಳೆರಡರ ಸ್ಥಾನದಲ್ಲಿ ಬರುತ್ತದೆ. **ಸೂತ್ರಾರ್ಥ.** ಅಕಾರಕ್ಕೆ ಏಚ್ ಪರವಾದಾಗ ಪೂರ್ವ ಪರಗಳ ಸ್ಥಾನದಲ್ಲಿ ವೃದ್ಧಿಯು ಏಕಾದೇಶವಾಗಿ ಬರುತ್ತದೆ. ಈ ಸೂತ್ರವು ಗುಣಕ್ಕೆ ಅಪವಾದ. " ಯೇನ ನಾಪ್ರಾಪ್ತೇ ಯೋ ವಿಧಿರಾರಭ್ಯತೇ ಸ ತಸ್ಯಾಪವಾದಃ " ಎಂದು ಅಪವಾದದ ಲಕ್ಷಣ. ಒಂದು ಸೂತ್ರವು ಅನಶ್ಯ ಬರುತ್ತಿರುವಾಗ ಅಲ್ಲಿಯೇ ಇನ್ನೊಂದನ್ನು ಹೇಳವುದಾದರೆ

ಹಾಗೆ ಹೇಳುವ ಸೂತ್ರವು ಹಿಂದಿನ ಸೂತ್ರಕ್ಕೆ ಅಪವಾದ. ಪ್ರಕೃತ ಅಕಾರಕ್ಕೆ ಏಚ್ ಪರವಾದಾಗ ಏಚೂ ಆಚ್ಚಾದುದರಿಂದ ಗುಣಬರಬೇಕು. ಅಚ್‌ಸಾಮಾನ್ಯ ಏಚ್ ವಿಶೇಷ. ಹೀಗೆ ಗುಣವು ಪ್ರಾಪ್ತವಾದರೆ ಅದಕ್ಕೆ ಅಪವಾದವಾಗಿ ವೃದ್ಧಿಯು ಹೇಳಿದ್ದಿ. ವೃದ್ಧಿಯು ನಿರವಕಾಶವಾದುದರಿಂದ ಅಪವಾದ. ಗುಣವಾದರೋ ಏಚ್ ನಿಮಿತ್ತವನ್ನು ಬಿಟ್ಟರೆ ಇ ಉ ಋ, ಌ ಪರವಾದಾಗ ಬರುತ್ತದೆ. ಆದುದರಿಂದ ಅಪ್ಪ ಸಾಮಾನ್ಯ ಸೂತ್ರ. ಆಗ ಸಾಮಾನ್ಯವನ್ನು ಬಾಧಿಸಿ ವಿಶೇಷವೇ ಬರುತ್ತದೆ. ಕೃಷ್ಣ + ಏಕತ್ವಮ್ ಎಂದಿರುವಾಗ ಅಕಾರಕ್ಕೆ ಏಕಾರ ಪರವಾದುದರಿಂದ ಅ ಮತ್ತು ಏ ಸ್ಥಾನದಲ್ಲಿ ವೃದ್ಧಿ ಆದೇಶ, ಅ ಕಾರಕ್ಕೆ ಕಂಠಸ್ಥಾನ. ಏಕಾರಕ್ಕೆ ಕಂಠತಾಲು ಸ್ಥಾನ. ಆಗ ಕೃಷ್ಣೈ ಎಂಬಲ್ಲಿ ಕಂಠತಾಲುಸ್ಥಾನವುಳ್ಳ ಏಕಾರಾದೇಶ, ಕೃಷ್ಣ್ + ಐ + ಕತ್ವಂ = ಕೃಷ್ಣೈ + ಕತ್ವಮ್. ಗಂಗಾ + ಓಘಃ ಎಂದಿರುವಾಗ ಆಕಾರಕ್ಕೆ ಏಚಿನ ಓ ಪರವಾದುದರಿಂದ ಆಕಾರಕ್ಕೂ ಓಕಾರಕ್ಕೂ ಕಂಠೋಷ್ಠ ಸ್ಥಾನವುಳ್ಳ ಔಕಾರರೂಪ ವೃದ್ಧಿಯು ಏಕಾದೇಶವಾಗಿ ಬರುತ್ತದೆ. ಗಂಗ್ + ಔ + ಘಃ = ಗಂಗೌಘಃ. ದೇವ + ಐಶ್ವರ್ಯಮ್ ಎಂದಿರುವಾಗ ಅಕಾರಕ್ಕೆ ಏಕಾರರೂಪ ಏಚ್ ಪರವಾದುದರಿಂದ ಅಕಾರ ಏಕಾರ ಸ್ಥಾನದಲ್ಲಿ ಕಂಠತಾಲು ಸ್ಥಾನವುಳ್ಳ ಏಕಾರ ರೂಪವೃದ್ಧಿಯು ಏಕಾದೇಶವಾಗಿ ಬರುತ್ತದೆ. ದೇವ್ + ಐ + ಶ್ವರ್ಯಂ = ದೇವೈಶ್ವರ್ಯಮ್. ಕೃಷ್ಣ + ಔತ್ಕಣ್ಠ್ಯಮ್ ಎಂದಿರುವಾಗ ಅಕಾರಕ್ಕೆ ಔರೂಪ ಏಚ್ ಪರವಾದುದರಿಂದ ಅ ಮತ್ತು ಔಗಳ ಸ್ಥಾನದಲ್ಲಿ ಕಂಠೋಷ್ಠಸ್ಥಾನ ಸಾಮ್ಯವುಳ್ಳ ಔಕಾರ ರೂಪವೃದ್ಧಿ, ಕೃಷ್ಣ್ + ಔ + ತ್ಕಣ್ಠ್ಯಂ = ಕೃಷ್ಣೌತ್ಕಣ್ಠ್ಯಮ್. ಏಚಿನಲ್ಲಿ ನಾಲ್ಕು ವರ್ಣಗಳಿರುವುದರಿಂದ ನಾಲ್ಕು ಉದಾಹರಣೆಗಳನ್ನು ತೋರಿಸಿರುತ್ತಾನೆ.

ಈಗ ಕೆಲವು ಸಂಧಿಗಳಿಗೆ ಅಪವಾದವಾಗಿ ವೃದ್ಧಿಸಂಧಿಯನ್ನೇ ಹೇಳುತ್ತಾನೆ.

(ವೃದ್ಧಿಸಂಧಿಯನ್ನು ಹೇಳುವ ವಿಶೇಷಸೂತ್ರ)

೩೪. ಏತ್ಯೈಧತ್ಯೂತ್ಸು ॥ ೬-೧-೮೯ ॥

ಅವರ್ಣಾದೇಜಾದ್ಯೋರೇತ್ಯೈಧತ್ಯೋರೂಠಿ ಚ ಪರೇ ವೃದ್ಧಿರೇಕಾದೇಶಃ ಸ್ಯಾತ್ । ಉಪೈತಿ । ಉಪೈಧತೇ । ಪ್ರಷ್ಠೌಹಃ । ಏಜಾದ್ಯೋಃ ಕಿಮ್ ? ಉಪೇತಃ । ಮಾ ಭವಾನ್ ಪ್ರೇದಿಧತ್ ॥

ಒಂದೇ ಪದವುಳ್ಳ ಸೂತ್ರ. ಏತಿಶ್ಚ ಏಧತಿಶ್ಚ ಊಠ್ಚ ಏತ್ಯೈಧತ್ಯೂತಃ ತೇಷು ಏತ್ಯೈಧತ್ಯೂತ್ಸು / ಇಲ್ಲಿ ಏತಿ ಏಧತಿ ಎಂಬುದು ಇಣ್ ಧಾತು, ಮತ್ತು ಏಧಧಾತು ಎಂದು ತಿಳಿಯಬೇಕು. "ಇಕ್‌ಶ್ತಿಪೌ ಧಾತುನಿರ್ದೇಶೇ " ಧಾತುವನ್ನು ಎಲ್ಲಿಯಾದರೂ ನಿರ್ದೇಶಮಾಡುವುದಾದರೆ ಇಕ್ ಪ್ರತ್ಯಯ (ಇ) ಹಚ್ಚಿಯಾಗಲೀ ಶ್ತಿಪ್ (ತಿಙಾದಿ) ಪ್ರತ್ಯಯಸೇರಿಸಿಯಾಗಲೀ ಹೇಳಬೇಕೆಂದಿರುವುದರಿಂದ ಇಲ್ಲಿ ಇಣ್

(ಇ) ಧಾತುವಿಗೂ ಏಧಧಾತುವಿಗೂ ಶ್ತಿಪ್ ಸೇರಿಸಿ ಹೇಳಿದೆ. "ವೃದ್ಧಿರೇಚಿ" ಸೂತ್ರದಿಂದ ಏಚಿ ಎಂಬುದು ಅನುವೃತ್ತವಾಗುತ್ತದೆ. ಅದು ಏತಿಏಧತಿಗೆ ವಿಶೇಷಣ. ಸಪ್ತಮ್ಯಂತವಾಗಿ ವರ್ಣವಾದುದರಿಂದ ವಿಶೇಷಣಮಾಡಿದಾಗ ಏಜೇ ಆದಿಯಾಗಿರುವ ಎಂಬ ಅರ್ಥಬರುತ್ತದೆ. ಊಠಿನಲ್ಲಿ ಸಂಭವಿಸದಿರುವುದರಿಂದ ವಿಶೇಷಣವಿಲ್ಲ. "ಆದ್ಗುಣಃ" ಎಂಬುದರಿಂದ ಆತ್ ಎಂಬ ಪಂಚಮ್ಯಂತಪದವು ಅನುವೃತ್ತವಾಗುತ್ತದೆ. " ಏಕಃ ಪೂರ್ವಪರಯೋಃ " ಎಂಬ ಅಧಿಕಾರವಿದೆ. **ಸೂತ್ರಾರ್ಥ**—ಅಕಾರಕ್ಕೆ ಏಜಾದಿಯಾದ ಇಣ್‌ಧಾತುವೂ ಏಧಧಾತುವೂ ಊಠಾದೇಶವೂ ಪರವಾದಾಗ ಪೂರ್ವಪರಗಳ ಸ್ಥಾನದಲ್ಲಿ ವೃದ್ಧಿಯು ಏಕಾದೇಶವಾಗಿ ಬರುತ್ತದೆ. ಉಪೈತಿ (ಹತ್ತಿರಕ್ಕೆ ಬರುತ್ತಾನೆ). ಇದು ಏಜಾದಿಯಾದ ಇಣ್‌ಧಾತು ಪರವಾದಾಗ ಉದಾಹರಣೆ. ಉಪ + ಏತಿ ಎಂದಿರುವಾಗ ಅಕಾರಕ್ಕೆ ಏಜಾದಿಯಾದ ಇಣ್ ಧಾತು ಪರವಾದುದರಿಂದ ಅಕಾರ ಏಕಾರಗಳಿಗೆ ಹಿಂದಿನಂತೆ ಸ್ಥಾನಸಾಮ್ಯದಿಂದ ಕಂಠತಾಲು ಸ್ಥಾನವುಳ್ಳ ಏಕಾರವೃದ್ಧಿಯು ಏಕಾದೇಶವಾಗಿ ಬರುತ್ತದೆ. ಉಪ್ + ಐ + ತಿ = ಉಪೈತಿ. ಉಪ + ಏಧತೇ ಎಂದಿರುವಾಗ ಅಕಾರಕ್ಕೆ ಏಜಾದಿಯಾದ ಏಧ ಧಾತುವು ಪರವಾದುದರಿಂದ ಅ ಮತ್ತು ಏ ಸ್ಥಾನದಲ್ಲಿ ಏಕಾರಾದೇಶವೃದ್ಧಿಯು ಏಕಾದೇಶವಾಗಿ ಬರುತ್ತದೆ. ಉಪ್ + ಐ + ಧತೇ = ಉಪೈಧತೇ. ಪ್ರಷ್ಠ + ಊಹಃ ಎಂಬಲ್ಲಿ ಊಹಃ ಎಂಬಲ್ಲಿರುವ ಊಕಾರವು ಊಠಿನ ಊಕಾರ ಪ್ರಷ್ಠಂ ವಹತಿ ಇತಿ ಪ್ರಷ್ಠವಾಟ್. ಪಳಗಿಸುವಾಗ ಕತ್ತಿನ ಮೇಲೆ ಇಡಲ್ಪಟ್ಟ ಮರವನ್ನು ಹೊತ್ತಿರುವ ಎತ್ತು. ವಹ = ಪ್ರಾಪಣೇ ವಹ ಧಾತುವಿಗೆ ಣ್ವಿ ಪ್ರತ್ಯಯ ಮಾಡಿ "ವಾಹ ಊಠ್" ಎಂಬುದರಿಂದ ಸಂಪ್ರಸಾರಣ ಊಠ್ ಮಾಡಿದರೆ ಊಹಃ (ಊಹ್ + ಶಸ್) ಎಂದಾಗುತ್ತದೆ. ಅಕಾರಕ್ಕೆ ಊಠ್ ಪರವಾದುದರಿಂದ ಅಕಾರಕ್ಕೂ ಊಕಾರಕ್ಕೂ ಕಂಠೋಷ್ಠಸ್ಥಾನ ಸಾಮ್ಯವಿರುವ ಔಕಾರ ವೃದ್ಧಿಯು ಏಕಾದೇಶವಾಗಿ ಬರುತ್ತದೆ. ಪ್ರಷ್ಠ್ + ಔ + ಹಃ = ಪ್ರಷ್ಠೌಹಃ. ಇನ್ನು ಮುಂದೆ ದಳಕೃತ್ಯವನ್ನು ತೋರಿಸುತ್ತಾನೆ. ಸೂತ್ರದಲ್ಲಿ ಒಂದೊಂದು ಪದಕ್ಕೂ ಪ್ರಯೋಜನವೇನು ? ಎಂದು ವಿಚಾರ ಮಾಡುವುದೇ ದಳಕೃತ್ಯವೆಂದೆನಿಸುತ್ತದೆ. ಪ್ರಕೃತ ಏಜಾದಿಯಾದ ಇಣ್ ಧಾತುವೂ ಏಧ ಧಾತುವೂ ಪರವಾಗಿರಬೇಕೆಂದು ಹೇಳಿದೆ. ಲಕ್ಷ್ಯದಲ್ಲಿ ಏತಿ ಏಧತೇ ಎಂದು ಏಜಾದಿಯಾಗಿಯೇ ಇದೆ. ಪುನಃ ಏಕೆ ಏಜಾದಿಯೆಂದು ಹೇಳಬೇಕು ? ವ್ಯರ್ಥವಲ್ಲವೇ ಅಂದರೆ ಉಪೇತಃ ಎಂಬಲ್ಲಿ ಪ್ರಯೋಜನ ಹೇಳುತ್ತಾನೆ. ಇಣ್ ಧಾತುವು ಎಲ್ಲಾ ಲಕಾರದಲ್ಲಿಯೂ ಎಲ್ಲಾ ವಚನದಲ್ಲಿಯೂ ಏಜಾದಿಯಾಗಿರುವುದಿಲ್ಲ. ಮೊದಲಿನ ಲಟ್ ಲಕಾರದದಲ್ಲಿಯೇ ಏತಿ, ಇತಃ ಯಂತಿ / ಏಷಿ, ಇಥಃ ಇಥ/ ಏಮಿ, ಇವಃ, ಇಮಃ ಎಂದು ರೂಪವಾಗುತ್ತದೆ. ಕೇವಲ ಏಕವಚನಗಳಲ್ಲಿ ಮಾತ್ರ ಏಕಾರಾದಿಯಾಗಿರುತ್ತದೆ. ಸೂತ್ರದಲ್ಲಿ ಕೇವಲ ಇಣ್ ಧಾತು ಪರವಾದಾಗ ವೃದ್ಧಿ ಎಂದು ಹೇಳಿದ್ದರೆ ಉಪ + ಇತಃ ಎಂಬಲ್ಲಿಯೂ ಇಣ್ ಧಾತು ಪರವಾದುದ

ರಿಂದ ವೃದ್ಧಿ ಬರಬೇಕಾಗುತ್ತದೆ. ಅದು ಇಷ್ಟವಲ್ಲ. ಆದುದರಿಂದ ಏಜಾದಿ ವಿಶೇಷಣವನ್ನು ಕೊಟ್ಟಿರುವುದು. ಪ್ರಕೃತ ಏಜಾದಿಯಾಗದಿರುವುದರಿಂದ ವೃದ್ಧಿ ಬರುವುದಿಲ್ಲ. "ಆದ್ಗುಣಃ" ಎಂಬುದರಿಂದ ಗುಣವು ಏಕಾದೇಶವಾಗಿ ಬಂದರೆ ಉಪೇತ್ಯ ಎಂದಾಗುತ್ತದೆ. ಮಾ ಭವಾನ್ ಪ್ರ+ಇಧಿಧತ್. (ತಾವು ವೃದ್ಧಿಯನ್ನು ಮಾಡಿಸಬೇಡಿ). ಇದು ಏಜಾದಿಯಾಗದ ಏಧಧಾತುವಿಗೆ ಉದಾಹರಣೆ. ಏಧಧಾತುವು ಎಲ್ಲಾ ಲಕಾರಗಳಲ್ಲಿ ಏಜಾದಿಯಾದರೂ ಕೆಲವುಕಡೆ ಆಗುವುದಿಲ್ಲ. ಪ್ರಕೃತ ಇಧಿಧತ್ ಎಂದು ಣಿಚ್ಚಿನಲ್ಲಿ ರೂಪವಾಗಿದೆ. ಏಧಧಾತುವಿಗೆ ಣಿಚ್‌ಪ್ರತ್ಯಯಬಂದು ಅದರ ಮೇಲೆ ಲುಙ್ ಲಕಾರ ಒಂದು ಪ್ರಥಮಪುರುಷಏಕವಚನದಲ್ಲಿ ಇಧಿಧತ್ ಎಂದಾಗುತ್ತದೆ. ಲುಙ್‌ನಲ್ಲಿ ಆಡಾಗಮ ಬಂದು ವೃದ್ಧಿಬಂದು ಐಧಿಧತ್ ಎಂದೇ ಆಗಬೇಕಾದುದು. ಆದರೆ ಮಾ ಎಂಬುದರ ಯೋಗವಿರುವಾಗ ಆಡಾಗಮ ಬರುವುದಿಲ್ಲವೆಂದು ಮುಂದೆ ಹೇಳುತ್ತಾನೆ. ಆದುದರಿಂದ ಇಧಿಧತ್ ಎಂದೇ ರೂಪವಾಗುತ್ತದೆ. ಸೂತ್ರದಲ್ಲಿ ಕೇವಲ ಏಧಧಾತುಸರವಾದಾಗ ವೃದ್ಧಿಹೇಳಿದ್ದರೆ ಪ್ರ+ಇಧಿಧತ್ ಎಂಬಲ್ಲಿಯೂ ವೃದ್ಧಿಬರಬೇಕಾಗುತ್ತದೆ. ಏಜಾದಿಏಧಧಾತುವೆಂದುದರಿಂದ ಇಲ್ಲಿ ವೃದ್ಧಿಬರುವುದಿಲ್ಲ. ಹಿಂದಿನಂತೆ ಗುಣ. ಏಜಾದಿವಿಶೇಷಣಕ್ಕೆ ಹೀಗೆ ಪ್ರಯೋಜನವಿರುವುದರಿಂದ ಅದು ಸಾರ್ಥಕವಾಗಿದೆ. ಇಲ್ಲಿ ಹೇಳಿದ ವೃದ್ಧಿಯು ಪರರೂಪಸಂಧಿಗೂ ಗುಣಸಂಧಿಗೂ ಅಪವಾದವಾಗಿದೆ. ಉಪ+ಏತಿ, ಉಪ+ಏಧತೇ ಎಂಬಲ್ಲಿ " ಏಜಾಪರರೂಪಮ್ " ಎಂಬುದರಿಂದ ಪರರೂಪವೂ ಪ್ರಷ್ಠ+ಊಹಃ ಎಂಬಲ್ಲಿ " ಆದ್ಗುಣಃ " ಎಂಬುದರಿಂದ ಗುಣವೂ ಪ್ರಾಪ್ತವಾದರೆ ಅವುಗಳಿಗೆ ಅಪವಾದವಾಗಿ ವೃದ್ಧಿಯನ್ನು ಹೇಳಿರುತ್ತಾನೆ.

(ವಿಶೇಷವೃದ್ಧಿಯನ್ನು ವಿಧಿಸುವ ವಾರ್ತಿಕ)

ವಾ॥ ಅಕ್ಷ್ನೌದೂಹಿನ್ಯಾಮುಪಸಂಖ್ಯಾನಮ್ ॥

ಅಕ್ಷ್ನೌಹಿಣೀ ಸೇನಾ ॥

ಅಕ್ಷ್ನೌತ್, ಊಹಿನ್ಯಾಂ, ಉಪಸಂಖ್ಯಾನಮ್ ॥ ತ್ರಿಪದವಾರ್ತಿಕ. ಅಕ್ಷ್ನ ಶಬ್ದಕ್ಕೆ ಊಹಿನೀ ಶಬ್ದ ಪರವಾದಾಗ ವೃದ್ಧಿಯು ಬರುತ್ತದೆ ಎಂದು ಇನ್ನೂ ಅಧಿಕವಾಗಿ ಹೇಳಬೇಕು. ಇಲ್ಲಿಯೂ ಗುಣವು ಪ್ರಾಪ್ತವಾದರೆ ಅಪವಾದವಾಗಿ ವೃದ್ಧಿಯನ್ನು ಹೇಳಿರುತ್ತಾನೆ ಅಕ್ಷ್ನೌಹಿಣೀ ಎಂಬುದು ಉದಾಹರಣೆ. ಸೇನಾ ಅರ್ಥ ವಿವರಣೆ. 21840 ರಥವೂ 21870 ಆನೆಗಳೂ, 65610 ಕುದುರೆಗಳೂ, 109350 ಕಾಲಾಳುಗಳೂ ಇರುವ ಸೇನೆಗೆ ಅಕ್ಷ್ನೌಹಿಣೀ ಎಂದು ಭಾರತದಲ್ಲಿ ವಿವೃತವಾಗಿದೆ. ಅಕ್ಷ್ನ+ಊಹಿನೀ ಎಂದಿರುವಾಗ ಅಕಾರಕ್ಕೂ ಊಕಾರಕ್ಕೂ ವೃದ್ಧಿ ಔಕಾರವು ಏಕಾದೇಶವಾಗಿ ಬಂದರೆ ಅಕ್ಷ್ನೌಹಿಣೀ ಎಂದು ರೂಪವಾಗುತ್ತದೆ.

(ವಿಶೇಷ ವೃದ್ಧಿಯನ್ನು ವಿಧಿಸುವ ವಾರ್ತಿಕ)

ವಾ॥ ಪ್ಷ್ಯಾದೂಹೋಢೋಢ್ಯೈಷ್ಯೈಷು ॥

ಪ್ಷ್ಯಾತ್, ಊಹೋಢೋಢ್ಯೈಷ್ಯೈಷು ॥ ದ್ವಿಪದವಾರ್ತಿಕ. ಪ್ರ ಎಂಬ ಉಪಸರ್ಗದ ಪರದಲ್ಲಿ ಊಹ, ಊಢ್ಷ, ಊಢಿ, ಏಷ, ಏಷ್ಯ, ಇಷ್ಟು ಶಬ್ದಗಳು ಪರವಾದರೆ ಪೂರ್ವಪರ ಸ್ಥಾನಗಳಲ್ಲಿ ವೃದ್ಧಿಯು ಏಕಾದೇಶವಾಗಿ ಬರುತ್ತದೆ. ಈ ವಾರ್ತಿಕವೂ ಗುಣಪರರೂಪಗಳಿಗೆ ಬಾಧಕವಾಗಿದೆ. ಪ್ರ+ಊಹಃ ಎಂದಿರುವಾಗ ಊಕಾರಕ್ಕೆ ವೃದ್ಧಿ ಏಕಾದೇಶವಾಗಿ ಬಂದರೆ ಪ್ಷ್ಯಾಹಃ ಎಂದಾಗುತ್ತದೆ. (ಅತಿಶಯ ತರ್ಕವುಳ್ಳವನು) ಪ್ರ+ಊಢ್ಷಃ ಎಂದಿರುವಾಗ ಹಿಂದಿನಂತೇ ವೃದ್ಧಿಬಂದರೆ ಪ್ಷ್ಯಾಢ್ಷಃ ಎಂದಾಗುತ್ತದೆ. (ಪುಷ್ಟನಾದವನು) ಹಾಗೆಯೇ ಪ್ರ+ಊಢಿಃ=ಪ್ಷ್ಯಾಢಿಃ. (ಅತಿಶಯವಾದ ವೃದ್ಧಿ) ಪ್ರ+ಏಷಃ ಎಂದಿರುವಾಗ ಅ+ಏ ಇವುಗಳಿಗೆ ವೃದ್ಧಿ ಐಕಾರ ಬಂದರೆ ಪ್ಷ್ಯೈಷಃ. (ಕಳುಹಿಸುವಿಕೆ) ಹಾಗೆಯೇ ಪ್ರ+ಏಷ್ಯಃ ಎಂಬಲ್ಲಿ ವೃದ್ಧಿ ಐಕಾರ ಬಂದರೆ ಪ್ಷ್ಯೈಷ್ಯಃ (ಸೇವಕನು). ಮೂರು (ಮೊದಲು) ಕಡೆಯಲ್ಲಿ ಗುಣವೂ ಕೊನೆಯ ಎರಡರಲ್ಲಿ ಪರರೂಪವೂ ಪ್ರಾಪ್ತವಾದರೆ ಅಪವಾದವಾಗಿ ವೃದ್ಧಿಹೇಳಿರುತ್ತಾನೆ.

(ತೃತೀಯಾಸಮಾಸದಲ್ಲಿ ವೃದ್ಧಿವಿಧಾಯಕವಾರ್ತಿಕ)

ವಾ॥ ಋತೇ ಚ ತೃತೀಯಾ ಸಮಾಸೇ ॥

ಸುಖೇನ ಋತಃ ಸುಖಾರ್ತಃ । ತೃತೀಯೇತಿ ಕಿಮ್? ಪರಮರ್ತಃ । ತ್ರಿಪದವಾರ್ತಿಕ. ತೃತೀಯಾಸಮಾಸದಲ್ಲಿ ಅಕಾರದದೆಸೆಯಿಂದ ಋತವೆಂಬ ಶಬ್ದ ಪರವಾದಾಗ ಪೂರ್ವಪರ ಅಚ್‌ಗಳ (ಅ+ಋ) ಸ್ಥಾನದಲ್ಲಿ ವೃದ್ಧಿಯು ಏಕಾದೇಶವಾಗಿ ಒರುತ್ತದೆ. ಇದೂ ಗುಣಕ್ಕೆ ಅಪವಾದ. ಸುಖೇನ ಋತಃ ಎಂದುದು ತೃತೀಯಾಸಮಾಸದ ವಿಗ್ರಹ. ಸುಖ+ಋತಃ ಎಂದಿರುವಾಗ ಅಕಾರ ಋಕಾರಕ್ಕೆ ವೃದ್ಧಿಯು ಏಕಾದೇಶವಾಗಿ ಬರುತ್ತದೆ. ಸುಖ್+ಆರ್+ತಃ=ಸುಖಾರ್ತಃ ! ತೃತೀಯಾಸಮಾಸದಲ್ಲಿ ಎಂದುದೇಕೆ ? ತೃತೀಯಾಸಮಾಸದಲ್ಲಿ ಎಂದು ಹೇಳದಿದ್ದರೆ ಋತಶಬ್ದ ಪರವಾದಾಗ ಎಲ್ಲಾ ಕಡೆಯಲ್ಲಿಯೂ ಬರಬೇಕಾಗುತ್ತದೆ. ಪರಮಶ್ಚಾಸೌ ಋತಶ್ಚ ಪರಮರ್ತಃ । ಇದು ಕರ್ಮಧಾರಯಸಮಾಸ. ಆದುದರಿಂದ ಪರಮ+ಋತಃ ಎಂಬಲ್ಲಿ ವೃದ್ಧಿಬರುವುದಿಲ್ಲ. " ಆದ್ಗುಣಃ " ಎಂಬುದರಿಂದ ಗುಣಬಂದರೆ (ಅರ್) ಪರಮರ್ತಃ ಎಂದಾಗುತ್ತದೆ.

ವಾ॥ ಪ್ರವತ್ಸತರಕಂಬಲವಸನಾರ್ಣದಶಾನಾಮೃಣೇ ॥

ಪ್ರಾರ್ಣಮ್ । ವತ್ಸತರಾರ್ಣಮ್ ಇತ್ಯಾದಿ.

ದ್ವಿಪದ ವಾರ್ತಿಕ. ಪ್ರವತ್ಸತರಕಂಬಲವಸನಾರ್ಣದಶಾನಾಂ ಎಂಬಲ್ಲಿ ಪಂಚಮ್ಯರ್ಥದಲ್ಲಿ ಷಷ್ಠೀಬಂದಿದೆ. ಪ್ರ, ವತ್ಸತರ, ಕಂಬಲ, ವಸನ, ಋಣ, ದಶ, ಈ ಶಬ್ದಗಳ

ಪರದಲ್ಲಿ ಋಣಶಬ್ದ ಬಂದರೆ ಪೂರ್ವಪರ ಅಚ್‌ಗಳಸ್ಥಾನದಲ್ಲಿ ವೃದ್ಧಿಯು ಏಕಾದೇಶವಾಗಿ ಬರುತ್ತದೆ. ಇದೂ ಗುಣಕ್ಕೆ ಅಪವಾದ. ಪ್ರ+ಋಣಂ ಎಂದಿರುವಾಗ ಹಿಂದಿನಂತೆ ವೃದ್ಧಿ. (ಆರ್) :ಪ್ರಾರ್ಣಮ್. ಅಧಿಕಸಾಲ. ವತ್ಸತರ+ಋಣಂ= ವತ್ಸತರಾರ್ಣಮ್ ಕರುವಿಗೋಸ್ಕರ ಮಾಡಿದ ಸಾಲ. ಕಂಬಲ+ಋಣಂ= ಕಂಬಲಾರ್ಣಮ್. ಕಂಬಳಿಗೋಸ್ಕರಸಾಲ. ವಸನ+ಋಣಂ=ವಸನಾರ್ಣಮ್. ವಸ್ತ್ರಕ್ಕೋಸ್ಕರಸಾಲ. ಋಣ+ಋಣಂ=ಋಣಾರ್ಣಮ್. ಒಂದುಸಾಲತೀರಿಸಲು ಮಾಡಿದ ಇನ್ನೊಂದುಸಾಲ. ದಶ+ಋಣ=ದಶಾರ್ಣಃ ಒಂದುದೇಶ. ದಶಾರ್ಣಾ ಎಂದು ಒಂದು ನದಿಯೂ ಇದೆ.

(ಉಪಸರ್ಗ ಸಂಜ್ಞಾವಿಧಾಯಕಸೂತ್ರ)

೩೫. ಉಪಸರ್ಗಾಃ ಕ್ರಿಯಾಯೋಗೇ ॥ ೧-೪-೫೯ ॥

1 2
ಪ್ರಾದಯಃ ಕ್ರಿಯಾಯೋಗೇ ಉಪಸರ್ಗಸಂಜ್ಞಾಃ ಸ್ಯುಃ । ಪ್ರ ಪರಾ
3 4 5 6 7 8 9 10 11 12
ಅಪ ಸಮ್ ಅನು ಅವ ನಿಸ್ ನಿರ್ ದುಸ್ ದುರ್ ವಿ ಆಜಿ
13 14 15 16 17 18 19 20 21 22
ನಿ ಅಧಿ ಅಪಿ ಅತಿ ಸು ಉತ್ ಅಭಿ ಪ್ರತಿ ಪರಿ ಉಪ ಏತೇ ಪ್ರಾದಯಃ ॥

ದ್ವಿಪದ ಸೂತ್ರ. ಪ್ರಾದಯಃ ಎಂಬ ಹಿಂದಿನಸೂತ್ರವು ಅನುವೃತ್ತವಾಗುತ್ತದೆ. ಪ್ರಾದಿಗಳು ಕ್ರಿಯಾಸಂಬಂಧವಿರುವಾಗ ಉಪಸರ್ಗವೆಂಬಸಂಜ್ಞೆಯನ್ನು ಹೊಂದುತ್ತವೆ. ಪ್ರಮುಂತಾದವುಗಳು ಕ್ರಿಯೆಯೊಡನೆ ಅನ್ವಯಹೊಂದುವಾಗ ಮಾತ್ರ ಅವುಗಳಿಗೆ ಉಪಸರ್ಗಸಂಜ್ಞೆ. ಪ್ರಮುಂತಾದವುಗಳು ಇಪ್ಪತ್ತೆರಡು. ಮುಂದೆ ವಿಶೇಷವೃದ್ಧಿ ವಿಧಾನ ಮಾಡಲು ಈ ಉಪಸರ್ಗಸಂಜ್ಞೆಯನ್ನು ಹೇಳಿರುತ್ತಾನೆ.

(ಧಾತುಸಂಜ್ಞಾವಿಧಾಯಕಸೂತ್ರ)

೩೬. ಭೂವಾದಯೋ ಧಾತವಃ ॥ ೧-೩-೧ ॥

ಕ್ರಿಯಾವಾಚಿನೋ ಭ್ವಾದಯೋ ಧಾತುಸಂಜ್ಞಾಃ ಸ್ಯುಃ ॥

ಭೂವಾದಯಃ ಧಾತವಃ ॥ ದ್ವಿಪದ ಸೂತ್ರ. ಭೂಶ್ಚ ವಾಶ್ಚ ಭೂವೌ । ಆದಿಶ್ಚ ಆದಿಶ್ಚ ಆದೀ। ಭೂವೌ ಆದೀ ಯೇಷಾಂ ತೇ ಭೂವಾದಯಃ । ಆದಿಶ್ಚ ಆದಿಶ್ಚ ಎಂಬಲ್ಲಿ ಒಂದು ಆದಿಶಬ್ದ ಮೊದಲಾದವು ಎಂಬರ್ಥವನ್ನೂ ಎರಡನೇ ಆದಿ ಶಬ್ದವು ಸಾದೃಶ್ಯ ಎಂಬರ್ಥವನ್ನೂ ಕೊಡುತ್ತದೆ. ಭೂ ಎಂಬಲ್ಲಿ ಮೊದಲನೆಯದಕ್ಕೂ ವಾ ಎಂಬಲ್ಲಿ

ಎರಡನೆಯದಕ್ಕೂ ಅನ್ವಯ. ಭೂ ಮೊದಲಾದವುಗಳು ವಾಸದೃಶಗಳು ಎಂದರ್ಥವಾಗುತ್ತದೆ. ಕ್ರಿಯಾ ಹೇಳುವುದರಲ್ಲಿ ವಾಸಾದೃಶ್ಯ. ಆಗ ವಾಸದೃಶವೆಂದರೆ ಕ್ರಿಯಾವಾಚಕವೆಂದರ್ಥವಾಗುತ್ತದೆ. **ಸೂತ್ರಾರ್ಥ.** ಕ್ರಿಯಾವಾಚಕಗಳಾದ ಭೂ ಮುಂತಾದವುಗಳು ಧಾತು ಎಂಬ ಸಂಜ್ಞೆಯನ್ನು ಹೊಂದುತ್ತವೆ. ವಾ ಎಂಬುದು ಎರಡು ರೀತಿಯಾಗಿದೆ. ಒಂದು ವಾ = ಗತಿಗಂಧನಯೋಃ ಎಂಬ ಧಾತು. ಇನ್ನೊಂದು ವಿಕಲ್ಪಾರ್ಥಕವಾದ ಅವ್ಯಯ. ಇಲ್ಲಿ ಭೂ ಎಂಬುದರೊಡನೆ ಹೇಳಿದುದರಿಂದ ವಿಕಲ್ಪಾರ್ಥಕ ಅವ್ಯಯವನ್ನು ತೆಗೆದುಕೊಳ್ಳಬಾರದು. ಹಾಗೆಯೇ ಭೂ ಎಂಬುದೂ ಎರಡು ರೀತಿಯಾಗಿದೆ. ಒಂದು ಭೂಮಿವಾಚಕ ಭೂ ಶಬ್ದ. ಇನ್ನೊಂದು ಭೂ = ಸತ್ತಾಯಾಂ ಎಂದು ಕ್ರಿಯಾವಾಚಿ ಭೂ ಶಬ್ದ. ಇಲ್ಲಿ ಕ್ರಿಯಾವಾಚಕ ವಾ ಎಂಬುದರೊಡನೆ ಹೇಳಿದುದರಿಂದ ಕ್ರಿಯಾವಾಚಕ ಭೂ ಎಂಬುದನ್ನೇ ತೆಗೆದುಕೊಳ್ಳಬೇಕು. ಭೂ ಮುಂತಾದವುಗಳು ಧಾತು ಪಾಠದಲ್ಲಿ ಪಠಿತವಾಗಿವೆ. ಪರಸ್ಪರ ಸಾಹಚರ್ಯದಿಂದ ಕ್ರಿಯಾವಾಚಕಗಳೆಂದು ಲಬ್ಧವಾಗಿದೆ.

(ಧಾತೂಪಸರ್ಗಗಳಲ್ಲಿ ವೃದ್ಧಿವಿಧಾಯಕ ಸೂತ್ರ)

೩೭. ಉಪಸರ್ಗಾದೃತಿ ಧಾತೌ ॥ ೬-೧-೯೧ ॥

ಅವರ್ಣಾಂತಾದುಪಸರ್ಗಾದೃಕಾರಾದೌ ಧಾತೌ ಪರೇ ವೃದ್ಧಿರೇಕಾದೇಶಃ ಸ್ಯಾತ್ ॥ ಪ್ರಾರ್ಚ್ಛತಿ ॥

ಉಪಸರ್ಗಾತ್, ಋತಿ, ಧಾತೌ ॥ ತ್ರಿಪದ ಸೂತ್ರ. “ ಆದ್ಗುಣಃ ” ಎಂಬುದರಿಂದ “ ಆತ್ ” ಎಂಬುದು ಅನುವೃತ್ತವಾಗುತ್ತದೆ. ಅದು ಉಪಸರ್ಗಾತ್ ಎಂಬುದಕ್ಕೆ ವಿಶೇಷಣ. “ ಯೇನ ವಿಧಿಸ್ತದಂತಸ್ಯ ” ಎಂಬ ಪರಿಭಾಷೆಯಿಂದ ವಿಶೇಷಣವಾದುದರಿಂದ ಅಕಾರವೇ ಅಂತವಾಗಿರುವುದು ಎಂಬರ್ಥವಾಗುತ್ತದೆ. ಋತಿ ಎಂಬುದು ಧಾತುವಿಗೆ ವಿಶೇಷಣ. ಋತಿ ಎಂಬುದು ಸಪ್ತಮ್ಯಂತವಾಗಿ ವರ್ಣವಾದುದರಿಂದ “ ಯಸ್ಮಿನ್ವಿಧಿಸ್ತದಾದಾವಲ್ಗ್ರಹಣೇ ” ಎಂಬ ಪರಿಭಾಷೆಯಿಂದ ಅದೇ ಆದಿಯಾಗಿರುವುದು ಎಂಬರ್ಥವಾಗುತ್ತದೆ. ಧಾತೌ ಎಂಬುದೂ ಸಪ್ತಮೀ ಆದುದರಿಂದ ಋಕಾರಾದಿಯಾದ ಧಾತುವು ಪರವಾದಾಗ ಎಂದರ್ಥ. “ ವೃದ್ಧಿರೇಚಿ ” ಸೂತ್ರದಿಂದ ವೃದ್ಧಿಃ ಎಂಬುದು ಅನುವೃತ್ತವಾಗುತ್ತದೆ. “ ಏಕಃ ಪೂರ್ವಪರಯೋಃ ” ಎಂಬುದು ಅಧಿಕಾರ. **ಸೂತ್ರಾರ್ಥ.** ಅಕಾರಾಂತವಾದ ಉಪಸರ್ಗದ ಪರದಲ್ಲಿ ಋಕಾರಾದಿಯಾದ ಧಾತು ವಿದ್ದರೆ ಪೂರ್ವಪರ ಅಚ್‌ಗಳ ಸ್ಥಾನದಲ್ಲಿ ವೃದ್ಧಿಯು ಏಕಾದೇಶವಾಗಿ ಬರುತ್ತದೆ. ಇದೂ ಗುಣಕ್ಕೆ ಅಪವಾದ. ಪ್ರ+ಋಚ್ಛತಿ. ಪ್ರ ಎಂಬುದು ಅವರ್ಣಾಂತವಾದ ಉಪಸರ್ಗ. ಋಚ್ಛತಿ ಎಂಬುದು ಋಕಾರಾದಿಯಾದ ಧಾತು. ಆದುದರಿಂದ ಅಕಾರ ಋಕಾರ ಸ್ಥಾನದಲ್ಲಿ ವೃದ್ಧಿಯು ಬರುತ್ತದೆ. ಋಕಾರದ ಸ್ಥಾನದಲ್ಲಿ ಬರುವುದರಿಂದ

ಹಿಂದಿನಂತೆ ಅ ಎಂಬುದು ರ ಪರವಾಗಿ ಬರುತ್ತದೆ. ಪ್ರ+ಆರ್+ಚ್ಛತಿ=ಪ್ರಾರ್ಚ್ಛತಿ. ಚನ್ನಾಗಿ ಹೋಗುತ್ತಾನೆ.

(ಪರರೂಪಸಂಧಿವಿಧಾಯಕ ಸೂತ್ರ)

೩೮. ಏಜ್ ಪರರೂಪಮ್ ॥ ೬-೧-೯೪ ॥

ಆದುಪಸರ್ಗಾದೇಜಾದೌ ಧಾತೌ ಪರರೂಪಮೇಕಾದೇಶಃ ಸ್ಯಾತ್ । ಪ್ರೇಜತೇ । ಉಪೋಷತಿ ॥

ದ್ವಿಪದ ಸೂತ್ರ. "ಉಪಸರ್ಗಾದೃತಿಧಾತೌ" ಎಂಬ ಸೂತ್ರದಿಂದ ಉಪಸರ್ಗಾತ್, ಧಾತೌ ಎಂಬುದು ಅನುವೃತ್ತವಾಗುತ್ತದೆ. "ಆದ್ಗುಣಃ" ಎಂಬುದರಿಂದ ಅಚ್ ಎಂಬುದು ಅನುವೃತ್ತವಾಗಿ ಉಪಸರ್ಗಕ್ಕೆ ವಿಶೇಷಣವಾಮದರಿಂದ ಅಕಾರಾಂತವಾದ ಉಪಸರ್ಗವೆಂದಾಗುತ್ತದೆ. ಏಜ್ ಎಂಬುದು ಧಾತೌ ಎಂಬ ಸಪ್ತಮ್ಯಂತಕ್ಕೆ ವಿಶೇಷಣವಾಗುವುದರಿಂದ "ಯಸ್ಮಿನ್ವಿಧಿಸ್ತದಾದಾವಲ್ಗ್ರಹಣೇ" ಎಂಬ ಪರಿಭಾಷೆಯಿಂದ ಏಜಾದಿಯಾದ ಧಾತುಪರವಾದಾಗ ಎಂದರ್ಥವಾಗುತ್ತದೆ. "ಏಕಃಪೂರ್ವಪರಯೋಃ" ಎಂಬುದು ಅಧಿಕಾರ. **ಸೂತ್ರಾರ್ಥ.** ಅವರ್ಣಾಂತವಾದ ಉಪಸರ್ಗಕ್ಕೆ ಏಜ್ (ಏ ಓ) ಆದಿಯಾದ ಧಾತುವು ಪರವಾದಾಗ ಪೂರ್ವಪರಗಳ ಸ್ಥಾನದಲ್ಲಿ ಪರರೂಪವು ಏಕಾದೇಶವಾಗಿ ಬರುತ್ತದೆ. ಪ್ರ+ಏಜತೇ. ಏಜೃ=ದೀಪ್ತೌ. ಧಾತು. ಪ್ರ ಎಂಬುದು ಅವರ್ಣಾಂತವಾದ ಉಪಸರ್ಗ. ಏಜತೇ ಎಂಬುದು ಏಜಾದಿಯಾದ ಧಾತು. ಅಕಾರಕ್ಕೂ ಏಕಾರಕ್ಕೂ ಒಟ್ಟಿಗೆ ಪರದರೂಪ ಏಕಾರವು ಆದೇಶವಾಗಿ ಬರುತ್ತದೆ. ಪ್ರ್+ಏ+ಜತೆ=ಪ್ರೇಜತೇ ॥ ಹೆಚ್ಚಾಗಿ ಪ್ರಕಾಶಿಸುತ್ತಾನೆ ಎಂದರ್ಥ. ಉಪ+ಓಷತಿ ಉಷ ದಾಹೇ ಧಾತು. ಲಟಿನಲ್ಲಿ ಓಷತಿ ಎಂದು ರೂಪವಾಗುತ್ತದೆ. ಅಕಾರ ಓಕಾರಕ್ಕೆ ಪರರೂಪವಾದ ಓಕಾರ ಒಂದೇ ಆದೇಶ ಬರುತ್ತದೆ. ಉಪ್ + ಓ+ಷತಿ =ಉಪೋಷತಿ. ಇಲ್ಲಿ ಎರಡು ಕಡೆಯಲ್ಲಿಯೂ ವೃದ್ಧಿಯು ಪ್ರಾಪ್ತವಾದರೆ ಅದಕ್ಕೆ ಅಪವಾದವಾಗಿ ಪರರೂಪವನ್ನು ಹೇಳಿರುತ್ತಾನೆ.

(ಟಿ ಸಂಜ್ಞಾ ವಿಧಾಯಕ ಸೂತ್ರ)

೩೯. ಅಚೋನ್ತ್ಯಾದಿ ಟಿ ॥೧-೧-೬೪॥

ಅಚಾಂ ಮಧ್ಯೇ ಯೋನ್ತ್ಯಃ ಸ ಆದಿರ್ಯಸ್ಯ ತಟ್ಟಿಸಂಜ್ಞಂ ಸ್ಯಾತ್ ।

ಅಚಃ, ಅಂತ್ಯಾದಿ, ಟಿ ತ್ರಿಪದ ಸೂತ್ರ. ಅಚಃ ಎಂಬುದು ನಿರ್ಧಾರಣಾರ್ಥದಲ್ಲಿ ಷಷ್ಠೀ. ಅಚ್ ಗಳ ಮಧ್ಯೆ ಅಥವಾ ಪೈಕಿ ಎಂದರ್ಥ. ಜಾತ್ಯೈಕವಚನ.

ಏಕವಚನವಿದ್ದರೂ ಬಹುವಚನಾರ್ಥವನ್ನು ಹೇಳಬೇಕು. ಅಂತೇ ಭವಃ ಅಂತ್ಯಃ। ಅಂತ್ಯಃ ಆದಿಃ ಯಸ್ಯ ತತ್ ಆಂತ್ಯಾದಿ. **ಸೂತ್ರಾರ್ಥ.** ಅಚ್‌ಗಳ ಮಧ್ಯದಲ್ಲಿ ಯಾವುದು ಅಂತ್ಯವೋ ಅದೇ ಆದಿಯಾಗಿರುವ ಸಮುದಾಯಕ್ಕೆ ಟಿ ಎಂಬ ಸಂಜ್ಞೆ ಬರುತ್ತದೆ. ಅಜ ಎಂಬಲ್ಲಿ ಎರಡು ಅಚ್‌ಗಳು ಇದ್ದರೆ ಅಂತ್ಯವಾದ ಅಚ್ ಜಕಾರದ ಮೇಲಿರುವ ಅಕಾರ. ಅದೇ ಆದಿಯಾಗಿರುವ ಸಮುದಾಯವೆಂದರೆ ಇಲ್ಲಿ ಬೇರೆ ಮುಂದೆ ಇಲ್ಲದಿರುವುದರಿಂದ ಅದೇ ಟಿ ಯಾಗುತ್ತದೆ. ಮನಸ್ ಎಂಬಲ್ಲಿ ಕೊನೆಯ ಅಚ್ ನಕಾರದ ಮೇಲಿರುವ ಅಕಾರ. ಅದೇ ಆದಿಯಾಗಿರುವ ಸಮುದಾಯವೆಂದರೆ ಅಸ್. ಆದುದರಿಂದ ಅಲ್ಲಿ ಅಸ್ ಟಿ ಯಾಗುತ್ತದೆ. ಹೀಗೆ ಅಜಂತ ಶಬ್ದದಲ್ಲಿ ಕೊನೆಯ ಅಚ್ ಟಿ ಯೆಂದೂ ಹಲಂತ ಶಬ್ದದಲ್ಲಿ ಕೊನೆಯ ಅಚ್ ಮತ್ತು ಹಲ್ ಸೇರಿ ಟಿ ಯಾಗುತ್ತದೆಯೆಂದೂ ತಿಳಿಯಬೇಕು. ಈ ಟಿ ಸಂಜ್ಞೆಗೆ ಪ್ರಯೋಜನವನ್ನು ಹೇಳುತ್ತಾನೆ.

(ಪರರೂಪವಿಧಾಯಕ ವಾರ್ತಿಕ)

ವಾ॥ ಶಕನ್ಧ್ವಾದಿಷು ಪರರೂಪಂ ವಾಚ್ಯಂ ॥

ತಚ್ಚ ಟೇಃ । ಶಕಂಧುಃ । ಕರ್ಕಂಧುಃ । ಮನೀಷಾ । ಆಕೃತಿಗಣೋऽಯಮ್ । ಮಾರ್ತಂಡಃ ॥

ತ್ರಿಪದ ವಾರ್ತಿಕ. ಶಕಂಧು ಶಬ್ದವೇ ಆದಿಯಾಗಿರುವುದು ಒಂದು ಗಣ. ಶಕಂಧು ಮುಂತಾದ ಶಬ್ದಗಳ ವಿಷಯದಲ್ಲಿ ಆಯಾಯ ರೂಪಗಳು ಸಿದ್ಧವಾಗಲು ಅಲ್ಲಿ ಪೂರ್ವಪರಗಳ ಸ್ಥಾನದಲ್ಲಿ ಪರರೂಪವನ್ನು ಹೇಳಬೇಕು. ಯಾವ ಪೂರ್ವಪರಗಳು ಎಂದು ಆಕಾಂಕ್ಷೆ ಬಂದರೆ ತಚ್ಚ ಟೇಃ ಎಂದಿರುತ್ತಾನೆ. ಆ ಪರರೂಪವು ಪೂರ್ವ ಶಬ್ದದ ಟಿಗೂ ಪರ ಶಬ್ದದ ಆದಿ ಅಚ್ಚಿಗೂ ಬರುತ್ತದೆ. ಆಗ ಶಕ ಮುಂತಾದವುಗಳ ಟಿಗೆ ಅಂಧು ಮುಂತಾದವುಗಳ ಅಚ್ಚಿಗೂ ಸೇರಿ ಪರರೂಪವು ಏಕಾದೇಶವಾಗಿ ಬರುತ್ತದೆ ಎಂದು ನಿಶ್ಚಿತವಾದ ಅರ್ಥ ಸಿಗುತ್ತದೆ. ಶಕಾನಾಂ ಅಂಧುಃ ಶಕಂಧುಃ ಶಕದೇಶದವರ ಬಾವಿ. ಶಕ+ಅಂಧುಃ ಎಂದಿರುವಾಗ ಶಕ ಎಂಬಲ್ಲಿ ಟಿ ಎಂದರೆ ಕೊನೆಯ ಅಕಾರ. ಅದಕ್ಕೂ ಅಂಧು ಎಂಬಲ್ಲಿರುವ ಅಕಾರಕ್ಕೂ ಪರದ ರೂಪವಾದ ಅಕಾರವೇ ಏಕಾದೇಶವಾಗಿ ಬಂದರೆ ಶಕಂಧುಃ ಎಂದಾಗುತ್ತದೆ. ಇಲ್ಲಿ ಸವರ್ಣದೀರ್ಘ ಪ್ರಾಪ್ತವಾದರೆ ಅದಕ್ಕೆ ಅಪವಾದವಾಗಿ ಪರರೂಪವನ್ನು ಹೇಳಿರುತ್ತಾರೆ. ಹೀಗೆಯೇ ಕರ್ಕ+ಅಂಧುಃ ಎಂದಿರುವಾಗ ಪರರೂಪ ಬಂದರೆ ಕರ್ಕಂಧುಃ ಎಂದಾಗುತ್ತದೆ. ಮನಸ್+ಈಷಾ ಎಂದಿರುವಾಗ ಇಲ್ಲಿ ಟಿ ಅಸ್. ಇದಕ್ಕೂ ಈಕಾರಕ್ಕೂ ಪರದ ಈ ಕಾರವು ಏಕಾದೇಶವಾಗಿ ಬಂದರೆ ಮನ್+ಈ+ಷಾ, ಮನೀಷಾ ಎಂದಾಗುತ್ತದೆ.

ಶಕಂಧು ಮುಂತಾದವುಗಳನ್ನು ಇಷ್ಟೇ ಎಂದು ನಿರ್ಧರಿಸಲು ಆಗುವುದಿಲ್ಲ. ಆದುದರಿಂದ ಕೆಲವನ್ನು ನಿರ್ದೇಶಿಸಿ ಇದರಂತೇ ಇತರ ಸಂಧಿ ಬರುವಲ್ಲಿ ಪರರೂಪವನ್ನು ಹೇಳಿದ್ದಕ್ಕೆ ಆ ಶಬ್ದಗಳನ್ನೆಲ್ಲಾ ಈ ಗಣದಲ್ಲಿ ಸೇರಿದವುಗಳೆಂದು ತಿಳಿಯಬೇಕು. ಆಕೃತ್ಯಾ ಗಣ್ಯತೇ ಇತಿ ಆಕೃತಿಗಣಃ । ಸ್ವರೂಪದಿಂದ ತಿಳಿಯಲ್ಪಡುವವುಗಳು. ಯಾವ ಶಬ್ದದಲ್ಲಿ ಪ್ರ ರೂಪವು ತೋರುತ್ತದೆಯೋ ಅದನ್ನು ವಿಧಿಸುವ ಸೂತ್ರವೂ ಇರುವುದಿಲ್ಲವೋ ಅಂಥವು ಗಳು ಈ ಗಣದಲ್ಲಿ ಸೇರಿವೆ ಎಂದು ತಿಳಿಯಬೇಕು. ಇನ್ನು ಮುಂದೆ ಆಕೃತಿ ಗಣವೆಂದರೆ ಹೀಗೆ ತಿಳಿಯಬೇಕು. ಪ್ರಕೃತ ಮಾರ್ತಂಡ ಎಂಬ ಶಬ್ದವು ಶಕಂಧ್ವಾದಿ ಗಣದಲ್ಲಿ ಪಠಿತವಾಗಿಲ್ಲ. ಆದರೆ ಅಲ್ಲಿ ಮಾರ್ತ+ಅಂಡಃ ಎಂದಿರುವಾಗ ಪರರೂಪವು ಬಂದಿದೆ. ಇದು ಬೇರೆ ಯಾವ ಸೂತ್ರದಿಂದಲೂ ಸಿದ್ಧವಾಗುವುದಿಲ್ಲ. ಆದುದರಿಂದ ಶಕಂಧ್ವಾದಿ ಗಣದಲ್ಲಿ ಸೇರಿರುತ್ತದೆ ಎಂದು ಊಹಿಸಬೇಕು. ಮಾರ್ತಾಂಡಃ ಎಂದು ತಿಳಿಯಬೇಕು. ದೀರ್ಘ ಹೇಳುತ್ತಾರೆ ಇದು ತಪ್ಪು. ಮಾರ್ತಂಡನೆಂದರೆ ಸೂರ್ಯ.

(ಪರರೂಪವಿಧಾಯಕ ಸೂತ್ರ)

೪೦. ಓಮಾಜಿ ಶೋಶ್ಚ ॥೬-೧-೧೫॥

ಓಮಿ ಆಜ್ ಚಾತ್ಪರೇ ಪರರೂಪಮೇಕಾದೇಶಃ ಸ್ಯಾತ್ । ಶಿವಾ ಯೋಂ ನಮಃ । ಶಿವ ಏಹಿ ॥

ಓಮಾಜಿ ಶೋಃ ಚ॥ ದ್ವಿಪದ ಸೂತ್ರ. "ಏಜ್ ಪರರೂಪಂ" ಎಂಬುದರಿಂದ "ಪರರೂಪಂ" "ಆತ್ ಗುಣಃ" ಎಂಬುದರಿಂದ "ಆತ್" "ಏಕಃ ಪೂರ್ವ ಪರಯೋಃ" ಎಂಬುದುದರಿಂದ " ಪೂರ್ವಪರಯೋಃ " ಪದಗಳು ಅನುವೃತ್ತವಾಗುತ್ತವೆ. ಓಮ್ ಚ ಅಜ್ ಚ ಓಮಾಜೌತಯೋಃ ಓಮಾಜಿ ಶೋಃ । ಸಪ್ತಮೀ ದ್ವಿವಚನ. ಅಕಾರಕ್ಕೆ ಓಮ್ ಮತ್ತು ಆಜ್ ಪರವಾದಾಗ ಪೂರ್ವಪರಸ್ಥಾನಗಳಲ್ಲಿ ಪರರೂಪವು ಏಕಾದೇಶವಾಗಿ ಬರುತ್ತದೆ. ಇದು ಕ್ರಮವಾಗಿ ವೃದ್ಧಿಸವರ್ಣದೀರ್ಘ ಸಂಧಿಗಳಿಗೆ ಅಪವಾದ. ಶಿವಾಯ+ಓಂ ನಮಃ ಎಂದಿರುವಾಗ ಆಕಾರವೆಂದರೆ ಯಕಾರದ ಮೇಲಿರುವ ಅಕಾರ. ಅದಕ್ಕೆ ಓಂ ಪರವಾದುದರಿಂದ ಅ ಮತ್ತು ಓಂ ಎಂಬುದಕ್ಕೆ ಓಂ ಎಂಬುದು ಏಕಾದೇಶವಾಗಿ ಬರುತ್ತದೆ. ಶಿವಾಯ್+ಓಂ+ನಮಃ ಶಿವಾಯೋಂ ನಮಃ ಎಂದಾಗುತ್ತದೆ. ಶಿವ+ಏಹಿ ಎಂದಿರುವಾಗ ಆಜ್ ಪರವಾದುದರಿಂದ ಪರರೂಪ ಹೇಳಬೇಕು. ಆದರೆ ಏಹಿ ಎಂದು ಇಲ್ಲಿ ತೋರುತ್ತದೆ. ಆದುದರಿಂದ ಏಹಿ ಹೇಗಾಯಿತೆಂದು ಮೊದಲು ತಿಳಿಯಬೇಕು. ಆಜ್ ಎಂದರೆ ಉಪಸರ್ಗ. ಅಲ್ಲಿ ಜಕಾರ "ಹಲಂತ್ಯಂ" ಎಂಬುದರಿಂದ ಇತ್ ಸಂಜ್ಞೆಯನ್ನು ಹೊಂದುವುದರಿಂದ "ತಸ್ಯ ಲೋಪಃ" ಎಂಬುದರಿಂದ ಅದು ಲೋಪವಾಗುತ್ತದೆ. ಇಹಿ ಎಂಬುದು ಇಣ್ ಧಾತುವಿನ ಲೋಟ್ ಮಧ್ಯಮ ಪುರುಷ

ಏಕವಚನದ ರೂಪ. ಆ+ಇಹಿ ಎಂದಿರುವಾಗ "ಆದ್ಗುಣಃ" ಎಂಬುದರಿಂದ ಗುಣ ಬಂದರೆ ಏಹಿ ಎಂದು ರೂಪವಾಗುತ್ತದೆ. ಇಲ್ಲಿ ಏ ಎಂಬುದು ಆಜ್‌ನ ಸ್ಥಾನಕ್ಕೂ ಇ ಎಂಬುದರ ಸ್ಥಾನಕ್ಕೂ ಬಂದಿದೆ. ಆದರೂ ಆಜ್ ಎಂಬುದು ತೋರುವುದಿಲ್ಲವಷ್ಟೆ. ಹೀಗಿರುವಾಗ ಪರರೂಪ ಬರುವುದು ಹೇಗೆ? ಅಂದರೆ ಏಕಾದೇಶವು ಎರಡರ ಧರ್ಮವನ್ನೂ ಹೊಂದುತ್ತದೆ ಎಂದು ಮುಂದಿನ ಸೂತ್ರದಿಂದ ತಿಳಿಸುತ್ತಾನೆ.

(ಅಂತಾದಿವದ್ಭಾವವಿಧಾಯಕ ಸೂತ್ರ)

೪೧. ಅಂತಾದಿವಚ್ಚ ॥೬-೧-೧೫॥

ಯೋಽಯಮೇಕಾದೇಶಃ ಸಃ ಪೂರ್ವಸ್ಯಾಂತವತ್ಪರಸ್ಯಾದಿವತ್ ॥ಶಿವೇಹಿ॥

ಅಂತಾದಿವತ್, ಚ ॥ ದ್ವಿಪದ ಸೂತ್ರ. "ಏಕಃ ಪೂರ್ವಪರಯೋಃ" ಎಂಬ ಸೂತ್ರವು ಅಧಿಕೃತವಾಗುತ್ತದೆ ಯಥಾಸಂಖ್ಯಪರಿಭಾಷೆಯಿಂದ ಕ್ರಮವಾಗಿ ಅನ್ವಯ. ದ್ವಂದ್ವದ ಮೇಲೆ ವತ್ ಪ್ರತ್ಯಯ ಹೇಳಿರುವುದರಿಂದ ಪ್ರತ್ಯೇಕಾನ್ವಯ ಮಾಡಬೇಕು. ಅಂತವತ್ ಆದಿವತ್ ಎಂದಾಗುತ್ತದೆ **ಸೂತ್ರಾರ್ಥ.** ಪೂರ್ವ ಪರ ಸ್ಥಾನದಲ್ಲಿ ಬಂದಿರುವ ಏಕಾದೇಶವು ಪೂರ್ವದ ಅಂತದಂತೆಯೂ ಪರದ ಆದಿಯಂತೆಯೂ ಆಗುತ್ತದೆ. ಎರಡು ವರ್ಣಗಳ ಸ್ಥಾನದಲ್ಲಿ ಇದು ಬಂದಿದ್ದರೂ ಪ್ರಥಮ ವರ್ಣ ಅಂತದಲ್ಲಿರುವಾಗ ಯಾವ ಕಾರ್ಯ ಬರುತ್ತಿತ್ತೋ ಅದೂ ಬರುತ್ತದೆ. ಹಾಗೆ ದ್ವಿತೀಯ ವರ್ಣ ಕೂಡಿರುವಾಗ ಅದು ಆದಿಯಾಗಿದ್ದರೆ ಯಾವ ಕಾರ್ಯ ಬರುತ್ತಿತ್ತೋ ಆ ಕಾರ್ಯವೂ ಬರುತ್ತದೆ. ಒಂದೇ ಸಮಯದಲ್ಲಿ ಎರಡೂ ಬರುವುದಿಲ್ಲ. ಪ್ರಕೃತ ಶಿವ+ಆ+ಇಹಿ ಎಂದಿರುವಾಗ ಅಕಾರಾಕಾರಗಳಿಗೆ ಸವರ್ಣದೀರ್ಘವೂ ಆಕಾರ ಇಕಾರಕ್ಕೆ ಗುಣವೂ ಪ್ರಾಪ್ತವಾದರೆ ಆ+ಇಹಿ ಎಂಬುದು ಧಾತು ಉಪಸರ್ಗ ಕಾರ್ಯವಾದುದರಿಂದ ಅದನ್ನು ಮೊದಲು ಮಾಡಬೇಕೆಂದು ನಿಯಮವಿರುವುದರಿಂದ ಮೊದಲು ಗುಣ ಬರುತ್ತದೆ. ಶಿವ+ಏಹಿ ಎಂದಿರುವಾಗ ಇಲ್ಲಿ ಏ ಎಂಬುದು ಅ+ಇ ಸ್ಥಾನಗಳಲ್ಲಿ ಬಂದಿವೆ. ಅಲ್ಲಿ ನಮಗೆ ಆಜ್ ಪರವಾಗಿರಬೇಕಾದುದರಿಂದ ಈ ಸೂತ್ರದಿಂದ ಪೂರ್ವಾಂತವದ್ಭಾವ ಮಾಡಿದರೆ ಏ ಇದ್ದರೂ ಆ ಇದ್ದಂತೇ ಆಗುತ್ತದೆ. ಆಗ "ಓಮಾಜಿ ಶೋಶ್ಚ" ಎಂಬುದರಿಂದ ಪರರೂಪ ಶಿವೇಹಿ ಎಂದಾಗುತ್ತದೆ. ಎಲೈ ಶಿವನೇ ಬಾ ಎಂದರ್ಥ.

(ಸವರ್ಣದೀರ್ಘಸಂಧಿ ವಿಧಾಯಕ ಸೂತ್ರ)

೪೨. ಅಕಃ ಸವರ್ಣೇ ದೀರ್ಘಃ ॥೬-೧-೧೦೧॥

ಅಕಃ ಸವರ್ಣೇಽಚಿ ಪರೇ ಪೂರ್ವಪರಯೋರ್ದೀರ್ಘಃ ಏಕಾದೇಶಃ ಸ್ಯಾತ್ । ದೈತ್ಯಾರಿಃ ॥ ಶ್ರೀಶಃ । ವಿಷ್ಣೂದಯಃ । ಹೋತೃಕಾರಃ॥

ಅಕಃ, ಸವರ್ಣೇ, ದೀರ್ಘಃ । ತ್ರಿಪದ ಸೂತ್ರ. "ಇಕೋ ಯಣಚಿ" ಎಂಬುದರಿಂದ "ಅಚಿ" ಎಂಬುದು ಅನುವೃತ್ತವಾಗುತ್ತದೆ. "ಏಕಃ ಪೂರ್ವಪರಯೋಃ" ಅಧಿಕಾರ. ಅಕಃ ಎಂಬುದು ಪಂಚಮೀ. **ಸೂತ್ರಾರ್ಥ**:– ಅಕ್ಕಿಗೆ ಸವರ್ಣವಾದ ಅಚ್ ಪರವಾದಾಗ ಪೂರ್ವಪರಗಳ ಸ್ಥಾನದಲ್ಲಿ ದೀರ್ಘವು ಏಕಾದೇಶವಾಗಿ ಬರುತ್ತದೆ. ದೈತ್ಯ+ಅರಿ ಎಂದಿರುವಾಗ ಅಕಾರಕ್ಕೆ ಸವರ್ಣವಾದ ಅಕಾರ ಪರವಾದುದರಿಂದ ಎರಡು ಅಕಾರಗಳ ಸ್ಥಾನದಲ್ಲಿ ಒಂದೇ ದೀರ್ಘ (ಆ) ವು ಆದೇಶವಾಗಿ ಬಂದರೆ ದೈತ್ಯಾರಿಃ ಎಂದಾಗುತ್ತದೆ. ರಾಕ್ಷಸರ ಶತ್ರು. ಶ್ರೀ+ಈಶಃ ಎಂದಿರುವಾಗ ಈ, ಈಗಳಿಗೆ ಒಂದೇ ದೀರ್ಘ. ಈಕಾರಾದೇಶ, ಶ್ರೀಶಃ. ಲಕ್ಷ್ಮೀಪತಿ. ವಿಷ್ಣು+ಉದಯ ಎಂದಿರುವಾಗ ಉಊ ಗಳಿಗೆ ದೀರ್ಘ ಊಕಾರಾದೇಶ. ವಿಷ್ಣೂದಯಃ ವಿಷ್ಣುವಿನ ಅಭ್ಯುದಯ. ವೃದ್ಧಿ. ಹೋತೃ+ಋಕಾರಃ ಎಂದಿರುವಾಗ ಋ ಋಕಾರಗಳಿಗೆ ದೀರ್ಘ ೠಕಾರ ಏಕಾದೇಶ. ಹೋತ್ೞಕಾರಃ. ಋಕಾರಕ್ಕೆ ೞಕಾರ ಪರವಾದಾಗಲೂ ದೀರ್ಘ ಬರುವುದಾದರೆ ದೀರ್ಘವಾದ ೠಕಾರವೇ ಬರುತ್ತದೆ. ೞಕಾರಕ್ಕೆ ದೀರ್ಘವಿಲ್ಲ.

(ಪೂರ್ವರೂಪ ವಿಧಾಯಕ ಸಂಧಿ)

೪೩. ಏಙಃ ಪದಾನ್ತಾದತಿ ॥೬-೧-೧೦೯॥

ಪದಾಂತಾದೇಙಃತಿ ಪರೇ ಪೂರ್ವರೂಪಮೇಕಾದೇಶಃ ಸ್ಯಾತ್ ।
ಹರೇೞವ । ವಿಷ್ಣೋೞವ ॥

ಏಙಃ ಪದಾಂತಾತ್ ಅತಿ । ತ್ರಿಪದ ಸೂತ್ರ. "ಅಮಿಪೂರ್ವಃ" ಎಂಬುದರಿಂದ ಪೂರ್ವಃ ಎಂಬ ಪದವು ಅನುವೃತ್ತವಾಗುತ್ತದೆ. "ಏಕಃ ಪೂರ್ವಪರಯೋಃ" ಅಧಿಕಾರ. ಪದಾಂತಾತ್ ಎಂಬುದು ಏಙಿನಲ್ಲಿ ಅನ್ವಯಿಸುತ್ತದೆ. **ಸೂತ್ರಾರ್ಥ**– ಪದಾಂತವಾದ ಏಙಿಗೆ ಹ್ರಸ್ವ ಅಕಾರವು ಪರವಾದಾಗ ಪೂರ್ವಪರಗಳ ಸ್ಥಾನದಲ್ಲಿ ಪೂರ್ವರೂಪವು ಏಕಾದೇಶವಾಗಿ ಬರುತ್ತದೆ. ಅತಿ ಎಂಬುದು ತಪರ ಮಾಡಿ ಸಪ್ತಮಿಯಲ್ಲಿ ಹೇಳಿದೆ. ಆದುದರಿಂದ ಹ್ರಸ್ವ ಅಕಾರ ಮಾತ್ರ ತೆಗೆದುಕೊಳ್ಳಬೇಕು. ಹರೇ+ಅವ ಎಂದಿರುವಾಗ ಹರೇ ಎಂಬಲ್ಲಿ ಪದಾಂತದಲ್ಲಿ ಏಕಾರವಿದೆ. ಅದಕ್ಕೆ ಅಪರವಾದುದರಿಂದ ಪೂರ್ವರೂಪವು ಏಕಾದೇಶವಾಗಿ ಬಂದರೆ ಹರ್+ಏ+ವ=ಹರೇೞವ ಎಂದಾಗುತ್ತದೆ. ವಿಷ್ಣೋ+ಅವ ಎಂದಿರುವಾಗ ಏಙಿನ ಓಕಾರ ಪದಾಂತವಾದುದರಿಂದ ಅದಕ್ಕೆ ಹ್ರಸ್ವ ಅಕಾರ ಪರವಾದುದರಿಂದ ಪೂರ್ವರೂಪ ಓಕಾರ ಬಂದರೆ ವಿಷ್ಣೋೞವ ಎಂದಾಗುತ್ತದೆ. ಇಲ್ಲಿ ಕ್ರಮವಾಗಿ ಯಾಂತಾದೇಶವಾಂತಾದೇಶ ಪ್ರಾಪ್ತವಾದರೆ ಅವಕ್ಕೆ ಅಪವಾದವಾಗಿ ಪೂರ್ವರೂಪವನ್ನು ಹೇಳಿರುತ್ತಾನೆ. ಹೀಗೆ ಅಚ್ ಸಂಧಿಯನ್ನು ಹೇಳಿ ಇನ್ನು ಮುಂದೆ ಪ್ರಕೃತಿಭಾವ ಸಂಧಿಯನ್ನು ಹೇಳುತ್ತಾನೆ. ಪ್ರಕೃತಿಭಾವವೆಂದರೆ ಸಂಧಿಯಾಗವೆ ಇದ್ದುದು ಇದ್ದಂತೇ ಇರುವುದು. ಇದೂ ಸ್ವರಕ್ಕೆ ಬರುವುದರಿಂದ ಅಚ್ ಸಂಧಿಯ ವಿಭಾಗವಾಗುತ್ತದೆ.

(ಗೋ ಎಂಬಲ್ಲಿ ಪ್ರಕೃತಿಭಾವ ವಿಧಾಯಕ ಸೂತ್ರ)

೪೪. ಸರ್ವತ್ರ ವಿಭಾಷಾ ಗೋಃ ॥ ೬-೧-೧೨೨ ॥

ಲೋಕೇ ವೇದೇ ಚೈಜಂತಸ್ಯ ಗೋರತಿ ವಾ ಪ್ರಕೃತಿಭಾವಃ ಪದಾಂತೇ ।
ಗೋಅಗ್ರಮ್., ಗೋ೩ಗ್ರಮ್ । ಏಜಂತಸ್ಯ ಕಿಮ್ ? ಚಿತ್ರಗ್ವಾಗ್ರಮ್ । ಪದಾಂತೇ ಕಿಮ್ ?ಗೋಃ ॥

ಸರ್ವತ್ರ, ವಿಭಾಷಾ, ಗೋಃ । ತ್ರಿಪದ ಸೂತ್ರ. " ಏಙಃಪದಾಂತಾದತಿ " ಸೂತ್ರದಿಂದ " ಪದಾಂತಾತ್ " " ಅತಿ " ಎಂಬುದೂ, " ಪ್ರಕೃತ್ಯಾಂತಃ ಪಾದಮನ್ಯಯಪರೆ " ಎಂಬುದರಿಂದ " ಪ್ರಕೃತ್ಯಾ " ಎಂತಲೂ, ಅನುವೃತ್ತವಾಗುತ್ತದೆ. ಪ್ರಕೃತ್ಯಾಭವತಿ. ಸ್ವರೂಪದಿಂದ ಅಂದರೆ ನಿರ್ವಿಕಾರ ಸ್ವರೂಪದಿಂದ ಇರುವುದು. ಯಾವ ಸಂಧಿಯೂ ಬರದೆ ಇದ್ದಂತೆಯೇ ಇರುವುದು ಎಂದರ್ಥ. ಹಿಂದಿನ ಸೂತ್ರದಲ್ಲಿ ವೇದಕ್ಕೆ ಸಂಬಂಧಪಟ್ಟ ಕಾರ್ಯ ಹೇಳಿರುವುದರಿಂದ ಇಲ್ಲಿಯೂ ವೇದದಲ್ಲಿ ಮಾತ್ರ ಎಂಬರ್ಥವನ್ನು ಹೋಗಲಾಡಿಸಲು ಸರ್ವತ್ರ ಎಂದಿರುತ್ತಾನೆ. ಸರ್ವತ್ರ ಎಂದರೆ ಲೋಕದಲ್ಲಿಯೂ ವೇದದಲ್ಲಿಯೂ ಎಂದರ್ಥ. ಅತಿ ಎಂಬುದು ಸಪ್ತಮೀ. ಏಙಃ ಎಂಬುದು ಗೋ ಶಬ್ದಕ್ಕೆ ವಿತೇ ಷಣವಾದುದರಿಂದ " ಯೇನ ವಿಧಿಸ್ತದಂತಸ್ಯ " ಎಂಬಪರಿಭಾಷೆಯಿಂದ ತದಂತತಲಾಭ. **ಸೂತ್ರಾರ್ಥ**. ಲೋಕದಲ್ಲಿಯೂ ವೇದದಲ್ಲಿಯೂ ಏಙಂತವಾದ ಗೋ ಶಬ್ದಕ್ಕೆ ಹ್ರಸ್ವಾಕಾರಪರವಾದಾಗ ವಿಕಲ್ಪವಾಗಿ (ವಿಭಾಷಾ) ಪ್ರಕೃತಿಭಾವ ಬರುತ್ತದೆ. ಈ ಪ್ರಕೃತಿಭಾವವು ಪದಾಂತವಿಷಯದಲ್ಲಿ ಮಾತ್ರ. ಪದದ ಕೊನೆಯಾಗದಿರುವಾಗ ಬರುವುದಿಲ್ಲ. ಇಲ್ಲಿ ವಿಕಲ್ಪ ಎಂಬರ್ಥವನ್ನು ಸೂಚಿಸಲು ವಾ, ವಿಭಾಷಾ, ಅನ್ಯತರಸ್ಯಾಮ್, ಬಹುಲಮ್, ಎಂಬಿನೇ ಮುಂತಾದ ಶಬ್ದಗಳನ್ನು ಪ್ರಯೋಗಿಸುತ್ತಾನೆ. ಇವು ಪರ್ಯಾಯ ಶಬ್ದಗಳು. ವಾ ಎಂದು ಸುಲಭವಾಗಿ ಹೇಳಬಹುದಲ್ಲವೇ ಎಂದು ಇಲ್ಲಿ ಶಂಕೆ ಬರುತ್ತದೆ. ಆದರೆ ಪರ್ಯಾಯ ಶಬ್ದಗಳಲ್ಲಿ ಲಾಘವ ಗಾರವ ವಿಚಾರವಿಲ್ಲವೆಂದು ಪರಿಭಾಷೆಯಲ್ಲಿ ಹೇಳಿದೆ. ಆದುದರಿಂದ ಸೂತ್ರಕಾರನು ಅಲ್ಲಲ್ಲಿ ಇಷ್ಟಬಂದಂತೆ ವಿಕಲ್ಪಾರ್ಥಕ ಶಬ್ದಗಳನ್ನು ಹೇಳುತ್ತಾನೆ. ಗೋ+ಅಗ್ರಮ್. ಎಂದಿರುವಾಗ ಗೋ ಎಂಬುದು ಏಙಂತವಾದ ಗೋ ಶಬ. ಇದು ಪದವಾದುದರಿಂದ ಓಕಾರವು ಪದಾಂತವಾಗಿದೆ. ಇದಕ್ಕೆ ಅ ಎಂಬ ಹ್ರಸ್ವ ಅಕಾರವು ಪರವಾದುದರಿಂದ ಪ್ರಕೃತಿಭಾವ ವಿಕಲ್ಪವಾಗಿ ಬರುತ್ತದೆ. ಆಗ ಗೋ ಅಗ್ರಮ್ ಎಂದೇ ಆಗುತ್ತದೆ. ಪೂರ್ವರೂಪ, ಅವಾದೇಶಗಳು ಇಲ್ಲಿ ಬರುತ್ತಿದ್ದವು. ಪ್ರಕೃತಿಭಾವ ಹೇಳಿದುದರಿಂದ ಅವುಬರುವುದಿಲ್ಲ. ಅದು ವಿಕಲ್ಪವಾದುದರಿಂದ ಪ್ರಕೃತಿಭಾವ ಬಾರದಿರುವಾಗ " ಏಙಃಪದಾಂತಾದತಿ "ಎಂಬುದರಿಂದ ಪೂರ್ವರೂಪಸಂಧಿಯು ಬಂದರೆ ಗೋ೩ಗ್ರಮ್ ಎಂಬರೂಪವೂ ಆಗುತ್ತದೆ. ಈಗ ಸೂತ್ರ

ದಲ್ಲಿರುವ ಪದಗಳ ಸಾರ್ಥಕ್ಯವನ್ನು ಹೇಳುತ್ತಾನೆ. ಏಜಂತಸ್ಯ ಕಿಮ್? ಪದಾಂತದಲ್ಲಿನ್ನೋ ಶಬ್ದಕ್ಕೆ ಅಕಾರಪರವಾದಾಗ ಪ್ರಕೃತಿಭಾವ ಎಂದರೆ ಸಾಲದೆ? ಗೋಶಬ್ದವು ಏಜಂತವಾಗಿದೆ. ಹೀಗಿರುವಾಗ ತಿರುಗಿ ಏಜಂತವಾದ ಗೋಶಬ್ದಕ್ಕೆ ಎಂದುದು ಏಕೆ? ಅಂದರೆ ಚಿತ್ರಗ್ವಗ್ರಮ್ ಎಂಬಲ್ಲಿಯೂ ಹೀಗೆ ಹೇಳಿದರೆ ಪ್ರಕೃತಿಭಾವ ಬರಬೇಕಾಗುತ್ತದೆ. "ಏಕದೇಶ ವಿಕೃತಮನನ್ಯವತ್" ಒಂದುಕಡೆ ವಿಕಾರಬಂದರೆ ಅದು ಬೇರೆಯಾಗುವುದಿಲ್ಲ ಎಂಬರ್ಥವನ್ನು ಹೇಳುವ ಒಂದು ಪರಿಭಾಷೆ ಇದೆ. ನಾಯಿಯ ಬಾಲ ಕತ್ತರಿಸಿ ಹೋದರೆ ಅದು ನಾಯಿ ಆಗದಿರುವುದಿಲ್ಲ. ನಾಯಿಂದೇ ಕರೆಯುತ್ತಾರೆ ಅದರಂತೆ ಚಿತ್ರಗು+ಅಗ್ರಮ್ ಎಂಬಲ್ಲಿ ಗೋಶಬ್ದಕ್ಕೆ ಹ್ರಸ್ವ ಬಂದು ಗು ಎಂದಾಗಿದೆ. ಚಿತ್ರಾಃ ಗಾವಃ ಯಸ್ಯ ಸಃ (ನಾನಾಬಣ್ಣದ ಹಸುವುಳ್ಳವನು) ಚಿತ್ರಗುಃ ಇದು ಬಹುವ್ರೀಹಿ ಸಮಾಸ. ಸಮಾಸವಾದಮೇಲೆ ಗೋಶಬ್ದಕ್ಕೆ ಹ್ರಸ್ವ ಬಂದು ಉಕಾರಬಂದಿದ್ದಿ ಆದುದರಿಂದ ಇದು ಗೋಶಬ್ದವೇ. ಸೂತ್ರದಲ್ಲಿ ಏಜಂತವಾದ ಗೋಶಬ್ದವೆಂದು ಹೇಳದಿದ್ದರೆ ಇಲ್ಲಿಯೂ ಪ್ರಕೃತಿಭಾವ ಬಂದು ಯಣ್‌ಸಂಧಿಬಾರದೇ ಹೋಗಬೇಕಾಗುತ್ತದೆ. ಏಜಂತವೆಂದುದರಿಂದ ಇಲ್ಲಿ ಗೋಶಬ್ದವಿದ್ದರೂ ಏಜಂತವಾಗದಿರುವುದರಿಂದ ಪ್ರಕೃತಿಭಾವವಿಲ್ಲ. "ಇಕೋ ಯಣಚಿ" ಸೂತ್ರದಿಂದ ಯಣ್ (ವ್) ಬಂದು ಚಿತ್ರಗ್ವಗ್ರಮ್ ಎಂದಾಗಿದೆ. ಪದಾಂತದಲ್ಲಿ ಎಂದು ಹೇಳಿದುದು ಏಕೆ? ಗೋಃ ಎಂಬಲ್ಲಿ ಪ್ರಕೃತಿಭಾವ ತಪ್ಪಿಸಲು ಹಾಗೆ ಹೇಳಿರುತ್ತಾನೆ. ಆ ಪದವಿಲ್ಲದಿದ್ದರೆ ಏಜಂತವಾದ ಗೋಶಬ್ದಕ್ಕೆ ಹ್ರಸ್ವಾಕಾರಪರವಾದಾಗ ಪ್ರಕೃತಿಭಾವ ಎಂದರ್ಥವಾಗುತ್ತದೆ. ಆಗ ಗೋಶಬ್ದಕ್ಕೆ ಷಷ್ಠೀ ಏಕವಚನ ಅಸ್ ಪ್ರತ್ಯಯ ಬಂದಾಗ ಗೋ+ಅಸ್ ಎಂಬಲ್ಲಿಯೂ ಪ್ರಕೃತಿಭಾವ ಬರಬೇಕಾಗುತ್ತದೆ. ಪದಾಂತದಲ್ಲಿ ಎಂದರೆ ಇಲ್ಲಿ ಪದಾಂತವಾಗದಿರುವುದರಿಂದ ಬರುವುದಿಲ್ಲ. ಪದವೆಂದರೆ ಸುಬಂತವಾಗಿರಬೇಕು. ಇಲ್ಲಿ ಸುಪ್ಪೇ (ಅಸ್) ಪರವಾದುದರಿಂದ ಗೋಶಬ್ದ ಕೇವಲ ಪ್ರಾತಿಪದಿಕವಾಗುತ್ತದೆ. ಅಸ್ ಸೇರಿದಮೇಲೆ ಅದು ಪದವಾಗುತ್ತದೆ. ಆಗ ಅಂತಸಿಗಬಹುದು. ಆದುದರಿಂದ ಗೋ+ಅಸ್ ಎಂಬಲ್ಲಿ ಪೂರ್ವರೂಪಬಂದು ಸಕಾರಕ್ಕೆ ಮುಂದೆ ಹೇಳುವ ರೇಫವಿಸರ್ಗಗಳು ಬಂದು ಗೋಃ ಎಂದಾಗುತ್ತದೆ.

(ಸರ್ವಾದೇಶವನ್ನು ವಿಧಿಸುವ ಪರಿಭಾಷಾಸೂತ್ರ)

೪೫ ಅನೇಕಾಲ್ ಶಿತ್ಸರ್ವಸ್ಯ । ೧—೧—೫೫ ॥

ಇತಿ ಪ್ರಾಪ್ತೇ ॥

ಅನೇಕಾಲ್‌ಶಿತ್ ಸರ್ವಸ್ಯ। ದ್ವಿಪದಸೂತ್ರ. ನ ಏಕಃ ಅನೇಕಃ, ಅನೇಕಃ ಅಲ್ ಯಸ್ಯ ಸಃ ಅನೇಕಾಲ್, ಶಕಾರಃ ಇತ್ ಯಸ್ಯ ಸಃ ಶಿತ್, ಅನೇಕಾಲ್ ಚ ಶಿಚ್ಚ

ತಯೋಃ ಸಮಾಹಾರಃ ಅನೇಕಾಲ್‌ಶಿತ್. ಅನೇಕ ವರ್ಣವುಳ್ಳ ಆದೇಶವೂ ಶಕಾರ ಇತ್ತಾದ ಆದೇಶವೂ ಷಷ್ಠೀನಿರ್ದಿಷ್ಟವಾದ ಸ್ಥಾನಿಗೆ ಸರ್ವಾದೇಶವಾಗಿ ಬರುತ್ತದೆ. ಅನುವೃತ್ತ್ಯಾದಿಗಳು ಇಲ್ಲದಿರುವುದರಿಂದ ಪೃತ್ತಿ ಬರೆಯಲಿಲ್ಲ."ಅಲೋಂತ್ಯಸ್ಯ" ಎಂಬ ಪರಿಭಾಷೆಯಿಂದ ಆದೇಶಸಾಮಾನ್ಯವೂ ಸ್ಥಾನಿಯ ಅಂತ್ಯಕ್ಕೆ ಪ್ರಾಪ್ತವಾದರೆ ಈ ಎರಡು ಆದೇಶಗಳು ಸರ್ವಕ್ಕೂ ಬರುತ್ತವೆ ಎಂದುದರಿಂದ ಅಂತ್ಯಾದೇಶಕ್ಕೆ ಅಪವಾದ. "ಅಸ್ತೇರ್ಭೂಃ" ಅಸ್‌ಧಾತುವಿಗೆ ಭೂ ಆದೇಶ ಬರುತ್ತದೆ. ಇಲ್ಲಿ ಭೂಎಂಬ ಆದೇಶ ಅನೇಕಾಲಾದುದರಿಂದ ಸಂಪೂರ್ಣ ಅಸ್‌ಹೋಗಿ ಅದರ ಸ್ಥಾನಕ್ಕೆ ಬರುತ್ತದೆ. ಹೀಗೆ ಅನೇಕಾಲಾದ ಆದೇಶವು ಸರ್ವಾದೇಶವಾಗಿ ಪ್ರಾಪ್ತವಾದರೆ ಅದಕ್ಕೂ ಅಪವಾದವನ್ನು ಹೇಳುತ್ತಾನೆ.

(ಅಂತಾದೇಶವನ್ನು ನಿಯಮಿಸುವ ಪರಿಭಾಷಾಸೂತ್ರ)

೪೬. ಜಾಶ್ಚ್ಚ । ೧—೧—೫೫ ॥

ಜಾದನೇಕಾಲಪ್ಯನ್ತ್ಯಸ್ಯೈವ ಸ್ಯಾತ್ ॥

ಜಾತ್, ಚ, । ದ್ವಿಪದ ಸೂತ್ರ. ಜಕಾರಃ ಇತ್ ಯಸ್ಯ ಸಃ ಜಾತ್. " ಅಲೋನ್ತ್ಯಸ್ಯ " ಎಂಬುದು ಅನುವೃತ್ತವಾಗುತ್ತದೆ. ಜಾತ್ತಾದ ಆದೇಶವು ಸ್ಥಾನಿಯ ಅಂತ್ಯವರ್ಣಕ್ಕೇ ಬರುತ್ತದೆ. " ಅಲೋಂತ್ಯಸ್ಯ " ಎಂಬ ಸೂತ್ರದಿಂದಲೇ ಅಂತ್ಯಕ್ಕೆ ಬರುತ್ತದೆ ಎಂದು ಹೇಳಿದ ಮೇಲೆ ಪುನಃ ಈ ಸೂತ್ರವೇಕೆ ? ಎಂದು ಆಶಂಕೆ ಬರುತ್ತದೆ. ಆಗ ಇದೂ ಅಪವಾದ ಸೂತ್ರವೆನ್ನಬೇಕು. " ಅಲೋಂತ್ಯಸ್ಯ " ಎಂಬುದರಿಂದ ಸಾಮಾನ್ಯವಾಗಿ ಆದೇಶವು ಅಂತ್ಯಕ್ಕೆ ಪ್ರಾಪ್ತವಾದಾಗ ಅದಕ್ಕೆ ಅಪವಾದವಾಗಿ ಅನೇಕಾಲಾದ ಮತ್ತು ಶಿತ್ತಾದ ಆದೇಶವು ಸರ್ವಕ್ಕೂ ಬರುತ್ತದೆ ಎಂದು " ಅನೇಕಾಲ್‌ಶಿತ್‌ಸರ್ವಸ್ಯ " ಎಂಬ ಸೂತ್ರ ಹೇಳಿದರೆ ಅದಕ್ಕೆ ಅಪವಾದವಾಗಿ ಅನೇಕಾಲಾದರೂ ಅದು ಜಕಾರ ಇತ್ ಉಳ್ಳದ್ದಾದ್ದರೆ ಅಂತ್ಯಕ್ಕೇ ಬರುತ್ತದೆ ಎಂದು " ಜಾಶ್ಚ್ಚ " ಎಂಬ ಸೂತ್ರವು ಆರಂಭವಾಗಿದೆ. ಆದುದರಿಂದ ಇದು ಸರ್ವಾದೇಶಕ್ಕೆ ಅಪವಾದ. " ಜಾಶ್ಚ್ಚ " ಎಂಬುದಕ್ಕೆ ಪ್ರಕೃತೋಪಯೋಗವನ್ನು ಹೇಳುತ್ತಾನೆ

(ಗೋ ಶಬ್ದಕ್ಕೆ ಅವಜ್ ಆದೇಶ ವಿಧಾಯಕ ಸೂತ್ರ)

೪೭. ಅವಜ್ ಸ್ಫೋಟಾಯನಸ್ಯ । ೬-೧ ೧೨೩ ॥

ಪದಾಂತೇ ಏಜಂತಸ್ಯ ಗೋರವಜ್ ವಾ೩ಚಿ । ಗವಾಗ್ರಮ್ ,ಗೋ೩ಗ್ರಮ್ । ಪದಾಂತೇ ಕಿಮ್ ? ಗವಿ ॥

ಅವಜ್, ಸ್ಫೋಟಾಯನಸ್ಯ । ದ್ವಿಪದಸೂತ್ರ. ಇಲ್ಲಿ ಹಿಂದಿನಿಂದ ಅತಿ ಎಂಬುದು

ಅನುವೃತ್ತವಾಗುವುದಿಲ್ಲ. "ಇಕೋ ಯಣಚಿ" ಸೂತ್ರದಿಂದ ಅಚಿ ಎಂಬುದೂ ಹಿಂ
ದಿನ ಸೂತ್ರದಿಂದ "ಗೋಃ" ಎಂದೂ "ಪದಾಂತೇ" ಎಂದೂ ಅನುವೃತ್ತವಾಗುತ್ತವೆ.
ಸ್ಫೋಟಾಯನಸ್ಯ ಎಂದುದರಿಂದ ಸ್ಫೋಟಾಯನಾಚಾರ್ಯರ ಮತದಲ್ಲಿ ಮಾತ್ರ ಈ ಕಾರ್ಯ
ವೆಂದೂ ಇತರರ ಮತದಲ್ಲಿ ಬರುವುದಿಲ್ಲವೆಂದೂ ಆಗುವುದರಿಂದ ವಿಕಲ್ಪವೆಂದು ಗೊತ್ತಾ
ಗುತ್ತದೆ. **ಸೂತ್ರಾರ್ಥ.** ಪದಾಂತದಲ್ಲಿ ಏಜಂತವಾದ ಗೋಶಬ್ದಕ್ಕೆ ಅಚ್ ಪರವಾ
ದಾಗ ಅವಜ್ ಎಂಬ ಆದೇಶವು ವಿಕಲ್ಪವಾಗಿ ಬರುತ್ತದೆ. ಗೋ+ಅಗ್ರಮ್ ಎಂದಿರು
ವಾಗ ಏಜಂತವಾದ (ಓ) ಗೋ ಶಬ್ದಕ್ಕೆಅಚ್ (ಅ) ಪರವಾದುದರಿಂದ ಅವಜ್ ಆದೇಶ
ಬರುತ್ತದೆ. ಅವಜ್ ಎಂಬಲ್ಲಿ "ಹಲಂತ್ಯಮ್" ಸೂತ್ರದಿಂದ ಜಕಾರವು ಇತ್ತಾಗುವು
ದರಿಂದ ಅದು ಜಿತ್ತಾಯಿತು. "ಜಿಚ್ಚ" ಎಂಬ ಪರಿಭಾಷೆಯಿಂದ ಅಂತ್ಯಕ್ಕೆ ಬರು
ತ್ತದೆ. ಗೋ ಎಂಬಲ್ಲಿ ಅಂತ್ಯ ಓಕಾರ. ಅದಕ್ಕೆ ಅವ ಎಂಬ ಆದೇಶ ಬಂದರೆ ಗ್+
ಅವ+ಅಗ್ರಮ್ = ಗವಾಗ್ರಮ್. ಎಂದಾಗುತ್ತದೆ. ಪಾಣಿನಿಯರ ಮತದಲ್ಲಿ ಈ
ಆದೇಶವಿಲ್ಲದಿರುವುದರಿಂದ "ಏಜಃ ಪದಾಂತಾದತಿ" ಸೂತ್ರದಿಂದ ಪೂರ್ವರೂಪ ಸಂಧಿ
ಬಂದರೆ ಗೋಽಗ್ರಮ್ ಎಂದಾಗುತ್ತದೆ. ಇಲ್ಲಿಯೂ ಪದ ಪ್ರಯೋಜನವನ್ನು ವಿಚಾರಿ
ಸುತ್ತಾನೆ. ಪದಾಂತೇ ಕಿಮ್? ಇಲ್ಲಿ ಪದಾಂತದಲ್ಲಿ ಎಂದು ಹೇಳಿದುದು ಏಕೇ?
ಸಾಮಾನ್ಯ ಗೋ ಶಬ್ದವೆಂದರೆ ಸಾಲದೇ? ಅಂದರೆ ಹಾಗೆ ಹೇಳದೇ ಹೋದರೆ ಗವಿ
ಎಂಬಲ್ಲಿಯೂ ಅವಜಾದೇಶ ಬಂದು ಆ ರೂಪ ಆಗದೇ ಹೋಗಬೇಕಾಗುತ್ತದೆ. ಗೋ
ಶಬ್ದಕ್ಕೆ ಸಪ್ತಮೀ ಏಕವಚನದಲ್ಲಿ ಜಿ ಪ್ರತ್ಯಯ ಬರುತ್ತದೆ. ಅಲ್ಲಿ ಜಕಾರ ಇತ್ತಾಗು
ವುದರಿಂದ ಉಳಿಯುವುದು ಇಕಾರ. ಇದು ಸೇರಿದ ಮೇಲೆ ಸುಬಂತವಾಗುವುದರಿಂದ
ಗೋ ಶಬ್ದವು ಪರವಾಗಿ ಓಕಾರ ಪದಾಂತವಾಗುವುದು. ಇ ಪರವಾದಾಗ ಗೋ+ಇ
ಎಂದಿರುವಾಗ ಗೋ ಶಬ್ದ ಪದವಾಗುವುದಿಲ್ಲ. ಆದುದರಿಂದ ಅಚ್ ಪರವಾದರೂ
ಓಕಾರಕ್ಕೆ ಅವಜಾದೇಶ ಬರುವುದಿಲ್ಲ. ಏಚಿಗೆ ಅಚ್ ಪರವಾದುದರಿಂದ "ಏಚೋಽ
ಯವಾಯಾವಃ" ಎಂಬುದರಿಂದ ಅವ್ ಆದೇಶ ಬಂದರೆ ಗ್+ಅವ್+ಇ = ಗವಿ
ಎಂದಾಗುತ್ತದೆ.

(ಅವಜಾದೇಶ ವಿಧಾಯಕ ಸೂತ್ರ)

೪೮ ಇಂದ್ರೇ ಚ ॥ ೬—೧—೧೨೪ ॥

ಗೋರವಜ್ ಸ್ಯಾದಿಂದ್ರೇ। ಗವೇಂದ್ರಃ ॥

ಇಂದ್ರೇ ಚ। ದ್ವಿಪದಸೂತ್ರ. "ಸರ್ವತ್ರ ವಿಭಾಷಾ ಗೋಃ" ಎಂಬುದರಿಂದ
"ಗೋಃ" "ಅವಜ್ಸ್ಫೋಟಾಯನಸ್ಯ" ಎಂಬುದರಿಂದ "ಅವಜ್" ಅನುವೃತ್ತವಾಗು
ತ್ತವೆ. **ಸೂತ್ರಾರ್ಥ:**—ಗೋಶಬ್ದಕ್ಕೆ ಇಂದ್ರಶಬ್ದಪರದಲ್ಲಿರುವಾಗ ಅವಜ್ ಆದೇ
ಬರುತ್ತದೆ. ಹಿಂದಿನಂತೇ ಜಿತ್ತಾದುದರಿಂದ ಅಂತಾದೇಶವಾಗಿಬಂದರೆ ಗೋ+ಇಂದ್ರ

ಗ್+ಅವ+ಇಂದ್ರ, ಗವ+ಇಂದ್ರಃ ಎಂದಾದಾಗ ಅಕಾರಕ್ಕೆ ಅಚ್ ಪರವಾದುದರಿಂದ
"ಆದ್ಗುಣಃ" ಎಂಬುದರಿಂದ ಅಕಾರ ಇಕಾರಗಳಿಗೆ ಗುಣವು ಬಂದರೆ ಗವೇಂದ್ರಃ
ಎಂದಾಗುತ್ತದೆ.

(ಪ್ಲುತಸಂಜ್ಞಾವಿಧಾಯಕ ಸೂತ್ರ)

೪೯. ದೂರಾದ್ಧೂತೇ ಚ ॥ ೮—೨—೮೪ ॥

ದೂರಾತ್ಸಂಬೋಧನೇ ವಾಕ್ಯಸ್ಯ ಟೇಃ ಪ್ಲುತೋ ವಾ ॥

ದೂರಾತ್ ಹೂತೇ ಚ। ತ್ರಿಪದಸೂತ್ರ. "ವಾಕ್ಯಸ್ಯ ಟೇಃ ಪ್ಲುತಃ ಉದಾತ್ತಃ"
ಎಂಬುದು ಅಧಿಕಾರಸೂತ್ರ. ಅದನ್ನು ಇಲ್ಲಿ ಸೇರಿಸಿ ವಾಕ್ಯಾರ್ಥವನ್ನು ಹೇಳಬೇಕು.
ವಾಕ್ಯದ ಟಿಗೆ (ಅಂತ್ಯ) ಪ್ಲುತವು ಉದಾತ್ತ ಸ್ವರವಿಶಿಷ್ಟವಾಗಿ ಬರುತ್ತದೆ ಎಂದು
ಅದರರ್ಥ. ವಾಕ್ಯ ಯಾವರೀತಿಯೆಂದು ಈ ಸೂತ್ರ ಹೇಳುತ್ತದೆ. ಹೂತವೆಂದರೆ
ಆಹ್ವಾನ. ಭಾವಾರ್ಥದಲ್ಲಿ ಕ್ತಪ್ರತ್ಯಯ. ಪ್ರಯತ್ನದಿಂದ ಉಚ್ಚರಿಸಿದುದನ್ನು ಕೇಳ
ದಿರುವುದರಿಂದ ಎಲ್ಲಿ ಅಧಿಕಪ್ರಯತ್ನದಿಂದ ಉಚ್ಚರಿಸಬೇಕಾಗುತ್ತದೋ ಅದು ದೂರ.
ಇಲ್ಲಿ ಆಹ್ವಾನದಿಂದ ಸಂಬೋಧನೆಯು ವಿವಕ್ಷಿತವಾಗಿದೆ. **ಸೂತ್ರಾರ್ಥ.**—ದೂರದಿಂದ
ಸಂಬೋಧಿಸುವಾಗ ಪ್ರಯೋಗಿಸುವ ವಾಕ್ಯದ ಟಿಗೆ ಪ್ಲುತ ಬರುತ್ತದೆ. ಟಿಯೆಂದರೆ
ಅಂತ್ಯದ ಸ್ವರ ಅಥವಾ ಅದೇ ಆದಿಯಾಗಿರುವ ವ್ಯಂಜನ. ಮೂರು ಮಾತ್ರೆಯಳ್ಳ
ವರ್ಣಕ್ಕೆ ಪ್ಲುತವೆಂದು ಹೆಸರು. ಆಗಚ್ಛ ಕೃಷ್ಣ. ಕೃಷ್ಣನೇ ಬಾಯಂದು ಇದು
ದೂರದಿಂದ ಕರೆಯುವ ವಾಕ್ಯ. ಇಲ್ಲಿ ಟಿ ಕೊನೆಯ ಅಕಾರ. ಅದಕ್ಕೆ ಪ್ಲುತ ಬಂದರೆ
ಆಗಚ್ಛ ಕೃಷ್ಣ ೩ ಎಂದಾಗುತ್ತದೆ. ಹೀಗೆ ಪ್ಲುತವನ್ನು ಹೇಳಿ ಅದಕ್ಕೆ ಪ್ರಯೋಜನ
ವನ್ನು ಹೇಳುತ್ತಾನೆ.

(ಪ್ಲುತಪ್ರಗೃಹ್ಯಗಳಿಗೆ ಪ್ರಕೃತಿಭಾವವನ್ನು ವಿಧಿಸುವ ಸೂತ್ರ)

೫೦. ಪ್ಲುತಪ್ರಗೃಹ್ಯಾ ಅಚಿ ನಿತ್ಯಮ್ ॥ ೬—೧—೧೨೫ ॥

ಏತೇಽಚಿ ಪ್ರಕೃತ್ಯಾ ಸ್ಯುಃ। ಆಗಚ್ಛ ಕೃಷ್ಣ ೩ ಅತ್ರ ಗೌಶ್ಚರತಿ ॥

ಪ್ಲುತಪ್ರಗೃಹ್ಯಾಃ ಅಚಿ ನಿತ್ಯಮ್। ತ್ರಿಪದಸೂತ್ರ. ಪ್ಲುತಾಶ್ಚ ಪ್ರಗೃಹ್ಯಾಶ್ಚ
ಪ್ಲುತಪ್ರಗೃಹ್ಯಾಃ। ಪ್ರಗೃಹ್ಯವೆಂದರೆ ಒಂದು ಸಂಜ್ಞೆ. ಅದನ್ನು ಮುಂದೆ ಹೇಳುತ್ತಾನೆ.
"ಪ್ರಕೃತ್ಯಾಂತಃ ಪಾದಮವ್ಯಪರೆ" ಎಂಬುದರಿಂದ "ಪ್ರಕೃತ್ಯಾ" ಎಂದು ಅನುವೃತ್ತ
ವಾಗುತ್ತದೆ. ಅಚಿ ಎಂಬುದು ಸಪ್ತಮೀಯಾದುದರಿಂದ ಅಚ್ (ವ್ಯವಧಾನವಿಲ್ಲದೆ)
ಪರವಾದಾಗ ಎಂಬರ್ಥ. **ಸೂತ್ರಾರ್ಥ.**—ಪ್ಲುತಗಳೂ ಪ್ರಗೃಹ್ಯಗಳೂ ಅಚ್ಪರವಾದಾಗ

ಪ್ರಕೃತಿಭಾವದಿಂದ ಇರುತ್ತದೆ. ಯಾವಸಂಧಿಯೂ ಬರುವುದಿಲ್ಲವೆಂದು ತಾತ್ಪರ್ಯ. ಪ್ರಕೃತ ಹಿಂದಿನ ಸೂತ್ರದಲ್ಲಿ ವಾಕ್ಯದ ಟಗೆ ಪ್ಲುತಕ್ಕೆ ಅಚ್ ಪರ ವಾದರೆ ಸಂಧಿಬರುವುದಿಲ್ಲ. ಹಾಗೆಯೇ ಇರುತ್ತದೆ. ಆಗಚ್ಛ ಕೃಷ್ಣ ೩ ಅತ್ರಗೌಶ್ಚರತಿ. ಕೃಷ್ಣನು ಹಸುಗಳನ್ನು ಹುಡುಕುತ್ತಿದ್ದರೆ ಅವನನ್ನು ಸಂಬೋಧಿಸಿ ಕರೆಯುವ ವಾಕ್ಯ. ಅದಕ್ಕೆ ಅಚ್ಚಿನ ಅಕಾರಪರವಾದುದರಿಂದ ಸವರ್ಣದೀರ್ಘ ಸಂಧಿಪ್ರಾಪ್ತವಾಗುತ್ತಿತ್ತು. ಆದರೆ ಈ ಸೂತ್ರದಿಂದ ಪ್ರಕೃತಿಭಾವ ಹೇಳಿರುವುದರಿಂದ ಸಂಧಿಯಾಗದೆ ಹಾಗೇ ಇರುತ್ತದೆ. ಸೂತ್ರದಲ್ಲಿ ಪ್ರಗೃಹ್ಯವೆಂಬ ಪದಕ್ಕೆ ಅರ್ಥವಾಗದಿರುವುದರಿಂದ ಅದನ್ನು ವಿವರಿಸುತ್ತಾನೆ.

(ಪ್ರಗೃಹ್ಯ ಸಂಜ್ಞಾವಿಧಾಯಕ ಸೂತ್ರ)

೫೧. ಈದೂದೇದ್ದ್ವಿವಚನಂ ಪ್ರಗೃಹ್ಯಮ್ । ೧-೧-೧೧ ॥

ಈದೂದೇದಂತಂ ದ್ವಿವಚನಂ ಪ್ರಗೃಹ್ಯಂ ಸ್ಯಾತ್ ಹರೀ ಏತೌ ।
ವಿಷ್ಣೂ ಇಮೌ ॥ ಗಂಗೇ ಅಮೂ ॥

ಈದೂದೇತ್ ದ್ವಿವಚನಂ ಪ್ರಗೃಹ್ಯಮ್ । ತ್ರಿಪದಸೂತ್ರ. ಈತ್ ಚ, ಊತ್ ಚ, ಏತ್ ಚ ತೇಷಾಂ ಸಮಾಹಾರಃ ಈದೂದೇತ್. ಇದು ದ್ವಿವಚನಕ್ಕೆ ವಿಶೇಷಣ ವಾದುದರಿಂದ " ಯೇನವಿಧಿಸ್ತದಂತಸ್ಯ " ಪರಿಭಾಷೆಯಿಂದ ಇವೇ ಅಂತವಾದ ದ್ವಿವಚನವೆಂದಾಗುತ್ತದೆ. ಈತ್ ಊತ್ ಏತ್ ಎಂದು ತಪರಮಾಡಿರುವುದರಿಂದ "ತಪರಸ್ತತ್ಕಾಲಸ್ಯ " ಪರಿಭಾಷೆಯಿಂದ ದೀರ್ಘವನ್ನು ಮಾತ್ರ ತೆಗೆದುಕೊಳ್ಳಬೇಕು.

ಸೂತ್ರಾರ್ಥ:—ಈಕಾರಾಂತವಾದ ಊಕಾರಾಂತವಾದ, ಏಕಾರಾಂತವಾದ ದ್ವಿವಚನವು ಪ್ರಗೃಹ್ಯವೆಂಬ ಸಂಜ್ಞೆಯನ್ನು ಹೊಂದುತ್ತದೆ ಹರೀ, ಶಂಭೂ, ಗಂಗೇ, ಮುಂತಾದ ದ್ವಿವಚನ ಶಬ್ದಗಳಿಗೆ ಈ ಸಂಜ್ಞೆ ಬರುವುದರಿಂದ ಇವುಗಳಿಗೆ ಅಚ್ ಪರವಾದರೆ ಹಿಂದಿನಸೂತ್ರದಿಂದ ಪ್ರಕೃತಿಭಾವ ಹೇಳಿದುದರಿಂದ ಯಾವಸಂಧಿಯೂ ಬರುವುದಿಲ್ಲ. ಹರೀ+ಏತೌ ಎಂದಿರುವಾಗ " ಇಕೋ ಯಣಚಿ " ಎಂಬುದರಿಂದ ಯಣ್‌ಸಂಧಿ ಪ್ರಾಪ್ತವಾದರೆ ಪ್ರಕೃತಿಭಾವ. ಹರೀ ಏತೌ ಎಂದೇ ಇರುತ್ತದೆ. ಹಾಗೇ ವಿಷ್ಣೂ ಇಮೌ ಎಂಬಲ್ಲಿಯೂ ಯಣ್ಣಿಗೆ ಅಪವಾದವಾಗಿ ಪ್ರಕೃತಿಭಾವ. ಗಂಗೇ + ಅಮೂ (ಗಂಗಾಶಬ್ದಸ್ತ್ರೀಲಿಂಗ ದ್ವಿವಚನ) ಇಲ್ಲಿ " ಏಜಃ ಪದಾಂತಾದತಿ " ಎಂಬುದರಿಂದ ಪೂರ್ವರೂಪಸಂಧಿ ಪ್ರಾಪ್ತವಾದರೆ ಪ್ರಕೃತಿಭಾವ ಬರುತ್ತದೆ.

(ಅದಸ್ ಶಬ್ದದಲ್ಲಿ ಪ್ರಗೃಹ್ಯಸಂಜ್ಞಾವಿಧಾಯಕಸೂತ್ರ)

೫೨. ಅದಸೋಮಾತ್ । ೧-೧-೧೨ ॥

ಅಸ್ಮಾತ್ಪರಾವೀದೂತೌ ಪ್ರಗೃಹ್ಯೌ ಸ್ತಃ । ಅಮೀ ಈಶಾಃ । ರಾಮ-
ಕೃಷ್ಣಾವಮೂ ಆಸಾತೇ । ಮಾತ್ಕಿಮ್ ? ಅಮುಕೇಽತ್ರ ॥

ಅದಸಃ ಮಾತ್ । ದ್ವಿಸದ ಸೂತ್ರ. ಹಿಂದಿನ ಸೂತ್ರದಿಂದ " ಪ್ರಗೃಹ್ಯಮ್ " ಪದವು ಅನುವೃತ್ತವಾಗುತ್ತದೆ. ಅದಸಃ ಎಂಬಲ್ಲಿ ಅವಯವಾರ್ಥದಲ್ಲಿ ಷಷ್ಠೀ ಬಂದಿದೆ. ಅದಸ್ ಶಬ್ದದ ಅವಯವವಾದ ಮಕಾರವೆಂದರ್ಥ. ಅದಶ್ಶಬ್ದದ ಮಕಾರದ ಪರದಲ್ಲಿ ಏಕಾರಸಂಭವಿಸದಿರುವುದರಿಂದ ಈತ್ ಊತ್ ಮಾತ್ರ ಅನುವೃತ್ತವಾಗುತ್ತವೆ. ಇವೂ ಬಹುವಚನದಲ್ಲಿ ಸಂಭವಿಸುವುದರಿಂದ ದ್ವಿವಚನಮ್ ಎಂಬುದೂ ಅನುವೃತ್ತವಾಗುವುದಿಲ್ಲ. **ಸೂತ್ರಾರ್ಥ:**—ಅದಶ್ಶಬ್ದಾವಯವವಾದ ಮಕಾರದ ಪರದಲ್ಲಿರುವ ಈಕಾರ ಊಕಾರಗಳು ಪ್ರಗೃಹ್ಯಸಂಜ್ಞೆಯನ್ನು ಹೊಂದುತ್ತವೆ. ಪ್ರಗೃಹ್ಯ ಸಂಜ್ಞಾ ಬಂದಾಗ ಅದಕ್ಕೆ ಅಚ್‌ಪರವಾದರೆ " ಪ್ಲುತಪ್ರಗೃಹ್ಯಾಅಚಿ ನಿತ್ಯಮ್ " ಸೂತ್ರದಿಂದ ಪ್ರಕೃತಿಭಾವ. ಅಮೀ+ಈಶಾಃ ಅಮೀಯಂಬುದು ಅದಶ್ಶಬ್ದದಬಹುವಚನಾಂತರೂಪ. ಮಕಾರದ ಪರದಲ್ಲಿ ಈಕಾರಬಂದುದರಿಂದ ಅದು ಪ್ರಗೃಹ್ಯವಾಗುತ್ತದೆ. ಅದಕ್ಕೆ ಅಪವಾದವಾಗಿ ಪ್ರಕೃತಿಭಾವ ಹೇಳಿರುವುದರಿಂದ ಹಾಗೇ ಇರುತ್ತದೆ. ರಾಮಕೃಷ್ಣ+ಅಮೂ+ಆಸಾತೇ ಇಲ್ಲಿ ಔಕಾರಕ್ಕೆ ಅಚ್‌ಪರವಾದುದರಿಂದ " ಏಚೋಯವಾಯಾವಃ " ಎಂಬುದರಿಂದ ಆವಾದೇಶ. ರಾಮಕೃಷ್ಣಾವಮೂ+ ಆಸಾತೇ, ಎಂದಿರುವಾಗ ಅದಶ್ಶಬ್ದದ ಮಕಾರದ ಪರದಲ್ಲಿ ಊಕಾರಬಂದುದರಿಂದ ಅದು ಪ್ರಗೃಹ್ಯವಾಗುತ್ತದೆ. ಅದಕ್ಕೆ ಅಪರವಾದುದರಿಂದ ಯಣ್‌ಪ್ರಾಪ್ತವಾದರೆ ಅದನ್ನು ಬಾಧಿಸಿ ಪ್ರಕೃತಿಭಾವ. ಅಮೂ ಎಂಬರೂಪವು ಸ್ತ್ರೀಲಿಂಗಪುಲ್ಲಿಂಗವೆರಡರ ದ್ವಿವಚನವೂ ಆಗುತ್ತದೆ. ಆದರೆ ಇಲ್ಲಿ ಪುಲ್ಲಿಂಗದರೂಪಮಾತ್ರ ಉದಾಹರಣೆಗೆ ಯೋಗ್ಯನೆಂದು ತಿಳಿಸಲು ರಾಮಕೃಷ್ಣಾ ಎಂಬ ವಿಶೇಷ್ಯವನ್ನು ತೋರಿಸಿರುತ್ತಾನೆ. ಸ್ತ್ರೀಲಿಂಗದಲ್ಲಿ ಆಮೂ ಎಂಬ ರೂಪವನ್ನು ಮಾಡುವ ಮೊದಲೇ ಪ್ರಕ್ರಿಯಾವಸ್ಥೆಯಲ್ಲಿಯೇ ಪ್ರಗೃಹ್ಯಸಂಜ್ಞೆಬರುವುದರಿಂದ ಹೇಳಬೇಕಾಗಿಲ್ಲ. ಈಗ ಸೂತ್ರದ ಪದ ಪ್ರಯೋಜನವನ್ನು ವಿವರಿಸುತ್ತಾನೆ. " ಮಾತ್ಕಿಮ್ " ಮಕಾರದ ಪರವಾಗಿರುವವುಗಳು ಎಂದು ಹೇಳಿದುದು ಏಕೆ ? ಅಮುಕೇಽತ್ರ ಇಲ್ಲಿಯೂ ಪ್ರಕೃತಿಭಾವ ಬರಬೇಕಾಗುತ್ತದೆ. ಸೂತ್ರದಲ್ಲಿ ಮಾತ್ ಪದವಿಲ್ಲದೇ ಹೋದರೆ ಅದಸ್ ಶಬ್ದದ ಈದೂದೇತ್‌ಗಳಿಗೆ ಪ್ರಗೃಹ್ಯಸಂಜ್ಞೆ ಎಂದರ್ಥವಾಗುವುದರಿಂದ ಅಮುಕೇಽತ್ರ ಎಂಬಲ್ಲಿಯೂ ಸಂಧಿಯಾಗದೇ ಹೋಗಬೇಕಾಗುತ್ತದೆ. ಮಾತ್ ಇದ್ದರೆ ಮಕಾರದ ಪರದಲ್ಲಿ ಏಕಾರ ಸಂಭವಿಸದಿರುವುದರಿಂದ ಏಕಾರಕ್ಕೆ ಅನುವೃತ್ತಿಯಿಲ್ಲ. ಈಗ ಮಕಾರವಿಲ್ಲವಾದರೆ ಮೂರೂ ಅನುವೃತ್ತವಾಗುತ್ತವೆ. ಅದಸ್‌ಶಬ್ದಕ್ಕೆ ಸ್ವಾರ್ಥದಲ್ಲಿ ಅಕಚ್ ಪ್ರತ್ಯಯವನ್ನು ಮುಂದೆ ಹೇಳುತ್ತಾನೆ. ಅಕಚ್‌ಸಹಿತವಾದ ಅದಸ್‌ಶಬ್ದದ ಬಹುವಚನದಲ್ಲಿ ಅಮುಕೇ ಎಂಬರೂಪವಾಗುತ್ತದೆ. ಅಮುಕೇ+ಅತ್ರ ಎಂದಿರುವಾಗ ಪೂರ್ವರೂಪಸಂಧಿಬಾರದೇ

ಪ್ರಕೃತಿಭಾವನೇ ಬರಬೇಕಾಗುತ್ತದೆ. ಆದುದರಿಂದ ಮಕಾರದ ಪರವಾದವುಗಳು ಎಂದು ಹೇಳಿದೆ. ಹೀಗೆ ಹೇಳದರೆ ಸಂಭವವಿಲ್ಲದಿರುವುದರಿಂದ ಏಕಾರವು ಅನುಪ್ಪತ್ತಿ ವಾಗುವುದಿಲ್ಲ. ಆಗ ಅಮುಕೇತ್ರ ಎಂಬಲ್ಲಿ ಪ್ರಕೃತಿಭಾವ ಬಾರದೇ "ಏಜಃ ಪದಾಂತ್ಯಾ ದತಿ" ಎಂಬುದರಿಂದ ಪೂರ್ವರೂಪಸಂಧಿ, ಹೀಗೆ ಮಾತ್ ಎಂಬುದಕ್ಕೆ ಸಾಫಲ್ಯವಿರುವು ದರಿಂದಹೇಳಲೇಬೇಕು.

(ನಿಪಾತಸಂಜ್ಞಾವಿಧಾಯಕ ಸೂತ್ರ)

೫೩. ಚಾದಯೋಽಸತ್ತ್ವೇ । ೧—೪—೫೭ ॥

ಅದ್ರವ್ಯಾರ್ಥಾಶ್ಚಾದಯೋ ನಿಪಾತಾಃ ಸ್ಯುಃ ॥

ಚಾದಯಃ ಅಸತ್ತ್ವೇ । ದ್ವಿಪದಸೂತ್ರ. "ಪ್ರಾಗ್ರೀಶ್ವರಾನ್ನಿಪಾತಾಃ ಎಂಬುದು ಅಧಿಕಾರ. ಇಲ್ಲಿ ನಿಪಾತಾಃ ಎಂದು ಅಧಿಕೃತವಾಗುತ್ತದೆ. ಸತ್ತ್ವವೆಂದರೆ ದ್ರವ್ಯ (ಪದಾರ್ಥ.) ಲಿಂಗಸಂಖ್ಯೆಯನ್ನು ಹೊಂದಲು ಯೋಗ್ಯವಾದುದು. "ದ್ರವ್ಯಾಸುವ್ಯಜ್ಜ ಸಾಯೇಷು ಸತ್ತ್ವಮ್" ಎಂದು ಅಮರ. ನ ಸತ್ತ್ವಂ, ಅಸತ್ತ್ವಂ. ದ್ರವ್ಯವಲ್ಲದಿರುವುದು ಚ ಆದಿಃ ಯೇಷಾಂ ತೇ ಚಾದಯಃ । ಚ ಮುಂತಾದವುಗಳು. ಇವುಗಳನ್ನು ಗಣಪಾತ ದಲ್ಲಿ ವಿವರಿಸಿರುತ್ತಾನೆ. **ಸೂತ್ರಾರ್ಥ.** ದ್ರವ್ಯವೆಂಬರ್ಥವನ್ನು ಕೊಡದಿರುವ ಚ ಮುಂತಾದವುಗಳು ನಿಪಾತವೆಂಬ ಸಂಜ್ಞೆಯನ್ನು ಹೊಂದುತ್ತವೆ. ಪಶುವೆಂಬ ಶಬ್ದವು ಚಾದಿಯಲ್ಲಿ ಪಠಿತವಾಗಿದೆ. ಇದು ಛಾಗಃ ಪಶುಃ (ಆಡು ಪಶುಜಾತಿ) ಎಂಬಲ್ಲಿ ದ್ರವ್ಯವಾಚಿಯಾಗುವುದರಿಂದ ನಿಪಾತಸಂಜ್ಞೆಯನ್ನು ಹೊಂದವುದಿಲ್ಲ. ಪುಷ್ಟಂ ಪಶು ಮನ್ನತೇ (ಜನ್ನಾಗಿ ಬೆಳೆದದ್ದನ್ನಾಗಿ ತಿಳಿಯುತ್ತಾನೆ) ಎಂಬಲ್ಲಿ ಪಶುವೆಂದರೆ ಜಿನ್ನಾಗಿ ಎಂದರ್ಥ. ಇಲ್ಲಿ ದ್ರವ್ಯಾರ್ಥಕವಾಗದಿರುವುದರಿಂದ ನಿಪಾತಸಂಜ್ಞೆ ಬರುತ್ತದೆ.

(ಪ್ರಾದಿಗಳಿಗೆ ನಿಪಾತಸಂಜ್ಞೆಯನ್ನು ಹೇಳುವ ಸೂತ್ರ)

೫೪. ಪ್ರಾದಯಃ । ೧—೪—೫೮ ॥

ಏತೇಽಪಿ ತಥಾ ॥

ಏಕಪದಸೂತ್ರ. "ಅಸತ್ತ್ವೇ" ಎಂಬುದು ಹಿಂದಿನಸೂತ್ರದಿಂದ ಅನುವೃತ್ತವಾಗುತ್ತದೆ. ನಿಪಾತಾಃ ಅಧಿಕಾರ. ಸುಲಭವಾದ ಅರ್ಥವಿರುವುದರಿಂದ ಇವೂ ಹಾಗೆಯೇ ಎಂದು ಕರ್ಥ ಬರೆಯುತ್ತಾನೆ. ದ್ರವ್ಯವೆಂಬ ಅರ್ಥವನ್ನು ಕೊಡದ ಪ್ರಮುಂತಾದವುಗಳೂ ನಿಪಾತಸಂಜ್ಞೆಯನ್ನು ಹೊಂದುತ್ತವೆ. ಪ್ರಮುಂತಾದವುಗಳು

"ಉಪಸರ್ಗಾಃ ಕ್ರಿಯಾಯೋಗೇ" ಸೂತ್ರದಲ್ಲಿ ವಿವೃತವಾಗಿವೆ. (೨೨) ನಿಪಾತಸಂಜ್ಞೆ ಹೇಳಿದುದಕ್ಕೆ ಪ್ರಯೋಜನವನ್ನು ಹೇಳುತ್ತಾನೆ.

(ನಿಪಾತಗಳಿಗೆ ಪ್ರಗೃಹ್ಯಸಂಜ್ಞೆ ಹೇಳುವ ಸೂತ್ರ)

೫೫. ನಿಪಾತ ಏಕಾಜನಾಙ್ । ೧—೧—೧೪ ।

ಏಕೋಽಚ್ ನಿಪಾತ ಆಙ್ವರ್ಜಃ ಪ್ರಗೃಹ್ಯಃ ಸ್ಯಾತ್ । ಇ ಇಂದ್ರಃ । ಉ ಉಮೇಶಃ । ವಾಕ್ಯಸ್ಮರಣಯೋರಙಾತ್ ; ಆ ಏವಂನು ಮನ್ಯಸೇ । ಆ ಏವಂಕಿಲ ತತ್ । ಅನ್ಯತ್ರ ಙಾತ್ ; ಆ (ಈಷತ್) ಉಷ್ಣಮ್ ಓಷ್ಣಮ್ ॥

ನಿಪಾತಃ ಏಕಾಚ್ ಅನಾಙ್ । ತ್ರಿಪದಸೂತ್ರ. ಈದೂದೇತ್ ಸೂತ್ರದಿಂದ ಪ್ರಗೃಹ್ಯಂ ಎಂಬುದು ಅನುವೃತ್ತವಾಗಿ ಇಲ್ಲಿ ಪುಲ್ಲಿಂಗವಾಗಿ ವಿಪರಿಣತವಾಗುತ್ತದೆ. ಏಕ ಶ್ಚಾಸೌ ಆಚ್ ಚ ಏಕಾಚ್ ಕರ್ಮಧಾರಯಸಮಾಸ, ಒಂದಾದಸ್ವರವೆಂದರ್ಥ. ನ ಆಙ್ ಅನಾಙ್. ಆಙ್ ಅಲ್ಲದಿರುವುದು. **ಸೂತ್ರಾರ್ಥ.**—ಆಙ್‌ಯಂಬುದನ್ನು ಬಿಟ್ಟು ಒಂದೇ ಅಚ್ (ಸ್ವರ) ರೂಪವಾದ ನಿಪಾತವು ಪ್ರಗೃಹ್ಯಸಂಜ್ಞೆಯನ್ನು ಹೊಂದುತ್ತದೆ. ಇದಕ್ಕೆ ಇ ಇಂದ್ರಃ ಎಂಬಲ್ಲಿ ಪ್ರಯೋಜನ ಹೇಳುತ್ತಾನೆ. ಅಚ್‌ಪರವಾದಾಗ ಸಂಧಿ ಬರುವುದಿಲ್ಲ. ಇ ಉ ಮುಂತಾದ ಒಂದೊಂದೇ ಅಚ್‌ಗಳೂ ನಿಪಾತಗಳ ಮಧ್ಯೆ ಪಠಿತವಾಗಿವೆ. ಅವುಗಳಿಗೆಲ್ಲಾ ಅರ್ಥವೂ ಹೇಳಿದೆ. ವಿಸ್ಮಯಾರ್ಥದಲ್ಲಿ ಇ, ವಿತರ್ಕಾರ್ಥದಲ್ಲಿ ಉ ಇಲ್ಲಿ ಹೇಳಿದೆ. ಇ ಎಂಬುದಕ್ಕೆ ಪ್ರಗೃಹ್ಯಸಂಜ್ಞೆಯಿರುವುದರಿಂದ ಇಪರವಾದಾಗ ಸವರ್ಣದೀರ್ಘವನ್ನು ಬಾಧಿಸಿ ಪ್ರಕೃತಿಭಾವವೇ ಬರುತ್ತದೆ. ಉ ಉಮೇಶವೆಂಬಲ್ಲಿಯೂ ಸವರ್ಣದೀರ್ಘಕ್ಕೆ ಅಪವಾದವಾಗಿ ಪ್ರಕೃತಿಭಾವ. ಆಙ್ ಪ್ರಾದಿಯಲ್ಲಿ ಹೇಳಿದೆ. ಅಲ್ಲಿ ಙಕಾರವು "ಹಲಂತ್ಯಂ" ಸೂತ್ರದಿಂದ ಇತ್ತಾಗಿ "ತಸ್ಯ ಲೋಪಃ" ಎಂಬುದರಿಂದ ಲೋಪವಾದರೆ ಆ ಮಾತ್ರ ಉಳಿಯುತ್ತದೆ. ಚಾದಿ ಗಳ ಮಧ್ಯೆ ಆ ಎಂಬುದೇ ಙಕಾರವಿಲ್ಲದೇ ಹೇಳಿದೆ. ಪ್ರಯೋಗಕಾಲದಲ್ಲಿ ಎರಡೂ ಆ ರೂಪದಲ್ಲಿಯೇ ಇರುತ್ತವೆ. ಆಗ ಆಙ್‌ಗೆಮಾತ್ರ ಪ್ರಗೃಹ್ಯವಿಲ್ಲ. ಆ ಎಂಬುದಕ್ಕೆ ಪ್ರಗೃಹ್ಯಸಂಜ್ಞೆ ಇವೆಯೆಂದು ತಿಳಿಯುವುದು ಹೇಗೆ? ಅದಕ್ಕೋಸ್ಕರ ಅವುಗಳಿಗೆ ಭೇದವನ್ನು ಹೇಳಲು ಅರ್ಥವನ್ನು ಹೇಳುತ್ತಾನೆ. ವಾಕ್ಯಸ್ಮರಣಯೋಃ ಆಙಿತ್ ವಾಕ್ಯ, ಸ್ಮರಣ ಈ ಎರಡು ಅರ್ಥಗಳಲ್ಲಿ ಙಕಾರವಿಲ್ಲದ ಆಕಾರ, ಚಾದಿಪಠಿತವಾದ ಆಕಾರ. ಆಙಲ್ಲ. ಪ್ರಕ್ರಾಂತವಾದ ವಾಕ್ಯಕ್ಕೆ ಬೇರೆ ಅರ್ಥಕಲ್ಪಿಸುವುದೇ ವಾಕ್ಯ. ಒಂದು ವಿಷಯಸ್ಮರಿಸುವುದು ಸ್ಮರಣೆ ಈ ಎರಡು ಅರ್ಥವನ್ನು ತಿಳಿಯಪಡಿಸುವ

ಆ ಎಂಬುದು ಜಿತ್ತಾಗದಿರುವುದರಿಂದ ನಿಷೇಧವಿಲ್ಲ. ಏಕಾಚಾದುದರಿಂದ ಪ್ರಗೃಹ್ಯ ಸಂಜ್ಞಾ ಬಂದೇ ಬರುತ್ತದೆ. ಆಗ ಸಂಧಿಯಿಲ್ಲ. ಆ ಏನಂನು ಮನ್ಯಸೇ। ವಾಕ್ಯವನ್ನು ತಿಳಿಸುವಲ್ಲಿ ಇದು ಉದಾಹರಣೆ ನೀನು ಹೀಗೆ ತಿಳಿಯುತ್ತೀ. ಆ+ಏ ಎಂಬಲ್ಲಿ "ವೃದ್ಧಿರೇಚಿ" ಸೂತ್ರದಿಂದ ವೃದ್ಧಿಪ್ರಾಪ್ತವಾದರೆ ಅದನ್ನು ಬಾಧಿಸಿ ಪ್ರಕೃತಿಭಾವ ಆ ಏವಂ ಕಿಲ ತತ್. ಇದು ಸ್ಮರಣೆಗೆ ಉದಾಹರಣೆ. ಒಂದು ವಸ್ತುವನ್ನು ನೋಡಿ ಅದರಂತಿರುವ ಹಿಂದೆ ನೋಡಿದುದನ್ನು ಸ್ಮರಿಸುವಾಗ ಹೇಳುವಮಾತು ಇದರಂತೆಯೇ ಅದು ಇತ್ತು ಎಂದರ್ಥ. ಇಲ್ಲಿಯೂ ಆಜಲ್ಲವಾದುದರಿಂದ ನಿಷೇಧವಿಲ್ಲ. ಪ್ರಗೃಹ್ಯ ಸಂಜ್ಞಾನಿಮಿತ್ತವಾಗಿ ಪ್ರಕೃತಿಭಾವ. ಅನ್ಯತ್ರ ಜಿತ್. ಬೇರೆಕಡೆಯಲ್ಲಿ ಉಪಯೋಗಿಸುವ ಆಕಾರವೆಲ್ಲಾ ಜಿತ್ತಿಂದೇ ತಿಳಿಯಬೇಕು. ಹಿಂದೆ ಹೇಳಿದ ಎರಡರ್ಥಗಳನ್ನು ಬಿಟ್ಟು ಇನ್ನುಯಾವ ಅರ್ಥದಲ್ಲಿ ಬಂದರೂ ಅದು ಆಜ್ ಎಂದೇ ತಿಳಿಯಬೇಕು. ಆಗ ಅಲ್ಲಿ ಅನಾಜ್ ಎಂದು ನಿಷೇಧಮಾಡಿರುವುದರಿಂದ ಪ್ರಗೃಹ್ಯಸಂಜ್ಞಾ ಬರುವುದಿಲ್ಲ. ಆ (ಈಷತ್) ಉಷ್ಣಮ್=ಓಷ್ಣಮ್. ಇಲ್ಲಿ ಆ ಎಂಬುದು ಸ್ವಲ್ಪ ಎಂಬರ್ಥದಲ್ಲಿ ಇದೆ. ಆದುದರಿಂದ ಜಿತ್. ಆ ಈಷತ್ ಎಂಬುದು ಅರ್ಥನಿರ್ದೇಶ. ಆ+ಉಷ್ಣಮ್ (ಸ್ವಲ್ಪ ಬಿಸಿ) ಎಂದಿರುವಾಗ ಪ್ರಗೃಹ್ಯಸಂಜ್ಞೆಯಿಲ್ಲದಿರುವುದರಿಂದ "ಆದ್ಗುಣಃ" ಎಂಬುದರಿಂದ ಗುಣ ಬಂದರೆ ಓಷ್ಣಮ್ ಎಂದಾಗುತ್ತದೆ. ಆ ಮತ್ತು ಆಜ್‌ಗಳ ವಿವೇಕವನ್ನು ತಿಳಿಯಲು ಭಾಷ್ಯದಲ್ಲಿ ಒಂದುಶ್ಲೋಕವು ಹೇಳಿದೆ "ಈಷದರ್ಥೇ ಕ್ರಿಯಾಯೋಗೇ ಮರ್ಯಾದಾಭಿವಿಧೌ ಚ ಯಃ। ಏತಮಾತಂ ಜಿತ್ತಂ ವಿದ್ಯಾತ್ ವಾಕ್ಯಸ್ಮರಣಯೋರಜಿತ್" ॥ ಸ್ವಲ್ಪವೆಂಬರ್ಥದಲ್ಲಿಯೂ ಕ್ರಿಯಾಸಂಬಂಧವಿರುವಾಗಲೂ ಎರಡುವಿಧವಾದ ಅವಧಿ (ಅದನ್ನು ಬಿಟ್ಟು, ಅದನ್ನು ಸೇರಿ) ಎಂಬರ್ಥದಲ್ಲಿಯೂ ಇರುವ ಆ ಎಂಬುದು ಜಿತ್ತಾದ ಆಕಾರ. ಆಜ್ ವಾಕ್ಯ, ಸ್ಮರಣ ಈ ಎರಡರ್ಥದಲ್ಲಿರುವ ಆಕಾರ ಜಿತ್ತಲ್ಲ. ಕೇವಲಾಕಾರ.

(ಓದಂತನಿಪಾತಕ್ಕೆ ಪ್ರಗೃಹ್ಯಸಂಜ್ಞಾ ವಿಧಾಯಕ ಸೂತ್ರ)

೫೬. ಓತ್ । ೧-೧-೧೫ ॥

ಓದಂತೋ ನಿಪಾತಃ ಪ್ರಗೃಹ್ಯಃ ಸ್ಯಾತ್ ॥ ಅಹೋ ಈಶಾಃ ॥

ಏಕಪದಸೂತ್ರ. ನಿಪಾತಃ ಎಂಬುದು ಹಿಂದಿನಸೂತ್ರದಿಂದ ಅನುವೃತ್ತವಾಗುತ್ತದೆ. ಹಿಂದಿನಂತೇ ಪ್ರಗೃಹ್ಯಂ ಎಂಬುದು ಅನುವೃತ್ತವಾಗಿ ಪುಲ್ಲಿಂಗವಾಗಿ ವಿಪರಿಣತವಾಗುತ್ತದೆ. ಓತ್ ಎಂಬುದು ನಿಪಾತಕ್ಕೆ ವಿಶೇಷಣ. ಯೇನವಿಧಿಸ್ತದಂತಸ್ಯ" ಪರಿಭಾಷೆಯಿಂದ ತದಂತಲಾಭ. **ಸೂತ್ರಾರ್ಥ:**—ಓಕಾರಾಂತವಾದ ನಿಪಾತವು ಪ್ರಗೃಹ್ಯ ಸಂಜ್ಞೆಯನ್ನು ಹೊಂದುತ್ತದೆ. ಅಹೋ ಈಶಾಃ ಉದಾಹರಣೆ.

ಅಹೋ ಯಂಬುದು ಚಾದಿಮಧ್ಯದಲ್ಲಿ ಪಠಿತವಾಗಿದೆ. ಇದು ಓಕಾರಾಂತವಾದುದರಿಂದ ಪ್ರಗೃಹ್ಯಸಂಜ್ಞೆಯನ್ನು ಹೊಂದುತ್ತದೆ. ಅದಕ್ಕೆ ಈಶಾಃ ಎಂಬುದು ಪರವಾದಾಗ ಸಂಧಿ ಬರುವುದಿಲ್ಲ. "ಏಜೋಯವಾಯಾವಃ" ಎಂಬುದರಿಂದ ಅವಾದೇಶಪ್ರಾಪ್ತವಾದರೆ ಅದಕ್ಕೆ ಅಪವಾದವಾಗಿ ಪ್ರಕೃತಿಭಾವ.

(ಓಕಾರಕ್ಕೆ ವಿಕಲ್ಪವಾಗಿ ಪ್ರಗೃಹ್ಯಸಂಜ್ಞಾ ವಿಧಾಯಕಸೂತ್ರ)

೫೭. ಸಂಬುದ್ಧೌ ಶಾಕಲ್ಯಸ್ಯೇತಾವನಾರ್ಷೇ । ೧-೧-೧೬ ॥

ಸಂಬುದ್ಧಿನಿಮಿತ್ತಕ ಓಕಾರೋ ವಾ ಪ್ರಗೃಹ್ಯೋಽವೈದಿಕೇ ಇತೌ ಪರೇ ವಿಷ್ಣೋ ಇತಿ, ವಿಷ್ಣ ಇತಿ, ವಿಷ್ಣವಿತಿ ॥

ಸಂಬುದ್ಧೌ, ಶಾಕಲ್ಯಸ್ಯ, ಇತೌ, ಅನಾರ್ಷೇ। ನಾಲ್ಕುಪದವುಳ್ಳ ಸೂತ್ರ. ಸಂಬುದ್ಧೌ ಎಂಬಲ್ಲಿ ನಿಮಿತ್ತಾರ್ಥದಲ್ಲಿ ಸಪ್ತಮೀ ಬಂದಿದೆ. "ಓತ್" ಸೂತ್ರ ಅನುವೃತ್ತವಾಗುತ್ತದೆ. ನಿಮಿತ್ತಕ್ಕೆ ಅಲ್ಲಿ ಅನ್ವಯ. ಸಂಬುದ್ಧಿನಿಮಿತ್ತಕವಾದ ಓಕಾರ ಎಂದರ್ಥ. ಸಂಬುದ್ಧಿಯಲ್ಲಿ ಕಾರ್ಯರೂಪವಾಗಿ ಬಂದಿರುವ ಓಕಾರ. ಶಾಕಲ್ಯವೆಂಬುದು ಋಷಿಯಹೆಸರು. ಶಾಕಲ್ಯರಮತದಲ್ಲಿ ಈ ಕಾರ್ಯಬರುವುದರಿಂದ ಪಾಣಿನಿಯಮತದಲ್ಲಿ ಇಲ್ಲ. ಆಗ ವಿಕಲ್ಪವೆಂದಾಗುತ್ತದೆ. ಋಷಿಯೆಂದರೆ ವೇದ. ಋಷೌಭವಃ ಆರ್ಷಃ, ನ ಆರ್ಷಃ ಅನಾರ್ಷಃ। ವೇದದಲ್ಲಿ ಉಪಯುಕ್ತವಾಗದಿರುವ ಎಂದರ್ಥ. ಇತಿ ಎಂಬುದು ಅವ್ಯಯವಾದರೂ ಇಲ್ಲಿ ಶಬ್ದಪರವಾದುದರಿಂದ ಸಪ್ತಮೀ ಬಂದಿದೆ. **ಸೂತ್ರಾರ್ಥ.** ವೇದದಲ್ಲಿ ಪ್ರಯೋಗಿಸದ ಇತಿಶಬ್ದ ಪರವಾದಾಗ (ಲೋಕದಲ್ಲಿ ಉಪಯೋಗಿಸುವ ಇತಿ ಶಬ್ದ) ಸಂಬುದ್ಧಿಯಲ್ಲಿ ಬಂದಿರುವ (ಸಂಬುದ್ಧಿನಿಮಿತ್ತಕ) ಓಕಾರವು ವಿಕಲ್ಪವಾಗಿ ಪ್ರಗೃಹ್ಯಸಂಜ್ಞೆಯನ್ನು ಹೊಂದುತ್ತದೆ. ಉದಾಹರಣೆ. ವಿಷ್ಣೋ ಇತಿ. ವಿಷ್ಣು ಶಬ್ದ. ಸಂಬುದ್ಧಿಯಲ್ಲಿ "ಹ್ರಸ್ವಸ್ಯ ಗುಣಃ" ಎಂಬುದರಿಂದ ಗುಣ. (ಓ) ವಿಷ್ಣೋ ಎಂದಾಗುತ್ತದೆ. ಇಲ್ಲಿ ಸಂಬುದ್ಧಿನಿಮಿತ್ತಕವಾದ ಓಕಾರವಾಗಿದೆ. ಇದಕ್ಕೆ ಲೋಕದಲ್ಲಿ ಪ್ರಯೋಗಿಸುವ ಇತಿ ಶಬ್ದ ಪರವಾಗಿದೆ. ಆದುದರಿಂದ ಪ್ರಗೃಹ್ಯಸಂಜ್ಞೆ. ಶಾಕಲ್ಯರಮತದಲ್ಲಿ ಬಂದರೆ ಪ್ರಕೃತಿಭಾವ. ಇತರರ ಮತದಲ್ಲಿ ಇಲ್ಲವಾದುದರಿಂದ ಸಂಧಿಯಾಗುತ್ತದೆ. ಓಕಾರಕ್ಕೆ ಅಚ್‌ಪರವಾದುದರಿಂದ "ಏಜೋಯವಾಯಾವಃ" ಎಂಬುದರಿಂದ ಅವಾದೇಶ. ವಿಷ್ಣವ್+ಇತಿ ಎಂದಾಗುತ್ತದೆ. ಅಲ್ಲಿ ಅಕಾರಪೂರ್ವವಾಗಿರುವ ವಕಾರಕ್ಕೆ ಅಶ್ (ಇ) ಪರವಾದುದರಿಂದ "ಲೋಪಃ ಶಾಕಲ್ಯಸ್ಯ" ಎಂಬುದರಿಂದ ಶಾಕಲ್ಯರಮತದಲ್ಲಿ ವಕಾರಕ್ಕೆ ಲೋಪ ಬಂದರೆ ವಿಷ್ಣ+ಇತಿ ಎಂದಾಗುತ್ತದೆ. ಈ ಲೋಪವಾದದ್ದು "ಪೂರ್ವತ್ರಾಸಿದ್ಧಮ್" ಸೂತ್ರದಿಂದ ಹೇಳಿದಂತೆ "ಆದ್ಗುಣಃ" ಸೂತ್ರಕ್ಕೆ ಗೊತ್ತಿಲ್ಲವಾದುದರಿಂದ ಅದು

ವಕಾರವಿದೆಯೆಂದು ತಿಳಿದುದರಿಂದ ಗುಣ ಬರುವುದಿಲ್ಲ. ಹೀಗೆ ಪ್ರಕೃತಿಭಾವ, ಅವಾದೇಶ, ವಕಾರಲೋಪ ಈ ಮೂರುಕಾರ್ಯಗಳಿಂದ ಮೂರು ರೂಪವಾಗುತ್ತವೆ.

(ಉಙ್‌ಗೆ ವಕಾರಾದೇಶ ವಿಧಾಯಕ ಸೂತ್ರ)

೫೮. ಮಯ ಉಙ್ಞೋ ವೋ ವಾ । ಲ-ಷಿ-೩೩ ॥

ಮಯಃ ಪರಸ್ಯ ಉಙ್ಞೋ ವೋ ವಾಽಚಿ । ಕಿಮ್ವುಕ್ತಮ್ ।
ಕಿಮು ಉಕ್ತಮ್॥

ಮಯಃ, ಉಙ್ಞಃ ವಃ, ವಾ, । ನಾಲ್ಕು ಪದವುಳ್ಳ ಸೂತ್ರ. " ಜಮೋ ಹ್ರಸ್ವಾದಚಿ ಜಮುಣ್ನಿತ್ಯಮ್ " ಎಂಬುದರಿಂದ " ಅಚಿ " ಅನುವೃತ್ತವಾಗುತ್ತದೆ. ಮಯ್ ಪ್ರತ್ಯಾಹಾರ. ಪಂಚಮೀ " ತಸ್ಮಾದಿತ್ಯುತ್ತರಸ್ಯ " ಪರಿಭಾಷೆಯಿಂದ ಮಯಿನ ಅವ್ಯವಹಿತ ಪರಕ್ಕೆ ಕಾರ್ಯವೆಂದು ತಿಳಿಯುತ್ತದೆ. ಉಙ್ಞನಲ್ಲಿ ಞಕಾರ " ಹಲಂತ್ಯಂ " ಸೂತ್ರದಿಂದ ಇತ್ ಸಂಜ್ಞೆಯನ್ನು ಹೊಂದಿ ಲೋಪವಾಗುತ್ತದೆ. **ಸೂತ್ರಾರ್ಥ.** ಮಯಿನ ಪರದಲ್ಲಿರುವ ಉಙ್‌ಗೆ ಅಚ್ ಪರವಾದಾಗ ವಿಕಲ್ಪವಾಗಿ ವಕಾರಾದೇಶ ಬರುತ್ತದೆ. ಉಙ್ ಏಕಾಚಾದ ನಿಪಾತವಾದುದರಿಂದ ಪ್ರಗೃಹ್ಯಸಂಜ್ಞಾ ಬಂದು ಪ್ರಕೃತಿಭಾವ ಪ್ರಾಪ್ತವಾದರೆ ಇಲ್ಲಿ ವಕಾರ ವಿಕಲ್ಪವಾಗಿ ಹೇಳಿರುತ್ತಾನೆ. ಕಿಮ್ವುಕ್ತಮ್ ಕಿಮ್ + ಉ+ಉಕ್ತಮ್ ಎಂದಿರುವಾಗ ಮಯ್ ಕಿಮ್ ಎಂಬಲ್ಲಿರುವ ಮಕಾರ ಆದರ ಪರದಲ್ಲಿ ಉಙ್ ಬಂದು ಅದಕ್ಕೆ ಉ ರೂಪವಾದ ಅಚ್ ಪರವಾದುದರಿಂದ ವಕಾರಾದೇಶ ಬಂದರೆ ಕಿಮ್+ವ್+ಉಕ್ತಮ್ ಎಂದಾಗುತ್ತದೆ. ವಿಕಲ್ಪವಾದುದರಿಂದ ವಕಾರಾದೇಶ ಬಾರದಿದ್ದರೆ ಕಿಮ್+ಉ+ಉಕ್ತಮ್ ಎಂದಿರುವಾಗ ಉ ಎಂಬುದು ಏಕಾಚಾದ ನಿಪಾತವಾದುದರಿಂದ " ನಿಪಾತ ಏಕಾಜನಾಙ್ " ಸೂತ್ರದಿಂದ ಪ್ರಗೃಹ್ಯ ಸಂಜ್ಞಾ ಬಂದರೆ " ಪ್ಲುತಪ್ರಗೃಹ್ಯಾ ಅಚಿ ನಿತ್ಯಮ್ " ಸೂತ್ರದಿಂದ ಪ್ರಕೃತಿಭಾವ. ಕಿಮು ಉಕ್ತಮ್. ಕಿಮ್+ವ್+ಉಕ್ತಮ್ ಎಂದಿರುವಾಗ ಮಕಾರಕ್ಕೆ ವಕಾರರೂಪ ಹಲ್ ಪರವಾದುದರಿಂದ " ಮೋಽನುಸ್ವಾರಃ " ಸೂತ್ರದಿಂದ ಮಕಾರಕ್ಕೆ ಅನುಸ್ವಾರ ಪ್ರಾಪ್ತವಾದರೆ ವಕಾರಾದೇಶವು " ಪೂರ್ವತ್ರಾಸಿದ್ಧಮ್ " ಸೂತ್ರದಿಂದ ಅಸಿದ್ಧವಾಗುವುದರಿಂದ ಉಕಾರ ಪರದಲ್ಲಿದ್ದಂತೇ ಆಗುವುದರಿಂದ ಮಕಾರಕ್ಕೆ ಅನುಸ್ವಾರ ಬರುವುದಿಲ್ಲ.

(ಇಕ್ಕಿಗೆ ಹ್ರಸ್ವ ವಿಧಾಯಕ ಸೂತ್ರ)

೫೯. ಇಕೋಽಸವರ್ಣೇ ಶಾಕಲ್ಯಸ್ಯ ಹ್ರಸ್ವಶ್ಚ । ೬-೧-೧೨೭ ॥

ಪದಾಂತಾ ಇಕೋ ಹ್ರಸ್ವಾ ವಾ ಸ್ಯುರಸವರ್ಣೇಽಚಿ । ಹ್ರಸ್ವವಿಧಿ ಸಾಮ

ರ್ಥ್ಯಾನ್ನ ಸ್ವರ ಸಂಧಿಃ । ಚಕ್ರಿ ಅತ್ರ., ಚಕ್ರ್ಯತ್ರ । ಪದಾಂತಾ ಇತಿ ಕಿಮ್ ? ಗೌರ್ಯೌ॥

ಇಕಃ, ಅಸವರ್ಣೇ, ಶಾಕಲ್ಯಸ್ಯ, ಹ್ರಸ್ವಃ ಚ ॥ ಐದು ಪದಗಳುಳ್ಳ ಸೂತ್ರ. " ಏಜಃ ಪದಾಂತಾದತಿ " ಸೂತ್ರದಿಂದ "ಪದಾಂತಾತ್" " ಇಕೋಯಣಚಿ " ಸೂತ್ರದಿಂದ " ಅಚಿ " ಎಂಬುದೂ ಅನುವೃತ್ತವಾಗುತ್ತದೆ. ಇಕಃ ಎಂಬುದು ಷಷ್ಠೀ. ಅದಕ್ಕೆ ವಿಶೇಷಣವಾದುದರಿಂದ ಪದಾಂತಾತ್ ಎಂಬುದು ಷಷ್ಠ್ಯಂತವಾಗಿ ವಿಪರಿಣತವಾಗುತ್ತದೆ. ಅಸವರ್ಣೇ ಪದವು ಅಚಿನಲ್ಲಿ ಅನ್ವಯಿಸುತ್ತದೆ. ಇಲ್ಲಿ ಚಕಾರವಿರುವುದರಿಂದ ಎರಡು ವಾಕ್ಯವಾಗುತ್ತದೆ. **ಸೂತ್ರಾರ್ಥ.** ಅಸವರ್ಣವಾದ ಅಚ್ ಪರವಾದಾಗ ಪದಾಂತವಾದ ಇಕ್ಕಿಗೆ ಶಾಕಲ್ಯರ ಮತದಲ್ಲಿ (ವಿಕಲ್ಪವಾಗಿ) ಹ್ರಸ್ವವು ಬರುತ್ತದೆ. " ಪ್ರಕೃತ್ಯಾಂತಃ ... .ಸೂತ್ರದಿಂದ ಪ್ರಕೃತ್ಯಾ ಎಂಬುದ ಅನುವೃತ್ತವಾಗುವುದರಿಂದ ಬಂದಿರುವ ಹ್ರಸ್ವವು ವಿಕಲ್ಪವಾಗಿ ಪ್ರಕೃತಿಭಾವವನ್ನು ಹೊಂದುತ್ತದೆ ಎಂದು ಎರಡನೇ ವಾಕ್ಯಾರ್ಥ. ವೃತ್ತಿಕಾರನು ಎರಡು ವಾಕ್ಯಾರ್ಥವನ್ನು ಬರೆದಿಲ್ಲ. ಆ ಅರ್ಥ ಬರುವಂತೆ ಬೇರೆ ರೀತಿ ಹೇಳಿರುತ್ತಾನೆ. ಹ್ರಸ್ವವಿಧಿ ಸಾಮರ್ಥ್ಯಾನ್ನಸ್ವರ ಸಂಧಿಃ. ಇಲ್ಲಿ ಹ್ರಸ್ವವಿಧಾನ ಮಾಡಿರುವುದರಿಂದಲೇ ಯಾವ ಸ್ವರಸಂಧಿಯೂ ಬರುವುದಿಲ್ಲ. ಇಕ್ಕಿಗೆ ಹ್ರಸ್ವ ಮಾಡಿದ ಮೇಲೂ ಯಣಾದಿಗಳು ಬರುವುದಾದರೇ ಮೊದಲೇ ದೀರ್ಘಕ್ಕೇ ಮಾಡಬಹುದಿತ್ತು. ಇಕಾರಕ್ಕಾಗಲೀ ಈಕಾರಕ್ಕಾಗಲೀ ಯಣ್ ಬಂದರೆ ರೂಪ ವ್ಯತ್ಯಾಸವೇನೂ ಆಗುವುದಿಲ್ಲ. ಆದುದರಿಂದ ದೀರ್ಘಕ್ಕೆ ಹ್ರಸ್ವ ವಿಧಾನ ಮಾಡಿರುವುದು ಸಫಲವಾಗಬೇಕಾದರೆ ಆಲ್ಲಿ ಯಾವ ಸ್ವರಸಂಧಿಯೂ ಬರಬಾರದು. ಇದರಿಂದ ಪ್ರಕೃತಿಭಾವವೆಂದು ಸ್ಪಷ್ಟವಾಗುತ್ತದೆ. ಆದುದರಿಂದ ಇಲ್ಲಿ ಚಕಾರದಿಂದ ವಾಕ್ಯದ್ವಯ ಕಲ್ಪನೆ ಅವಶ್ಯಕವಿಲ್ಲವೆಂದು ಭಾಷ್ಯಕಾರರು ಹೇಳಿರುತ್ತಾರೆ. ಚಕಾರ ಹೇಳಿದ ಸೂತ್ರಕಾರರಿಗೆ ವಾಕ್ಯದ್ವಯಕಲ್ಪನೆಯಲ್ಲಿ ತಾತ್ಪರ್ಯವಿದೆ. ಅರ್ಥಾತ್ ಪ್ರಕೃತಿಭಾವ ತಿಳಿಯುವುದರಿಂದ ವಾಕ್ಯದ್ವಯ ಬೇಡವೆಂದು ಭಾಷ್ಯಕಾರರ ಅಭಿಪ್ರಾಯ. ಉದಾ—: ಚಕ್ರೀ+ಅತ್ರ ಇಲ್ಲಿ ಚಕ್ರೀ ಎಂಬಲ್ಲಿ ಪದಾಂತವಾದ ಇಕ್ ಈಕಾರ. ಅದಕ್ಕೆ ಸವರ್ಣವಲ್ಲದ ಅಚ್ (ಅಕಾರ) ಪರದಲ್ಲಿದೆ. ಶಾಕಲ್ಯರ ಮತದಂತೆ ಈಕಾರಕ್ಕೆ ಹ್ರಸ್ವ ಬಂದರೆ ಅದು ಸಫಲವಾಗಲು ಪ್ರಕೃತಿಭಾವ ಹೇಳಿರುವುದರಿಂದ ಚಕ್ರಿ+ಅತ್ರ ಎಂದೇ ಇರುತ್ತದೆ. ಯಣ್ ಸಂಧಿ ಬರುವುದಿಲ್ಲ. ಪಾಣಿನಿ ಮತದಲ್ಲಿ ಹ್ರಸ್ವವಿಲ್ಲವಾದುದರಿಂದ ಚಕ್ರೀ+ಅತ್ರ ಎಂಬಲ್ಲಿ " ಇಕೋಯಣಚಿ " ಸೂತ್ರದಿಂದ ಯಣಾದೇಶ. ಪದಾಂತಾ ಇತಿ ಕಿಮ್ ? ಪದಾಂತವಾದ ಇಕ್ ಹೇಳಿದುದು ಏಕೆ? ಪದಾಂತತ್ವ ವಿಶೇಷಣವಿಲ್ಲವಾದರೆ ಸಾಮಾನ್ಯವಾದ ಇಕ್ಕಿಗೆ ಅಸವರ್ಣ ಅಚ್ ಪರವಾದಾಗ ಹ್ರಸ್ವವಿಕಲ್ಪ ಎಂದರ್ಥವಾಗುವುದು. ಆಗ ಗೌರೀ ಶಬ್ದಕ್ಕೆ ದ್ವಿವಚನ ಪ್ರತ್ಯಯಪರವಾದಾಗ ಅಲ್ಲಿಯೂ (ಗೌರೀ+ಔ) ಬರಬೇಕಾಗುತ್ತದೆ. ಪಾದಾಂತವಾದ ಇಕ್ ಎಂದು ಹೇಳಿದರೆ ಗೌರೀ+ಔ ಎಂಬಲ್ಲಿರುವ

ಈಕಾರವು ಪ್ರಾತಿಪದಿಕಾಂತವಾಗುವುದಲ್ಲದೆ ಪದಾಂತವಾಗುವುದಿಲ್ಲ. ಔ ಸೇರಿದ ಮೇಲೆ ಅದು ಪದವಾಗುತ್ತದೆ. ಸುಬಂತತಿಙಂತವಾದುದು ಪದ. ಅಲ್ಲಿ ಯಣ್‌ಸಂಧಿ ಬಂದು ಗೌರ್ಯೌ ಎಂದಾಗುತ್ತದೆ. ಇಲ್ಲಿ ಯಣ್ ಬಂದಾಗ ಆ ಯಕಾರಕ್ಕೆ ವಿಕಲ್ಪವಾಗಿ ದ್ವಿತ್ವವನ್ನು ಮುಂದಿನ ಸೂತ್ರವಲ್ಲಿ ಹೇಳುತ್ತಾನೆ.

(ಯರ್‌ವರ್ಣಗಳಿಗೆ ದ್ವಿತ್ವವಿಧಾಯಕಸೂತ್ರ)

೬೦. ಅಚೋ ರಹಾಭ್ಯಾಂ ದ್ವೇ । ಲ-ಳ-ಳಒ ॥

ಅಚಃ ಪರಾಭ್ಯಾಂ ರೇಫಹಕಾರಾಭ್ಯಾಂ ಪರಸ್ಯ ಯರೋ ದ್ವೇ ವಾಸ್ಯಃ ಗೌರ್ಯ್ಯೌ ॥

ಅಚಃ, ರಹಾಭ್ಯಾಂ, ದ್ವೇ । ತ್ರಿಪದಸೂತ್ರ- "ಯರೋಽನುನಾಸಿಕೇ ಅನುನಾಸಿಕೋ ವಾ" ಸೂತ್ರದಿಂದ ಯರಃ, ವಾ, ಅನುವೃತ್ತವಾಗುತ್ತವೆ- ಅಚಃ, ರಹಾಭ್ಯಾಂ, ಎರಡೂ ಪಂಚಮೀ "ತಸ್ಮಾದಿತ್ಯುತ್ತರಸ್ಯ" ಪರಿಭಾಷೆಯಿಂದ ಪರಕ್ಕೆ ಕಾರ್ಯವೆಂದು ತಿಳಿಯಬೇಕು. ಯರಃ ಷಷ್ಠೀ. ರಶ್ಚಹಶ್ಚರಹೌ, ತಾಭ್ಯಾಂ ರಹಾಭ್ಯಾಮ್ । **ಸೂತ್ರಾರ್ಥ.** ಅಚ್ಚಿನ ಪರದಲ್ಲಿರುವ ರೇಫಹಕಾರಗಳ ಪರವಲ್ಲಿರುವ ಯರ್‌ವರ್ಣಗಳಿಗೆ ವಿಕಲ್ಪವಾಗಿ ದ್ವಿತ್ವ ಬರುತ್ತದೆ- ಗೌರ್+ಯ್+ಔ. ಇಲ್ಲಿ ಅಜ್ ಗಕಾರದ ಮೇಲಿರುವ ಔಕಾರ. ಅದರ ಪರದಲ್ಲಿ ರೇಫವಿದೆ. ಅದರಪರವಲ್ಲಿ ಯರ್‌ವರ್ಣಯಕಾರವಿದೆ. ಅದಕ್ಕೆ ದ್ವಿತ್ವಬಂದರೆ ಗೌರ್+ಯ್+ಔ=ಗೌರ್ಯ್ಯೌ. ಬಾರದಿದ್ದರೆ ಗೌರ್ಯೌ. ಹೀಗೆ ಎರಡುರೂಪವಾಗುತ್ತದೆ.

(ಸಮಾಸದಲ್ಲಿ ಹ್ರಸ್ವನಿಷೇಧವಿಧಿಸುವ ವಾರ್ತಿಕ)

ವಾ॥ ನ ಸಮಾಸೇ ॥

ವಾಪ್ಯಶ್ವಃ ॥

ದ್ವಿಪದವಾರ್ತಿಕ. ಸಮಾಸದಲ್ಲಿ ಶಾಕಲ್ಯರು ಹೇಳಿರುವ ಹ್ರಸ್ವ ಬರುವುದಿಲ್ಲ. **ಉದಾ**– ವಾಪ್ಯಾಂ ಅಶ್ವಃ ವಾಪ್ಯಶ್ವಃ । ಸಪ್ತಮೀ ತತ್ಪುರುಷಸಮಾಸ. ಸಮಾಸದಲ್ಲಿ ಸುಪ್‌ಲೋಪವಾದಾಗ ವಾಪೀ+ಅಶ್ವ ಎಂದಿರುವಾಗ ಶಾಕಲ್ಯರಮತದಂತೆ ಪದಾಂತವಾದ ಈಕಾರವಾದುದರಿಂದ ಹ್ರಸ್ವಪ್ರಾಪ್ತವಾದರೆ ವಾರ್ತಿಕದಿಂದ ನಿಷೇಧ. ಯಣ್ ಸಂಧಿ ಬಂದಿಸಿ. ವಾಪಿಯಲ್ಲಿರುವ ಕುಮರಿ ಎಂದರ್ಥ.

(ಅಕ್ಕಿಗೆ ಹ್ರಸ್ವವಿಧಾಯಕ ಸೂತ್ರ)

೬೧. ಋತ್ಯಕಃ । ೬-೧-೧೨೮ ॥

ಪದಾಂತಾ ಅಕಃ ಋತಿಪರೇ ಪ್ರಾಗ್ವದ್ವಾ। ಬ್ರಹ್ಮ+ಋಷಿಃ। ಬ್ರಹ್ಮರ್ಷಿಃ॥

ಋತಿ, ಅಕಃ । ದ್ವಿಪದಸೂತ್ರ. "ಏಜಃಪದಾಂತಾದತಿ" ಸೂತ್ರದಿಂದ ಪದಾಂತಾತ್ ಅನುವೃತ್ತವಾಗಿ ಷಷ್ಠ್ಯಂತವಾಗಿ ವಿಪರಿಣತವಾಗುತ್ತದೆ. ಹಿಂದಿನ ಸೂತ್ರದಿಂದ ಶಾಕಲ್ಯಸ್ಯ, ಹ್ರಸ್ವಃ ಎಂಬುದು ಅನುವೃತ್ತವಾಗುತ್ತದೆ, ಋತಿ ಸಪ್ತಮೀ. "ತಸ್ಮಿನ್ನಿತಿನಿರ್ದಿಷ್ಟೇ ಪೂರ್ವಸ್ಯ" ಪರಿಭಾಷೆಯಿಂದ ಋಕಾರದ ಅನ್ಯನಹಿತಪೂರ್ವಕ್ಕೆ ಕಾರ್ಯವೆಂದು ತಿಳಿಯುವುದರಿಂದ ಋಕಾರ ಪರವಾದಾಗ ಎಂದರ್ಥವಾಗುತ್ತದೆ. **ಸೂತ್ರಾರ್ಥ**–ಪದಾಂತವಾದ ಅಕ್ಕಿಗೆ ಋಕಾರಪರವಾದಾಗ ಶಾಕಲ್ಯರ ಮತದಲ್ಲಿ ಹ್ರಸ್ವ ಬರುತ್ತದೆ. ಇದನ್ನೇ "ಪ್ರಾಗ್ವದ್ವಾ" (ಹಿಂದಿನಂತೇ) ಎಂದು ವೃತ್ತಿಯಲ್ಲಿ ಹೇಳಿರುತ್ತಾನೆ. ವೃತ್ತಿಯಲ್ಲಿ ಪ್ರಥಮಾಂತವಾಗಿ ಹೇಳಿರುವುದರಿಂದ ಋಕಾರಪರವಾದಾಗ ಪದಾಂತವಾದ ಇಕ್‌ವರ್ಣಗಳು ವಿಕಲ್ಪವಾಗಿ ಹ್ರಸ್ವವಾಗುತ್ತವೆ ಎಂದರ್ಥವಾಗುತ್ತದೆ. ಉದಾ. ಬ್ರಹ್ಮ+ಋಷಿಃ ಇಲ್ಲಿ ಆಕಾರ ಪದಾಂತವಾದ ಅಕ್ ಇದಕ್ಕೆ ಋಕಾರ ಪರವಾಗುವುದರಿಂದ ಹ್ರಸ್ವ ಬಂದರೆ ಬ್ರಹ್ಮ ಋಷಿಃ ಎಂದಾಗುತ್ತದೆ. ಹಿಂದಿನಂತೆ ಹ್ರಸ್ವಸಾಫಲ್ಯಕ್ಕೋಸ್ಕರ ಜೇರೆ ಸಂಧಿಗಳು ಬರುವುದಿಲ್ಲ. ಹ್ರಸ್ವಬಾರದಿದ್ದರೆ ಆಕಾರಕ್ಕೆ ಅಚ್ ಪರವಾಗುವುದರಿಂದ "ಆದ್ಗುಣಃ" ಸೂತ್ರದಿಂದ ಗುಣ. ಋಕಾರದ ಸ್ಥಾನಕ್ಕೆ ಬರುವುದಾದುದರಿಂದ "ಉರಣ್‌ರಪರಃ" ಎಂಬುದರಿಂದ ರಪರವಾಗಿ (ಅರ್) ಬಂದರೆ ಬ್ರಹ್ಮರ್ಷಿಃ ಎಂದಾಗುತ್ತದೆ. ಪದಾಂತಾಃ ಕಿಮ್? ಇಲ್ಲಿಯೂ ಪದಾಂತವಾದ ಅಕ್ ಎಂದುದು ಏಕೆ ? ಹಾಗೆ ಹೇಳದೇ ಹೋದರೆ ಆರ್ಚ್ಛತ್ ಎಂಬಲ್ಲಿಯೂ ಹ್ರಸ್ವವಿಕಲ್ಪ ಬರಬೇಕಾಗುತ್ತದೆ. ಆ+ಋಚ್ಛತ್. ಋಚ್ಛ ಧಾತುವಿಗೆ ಲಙ್‌ಮಾಡಿದಾಗ ಅಜಾದಿಯಾದುದರಿಂದ ಆಡಾಗಮ ಬರುತ್ತದೆ. ಆಗ ಆ ಎಂಬದು ಋಚ್ಛ್ ಧಾತುವಿನ ಅವಯವ ಪದಾಂತವಲ್ಲ. ಸಾಮಾನ್ಯ ಅಕ್ಕಿಗೆ ಹ್ರಸ್ವವೆಂದುದರಿಂದ ಇಲ್ಲಿಯೂ ಬರಬೇಕಾಗುತ್ತದೆ. ಪದಾಂತತ್ವವಿಶೇಷಣ ಹೇಳಿದರೆ ಪ್ರಕೃತ ಆ ಎಂಬುದು ಪದಾಂತವಾದ ಆಕಾರವಾಗದಿರುವುದರಿಂದ ಹ್ರಸ್ವವಿಲ್ಲ. "ಆಟ್ಟೈಚ್ಚ" ಸೂತ್ರದಿಂದ ವೃದ್ಧಿ. ಹಿಂದಿನಂತೇ ರಪರವಾಗಿ (ಆರ್) ಬಂದರೆ ಆರ್ಚ್ಛತ್ ರೂಪವಾಗುತ್ತದೆ. ಇಲ್ಲಿ ಹೇಳಿದ ಹ್ರಸ್ವವಿಕಲ್ಪವು ಸಮಾಸದಲ್ಲಿಯೂ ಬರುತ್ತದೆ. ಸಪ್ತಋಷೀಣಾಮ್ । ಸಪ್ತರ್ಷೀಣಾಮ್ ॥ ಹೀಗೆ ಸಾಮಾನ್ಯವಾಗಿ ಸ್ವರಕ್ಕೆ ಬರುವಸಂಧಿಯು ವಿವೃತವಾಗಿದೆ. ಮುಂದಿನಪ್ರಕರಣದಲ್ಲಿ ವ್ಯಂಜನಗಳಿಗೆ (ಹಲ್) ಬರುವ ಸಂಧಿಗಳನ್ನು ಹೇಳುತ್ತಾನೆ.

अथ हल्सन्धिः

(श्चुत्वसंधि हेळुव सूत्र)

೬೨. स्तोः श्चुनाश्चुः ॥ ल-ळ-ळं ॥

सकारतवर्गयोः शकारचवर्गाभ्यां योगे शकारचवर्गौ स्तः । रामश्शेते । रामश्चिनोति । सच्चित् । शार्ङ्गिञ्जयः ॥

ತ್ರಿಪದಸೂತ್ರ. स्च तुश्च तयोः समाहारः स्तुः. ಸಮಾಹಾರದಲ್ಲಿ ನಪುಂಸಕವಾಗಬೇಕೆಂಬ ನಿಯಮವಿದ್ದರೂ ಇಲ್ಲಿ ಆರ್ಷವಾದುದರಿಂದ ಪುಲ್ಲಿಂಗ ಬಂದಿದೆ. ಆರ್ಷವೆಂದರೆ ಋಷಿ ಹೇಳಿದುದು. ನಾವು ಹಾಗೆ ಹೇಳುವುದು ತಪ್ಪು. ಇತರೇತರ ದ್ವಂದ್ವಮಾಡಿದರೆ ಪುಲ್ಲಿಂಗ ಸಾಧುವಾದರೂ ದ್ವಿವಚನ ಬರಬೇಕಾಗುತ್ತದೆ. ಹಾಗೆ ದ್ವಿವಚನ ಮಾಡದಿರುವುದು ಆರ್ಷವೆನ್ನಬೇಕು. ಹೀಗೆಮುಂದಿನ ಎರಡು ಶಬ್ದಗಳಲ್ಲಿಯೂ ತಿಳಿಯಬೇಕು. स्तोः षष्ठ्यं. श्च चुश्च श्चुः तेन श्चुना, तृतीयार्थे. श्चुः प्रथमान्तं. तु. चु ಇವು ಉದಿತ್ವಾದುದರಿಂದ ವರ್ಗವನ್ನು ತೆಗೆದುಕೊಳ್ಳಬೇಕು. ಇಲ್ಲಿ ಸಕಾರ ತವರ್ಗಸ್ಥಾನಿ. ಶಕಾರ ಚವರ್ಗ ನಿಮಿತ್ತ. ಶಕಾರಚವರ್ಗ ಆದೇಶ. श्चुना ಎಂಬುದು ಸಹಾರ್ಥದಲ್ಲಿ ತೃತೀಯಾ. **ಸೂತ್ರಾರ್ಥ.** ಸಕಾರ ತವರ್ಗಗಳಿಗೆ ಶಕಾರ ಚವರ್ಗಗಳ ಸಂಬಂಧವಿರುವಾಗ ಶಕಾರ ಚವರ್ಗಗಳು ಆದೇಶವಾಗಿ ಬರುತ್ತವೆ. ಇಲ್ಲಿ ಸ್ಥಾನಿ, ಆದೇಶ, ನಿಮಿತ್ತಗಳು ಸಂಖ್ಯೆಯಲ್ಲಿ ಸಾಮ್ಯವನ್ನು ಹೊಂದಿರುವುದರಿಂದ " ಯಥಾಸಂಖ್ಯಮನುದೇಶಃ ಸಮಾನಾನಾಮ್ " ಎಂಬುದರಿಂದ ಮೊದಲನೇದಕ್ಕೆ ಮೊದಲನೇದು ಎರಡನೇದಕ್ಕೆ ಎರಡನೇದು ಇತ್ಯಾದಿ ನಿಯಮ ಬರಬೇಕಾಗುತ್ತದೆ. ಆದರೆ ಮುಂದಿನ ನಿಷೇಧಾದಿ ಸೂತ್ರಗಳನ್ನು ಪರ್ಯಾಲೋಚಿಸಿ ಇಲ್ಲಿ ಎರಡಕ್ಕೆ ಮಾತ್ರ ನಿಯಮವೆಂದು ತಿಳಿಯಬೇಕು. ಸ್ಥಾನಿ ಆದೇಶಗಳಿಗೆ ಮಾತ್ರ ಯಥಾಸಂಖ್ಯ ನಿಯಮ. ಸ್ಥಾನಿ ನಿಮಿತ್ತಗಳಿಗೆ ಯಥಾಸಂಖ್ಯ ನಿಯಮವಿಲ್ಲ. ಸಕಾರಕ್ಕೆ ಶಕಾರದ ಯೋಗವೆಂದು ನಿಯಮವಿಲ್ಲ. ಶಕಾರ ಚವರ್ಗದಲ್ಲಿ ಯಾವುದಾದರೊಂದರ ಸಂಬಂಧವಿದ್ದರೆ ಸಾಕು. ಯೋಗವೆಂದುದರಿಂದ ಪೂರ್ವಾಪರನಿಯಮವೂ ಇಲ್ಲ. ಸಕಾರ ತವರ್ಗ ಪೂರ್ವದಲ್ಲಿದ್ದು ಪರದಲ್ಲಿ ಶಕಾರಚವರ್ಗ ಯೋಗವಿದ್ದರೂ ಬರುತ್ತದೆ. ಶಕಾರ ಚವರ್ಗ ಪೂರ್ವದಲ್ಲಿದ್ದು ಪರದಲ್ಲಿ ಸಕಾರತವರ್ಗವಿದ್ದರೂ ಆದೇಶ ಬರುವಾಗ ಮಾತ್ರ ಯಥಾಸಂಖ್ಯ ನಿಯಮ. ಸಕಾರಕ್ಕೆ ಶಕಾರವೂ ತವರ್ಗಕ್ಕೆ ಕ್ರಮವಾಗಿ ಚವರ್ಗವೂ ಬರುತ್ತವೆ. ರಾಮಸ್+ಶೇತೇ, (ರಾಮನು ಮಲಗುತ್ತಾನೆ.) ಇಲ್ಲಿ ಸಕಾರಕ್ಕೆ ಶಕಾರದ ಸಂಬಂಧವಿರುವುದರಿಂದ ಸಕಾರಕ್ಕೆ ಶಕಾರ ಬಂದರೆ ರಾಮುಶ್+ಶೇತೇ = ರಾಮುಶ್ಶೇತೇ. ರಾಮುಸ್+ಚಿನೋತಿ. ನಿಮಿತ್ತದಲ್ಲಿ ನಿಯಮವಿಲ್ಲವೆಂದುದರಿಂದ ಸಕಾರಕ್ಕೆ ಚಕಾರದ ಯೋಗವಿರುವುದರಿಂದ ಸಕಾರಕ್ಕೆ ಶಕಾರಾದೇಶ ರಾಮಶ್ಚಿನೋತಿ, (ರಾಮನು ಆರಿಸುತ್ತಾನೆ) ಸತ್+ಚಿತ್, ತಕಾರಕ್ಕೆ ಚಕಾರದ ಸಂಬಂಧವಿರುವುದರಿಂದ ತಕಾರಕ್ಕೆ ಚಕಾರಾದೇಶ. ಸಚ್ಚಿತ್ (ಸದ್ರೂಪಿಯಾದ) ಶಾರ್ಙ್ಗಿನ್+ಜಯ, ನಕಾರಕ್ಕೆ ಞಕಾರಾದೇಶ ಶಾರ್ಙ್ಗಿಞ್ಜಯ, (ವಿಷ್ಣುವೇ ಜಯಶೀಲನಾಗು)

(श्चुत्वनिषेध विधायक सूत्र)

೬೩. शात् । ल-ळ-ळळ ॥

शात्परस्य तवर्गस्य श्चुत्वम् न स्यात् । विश्नः प्रश्नः ॥

ಏಕಪದ ಸೂತ್ರ. शात् ಶಕಾರದ ಪಂಚಮೀರೂಪ. "नसदान्ताट्टोरनाम्" ಸೂತ್ರದಿಂದ ನ ಪದವೂ "स्तोःश्चुनाश्चुः" ಸೂತ್ರದಿಂದ "तोः" "श्चुः" ಪದಗಳೂ ಅನುವೃತ್ತವಾಗುತ್ತವೆ. शात್ ಪಂಚಮಿಯಾ ಆದುದರಿಂದ "तस्मादित्युत्तरस्य" ಪರಿಭಾಷೆಯಿಂದ ಪರಕ್ಕೆ ಎಂದು ಲಬ್ಧವಾಗುತ್ತದೆ. **ಸೂತ್ರಾರ್ಥ.** ಶಕಾರದ ಪರದಲ್ಲಿರುವ ತವರ್ಗಕ್ಕೆ ಶ್ಚುತ್ವವು ಬರುವುದಿಲ್ಲ. ಸ್ಥಾನಿನಿಮಿತ್ತಗಳಿಗೆ ಯಥಾಸಂಖ್ಯ ನಿಯಮವಿರುವುದಾದರೆ ಈ ನಿಷೇಧವು ಕೂಡುತ್ತಿರಲಿಲ್ಲ. ಇದರಿಂದಲೇ ಕೇವಲ ಸ್ಥಾನಿಆದೇಶಗಳಿಗೆ ಯಥಾಸಂಖ್ಯನಿಯಮವೆಂದು ಹಿಂದೆ ಹೇಳಿರುವುದು. विश्नः ವಿಶ್+ನಃ ವಿಚ್ಛಧಾತುವಿಗೆ ನಜ್ ಪ್ರತ್ಯಯ. "ष्ट्वोःश्चूठनुनासिकेच" ಸೂತ್ರದಿಂದ ಚಕಾರಕ್ಕೆ ಶಕಾರಾದೇಶ. ಶಕಾರದ ಪರದಲ್ಲಿ ತವರ್ಗದ ನಕಾರ ಬಂದುದರಿಂದ ಶ್ಚುತ್ವ ನಿಷೇಧ ಬಂದರೆ ಹಾಗೇ ಇರುತ್ತದೆ. विश्नः. ಹೀಗೆಯೇ ಪ್ರಚ್ಛಧಾತುವಿಗೂ ನಜ್ ಪ್ರತ್ಯಯ ಬಂದಾಗ ಛಕಾರಕ್ಕೆ ಶಕಾರಾದೇಶ. ಪ್ರಶ್+ನಃ ಎಂದಿರುವಾಗ ಹಿಂದಿನಂತೇ ನಿಷೇಧ ಬಂದರೆ प्रश्नः ಎಂದಾಗುತ್ತದೆ.

(श्चुत्वसंधिविधायकसूत्र)

೬೪. ष्टुनाष्टुः ॥ ल-ळ-ळ೧॥

स्तोः ष्टुनाष्टुः योगे ष्टुः स्यात् । रामष्षष्ठः । रामष्टीकते । पेष्टा । तट्टीका । चक्रिण्ष्ठक्कसे ॥

ದ್ವಿಪದಸೂತ್ರ. ಹಿಂದಿನ ಸೂತ್ರದಿಂದ "स्तोः" ಅನುವೃತ್ತವಾಗುತ್ತದೆ. स्च टुश्च ष्टुः. ಹಿಂದಿನಂತೇ ಆರ್ಷಏಕವಚನ. **ಸೂತ್ರಾರ್ಥ.** ಸಕಾರತವರ್ಗ

ಗಳಿಗೆ ಷಕಾರಟವರ್ಗಗಳ ಸಂಬಂಧವಿರುವಾಗ ಷಕಾರಟವರ್ಗಗಳು ಆದೇಶವಾಗಿ ಬರು
ತ್ತವೆ. ಇಲ್ಲಿಯೂ ಸ್ಥಾನಿಆದೇಶಗಳಿಗೆ ಮಾತ್ರ ಯಥಾಸಂಖ್ಯನಿಯಮ. ಸ್ಥಾನಿ
ನಿಮಿತ್ತಗಳಿಗೆ ಯಥಾಸಂಖ್ಯನಿಯಮವಿಲ್ಲ. ರಾಮಸ್+ಷಷ್ಠಃ. ಇಲ್ಲಿ ಸಕಾರಕ್ಕೆ
ಷಕಾರದ ಸಂಬಂಧವಿರುವುದರಿಂದ ಸಕಾರಕ್ಕೆ (ನಿಯಮದಿಂದ) ಷಕಾರಾ
ದೇಶ. ರಾಮಷ್ಷಷ್ಠಃ (ರಾಮನು ಆರನೆಯವನು). ರಾಮಸ್+ಟೀಕತೇ.
ಸಕಾರಕ್ಕೆ ಟಕಾರದ ಯೋಗವಿರುವುದರಿಂದ ಸಕಾರಕ್ಕೆ ಷಕಾರಾದೇಶ. ರಾಮಷ್ಟೀ
ಕತೇ (ರಾಮನು ಹೋಗುತ್ತಾನೆ). ಸ್ಥಾನಿನಿಮಿತ್ತಗಳಿಗೆ ಯಥಾಸಂಖ್ಯವಿಲ್ಲದಿರುವುದ
ರಿಂದ ಈ ಉದಾಹರಣೆ ಸಮಂಜಸವಾಗಿದೆ. ಪೇಷ್+ತಾ (ಪುಡಿಮಾಡುವವನು).
ಪಿಷ್ಣಸಂಚೂರ್ಣನೇ ಧಾತು. ತೃಚ್‌ಪ್ರತ್ಯಯ. ತಕಾರಕ್ಕೆ ಷಕಾರಸಂಬಂಧವಿರು
ವುದರಿಂದ ಟಕಾರಾದೇಶ. ಪೂರ್ವಪರನಿಯಮವಿಲ್ಲವೆಂದುದರಿಂದ ತಕಾರಪರದ
ಲ್ಲಿದ್ದರೂ ಬರುತ್ತದೆ. ತತ್+ಟೀಕಾ. ತಕಾರಕ್ಕೆ ಟಕಾರಸಂಬಂಧವಿರುವುದರಿಂದ
ಅದಕ್ಕೆ ಟಕಾರಾದೇಶ. ತಟ್ಟೀಕಾ. (ಅದರ ವ್ಯಾಖ್ಯಾನ). ಚಕ್ರಿನ್+ಢೌಕಸೇ.
ನಕಾರಕ್ಕೆ ಟವರ್ಗದ ಢಕಾರಸಂಬಂಧವಿರುವುದರಿಂದ ಣಕಾರಾದೇಶ. ಚಕ್ರಿಣ್
ಢೌಕಸೇ. (ವಿಷ್ಣುವೇ ಹೋಗುತ್ತೀ),

(ಷ್ಟುತ್ವನಿಷೇಧಸೂತ್ರ)

೬೫. ನ ಪದಾಂತಾಟ್ಟೋರನಾಮ್ ॥೮-೪-೪೨॥

ಪದಾಂತಾಟ್ಟವರ್ಗಾತ್ಪರಸ್ಯ ಅನಾಮಃ ಸ್ತೋಃ ಷ್ಟುರ್ನ ಸ್ಯಾತ್। ಷಟ್‌ಸಂತಃ। ಷಟ್‌ತೇ। ಪದಾಂತಾತ್ಕಿಮ್ ಈಟ್ಟೇ। ಟೋಃ ಕಿಂ। ಸರ್ಪಿಷ್ಟಮಮ್ ॥

ನ, ಪದಾಂತಾತ್, ಟೋಃ, ಅನಾಮ್ ॥ ನಾಲ್ಕು ಪದಗಳುಳ್ಳ ಸೂತ್ರ. "ಸ್ತೋಃ
ಷ್ಟುಃ" ಎಂಬುದು ಅನುವೃತ್ತವಾಗುತ್ತದೆ. ಅನಾಮ್ ಎಂಬುದು ಸ್ತೋಃ ಎಂಬುದಕ್ಕೆ
ವಿಶೇಷಣ. ಅದು ಲುಪ್ತಷಷ್ಠೀಕಪದ. ಅಂದರೆ ಅದರಮೇಲಿನ ಷಷ್ಠೀವಿಭಕ್ತಿ
ಯನ್ನು ಲೋಪಮಾಡಿ ಪಾಣಿನಿಯು ಹೇಳಿರುತ್ತಾನೆ, ಟೋಃ ಪಂಚಮೀ. ಪರಕ್ಕೆ
ಕಾರ್ಯವೆಂದು ಲಬ್ಧವಾಗುತ್ತದೆ. **ಸೂತ್ರಾರ್ಥ.** ಪದಾಂತವಾದ ಟವರ್ಗದ
ಪರದಲ್ಲಿ ನಾಮ್ ಪ್ರತ್ಯಯದ ನಕಾರವನ್ನು ಬಿಟ್ಟು ಉಳಿದ ಸಕಾರತವರ್ಗಗಳಿಗೆ
ಷ್ಟುತ್ವ ಬರುವುದಿಲ್ಲ ನಾಮ್ ಷಷ್ಠೀಬಹುವಚನಪ್ರತ್ಯಯ. ಅಲ್ಲಿನ ನಕಾರಕ್ಕೆ
ಷ್ಟುತ್ವ ನಿಷೇಧವಿಲ್ಲ. ಷಟ್‌ಸಂತಃ (ಆರುಜನ ಸಜ್ಜನರು). ಇಲ್ಲಿ ಟಕಾರ ಪದಾಂತ
ವಾಗಿದ್ದು ಅದರ ಪರದಲ್ಲಿ ಸಕಾರ ಬಂದುದರಿಂದ ಷ್ಟುತ್ವ ಬರುವುದಿಲ್ಲ. ಬಂದಿದ್ದ
ಷಂತಃ ಎಂದಾಗುತ್ತಿತ್ತು. ಷಟ್+ತೇ ಎಂದಿರುವಾಗಲೂ ಟಕಾರವು ಪದಾಂತವಾ

ಅದರ ಪರದಲ್ಲಿ ತಕಾರ ಬಂದುದರಿಂದ ಟಕಾರಾದೇಶ ಬರುವುದಿಲ್ಲ. ಪದಾಂತಾತ್
ಕಿಮ್? ದಳಕೃತ್ಯ (ಪದಪ್ರಯೋಜನ) ವನ್ನು ಹೇಳುತ್ತಾನೆ. ಇಲ್ಲಿ ಪದಾಂತವಾದ
ಟವರ್ಗವೆಂದುದೇಕೆ? ಟವರ್ಗದ ಪರದಲ್ಲಿರುವ ಸ್ತುವಿಗೆ ಷ್ಟುತ್ವವಿಲ್ಲವೆಂದರೆ ಸಾಲದೇ?
ಅಂದರೆ ಈಟ್ಟೇ ಇಲ್ಲಿಯೂ ನಿಷೇಧ ಬರಬೇಕಾಗುತ್ತದೆ. ಈಡ ಸ್ತುತೌ ಧಾತು. ಲಟ್ಟಿ
ನಲ್ಲಿ ತೇ ಪ್ರತ್ಯಯ ಬಂದಾಗ ಈಡ್+ತೇ ಎಂದಾಗುತ್ತದೆ. ಇಲ್ಲಿ ನಿಷೇಧವನ್ನು
ತಪ್ಪಿಸುವುದಕ್ಕೋಸ್ಕರ ಪದಾಂತವಾಗಬೇಕು ಎಂದಿರುತ್ತಾನೆ ಪ್ರಕೃತ ತೇ ಸೇರಿದ
ಮೇಲೆ ಪದವಾಗುತ್ತದೆ. ಮಧ್ಯದ ಈಡ್ ಎಂಬುದಕ್ಕೆ ಪದಸಂಜ್ಞೆ ಇಲ್ಲದಿರುವುದರಿಂದ
ಪದಾಂತವಾದ ಡಕಾರವಾಗುವುದಿಲ್ಲ. ಆದುದರಿಂದ ಷ್ಟುತ್ವ ಬಂದು ಈಡ್+ಟೇ ಆಗಿ
"ಖರಿ ಚ" ಎಂಬ ಸೂತ್ರದಿಂದ ಡಕಾರಕ್ಕೂ ಟಕಾರಾದೇಶ ಬಂದು ಈಟ್ಟೇ ಎಂದು
ರೂಪವಾಗುತ್ತದೆ. (ಸ್ತುತಿಸುತ್ತಾನೆ). ಟೋಃ ಕಿಮ್? ನಿಮಿತ್ತ, ಷಕಾರಟವರ್ಗವೆಂದು
ಹಿಂದಿನ ಸೂತ್ರದಲ್ಲಿ ಹೇಳಿದೆ. ಇಲ್ಲಿ ಕೇವಲ ಟವರ್ಗ ಮಾತ್ರ ತೆಗೆದುಕೊಂಡುದು
ದೇಕೆ? ಅಂದರೆ ಸರ್ಪಿಷ್ಟಮಮ್। ಸರ್ಪಿಷ್+ತಮಮ್ ಎಂದಿರುವಾಗ ಷ್ಟುತ್ವ ಬಂದು
(ತಕಾರಟಕಾರ) ಸರ್ಪಿಷ್+ಟಮಮ್=ಸರ್ಪಿಷ್ಟಮಮ್ ಎಂದಾಗಿದೆ. ಷಕಾರ
ವನ್ನೂ ಹೇಳುವುದಾದರೆ ಇಲ್ಲಿ ಪದಾಂತವಾದ ಷಕಾರದ ಪರದಲ್ಲಿ ಸ್ತುವಿನ ತಕಾರ
ವಿರುವುದರಿಂದ ನಿಷೇಧ ಬಂದು ಇಷ್ಟವಾದ ರೂಪವಾಗದೇ ಹೋಗಬೇಕಾಗುತ್ತದೆ.
ಅದಕ್ಕೋಸ್ಕರ ಷಕಾರವನ್ನು ಬಿಟ್ಟು ಕೇವಲ ಟವರ್ಗ ಮಾತ್ರ ಹೇಳಿರುತ್ತಾನೆ.

(ಷ್ಟುತ್ವನಿಷೇಧಕ್ಕೆ ಪ್ರತಿಪ್ರಸವ ಹೇಳುವ ವಾರ್ತಿಕ)

ವಾ॥ ಅನಾಮ್ನವತಿ ನಗರೀಣಾಮಿತಿ ವಾಚ್ಯಮ್ ॥

ಷಣ್ಣಾಮ್। ಷಣ್ಣವತಿಃ। ಷಣ್ಣಗರ್ಯಃ ॥

ಅನಾಮ್ನವತಿನಗರೀಣಾಂ, ಇತಿ, ವಾಚ್ಯಮ್ ॥ ತ್ರಿಪದ ವಾರ್ತಿಕ. ಸೂತ್ರದಲ್ಲಿ
ಹೇಳಿದುದು ಸಾಕಾಗಲಿಲ್ಲವೆಂದು ವಾರ್ತಿಕ ಆರಬ್ಧವಾಗಿದೆ. ನಾಮಿನ ನಕಾರವನ್ನು
ಬಿಟ್ಟು ಉಳಿದ ಸಕಾರ ತವರ್ಗಗಳಿಗೆ ಷ್ಟುತ್ವವಿಲ್ಲವೆಂದು ಸೂತ್ರದಲ್ಲಿ ಹೇಳಿದೆಯಷ್ಟೆ.
ಹಾಗೆಯೇ ನವತಿ ಶಬ್ದದ ನಕಾರಕ್ಕೂ ನಗರೀ ಶಬ್ದದ ನಕಾರಕ್ಕೂ ಷ್ಟುತ್ವ ನಿಷೇಧವಿಲ್ಲ
ವೆನ್ನಬೇಕು ಎಂದು ವಾರ್ತಿಕಾರರ ಮತ. ಉತ್ತರೋತ್ತರ ಮುನಿಗಳಿಗೆ ಪ್ರಾಶಸ್ತ್ಯವಿ
ರುವುದರಿಂದ ಇದೇ ಸಿದ್ಧಾಂತ. ಷಡ್+ನಾಮ್. ಷಷ್ ಶಬ್ದಕ್ಕೆ ಷಷ್ಠೀ ಬಹುವಚನ
ನಾಮ್ ಪ್ರತ್ಯಯ ಮಾಡಿದಾಗ ಷಕಾರಕ್ಕೆ ಜಸ್ತ್ವ ಬಂದು ಈ ರೂಪವಾಗಿದೆ. ಇಲ್ಲಿ
"ಸ್ವಾದಿಷ್ವಸರ್ವನಾಮಸ್ಥಾನೇ" ಸೂತ್ರದಿಂದ ಷಡ್ ಎಂಬುದಕ್ಕೆ ಪದಸಂಜ್ಞಾ ಇರು
ವುದರಿಂದ ಡಕಾರ ಪದಾಂತವಾಗುತ್ತದೆ. ಆ ಪರದನಕಾರಕ್ಕೆ ಷ್ಟುತ್ವನಿಷೇಧ ಪ್ರಾಪ್ತ
ವಾದರೆ ಅದಕ್ಕೆ ನಿಷೇಧ. ಷ್ಟುತ್ವ ಬಂದರೆ ಷಡ್+ಣಾಮ್. "ಪ್ರತ್ಯಯೇ ಭಾಷಾಯಾಂ

ನಿತ್ಯಂ " ಎಂಬ ವಾರ್ತಿಕದಿಂದ ಡಕಾರಕ್ಕೆ ಣಕಾರಾದೇಶ, ಷಣ್ಣಾಮ್, (ಆರರ) ಷಡ್ + ನವತಿಃ ಇಲ್ಲಿಯೂ ನಿಷೇಧವಿಲ್ಲದಿರುವುದರಿಂದ ಷ್ಟುತ್ವ ಬಂದರೆ ಷಡ್ + ಣವತಿಃ " ಯರೋಽನುನಾಸಿಕೇ ಅನುನಾಸಿಕೋವಾ " ಎಂಬುದರಿಂದ ಪೂರ್ವದ ಡಕಾರಕ್ಕೆ ಅನುನಾಸಿಕ ಣಕಾರಾದೇಶ. ಷಣ್ಣವತಿಃ, (ತೊಂಭತ್ತಾರು) ಷಡ್ + ನಗರ್ಯ್ಯಃ ಹಿಂದಿನಂತೆ ನಕಾರಕ್ಕೆ ಷ್ಟುತ್ವ, ಡಕಾರಕ್ಕೆ ಅನುನಾಸಿಕ ಣಕಾರ. ಷಣ್ಣಗರ್ಯ್ಯಃ (ಆರು ಪಟ್ಟಣಗಳು)

(ಷ್ಟುತ್ವನಿಷೇಧ ಸೂತ್ರ)

೬೬. ತೋಃ ಷಿ । ಲ-ಳ-ಳಷಿ ॥

ನ ಷ್ಟುತ್ವಮ್ । ಸನ್ಸಷ್ಠಃ ॥

ದ್ವಿಪದ ಸೂತ್ರ. ತೋಃ ಷಷ್ಠೀ, ಷಿ ಸಪ್ತಮೀ, " ತಸ್ಮಿನ್ನಿತಿನಿರ್ದಿಷ್ಟೇ ಪೂರ್ವಸ್ಯ " ಪರಿಭಾಷೆಯಿಂದ ಷಕಾರ ಪರವಾದಾಗ ಕಾರ್ಯ ಎಂದರ್ಥವಾಗುತ್ತದೆ. **ಸೂತ್ರಾರ್ಥ.** ತವರ್ಗಕ್ಕೆ ಷಕಾರ ಪರವಾದಾಗ ಷ್ಟುತ್ವನಿಷೇಧ ಬರುತ್ತದೆ. ಸನ್ + ಷಷ್ಠಃ ಉದಾಹರಣೆ. ತವರ್ಗದ ನಕಾರಕ್ಕೆ ಷಕಾರ ಪರವಾಗಿರುವುದರಿಂದ ನಕಾರಕ್ಕೆ ಣಕಾರ ಬರುವುದಿಲ್ಲ. ಈ ಎಲ್ಲಾ ನಿಷೇಧಗಳಿಂದ ಸ್ಥಾನಿ ನಿಮಿತ್ತಗಳಿಗೆ ಯಥಾಸಂಖ್ಯ ನಿಯಮವಿಲ್ಲವೆಂದು ಸ್ಪಷ್ಟವಾಗುತ್ತದೆ.

(ಜಸ್ತ್ವಸಂಧಿ ವಿಧಾಯಕ ಸೂತ್ರ)

೬೭. ಝಲಾಂ ಜಶೋಽನ್ತೇ ॥ ಲ-ಶಿ-ಷಿ ॥

ಪದಾಂತೇ ಝಲಾಂ ಜಶಃ ಸ್ಯುಃ । ವಾಗೀಶಃ ॥

ಝಲಾಂ, ಜಶಃ, ಅಂತೇ । ತ್ರಿಪದ ಸೂತ್ರ. ಝಲ್, ಜಶ್, ಪ್ರತ್ಯಾಹಾರ. ಝಲಾಂ ಷಷ್ಠೀ. ಜಶಃ ಪ್ರಥಮಾ ಬಹುವಚನ. " ಪದಸ್ಯ " ಅಧಿಕಾರ ಸೂತ್ರ. ಇಲ್ಲಿ ಆದಕ್ಕೆ ಅಂತೇ ಎಂಬಲ್ಲಿ ಅನ್ವಯ. **ಸೂತ್ರಾರ್ಥ.** ಪದಾಂತದಲ್ಲಿರುವ ಝಲ್ ವರ್ಣಗಳಿಗೆ ಜಶ್ ವರ್ಣಗಳು ಬರುತ್ತವೆ. ವಾಕ್ + ಈಶಃ ಎಂದಿರುವಾಗ ಕಕಾರ ಪದದ ಕೊನೆಯಲ್ಲಿ ಬಂದಿದೆ. " ಸುಪ್ತಿಙಂತಂ ಪದಮ್ " ಸೂತ್ರದಿಂದ ವಾಕ್ ಎಂಬುದು ಪದ. ಇದಕ್ಕೆ ಜಸ್ತ್ವ ಬರಬೇಕು " ಸ್ಥಾನೇಂತರತಮಃ " ಸೂತ್ರದಿಂದ ಕವರ್ಗದಲ್ಲಿರುವ ಗಕಾರರೂಪ ಜಸ್ತ್ವವು (ಕಂಠಸಾಮ್ಯ) ಬಂದರೆ ವಾಗೀಶಃ ಎಂದಾಗುತ್ತದೆ.

(ಅನುನಾಸಿಕ ಸಂಧಿ)

೬೮. ಯರೋಽನುನಾಸಿಕೇಽನುನಾಸಿಕೋ ವಾ ॥ ಲ-ಳ-ಳಷ

ಯರಃ ಪದಾಂತಸ್ಯಾನುನಾಸಿಕೇ ಪರೇಽನುನಾಸಿಕೋ ವಾ ಸ್ಯಾತ್ ॥
ಏತನ್ಮುರಾರಿಃ, ಏತದ್ ಮುರಾರಿಃ ॥

ಯರಃ, ಅನುನಾಸಿಕೇ, ಅನುನಾಸಿಕಃ ವಾ । ನಾಲ್ಕುಪದಗಳುಳ್ಳ ಸೂತ್ರ. ಯರಃ ಷಷ್ಠೀ. ಅನುನಾಸಿಕೇ ಸಪ್ತಮೀ ಆದುದರಿಂದ ಪರದಲ್ಲಿರುವಾಗ ಎಂದು ಫಲಿತವಾಗುತ್ತದೆ. " ನಪದಾಂತಾಟ್ಟೋರನಾಮ್ " ಸೂತ್ರದಿಂದ "ಪದಾಂತಾತ್" ಎಂಬುದು **ಅನು**ವೃತ್ತವಾಗಿ ಷಷ್ಠ್ಯಂತವಾಗಿ ವಿಪರಿಣತವಾಗುತ್ತದೆ. ಯರಃ ಎಂಬಲ್ಲಿ ಅದಕ್ಕೆ ಅನ್ವಯ **ಸೂತ್ರಾರ್ಥ.** ಪದಾಂತವಾದ ಯರ್ ವರ್ಣಗಳಿಗೆ ಅನುನಾಸಿಕ ವರ್ಣ ಪರವಾದಾಗ ಅನುನಾಸಿಕವು ವಿಕಲ್ಪವಾಗಿ ಬರುತ್ತದೆ. ಅನುನಾಸಿಕ ವರ್ಣ " ಮುಖನಾಸಿಕಾವಚನೋಽನುನಾಸಿಕಃ " ಎಂಬಲ್ಲಿ ವಿವೃತವಾಗಿದೆ. ಪ್ರಕೃತ ಞ, ಮ, ಙ, ಣ, ನ ಅನುನಾಸಿಕ ವರ್ಣಗಳು. ಏತದ್ + ಮುರಾರಿಃ ಎಂಬಲ್ಲಿ ದಕಾರ ಪದಾಂತವಾದ ಯರ್ ಅದಕ್ಕೆ ಮಕಾರರೂಪ ಅನುನಾಸಿಕವು ಪರವಾಗಿದೆ. ಆದುದರಿಂದ ದಕಾರಕ್ಕೆ ದಂತ ಸ್ಥಾನ. ಸಾಮ್ಯದಿಂದ ನಕಾರರೂಪ ಅನುನಾಸಿಕವರ್ಣ ಬಂದರೆ ಏತನ್ಮುರಾರಿಃ, ವಿಕಲ್ಪವೆಂದುದರಿಂದ ಬಾರದಿದ್ದರೆ ಏತದ್ + ಮುರಾರಿಃ ಎಂದಾಗುತ್ತದೆ.

(ನಿತ್ಯಾನುನಾಸಿಕ ವಿಧಾಯಕ ವಾರ್ತಿಕ)

ವಾ ॥ ಪ್ರತ್ಯಯೇ ಭಾಷಾಯಾಂ ನಿತ್ಯಮ್ ॥

ತನ್ಮಾತ್ರಮ್ । ಚಿನ್ಮಯಮ್ ॥

ತ್ರಿಪದ ವಾರ್ತಿಕ. ಭಾಷಾಯಾಂ ಎಂದರೆ ಲೋಕದಲ್ಲಿ ಎಂದರ್ಥ. ವಾರ್ತಿಕಾರ್ಥ-ಪದಾಂತವಾದ ಯರ್ ವರ್ಣಗಳಿಗೆ ಅನುನಾಸಿಕಾದಿಯಾದ ಪ್ರತ್ಯಯ ಪರವಾದಾಗ ಲೌಕಿಕ ಪ್ರಯೋಗದಲ್ಲಿ ನಿತ್ಯವಾಗಿ ಅನುನಾಸಿಕ ಬರುತ್ತದೆ. ತನ್ಮಾತ್ರಮ್ ತಚ್ಛಬ್ದಕ್ಕೆ ಪ್ರಮಾಣಾರ್ಥದಲ್ಲಿ ಮಾತ್ರಚ್ ಪ್ರತ್ಯಯ. ತದ್ + ಮಾತ್ರಮ್ ಎಂದಿರುವಾಗ ದಕಾರಕ್ಕೆ (ಯರ್) ಪ್ರತ್ಯಯದ ಮಕಾರ ಪರವಾದುದರಿಂದ ದಂತಸ್ಥಾನ ಸಾಮ್ಯದಿಂದ ನಕಾರಾದೇಶ. ತನ್ಮಾತ್ರಮ್ (ಆಪ್ರಮಾಣವುಳ್ಳದ್ದು). ಚಿದ್ + ಮಯಮ್ ಎಂದಿರುವಾಗ ಮಯಟ್ ಪ್ರತ್ಯಯ ಸಂಬಂಧಿಮಕಾರ ಪರವಾದುದರಿಂದ ದಕಾರಕ್ಕೆ ನಕಾರ ರೂಪ ಅನುನಾಸಿಕಾದೇಶ. ಚಿನ್ಮಯಮ್, ಚೇತನಸ್ವರೂಪವೆಂದರ್ಥ.

(ತವರ್ಗಕ್ಕೆ ಪರಸವರ್ಣವಿಧಾಯಕಸೂತ್ರ)

೬೯. ತೋರ್ಲಿ ॥ ಲ-ಳ ೬೦॥

ತವರ್ಗಸ್ಯ ಲಕಾರೇ ಪರೇ ಪರಸವರ್ಣಃ । ತಲ್ಲಯಃ । ವಿದ್ವಾಁಲ್ಲಿಖತಿ । ನಸ್ಯಾನುನಾಸಿಕೋ ಲಃ ॥

ತೋಃ ಲಿ । ದ್ವಿಪದಸೂತ್ರ. "ಅನುಸ್ವಾರಸ್ಯ ಯಯಿ ಪರಸವರ್ಣಃ" ಸೂತ್ರದಿಂದ "ಪರಸವರ್ಣಃ" ಪದವು ಅನುವೃತ್ತವಾಗುತ್ತದೆ. ತು ಎಂಬುದರ ಷಷ್ಠೀ

ತೋಃ ಆಗಿದೆ. ಉದಿತ್ತಾದುದರಿಂದ ವರ್ಗಗ್ರಹಣ. ಲಿ. ಸಪ್ತಮಿಯಾದುದರಿಂದ
ಲಕಾರಪರವಾದಾಗ ಎಂಬ ಫಲಿತಾರ್ಥ. **ಸೂತ್ರಾರ್ಥ.** ತವರ್ಗಕ್ಕೆ ಲಕಾರಪರ
ದಲ್ಲಿರುವಾಗ ಪರಸವರ್ಣ ಬರುತ್ತದೆ. ತತ್+ಲಯಃ. ತಕಾರಕ್ಕೆ ಲಕಾರಪರ
ವಾದುದರಿಂದ ತಕಾರಕ್ಕೆ ಪರದ ಲಕಾರದ ಸವರ್ಣಲಕಾರವೇ ಬಂದರೆ ತಲ್+ಲಯ
ತಲ್ಲಯಃ ಎಂದಾಗುತ್ತದೆ. ನಿದ್ವಾನ್+ಲಿಖತಿ. ಇಲ್ಲಿ ತವರ್ಗದ ನಕಾರಕ್ಕೆ ಲಕಾರ
ಬರಬೇಕು. ನಕಾರ ಅನುನಾಸಿಕವಾದುದರಿಂದ ಲಕಾರದಲ್ಲಿಯೂ ಅನುನಾಸಿಕ
ಭೇದವಿರುವುದರಿಂದ ಅನುನಾಸಿಕವಾದ ಲಕಾರವೇ ಬರುತ್ತದೆ. ಅದನ್ನೇ "ನಸ್ಯಾ
ಲಃ" ಎಂದು ಹೇಳಿದುತ್ತಾನೆ. ವಿದ್ವಾಁಲ್ಲಿಖತಿ ॥

(ಪೂರ್ವಸವರ್ಣವಿಧಾಯಕಸೂತ್ರ)

೭೦. ಉದಃ ಸ್ಥಾಸ್ತಮ್ಭೋಃ ಪೂರ್ವಸ್ಯ ॥೮-೪-೬೧॥

ಉದಃ ಪರಯೋಃ ಸ್ಥಾಸ್ತಮ್ಭೋಃ ಪೂರ್ವಸವರ್ಣಃ ।

ಉದಃ, ಸ್ಥಾಸ್ತಮ್ಭೋಃ, ಪೂರ್ವಸ್ಯ । ತ್ರಿಪದಸೂತ್ರ. ಹಿಂದಿನಿಂದ ಅನು
ವೃತ್ತವಾದ, ಪರಸವರ್ಣ ಎಂಬಲ್ಲಿ ಸವರ್ಣಕ್ಕೆ ಮಾತ್ರ ಅನುವೃತ್ತಿ. "ಸ್ವರಿತೇ
ನಾಧಿಕಾರಃ" ಎಂಬ ಸೂತ್ರದಿಂದ ಸ್ವರಿತದಿಂದ ಕೂಡಿದುದಕ್ಕೆ ಮಾತ್ರ ಅನುವೃತ್ತಿ
ಎಂದು ಹೇಳಿದೆ. ಪ್ರಕೃತ ಪರಸವರ್ಣವೆಂದು ಒಂದೇಸಮಾಸಪದವಾದರೂ ಸವರ್ಣ
ಎಂಬಲ್ಲಿ ಮಾತ್ರ ಸ್ವರಿತವಿರುವುದರಿಂದ ಅಷ್ಟಕ್ಕೆ ಮಾತ್ರ ಅನುವೃತ್ತಿ. ಉದಃ ಎಂಬುದು
ಪಂಚಮಿ. ಮುಂದೆ ಹೇಳುವ ಪರಿಭಾಷೆಯಿಂದ ಅನ್ಯವಹಿತಪರಕ್ಕೆ ಎಂದರ್ಥ
ವಾಗುತ್ತದೆ. ಸ್ಥಾ ಸ್ತಮ್ಭು ಎರಡು ಧಾತುಗಳು. **ಸೂತ್ರಾರ್ಥ.** ಉತ್ ಎಂಬ ಉಪ
ಸರ್ಗದ ಪರದಲ್ಲಿರುವ ಸ್ಥಾ ಮತ್ತು ಸ್ತಮ್ಭುಧಾತುಗಳಿಗೆ ಪೂರ್ವದ ಸವರ್ಣವು ಆದೇಶ
ವಾಗಿ ಬರುತ್ತದೆ. ಇಲ್ಲಿ ಉದಿನ ಅವ್ಯವಹಿತಪರವಾದ ಎಂಬ ಅರ್ಥವು ಹೇಗೆ ಸಿಕ್ಕು
ತ್ತದೆ ? ಪೂರ್ವದಲ್ಲಿರುವ ಎಂಬರ್ಥವೂ ಆಗಬಹುದಲ್ಲವೇ ಅಂದರೆ ನಿಯಾಮಕವಾದ
ಪರಿಭಾಷೆಯನ್ನು ಹೇಳುತ್ತಾನೆ.

(ಪಂಚಮಿಯಿಂದ ಪರಕ್ಕೆ ಕಾರ್ಯನಿಯಮ ಹೇಳುವ ಪರಿಭಾಷಾಸೂತ್ರ)

೭೧. ತಸ್ಮಾದಿತ್ಯುತ್ತರಸ್ಯ ॥೮-೧-೬೭॥

**ಪಂಚಮೀನಿರ್ದೇಶೇನ ಕ್ರಿಯಮಾಣಂ ಕಾರ್ಯಂ ವರ್ಣಾಂತರೇಣಾ
ವ್ಯವಹಿತಸ್ಯ ಪರಸ್ಯ ಜ್ಞೇಯಮ್ ॥**

ತಸ್ಮಾತ್, ಇತಿ, ಉತ್ತರಸ್ಯ । ತ್ರಿಪದಸೂತ್ರ. ತಸ್ಮಾತ್ ಎಂಬುದು ಸಕಲ
ಕಾರ್ಯವಿಧಾಯಕ ಸೂತ್ರಗಳಲ್ಲಿರುವ ಪಂಚಮ್ಯಂತ್ಯದ ಅನುಕರಣ. ಇತಿ ಎಂ

ಮೇಲೆ ತೋರುತ್ತಿರುವಾಗ ಎಂದು ಅಧ್ಯಾಹಾರ ಮಾಡಿಕೊಳ್ಳಬೇಕು. "ತಸ್ಮಿನ್ನಿತಿ–
ನಿರ್ದಿಷ್ಟೇ ಪೂರ್ವಸ್ಯ" ಸೂತ್ರದಿಂದ "ನಿರ್ದಿಷ್ಟೇ" ಅನುವೃತ್ತವಾಗುತ್ತದೆ. ಪಂಚ
ಮ್ಯಂತಾರ್ಥವು ತೋರಿ ಅವ್ಯವಹಿತವಾಗಿ ಉಚ್ಚಾರಿತವಾದಾಗ ಅದರ ಪರಕ್ಕೆ ಕಾರ್ಯ
ಬರುತ್ತದೆ. **ಸೂತ್ರಾರ್ಥ.** ಪಂಚಮಿಯನ್ನು ಉಚ್ಚರಿಸಿ ಅದನ್ನು ಆಶ್ರಯಿಸಿ
ಮಾಡುವ ಕಾರ್ಯವು ಪಂಚಮ್ಯಂತಕ್ಕಿಂತ ವರ್ಣಾಂತರವ್ಯವಧಾನವಿಲ್ಲದಿರುವ
(ಅವ್ಯವಹಿತಪರವಾದ) ಪರಕ್ಕೇ ಬರುತ್ತದೆ. ಇದು ಪರಕ್ಕೇ ಬರುತ್ತದೆ ಎಂದು
ನಿಯಮಮಾಡುವುದರಿಂದ ಪರಿಭಾಷಾಸೂತ್ರ. ಪ್ರಕೃತ ಉದಃ ಪಂಚಮಿಯಾದುದ
ರಿಂದ ಉದಿನ ಅವ್ಯವಹಿತಪರವಲ್ಲಿರುವ ಸ್ಥಾಸ್ತಮ್ಭುಗಳಿಗೆ ಕಾರ್ಯವೆಂದು ತಿಳಿಯು
ತ್ತದೆ. ಎಲ್ಲಿಯಾದರೂ ಹೀಗೆಯೇ ಪಂಚಮ್ಯಂತವನ್ನು ಹೇಳಿ ಕಾರ್ಯ ಹೇಳಿದರೆ
ಅವ್ಯವಹಿತಪರಕ್ಕೆ ಕಾರ್ಯವೆಂದೂ, ಸಪ್ತಮಂತ್ಯವನ್ನು ಹೇಳಿ ಕಾರ್ಯ ವಿಧಿಸಿದರೆ
ಆ ಕಾರ್ಯವು ಸಪ್ತಮಂತ್ಯದ ಅವ್ಯವಹಿತಪೂರ್ವಕ್ಕೆಂದೂ ತಿಳಿಯಬೇಕು. ಆ
ಪಂಚಮ್ಯಂತಾರ್ಥವು ಪೂರ್ವದಲ್ಲಿರಬೇಕೆಂದೂ ಸಪ್ತಮ್ಯಂತಾರ್ಥವು ಪರದಲ್ಲಿರ
ಬೇಕೆಂದೂ ಫಲಿತವಾಗುತ್ತದೆ. ಆದುದರಿಂದಲೇ ಪಂಚಮ್ಯಂತಸ್ಥಳದಲ್ಲಿ ಪರಸ್ಯ
(ಪರಕ್ಕೆ) ಎಂತಲೂ ಸಪ್ತಮ್ಯಂತಸ್ಥಳದಲ್ಲಿ ಪರೇ (ಪರದಲ್ಲಿರುವಾಗ) ಎಂತಲೂ ವೃತ್ತಿ
ಬರೆಯುತ್ತಾನೆ. ಪ್ರಕೃತ ಉದಿನ ಪರದಲ್ಲಿರುವ ಸ್ಥಾಸ್ತಮ್ಭುಗಳಿಗೆ ಪೂರ್ವಸವರ್ಣ
ವೆಂದರೆ ಷಷ್ಠಿಯಾದುದರಿಂದ "ಆಲೋಂತ್ಯಸ್ಯ" ಪರಿಭಾಷೆಯಿಂದ ಅವುಗಳ ಅಂತ್ಯಕ್ಕೆ
ಪರಸವರ್ಣವೆಂದು ಅರ್ಥವಾಗಬೇಕಾಗುತ್ತದೆ. ಆದರೆ ಸಕಾರಕ್ಕೆ ಬರಬೇಕು. ಅದ
ಕ್ಕೋಸ್ಕರ "ಅಲೋಂತ್ಯಸ್ಯ" ಪರಿಭಾಷೆಗೆ ಅಪವಾದವಾಗಿ ಆದಿಗೆ ಆದೇಶ ನಿಯಮ
ಮಾಡುವ ಪರಿಭಾಷೆಯನ್ನು ಹೇಳುತ್ತಾನೆ.

(ಆದಿಗೆ ಕಾರ್ಯ ನಿಯಮಮಾಡುವ ಸೂತ್ರ)

೭೨. ಆದೇಃ ಪರಸ್ಯ ॥೧-೧-೫೪॥

ಪರಸ್ಯ ಯದ್ವಿಹಿತಂ ತತ್ತಸ್ಯಾದೇರ್ಬೋಧ್ಯಮ್ । ಇತಿ ಸಸ್ಯ ಥಃ ॥

ದ್ವಿಪದಸೂತ್ರ. ವಿಹಿತಂ ಎಂಬುದು ಅಧ್ಯಾಹಾರ. **ಸೂತ್ರಾರ್ಥ.** ಪರಕ್ಕೆ
ಯಾವ ಕಾರ್ಯವು ವಿಹಿತವಾಗಿದೆಯೋ ಅದು ಪರದ ಆದಿಗೆ ಬರುತ್ತದೆ ಎಂದು ತಿಳಿ
ಯಬೇಕು. ಇದು "ಅಲೋಂತ್ಯಸ್ಯ" ಸೂತ್ರಕ್ಕೆ ಅಪವಾದ. ಪ್ರಕೃತ ಉದಿನ ಪರ
ವಾದ ಸ್ಥಾಸ್ತಮ್ಭುಗಳಿಗೆ ಪರಸವರ್ಣರೂಪ ಕಾರ್ಯವಿಧಾನ ಮಾಡಿರುವುದರಿಂದ
ಸ್ಥಾಸ್ತಮ್ಭುಗಳ ಆದಿಯಾದ ಸಕಾರಕ್ಕೆ ಬರುತ್ತದೆ ಎಂದು ತಿಳಿಯಬೇಕು. ಸಕಾರಕ್ಕೆ
ಪೂರ್ವದ ದಕಾರದ ಸವರ್ಣ ಹೇಳಬೇಕು, ದಕಾರದ ಸವರ್ಣ ಐದು. (ತವರ್ಗ)
ತವರ್ಗದಲ್ಲಿ ಸಕಾರಸದೃಶವಾದ ವರ್ಣ ಯಾವುದು ? ಸ್ಥಾನಸಾಮ್ಯ ಐದು ವರ್ಣ

ಗಳಿಗೂ ಇವೆ. ಅಭ್ಯಂತರಪ್ರಯತ್ನ ತೆಗೆದುಕೊಂಡರೆ ಯಾವುದೂ ಸಮವಾಗುವುದಿಲ್ಲ. ಆದುದರಿಂದ ಬಾಹ್ಯಪ್ರಯತ್ನದಿಂದ ಇಲ್ಲಿ ಸಾಮ್ಯ ಹೇಳಬೇಕು. ಸಕಾರಕ್ಕೆ ಮತ್ತು ಪ್ರಾಣ. ವಿವಾರ, ಶ್ವಾಸ, ಅಘೋಷಪ್ರಯತ್ನಗಳಿವೆ. ತವರ್ಗದಲ್ಲಿ ಈ ನಾಲ್ಕು ಪ್ರಯತ್ನವುಳ್ಳದ್ದು ಥಕಾರಮಾತ್ರವಾಗುವುದರಿಂದ ಸಕಾರಸ್ಥಾನದಲ್ಲಿ ಥಕಾರ ಬರುತ್ತದೆ. ಇದನ್ನೇ " ಇತಿ ಸಸ್ಯ ಥಃ " ಎಂದಿದ್ದಾನೆ ಉದ್+ಸ್‌ಥಾನಂ. ಉದಿನ ಪರದಲ್ಲಿ ಸ್ಥಾಧಾತು ಬಂದಿವೆ. ಸ್ಥಾಧಾತುವಿಗೆ ಲ್ಯುಟ್‌ಪ್ರತ್ಯಯ ಮಾಡಿದಾಗ ಸ್ಥಾನಂ ಎಂತಾಗುತ್ತದೆ. ಸಕಾರಕ್ಕೆ ಥಕಾರಾದೇಶ ಬಂದರೆ ಉದ್+ಥ್‌ಥಾನಂ ಎಂದು ರೂಪವಾದಾಗ ಆದೇಶ ಥಕಾರಕ್ಕೆ ವಿಕಲ್ಪಲೋಪವನ್ನು ಹೇಳುತ್ತಾನೆ.

(ಝರ್ ವರ್ಣಗಳಿಗೆ ವಿಕಲ್ಪಲೋಪವಿಧಾಯಕಸೂತ್ರ)

೭೩. ಝರೋ ಝರಿ ಸವರ್ಣೇ ॥ಲ-ಳ-೬೫॥

ಹಲಃ ಪರಸ್ಯ ಝರೋ ವಾ ಲೋಪಃ ಸವರ್ಣೇ ಝರಿ ॥

ತ್ರಿಪದ ಸೂತ್ರ. " ಝಯೋ ಹೋನ್ಯತರಸ್ಯಾಮ್ " ಸೂತ್ರದಿಂದ " ಅನ್ಯತರಸ್ಯಾಮ್ (ವಿಕಲ್ಪ) " ಹಶೋಯಮಾಂ ಯಮಿ ಲೋಪಃ " ಸೂತ್ರದಿಂದ " ಹಲಃ " " ಲೋಪಃ " ಎಂತಲೂ ಅನುವೃತ್ತವಾಗುತ್ತವೆ. ಹಲಃ ಪಂಚಮಿಯಾದುದರಿಂದ " ತಸ್ಮಾದಿತ್ಯುತ್ತರಸ್ಯ " ಸೂತ್ರದಿಂದ ಪರಸ್ಯ ಎಂದು ಲಬ್ಧವಾಗುತ್ತದೆ. **ಸೂತ್ರಾರ್ಥ.** ಹಲಿನಪರದಲ್ಲಿರುವ ಝರ್ ವರ್ಣಗಳಿಗೆ ಸವರ್ಣವಾದ ಝರ್‌ವರ್ಣ ಪರವಾದಾಗ ವಿಕಲ್ಪವಾಗಿ ಲೋಪವಾಗುತ್ತದೆ. ಉದ್+ಥ್+ಥಾನಂ ಎಂದಿರುವಾಗ ಹಲ್‌ದಕಾರ ಅದರ ಪರದಲ್ಲಿರುವ ಝರ್‌ವರ್ಣ ಮೊದಲಿನ ಥಕಾರ. ಅದಕ್ಕೆ ಸವರ್ಣವಾದ ಝರ್‌ವರ್ಣವೆಂದರೆ ಥಕಾರ ಪರವಾದುದರಿಂದ ಮೊದಲಿನ ಥಕಾರಕ್ಕೆ ಲೋಪ ಬಂದು ಉದ್+ಥಾನಮ್ ಎಂದಾಗುತ್ತದೆ. ಆಗ ದಕಾರಕ್ಕೆ ತಕಾರಾದೇಶ ವಿಧಾಯಕ ಸೂತ್ರವನ್ನು ಹೇಳುತ್ತಾನೆ.

(ಚರ್ತ್ವವಿಧಾಯಕ ಸೂತ್ರ)

೭೪. ಖರಿ ಚ ॥ಲ-ಳ-೫೫॥

ಖರಿ ಝಲಾಂ ಚರಃ ಸ್ಯುಃ । ಇತ್ಯುದೋ ದಸ್ಯ ತಃ । ಉತ್ಥಾನಮ್ । ಉತ್ತಂಭನಮ್ ॥

ಖರಿ, ಚ । ತ್ರಿಪದ ಸೂತ್ರ. "ಝಲಾಂ ಜಶ್ ಝಶಿ" ಸೂತ್ರದಿಂದ " ಝಲಾಂ " " ಅಭ್ಯಾಸೇ ಚರ್ಚ " ಸೂತ್ರದಿಂದ " ಚರ್ " ಪದಗಳು ಅನುವೃತ್ತವಾಗುತ್ತವೆ

ಸೂತ್ರಾರ್ಥ. ಖರ್ ಪರವಾದಾಗ ಝಲ್ ವರ್ಣಗಳಿಗೆ ಚರ್ ವರ್ಣಗಳು ಆದೇಶವಾಗಿ ಬರುತ್ತವೆ. ಪ್ರಕೃತ ಉದ್+ಥಾನಮ್ ಎಂಬಲ್ಲಿ ಝಲ್ ಉದಿನ ದಕಾರ ಅದಕ್ಕೆ ಥಕಾರರೂಪ ಖರ್ ಪರವಾದುದರಿಂದ ದಕಾರಕ್ಕೆ ಚರ್ ಬರಬೇಕು. ಚರ್ ವರ್ಣಗಳಲ್ಲಿ ಸ್ಥಾನ ಸಾಮ್ಯದಿಂದ ತಕಾರವೇ ಬರುವುದರಿಂದ ಉತ್+ಥಾನಮ್ = ಉತ್ಥಾನಮ್ ಎಂದಾಗುತ್ತದೆ. ಥಕಾರಕ್ಕೆ ಲೋಪ ಬಾರದಿದ್ದಾಗ ದಕಾರಕ್ಕೆ ಈ ಸೂತ್ರದಿಂದ ತಕಾರಾದೇಶ ಬಂದರೆ ಉತ್‌ಥ್‌ಥಾನಮ್ ಎಂದೇ ರೂಪಹೇಳಬೇಕು. ಉದಿಗೆ ಸ್ತಂಭು ಪರವಾದಾಗ ಪೂರ್ವ ಸವರ್ಣಕ್ಕೆ ಉದಾಹರಣೆ. **ಉತ್ತಂಭನಮ್** ಉದ್+ಸ್ತಂಭನಂ ಎಂದಿರುವಾಗ ಸಕಾರಕ್ಕೆ ಹಿಂದಿನಂತೆ ಬಾಹ್ಯಪ್ರಯತ್ನ ಸಾಮ್ಯದಿಂದ ಥಕಾರಾದೇಶ. ಉದ್+ಥ್+ತಂಭನಂ ಎಂದಿರುವಾಗ " ಝರೋ ಝರಿ ಸವರ್ಣೇ " ಸೂತ್ರದಿಂದ ತಕಾರರೂಪ ಸವರ್ಣ ಪರವಾದುದರಿಂದ ವಿಕಲ್ಪವಾಗಿ ಥಕಾರಲೋಪ. ದಕಾರಕ್ಕೆ " ಖರಿ ಚ " ಸೂತ್ರದಿಂದ ತಕಾರಾದೇಶ, ಉತ್+ತಂಭನನಮ್ = ಉತ್ತಂಭನಮ್. ಥಕಾರಕ್ಕೆ ಲೋಪಬಾರದಿದ್ದರೆ ಉತ್+ಥ್+ತಂಭನಂ = ಉತ್ಥ್ತಂಭನಂ ಎಂದು ಎರಡು ರೂಪಗಳಾಗುತ್ತವೆ.

(ಹಕಾರಕ್ಕೆ ಪೂರ್ವಸವರ್ಣವಿಧಾಯಕಸೂತ್ರ)

೭೫. ಝಯೋ ಹೋನ್ಯತರಸ್ಯಾಮ್ ॥ಲ-ಳ-೬೨॥

ಝಯಃ ಪರಸ್ಯ ಹಸ್ಯ ವಾ ಪೂರ್ವಸವರ್ಣಃ । ನಾದಸ್ಯ ಘೋಷಸ್ಯ ಸಂವಾರಸ್ಯ ಮಹಾಪ್ರಾಣಸ್ಯ ತಾದೃಶೋ ವರ್ಗಚತುರ್ಥಃ । ವಾಗ್ಘರಿಃ । ವಾಗ್ಹರಿಃ ॥

ಝಯಃ, ಹಃ, ಅನ್ಯತರಸ್ಯಾಮ್ ॥ ತ್ರಿಪದಸೂತ್ರ. "ಉದಃಸ್ಥಾಸ್ತಂಭೋಃ ಪೂರ್ವಸ್ಯ" ಸೂತ್ರದಿಂದ "ಪೂರ್ವಸ್ಯ" "ಅನುಸ್ವಾರಸ್ಯಯಯಿ" ಸೂತ್ರದಿಂದ "ಸವರ್ಣಃ" ಎಂತಲೂ ಅನುವೃತ್ತವಾಗುತ್ತವೆ. ಅನ್ಯತರಸ್ಯಾಮ್ ವಿಕಲ್ಪಾರ್ಥಕ ಅವ್ಯಯ, ಪರ್ಯಾಯಶಬ್ದಗಳಲ್ಲಿ ಲಾಘವಗೌರವಚರ್ಚೆಯಿಲ್ಲವೆಂದುದರಿಂದ ವಾ ಬದಲಾಗಿ "ಅನ್ಯತರಸ್ಯಾಮ್" ಎಂದು ಹೇಳಿರುತ್ತಾನೆ. ಝಯಃ ಪಂಚಮಿ. ಹಃ ಹಕಾರವೆಂದರ್ಥ. **ಸೂತ್ರಾರ್ಥ.** ಝಯ್‌ವರ್ಣದ ಪರದಲ್ಲಿರುವ ಹಕಾರಕ್ಕೆ ವಿಕಲ್ಪವಾಗಿ ಪೂರ್ವಸವರ್ಣವು ಆದೇಶವಾಗಿ ಬರುತ್ತದೆ. ವಾಕ್+ಹರಿಃ. ಜಸ್ತ್ವದಿಂದ ಕಕಾರಕ್ಕೆ ಗಕಾರಾದೇಶ. ವಾಗ್+ಹರಿಃ ಎಂದಿರುವಾಗ ಈ ಸೂತ್ರಕ್ಕೆ ಲಕ್ಷ್ಯ. ಝಯ್ ಗಕಾರ. ಅದರ ಪರದಲ್ಲಿ ಹಕಾರ ಬಂದುದರಿಂದ ಅದಕ್ಕೆ ಪೂರ್ವಸವರ್ಣ. ಇಲ್ಲಿ ಹಕಾರಕ್ಕೆ ಕಂಠಸ್ಥಾನವಾದುದರಿಂದ ಪೂರ್ವದ ಸವರ್ಣ ಬರುವುದಾದರೆ ಕವರ್ಗವೈದೂ ಬರಬೇಕಾಗುತ್ತದೆ. ಆದುದರಿಂದ ಹಿಂದಿನಂತೆ ಬಾಹ್ಯಪ್ರಯತ್ನದಿಂದ

ಅಂತರತಮ್ಯವನ್ನು ಹೇಳಬೇಕೆಂದು ‘‘ನಾದಸ್ಯ ಘೋಷಸ್ಯ.....’’ ಎಂದು ಹೇಳ್ತಾನೆ. ಹಕಾರಕ್ಕೆ ಮಹಾಪ್ರಾಣ, ನಾದ, ಘೋಷ, ಸಂವಾರ, ಪ್ರಯತ್ನಗಳು ಇದ್ದುದರಿಂದ ಕವರ್ಗದಲ್ಲಿ ಈ ನಾಲ್ಕು ಪ್ರಯತ್ನವುಳ್ಳ ವರ್ಣವು ಘಕಾರ ಮಾತ್ರವಾಗುತ್ತದೆ, (ಹಶಃ ಸಂವಾರಾ ನಾದಾ ಘೋಷಾಶ್ಚ) ಆಗ ಘಕಾರವು ಬಂದಾಗ ವಾಗ್+ಘರಿಃ ವಾಗ್ಘರಿಃ ಎಂದಾಗುತ್ತದೆ. ಪೂರ್ವಸವರ್ಣ ವಿಕಲ್ಪವಾದುದರಿಂದ ಬಾರದಿದ್ದರೆ ವಾಗ್ಹರಿಃ ಎಂದೇ ಇರುತ್ತದೆ.

(ಶಕಾರಕ್ಕೆ ಛತ್ವವಿಧಾಯಕಸೂತ್ರ)

೭೬. ಶಶ್ಛೋಽಟಿ ॥ ಲ–ಳಿ–೬೩ ॥

ಝಯಃ ಪರಸ್ಯ ಶಸ್ಯ ವೋ ವಾಽಟಿ । ತದ್‌ಶಿವ ಇತ್ಯತ್ರ ದಸ್ಯ ಶ್ಚುತ್ವೇನ ಜಕಾರೇ ಕೃತೇ ಖರಿ ಚೇತಿ ಜಕಾರಸ್ಯ ಚಕಾರಃ । ತಚ್ಛಿವಃ । ತಜ್‌ಶಿವಃ ॥

ಶಃ, ಛಃ, ಅಟಿ । ತ್ರಿಪದಸೂತ್ರ. ಹಿಂದಿನ ಸೂತ್ರದಿಂದ “ ಝಯಃ ,, “ ಅನ್ಯತರಸ್ಯಾಮ್ ” ಪದಗಳು ಅನುವೃತ್ತವಾಗುತ್ತವೆ. ಶಃ ಷಷ್ಠೀ. (ಶ್ ಶೌ ಶಃ) ಛಃ ಪ್ರಥಮಾಂತ. **ಸೂತ್ರಾರ್ಥ.** ಝಯಿನಪರದಲ್ಲಿರುವ ಶಕಾರಕ್ಕೆ ಅಟ್‌ಪರವಾದಾಗ ಛಕಾರವು ವಿಕಲ್ಪವಾಗಿ ಬರುತ್ತದೆ. ತದ್+ಶಿವಃ ಎಂಬಲ್ಲಿ ದಕಾರಕ್ಕೆ ಶ್ಚುತ್ವದಿಂದ ಜಕಾರಮಾಡಿದಮೇಲೆ “ಖರಿಚ” ಸೂತ್ರದಿಂದ ಜಕಾರಕ್ಕೆ ಚಕಾರಾದೇಶ. ತಜ್+ಶಿವಃ ಎಂಬಲ್ಲಿ ಛತ್ವವನ್ನು ಹೇಳಬೇಕಾದರೆ ಅದಕ್ಕಿಂತ ಮೊದಲು ಬರುವ ಕಾರ್ಯವನ್ನು ಹೇಳಬೇಕು. ದಕಾರಕ್ಕೆ ಶಕಾರದ ಯೋಗವಿರುವುದರಿಂದ “ಸ್ತೋಃ ಶ್ಚುನಾ ಶ್ಚುಃ” ಎಂಬುದರಿಂದ ಶ್ಚುತ್ವ ಬಂದು ದಕಾರಕ್ಕೆ ಜಕಾರಾದೇಶ. ತಜ್+ಶಿವಃ ಎಂದಿರುವಾಗ “ಖರಿಚ” ಸೂತ್ರದಿಂದ ಜಕಾರಕ್ಕೆ ಚಕಾರಾದೇಶ ತಚ್+ಶಿವಃ ಎಂದಾಗುತ್ತದೆ. ಅವೆರಡು ಕಾರ್ಯಗಳು ಪೂರ್ವಸೂತ್ರಗಳಿಂದ ವಿಹಿತವಾದುದರಿಂದ ಮೊದಲು ಹೇಳಬೇಕು ತ್ರಿಪಾದಿಯಲ್ಲಿ ಪೂರ್ವಸೂತ್ರಗಳಿಗೇ ಪ್ರಾಧಾನ್ಯವಿರುತ್ತದೆಂದು “ಪೂರ್ವತ್ರಾಸಿದ್ಧಮ್” ಎಂಬುದರಿಂದ ತಿಳಿಯುತ್ತದೆ. ಈಗ ಝಯ್ ಚಕಾರ. ಅದರ ಪರದಲ್ಲಿ ಶಕಾರ ಬಂದಿದೆ. ಅವಕ್ಕೆ ಇಕಾರರೂಪ ಅಚ್ ಪರವಾಗಿದೆ. (ತಚ್+ಶ್+ಇವ) ಆದುದರಿಂದ ಶಕಾರಕ್ಕೆ ಛಕಾರಾದೇಶ. ತಚ್+ಛಿವಃ=ತಚ್ಛಿವಃ । ಛಕಾರಾದೇಶ ವಿಕಲ್ಪವಾದುದರಿಂದ ಅದು ಬಾರದಿದ್ದರೆ ತಜ್‌ಶಿವಃ ಎಂದೇ ಇರುತ್ತದೆ. (ತಸ್ಯ ಶಿವಃ=ಅವನ ಶಿವನು).

(ಛತ್ವನಿಯಾಮಕವಾರ್ತಿಕ)

ವಾ॥ ಛತ್ವಮಮೀತಿ ವಾಚ್ಯಮ್ ॥

ತಚ್ಛ್ಲೋಕೇನ ॥

ಛತ್ವಂ, ಅಮಿ, ಇತಿ, ವಾಚ್ಯಮ್ ॥ ಚತುಷ್ಪದವಾರ್ತಿಕ. ಝಯಿನ ಪರವಾದ ಶಕಾರಕ್ಕೆ ಅಚ್‌ಪರವಾದಾಗ ಛತ್ವವೆಂದು ಸೂತ್ರದಲ್ಲಿ ಹೇಳಿದೆ. ವಾರ್ತಿಕಕಾರರು ಅದು ಸಾಲದೆಂದು ಶಕಾರಕ್ಕೆ ಅಮ್ ಪರವಾದಾಗ ಛತ್ವಬರುತ್ತದೆಂದು ನಿಯಮು ಮಾಡಿರುತ್ತಾರೆ. ತಚ್ಛ್ಲೋಕೇನ. ತದ್+ಶ್ಲೋಕೇನ ಎಂದಿರುವಾಗ ಹಿಂದೆ ಹೇಳಿದಂತೆ ಮೊದಲು ದಕಾರಕ್ಕೆ ಶ್ಚುತ್ವದಿಂದ ಜಕಾರಾದೇಶ. ಅದಕ್ಕೆ “ ಖರಿಚ ” ಸೂತ್ರದಿಂದ ಚಕಾರಾದೇಶ. ತಚ್+ಶ್ಲೋಕೇನ; ಎಂದಿರುವಾಗ ಇಲ್ಲಿ ಶಕಾರಕ್ಕೆ (ಶ್+ಲೋಕೇನ) ಲಕಾರ ಪರವಾಗಿದೆ. ಸೂತ್ರಕಾರರ ಮತದಂತೆ ಲಕಾರ ಆಟಿನಲ್ಲಿ ಸೇರದಿರುವುದರಿಂದ ಶಕಾರಕ್ಕೆ ಛತ್ವ ಪ್ರಾಪ್ತವಾಗುವುದಿಲ್ಲ. ಈಗ ಅಮ್ ಎಂದುದರಿಂದ ಲಕಾರ ಅಮಿನಲ್ಲಿ ಸೇರುವುದರಿಂದ ಶಕಾರಕ್ಕೆ ಛತ್ವಬಂದರೆ ತಚ್ಛ್ ಲೋಕೇನ= ತಚ್ಛ್ಲೋಕೇನ ಎಂದಾಗುತ್ತದೆ. (ಆ ಶ್ಲೋಕದಿಂದ). ಅಮಿನ ಮುಂದಿನ ವರ್ಣ ಶಕಾರಕ್ಕೆ ಪರವಾದರೆ ಛತ್ವವಿಲ್ಲ. ವಾಕ್+ಶ್ರೋತತಿ. ಇಲ್ಲಿ ಚಕಾರ ಪರವಾಗಿದೆ. ಇದು ಅಮಿನಲ್ಲಿ ಸೇರಿಲ್ಲ. ಆದ್ದರಿಂದ ಛತ್ವವಿಲ್ಲ.

(ಅನುಸ್ವಾರ ವಿಧಾಯಕ ಸೂತ್ರ)

೭೭. ಮೋಽನುಸ್ವಾರಃ ॥ ಲ–ಳಿ–೬೪ ॥

ಮಾಂತಸ್ಯ ಪದಸ್ಯ ಅನುಸ್ವಾರೋ ಹಲಿ ॥ ಹರಿಂ ವನ್ದೇ ॥

ಮಃ ಅನುಸ್ವಾರಃ ॥ ದ್ವಿಪದ ಸೂತ್ರ. ಮಃ ಷಷ್ಠೀ. “ ಪದಸ್ಯ ” ಅಧಿಕಾರ ಸೂತ್ರ. “ ಪದಸ್ಯ ” ಎಂಬುದಕ್ಕೆ ಮ ಎಂಬುದು ವಿಶೇಷಣ. “ ಯೇನವಿಧಿಸ್ತದಂತಸ್ಯ ” ಪರಿಭಾಷೆಯಿಂದ ತದಂತಲಾಭ, “ ಹಲಿಸರ್ವೇಷಾಮ್ ” ಸೂತ್ರದಿಂದ “ ಹಲಿ ” ಅನುವೃತ್ತವಾಗುತ್ತದೆ. **ಸೂತ್ರಾರ್ಥ.** ಮಕಾರಾಂತವಾದ ಪದಕ್ಕೆ ಹಲ್ ಪರವಾದಾಗ ಅನುಸ್ವಾರ ಬರುತ್ತದೆ. ಪದಕ್ಕೆ ಎಂದು ಷಷ್ಠ್ಯಂತವಾಗಿ ಹೇಳಿದುದರಿಂದ “ ಅಲ್ಯೋಂತ್ಯಸ್ಯ ” ಪರಿಭಾಷೆಯಿಂದ ಪದದ ಅಂತ್ಯಕ್ಕೆ ಎಂದರ್ಥವಾಗುತ್ತದೆ. ಅಂತ್ಯವಾದುದು ಮಕಾರವೇ ಆದುದರಿಂದ ಪದದ ಕೊನೆಯ ಮಕಾರಕ್ಕೆ ಅನುಸ್ವಾರ ಎಂದು ಫಲಿತಾರ್ಥ. ಹರಿಮ್+ವಂದೇ ಎಂದಿರುವಾಗ ಮಕಾರ ಪದದ ಕೊನೆಯಲ್ಲಿದೆ. ಇದಕ್ಕೆ ವಕಾರರೂಪ ಹಲ್‌ಪರವಾದುದರಿಂದ ಅನುಸ್ವಾರ ಹರಿಂ ವಂದೇ. (ವಿಷ್ಣುವನ್ನು ನಮಸ್ಕರಿಸುತ್ತೇನೆ.)

(ಅಪದಾಂತದಲ್ಲಿ ಅನುಸ್ವಾರವಿಧಾಯಕಸೂತ್ರ)

೭೮. ನಶ್ಚಾಪದಾಂತಸ್ಯ ಝಲಿ ॥ ೮—೩—೨೪ ॥

ನಸ್ಯ ಮಸ್ಯ ಚಾಪದಾಂತಸ್ಯ ಝಲ್ಯನುಸ್ವಾರಃ । ಯಶಾಂಸಿ । ಆಕ್ರಂಸ್ಯತೇ । ಝಲಿ ಕಿಮ್ ? ಮನ್ಯತೇ ॥

ನ, ಜ, ಅಪದಾಂತಸ್ಯ, ಝಲಿ ॥ ನಾಲ್ಕು ಪದಗಳುಳ್ಳ ಸೂತ್ರ. ಚಕಾರದಿಂದ ಪೂರ್ವಸೂತ್ರದ ಮಃ ಎಂಬುದೂ ಸಂಬದ್ಧವಾಗುತ್ತದೆ. ಮಃ ನಃ ಎರಡೂ ಷಷ್ಠ್ಯಂತಪದ. **ಸೂತ್ರಾರ್ಥ**. ಅಪದಾಂತವಾದ (ಪದದ ಕೊನೆಯಲ್ಲಿ ಇಲ್ಲದಿರುವ) ನಕಾರ ಮಕಾರಗಳಿಗೆ ಝಲ್ ವರ್ಣಪರವಾದಾಗ ಅನುಸ್ವಾರ ಆದೇಶ ಬರುತ್ತದೆ. ಯಶಾಂಸಿ. ಯಶಸ್ ಶಬ್ದಕ್ಕೆ ಜಸ್‌ಪ್ರತ್ಯಯ ಪರವಾದಾಗ ನುಮಾಗಮ. ದೀರ್ಘ. ಯಶಾನ್ + ಸಿ ಎಂದಿರುವಾಗ ನಕಾರ ಪದಮಧ್ಯದಲ್ಲಿರುವುದರಿಂದ ಅನುಸ್ವಾರಾದೇಶ. ಯಶಾಂಸಿ. ಆಕ್ರಂಸ್ಯತೇ. ಆಙ್ ಉಪಸರ್ಗ. ಕ್ರಮಧಾತು. ಲೃಟ್ಟನಲ್ಲಿ ಆಕ್ರಮ್ + ಸ್ಯತೇ ಎಂದಿರುವಾಗ ಪದಮಧ್ಯವಾದ ಮಕಾರಕ್ಕೆ ಅನುಸ್ವಾರ. ಪದದ ಕೊನೆಯಲ್ಲಿ ಇಲ್ಲದಿರುವುದರಿಂದ ಹಿಂದಿನ ಸೂತ್ರದಿಂದ ಬರುವುದಿಲ್ಲ. ಆಕ್ರಂಸ್ಯತೇ. ಝಲಿಕಿಮ್ ಸೂತ್ರದಲ್ಲಿ ಝಲ್ ಪರವಾದಾಗ ಅನುಸ್ವಾರವೆಂದಿರುತ್ತಾನೆ. ಅದು ಏಕೆ ? ಅಪದಾಂತವಾದ ನಕಾರಮಕಾರಗಳಿಗೆ ಅನುಸ್ವಾರವೆಂದರೆ ದೋಷವೇನು ? ಮನ್ಯತೇ. ಹಾಗೆ ಹೇಳಿದ್ದರೆ ಇಲ್ಲಿಯೂ ನಕಾರಕ್ಕೆ ಅನುಸ್ವಾರ ಬರಬೇಕಾಗುತ್ತದೆ. ಝಲಿಯಂದು ನಿಮಿತ್ತ ಹೇಳಿದುದರಿಂದ ಇಲ್ಲಿ ಅಪದಾಂತವಾದರೂ (ಮನ್ + ಯತೇ) ಯಕಾರ ಪರವಾದುದರಿಂದ ಬರುವುದಿಲ್ಲ.

(ಅನುಸ್ವಾರಕ್ಕೆ ಪರಸವರ್ಣವಿಧಾಯಕಸೂತ್ರ)

೭೯. ಅನುಸ್ವಾರಸ್ಯ ಯಯಿ ಪರಸವರ್ಣಃ ॥ ೮-೪-೫೭ ॥

ಸ್ಪಷ್ಟಮ್ । ಶಾನ್ತಃ ॥

ತ್ರಿಪದಸೂತ್ರ. ಯಯಿ ಸಪ್ತಮ್ಯಾ. ಅನುವೃತ್ತ್ಯಾದಿಕ್ಲೇಶವಿಲ್ಲದಿದ್ದುದರಿಂದ ವೃತ್ತಿಯಲ್ಲಿ ಸ್ಪಷ್ಟಮ್ ಎಂದಿರುತ್ತಾನೆ. **ಸೂತ್ರಾರ್ಥ**. ಅನುಸ್ವಾರಕ್ಕೆ ಯಯ್ ವರ್ಣಪರವಾದರೆ ಪರಸವರ್ಣ ಆದೇಶವಾಗಿ ಬರುತ್ತದೆ. ಶಾನ್ತಃ. ಶಮ್ ಧಾತುವಿಗೆ ಕ್ತ ಪ್ರತ್ಯಯ ಪರವಾದಾಗ ದೀರ್ಘ. ಶಾಮ್+ತ ಎಂದಿರುವಾಗ ಹಿಂದಿನ ಸೂತ್ರದಿಂದ ಮಕಾರಕ್ಕೆ ಅನುಸ್ವಾರ. ಆದಕ್ಕೆ ಯಯ್‌ನಲ್ಲಿ ಸೇರಿದ ತಕಾರ ಪರವಾದುದರಿಂದ ತಕಾರದ ಸವರ್ಣ ಬರುತ್ತದೆ. ಅನುಸ್ವಾರಕ್ಕೆ ನಾಸಿಕಾಸ್ಥಾನವಾದುದರಿಂದ

"ಸ್ಥಾನೇಂತರತಮಃ" ಪರಿಭಾಷೆಯಿಂದ ನಾಸಿಕಾಸ್ಥಾನಸಾಮ್ಯವಿರುವ ತಕಾರದ ಸವರ್ಣವಾದ ನಕಾರ ಬಂದರೆ ಶಾನ್ತಃ = ಶಾನ್ತಃ ಎಂದಾಗುತ್ತದೆ.

(ವಿಕಲ್ಪಪರಸವರ್ಣವಿಧಾಯಕಸೂತ್ರ)

೮೦. ವಾ ಪದಾನ್ತಸ್ಯ ॥ ೮-೪-೫೯ ॥

ತ್ವಙ್ಕರೋಷಿ । ತ್ವಂ ಕರೋಷಿ ॥

ವಾ, ಪದಾಂತಸ್ಯ ॥ ದ್ವಿಪದ ಸೂತ್ರ. ಹಿಂದಿನ ಸೂತ್ರವು ಅನುವೃತ್ತವಾಗುತ್ತದೆ. ಪದಾಂತಸ್ಯ ಎಂಬುದಕ್ಕೆ ಅನುಸ್ವಾರಸ್ಯ ಎಂಬಲ್ಲಿ ಅನ್ವಯ. **ಸೂತ್ರಾರ್ಥ**. ಪದಾಂತವಾದ ಅನುಸ್ವಾರಕ್ಕೆ ಯಯ್ ಪರವಾದಾಗ ವಿಕಲ್ಪವಾಗಿ ಪರಸವರ್ಣ, ತ್ವಮ್ + ಕರೋಷಿ ಎಂದಿರುವಾಗ " ಮೋಽನುಸ್ವಾರಃ " ಸೂತ್ರದಿಂದ ಮೊದಲು ಮಕಾರಕ್ಕೆ (ಪದಾಂತವಾದುದರಿಂದ) ಅನುಸ್ವಾರ. ಅದಕ್ಕೆ ಕಕಾರರೂಪ ಯಯ್ ಪರವಾದುದರಿಂದ ಪರಸವರ್ಣ ಬಂದರೆ ಙಕಾರ (ಅನುನಾಸಿಕ) ಬರುತ್ತದೆ. ತ್ವಙ್ಕರೋಷಿ. ಬಾರದಿದ್ದರೆ ಅನುಸ್ವಾರವೇ ಇರುತ್ತದೆ. ತ್ವಂಕರೋಷಿ.

(ಮಕಾರಕ್ಕೆ ಮಕಾರ ವಿಧಾಯಕ ಸೂತ್ರ)

೮೧. ಹೇ ಮಪರೇ ವಾ ॥ ೮-೩-೨೬ ॥

ಮಪರೇ ಹಕಾರೇ ಪರೇ ಮಸ್ಯ ಮೋ ವಾ ॥ ಕಿಮ್ ಹ್ಮಲಯತಿ, ಕಿಂ ಹ್ಮಲಯತಿ ॥

ತ್ರಿಪದ ಸೂತ್ರ. । " ಮೋಽನುಸ್ವಾರ " ಸೂತ್ರದಿಂದ " ಮಃ " ಎಂಬ ಷಷ್ಠ್ಯಂತಪದವೂ, " ಮೋರಾಜಿಘಮಃ ಕ್ವೌ " ಸೂತ್ರದಿಂದ " ಮಃ " ಎಂಬ ಪ್ರಥಮಾಂತವೂ ಅನುವೃತ್ತವಾಗುತ್ತದೆ. ಮಃ ಪರೋ ಯಸ್ಮಾತ್ ಸಃ ಮಪರಃ. ಮಕಾರವೇ ಪರವಾಗಿರುವುದು. ಹೇ ಸಪ್ತಮೀ. **ಸೂತ್ರಾರ್ಥ**. ಮಕಾರ ಪರವಾದ ಹಕಾರವು ಪರದಲ್ಲಿರುವಾಗ ಮಕಾರಕ್ಕೆ ಮಕಾರವು ವಿಕಲ್ಪವಾಗಿ ಬರುತ್ತದೆ. " ಮೋಽನುಸ್ವಾರಃ " ಸೂತ್ರಕ್ಕೆ ಅಪವಾದ. ಮಕಾರವೇ ಇರುವಾಗ ತಿರುಗಿ ಮಕಾರ ವಿಧಾನ ಮಾಡಿರುವುದು ಮಕಾರಕ್ಕೆ ಬೇರೆ ಯಾವ ಆದೇಶವೂ ಬರುವುದಿಲ್ಲವೆಂದು ಸೂಚಿಸಲು ಹೇಳಿದೆ. ಕಿಮ್ + ಹ್ಮಲಯತಿ (ಏನನ್ನು ಅಲ್ಲಾಡಿಸುತ್ತಾನೆ ?) ಇಲ್ಲಿ ಮಕಾರಕ್ಕೆ ಹಕಾರ ಪರವಾಗಿದೆ. ಇದು ವಿಕಲ್ಪವಾದುದರಿಂದ ಅನುಸ್ವಾರ ಬಂದರೆ ಕಿಂ ಹ್ಮಲಯತಿ ಎಂದಾಗುತ್ತದೆ.

(ಯವಲ ವಿಧಾಯಕ ವಾರ್ತಿಕ)

ವಾ॥ ಯವಲಪರೇ ಯವಲಾ ವಾ ॥

ತ್ರಿಪದವಾರ್ತಿಕ. ಹಿಂದಿನ ಸೂತ್ರ ಅನುವೃತ್ತವಾಗುತ್ತದೆ. ಮಕಾರಪರವಾಗಿರುವ ಯ, ವ, ಲ ಪರವಾಗಿರುವ ಹಕಾರಪರವಾದರೆ ಯವಲಗಳು ವಿಕಲ್ಪವಾಗಿ ಕ್ರಮವಾಗಿ ಬರುತ್ತದೆ. ಇದು ಅನುಸ್ವಾರಕ್ಕೆ ಅಪವಾದವಾಗಿ ಹೇಳಿದೆ. ಕೆಮ್ + ಹ್ಯಃ. ಮಕಾರಕ್ಕೆ ಯಕಾರಪರವಾದ ಹಕಾರಪರವಾದುದರಿಂದ ಯಕಾರಾದೇಶ. ಮಕಾರಸ್ಥಾನಕ್ಕೆ ಬರುವುದರಿಂದ ಅನುನಾಸಿಕ ಯಕಾರವೇ ಬರುತ್ತದೆ. ಕೆಯ್ ಹ್ಯಃ (ನಿನ್ನನ್ನು ಏನು?) ಯಕಾರ ಬಾರದಿದ್ದರೆ ಅನುಸ್ವಾರ. ಕಂ ಹ್ಯಃ । ಕೆಮ್ + ಹ್ವಲಯತಿ. ವಕಾರಪರವಾದ ಹಕಾರಪರವಾದುದರಿಂದ ಮಕಾರಕ್ಕೆ ಹಿಂದಿನಂತೆ ಅನುನಾಸಿಕವಾದ ವಕಾರ. ಕೆವ್ ಹ್ವಲಯತಿ, ವಿಕಲ್ಪವಾದುದರಿಂದ ಕಂ ಹ್ವಲಯತಿ ಕೆಮ್ + ಹ್ಲಾದಯತಿ. ಇಲ್ಲಿ ಲಕಾರಪರವಾದ ಹಕಾರಪರವಾದುದರಿಂದ ಮಕಾರಕ್ಕೆ ವಿಕಲ್ಪವಾಗಿ ಅನುನಾಸಿಕವಾದ ಲಕಾರಾದೇಶ. ಕೆಲ್ಂಹ್ಲಾದಯತಿ, ಅನುಸ್ವಾರ ಬಂದು ಕಂ ಹ್ಲಾದಯತಿ (ಏನು ಸುಖಗೊಳಿಸುತ್ತಾನೆ ?)

(ಮಕಾರಕ್ಕೆ ನಕಾರ ವಿಧಾಯಕ ಸೂತ್ರ)

ಲ೨. ನಪರೇ ನಃ ॥ ಲ—೩—೨೭ ॥

ನಪರೇ ಹಕಾರೇ ಮಸ್ಯ ನೋವಾ ॥ ಕಿನ್ ಹ್ನುತೇ ; ಕಂ ಹ್ನುತೇ ॥

ದ್ವಿಪದಸೂತ್ರ. ಹಿಂದಿನ ಸೂತ್ರದಿಂದ "ಹೇ" ಪದವೂ "ಮೋನುಸ್ವಾರಃ" ಸೂತ್ರದಿಂದ "ಮಃ" ಪದವೂ ಅನುವೃತ್ತವಾಗುತ್ತದೆ. ನಃ ಪರೋ ಯಸ್ಮಾತ್ ಸಃ ನಪರಸ್ತಸ್ಮಿನ್ ನಪರೇ. "ಹೇಮಪರೇ ವಾ" ಸೂತ್ರದಿಂದ ವಾ ಅನುವೃತ್ತಿ. **ಸೂತ್ರಾರ್ಥ.** ನಕಾರವೇ ಪರವಾಗಿರುವ ಹಕಾರ ಪರದಲ್ಲಿರುವಾಗ ಮಕಾರಕ್ಕೆ ನಕಾರವು ವಿಕಲ್ಪವಾಗಿ ಬರುತ್ತದೆ. ಕಿಮ್ + ಹ್ನುತೇ. ಹ್ನು ಎಂಬಲ್ಲಿ ನಕಾರಪರವಾದ ಹಕಾರವಿದೆ (ಹ್ + ನು) ಆದುದರಿಂದ ಮಕಾರಕ್ಕೆ ನಕಾರಾದೇಶ ಕಿನ್‌ಹ್ನುತೇ ॥ ಅದು ಬಾರದಿದ್ದರೆ "ಮೋನುಸ್ವಾರಃ" ಸೂತ್ರದಿಂದ ಮಕಾರಕ್ಕೆ ಅನುಸ್ವಾರ. ಕಂ ಹ್ನುತೇ ॥ ಏನನ್ನು ತೆಗೆಯುತ್ತಾನೆ ಎಂದರ್ಥ.

ಮುಂದೆ ಟಕಾರ ಇತ್ತಾದ ಕಕಾರ ಇತ್ತಾದ ವರ್ಣವನ್ನು ವಿಧಿಸುತ್ತಾನೆ. ಅವು ಸ್ಥಾನಿಯನ್ನು ತೆಗೆದುಹಾಕಿ ಬರುವುದಿಲ್ಲ. ಅವಯವಗಳಂತೆ ಬರುವುದರಿಂದ ಅವುಗಳಿಗೆ ಆಗಮವೆಂದು ಹೆಸರು. ಬರುವುದಾದರೆ ಅವು ಆದ್ಯವಯವಾಗಿಯೇ ಅಂತಾವಯವವಾಗಿಯೇ ಎಂಬ ನಿಯಮವನ್ನು ತಿಳಿಸಲು ಸೂತ್ರವನ್ನು ಹೇಳುತ್ತಾನೆ.

(ಆದ್ಯಂತಾವಯವ ವಿಧಾಯಕ ಸೂತ್ರ)

ಲಳ. ಆದ್ಯಂತೌ ಟಕಿತೌ ॥ ೧-೧-೪೬ ॥

ಟಿತ್‌ಕಿತೌ ಯಸ್ಯೋಕ್ತೌ ತಸ್ಯ ಕ್ರಮಾದಾದ್ಯಂತಾವಯವೌ ಸ್ತಃ ॥

ದ್ವಿಪದ ಸೂತ್ರ. ಆದಿಶ್ಚ ಅಂತಶ್ಚ ಆದ್ಯಂತೌ । ಟಶ್ಚ ಕ್‌ಚ ಟಕೌ । ಟಕೌ ಇತೌ ಯಯೋಸ್ತೌ ಟಕಿತೌ । ಟಕಾರದ ಮೇಲಿರುವ ಅಕಾರವು ಉಚ್ಚಾರಣಾರ್ಥಕವಾಗಿದೆ. ಟಕೌ ಎಂಬುದು ದ್ವಂದ್ವಸಮಾಸ. ದ್ವಂದ್ವಸಮಾಸದ ಕೊನೆಯಲ್ಲಿರುವ ಪದವು ಪ್ರತ್ಯೇಕಸಂಬಂಧವನ್ನು ಹೊಂದುತ್ತದೆ ಎಂಬ ನ್ಯಾಯವು ಹಿಂದೆ ವಿವೃತವಾಗಿದೆ. ಪ್ರಕೃತ ಇತ್ ಎರಡರಲ್ಲಿಯೂ ಅನ್ವಿತವಾದರೆ ಟಿತ್ ಕಿತ್ ಎಂದಾಗುತ್ತದೆ. ಟಕಾರ ಇತ್ತಾಗಿರುವುದು, ಕಕಾರ ಇತ್ತಾಗಿರುವುದು. "ಯಾವುದಕ್ಕೆ ವಿಹಿತವಾಗಿವೆಯೋ ಅವುಗಳ" ಎಂದು ಅಧ್ಯಾಹಾರ ಮಾಡಿಕೊಳ್ಳಬೇಕು. **ಸೂತ್ರಾರ್ಥ.** ಟಿತ್ ಕಿತ್ ಯಾವುದಕ್ಕೆ ವಿಹಿತವಾಗಿವೆಯೋ ಅವುಗಳು ಅದಕ್ಕೆ ಕ್ರಮವಾಗಿ ಆದ್ಯವಯವವಾಗಿಯೂ ಅಂತಾವಯವವಾಗಿಯೂ ಬರುತ್ತವೆ. ಟಿತ್ತಾದುದು ಆದ್ಯವಯವವಾಗಿ, ಕಿತ್ತಾದುದು ಅಂತಾವಯವವಾಗಿ ಬರುತ್ತದೆ. ಹೀಗೆ ಮಿತ್ರನಂತೆ ಹತ್ತಿರ ಬಂದು ಸೇರುವುದರಿಂದ ಇವು ಆಗಮಗಳು, ಸ್ಥಾನಿಯನ್ನು ತೆಗೆದುಬರುವುದರಿಂದ ಶತ್ರುವಿನಂತೆ ಆದೇಶಗಳು ಈ ಟಿತ್‌ಕಿತ್‌ಗಳಿಗೆ ಪ್ರಯೋಜನವನ್ನು ಹೇಳುತ್ತಾನೆ.

(ಕುಕ್ ಟುಕ್ ಆಗಮವಿಧಾಯಕಸೂತ್ರ)

ಲಖ. ಜಶ್ಶೋಃ ಕುಕ್‌ಟುಕ್ ಶರಿ ॥ ಲ—೩—೩೮ ॥

ವಾ ಸ್ತಃ ॥

ಜಶ್ಶೋಃ ಕುಕ್‌ಟುಕ್, ಶರಿ ॥ ತ್ರಿಪದಸೂತ್ರ. ಕುಕ್‌ಚ ಟುಕ್‌ಚ ತಯೋಃ ಸಮಾಹಾರಃ ಕುಕ್‌ಟುಕ್. ಸಮಾಹಾರದ್ವಂದ್ವದಲ್ಲಿ ಏಕವಚನ, ನಪುಂಸಕಲಿಂಗ ಬರುತ್ತದೆ ಜ್ ಚ ಣ್ ಚ ಜ್ಞಾ ತಯೋಃ ಜಶ್ಶೋಃ. "ಹೇಮಪರೇ ವಾ" ಸೂತ್ರದಿಂದ ವಾ ಅನುವೃತ್ತಿ. ಶರಿ ಸಪ್ತಮೀ. **ಸೂತ್ರಾರ್ಥ.** ಜಕಾರಣಕಾರಗಳಿಗೆ ಶರ್ ಪರವಾದಾಗ ವಿಕಲ್ಪವಾಗಿ ಕುಕ್ ಟುಕ್ ಆಗಮಗಳು ಬರುತ್ತವೆ. ಯಥಾಸಂಖ್ಯವಿರುವುದರಿಂದ ಜಕಾರಕ್ಕೆ ಕುಕ್ ಣಕಾರಕ್ಕೆ ಟುಕ್ ಇವು ಕಿತ್ತಾದುದರಿಂದ ಹಿಂದೆ ಹೇಳಿದ ಸೂತ್ರದ ನಿಯಮದಿಂದ ಅಂತಾವಯವವಾಗಿ ಬರುತ್ತವೆ. ಅರ್ಥವು ಸ್ಪಷ್ಟವಾದುದರಿಂದ "ವಾಸ್ತಃ" (ವಿಕಲ್ಪವಾಗಿ ಬರುತ್ತದೆ) ಎಂದು ಸೂತ್ರದಲ್ಲಿ ಹೇಳಿದೆ. ಪ್ರಾಜ್ + ಷಷ್ಠಃ. ಇಲ್ಲಿ ಜಕಾರಕ್ಕೆ ಶರಿನ ಷಕಾರಪರವಾದುದರಿಂದ ಕುಕ್ ಆಗಮ. ಜಕಾರದ

ಅಂತ್ಯಕ್ಕೆ ಬಂದರೆ ಪ್ರಾಜ್‌ಕ್+ಷಷ್ಠಃ ಕಕಾರಷಕಾರಸಂಬಂಧವಿರುವಾಗ
ತ್ತದೆ. ಪ್ರಾಜ್ಞಷ್ಠಃ|| ಇಲ್ಲಿ ಕಕಾರಕ್ಕೆ ಖಕಾರ ಹೇಳುವ್ಯಾರ್ತಿಕವನ್ನು ಹೇಳುತ್ತಾ ಇಲ್ಲ

(ದ್ವಿತೀಯಾಕ್ಷರವಿಧಾಯಕವಾರ್ತಿಕ)

ವಾ॥ ಚಯೋ ದ್ವಿತೀಯಾಃ ಶರಿ ಪೌಷ್ಕರಸಾದೇರಿತಿ ವಾಚ್ಯಮ್ ॥

ಪ್ರಾಜ್‌ಖ್ ಷಷ್ಠಃ, ಪ್ರಾಜ್ಞಷ್ಠಃ, ಪ್ರಾಜ್‌ಷಷ್ಠಃ| ಸುಗಣ್‌ತ್ ಷಷ್ಠಃ,
ಸುಗುಣ್‌ಟ್‌ಷಷ್ಠಃ | ಸುಗಣ್ ಷಷ್ಠಃ ॥

ಆರು ಪದವುಳ್ಳ ವಾರ್ತಿಕ. ಪುಷ್ಕರಸದಃ, ಅಪತ್ಯಂ ಪುಮಾನ್, ಪೌಷ್ಕರ
ಸಾದಿಃ. ಬಾಹ್ವಾದಿಗಣಪಠಿತವಾದುದರಿಂದ ಅಪತ್ಯಾರ್ಥದಲ್ಲಿ ಇಞ್‌ಪ್ರತ್ಯಯ.
ಇವರೂ ಒಬ್ಬರು ವೈಯ್ಯಾಕರಣರು. ಇವರ ಮತದಲ್ಲಿ ಚಯ್‌ಪ್ರತ್ಯಾಹಾರಘಟಕ
ವರ್ಣಗಳಿಗೆ ಶರ್‌ವರ್ಣ ಪರವಾದಾಗ ಅವುಗಳಿಗೆ ವರ್ಗದ ದ್ವಿತೀಯ
ವರ್ಣಗಳು ಆದೆ ಶವಾಗಿ ಬರುತ್ತವೆ, ಹಿಂದೆ ಕುಕ್ ಆಗಮ ಬಂದಾಗ
ಪ್ರಾಜ್‌ಕ್+ಷಷ್ಠಃ ರೂಪವಾಗಿದೆ. ಅಲ್ಲಿ ಪೌಷ್ಕರಸಾದಿ ಆಚಾರ್ಯರ
ಮತದಂತೆ ದ್ವಿತೀಯವರ್ಣ ಬಂದರೆ ಪ್ರಾಜ್‌ಖ್‌ಷಷ್ಠಃ ಎಂದಾಗುತ್ತದೆ.
ಸುಗಣ್+ಷಷ್ಠಃ ಎಂದಿರುವಾಗ ಹಿಂದಿನ ಸೂತ್ರದಿಂದ ಟುಕ್ ಆಗಮ ಬಂದಾಗ
ಸುಗಣ್‌ಟ್ + ಷಷ್ಠಃ ಎಂದಾಗ ಪೌಷ್ಕರಸಾದಿ ಆಚಾರ್ಯರ ಮತದಂತೆ ದ್ವಿತೀಯಾ
ಕ್ಷರ ಆದೇಶವಾಗಿ ಬಂದರೆ ಸುಗಣ್‌ತ್ ಷಷ್ಠಃ ಆಗುತ್ತದೆ. ಕುಕ್ ಟುಕ್ ಆಗಮಗಳೂ
ವಿಕಲ್ಪವಾದುದರಿಂದ ಪ್ರಾಜ್‌ಷಷ್ಠಃ. ಸುಗುಣ್‌ಷಷ್ಠಃ ಎಂದೂ ಆಗುತ್ತದೆ.

(ಧುಡಾಗಮ ವಿಧಾಯಕ ಸೂತ್ರ)

೪೫. ಡಃ ಸಿ ಧುಟ್ ॥ ೮-೩-೨೯ ॥

ಡಾತ್ಪರಸ್ಯ ಸಸ್ಯ ಧುಡ್ವಾ | ಷಟ್‌ತ್ಸಂತಃ, ಷಟ್‌ಸಂತಃ ||

ತ್ರಿಪದ ಸೂತ್ರ. "ಹೇ ಮಪರೇವಾ" ಸೂತ್ರದಿಂದ ವಾ ಅನುವೃತ್ತಿ. ಡಃ
ಪಂಚಮೀ. ಸಿ ಸಪ್ತಮೀ. ಡಃ ಪಂಚಮಿಯಾದುದರಿಂದ "ತಸ್ಮಾದಿತ್ಯುತ್ತರಸ್ಯ"
ಪರಿಭಾಷೆಯಿಂದ ಡಕಾರದ ಅವ್ಯವಹಿತ ಪೂರ್ವಕ್ಕೆ ಕಾರ್ಯವೆಂದೂ
ಸಿ ಸಪ್ತಮಿಯಾಗಿರುವುದರಿಂದ "ತಸ್ಮಿನ್ನಿತಿ ನಿರ್ದಿಷ್ಟೇ" ಪರಿಭಾಷೆಯಿಂದ ಸಕಾರದ
ಅವ್ಯವಹಿತ ಪೂರ್ವಕ್ಕೆ ಕಾರ್ಯವೆಂದೂ ಬೋಧಿತವಾಗುತ್ತದೆ. ಎರಡಕ್ಕೂ
ಕಾರ್ಯ ಬರುವುದಿಲ್ಲ. ಆಗ "ಉಭಯನಿರ್ದೇಶೇ ಪಂಚಮೀ ನಿರ್ದೇಶೋ
ಬಲೀಯಾನ್" ಸಪ್ತಮೀ ಪಂಚಮೀ ಎರಡೂ ಒಂದೆಡೆ ಹೇಳಿದಾಗ

ಪಂಚಮೀ ನಿರ್ದೇಶಕ್ಕೆ ಪ್ರಾಬಲ್ಯವೆಂದರ್ಥ ಕೊಡುವ ಪರಿಭಾಷೆಯಿಂದ ಪಂಚಮಿಗೆ
ಪ್ರಾಬಲ್ಯ. ಸಿ ಎಂಬ ಸಪ್ತಮಿಗೆ ಪ್ರಾಬಲ್ಯವಿಲ್ಲದಿರುವುದರಿಂದ ಷಷ್ಠ್ಯಂತವಾಗಿ ವಿಪರಿ
ಣತವಾಗುತ್ತದೆ. **ಸೂತ್ರಾರ್ಥ.**—ಡಕಾರದ ಅವ್ಯವಹಿತ ಪರದಲ್ಲಿರುವ ಸಕಾರಕ್ಕೆ
ವಿಕಲ್ಪವಾಗಿ ಧುಟ್ ಆಗಮು ಬರುತ್ತದೆ. ಧುಟ್‌ನಲ್ಲಿ ಉಕಾರ ಉಚ್ಚಾರಣೆಗೋಸ್ಕರ
ವಿದೆ. ಟಕಾರ "ಹಲಂತ್ಯಮ್" ಸೂತ್ರದಿಂದ ಇತ್ ಸಂಜ್ಞೆಯನ್ನು ಹೊಂದಿ ಲೋಪ
ವಾಗುತ್ತದೆ. ಉಳಿಯುವುದು ಧ್ ಮಾತ್ರ.

ಉದಾ—ಷಡ್ + ಸಂತಃ ಎಂದಿರುವಾಗ ಡಕಾರಕ್ಕೆ ಸಕಾರಪರವಾಗಿದೆ. ಷಷ್ ಶಬ್ದ
ಪದಾಂತದಲ್ಲಿ ಜಶ್ತ್ವ ಬರುವುದರಿಂದ ಷಕಾರಕ್ಕೆ ಡಕಾರಾದೇಶ. ಸಕಾರಕ್ಕೆ
ಧುಡಾಗಮ. ಇದು ಟಿತ್ತಾದುದರಿಂದ "ಆದ್ಯಂತೌ ಟಕಿತೌ" ಸೂತ್ರದಿಂದ ಆದ್ಯ
ವಯವವಾಗಿ ಬರುತ್ತದೆ. ಷಡ್+ಧ್‌ಸಂತಃ. ಇಲ್ಲಿ ಧಕಾರಕ್ಕೆ ಸಕಾರರೂಪ ಖರ್
ವರ್ಣಪರವಾದುದರಿಂದ "ಖರಿ ಚ" ಸೂತ್ರದಿಂದ ಚರ್ತ್ವ ಬಂದರೆ ಷಡ್+ತ್‌ಸಂತಃ.
ಪುನಃ ಡಕಾರಕ್ಕೆ ತಕಾರರೂಪ ಖರ್ ಪರವಾದುದರಿಂದ ಚರ್ತ್ವ ಬಂದರೆ ಷಟ್‌ತ್
ಸಂತಃ, ಧುಡಾಗಮ ವಿಕಲ್ಪವಾದುದರಿಂದ ಬಾರದಿದ್ದರೆ ಷಡ್+ಸಂತಃ ಎಂದಿರುವಾಗ
ಚರ್ತ್ವ ಬಂದರೆ ಷಟ್‌ಸಂತಃ ಎಂದಾಗುತ್ತದೆ.

(ಧುಡ್ವಿಧಾಯಕಸೂತ್ರ)

೪೬. ನಶ್ಚ ॥ ೮-೩-೩೦ ॥

ನಾಂತಾತ್ಪರಸ್ಯ ಸಸ್ಯ ಧುಡ್ವಾ ॥ ಸನ್‌ತ್ಸಃ, ಸನ್‌ಸಃ ॥

ನಃ ಚ ॥ ದ್ವಿಪದಸೂತ್ರ. ಹಿಂದಿನ ಸೂತ್ರದಿಂದ "ಸಿ", "ಧುಟ್", "ಹೇಮ
ಪರೇ ವಾ" ಸೂತ್ರದಿಂದ "ವಾ" ಅನುವೃತ್ತವಾಗುತ್ತವೆ. "ಪದಸ್ಯ" ಅಧಿಕಾರ. ಅದು
ಇಲ್ಲಿ ಪಂಚಮ್ಯಂತ್ಯವಾಗಿ ವಿಪರಿಣತವಾಗುತ್ತದೆ. ಅದಕ್ಕೆ ನಃ ಎಂಬ ಪಂಚಮ್ಯಂತ್ಯವು
ವಿಶೇಷಣ. "ಯೇನವಿಧಿಸ್ತದಂತಸ್ಯ" ಪರಿಭಾಷೆಯಿಂದ ತದಂತಲಾಭ. **ಸೂತ್ರಾರ್ಥ**—
ನಕಾರಾಂತ ಪದದ ಪರದಲ್ಲಿರುವ ಸಕಾರಕ್ಕೆ ವಿಕಲ್ಪವಾಗಿ ಧುಡಾಗಮು ಬರುತ್ತದೆ.
ಟಿತ್ತಾದುದರಿಂದ ಸಕಾರದ ಆದ್ಯವಯವವಾಗಿ ಬರುತ್ತದೆ. ಸನ್+ಸಃ. ಇಲ್ಲಿ
ಪದಾಂತವಾದ ನಕಾರದ ಪರದಲ್ಲಿ ಸಕಾರವಿರುವುದರಿಂದ ಸಕಾರಕ್ಕೆ ಧುಟ್ ಆಗಮು.
ಸನ್+ಧ್‌ಸಃ. ಹಿಂದಿನಂತೆ ಧಕಾರಕ್ಕೆ "ಖರಿ ಚ" ಸೂತ್ರದಿಂದ ಚರ್ತ್ವ ಬಂದರೆ
ಸನ್‌ತ್‌ಸಃ ರೂಪವಾಗುತ್ತದೆ. ಧುಟಾಗಮು ವಿಕಲ್ಪವಾದುದರಿಂದ ಬಾರದಿದ್ದರೆ
ಹಾಗೇ ಇರುತ್ತದೆ ಸನ್‌ಸಃ. ಇರುವ ಅವನು ಎಂದರ್ಥ.

(ತುಗಾಗಮವಿಧಾಯಕಸೂತ್ರ)

೪೭. ಶಿ ತುಕ್ ॥ ೮—೩—೩೧ ॥

ಪದಾಂತಸ್ಯ ನಸ್ಯ ಶೇ ಪರೇ ತುಗ್ವಾ । ಸಞ್ಛಂಭುಃ, ಸಞ್ಚ್ಛಂಭುಃ। ಸಞ್ಚ್ಶಂಭುಃ । ಸಞ್ಶಂಭುಃ ॥

ದ್ವಿಪದಸೂತ್ರ. ಹಿಂದಿನ ಸೂತ್ರದಿಂದ "ನಃ" ಅನುವೃತ್ತವಾಗಿ ಇಲ್ಲಿ ಷಷ್ಠ್ಯರ್ಥವಾಗಿ ಪರಿಣತವಾಗುತ್ತದೆ. ಅದು ಹಿಂದಿನಂತೆ ಅಧಿಕೃತವಾದ "ಪದಸ್ಯ" ಎಂಬುದಕ್ಕೆ ವಿಶೇಷಣವಾದುದರಿಂದ ತದಂತಲಾಭ. "ವಾ" ಎಂಬುದಕ್ಕೂ ಅನುವೃತ್ತಿಯಿಲ್ಲ.

ಸೂತ್ರಾರ್ಥ—ಪದಾಂತವಾದ ನಕಾರಕ್ಕೆ ಶಕಾರ ಪರವಾದಾಗ ತುಕ್ ಆಗಮ ವಿಕಲ್ಪವಾಗಿ ಬರುತ್ತದೆ. ನಾಂತಪದಕ್ಕೆ ತುಕಾಗಮ ಎಂದು ಮೊದಲು ಲಬ್ಧವಾದರೂ "ಅಲೋಂತ್ಯಸ್ಯ" ಪರಿಭಾಷೆಯಿಂದ ಪದಾಂತವಾದ ನಕಾರಕ್ಕೆ ತುಕೆಂದು ತಿಳಿಯುತ್ತದೆ. ಸನ್+ಶಂಭುಃ. ಇಲ್ಲಿ ನಕಾರ ಪದಾಂತವಾಗಿದೆ. ಇದಕ್ಕೆ ಶಕಾರಪರವಾದುದರಿಂದ ತುಕ್ ಆಗಮ. ತುಕ್ಕಿನಲ್ಲಿ ಕಕಾರ "ಹಲಂತ್ಯಮ್" ಸೂತ್ರದಿಂದ ಇತ್ಸಾಗುತ್ತದೆ. ಉಕಾರ ಉಚ್ಚಾರಣಾರ್ಥವಾದುದರಿಂದ ತ್ ಉಳಿಯುತ್ತದೆ. ಕಿತ್ತಾದುದರಿಂದ "ಆದ್ಯಂತೌ ಟಕಿತೌ" ಸೂತ್ರದಿಂದ ಅಂತಾವಯವವಾಗಿ ಬರುತ್ತದೆ. ಸನ್ತ್+ಶಂಭುಃ. ತಕಾರಕ್ಕೆ ಶಕಾರದ ಯೋಗವಿರುವುದರಿಂದ "ಸ್ತೋಃ ಶ್ಚುನಾಶ್ಚುಃ" ಸೂತ್ರದಿಂದ ತಕಾರಕ್ಕೆ ಚಕಾರಾದೇಶ. ಈ ಚಕಾರವನ್ನು ನಿಮಿತ್ತೀಕರಿಸಿ ಅದರ ಸಂಬಂಧದಿಂದ ನಕಾರಕ್ಕೆ ಞಕಾರಾದೇಶ. ಸಞ್ಚ್+ಶಂಭುಃ. ಇಲ್ಲಿ ಚಕಾರರಹಿತ್ಯ ಪ್ರತ್ಯಾಹಾರದಲ್ಲಿಲ್ಲಿ ಸೇರುವುದರಿಂದ ಅದರ ಪರದಲ್ಲಿ ಶಕಾರವಿರುವುದರಿಂದ ಅದಕ್ಕೆ ಅಕಾರರೂಪ ಆಚ್ ಪರವಾದುದರಿಂದ "ಶಶ್ಛೋಟೇ" ಸೂತ್ರದಿಂದ ಶಕಾರಕ್ಕೆ ಛಕಾರಾದೇಶ. ಸಞ್ಚ್+ಛಂಭುಃ. ಇಲ್ಲಿ ಞಕಾರರೂಪ ಹಲಿನ ಪರದಲ್ಲಿ ಚಕಾರರೂಪ ಝರ್ ಬಂದು ಅದಕ್ಕೆ ಸವರ್ಣವಾದ ಛಕಾರರೂಪ ಝರ್ವರ್ಣವಿರುವುದರಿಂದ " ಝರೋ ಝರಿ ಸವರ್ಣೇ" ಸೂತ್ರದಿಂದ ಚಕಾರಕ್ಕೆ ವಿಕಲ್ಪವಾಗಿ ಲೋಪ. ಸಞ್ಛಂಭುಃ. ಇದು ವಿಕಲ್ಪವಾದುದರಿಂದ ಬಾರದಿದ್ದರೆ ಸಞ್ಚ್ಛಂಭುಃ. "ಶಶ್ಛೋಟೇ" ಸೂತ್ರದಿಂದ ಶಕಾರಕ್ಕೆ ಛತ್ವವೂ ವಿಕಲ್ಪವಾದುದರಿಂದ ಅದೂ ಬಾರದಿದ್ದರೆ ಸಞ್ಚ್ಶಂಭುಃ. "ಶಿ ತುಕ್" ಸೂತ್ರದಿಂದ ತುಗಾಗಮವೂ ವಿಕಲ್ಪವಾದುದರಿಂದ ಅದು ಬಾರದಿದ್ದರೆ ನಕಾರಕ್ಕೆ ಶ್ಚುತ್ವಮಾತ್ರ ಬರುವುದರಿಂದ ಸಞ್ಶಂಭುಃ ರೂಪವಾಗುತ್ತದೆ. ತುಕ್ ಛತ್ವ, ಚಲೋಪರೂಪ ಮೂರು ಕಾರ್ಯಗಳೂ ವಿಕಲ್ಪವಾದುದರಿಂದ ನಾಲ್ಕು ರೂಪಗಳಾಗುತ್ತವೆ. ಇವನ್ನೀ ಸಿದ್ಧಾಂತಕೌಮುದಿಯಲ್ಲಿ ಶ್ಲೋಕರೂಪವಾಗಿ ಹೇಳಿರುತ್ತಾನೆ. ಞಛಾ ಞಚಛಾ ಞಚಶಾ ಞಶಾವಿತಿ ಚತುಷ್ಟಯಂ ॥ ರೂಪಾಣಾಮಿಹ ತುಕ್ ಛತ್ವ ಚರ್ಲೋಪಾನಾಂ ವಿಕಲ್ಪನಾತ್ ॥ ಮೂರು ಕಾರ್ಯಗಳೂ ಬಂದರೆ ಞಛ ವರ್ಣಗಳೂ "ಝರೋ ಝರಿ ಸವರ್ಣೇ" ಬಾರದಿದ್ದರೆ ಮೂರು ಞಚಛವರ್ಣಗಳೂ, "ಶಶ್ಛೋಟೇ" ಬಾರದಿದ್ದರೆ ಞಚಶವರ್ಣಗಳೂ, ತುಕಾಗನು ಬಾರದಿದ್ದರೆ ಞಶವರ್ಣ ಇರುತ್ತವೆ.

(ಜಮುಟ್ಆಗಮವಿಧಾಯಕಸೂತ್ರ)

೮೯. ಜಮೋ ಹ್ರಸ್ವಾದಚಿ ಜಮುಣ್ ನಿತ್ಯಮ್ ॥ ೮—೩—೩೨ ॥

ಹ್ರಸ್ವಾತ್ಪರೋ ಯೋ ಜಮ್ ತದಂತಂ ಯತ್ಪದಂ ತಸ್ಮಾತ್ಪರಸ್ಯಾಚೋ ಜಮುಟ್ । ಪ್ರತ್ಯಜ್ಞಾತ್ಮಾ । ಸುಗಣ್ಣೀಶಃ । ಸನ್ನಚ್ಯುತಃ ॥

ಜಮುಃ, ಹ್ರಸ್ವಾತ್, ಅಚಿ, ಜಮುಟ್, ನಿತ್ಯಮ್ । ಐದು ಪದಗಳುಳ್ಳ ಸೂತ್ರ. ಜಮ್ ಪ್ರತ್ಯಾಹಾರ (ಜಣನ). ಇದು ಪಂಚಮಿಾ. "ಪದಸ್ಯ" ಅಧಿಕಾರ. ಇಲ್ಲಿ ಅಮು ಪಂಚಮಂತ್ಯವಾಗಿ ವಿಪರಿಣತವಾದುದರಿಂದ ಪದಾತ್ ಎಂದಾಗುತ್ತದೆ. ಜಮುಃ ಎಂಬುದು ಅದಕ್ಕೆ ವಿಶೇಷಣ. "ಯೇನವಿಧಿಸ್ತದಂತಸ್ಯ" ಪರಿಭಾಷೆಯಿಂದ ತದಂತ ಲಾಭ. ಹ್ರಸ್ವಾತ್, ಪದಾತ್ ಎರಡೂ ಪಂಚಮಿಯಾದುದರಿಂದ "ತಸ್ಮಾದಿತಿ" ಪರಿಭಾಷೆಯಿಂದ ಪರಕ್ಕೆ ಕಾರ್ಯವೆಂದು ತಿಳಿಯಬೇಕು. ಅಚಿ ಎಂದು ಸಪ್ತಮಿಯಿದ್ದರೂ ಹಿಂದಿನಂತೆ ಪಂಚಮಂತ್ಯಕ್ಕೆ ಪ್ರಾಬಲ್ಯವಿರುವುದರಿಂದ ಸಪ್ತಮ್ಯಂತವು ಷಷ್ಠ್ಯಂತವಾಗಿ ಪರಿಣತವಾಗುತ್ತದೆ. **ಸೂತ್ರಾರ್ಥ**—ಹ್ರಸ್ವದ ಪರದಲ್ಲಿ ಯಾವ ಜಮ್ (ಜ, ಣ, ನ) ಇದೆಯೋ ಅದೇ ಅಂತವಾದ ಪದದ ಪರದಲ್ಲಿರುವ ಅಚಿಗೆ ಜಮುಟ್ ಆಗಮ ಬರುತ್ತದೆ. ಜಮುಟ್ ಟಿತ್ತಾಗಿದೆ. ಜಮ್ ಪ್ರತ್ಯಾಹಾರದಮೇಲೆ ಟಿತ್ ಮಾಡಿದುದರಿಂದ ಪ್ರತ್ಯೇಕದಲ್ಲಿ ಅನ್ವಯಮಾಡಿಕೊಳ್ಳಬೇಕು. "ಆದ್ಯಂತೌ ಟಕಿತೌ" ಸೂತ್ರದಿಂದ ಆದ್ಯವಯವವಾಗಿ ಬರುತ್ತದೆ. ನಿಮಿತ್ತ ಆಗಮುಗಳಿಗೆ ಯಥಾ ಸಂಖ್ಯವಿರುವುದರಿಂದ ಜಕಾರದ ಪರದ ಅಚಿಗೆ ಜಕಾರ, ಣಕಾರದ ಪರದ ಅಚಿಗೆ ಣಕಾರ, ನಕಾರಪರದ ಅಚಿಗೆ ನಕಾರವೆಂದು ತಿಳಿಯಬೇಕು. "ಹೇಮಪರೇ ವಾ" ಸೂತ್ರದಿಂದ ವಾ ಎಂಬುದಕ್ಕೆ ಅನುವೃತ್ತಿಯಿಲ್ಲವೆಂದು ಸೂಚಿಸಲು ನಿತ್ಯಂ ಎಂದಿರುತ್ತಾನೆ. ಪ್ರತ್ಯಜ್+ಆತ್ಮಾ. ಇಲ್ಲಿ ಜಕಾರ ಪದದ ಕೊನೆಯಲ್ಲಿದೆ. ಅದು ನಿತ್ಯದಲ್ಲಿರುವ ಅಕಾರದ ಪರದಲ್ಲಿರುವುದರಿಂದ ಹ್ರಸ್ವದ ಪರದಲ್ಲಿದೆ. ಇದರ ಪರದಲ್ಲಿ ಆಯಂಬ ಆಚ್ ಇದೆ. ಇದಕ್ಕೆ ಜಕಾರವು ಆದ್ಯವಯವಾಗಿ ಬಂದರೆ ಪ್ರತ್ಯಜ್+ಜ್ ಆತ್ಮಾ= ಪ್ರತ್ಯಜ್ಜಾತ್ಮಾ ಎಂದಾಗುತ್ತದೆ. ಸುಗಣ್+ಈಶಃ. ಇಲ್ಲಿ ಉಕಾರರೂಪ ಹ್ರಸ್ವದ ಪರದಲ್ಲಿ ಣಕಾರರೂಪ ಜಮ್ ಇದೆ. ಇದರ ಪರದಲ್ಲಿರುವ ಈಕಾರರೂಪ ಅಚಿಗೆ ಣಕಾರವು ಆದ್ಯವಯವವಾಗಿ ಬಂದರೆ ಸುಗಣ್ಣೀಶಃ ಎಂದಾಗುತ್ತದೆ. ಸನ್+ಅಚ್ಯುತಃ ಅಕಾರರೂಪ ಹ್ರಸ್ವದ ಪರವಾಗಿ ನಕಾರವು ಪದಾಂತವಾಗಿದೆ. ಅದರ ಪರದಲ್ಲಿರುವ ಅಕಾರರೂಪ ಅಚ್ಚಿಗೆ ನಕಾರವು ಆದ್ಯವಯವನಾಗಿ ಬಂದರೆ ಸನ್+ನ್ಅಚ್ಯುತಃ ಸನ್ನಚ್ಯುತಃ ಎಂದಾಗುತ್ತದೆ.

(ರುತ್ವವಿಧಾಯಕ ಸೂತ್ರ)

೯೦. ಸಮುಃ ಸುಟಿ ॥ ಲ-ಶಿ-೫

ಸಮೋ ರುಃ ಸುಟಿ ॥

ದ್ವಿಪದ ಸೂತ್ರ. ಸಮಃ ಷಷ್ಠೀ. "ಮತುವಸೋ ರು ಸಂಬುದ್ಧೌ" ಸೂತ್ರದಿಂದ "ರುಃ" ಅನುವೃತ್ತವಾಗುತ್ತದೆ. ಸುಟಿ ಸಪ್ತಮಿಯಾದುದರಿಂದ "ತಸ್ಮಿನ್ನಿತಿ" ಪರಿಭಾಷೆಯಿಂದ ಸುಟಿನ ಅವ್ಯವಹಿತ ಪೂರ್ವಕ್ಕೆ ಕಾರ್ಯವೆಂದು ತಿಳಿಯಬೇಕು. **ಸೂತ್ರಾರ್ಥ**—ಸುಟ್ ಪರದಲ್ಲಿರುವಾಗ ಸಮಿಗೆ ರು ಆದೇಶ ಬರುತ್ತದೆ. ಷಷ್ಠ್ಯಂತಕ್ಕೆ ಆದೇಶ ಹೇಳಿದುದರಿಂದ "ಅಲೋಂತ್ಯಸ್ಯ" ಪರಿಭಾಷೆಯಿಂದ ಸಮಿನ ಅಂತ್ಯಾಕ್ಷರಕ್ಕೆ ರುತ್ವ. ಮಕಾರಕ್ಕೆ ರುತ್ವವೆಂದಾಯಿತು. ಸಮ್+ಸ್ಕರ್ತಾ. ಸಮ್ ಉಪಸರ್ಗ. ಇದು ಪೂರ್ವದಲ್ಲಿರುವಾಗ ಕೃಞ್ ಧಾತುವಿಗೆ ತೃಚ್ ಪ್ರತ್ಯಯ. ತೃಚ್ ಪರವಾದಾಗ ಧಾತುವಿನ ಋಕಾರಕ್ಕೆ ಗುಣ. ಕರ್ತಾ ಎಂದು ರೂಪವಾಗುತ್ತವೆ. "ಸಂಪರಿಭ್ಯಾಂ ಕರೋತೌ ಭೂಷಣೇ" ಎಂಬ ಸೂತ್ರದಿಂದ ಅಲಂಕರಿಸುವುದು ಎಂಬರ್ಥದಲ್ಲಿ ಸಮಿನ (ಮತ್ತು ಪರಿ ಎಂಬುದರ) ಪರದಲ್ಲಿರುವ ಕೃಞ್ ಧಾತುವಿಗೆ ಸುಟ್‌ಆಗಮ. ಟೆತ್ವಾದುದರಿಂದ ಆದ್ಯವಯವಾಗಿ ಬರುತ್ತದೆ. ಸಮ್+ಸ್ಕರ್ತಾ ಇಲ್ಲಿ ಸಮಿನ ಪರದಲ್ಲಿ ಸುಟ್ (ಸಕಾರ) ಬಂದುದರಿಂದ ಸಮಿನ ಮಕಾರಕ್ಕೆ ರುತ್ವ. ರುವಿನಲ್ಲಿ ಉಕಾರ ಉಚ್ಚಾರಣಾರ್ಥವಾಗಿ ಹೇಳಿದೆ. ಸರ್‌ಸ್ಕರ್ತಾ ಎಂದಾಗುತ್ತದೆ.

(ಅನುನಾಸಿಕ ವಿಧಾಯಕ ಸೂತ್ರ)

೯೧. ಅತ್ರಾನುನಾಸಿಕಃ ಪೂರ್ವಸ್ಯ ತು ವಾ ॥ ಲ-ಶಿ-೨

ಅತ್ರ ರುಪ್ರಕರಣೇ ರೋಃ ಪೂರ್ವಸ್ಯಾನುನಾಸಿಕೋ ವಾ ॥

ಅತ್ರ, ಅನುನಾಸಿಕಃ, ಪೂರ್ವಸ್ಯ, ತು, ವಾ ॥ ಐದು ಪದಗಳುಳ್ಳ ಸೂತ್ರ. "ಮತವಸೋರು ಸಂಬುದ್ಧೌ" ಎಂದು ಹಿಂದಿನ ಸೂತ್ರ. ಆಮೇಲೆ ಈ ಸೂತ್ರ ಹೇಳಿದುದರಿಂದ ಅತ್ರ ಅಂದರೆ (ಇಲ್ಲಿ) ಈ ರುಪ್ರಕರಣದಲ್ಲಿ ಎಂದರ್ಥ ಲಬ್ಧವಾಗುತ್ತದೆ. ಅಷ್ಟಾಧ್ಯಾಯಿಯಲ್ಲಿ ರುತ್ವವನ್ನು ಹೇಳುವ ಸೂತ್ರಗಳು ಎರಡು. ಒಂದು ಹಿಂದೆ ಹೇಳಿದ ಸೂತ್ರ. ಇನ್ನೊಂದು "ಸಸಜುಷೋರುಃ" ಎಂಬುದು. ಅದು ಎರಡನೇ ಅಧ್ಯಾಯದಲ್ಲಿ ಇದೆ. ಪೂರ್ವಸ್ಯ ಎಂಬುದು ಸಾಪೇಕ್ಷಿತವಾದುದರಿಂದ ಪ್ರಕರಣದಿಂದ ಲಬ್ಧವಾದ ರುವಿನ ಪೂರ್ವಕ್ಕೆ ಎಂದು ತಿಳಿಯುತ್ತದೆ. ತು ವ್ಯಷ್ಟ್ಯರ್ಥಕ. **ಸೂತ್ರಾರ್ಥ**—ಈ ಸೂರನೇ ಅಧ್ಯಾಯದಲ್ಲಿ ಹೇಳಿರುವ ಪ್ರಕರಣದಲ್ಲಿ ರುವಿನ ಪೂರ್ವಕ್ಕೆ ಅನುನಾ

ಸಿಕವು ವಿಕಲ್ಪವಾಗಿ ಬರುತ್ತದೆ. ಸರ್ + ಸ್ಕರ್ತಾ ಎಂದಿರುವಾಗ ರೇಫದ ಪೂರ್ವದಲ್ಲಿರುವ, ಅಕಾರವು ಅನುನಾಸಿಕವಾಗುತ್ತದೆ. ಸರ್‌ಸ್ಕರ್ತಾ. ಅನುನಾಸಿಕ ಬಾರದಿರುವಾಗ ಅನುಸ್ವಾರವನ್ನು ಹೇಳುತ್ತಾನೆ.

(ಅನುಸ್ವಾರಾಗಮವಿಧಾಯಕಸೂತ್ರ)

೯೨. ಅನುನಾಸಿಕಾತ್ಪರೋಽನುಸ್ವಾರಃ ॥ ಲ-ಶಿ-೪ ॥

ಅನುನಾಸಿಕಂ ವಿಹಾಯ ರೋಃ ಪೂರ್ವಸ್ಮಾತ್ಪರೋಽನುಸ್ವಾರಾಗಮಃ ॥

ಅನುನಾಸಿಕಾತ್, ಪರಃ, ಅನುಸ್ವಾರಃ ॥ ತ್ರಿಪದಸೂತ್ರ. ಅನುನಾಸಿಕಾತ್ ಎಂಬಲ್ಲಿ ಲ್ಯಬಂತಪದ ಲುಪ್ತವಾಗಿರುವಾಗ ಬಂದ ಪಂಚಮಿ. "ಪ್ರಾಸಾದಾತ್ ವೀಕ್ಷತೇ" ಅಂದರೆ ಪ್ರಾಸಾದಮಾರುಹ್ಯ ವೀಕ್ಷತೇ ಎಂದು ತಿಳಿಯಬೇಕು. ಆರುಹ್ಯ (ಹತ್ತಿ) ಎಂಬುದು ಲೋಪಹೊಂದಿದೆ. ಆಗ ಪಂಚಮಿ ಬರುತ್ತದೆ. ಹಾಗೇ ಇಲ್ಲಿ ವಿಹಾಯ (ಬಿಟ್ಟು) ಎಂಬ ಲ್ಯಬಂತವು ಲುಪ್ತವಾಗಿದೆ. ಅದನ್ನು ನಿಮಿತ್ತೀಕರಿಸಿ ಇಲ್ಲಿ ಪಂಚಮಿ ಬಂದಿದೆ. ಅನುನಾಸಿಕವನ್ನು ಮಾಡದಿರುವಾಗ (ಬಿಟ್ಟು) ಎಂದರ್ಥ. ಹಿಂದಿನ ಸೂತ್ರದಿಂದ "ಪೂರ್ವಸ್ಯ" ಎಂಬುದು ಅನುವೃತ್ತವಾಗಿ ಇಲ್ಲಿ ಪಂಚಮ್ಯಂತವಾಗಿ ಅನುವೃತ್ತವಾಗುತ್ತದೆ. ಪರಃ ಎಂಬಲ್ಲಿ ಅನ್ವಯ. ರುವಿನ ಪೂರ್ವದ ಪರವಾಗಿ ಎಂದರ್ಥವಾಗುತ್ತದೆ. ಇದರಿಂದ ಅನುಸ್ವಾರವು ಮಧ್ಯೆ ಬರುವುದರಿಂದ ಆಗಮವಾಗುತ್ತದೆ. **ಸೂತ್ರಾರ್ಥ**—ಅನುನಾಸಿಕ ಬಾರದಿರುವಾಗ ರುವಿನ ಪೂರ್ವಾಕ್ಷರದ ಪರವಾಗಿ ಅನುಸ್ವಾರವು ಆಗಮವಾಗಿ ಬರುತ್ತದೆ. ಸಂರ್ + ಸ್ಕರ್ತಾ ಎಂದಾಗುತ್ತದೆ. ಈಗ ರುವಿನ ರೇಫಕ್ಕೆ ವಿಸರ್ಗವನ್ನು ವಿಧಿಸುತ್ತಾನೆ.

(ವಿಸರ್ಗವಿಧಾಯಕಸೂತ್ರ)

೯೩. ಖರವಸಾನಯೋರ್ವಿಸರ್ಜನೀಯಃ ॥ ಲ-ಶಿ-೧೫ ॥

ಖರಿ ಅವಸಾನೇ ಚ ಪದಾಂತಸ್ಯ ರೇಫಸ್ಯ ವಿಸರ್ಗಃ ॥

ಖರವಸಾನಯೋಃ, ವಿಸರ್ಜನೀಯಃ ॥ ದ್ವಿಪದಸೂತ್ರ. "ರೋ ರಿ" ಸೂತ್ರದಿಂದ "ರಃ" ಎಂಬ ಷಷ್ಠ್ಯಂತಪದವು ಅನುವೃತ್ತವಾಗುತ್ತದೆ. "ಪದಸ್ಯ" ಅಧಿಕಾರ. ಅದಕ್ಕೆ ರಃ ಎಂಬುದು ವಿಶೇಷಣವಾದುದರಿಂದ ರೇಫವೇ ಅಂತವಾದ ಪದಕ್ಕೆ ಎಂದರ್ಥವಾಗುತ್ತದೆ. ಇದೂ ಷಷ್ಠ್ಯಂತವಾದುದರಿಂದ "ಅಲೋಂತ್ಯಸ್ಯ" ಎಂಬುದರಿಂದ ಪದದ ಅಂತ್ಯಕ್ಕೆ ಕಾರ್ಯವೆಂದು ತಿಳಿಯುತ್ತದೆ. ಅಂತ್ಯವಾದುದು ರೇಫವೇ. ಖರವಸಾನಯೋಃ

ಸಪ್ತಮೀ ದ್ವಿವಚನ. ಇದು ನಿಮಿತ್ತ, ಖರ್‌ಚ ಅವಸಾನಂ ಚ ಖರವಸಾನೀ ತಯೋಃ, ಖರವಸಾನಯೋಃ. ಸಪ್ತಮಿಯಾದುದರಿಂದ ಅವ್ಯವಹಿತಪೂರ್ವಸ್ಯೈಕಾರ್ಯ.

ಸೂತ್ರಾರ್ಥ—ಖರ್, ಅವಸಾನವೂ ಪರವಾಗಿರುವಾಗ ಪದದ ಕೊನೆಯಲ್ಲಿರುವ ರೇಫಕ್ಕೆ ವಿಸರ್ಗ ಬರುತ್ತದೆ. "ವಿರಾಮೋವಸಾನಮ್" ಎಂದು ಮುಂದೆ ವರ್ಣಗಳಿಲ್ಲದಿರುವುದೇ ಅವಸಾನವೆಂದು ತಿಳಿಯಬೇಕು. ಪ್ರಕೃತ ಸರ್ ಎಂಬಲ್ಲಿ ರೇಫವು ಪದದ ಕೊನೆಯಲ್ಲಿ ಇವೆ. ಇದಕ್ಕೆ ಖರಿನಲ್ಲಿ ಸೇರಿದ ಸಕಾರವು ಪರದಲ್ಲಿದೆ. ಆಗ ಸಃ+ಸ್ಕರ್ತಾ. ಸಃ+ಸ್ಕರ್ತಾ ಎಂದಾಗುತ್ತದೆ. ಈಗ ವಿಸರ್ಗಕ್ಕೆ ಸಕಾರವನ್ನು ವಾರ್ತಿಕದಿಂದ ಹೇಳುತ್ತಾನೆ.

(ವಿಸರ್ಗಕ್ಕೆ ಸಕಾರವಿಧಾಯಕವಾರ್ತಿಕ)

ವಾ॥ ಸಂಪುಂಕಾನಾಂ ಸೋ ವಕ್ತವ್ಯಃ ॥

ಸೆಸ್ಕರ್ತಾ । ಸಂಸ್ಕರ್ತಾ ॥

ತ್ರಿಪದವಾರ್ತಿಕ. ಸಮ್ ಚ ಪುಮ್‌ಚ ಕಾನ್‌ಚ ಸಂಪುಂಕಾನಃ, ತೇಷಾಂ ಸಂಪುಂಕಾನಾಂ. ಸಮ್, ಪುಮ್, ಕಾನ್ ಇವುಗಳ ವಿಸರ್ಗಕ್ಕೆ ಸಕಾರವನ್ನು ಹೇಳಬೇಕು ಎಂದರ್ಥ. ಪ್ರಕೃತ ಸಮಿನ ವಿಸರ್ಗವಿರುವುದರಿಂದ ಅದಕ್ಕೆ ಸಕಾರಾದೇಶ ಆಗ ಎರಡು ರೂಪಗಳಾಗುತ್ತವೆ. ಅನುನಾಸಿಕದ ರೂಪ ಸೆಸ್ಕರ್ತಾ. ಅನುಸ್ವಾರದ ರೂಪ ಸಂಸ್ಕರ್ತಾ. ಇಲ್ಲಿ ದ್ವಿತ್ವಾದಿಗಳಿಂದ ಹಲವು ರೂಪಗಳಾದರೂ ಬಾಲರಿಗೆ ದುರ್ಬೋಧವೆಂದು ಹೇಳಲಿಲ್ಲ.

(ಪುಮಿಗೆ ರುತ್ವವಿಧಾಯಕಸೂತ್ರ)

೯೪. ಪುಮಃ ಖಯ್ಯಮ್ಪರೇ ॥ ಲ-ಶಿ-೬ ॥

ಅಮ್ಪರೇ ಖಯಿ ಪುಮೋ ರುಃ । ಪುಂಸ್ಕೋಕಿಲಃ । ಪುಂಸ್ಕೋಕಿಲಃ ॥

ಪುಮಃ, ಖಯಿ, ಅಮ್ಪರೇ ॥ ತ್ರಿಪದಸೂತ್ರ. ರುಃ ಎಂಬುದು ಅನುವೃತ್ತವಾಗುತ್ತದೆ. ಅಮ್ ಪರೋ ಯಸ್ಮಾತ್ ಸಃ ಅಮ್ಪರಃ. ಅಮ್ ಪ್ರತ್ಯಾಹಾರ. ಇದು ಪರವಾಗಿರುವುದು ಎಂದರ್ಥ. ಖಯ್‌ಗೆ ಇದು ವಿಶೇಷಣ. ಸಪ್ತಮಿಯಾದುದರಿಂದ ಅಮ್ ಪರವಾಗಿರುವ ಖಯ್ ಪರವಾದಾಗ ಪೂರ್ವಕ್ಕೆ ಕಾರ್ಯ. ಪುಮಃ ಷಷ್ಠೀ.

ಸೂತ್ರಾರ್ಥ—ಅಮ್ ಪರವಾಗಿರುವ ಖಯ್ ಪರವಾಗಿರುವಾಗ ಪುಮಿಗೆ ರು ಆದೇಶವಾಗಿ ಬರುತ್ತವೆ. ಷಷ್ಠಿಯಾದುದರಿಂದ "ಅಲೋಂತ್ಯಸ್ಯ" ಪರಿಭಾಷೆಯಿಂದ ಪುಮಿನ **ಅಂತ್ಯವಾದ ಮಕಾರಕ್ಕೆ ರುತ್ವ. ಪುಮ್+ಕೋಕಿಲಃ ಎಂದಿರುವಾಗ ಖಯ್**

ಕಕಾರ (ಕೋ) ಇದಕ್ಕೆ ಓ ರೂಪವಾದ (ಕ್+ಓ) ಅಮ್ ಪರವಾಗಿದೆ. ಅಮ್‌ಪರವಾದ ಖಯ್ ಪರವಾದುದರಿಂದ ಪುಮಿನ ಮಕಾರಕ್ಕೆ ರುತ್ವ ಬಂದರೆ ಪುರ್+ಕೋಕಿಲಃ ಎಂದಾಗುತ್ತದೆ. ಇಲ್ಲಿ ಹಿಂದಿನಂತೇ ರುತ್ವ ಪ್ರಕರಣದಲ್ಲಿ ಹೇಳಿದ ಅನುನಾಸಿಕ, ಅನುಸ್ವಾರಗಳು ಬಂದರೆ ಪುಂರ್+ಕೋಕಿಲಃ, ಪುಂರ್+ಕೋಕಿಲಃ ಎಂದು ಎರಡು ರೂಪಗಳಾಗುತ್ತವೆ. ಆಗ "ಖರವಸಾನಯೋರ್ವಿಸರ್ಜನೀಯಃ" ಸೂತ್ರದಿಂದ ರೇಫಕ್ಕೆ ವಿಸರ್ಗ. "ಸಂಪುಂಕಾನಾಂ ಸೋ ವಕ್ತವ್ಯಃ" ವಾರ್ತಿಕದಿಂದ (ಪುಮ್ ಸೇರಿರುವುದರಿಂದ) ಬಂದಿರುವ ವಿಸರ್ಗಕ್ಕೆ ಸಕಾರಾದೇಶ. ಪುಂಸ್ಕೋಕಿಲಃ, ಪುಂಸ್ಕೋಕಿಲಃ ಎಂದಾಗುತ್ತದೆ. ಗಂಡು ಕೋಗಿಲೆ ಎಂದರ್ಥ.

(ನಾಂತಪದಕ್ಕೆ ರುತ್ವವಿಧಾಯಕ ಸೂತ್ರ)

೯೫. ನಶ್ಛವ್ಯಪ್ರಶಾನ್ ॥ ಲ-ಶಿ-೭ ॥

ಅಮ್ಪರೇ ಛವಿ ನಾಂತಸ್ಯ ಪದಸ್ಯ ರುಃ, ನ ತು ಪ್ರಶಾನ್‌ಶಬ್ದಸ್ಯ ॥

ನಃ, ಛವಿ, ಅಪ್ರಶಾನ್॥ ತ್ರಿಪದಸೂತ್ರ. ಹಿಂದಿನ ಸೂತ್ರದಿಂದ "ಅಮ್ಪರೇ" ಅನುವೃತ್ತವಾಗುತ್ತದೆ. ಛವಿ ಎಂಬಲ್ಲಿ ಅನ್ವಯ ಪದಸ್ಯ ಅಧಿಕಾರ. "ನಃ" ಷಷ್ಠ್ಯಂತವು ಅದಕ್ಕೆ ವಿಶೇಷಣವಾದುದರಿಂದ ನಾಂತವಾದ ಪದಕ್ಕೆ ಎಂದು ಲಬ್ಧವಾಗುತ್ತದೆ. "ರುಃ" ಅನುವೃತ್ತವಾಗುತ್ತದೆ **ಸೂತ್ರಾರ್ಥ**.—ಅಮ್ ಪರವಾದ ಛವ್ (ಪ್ರತ್ಯಾಹಾರ) ಪರವಾದಾಗ ನಕಾರಾಂತವಾದ ಪದಕ್ಕೆ ರುತ್ವ ಬರುತ್ತದೆ. ("ಅಲೋಂತ್ಯಸ್ಯ" ಪರಿಭಾಷೆಯಿಂದ ಪದದಕೊನೆಯ ನಕಾರಕ್ಕೆ ರುತ್ವವೆಂದು ತಿಳಿಯಬೇಕು.) ಪ್ರಶಾನ್ ಶಬ್ದಕ್ಕೆ ಈ ರುತ್ವವಿಲ್ಲ. ಪ್ರಶಾನ್ ಎಂಬಲ್ಲಿ ನಕಾರ ಕೊನೆಯಲ್ಲಿಲ್ಲವಾದರೂ ಅದಕ್ಕೆ ಅಮ್ಪರ ಛವ್ ಪರವಾದರೂ ರುತ್ವವಿಲ್ಲ. ಚಕ್ರಿನ್+ತ್ರಾಯಸ್ವ ಇಲ್ಲಿ ಪದಾಂತವಾದ ನಕಾರವಿದೆ. ಅದಕ್ಕೆ ತಕಾರರೂಪ ಛವ್ ಪರದಲ್ಲಿದೆ. ಅದಕ್ಕೆ ರೇಫರೂಪ (ತ್+ರ್+ಅ) ಅಮ್ ಪರವಾದುದರಿಂದ ಅಮ್ ಪರವಾದ ಛವ್ ಆಯಿತು. ಆಗ ನಕಾರಕ್ಕೆ ರುತ್ವಬಂದರೆ ಚಕ್ರಿರ್+ತ್ರಾಯಸ್ವ ಎಂದಾಗುತ್ತದೆ. "ಅತ್ರಾನುನಾಸಿಕಃ ಪೂರ್ವಸ್ಯ ತು ವಾ" ಸೂತ್ರದಿಂದ ಅನುನಾಸಿಕವೂ "ಅನುನಾಸಿಕಾತ್ಪರೋನುಸ್ವಾರಃ" ಸೂತ್ರದಿಂದ ಅನುಸ್ವಾರವೂ ಬಂದರೆ ಚಕ್ರಿಂರ್+ತ್ರಾಯಸ್ವ, ಚಕ್ರಿಂರ್+ತ್ರಾಯಸ್ವ ಎಂದಿರುವಾಗ "ಖರವಸಾನಯೋರ್ವಿಸರ್ಜನೀಯಃ" ಸೂತ್ರದಿಂದ ಆ ರೇಫಗಳಿಗೆ ವಿಸರ್ಗಬಂದಾಗ ಅವುಗಳಿಗೆ ಸಕಾರ ಹೇಳಲು ಬೇರೆ ಸೂತ್ರವನ್ನು ಹೇಳುತ್ತಾನೆ. ಹಿಂದೆ ವಾರ್ತಿಕದಲ್ಲಿ ಸಮ್, ಪುಮ್, ಕಾನ್ ಮೂರು ಶಬ್ದಗಳಲ್ಲಿ ಮಾತ್ರ ಸತ್ವ ಹೇಳಿದುದರಿಂದ ಅದರಿಂದ ಬರುವುದಿಲ್ಲ.

(ವಿಸರ್ಗಕ್ಕೆ ಸತ್ವವಿಧಾಯಕ ಸೂತ್ರ)

೯೬. ವಿಸರ್ಜನೀಯಸ್ಯ ಸಃ ॥ ಲ-ಶಿ-೪೪ ॥

ಖರಿ ॥ ಚಕ್ರೆಸ್ತ್ರಾಯಸ್ಯ, ಚಕ್ರಿಂಸ್ತ್ರಾಯಸ್ಯ । ಅಪ್ರಶಾನ್ ಕಿಮ್ ? ಪ್ರಶಾನ್ ತನೋತಿ । ಪದಸ್ಯೇತಿ ಕಿಮ್ ? ಹಂತಿ ॥

ದ್ವಿಪದ ಸೂತ್ರ. ಅನುವೃತ್ತಿಯನ್ನು ಮಾತ್ರ ವೃತ್ತಿಯಲ್ಲಿ ಹೇಳಿದೆ. "ಖರವಸಾನಯೋರ್ವಿಸರ್ಜನೀಯಃ" ಸೂತ್ರದಿಂದ "ಖರಿ" ಅನುವೃತ್ತವಾಗುತ್ತದೆ. ಸಮಾಹಾರದಲ್ಲಿ ಏಕದೇಶಕ್ಕೆ ಅನ್ವಯವಿಲ್ಲವಾದರೂ ಒಂದುಕಡೆಮಾತ್ರ ಸ್ವರಿತಹೇಳಿದರೆ ಆ ಸ್ವರಿತತ್ವವಿರುವುದರಿಂದ ಅವಕ್ಕೆ ಅನುವೃತ್ತಿ ಇವೆಯಂದು ತಿಳಿಯಬೇಕು. ಇಲ್ಲಿ ಖರಿ ಎಂಬಲ್ಲಿ ಮಾತ್ರ ಅದಕ್ಕೆ ಮಾತ್ರ ಅನುವೃತ್ತಿ. **ಸೂತ್ರಾರ್ಥ.**—ಖರ್ ಪರವಾದಾಗ ವಿಸರ್ಗಕ್ಕೆ ಸಕಾರಬರುತ್ತದೆ. ಪ್ರಕೃತ ವಿಸರ್ಗಕ್ಕೆ ತಕಾರರೂಪ ಖರ್ ಪರವಾದುದರಿಂದ ಸಕಾರ ಬಂದರೆ ಚಕ್ರೆಸ್ತ್ರಾಯಸ್ಯ, ಚಕ್ರಿಂಸ್ತ್ರಾಯಸ್ಯ ಎಂದು ಎರಡುರೂಪಗಳಾಗುತ್ತವೆ. ಪ್ರಶಾನ್‌ಶಬ್ದಕ್ಕೆ ರುತ್ವವಿಲ್ಲವೇಕೆ? ಪ್ರಶಾನ್+ತನೋತಿ ನಿಷೇಧಹೇಳದಿದ್ದರೆ ಇಲ್ಲಿಯೂ ಪದಾಂತನಕಾರಕ್ಕೆ ಅಕಾರರೂಪ ಅಮ್ ಪರವಾದ ತಕಾರರೂಪ ಛವ್‌ಪರನಾದುದರಿಂದ ರುತ್ವ ಬರಬೇಕಾಗುತ್ತದೆ, ಅದು ಇಷ್ಟವಲ್ಲ. ಆದುದರಿಂದ ನಿಷೇಧಹೇಳಿದೆ. ಪದಸ್ಯ ಕಿಮ್ ? ಪದಾಂತವಾದ ನಕಾರವೆಂದುದು ಏಕೆ ? ಹನ್ತಿ. ಹನ್‌ಧಾತುವಿಗೆ ಲಟಿನಲ್ಲಿ ತಿಪ್‌ಪ್ರತ್ಯಯಬಂದಾಗ ಹನ್+ತಿ ಎಂದಿರುವಾಗ ನಕಾರಕ್ಕೆ ಛವ್‌ಪರವಾದುದರಿಂದ ರುತ್ವಬರಬೇಕಾಗುತ್ತದೆ. ಪದಾಂತವೆಂದುದರಿಂದ ಇಲ್ಲಿ ನಕಾರವು (ಪದಾಂತವಾಗಿದೆ) ಪದಮಧ್ಯದಲ್ಲಿರುವುದರಿಂದ ರುತ್ವ ಬರುವುದಿಲ್ಲ.

(ನ್ಯಾನ್‌ಶಬ್ದಕ್ಕೆ ರುತ್ವವಿಧಾಯಕಸೂತ್ರ)

೯೭. ನ್ಯಾನ್ ಪೇ ॥ ಲ-೩-೧೦ ॥

ನ್ಯಾನಿತ್ಯಸ್ಯ ರುರ್ವಾ ಪೇ ॥

ನ್ಯಾನ್, ಪೇ ॥ ದ್ವಿಪದಸೂತ್ರ. ನ್ಯಾನ್ ಎಂಬುದು ಲುಪ್ತಷಷ್ಠ್ಯೇಕಪದ. ಇದರ ಮೇಲೆ ಷಷ್ಠೀ ಬಂದು ಇಲ್ಲಿ ಲುಪ್ತವಾಗಿದೆ. ದ್ವಿತೀಯಾಂತಪದದ ಮೇಲೆ ಷಷ್ಠಿ ಹೇಗೆ ಬರುತ್ತವೆ ? ಎಂದರೆ ಇಲ್ಲಿ ಶಬ್ದವನ್ನು ಮಾತ್ರ ತಿಳಿಸುವುದರಿಂದ ದೋಷವಿಲ್ಲ. ನ್ಯಾನ್‌ಎಂಬ ಶಬ್ದಕ್ಕೆ ಎಂದರ್ಥ. ಅರ್ಥಪರವಾಗಿದ್ದರೆ ಅದರ ಮೇಲೆ ತಿರುಗಿ ವಿಭಕ್ತಿ ಬರುವುದಿಲ್ಲ. "ರು" ಅನುವೃತ್ತವಾಗುತ್ತದೆ. "ಉಭಯಥರ್ಕ್ಸು" ಸೂತ್ರದಿಂದ "ಉಭಯಥಾ" ಅನುವೃತ್ತವಾಗಿ ವಿಕಲ್ಪಾರ್ಥವನ್ನು ತಿಳಿಸುತ್ತದೆ. ಪೇ ಪಕಾರದ ಸಪ್ತಮೀರೂಪ. **ಸೂತ್ರಾರ್ಥ.**—ನ್ಯಾನ್ ಎಂಬ ಪದಕ್ಕೆ (ಅಲೋಂತ್ಯಸ್ಯ) ಪಕಾರಪರವಾದಾಗ ರುತ್ವವು ವಿಕಲ್ಪವಾಗಿ ಬರುತ್ತದೆ. ನ್ಯಾನ್+ಪಾಹಿ. ಇಲ್ಲಿ ಪಕಾರಪರವಾದುದರಿಂದ ನ್ಯಾನ್ ಎಂಬುದರ ಕೊನೆಯ ನಕಾರಕ್ಕೆ ರುತ್ವ ಬಂದರೆ

ನ್ಯರ್+ಪಾಹಿ ಎಂದಾಗುತ್ತದೆ. ಹಿಂದಿನಂತೆ ಅನುನಾಸಿಕ, ಅನುಸ್ವಾರ ಬಂದರೆ ನ್ಯಾರ್+ಪಾಹಿ ನ್ಯಾಂರ್+ಪಾಹಿ ಎಂದಿರುವಾಗ ರೇಫಕ್ಕೆ "ಖರವಸಾನಯೋರ್ವಿಸರ್ಜನೀಯಃ" ಸೂತ್ರದಿಂದ ನಿತ್ಯವಾಗಿ ವಿಸರ್ಗಪ್ರಾಪ್ತವಾದರೆ ಅಪವಾದವಾಗಿ ಬೇರೆ ಆದೇಶವನ್ನು ಹೇಳುತ್ತಾನೆ.

(ಕ ಕಸವಿಧಾಯಕ ಸೂತ್ರ)

೯೮. ಕುಪ್ವೋಃ ಕ ಕಪೌ ಚ ॥ ೮-೩-೩೭ ॥

ಕವರ್ಗೇ ಪವರ್ಗೇ ಚ ವಿಸರ್ಜನೀಯಸ್ಯ ಕ ಕಪೌ ಸ್ತಃ, ಚಾದ್ವಿಸರ್ಗಃ ॥ ನ್ಯೂಂ ಕಪಾಹಿ, ನ್ಯೂಃ ಪಾಹಿ, ನ್ಯಾಂಕಪಾಹಿ, ನ್ಯಾಂಃ ಪಾಹಿ । ನ್ಯಾನ್ ಪಾಹಿ ॥

ಕುಪ್ವೋಃ, ಕಕಪೌ ಚ ॥ ತ್ರಿಪದಸೂತ್ರ. ಕುಶ್ಚ ಪುಶ್ಚ ಕುಪ್ವೌ, ತಯೋಃ ಕುಪ್ವೋಃ ಉದಿತ್ತಾದುದರಿಂದ ವರ್ಗ ಗ್ರಹಣ. ಕವರ್ಗ, ಪವರ್ಗ ಪರವಾದಾಗ ಎಂದರ್ಥ. "ವಿಸರ್ಜನೀಯಸ್ಯ ಸಃ" ಸೂತ್ರದಿಂದ "ವಿಸರ್ಜನೀಯಸ್ಯ" ಅನುವೃತ್ತವಾಗುತ್ತವೆ. ನಿಮಿತ್ತಾದೇಶಗಳಿಗೆ ಯಥಾಸಂಖ್ಯವಿರುವುದರಿಂದ ಕ್ರಮವು ಲಬ್ಧವಾಗುತ್ತದೆ. ಚಕಾರವು ವಿಸರ್ಗವೂ ಬರುತ್ತದೆಂದು ತಿಳಿಸುತ್ತದೆ. **ಸೂತ್ರಾರ್ಥ.** ವಿಸರ್ಗಕ್ಕೆ ಕವರ್ಗ, ಪವರ್ಗಗಳು ಪರವಾದಾಗ ಜಿಹ್ವಾಮೂಲೀಯವೂ, ಉಪಧ್ಮಾನೀಯವೂ (ಕ್ರಮವಾಗಿ) ಬರುತ್ತವೆ. ಚಕಾರದಿಂದ ವಿಸರ್ಗವೂ ಬರುತ್ತದೆ. ಆಗ ವಿಕಲ್ಪವೆಂದಾಯಿತು. ಕಕಾರದ ಹಿಂದೆ ಅರ್ಧ ವಿಸರ್ಗ ಸದೃಶವಾದುದು ಜಿಹ್ವಾಮೂಲೀಯವೆಂದೂ, ಪಕಾರದ ಹಿಂದೆ ಅರ್ಧ ವಿಸರ್ಗದಂತಿರುವುದು ಉಪಧ್ಮಾನೀಯವೆಂದೂ ಹಿಂದೆ ವಿವೃತವಾಗಿದೆ. ಪ್ರಕೃತ ವಿಸರ್ಗಕ್ಕೆ ಪಕಾರ ಪರವಾದುದರಿಂದ ಉಪಧ್ಮಾನೀಯಾದೇಶ ಬಂದರೆ ನ್ಯೂಕಪಾಹಿ, ನ್ಯಾಂಕಪಾಹಿ ಎಂದು ಎರಡು ರೂಪಗಳೂ ವಿಸರ್ಗವೂ ಬರುವುದೆಂದುದರಿಂದ ನ್ಯೂಃ ಪಾಹಿ ನ್ಯಾಂಃ ಪಾಹಿ ಎಂದು ಎರಡು ರೂಪಗಳೂ ಆಗುತ್ತವೆ. ನಕಾರಕ್ಕೆ ರುತ್ವವೇ ವಿಕಲ್ಪವಾದುದರಿಂದ ಅದು ಬಾರದಿದ್ದರೆ ನ್ಯಾನ್ ಪಾಹಿ ಎಂದೇ ಇರುತ್ತದೆ.

(ಆಮ್ರೇಡಿತ ಸಂಜ್ಞಾವಿಧಾಯಕ ಸೂತ್ರ)

೯೯. ತಸ್ಯ ಪರಮಾಮ್ರೇಡಿತಮ್ ॥ ೮—೧—೩ ॥

ದ್ವಿರುಕ್ತಸ್ಯ ಪರಮಾನ್ರೇಡಿತಂ ಸ್ಯಾತ್ ॥

ತಸ್ಯ, ಪರಂ, ಆಮ್ರೇಡಿತಮ್ । ತ್ರಿಪದಸೂತ್ರ. "ಸರ್ವಸ್ಯ ದ್ವೇ" ಎಂದು

ಇದರ ಹಿಂದಿನ ಸೂತ್ರ. ತಸ್ಯ ಎಂಬುದು ಪೂರ್ವಪರಾಮರ್ಶಿಯಾದುದರಿಂದ ದ್ವಿರುಕ್ತ ಎಂಬರ್ಥವನ್ನು ಬೋಧಿಸುತ್ತದೆ. **ಸೂತ್ರಾರ್ಥ**—ಎಲ್ಲಿ ದ್ವಿರುಕ್ತಿಯನ್ನು ಹೇಳಿರುತ್ತಾನೋ (ಎರಡುಬಾರಿ ಉಚ್ಚಾರಣೆ) ಅಲ್ಲಿ ಪರದರೂಪಕ್ಕೆ ಆಮ್ರೇಡಿತವೆಂಬ ಸಂಜ್ಞೆ ಬರುತ್ತದೆ. ಕಾನ್ ಕಾನ್ ಎಂದು ಎರಡುಸಲ ಉಚ್ಚಾರಿತವಾದಾಗ ಎರಡನೆಯ ಕಾನ್ ಎಂಬುದಕ್ಕೆ ಆಮ್ರೇಡಿತ ಸಂಜ್ಞೆಯಂದು ತಿಳಿಯಬೇಕು. ಹೀಗೆ ಸಂಜ್ಞೆ ಹೇಳಿ ಅದಕ್ಕೆ ಪ್ರಯೋಜನವನ್ನು ಹೇಳುತ್ತಾನೆ.

(ಕಾನಿನ ನಕಾರಕ್ಕೆ ರುತ್ವವಿಧಾಯಕಸೂತ್ರ)

೧೦೦. ಕಾನಾಮ್ರೇಡಿತೇ ॥ ಲ-೩-೧೨ ॥

ಕಾನ್ನಕಾರಸ್ಯ ರುಃ ಸ್ಯಾದಾಮ್ರೇಡಿತೇ। ಕಾँಸ್ಕಾನ್, ಕಾಂಸ್ಕಾನ್ ॥

ಕಾನ್, ಆಮ್ರೇಡಿತೇ ॥ ದ್ವಿಪದಸೂತ್ರ. ಕಾನ್‌ಎಂಬಲ್ಲಿ ದ್ವಿತೀಯಾಂತದ ಮೇಲೆ ಷಷ್ಠೀ ಬಂದು ಸೂತ್ರದಲ್ಲಿ ಲೋಪವಾಗಿದೆ. ಆದುದರಿಂದ ಅದು ಲುಪ್ತ ಷಷ್ಠೀಕ. "ರುಃ" ಅನುವೃತ್ತವಾಗುತ್ತದೆ. **ಸೂತ್ರಾರ್ಥ**—ಕಾನಿಗೆ ಆಮ್ರೇಡಿತ ಪರವಾದಾಗ ರುತ್ವ ಬರುತ್ತದೆ. "ಅಲೋಂತ್ಯಸ್ಯ" ಪರಿಭಾಷೆಯಿಂದ ಕಾನಿನ ಅಂತ್ಯದ ನಕಾರಕ್ಕೆ ರುತ್ವ. ಪರಿಭಾಷೆಯಿಂದ ಲಬ್ಧವಾದ ಅರ್ಥವನ್ನು ಸೇರಿಸಿ ವೃತ್ತಿಯಲ್ಲಿ ಹೇಳಿದೆ. ಕಾನ್+ಕಾನ್ ಎಂದಿರುವಾಗ ಎರಡನೆಯಕಾನ್ ಆಮ್ರೇಡಿತ. ಇದು ಪರವಾದುದರಿಂದ ಪೂರ್ವದ ಕಾನಿನ ನಕಾರಕ್ಕೆ ರುತ್ವ. ಕಾರ್+ಕಾನ್ ಹಿಂದಿನಂತೆ ಅನುನಾಸಿಕ, ಅನುಸ್ವಾರ. ಕಾँರ್+ಕಾನ್ ಕಾಂರ್+ಕಾನ್. "ಖರವಸಾನಯೋರ್ವಿಸರ್ಜನೀಯಃ" ಸೂತ್ರದಿಂದ ರೇಫಕ್ಕೆ ವಿಸರ್ಗ. ಇದಕ್ಕೆ "ಕುಪ್ವೋ ೪ಕ್ಕ೪ಪೌಜ" ಸೂತ್ರದಿಂದ ಕಕಾರಪರವಾದುದರಿಂದ ಜಿಹ್ವಾಮೂಲೀಯ ಪ್ರಾಪ್ತವಾದರೆ ಅದಕ್ಕೆ ಅಪವಾದವಾಗಿ "ಸಂಪುಂಕಾನಾಂ ಸೋ ವಕ್ತವ್ಯಃ" ವಾರ್ತಿಕದಿಂದ ಸಕಾರಾದೇಶ. ಕಾँಸ್ ಕಾನ್, ಕಾಂಸ್ಕಾನ್, ಎಂದು ಎರಡುರೂಪಗಳಾಗುತ್ತವೆ.

(ಹ್ರಸ್ವಕ್ಕೆ ತುಗಾಗಮವಿಧಾಯಕಸೂತ್ರ)

೧೦೧. ಛೇ ಚ ॥ ೬-೧-೭೩ ॥

ಹ್ರಸ್ವಸ್ಯ ಛೇ ತುಕ್। ಶಿವಚ್ಛಾಯಾ ॥

ದ್ವಿಪದ ಸೂತ್ರ. ಛೇ ಛಕಾರದ ಸಪ್ತಮೀ. "ಹ್ರಸ್ವಸ್ಯ ಪಿತಿ ಕೃತಿ ತುಕ್" ಸೂತ್ರದಿಂದ "ಹ್ರಸ್ವಸ್ಯ" "ತುಕ್" ಅನುವೃತ್ತವಾಗುತ್ತವೆ. **ಸೂತ್ರಾರ್ಥ.**

ಹ್ರಸ್ವಕ್ಕೆ ಛಕಾರಪರವಾದಾಗ ತುಗಾಗಮ ಬರುತ್ತದೆ. ಶಿವಸ್ಯ ಛಾಯಾ ಶಿವಚ್ಛಾಯಾ. ಶಿವ+ಛಾಯಾ ಎಂದಿರುವಾಗ ನಕಾರದ ಮೇಲಿರುವ ಅಕಾರ ಹ್ರಸ್ವ. ಅದಕ್ಕೆ ಛಕಾರ ಪರವಾಗಿದೆ. ತುಕ್ ಕಿತ್ತಾದುದರಿಂದ "ಆದ್ಯಂತೌ ಟಕಿತೌ" ಸೂತ್ರದಿಂದ ಹ್ರಸ್ವದ ಅಂತಾವಯವನವಾಗಿ ಬರುತ್ತದೆ. ಇಲ್ಲಿ ಉಕಾರ ಉಚ್ಚಾರಣಾರ್ಥ. ತ್ ಉಳಿಯುತ್ತದೆ. ಶಿವತ್+ಛಾಯಾ ಎಂದಾದಾಗ ತಕಾರಕ್ಕೆ ಛಕಾರದ ಯೋಗವಿರುವುದರಿಂದ "ಸ್ತೋಃ ಶ್ಚುನಾಶ್ಚುಃ" ಸೂತ್ರದಿಂದ ತಕಾರಕ್ಕೆ ಚಕಾರಾದೇಶ ಶಿವಚ್ಛಾಯಾ. ಶಿವನಕಾಂತಿ.

(ವಿಕಲ್ಪ ತುಗಾಗಮವಿಧಾಯಕ ಸೂತ್ರ)

೧೦೨. ಪದಾಂತಾದ್ವಾ ॥ ೬-೧-೭೬ ॥

ದೀರ್ಘಾತ್ ಪದಾಂತಾಚ್ಛೇ ತುಗ್ ವಾ। ಲಕ್ಷ್ಮೀಚ್ಛಾಯಾ, ಲಕ್ಷ್ಮೀಛಾಯಾ ॥

ಪದಾಂತಾತ್, ವಾ ॥ ದ್ವಿಪದ ಸೂತ್ರ. "ದೀರ್ಘಾತ್" ಎಂಬ ಸೂತ್ರವೂ ಹ್ರಸ್ವಸ್ಯ ಪಿತಿ ಕೃತಿ ತುಕ್" ಸೂತ್ರದಿಂದ "ತುಕ್" "ಛೇ" ಸೂತ್ರದಿಂದ "ಛೇ" ಪದಗಳೂ ಅನುವೃತ್ತವಾಗುತ್ತವೆ. ದೀರ್ಘಾತ್ ಎಂಬುದಕ್ಕೆ ಪದಾಂತಾತ್ ಎಂಬಲ್ಲಿ ಅನ್ವಯ. **ಸೂತ್ರಾರ್ಥ**—ಪದದ ಕೊನೆಯಲ್ಲಿರುವ ದೀರ್ಘಕ್ಕೆ ಛಕಾರ ಪರವಾದಾಗ ತುಗಾಗಮ ವಿಕಲ್ಪವಾಗಿ ಬರುತ್ತದೆ. ದೀರ್ಘಾತ್ ಪಂಚಮಿಯಾದುದರಿಂದ ಅದರ ಪರವಾದ ಛಕಾರಕ್ಕೆ ತುಗಾಗನುವೆಂದರ್ಥವಾಗಬೇಕಿತ್ತು. ಆದರೆ ಜ್ಞಾಪಕದಿಂದ ದೀರ್ಘಕ್ಕೆ ತುಗೆಂದು ನಿರ್ಣೀತವಾಗಿದೆ. ಲಕ್ಷ್ಮ್ಯಾಃ ಛಾಯಾ, ಲಕ್ಷ್ಮೀಛಾಯಾ. ಇಲ್ಲಿ ಪದಾಂತವಾದ ದೀರ್ಘ ಈಕಾರ, ಅದಕ್ಕೆ ಛಕಾರ ಪರವಾದುದರಿಂದ ತುಗಾಗಮ ಬಂದರೆ (ಹಿಂದಿನಂತೆ ಅಂತಾವಯವ) ಲಕ್ಷ್ಮೀತ್‌ಛಾಯಾ. ಆಗ ಶ್ಚುತ್ವದಿಂದ ತಕಾರಕ್ಕೆ ಚಕಾರಾದೇಶ. ಲಕ್ಷ್ಮೀಚ್ಛಾಯಾ. ತುಗಾಗಮ ಬಾರದಿದ್ದರೆ ಲಕ್ಷ್ಮೀಛಾಯಾ ಎಂದೇ ಇರುತ್ತದೆ.

ಇತಿ ಹಲ್‌ಸಂಧಿಃ ॥

ಈ ರೀತಿಯಾಗಿ ಹಲ್ (ವ್ಯಂಜನ) ಗಳಿಗೆ ಬರುವ ಸಂಧಿಯು ಸಂಕ್ಷೇಪವಾಗಿ ವಿವೃತವಾಗಿದೆ.

ಇನ್ನುಮುಂದೆ ವಿಸರ್ಗಕ್ಕೆ ಬರುವ ಸಂಧಿಗಳನ್ನು ವಿವರಿಸುತ್ತಾನೆ

॥ अथ विसर्गसंधिः ॥

(विसर्गक्कै सकारहेळुव सूत्र)

೧೦೩. विसर्जनीयस्य सः ॥ ल-೩-೩೪ ॥

खरि ॥ विष्णुस्त्राता ॥

ಇದು ಹಿಂದೆ ವಿವೃತವಾಗಿದೆ. (96 ಸೂ.) ವಿಸರ್ಗಕ್ಕೆ ಬರುವ ಆದೇಶಗಳನ್ನು ಹೇಳುವ ಪ್ರಕರಣವಾದುದರಿಂದ ತಿರುಗಿ ಹೇಳಿದೆ. "ವಿಸರ್ಜನೀಯಸ್ಯ (ವಿಸರ್ಗಕ್ಕೆ) ಎಂಬ ಪದಕ್ಕೆ ಮುಂದೆ ಅನುವೃತ್ತಿ ಎಂದು ತಿಳಿಸಲೂ ಹೇಳಿದೆ. ವಿಷ್ಣು ಶಬ್ದಕ್ಕೆ ಪ್ರಥಮಾವಿಭಕ್ತಿ ಏಕವಚನದಲ್ಲಿ ಸುಪ್ರತ್ಯಯ. ಉಕಾರಉಚ್ಚಾರ್ಣಾರ್ಥವಾದುದರಿಂದ ಸ್ ಉಳಿಯುತ್ತದೆ. ವಿಷ್ಣುಸ್+ತ್ರಾತಾ "ಸಸಜುಷೋರುಃ" ಸೂತ್ರದಿಂದ ಪದಾಂತವಾದ ಸಕಾರಕ್ಕೆ ರುತ್ವ. ಅದಕ್ಕೆ "ಖರವಸಾನಯೋಃ ವಿಸರ್ಜನೀಯಃ" ಸೂತ್ರದಿಂದ ವಿಸರ್ಗ. ವಿಷ್ಣುಃ ತ್ರಾತಾ. ಇಲ್ಲಿ ತಕಾರರೂಪ ಖರ್ ಪರವಾದುದರಿಂದ ವಿಸರ್ಗಕ್ಕೆ ಸಕಾರಾದೇಶ. ವಿಷ್ಣುಸ್ತ್ರಾತಾ. ವಿಷ್ಣುವು ರಕ್ಷಕನು.

(ವಿಸರ್ಗಕ್ಕೆ ವಿಸರ್ಗವಿಧಾಯಕಸೂತ್ರ)

೧೦೪. वा शरि ॥ ಲ-೩-೩೬ ॥

शरि विसर्गस्य विसर्गो वा ॥ हरिः शेतेः, हरिश्शेतेः ॥

ದ್ವಿಪದಸೂತ್ರ. "ಶರ್ಪರೇ ವಿಸರ್ಜನೀಯಃ" ಹಿಂದಿನಸೂತ್ರ. ಇದರಿಂದ "ವಿಸರ್ಜನೀಯಃ" ಎಂಬುದಕ್ಕೆ ಅನುವೃತ್ತಿ. "ವಿಸರ್ಜನೀಯಸ್ಯ" ಎಂದು ಪ್ರಕರಣದಿಂದ ಲಬ್ಧವಾಗುತ್ತದೆ. ಶರಿ ಸಪ್ತಮೀ. **ಸೂತ್ರಾರ್ಥ**— ವಿಸರ್ಗಕ್ಕೆ ವಿಸರ್ಗವಿಧಾನಮಾಡಿದುದರಿಂದ ಸಕಾರಾದಿಗಳು ಬರುವುದಿಲ್ಲವೆಂದು ತಿಳಿಯುತ್ತದೆ. ಹರಿಸ್+ಶೇತೇ. ಇಲ್ಲಿ ಹಿಂದಿನಂತೆ ಪದಾಂತಸಕಾರಕ್ಕೆ ರುತ್ವ. ಖರ್ ಪರವಾದುದರಿಂದ ಅದಕ್ಕೆ ವಿಸರ್ಗ. ಹರಿಃ+ಶೇತೇ. ಇಲ್ಲಿ ವಿಸರ್ಗಕ್ಕೆ ಶರಿನ ಶಕಾರಪರವಾದುದರಿಂದ ವಿಕಲ್ಪವಾಗಿ ವಿಸರ್ಗವೇ ಉಳಿಯುತ್ತದೆ. ಬಾರದಿದ್ದರೆ "ವಿಸರ್ಜನೀಯಸ್ಯ ಸಃ" ಎಂಬುದರಿಂದ ಸಕಾರಾದೇಶ. ಹರಿಸ್+ಶೇತೇ. ಸಕಾರಕ್ಕೆ ಶಕಾರದ ಯೋಗವಿದುವುದರಿಂದ "ಸ್ತೋಃಶ್ಚುನಾ ಶ್ಚುಃ" ಸೂತ್ರದಿಂದ ಶಕಾರಾದೇಶ. ಹರಿಶ್+ಶೇತೇ=ಹರಿಶ್ಶೇತೇ. ಎರಡುರೂಪಗಳಾಗುತ್ತವೆ.

(ಸಕಾರಕ್ಕೆ ರುತ್ವವಿಧಾಯಕಸೂತ್ರ)

೧೦೫. ॥ ससजुषोरुः ॥ ಲ-೩-೩೬ ॥

पदान्तस्य सस्य सजुषश्च रुः स्यात् ॥

ससजुषोः रुः ॥ ದ್ವಿಪದಸೂತ್ರ. ಸಶ್ಚ ಸಜುಶ್ಚ ಸಸಜುಷೌ ತಯೋಃ ಸಸಜುಷೋಃ. ಸಕಾರಕ್ಕೂ ಸಜುಷ್ ಶಬ್ದಕ್ಕೂ ಎಂದರ್ಥ. "ಪದಸ್ಯ" ಅಧಿಕಾರ. ಅದಕ್ಕೆ "ಸಸಜುಷೋಃ" ವಿಶೇಷಣ. "ಯೇನವಿಧಿಸ್ತದಂತಸ್ಯ" ಪರಿಭಾಷೆಯಿಂದ ಸಕಾರಾಂತವಾದ ಪದಕ್ಕೂ ಸಜುಷ್ ಅಂತವಾದ ಪದಕ್ಕೂ ಎಂದರ್ಥ. "ಅಲೋಂತ್ಯಸ್ಯ" ಸೂತ್ರದಿಂದ ಪದದ ಅಂತ್ಯ ಸಕಾರಕ್ಕೂ ಸಜುಷಿನ ಅಂತ್ಯಷಕಾರಕ್ಕೂ ಎಂದು ಫಲಿತವಾಗುತ್ತದೆ. ರುವಿನಲ್ಲಿ ಉಕಾರ "ಉಪದೇಶೇಜನುನಾಸಿಕ ಇತ್" ಎಂಬುದರಿಂದ ಇತ್‌ಸಂಜ್ಞೆಯನ್ನು ಹೊಂದಿ "ತಸ್ಯ ಲೋಪಃ" ಸೂತ್ರದಿಂದ ಲೋಪವಾಗುತ್ತದೆ. **ಸೂತ್ರಾರ್ಥ**—ಪದಾಂತವಾದ ಸಕಾರಕ್ಕೂ ಸಜುಷ್ ಶಬ್ದಕ್ಕೂ (ಷಕಾರಕ್ಕೆ) ರುತ್ವ ಬರುತ್ತದೆ. ಶಿವಶಬ್ದದ ಮೇಲೆ ಪ್ರಥಮಾವಿಭಕ್ತಿಏಕವಚನ ಸುಪ್ರತ್ಯಯ. ಶಿವಸ್ ಇಲ್ಲಿ ಪದದ ಕೊನೆಯಲ್ಲಿ ಸಕಾರಬಂದುದರಿಂದ ಇದಕ್ಕೆ ರುತ್ವ. ಶಿವರ್. ಇದಕ್ಕೆ ಅರ್ಚ್ಯಃ ಎಂಬ ಪದ ಮುಂದೆ ಇರುವಾಗ (ಶಿವರ್+ಅರ್ಚ್ಯಃ) ಕಾರ್ಯಾಂತರವನ್ನು ಹೇಳುತ್ತಾನೆ.

(ರುವಿಗೆ ಉಕಾರವಿಧಾಯಕಸೂತ್ರ)

೧೦೬. अतो रोरप्लुतादप्लुते ॥ ೬-೧-೧೧೩ ॥

अप्लुतादतः परस्य रोरुः स्यादप्लुते ति ॥ शिवोऽर्च्यः ॥

ಅತಃ, ರೋಃ, ಅಪ್ಲುತಾತ್, ಅಪ್ಲುತೇ-॥ ನಾಲ್ಕುಪದಗಳುಳ್ಳ ಸೂತ್ರ. ಅತಃ ಪಂಚಮೀ. ತಪರಮಾಡಿದುದರಿಂದ ಹ್ರಸ್ವಾಕಾರ ಮಾತ್ರ ತೆಗೆದುಕೊಳ್ಳಬೇಕು. ಅಪ್ಲುತಾತ್ ಅದಕ್ಕೆ ವಿಶೇಷಣ. ಪ್ಲುತವಲ್ಲದ ಹ್ರಸ್ವಾಕಾರ. ಹ್ರಸ್ವಾಕಾರವೆಂದುದರಿಂದಲೇ ದೀರ್ಘಪ್ಲುತವ್ಯಾವೃತ್ತಿಯಾದರೂ ಲಕ್ಷ್ಯವಿಶೇಷದಲ್ಲಿ ಈ ಕಾರ್ಯತಪ್ಪಿಸಲು ಹೇಳಿರುತ್ತಾನೆ. ರೋಃ ಷಷ್ಠೀ. "ಋತಉತ್" ಸೂತ್ರದಿಂದ "ಉತ್" ಅನುವೃತ್ತವಾಗುತ್ತದೆ. ತಪರಮಾಡಿರುವುದರಿಂದ ಹ್ರಸ್ವಉಕಾರವೆಂದರ್ಥ. "ಏಜಃ ಪದಾಂತಾದತಿ" ಸೂತ್ರದಿಂದ "ಅತಿ" ಎಂಬ ಸಪ್ತಮ್ಯಂತಕ್ಕೆ ಅನುವೃತ್ತಿ. ಅಪ್ಲುತೇ ಎಂಬುದು ಅದಕ್ಕೆ ವಿಶೇಷಣ. **ಸೂತ್ರಾರ್ಥ**—ಅಪ್ಲುತವಾದ ಹ್ರಸ್ವಅಕಾರದ ಪರದಲ್ಲಿರುವ ರುವಿಗೆ ಅಪ್ಲುತವಾದ ಹ್ರಸ್ವ ಅಕಾರವು ಪರವಾದಾಗ ಉಕಾರಾದೇಶ

ಬರುತ್ತದೆ. ಶಿವರ್ + ಅರ್ಚ್ಯಃ. ಇಲ್ಲಿ ವಕಾರದಮೇಲೆ ಹ್ರಸ್ವ ಅಕಾರವಿದೆ, ಅದರ ಪರದಲ್ಲಿ ರು ಬಂದಿದೆ. ಅದಕ್ಕೆ ಹ್ರಸ್ವ ಅಕಾರ (ಅರ್ಚ್ಯಃ) ಪರದಲ್ಲಿದೆ. ಆದುದರಿಂದ ಉತ್ವ ಬಂದರೆ ಶಿವಉ + ಅರ್ಚ್ಯಃ. ಇಲ್ಲಿ ಅಕಾರಕ್ಕೆ ಉಕಾರಪರವಾದುದರಿಂದ " ಆದ್ಗುಣಃ " ಸೂತ್ರದಿಂದ ಅಕಾರೋಕಾರಗಳಿಗೆ ಓಕಾರರೂಪ ಗುಣವು ಏಕಾದೇಶವಾಗಿ ಬರುತ್ತದೆ. ಶಿವೋ + ಅರ್ಚ್ಯಃ. ಇಲ್ಲಿ ಪದದ ಅಂತ್ಯದಲ್ಲಿರುವ ಏಜಂಗೆ (ಓ) ಹ್ರಸ್ವಾಕಾರಪರವಾದುದರಿಂದ " ಏಜಃ ಪದಾಂತಾದತಿ " ಸೂತ್ರದಿಂದ ಪೂರ್ವರೂಪವು ಓಕಾರಅಕಾರಗಳಿಗೆ ಏಕಾದೇಶವಾಗಿ ಬಂದು " ಶಿವೋಽರ್ಚ್ಯಃ " ಎಂದಾಗುತ್ತದೆ. ಶಿವನು ಪೂಜ್ಯನು.

(ಉತ್ವವಿಧಾಯಕಸೂತ್ರ)

೧೦೭. ಹಶಿ ಚ ॥ ೬-೧-೧೧೪ ॥

ತಥಾ ॥ ಶಿವೋ ವಂದ್ಯಃ ॥

ದ್ವಿಪದ ಸೂತ್ರ. ಹಿಂದಿನ ಸೂತ್ರದಿಂದ " ಅತಃ, ರೋಃ ಅಪ್ಲುತಾತ್ " ಈ ಮೂರುಪದಗಳು ಅನುವೃತ್ತವಾಗುತ್ತವೆ. " ಋತಉತ್ " ಸೂತ್ರದಿಂದ "ಉತ್" ಎಂಬುದಕ್ಕೆ ಅನುವೃತ್ತಿ. ಇಲ್ಲಿ ನಿಮಿತ್ತಮಾತ್ರ ಬೇರೆ ಹೇಳಿದೆ. **ಸೂತ್ರಾರ್ಥ.**— ಪ್ಲುತವಲ್ಲದ ಹ್ರಸ್ವಾಕಾರದ ಪರದಲ್ಲಿರುವ ರುವಿಗೆ ಹಶ್ (ಪ್ರತ್ಯಾಹಾರ) ಪರದಲ್ಲಿದ್ದಾಗ ಉಕಾರಾದೇಶ ಬರುತ್ತದೆ. ಶಿವಸ್ + ವಂದ್ಯಃ ಎಂದಿರುವಾಗ ಹಿಂದಿನಂತೆ ಸಕಾರಕ್ಕೆ ಪದಾಂತದಲ್ಲಿರುವುದರಿಂದ " ಸಸಜುಷೋರುಃ " ಸೂತ್ರದಿಂದ ರುತ್ವ. ಶಿವರ್ + ವಂದ್ಯಃ ಎಂದಿರುವಾಗ ಅಪ್ಲುತವಾದ ಅಕಾರದಪರದಲ್ಲಿರುವ ರುವಿನ ವಕಾರರೂಪ ಹಶ್ ಪರವಾದುದರಿಂದ ಉಕಾರಾದೇಶ ಬಂದರೆ ಶಿವಉ + ವಂದ್ಯಃ ಎಂದಾಗುತ್ತದೆ. ಆಗ ಹಿಂದಿನಂತೆ " ಆದ್ಗುಣಃ " ಸೂತ್ರದಿಂದ ಗುಣ ಬಂದರೆ ಶಿವೋ ವಂದ್ಯಃ ಎಂದು ರೂಪವಾಗುತ್ತದೆ. ಇಲ್ಲಿ ರುವಿಗೆ ಉತ್ವವೆಂದುದರಿಂದ " ಸಸಜುಷೋರುಃ " ಸೂತ್ರದಿಂದ ಬಂದ ರುವಿಗೆ ಮಾತ್ರ ಉತ್ವವೆಂದು ತಿಳಿಯಬೇಕು. ಸ್ವಾಭಾವಿಕವಾಗಿರುವ ರೇಫಕ್ಕೆ ಪ್ರಾತರ್ + ಗಚ್ಛ ಎಂಬಿವೇ ಮುಂತಾದ ಸ್ಥಳಗಳಲ್ಲಿ ಉತ್ವ ಬರುವುದಿಲ್ಲ. ಇದು ಮುಂದೆ ಸ್ಪಷ್ಟವಾಗುತ್ತದೆ.

(ರುವಿಗೆ ಯಕಾರಹೇಳುವಸೂತ್ರ)

೧೦೮. ಭೋ ಭಗೋ ಅಘೋ ಅಪೂರ್ವಸ್ಯ ಯೋಽಶಿ ॥ ೮-೩-೧೭ ॥

ಏತತ್ಪೂರ್ವಸ್ಯ ರೋರ್ಯಾದೇಶೋಽಶಿ । ದೇವಾ ಇಹ, ದೇವಾ-ಯಿಹ । ಭೋಸ್, ಭಗೋಸ್ ಅಘೋಸ್ ಇತಿ ಸಾಂತಾ ನಿಪಾತಾಃ । ತೇಷಾಂ ರೋರ್ಯತ್ವೇ ಕೃತೇ ॥

ಭೋ ಭಗೋ ಅಘೋ ಅಪೂರ್ವಸ್ಯ, ಯಃ, ಅಶಿ ॥ ತ್ರಿಪದಸೂತ್ರ. ಭೋಸ್ ಚ ಭಗೋಸ್ಚ ಅಘೋಸ್ಚ ತಸ್ಯ ಭೋ ಭಗೋ ಆಃ, ಏತೇ ಪೂರ್ವೇ ಯಸ್ಮಾತ್ ಸಃ ಭೋ ಭಗೋ ಅಪೂರ್ವಃ, ತಸ್ಯ, ಭೋ....ಪೂರ್ವಸ್ಯ. ದ್ವಂದ್ವದ ಮೇಲೆ ಪೂರ್ವ ಶಬ್ದ ಹೇಳಿರುವುದರಿಂದ ಪ್ರತ್ಯೇಕಾನ್ವಯ ಮಾಡಿದರೆ ಭೋ ಪೂರ್ವವಾದ ಭಗೋ ಪೂರ್ವವಾದ, ಅಘೋ ಪೂರ್ವವಾದ ಅವರ್ಣ ಪೂರ್ವವಾದ ಎಂದರ್ಥವಾಗುತ್ತದೆ. ಇವುಗಳಿಗೆ ರುವಿನಲ್ಲಿ ಅನ್ವಯ. ಅವರ್ಣವೆಂದುದರಿಂದ " ಅಣುದಿತ್ಸವರ್ಣಸ್ಯ ಚಾಪ್ರತ್ಯಯಃ" ಸೂತ್ರದಿಂದ ಅಕಾರದ ಹದಿನೆಂಟು ಭೇದಕ್ಕೂ ಗ್ರಹಣವಿದೆ. **ಸೂತ್ರಾರ್ಥ**— ಭೋ ಪೂರ್ವವಾದ ಭಗೋ ಪೂರ್ವವಾದ, ಅಘೋ ಪೂರ್ವವಾದ ಅವರ್ಣ ಪೂರ್ವವಾದ ರುವಿಗೆ ಅಶ್ ಪರವಾದಾಗ ಯಕಾರಾದೇಶ ಬರುತ್ತದೆ. ಅಪೂರ್ವಕ್ಕೆ ಮೊದಲು ಉದಾಹರಣೆ ಹೇಳುತ್ತಾನೆ. ದೇವ ಶಬ್ದಕ್ಕೆ ಪ್ರಥಮಾ ಬಹುವಚನದಲ್ಲಿ ಜಸ್ ಪ್ರತ್ಯಯ ದೇವಾಸ್ ಎಂದಿರುವಾಗ " ಸಸಜುಷೋರುಃ " ಸೂತ್ರದಿಂದ ರುತ್ವ. ದೇವಾರ್ + ಇಹ ಎಂದಿರುವಾಗ ರುವಿಗೆ ಅಶಿನಲ್ಲಿ ಸೇರಿದ ಇಕಾರ ಪರವಾಗಿದೆ. ರುವಿನ ಪೂರ್ವದಲ್ಲಿ ಆಕಾರವಿದೆ. ಆದುದರಿಂದ ಅದಕ್ಕೆ ಯತ್ವ ಬಂದರೆ ದೇವಾಯ್ + ಇಹ ಎಂದಾಗುತ್ತದೆ. ಅಕಾರ ಪೂರ್ವವಾದ ಯಕಾರಕ್ಕೆ ಇಕಾರರೂಪ ಅಶ್ ಪರವಾದುದರಿಂದ " ಲೋಪಃ ಶಾಕಲ್ಯಸ್ಯ " ಸೂತ್ರದಿಂದ ವಿಕಲ್ಪವಾಗಿ ಯಕಾರಕ್ಕೆ ಲೋಪ. ದೇವಾ ಇಹ. ಲೋಪ ಬಾರದಿದ್ದರೆ ದೇವಾಯಿಹ ಎಂದಾಗುತ್ತದೆ. ಭೋಸ್, ಭಗೋಸ್. ಅಘೋಸ್, ಈ ಮೂರೂ ಸಕಾರಾಂತವಾದ ನಿಪಾತಗಳು. ಇವುಗಳಿಗೆ ಪದಾಂತದಲ್ಲಿ "ಸಸಜುಷೋರುಃ" ಸೂತ್ರದಿಂದ ರುತ್ವ ಮಾಡಿದರೆ ಭೋರ್, ಭಗೋರ್, ಅಘೋರ್, ಎಂದಾಗುತ್ತದೆ. ಇವುಗಳಿಗೆ ದೇವಾಃ ಎಂಬ ಪದವು ಪರವಾದಾಗ ಪ್ರಕೃತ ಸೂತ್ರದಿಂದ ಯತ್ವಮಾಡಿದರೆ ಭೋಯ್ ದೇವಾಃ, ಭಗೋಯ್ + ದೇವಾಃ, ಅಘೋಯ್ + ದೇವಾಃ ಎಂದು ರೂಪವಾದಾಗ ಆ ಯಕಾರಕ್ಕೆ ಮುಂದಿನ ಸೂತ್ರದಿಂದ ಲೋಪ ಹೇಳುತ್ತಾನೆ.

(ಯಕಾರಕ್ಕೆ ಲೋಪ ಹೇಳುವ ಸೂತ್ರ)

೧೦೯. ಹಲಿ ಸರ್ವೇಷಾಮ್ ॥ ೮-೩-೨೨ ॥

ಭೋ ಭಗೋ ಅಘೋ ಅಪೂರ್ವಸ್ಯ ಯಸ್ಯ ಲೋಪಃ ಸ್ಯಾದ್ಹಲಿ ॥
ಭೋ ದೇವಾಃ । ಭಗೋ ನಮಸ್ತೇ । ಅಘೋ ಯಾಹಿ ॥

ಹಲಿ, ಸರ್ವೇಷಾಮ್ ॥ ದ್ವಿಪದ ಸೂತ್ರ. ಹಿಂದಿನ ಸೂತ್ರದಿಂದ ಭೋ ಭಗೋ ಅಘೋ ಅಪೂರ್ವಸ್ಯ ಎಂಬುಮ ಅನುವೃತ್ತವಾಗುತ್ತದೆ. " ವ್ಯೋರ್ಲಘು ಪ್ರಯತ್ನತರಃ ಶಾಕಟಾಯನಸ್ಯ " ಸೂತ್ರದಿಂದ " ಯಸ್ಯ " ಎಂಬುದಕ್ಕೆ ಮಾತ್ರ ಅನುವೃತ್ತಿ. ವಕಾರಕ್ಕೆ ಸಂಬಂಧವಿಲ್ಲವಾದುದರಿಂದ ಅನುವೃತ್ತಿ ಇಲ್ಲ. " ಲೋಪಃ ಶಾಕಲ್ಯಸ್ಯ " ಸೂತ್ರದಿಂದ " ಲೋಪಃ " ಎಂಬುದಕ್ಕೆ ಅನುವೃತ್ತಿ. ಹಿಂದಿನ ಆಯಾಯ ಋಷಿಗಳ ಮತದಲ್ಲಿ ಕೆಲವು ಕಾರ್ಯಗಳನ್ನು ಹೇಳಿರುವುದರಿಂದ ಇಲ್ಲಿ ಎಲ್ಲರಮತದಿಂದಲೂ ಲೋಪನೆಂದು ತಿಳಿಸಲು " ಸರ್ವೇಷಾಂ " ಎಂದಿರುತ್ತಾನೆ.

ಸೂತ್ರಾರ್ಥ.—ಭೋ, ಭಗೋ, ಅಘೋ, ಅಪೂರ್ವವಾದ ಯಕಾರಕ್ಕೆ ಹಲ್ (ವ್ಯಂಜನ) ಪರವಾದಾಗ ಎಲ್ಲರ ಮತದಲ್ಲಿಯೂ ಲೋಪಬರುತ್ತದೆ. ಭೋಯ್+ದೇವಾಃ ಎಂದಿರುವಾಗ ಭೋಪೂರ್ವವಾಗಿರುವ ಯಕಾರಕ್ಕೆ ಪ್ರಕೃತ ಪ್ರತ್ಯಕಾರ ರೂಪಹಲ್‌ಪರವಾದುದರಿಂದ ಲೋಪ ಬಂದರೆ ಭೋ ದೇವಾಃ ಎಂದಾಗುತ್ತದೆ. ಹೀಗೆಯೇ ಭಗೋಃ ನಮಸ್ತೇ, ಅಘೋ ಯಾಹಿ ಎಂಬಲ್ಲೆಯೂ ಯಕಾರಲೋಪ ಬಂದಿದೆ.

(ರೇಫಾದೇಶವಿಧಾಯಕಸೂತ್ರ)

೧೧೦. ರೋಽಸುಪಿ ॥ ಲ-ತಿ-೬೯ ॥

ಅಹ್ನೋ ರೇಫಾದೇಶೋ ನ ತು ಸುಪಿ । ಅಹರಹಃ । ಅಹರ್ಗಣಃ ।।

ರಃ, ಅಸುಪಿ ।। ದ್ವಿಪದಸೂತ್ರ. " ಅಹನ್ " ಎಂಬ ಸೂತ್ರವು ಅನುವೃತ್ತವಾಗುತ್ತದೆ. ಅದು ಷಷ್ಠ್ಯಂತಪದ. ಸೂತ್ರದಲ್ಲಿ ಷಷ್ಠಿಲುಪ್ತವಾಗಿದೆ. ನ ಸುಪ್, ಅಸುಪ್, ತಸ್ಮಿನ್. ಅಸುಪಿ. ಸುಪ್ ನಾಮವಿಭಕ್ತಿ. ಇದುಪರದಲ್ಲಿರಬಾರದು ಎಂದರ್ಥ.

ಸೂತ್ರಾರ್ಥ—ಅಹನ್ ಶಬ್ದಕ್ಕೆ ಸುಪ್ ಪರದಲ್ಲಿ ಇಲ್ಲದಿರುವಾಗ ರೇಫಾದೇಶ ಬರುತ್ತದೆ. ಷಷ್ಠ್ಯಂತಕ್ಕೆ ಆದೇಶವಿಧಾನ ಮಾಡಿದುದರಿಂದ " ಅಲೋಂತ್ಯಸ್ಯ " ಪರಿಭಾಷೆಯಿಂದ ಅಂತ್ಯವಾದ ನಕಾರಕ್ಕೆ ರೇಫಾದೇಶ. ಅಹನ್+ಅಹನ್ ಎಂದಿರುವಾಗ ಅಹನ್ ಶಬ್ದ ಸುಪ್ ಪರದಲ್ಲಿರುವುದರಿಂದ ಈ ಸೂತ್ರದಿಂದ ರೇಫಾದೇಶ. ಅಹರ್+ಅಹನ್ ಎಂದಾಗುತ್ತದೆ. ಕೊನೆಯ ನಕಾರಕ್ಕೆ " ಆಹನ್ " ಸೂತ್ರದಿಂದ ರುತ್ವ. ಅದಕ್ಕೆ ಅವಸಾನದಲ್ಲಿ ವಿಸರ್ಗ. ಅಹರಹಃ ಎಂದಾಗುತ್ತದೆ. ಈ ಸೂತ್ರದಿಂದ ರೇಫ ಹೇಳದಿದ್ದಲ್ಲಿ ಪೂರ್ವದ ನಕಾರಕ್ಕೂ "ಅಹನ್ " ಸೂತ್ರದಿಂದ ರುತ್ವ ಬರಬೇಕಾಗುತ್ತದೆ. ರುತ್ವಕ್ಕೂ ರೇಫಾದೇಶಕ್ಕೂ ಕಾರ್ಯದಲ್ಲಿ ಭೇದವಿದೆ. ರುವಿನಲ್ಲಿ ಉಕಾರ ಇತ್ ಆಗಿದೆ. ರುತ್ವ ಬಂದಿದ್ದರೆ ಅಪೂರ್ವವಾದುದರಿಂದ " ಭೋಗ ಭಗೋ....ಶಿ " ಸೂತ್ರದಿಂದ ಉತ್ವ ಬರುತ್ತದೆ. ಕೇವಲ ರೇಫ ಹೇಳಿದರೆ ಈ ಉತ್ವ ಬರುವುದಿಲ್ಲ. ಅಲ್ಲಿ ಉಕಾರಾನು ಬಂಧ

ವಿಲ್ಲ. ಅಹ್ನಾಂ ಗಣಃ ಅಹರ್ಗಣಃ. ಇಲ್ಲಿಯೂ ಅಹನ್+ಗಣಃ ಎಂದಿರುವಾಗ ಸುಪ್‌ಪರದಲ್ಲಿಲ್ಲದಿದ್ದುದರಿಂದ ನಕಾರಕ್ಕೆ ರೇಫಾದೇಶ. ರು ಇಲ್ಲದಿರುವುದರಿಂದ " ಹಶಿ ಚ " ಸೂತ್ರದಿಂದ ಉತ್ವ ಬರುವುದಿಲ್ಲ.

(ರೇಫಲೋಪವಿಧಾಯಕಸೂತ್ರ)

೧೧೧. ರೋ ರಿ ॥ ಲ-ತಿ-೧೪ ॥

।। ರೇಫಸ್ಯ ರೇಫೇ ಪರೇ ಲೋಪಃ । ।।

ರಃ, ರಿ, ॥ ದ್ವಿಪದಸೂತ್ರ. " ಹ್ರೋ ಢೇ ಲೋಪಃ " ಸೂತ್ರದಿಂದ " ಲೋಪಃ " ಪದಕ್ಕೆ ಅನುವೃತ್ತಿ. ರಃ ಷಷ್ಠ್ಯೇ. ರಿ ಸಪ್ತಮೀ. **ಸೂತ್ರಾರ್ಥ.**—ರೇಫಕ್ಕೆ ರೇಫ ಪರವಾದರೆ ಲೋಪ ಬರುತ್ತದೆ. ಪುನರ್+ರಮತೇ ಎಂದಿರುವಾಗ ರೇಫಕ್ಕೆ ರೇಫ ಪರವಾದುದರಿಂದ ಲೋಪ. ಪುನ ರಮತೇ. ಇಲ್ಲಿ ಲೋಪವಾದಾಗ ಪೂರ್ವಕ್ಕೆ ದೀರ್ಘವನ್ನು ಮುಂದಿನ ಸೂತ್ರದಿಂದ ಹೇಳುತ್ತಾನೆ.

೧೧೨. ಢ್ರಲೋಪೇ ಪೂರ್ವಸ್ಯ ದೀರ್ಘೋಽಣಃ
॥ ೬-ತಿ-೧೧೧ ॥

ಢರೇಫಯೋರ್ಲೋಪನಿಮಿತ್ತಯೋಃ ಪೂರ್ವಸ್ಯಾಣೋ ದೀರ್ಘಃ । ಪುನಾ ರಮತೇ । ಹರೀ ರಮ್ಯೌ । ಶಂಭೂ ರಾಜತೇ । ಅಣಃ ಕಿಮ್ ? ತೃಢಃ, ವೃಢಃ । ಮನಸ್‌ರಥ ಇತ್ಯತ್ರ ರುತ್ವೇ ಕೃತೇ ಹಶಿಚೀತ್ಯುತ್ವೇ ರೋರೀತಿ ಲೋಪೇ ಚ ಪ್ರಾಪ್ತೇ ।।

ಢ್ರಲೋಪೇ, ಪೂರ್ವಸ್ಯ, ದೀರ್ಘಃ, ಅಣಃ, ॥ ನಾಲ್ಕು ಪದಗಳುಳ್ಳ ಸೂತ್ರ. ಢ್‌ಚ ರೇಫಶ್ಚ ಢ್ರೌ, ತೌ ಲೋಪಯತೀತಿ ಢ್ರಲೋಪಃ । ಢಕಾರವನ್ನೂ ರೇಫವನ್ನೂ ಲೋಪಮಾಡುವುದು ಯಾವುದೋ ಅದು ಢ್ರಲೋಪವೆನಿಸುತ್ತದೆ. ಢಲೋಪ, ರೇಫ ಲೋಪನಿಮಿತ್ತವೆಂದು ಫಲಿತವಾಗುತ್ತದೆ. " ಹ್ರೊ ಢೇ ಲೋಪಃ " ಎಂಬಲ್ಲಿ ಢಕಾರಕ್ಕೆ ಢಕಾರಪರವಾದಾಗ ಲೋಪಹೇಳುತ್ತಾನೆ. ಆಗ ಢಲೋಪನಿಮಿತ್ತ ಢಕಾರವೇ, ಹಾಗೇ ರೇಫ ಲೋಪನಿಮಿತ್ತ ರೇಫವೇ ಆಗುತ್ತದೆ. **ಸೂತ್ರಾರ್ಥ.**—ಢಮತ್ತು ರೇಫಗಳ ಲೋಪಕ್ಕೆ ನಿಮಿತ್ತವಾದದ್ದು (ಢಕಾರ, ರೇಫ) ಪರದಲ್ಲಿರುವಾಗ ಪೂರ್ವದಲ್ಲಿರುವ ಅಣಿಗೆ ದೀರ್ಘ ಬರುತ್ತದೆ. ಪ್ರಕೃತ ಪುನ+ರಮತೇ ಎಂಬಲ್ಲಿ ರೇಫವನ್ನು ಲೋಪ ಮಾಡಿದ ರೇಫವು ಪರದಲ್ಲಿರುವುದರಿಂದ ಪೂರ್ವದ ಅಣ್ ಎಂದರೆ ನಕಾರೋತ್ತರಾಕಾರ, ಅದಕ್ಕೆ ದೀರ್ಘ ಬಂದರೆ ಪುನಾರಮತೇ ಎಂದಾಗುತ್ತದೆ. ಅಣಿನಲ್ಲಿ ಅ ಇ ಉ

ಸೇರುವುದರಿಂದ ಇಕಾರಕ್ಕೆ ಉದಾಹರಣೆ ಹೇಳುತ್ತಾನೆ. ಹರೀ ರಮ್ಯಃ. ಹರಿಸ್+ರಮ್ಯಃ ಎಂದಿರುವಾಗ "ಸಸಜುಷೋರುಃ" ಸೂತ್ರದಿಂದ ರುತ್ವ. ಹರಿರ್+ರಮ್ಯಃ ಇಲ್ಲಿ ರೇಫಕ್ಕೆ ರೇಫ ಪರವಾದುದುಂದ "ರೋರಿ" ಸೂತ್ರದಿಂದ ಪೂರ್ವದ ರೇಫಕ್ಕೆ ಲೋಪ. ರೇಫಲೋಪಮಾಡಿದ ರೇಫವು ಪರವಾದುದರಿಂದ ಪ್ರಕೃತಸೂತ್ರದಿಂದ ಅಣ್ ಆದ ಇಕಾರಕ್ಕೆ ದೀರ್ಘ. ಹರೀ ರಮ್ಯಃ ಎಂದಾಗುತ್ತದೆ. ಉಕ್ಕಾರಕ್ಕೆ ಉದಾಹರಣೆ. ಶಂಭುಸ್+ರಾಜತೇ ಎಂದಿರುವಾಗ ಸಕಾರಕ್ಕೆ ರುತ್ವ. ಅದಕ್ಕೆ ಲೋಪ. ಪ್ರಕೃತಸೂತ್ರದಿಂದ ಅಣ್ ಆದ ಉಕಾರಕ್ಕೆ ದೀರ್ಘ. ಶಂಭೂ ರಾಜತೇ. ಅಣಃ ಕಿಮ್? ಸೂತ್ರದಲ್ಲಿ ಷಲೋಪ ರೇಫ ಲೋಪಮಾಡಿರುವ ವರ್ಣಪರವಾದಾಗ ಪೂರ್ವಕ್ಕೆ ದೀರ್ಘವೆಂದರೆ ದೋಷವೇನು. ಪೂರ್ವದ ಅಣ್ ಮಾತ್ರಕ್ಕೆ ದೀರ್ಘವೆಂದುದೇಕೆ? ಅಂದಲ್ಲಿ, ವೃಷ್ಟಿಷ್ಟಃ. ಇಲ್ಲಿಯೂ ಋಕಾರಕ್ಕೆ ದೀರ್ಘಬರಬೇಕಾಗುತ್ತದೆ. ತೃಹೂ ಹಿಂಸಾಯಾಂ, ಧಾತು. ಇದಕ್ಕೆ ಕ್ತಪ್ರತ್ಯಯ ಪರವಾದಾಗ ತೃಹ್+ತ ಎಂದಿರುವಾಗ "ಹೋಢಃ" ಸೂತ್ರದಿಂದ ಹಕಾರಕ್ಕೆ ಢಕಾರಾದೇಶ. ತೃಢ್+ತ. ಝಷ್‌ವರ್ಣದ ಪರದಲ್ಲಿ ತಕಾರವಿರುವುದರಿಂದ "ಝಷಸ್ತಥೋರ್ಧ್ವೋಽಧಃ" ಸೂತ್ರದಿಂದ ತಕಾರಕ್ಕೆ ಧಕಾರಾದೇಶ. ತೃಢ್+ಧ ಎಂದಿರುವಾಗ "ಷ್ಟುನಾ ಷ್ಟುಃ" ಸೂತ್ರದಿಂದ ಧಕಾರಕ್ಕೆ ಷ್ಟುತ್ವದಿಂದ ಢಕಾರಾದೇಶ. ತೃಢ್+ಢ "ಢೋಢೇ ಲೋಪಃ" ಸೂತ್ರದಿಂದ ಪೂರ್ವದ ಢಕಾರಕ್ಕೆ ಲೋಪ. ಇಲ್ಲಿ ಢಲೋಪಮಾಡಿದ ಢಕಾರ ಪರವಾದುದರಿಂದ ಅಣಃ ಎಂದು ಹೇಳದಿದ್ದರೆ ಋಕಾರಕ್ಕೂ ದೀರ್ಘ ಬರಬೇಕಾಗುತ್ತದೆ. ಅಣ್ ಹೇಳಿದ್ದರಿಂದ ಋಕಾರ ಅಣೆನಲ್ಲಿ ಸೇರುವುದಿಲ್ಲವಾದುದರಿಂದ ದೀರ್ಘವಿಲ್ಲ. ತೃಢಃ ಎಂದೇ ಇರುತ್ತದೆ. ಹಾಗೆಯೇ ವೃಹೂ ಉದ್ಯಮನೇ ಧಾತು. ಇದಕ್ಕೆ ಕ್ತ ಪರವಾದಾಗ ಹಿಂದಿನಂತೆ ಷತ್ವ, ಧತ್ವ, ಷ್ಟುತ್ವ, ಢಲೋಪಗಳು ಬಂದರೆ ವೃಢಃ ಎಂದಾಗುತ್ತದೆ. ಅಣಿಗೆ ದೀರ್ಘವೆಂದುದರಿಂದ ಇಲ್ಲಿಯೂ ದೀರ್ಘವಿಲ್ಲ. ಮನಸ್+ರಥಃ ಎಂದಿರುವಾಗ "ಸಸಜುಷೋರುಃ" ಸೂತ್ರದಿಂದ ಸಕಾರಕ್ಕೆ ರುತ್ವ. ಮನರ್+ರಥಃ ಇಲ್ಲಿ ಅಕಾರದ ಪರದಲ್ಲಿ ರು ಇದ್ದು ಅದಕ್ಕೆ ಹಶ್ ರೂಪವಾದ ರೇಫ ಪರವಾದುದರಿಂದ "ಹಶಿ ಚ", ಸೂತ್ರದಿಂದ ರುವಿಗೆ ಉತ್ವವು ಪ್ರಾಪ್ತವಾಗುತ್ತದೆ. ಹಾಗೆಯೇ ರೇಫಕ್ಕೆ ರೇಫಪರವಾದುದರಿಂದ "ರೋರಿ" ಸೂತ್ರದಿಂದ ಪೂರ್ವದ ರೇಫಕ್ಕೆ ಲೋಪವೂ ಪ್ರಾಪ್ತವಾಗುತ್ತದೆ. ಈ ಎರಡು ಸೂತ್ರಗಳೂ ಒಂದೇ ಲಕ್ಷ್ಯದಲ್ಲಿ ಬರುತ್ತವೆ. ಎರಡೂ ಸಮಬಲವುಳ್ಳವುಗಳು. ಆವಾಗ ಯಾವ ಸೂತ್ರದಿಂದ ಇಲ್ಲಿ ಕಾರ್ಯಮಾಡಬೇಕು ಎಂದು ವಿವಾದ ಪ್ರಾಪ್ತವಾದರೆ ನಿಯಾಮಕಸೂತ್ರ ಹೇಳುತ್ತಾನೆ.

(ಎರಡು ಸೂತ್ರಗಳು ಒಂದು ಲಕ್ಷ್ಯದಲ್ಲಿ ಪ್ರಾಪ್ತವಾದಾಗ ಪರಸೂತ್ರ ನಿಯಮ ಮಾಡುವ ಸೂತ್ರ)

೧೧೩. ವಿಪ್ರತಿಷೇಧೇ ಪರಂ ಕಾರ್ಯಮ್ ॥ ೧-೪-೨ ॥

ತುಲ್ಯಬಲವಿರೋಧೇ ಪರಂ ಕಾರ್ಯಂ ಸ್ಯಾತ್। ಇತಿ ಲೋಪೇ ಪ್ರಾಪ್ತೇ ॥ ಪೂರ್ವತ್ರಾಸಿದ್ಧಮಿತಿ ರೋರೀತ್ಯಸ್ಯ ಅಸಿದ್ಧತ್ವಾದುತ್ವಮೇವ। ಮನೋರಥಃ ॥

ತ್ರಿಪದ ಸೂತ್ರ. ವಿಪ್ರತಿಷೇಧವೆಂದರೆ ಪರಸ್ಪರ ವಿರೋಧವೆಂದರ್ಥ. ವಿರೋಧವು ಸಾಮಾನ್ಯ ಸಮಾನ ಬಲವುಳ್ಳವರಿಗೇ ಇರುತ್ತದೆ. ಇಲ್ಲಿ ಸಮಾನ ಬಲವುಳ್ಳವುಗಳು ಎಂದರೆ ಎರಡು ಶಾಸ್ತ್ರಗಳೂ ಬೇರೆಬೇರೆ ಲಕ್ಷ್ಯಗಳಲ್ಲಿ ಅವಕಾಶವನ್ನು ಹೊಂದಿ ಚರಿತಾರ್ಥಗಳಾಗಿ (ಸಾಫಲ್ಯ ಹೊಂದಿ) ಒಂದು ಲಕ್ಷ್ಯದಲ್ಲಿ ಅವ ಕಾಲದಲ್ಲಿ ಪ್ರವರ್ತಿಸುತ್ತವೆ. **ಸೂತ್ರಾರ್ಥ.** ತುಲ್ಯ ಬಲವಿರುವಾಗ ಪರಸೂತ್ರದಿಂದ ಹೇಳಿದ ಕಾರ್ಯವೇ ಬರುತ್ತದೆ. ಪರಶಾಸ್ತ್ರವೇ ಪ್ರಬಲವಾಗುವುದರಿಂದ ಅದರಿಂದ ವಿಹಿತವಾದ ಕಾರ್ಯಕ್ಕೇ ಪ್ರಾಧಾನ್ಯವಿರುತ್ತದೆ. ಪ್ರಕೃತ "ರೋರಿ" ಸೂತ್ರವು ಹರೀ ರಮ್ಯ ಇತ್ಯಾದಿ ಸ್ಥಳಗಳಲ್ಲಿ ಚರಿತಾರ್ಥವಾಗಿ ಇಲ್ಲಿ ಬಂದಿದೆ. "ಹಶಿ ಚ" ಸೂತ್ರವೂ ದೇವೋ ವಂದ್ಯ ಇತ್ಯಾದಿ ಸ್ಥಳಗಳಲ್ಲಿ ಸಾಫಲ್ಯ ಹೊಂದಿ ಇಲ್ಲಿ ಬಂದಿದೆ. ಇವುಗಳಲ್ಲಿ ಪರಸೂತ್ರ "ರೋರಿ" ಆಗುತ್ತದೆ. ಅದು ಎಂಟನೇ ಅಧ್ಯಾಯದ ಸೂತ್ರ. ಆದುದರಿಂದ "ರೋರಿ" ಸೂತ್ರದಿಂದ ರೇಫ ಲೋಪವೇ ಆರನೇ ಅಧ್ಯಾಯದ ಸೂತ್ರ. "ಹಶಿ ಚ" ಪ್ರಾಪ್ತವಾಗಿ ಮನರಥ ಎಂದಾಗಬೇಕಾಗುತ್ತದೆ. ಆದರೆ ಈ "ರೋರಿ" ಸೂತ್ರವು ಎಂಟನೇ ಅಧ್ಯಾಯದ ತ್ರಿಪಾದಿಯಲ್ಲಿ ಇವೆ. ಆಗ ಈ ಸೂತ್ರದಿಂದ ಲೋಪಮಾಡಿದರೂ ಲೋಪಬಂದಿರುವುದು "ಹಶಿ ಚ" ಸೂತ್ರಕ್ಕೆ ಗೊತ್ತಿರುವುದಿಲ್ಲ. "ಪೂರ್ವತ್ರಾಸಿದ್ಧಮ್" ಸೂತ್ರದಿಂದ ಈ ಅರ್ಥವು ತಿಳಿಯುತ್ತದೆ. ಸಪಾದ ಸಪ್ತಾಧ್ಯಾಯಿಯನ್ನು ಕುರಿತು ತ್ರಿಪಾದಿಯು ಅಸಿದ್ಧವಾಗುತ್ತದೆ. ತ್ರಿಪಾದಿ ಇದೆಯೆಂಬ ಜ್ಞಾನವೇ ಅವುಗಳಿಗೆ ಇಲ್ಲದಿರುವುದರಿಂದ "ಹಶಿಚ" ಸೂತ್ರವು ಅಲ್ಲಿ ರೇಫ ಇದೆಯಂದೇ ತಿಳಿದಿರುತ್ತದೆ. ಆದುದರಿಂದ ಅದಕ್ಕೆ ಉತ್ವ ಬಂದರೆ ಮನ ಉ+ರಥಃ ಎಂದಿರುವಾಗ "ಆದ್ಗುಣಃ" ಸೂತ್ರದಿಂದ ಅಕಾರಉಕಾರಗಳಿಗೆ ಓಕಾರ ಗುಣ ಬಂದರೆ ಮನೋರಥಃ ಎಂದಾಗುತ್ತದೆ.

(ಸುಲೋಪ ವಿಧಾಯಕ ಸೂತ್ರ)

೧೧೪. ಏತತ್ತದೋಃ ಸುಲೋಪೋಽಕೋರನಞ್ ಸಮಾಸೇ ಹಲಿ ॥ ೬-೧-೧೩೨ ॥

ಅಕಾರಯೋರೇತತ್ತದೋರ್ಯಃ ಸುಸ್ತಸ್ಯ ಲೋಪೋ ಹಲಿ ನ ತು ನಞ್ ಸಮಾಸೇ। ಏಷ ವಿಷ್ಣುಃ। ಸ ಶಂಭುಃ। ಅಕೋಃ ಕಿಮ್?

ಏಷಕೋ ರುದ್ರಃ। ಅನಜ್ಸಮಾಸೇ ಕಿಮ್ ? ಅಸಃ ಶಿವಃ । ಹಲಿಕಿಮ್ ? ಏಷೋತ್ರ ॥

ಏತತ್ತದೋಃ, ಸು, ಲೋಪಃ, ಅಕೋಃ, ಅನಜ್ಸಮಾಸೇ, ಹಲಿ ॥ ಆರು ಪದಗಳುಳ್ಳ ಸೂತ್ರ. ಸು ಎಂಬುದು ಲುಪ್ತಷಷ್ಠೀಕ. ಸುವಿಭಕ್ತಿಗೆ ಎಂದರ್ಥ. ಏತಚ್ಚ ತಚ್ಚ ಏತತ್ತದೌ ತಯೋಃ ಏತತ್ತದೋಃ. ಸು ಎಂಬುದಕ್ಕೆ ಏತತ್ತದೋಃ ಎಂಬ್ಷಷ್ಠ್ಯನ್ವಯ ಅವಿದ್ಯಮಾನಃ ಕಕಾರಃ ಯಯೋಸ್ತೌ ಅಕೌ, ತಯೋಃ ಅಕ್ಕೋಃ, ನನಜ್ಸಮಾಸಃ ಅನಜ್ಸಮಾಸಃ, ತಸ್ಮಿನ್ ಅನಜ್ಸಮಾಸೇ. **ಸೂತ್ರಾರ್ಥ**—ಕಕಾರ ವಿಲ್ಲದಿರುವ ಏತದ್ ತದ್ ಶಬ್ದಗಳ ಸುವಿಭಕ್ತಿಗೆ ಹಲ್ ಪರವಾದಾಗ ಲೋಪ ಬರುತ್ತದೆ. ನಞ್ಸಮಾಸದಲ್ಲಿ ಈ ಲೋಪವಿಲ್ಲ. ಉದಾ-ಏಷ ವಿಷ್ಣುಃ. ಏತದ್ ಶಬ್ದಕ್ಕೆ ಪ್ರಥಮಾಏಕವಚನದಲ್ಲಿ ಸುಪ್ರತ್ಯಯ. " ತ್ಯದಾದೀನಾಮಃ " ಸೂತ್ರದಿಂದ ದಕಾರಕ್ಕೆ ಅಕಾರಾದೇಶ. " ತದೋಃ ಸಃ ಸಾವನಂತ್ಯಯೋಃ " ಸೂತ್ರದಿಂದ ತಕಾರಕ್ಕೆ ಸತ್ವ. " ಆದೇಶಪ್ರತ್ಯಯಯೋಃ " ಸೂತ್ರದಿಂದ ಸಕಾರಕ್ಕೆ ಷಕಾರಾದೇಶ. ಏಷಸ್+ವಿಷ್ಣುಃ ಎಂದಿರುವಾಗ ಏತಚ್ಛಬ್ದಸಂಬಂಧಿ ಸುವಿಗೆ ವಕಾರರೂಪ ಹಲ್ ಪರವಾದುದರಿಂದ ಲೋಪ. ಏಷ ವಿಷ್ಣುಃ ಎಂದಾಗುತ್ತದೆ. ತಚ್ಛಬ್ದಕ್ಕೆ ಪ್ರಥಮಾ ವಿಭಕ್ತಿಯಲ್ಲಿ ಸುಮಾಡಿದಾಗ ಹಿಂದಿನಂತೆ ದಕಾರಕ್ಕೆ ಅತ್ವ. ತಕಾರಕ್ಕೆ ಸತ್ವ. ಸಸ್+ಶಂಭುಃ ಎಂದಿರುವಾಗ ಸುವಿಗೆ ಲೋಪಬಂದರೆ ಸ ಶಂಭುಃ ಎಂದಾಗುತ್ತದೆ. "ಅಕೋಃ ಕಿಮ್ ? " ದಕ್ಕೆ ಕೃತ್ಯವನ್ನು ಹೇಳುತ್ತಾನೆ. ಕಕಾರರಹಿತವಾದ ಏತತ್ತಚ್ಛಬ್ದವೆಂದು ದೇಕೆ ? ಕೇವಲ ಏತತ್ತಚ್ಛಬ್ದಗಳಿಗೆ ಎಂದಿದ್ದರೆ "ಏಷಕೋರುದ್ರಃ" ಇಲ್ಲಿಯೂ ಲೋಪ ಬರಬೇಕಾಗಿತ್ತು. ಏತದ್ ಶಬ್ದ ಸರ್ವನಾಮಸಂಜ್ಞೆಯನ್ನು ಹೊಂದಿರುವುದರಿಂದ " ಅನ್ಯಯಸರ್ವನಾಮ್ನಾಮಕಚ್ ಪ್ರಾಕ್ ಟೇಃ " ಎಂಬುದರಿಂದ ಟಿಯ ಮೊದಲು ಅಕಚ್ ಆಗಮಬರುತ್ತದೆ. ಏತದ್ ಶಬ್ದದಲ್ಲಿ ಟಿ ಅದ್. ಇದರ ಹಿಂದೆ ಅಕಚ್ (ಅಕ್) ಬಂದರೆ ಏತಕದ್ ಆಗುತ್ತದೆ. ಮಧ್ಯದಲ್ಲಿ ವಿಕಾರಬಂದರೂ ಅದು ಏತಚ್ಛಬ್ದವೆಂದೇ ಹೇಳಿಸಿಕೊಳ್ಳುತ್ತದೆ. ಅಲ್ಲಿ ಹಿಂದಿನಂತೆ ಕಾರ್ಯಬಂದು ಏಷಕಸ್+ರುದ್ರಃ ಎಂದಿರುವಾಗ ಸುಲೋಪವನ್ನು ಬಾರದಂತೆ ಮಾಡಲು ಕಕಾರರಹಿತವಾದ ಏತತ್ತಚ್ಛಬ್ದಗಳೆಂದು ಹೇಳಿದೆ. ಸಕಾರಕ್ಕೆ " ಸಸಜುಷೋರುಃ " ಸೂತ್ರದಿಂದ ರುತ್ವ. ಅದಕ್ಕೆ ಹಶ್ ಪರವಾದುದರಿಂದ " ಹಶಿ ಚ " ಎಂಬುದರಿಂದ ಉತ್ವ. ಏಷಕ+ಉ+ರುದ್ರಃ। ಗುಣ ಬಂದರೆ ಏಷಕೋರುದ್ರಃ ಎಂದಾಗುತ್ತದೆ. ಅನಜ್ಸಮಾಸೇಕಿಮ್? ನಞ್ಸಮಾಸದಲ್ಲಿ ಬರುವುದಿಲ್ಲವೆಂದು ಹೇಳಿದುದು ಏಕೆ ? ಅಸಃ ಶಿವಃ ಇಲ್ಲಿ ಸುಲೋಪ ಬಾರದಿರಲು ಹೇಳಿರುತ್ತಾನೆ. ನ ಸಃ ಅಸಃ. ಇದು ನಞ್ಸಮಾಸ. ಅಸಸ್+ಶಿವಃ ಎಂದಿರುವಾಗ ಸುಲೋಪ ಬರುವುದಿಲ್ಲ ರುತ್ವ, ವಿಸರ್ಗಗಳು ಬಂದರೆ ಅಸಃ ಶಿವಃ ಎಂದಾಗುತ್ತದೆ. ಹಲಿಕಿಮ್ ? ಹಲ್ ಪರದಲ್ಲಿರುವಾಗ ಮಾತ್ರ ಲೋಪವೆಂದುದೇಕೆ?

ಅಚ್ ಪರವಾದರೆ ಬರುವುದಿಲ್ಲ. ಏಷಸ್+ಅತ್ರ. ಇಲ್ಲಿ ಅಚ್ ಪರವಾಗಿದೆ. ಶುದುದರಿಂದ ಸುವಿಗೆ ಲೋಪವಿಲ್ಲ. ಸಕಾರಕ್ಕೆ ರುತ್ವಬಂದರೆ ಏಷರ್+ಅತ್ರ. ಅಕಾರ ಪೂರ್ವವಾದ ರುವಿಗೆ ಅಕಾರಪರವಾದುದರಿಂದ "ಅತೋರೋ.....ತೀ " ಸೂತ್ರದಿಂದ ಉತ್ವ. ಅಕಾರ ಅಕಾರ ಉಕಾರಗಳಿಗೆ ಗುಣ. ಓಕಾರಕ್ಕೆ ಅಕಾರಪರವಾದುದರಿಂದ "ಏಜಃ ಪದಾಂತಾದತಿ " ಸೂತ್ರದಿಂದ ಪೂರ್ವರೂಪಾದೇಶ. ಏಷೋತ್ರ ಎಂದಾಗುತ್ತದೆ.

(ತಚ್ಛಬ್ದದ ಸುಲೋಪವಿಧಾಯಕ ಸೂತ್ರ)

೧೧೫. ಸೋಽಚಿ ಲೋಪೇ ಚೇತ್ಪಾದಪೂರಣಮ್ । ೬-೧-೧೩೪ ॥

ಸ ಇತ್ಯಸ್ಯ ಸೋಲ್ಲೋಪಃ ಸ್ಯಾದಚಿ ಪಾದಶ್ಚೇಲ್ಲೋಪೇ ಸತ್ಯೇವ ಪೂರ್ಯೀತ । ಸೇಮಾಮವಿಡ್ಧಿ ಪ್ರಭೃತಿಮ್ । ಸೈಷ ದಾಶರಥೀ ರಾಮಃ ॥

ಸಃ, ಅಚಿ, ಲೋಪೇ, ಚೇತ್, ಪಾದಪೂರಣಮ್ । ಪಂಚಪದ ಸೂತ್ರ. ಸಃ ಎಂಬುದು ಪ್ರಥಮಾಏಕವಚನಾಂತರೂಪ. ಇದರ ಮೇಲೆ ಷಷ್ಠೀ ಬಂದು ಲೋಪವಾಗಿದೆ. ಲುಪ್ತ ಷಷ್ಠೀಕ ಪದ. ಸುಲೋಪಃ ಎಂದು ಹಿಂದಿನ ಸೂತ್ರದಿಂದ ಅನುವೃತ್ತಿ. ಅಚ್ ನಿಮಿತ್ತ. **ಸೂತ್ರಾರ್ಥ.**—ತಚ್ಛಬ್ದದ ಸು ವಿಭಕ್ತಿಗೆ ಅಚ್ ಪರವಾದಾಗ ಲೋಪಬರುತ್ತದೆ. ಲೋಪ ಮಾಡಿದರೇ (ಶ್ಲೋಕಾದಿಗಳ) ಪಾದಪೂರ್ತಿಯಾಗುತ್ತೆ ಎಂದಿರುವಾಗ ಮಾತ್ರ ಲೋಪ. ಹಾಗಿಲ್ಲವಾದರೆ ಲೋಪ ಬರುವುದಿಲ್ಲ. " ಸೇಮಾಮವಿಡ್ಧಿಪ್ರಭೃತಿಮ್ " ಇದು ವೇದದ ಋಕ್ಕಿನ ಒಂದು ಪಾದ. ಸಸ್+ಇಮಾಮವಿಡ್ಧಿಪ್ರಭೃತಿಮ್ ಎಂದಿರುವಾಗ ಸುವಿಗೆ ಲೋಪಮಾಡಿದರೆ ಪಾದ ಸರಿಯಾಗುತ್ತದೆ. ಆದುದರಿಂದ ಲೋಪ. ಸ+ಇಮಾ ಎಂದಿರುವಾಗ ಗುಣ. ಲೋಪ ಮಾಡದಿದ್ದರೆ ಸುವಿಗೆ ರುತ್ವಬಂದು ಅದಕ್ಕೆ ಯತ್ವ ಲೋಪಬಂದು " ಸ ಇಮಾ.....ತಿಮ್ " ಎಂದು ರೂಪವಾಗಬೇಕಾಗುತ್ತದೆ. ಆಗ ಒಂದು ವರ್ಣ ಹೆಚ್ಚಾಗುತ್ತದೆ. ಅದುದರಿಂದ ಲೋಪ ಮಾಡಲೇಬೇಕು. ಲೋಕದಲ್ಲಿಯೂ ಈ ಲೋಪವಿದೆಯೆಂದು ತೋರಿಸಲು ಶ್ಲೋಕವಾದವನ್ನು ಉದಾಹರಣೆಯಾಗಿ ತೋರಿಸುತ್ತಾನೆ. " ಸೈಷ ದಾಶರಥೀ ರಾಮಃ " ಸಸ್+ಏಷ ದಾಶರಥೀ ರಾಮಃ ಎಂದಿರುವಾಗ ಸುಲೋಪ ಬಂದರೆ ವೃದ್ಧಿಸಂಧಿ. ಸೈಷ ಎಂದಾಗುತ್ತದೆ. ಇಲ್ಲಿ ಲೋಪ ಬಂದರೇ ವೃದ್ಧಿ ಬಂದು ಒಂದಕ್ಷರ ಕಡಿಮೆಯಾಗಿ ಛಂದಸ್ಸಿಗೆ ಅನುಕೂಲವಾಗುತ್ತದೆ. ಲೋಪಬಾರದಿದ್ದರೆ ರುತ್ವ ಯತ್ವ,

ಯಲೋಪ ಬಂದು ಸ ಏಷ ಎಂದಾಗುವುದರಿಂದ ಒಂದಕ್ಷರ ಹೆಚ್ಚಾಗಿ ಛಂದೋಭಂಗ ವಾಗುತ್ತದೆ. ಆದುದರಿಂದ ಲೋಪಮಾಡಿದೆ.

|| ಇತಿ ವಿಸರ್ಗಸಂಧಿಃ ||

—: ಶ್ರೀ :—

ಈ ರೀತಿ ಪಂಚಸಂಧಿಗಳು ಸಂಕ್ಷೇಪದಿಂದ ವಿವೃತವಾಗಿವೆ. ಪಂಚಸಂಧಿಗಳು ಅಚ್‌ಸಂಧಿ (ಸ್ವರಗಳಿಗೆ ಹೇಳಿರುವ ಸಂಧಿ) ಹಲ್‌ಸಂಧಿ. (ವ್ಯಂಜನಗಳಿಗೆ ವಿಹಿತವಾದ ಸಂಧಿ) ವಿಸರ್ಗಸಂಧಿ. (ವಿಸರ್ಗಕ್ಕೆ ಹೇಳಿರುವ ಕಾರ್ಯ) ಪ್ರಕೃತಿಭಾವಸಂಧಿ. ಸ್ವಾದಿಸಂಧಿ. (ಸುವಿಭಕ್ತಿಗೆ ಹೇಳಿದಸಂಧಿ) ಹೀಗೆ ವಿಭಾಗವನ್ನು ತಿಳಿಯಬೇಕು.

|| ಪಾಣಿನಯೇ ನಮಃ ||

ಸೂಚನೆ

ಮೋ ರಾಜಿ ಸಮಃ ಕ್ವೌ || ೮—೩—೨೫ ||

ಕ್ವಿಬಂತೇ ರಾಜತೌ ಪರೇ ಸಮೋ ಮಸ್ಯ ಮ ಏವ ಸ್ಯಾತ್ ||
ಸಮ್ರಾಟ್ ||

ನಾಲ್ಕು ಪದಗಳುಳ್ಳ ಸೂತ್ರ. ರಾಜಿ ಎಂಬುದು ಇಗಂತದಿಂದ ನಿರ್ದಿಷ್ಟವಾದ ಧಾತು. ಕ್ವಿ ಪ್ರತ್ಯಯ. ಅದು ಧಾತುವಿಗೆ ವಿಶೇಷಣ. **ಸೂತ್ರಾರ್ಥ.**—ಕ್ವಿಬಂತವಾದ ರಾಜೃಧಾತುವು ಪರದಲ್ಲಿರುವಾಗ ಸಮಿನ ಮಕಾರಕ್ಕೆ ಮಕಾರವೇ ಬರುತ್ತದೆ. ಅನುಸ್ವಾರ ಬರುವುದಿಲ್ಲವೆಂದರ್ಥ. ಸಮ್+ರಾಟ್. "ಮೋsನುಸ್ವಾರಃ" ಸೂತ್ರದಿಂದ ಮಕಾರಕ್ಕೆ ಅನುಸ್ವಾರ ಪ್ರಾಪ್ತವಾದರೆ ಮಕಾರ ಹೇಳಿದುದರಿಂದ ಹಾಗೇ ಇರುತ್ತದೆ. ಸಮ್ರಾಟ್. (ಚಕ್ರವರ್ತಿ). ಹಲಂತದಲ್ಲಿ ಇದು 77ನೇ ಪುಟದಲ್ಲಿ ಬಿಟ್ಟು ಹೋದುದರಿಂದ 81ನೆಯ ಸೂತ್ರವಾಗಿ ತಿಳಿಯಬೇಕು.

ಪುಟ (101)

सैव दाशरथी रामः । सैव राजा युधिष्ठिरः
सैव कर्णमहा त्यागी । सैव भीमो महाबलः

ಅಥ ಅಜಂತಪುಲ್ಲಿಂಗಪ್ರಕರಣಮ್ ||

ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗವೆಂದು ಸಂಸ್ಕೃತದಲ್ಲಿ ಮೂರುಲಿಂಗಗಳಿವೆ. ಈಶಬ್ದಗಳನ್ನು ಮೊದಲು ಎರಡುವಿಭಾಗವಾಗಿ ವಿಂಗಡಿಸಿರುತ್ತಾನೆ. ಅಜಂತಶಬ್ದ, ಹಲಂತಶಬ್ದ. ಲಿಂಗವಿಭಾಗದೊಡನೆ ಹೇಳಿದರೆ ಆರುರೀತಿಯಾಗುತ್ತದೆ. ಮೊದಲು ಅಜಂತಪುಲ್ಲಿಂಗ ಶಬ್ದಸ್ವರೂಪವನ್ನು ಹೇಳುತ್ತಾನೆ.

(ಪ್ರಾತಿಪದಿಕಸಂಜ್ಞಾವಿಧಾಯಕಸೂತ್ರ)

೧೧೬. ಅರ್ಥವದಧಾತುರಪ್ರತ್ಯಯಃ ಪ್ರಾತಿಪದಿಕಮ್ || ೧-೨-೪೫ ||

ಧಾತುಂ ಪ್ರತ್ಯಯಂ ಪ್ರತ್ಯಯಾಂತಂ ಚ ವರ್ಜಯಿತ್ವಾ ಅರ್ಥವಚ್ಛಬ್ದಸ್ವರೂಪಂ ಪ್ರಾತಿಪದಿಕ ಸಂಜ್ಞಂ ಸ್ಯಾತ್ ||

ಅರ್ಥವತ್, ಅಧಾತುಃ, ಅಪ್ರತ್ಯಯಃ, ಪ್ರಾತಿಪದಿಕಮ್ || ನಾಲ್ಕುಪದಗಳುಳ್ಳ ಸೂತ್ರ. ಅರ್ಥಃ ಅಸ್ಯ ಅಸ್ತಿ ಇತಿ ಅರ್ಥವತ್. "ಶಬ್ದಸ್ವರೂಪಂ" ಎಂದು ವಿಶೇಷ್ಯವನ್ನು ಅಧ್ಯಾಹಾರಮಾಡಿಕೊಳ್ಳಬೇಕು. ನ ಧಾತುಃ ಅಧಾತುಃ ಕ್ರಿಯಾಪದವಲ್ಲದಿರುವುದು. ನ ಪ್ರತ್ಯಯಃ ಅಪ್ರತ್ಯಯಃ ಪ್ರತ್ಯಯವಲ್ಲದಿರುವುದು. ಅಪ್ರತ್ಯಯಃ ಎಂಬುದು ಆವೃತ್ತವಾಗುತ್ತದೆ. ಒಂದು ಪ್ರತ್ಯಯ ಪದದಿಂದ ಪ್ರತ್ಯಯಾಂತವೆಂದಿಟ್ಟುಕೊಂಡು ಪ್ರತ್ಯಯಾಂತವಲ್ಲದಿರುವುದು, ಎಂದರ್ಥವಾಗುತ್ತದೆ. **ಸೂತ್ರಾರ್ಥ.**—ಕ್ರಿಯಾಪದವನ್ನೂ, ಪ್ರತ್ಯಯವನ್ನೂ, ಪ್ರತ್ಯಯಾಂತವನ್ನೂ ಬಿಟ್ಟು ಉಳಿದ ಅರ್ಥವಳ್ಳ ಶಬ್ದಸ್ವರೂಪವು ಪ್ರಾತಿಪದಿಕಸಂಜ್ಞೆಯನ್ನು ಹೊಂದುತ್ತದೆ. ಪ್ರಾತಿಪದಿಕವೆಂದರೆ ನಾಮಪದ. ಅರ್ಥವುಳ್ಳ ಶಬ್ದಗಳೆಲ್ಲಾ ಪ್ರಾತಿಪದಿಕವೆಂದರೆ ಕ್ರಿಯಾಪದಕ್ಕೂ ಅರ್ಥವಿರುವುದರಿಂದ ಅಧಾತುಃ ಎಂದು ಅದನ್ನು ನಿಷೇಧಿಸಿರುತ್ತಾನೆ. ಹಾಗೇ ಪ್ರತ್ಯಯಗಳಿಗೂ, (ಅಣ್, ಠಕ್) ಪ್ರತ್ಯಯಾಂತಗಳಿಗೂ (ರಾಮಃ, ಹರಿಂ ಮುಂತಾದವುಗಳು) ಅರ್ಥವಿರುವುದರಿಂದ ಅವುಗಳನ್ನೂ "ಅಪ್ರತ್ಯಯಃ" ಎಂದು ನಿಷೇಧಿಸಿರುತ್ತಾನೆ. ಪ್ರತ್ಯಯಸೇರಿಸದೇ ಇರುವ ಮೂಲಸ್ವರೂಪವೇನಿದೆಯೋ ಅದು ಇದಕ್ಕೆ ಉದಾಹರಣೆ. ರಾಮ, ಗೋ, ಲಿಹ್ ಇವೇಮುಂತಾದವುಗಳು ಅರ್ಥವನ್ನು ಕೊಡುವುದರಿಂದ ಇವು ಪ್ರಾತಿಪದಿಕಗಳು. ಈಶಬ್ದಗಳನ್ನೂ ವಿಭಾಜಿಸಿದರೆ ಪ್ರಕೃತಿಪ್ರತ್ಯಯಸಿಗುವುದಾದರೆ ಇವು ಪ್ರತ್ಯಯಾಂತಗಳಾಗುತ್ತವೆ. ಆಗ ಮುಂದಿನಸೂತ್ರದಿಂದ ಸಂಜ್ಞೆಯನ್ನು ಹೇಳಬೇಕು. ಹಾಗೆ ವಿಭಾಜಿಸಲುಬಾರದ ಅವ್ಯುತ್ಪನ್ನಶಬ್ದಗಳು ಡಿತ್ಥಮುಂತಾದವುಗಳು

ಈ ಸೂತ್ರಕ್ಕೆ ಉದಾಹರಣೆಗಳಾಗುತ್ತವೆ. ಸುಬ್‌ವಿಭಕ್ತಿಗಳನ್ನು (ನಾಮದಪ್ರತ್ಯಯ) ಪ್ರಾತಿಪದಿಕದ ಮೇಲೆ ವಿಧಿಸುವುದರಿಂದ ಮೊದಲು ಪ್ರಾತಿಪದಿಕಸಂಜ್ಞೆಯನ್ನು ಹೇಳಿರುತ್ತಾನೆ.

(ಪ್ರತ್ಯಯಾಂತ ಸಮಾಸಗಳಿಗೆ ಪ್ರಾತಿಪದಿಕಸಂಜ್ಞಾ ವಿಧಾಯಕಸೂತ್ರ)

೧೧೭. ಕೃತ್ತದ್ಧಿತ ಸಮಾಸಾಶ್ಚ ॥ ೧-೨-೪೬ ॥

ಕೃತ್ತದ್ಧಿತಾಂತಾ ಸಮಾಸಾಶ್ಚ ತಥಾ ಸ್ಯುಃ ॥

ಕೃತದ್ಧಿತಸಮಾಸಾಃ, ಚ ॥ ದ್ವಿಪದಸೂತ್ರ. ಕೃಚ್ಚ ತದ್ಧಿತಶ್ಚ ಸಮಾಸಶ್ಚ ಕೃತದ್ಧಿತಸಮಾಸಾಃ. ಹಿಂದಿನ ಸೂತ್ರದಿಂದ "ಪ್ರಾತಿಪದಿಕಂ" ಪದವು ಅನುವೃತ್ತವಾಗಿದೆ. ಕೃತ್ ಧಾತುವಿನಮೇಲೆ ವಿಹಿತವಾಗುವ ಪ್ರತ್ಯಯ. ತದ್ಧಿತ ನಾಮದ ಮೇಲೆ ವಿಹಿತವಾದ ಪ್ರತ್ಯಯ. ಪ್ರತ್ಯಯ ತೆಗೆದುಕೊಂಡಾಗ ತದಂತವನ್ನು ತೆಗೆದು ಕೊಳ್ಳಬೇಕು. **ಸೂತ್ರಾರ್ಥ**—ಕೃದಂತವಾದ ಶಬ್ದಗಳೂ ತದ್ಧಿತಾಂತವಾದ ಶಬ್ದಗಳೂ ಸಮಾಸವೂ ಪ್ರಾತಿಪದಿಕ ಸಂಜ್ಞೆಯನ್ನು ಹೊಂದುತ್ತವೆ. ಇಲ್ಲಿ ಕೃದಂತ ತದ್ಧಿಂತಾತಗಳು ಪ್ರತ್ಯಯಾಂತಗಳಾದುದರಿಂದ ಹಿಂದಿನ ಸೂತ್ರದಿಂದ ಬಾರದಿರುವುದರಿಂದ ಪುನಃ ಹೇಳಿರುತ್ತಾನೆ. ಸಮಾಸಕ್ಕೆ ಹಿಂದಿನ ಸೂತ್ರದಿಂದಲೇ ಪ್ರಾಪ್ತವಾಗುತ್ತದೆ. ರಾಜಪುರುಷ ಇದು ಸಮಾಸ ಪದ. ಇದು ಪ್ರತ್ಯಯಾಂತವಲ್ಲ. ಅರ್ಥವುಳ್ಳ ಶಬ್ದವಾದುದರಿಂದ ಪುನಃ ಇಲ್ಲಿ ಹೇಳಿದುದು ಏಕೆ? ಅಂದರೆ ನಿಯಮಕ್ಕೋಸ್ಕರ ಹೇಳಿರುತ್ತಾನೆ. "ಸಿದ್ಧೇಸತಿ ಆರಭ್ಯಮಾಣೋ ವಿಧಿಃ ನಿಯಮಾಯ" ಒಂದು ಸೂತ್ರದಿಂದ ಕಾರ್ಯಾದಿಗಳು ಸಿದ್ಧಿಸುವಾಗ ಪುನಃ ಇನ್ನೊಂದು ಸೂತ್ರದಿಂದ ಆ ಕಾರ್ಯವನ್ನೇ ಹೇಳಿದರೆ ಅಲ್ಲಿ ನಿಯಮವಿದೆ ಎಂದು ತಿಳಿಯುತ್ತೆ. ಇಲ್ಲಿ ಸಮಾಸ ಗ್ರಹಣದಿಂದ ಒಂದು ನಿಯಮ ತಿಳಿಯುತ್ತದೆ. ಹಿಂದಿನ ಸೂತ್ರದಿಂದ ವಾಕ್ಯಕ್ಕೂ ಪ್ರಾತಿಪದಿಕಸಂಜ್ಞೆ ಬರಬಹುದು ಎಂದು ತಿಳಿಯುತ್ತದೆ. ವಾಕ್ಯವು ಪ್ರತ್ಯಯಾಂತವಲ್ಲ ಧಾತುವಲ್ಲ. ಸಾಮಾನ್ಯವಾಗಿ ಪದಸಮುದಾಯಗಳಿಗೆ ಪ್ರಾತಿಪದಿಕಸಂಜ್ಞೆ ಬರುವುದಾದರೆ ಸಮಾಸಕ್ಕೆ ಮಾತ್ರ. ಇತರ ವಾಕ್ಯಗಳಿಗೆ ಬರುವುದಿಲ್ಲವೆಂಬ ನಿಯಮವು ಇದರಿಂದ ತಿಳಿಯುತ್ತದೆ. ರಾಮ, ಕುಂಭಕಾರ ಮುಂತಾದವುಗಳು ಕೃದಂತಗಳು. ಔಪಗವ, ದಾಶರಥಿ ಮುಂತಾದವುಗಳು ತದ್ಧಿತಾಂತಗಳು. ಅಕ್ಷಶೌಂಡ, ರಾಜಪುರುಷ, ಚಿತ್ರಗು ಮುಂತಾದವುಗಳು ಸಮಾಸಗಳು. ಇವುಗಳಿಗೆ ಪ್ರಾತಿಪದಿಕವೆಂಬ ಸಂಜ್ಞೆ ಈ ಸೂತ್ರದಿಂದ ಬರುತ್ತದೆ. ಇವು ನಾಮವಾಗುತ್ತವೆ. ಈಗ ಸಾಮನ್ಯ ನಾಮಪದಗಳನ್ನು ಸಂಸ್ಕೃತದಲ್ಲಿ ನಾಲ್ಕು ರೀತಿಯಾಗಿ ವಿಭಾಗಿಸಬಹುದು. 1) ಪ್ರಕೃತಿಪ್ರತ್ಯಯ ವಿಂಗಡಿಸಲು ಬಾರದ ನಾಮಪದ. ಇದಕ್ಕೆ ಅವ್ಯುತ್ಪನ್ನಪ್ರಾತಿಪದಿಕವೆಂದು ಹೆಸರು. ಅವ್ಯಯವೂ ಅವಯವಾರ್ಥವಿಲ್ಲದ ಹೆಸರೂ ಈ ಗುಂಪಿಗೆ ಸೇರುತ್ತವೆ. 2) ಕೃದಂತನಾಮ. 3) ತದ್ಧಿತಾಂತನಾಮ. 4) ಸಮಾಸ. ಇವುಗಳ ಸ್ವರೂಪವನ್ನು ಹಿಂದೆ ಹೇಳಿದೆ. ಹೀಗೆ ಪ್ರಾತಿಪದಿಕ ಸಂಜ್ಞೆಯನ್ನು ಹೇಳಿ ಮುಂದೆ ಅವುಗಳ ಮೇಲೆ ಬರುವ ವಿಭಕ್ತಿಪ್ರತ್ಯಯಗಳನ್ನು ಹೇಳುತ್ತಾನೆ. ಇದಕ್ಕೆ ಬೇಕಾಗುವ ಕೆಲವು ಅಧಿಕಾರ ಸೂತ್ರಗಳನ್ನು ಈಗ ಹೇಳುತ್ತಾನೆ.

(ಪ್ರತ್ಯಯಸಂಜ್ಞಾಹೇಳುವ ಅಧಿಕಾರ ಸೂತ್ರ)

೧೧೮. ಪ್ರತ್ಯಯಃ ॥೩-೧-೧ ॥

ಆ ಪಂಚಮಪರಿಸಮಾಪ್ತೇರಧಿಕಾರೋಽಯಮ್ ॥

ಇದು ಒಂದುಪದವುಳ್ಳ ಅಧಿಕಾರಸೂತ್ರ. ಇಲ್ಲಿ ಏನೂ ಕಾರ್ಯವಿಧಾನ ಮಾಡುವುದಿಲ್ಲ. ಇದು ಮೂರನೇ ಅಧ್ಯಾಯದ ಒಂದನೇಪಾದದ ಒಂದನೇಸೂತ್ರ. ಎಲ್ಲಿಯವರೆಗೆ ಇದರ ವ್ಯಾಪ್ತಿಯೆಂದು ವೃತ್ತಿಯಲ್ಲಿ ಹೇಳಿರುತ್ತಾನೆ. ಐದನೇ ಅಧ್ಯಾಯಮುಗಿಯುವವರಗೆ ಈ ಸೂತ್ರವು ಹೋಗಿ ಮುಂದಿನ ಸೂತ್ರದಲ್ಲಿದ್ದು ಇಲ್ಲಿ ಹೇಳುವುದು ಪ್ರತ್ಯಯ ಎಂದು ತಿಳಿಸುತ್ತದೆ. ಆದುದರಿಂದ ಮೂರನೇ ಅಧ್ಯಾಯದಿಂದ ಐದನೇ ಅಧ್ಯಾಯ ಮುಗಿಯವವರೆಗೆ ಹೇಳುವುವೆಲ್ಲಾ ಪ್ರತ್ಯಯವೆಂದು ತಿಳಿಯಬೇಕು. "ಅರ್ಥಪ್ರತ್ಯಾಯಕತ್ವಂ ಪ್ರತ್ಯಯತ್ವಂ." ಯಾವುದಾದರೊಂದು ಅರ್ಥವನ್ನು ಹೇಳುವುದು ಪ್ರತ್ಯಯವೆಂದರ್ಥ. ಸ್ವಾರ್ಥಸ್ಥಳದಲ್ಲಿ ಪ್ರಕೃತಿಯ ಅರ್ಥವನ್ನೇ ಹೇಳುವುದಾದುದರಿಂದ ಸ್ವಾರ್ಥಿಕಪ್ರತ್ಯಯಗಳೂ ಅನ್ವರ್ಥವನ್ನು ಹೊಂದುತ್ತವೆ. ಪ್ರತ್ಯಯಗಳು ಎಲ್ಲಿ ಬರುತ್ತವೆ? ಎಂಬುದನ್ನು ಮುಂದಿನಸೂತ್ರದಿಂದ ತಿಳಿಸುತ್ತಾನೆ.

(ಪ್ರತ್ಯಯಗಳು ಪರವಾಗಿ ಬರುತ್ತವೆಂದು ಹೇಳುವ ಸೂತ್ರ)

೧೧೯. ಪರಶ್ಚ ॥ ೩-೧-೨ ॥

ಅಯಮಪಿ ತಥಾ ॥

ಪರಃ ಚ ॥ ದ್ವಿಪದಸೂತ್ರ. ಇದೂ ಹಿಂದಿನಂತೆ ಅಧಿಕಾರ ಸೂತ್ರ. ಇದರ ವ್ಯಾಪ್ತಿಯೂ ಐದನೇ ಅಧ್ಯಾಯ ಪೂರ್ತಿ ಇದೆಯೆಂದು, "ಇದೂ ಹಾಗೇಯೇ" ಎಂದು ವೃತ್ತಿಯಲ್ಲಿ ಹೇಳಿರುತ್ತಾನೆ. ಮುಂದೆಹೇಳುವ ಪ್ರತ್ಯಯಗಳು ಪ್ರಕೃತಿಯ ಪರಕ್ಕೆ ಬರುತ್ತವೆಯಂದು ಪ್ರತಿಸೂತ್ರದಲ್ಲಿಯೂ ಹೋಗಿ ತಿಳಿಸುತ್ತದೆ.

(ಪ್ರತ್ಯಯದ ಪ್ರಕೃತಿವಿಶೇಷನನ್ನು ಹೇಳುವ ಸೂತ್ರ)

೧೨೦. ಜ್ಞ್ಯಾಪ್ಸ್ಪ್ರಾತಿಪದಿಕಾತ್ ॥ ೪-೧-೧॥

ಜ್ಯಾಬಂತಾತ್, ಆಬಂತಾತ್, ಪ್ರಾತಿಪದಿಕಾತ್ ಇತ್ಯಾಪಂಚಮಸಮಾಪ್ತೇ.

ರಧಿಕಾರಃ ॥

ಏಕಪದಸೂತ್ರ. ಜೀಚ, ಆಪ್‌ಚ, ಪ್ರಾತಿಪದಿಕಂ ಚ ತೇಷಾಂ ಸಮಾಹಾರಃ ಜ್ಯಾಪ್‌ಪ್ರಾತಿಪದಿಕಮ್. ತಸ್ಮಾತ್ ಜ್ಯಾಪ್‌ಪ್ರಾತಿಪದಿಕಾತ್. ಇದೂ ಅಧಿಕಾರ ಸೂತ್ರ. ಇಲ್ಲಿ ಮೂರುಪದಗಳಿವೆ. ಜೀ, ಆಪ್, ಪ್ರಾತಿಪದಿಕ. ಪ್ರಾತಿಪದಿಕ ವೆಂದರೆ ಅರ್ಥವುಳ್ಳಶಬ್ದಸ್ವರೂಪವೆಂದು ಹಿಂದೆ ಹೇಳಿದೆ. ಇನ್ನುಳಿದವು ಸ್ತ್ರೀಲಿಂಗ ಬೋಧಕ ಪ್ರತ್ಯಯಗಳು. ಜೀ ಎಂಬದು ಜೀಪ್, ಜೀಷ್, ಜೀನ್, ಈ ಮೂರನ್ನೂ ತಿಳಿಸುವ ಸಾಮಾನ್ಯ ಪ್ರತ್ಯಯ. " ಹಲಂತ್ಯಮ್ " ಎಂದು ಈಮೂರರ ಕೊನೆಗೆ ಇತ್ ಹೇಳಿ ಲೋಪಮಾಡಿದರೆ ಉಳಿಯುವುದು ಜೀ. ಆದುದರಿಂದ ಜೀ ಎಂಬುದರಿಂದ ಮೂರನ್ನೂ ತೆಗೆದುಕೊಳ್ಳಬೇಕು. ಆಪ್‌ಯಂಬುದೂ ಟಾಪ್, ಡಾಪ್, ಚಾಪ್ ಎಂದು ಮೂರನ್ನೂ ಜೋಧಿಸುತ್ತದೆ. ಇಲ್ಲಿ ಆದಿಯವರ್ಣ ಲೋಪವಾದರೆ ಉಳಿಯುವುದು ಆಪ್ ಆಗ ಜ್ಯಂತ, ಆಬಂತವೆಂದರೆ ಈ ಆರುಪ್ರತ್ಯಯಾಂತ ಶಬ್ದಗಳನ್ನು ತೆಗೆದುಕೊಳ್ಳಬೇಕು. ಪ್ರತ್ಯಯನಾದುದರಿಂದ ತದಂತಗ್ರಹಣ. ಇದು ನಾಲ್ಕನೇ ಅಧ್ಯಾಯದ ಮೊದಲನೆಯ ಸೂತ್ರ. ಇನ್ನು ಮುಂದೆ ಹೇಳುವ ಪ್ರತ್ಯಯಗಳು ಜ್ಯಂತದ ಮೇಲೂ, ಆಬಂತದಮೇಲೂ, ಪ್ರಾತಿಪದಿಕದಮೇಲೂ ಬರುತ್ತವೆ ಎಂದು ಈ ಅಧಿಕಾರಸೂತ್ರ ಜೋಧಿಸುತ್ತದೆ. ಜೀ, ಆಪ್ ಪ್ರತ್ಯಯಗಳಾದುದರಿಂದ ಬೇರೆ ಹೇಳಿರುತ್ತಾನೆ. ಈ ಮೂರು ಸೂತ್ರಗಳ ಅರ್ಥವನ್ನು ಸೇರಿಸಿ ಮುಂದಿನ ಸೂತ್ರಾರ್ಥವನ್ನು ಹೇಳಬೇಕು. ವಿಭಕ್ತಿಪ್ರತ್ಯಯಗಳನ್ನು ಹೇಳುವಸೂತ್ರವು ಇದರ ಮುಂದಿನ ಸೂತ್ರವಾದುದರಿಂದ ಅಲ್ಲಿ ಈ ಮೂರುಸೂತ್ರಗಳೂ ಹೋಗಿ ತಮ್ಮ ಅರ್ಥವನ್ನು ಸೇರಿಸಿ ಒಂದರ್ಥವನ್ನುಂಟುಮಾಡುತ್ತವೆ. ಉತ್ತರಸೂತ್ರದೊಡನೆ ಏಕಾರ್ಥ್ಯವನ್ನು ಹುಟ್ಟಿಸುವುದೇ ಅಧಿಕಾರಸೂತ್ರದ ಲಕ್ಷಣವೆಂದು ಹಿಂದೆ ಹೇಳಿದೆ, ಹೀಗೆ ಅಧಿಕಾರಸೂತ್ರಗಳನ್ನು ಹೇಳಿ ಈಗ ವಿಭಕ್ತಿಪ್ರತ್ಯಯವನ್ನು ಹೇಳುತ್ತಾನೆ.

(ನಾಮವಿಭಕ್ತಿಪ್ರತ್ಯಯ ಹೇಳುವ ಸೂತ್ರ)

೧.೨೧. ಸ್ವೌಜಸಮೌಟ್‌ಛಷ್ಟಾಭ್ಯಾಮ್ ಭಿಸ್ ಙೇ ಭ್ಯಾಮ್ ಭ್ಯಸ್ ಙಸಿ ಭ್ಯಾಮ್ ಭ್ಯಸ್ ಙಸೋಸಾಮ್ ಙ್ಯೋಸ್ಸುಪ್ ॥

೪-೧-೨ ॥

ಸು ಔ ಜಸ್ ಇತಿ ಪ್ರಥಮಾ ॥ ಅಮ್ ಔಟ್ ಶಸ್ ಇತಿ ದ್ವಿತೀಯಾ ॥ ಟಾ ಭ್ಯಾಮ್ ಭಿಸ್ ಇತಿ ತೃತೀಯಾ । ಙೇ ಭ್ಯಾಮ್

ಭ್ಯಸ್ ಇತಿ ಚತುರ್ಥೀ । ಙಸಿ ಭ್ಯಾಮ್ ಭ್ಯಸ್ ಇತಿ ಪಂಚಮೀ ।
ಙಸ್ ಓಸ್ ಆಮ್ ಇತಿ ಷಷ್ಠೀ॥ ಙಿ ಓಸ್ ಸುಪ್ ಇತಿ ಸಪ್ತಮೀ॥

ಒಂದು ಪದವುಳ್ಳ ಸೂತ್ರ. ಸುಚ, ಔಚ, ಜಸ್ ಚ, ಅಮ್‌ಚ, ಔಟ್‌ಚ, ಶಸ್ ಚ, ಟಾಚ, ಭ್ಯಾಮ್ ಚ, ಭಿಸ್ ಚ, ಙೇ ಚ, ಭ್ಯಾಮ್, ಭ್ಯಸ್. ಚ, ಙಸಿ ಚ, ಭ್ಯಾಮ್ ಚ, ಭ್ಯಸ್ ಚ, ಜಸ್ ಚ, ಓಸ್ ಚ, ಆಮ್ ಚ, ಙಿ ಚ, ಓಸ್ ಚ, ಸುಪ್ ಚ, ತೇಷಾಂ ಸಮಾಹಾರಃ । ಸ್ವೌಜಸ.... ಸುಪ್ ॥ ಇಲ್ಲಿ ಇಪ್ಪತ್ತೊಂದು ಪ್ರತ್ಯಯಗಳನ್ನು ಹೇಳಿರುತ್ತಾನೆ. ಇವು ವಿಭಕ್ತಿಪ್ರತ್ಯಯಗಳು. ಸಂಸ್ಕೃತದಲ್ಲಿ ಏಳು ವಿಭಕ್ತಿಗಳಿವೆ. 1) ಪ್ರಥಮಾ (ಅು) 2) ದ್ವಿತೀಯಾ, (ಅನ್ನು) 3) ತೃತೀಯಾ (ಇಂದ) 4) ಚತುರ್ಥಿ (ಓಸ್ಕರ ಗೆ ಕ್ಕೆ) 5) ಪಂಚಮೀ (ದೆಸೆಯಿಂದ) 6) ಷಷ್ಠೀ (ಅ ಗೆ) 7) ಸಪ್ತಮೀ (ಅಲ್ಲಿ) ಎಂದು ಇವುಗಳ ಹೆಸರು. ಈ ಪ್ರಥಮಾ ಮುಂತಾದ ಹೆಸರುಗಳು ಹಿಂದಿನ ವೈಯಾಕರಣರಿಂದ ಪರಂಪರೆಯಾಗಿ ಬಂದಿವೆ ಸಂಸ್ಕೃತದಲ್ಲಿ ಏಕವಚನ, ದ್ವಿವಚನ, ಬಹುವಚನವೆಂದು ಮೂರು ವಚನಗಳಿವೆ. ಆಗ ಒದೊಂದು ವಿಭಕ್ತಿಗೂ ಮೂರು ಮೂರು ವಚನಗಳೆಂದು ತಿಳಿಯಬೇಕು. ಈ ಪ್ರತ್ಯಯಗಳನ್ನು ಹಚ್ಚುವುದರಿಂದ ಒದೊಂದು ನಾಮಪದವೂ 21 ರೂಪವನ್ನು ಹೊಂದುತ್ತದೆ. ಉದ್ದೇಶಿಸಿ ಕಾರ್ಯ ವಿಧಿಸುವಾಗ ಸಂಬೋಧನೆಯು ಬರುತ್ತದೆ. ಇದಕ್ಕೆ ಸಂಬೋಧನ ಪ್ರಥಮಾ ಎಂದು ಹೆಸರು. ಇವುಗಳ ವಿವೇಕವನ್ನು ಪ್ರತ್ಯೇಕ ಸೂತ್ರದಿಂದ ಮುಂದೆ ವಿವರಿಸುತ್ತಾನೆ. ಈ ಸೂತ್ರದ ವೃತ್ತಿಯಲ್ಲಿ ಆ ಏಳು ವಿಭಕ್ತಿಯನ್ನು ಬಿಡಿಸಿ ತೋರಿಸಿರುತ್ತಾನೆ. ಸು, ಔ, ಜಸ್ ಈ ಮೂರು ಪ್ರಥಮಾವಿಭಕ್ತಿಯ ಪ್ರತ್ಯಯಗಳು. ಅಮ್, ಔಟ್, ಶಸ್, ದ್ವಿತೀಯಾವಿಭಕ್ತಿ. ಟಾ, ಭ್ಯಾಮ್, ಭಿಸ್, ತೃತೀಯಾವಿಭಕ್ತಿ. ಙೇ, ಭ್ಯಾಮ್, ಭ್ಯಸ್, ಚತುರ್ಥೀವಿಭಕ್ತಿ. ಙಸಿ, ಭ್ಯಾಮ್, ಭ್ಯಸ್, ಪಂಚಮೀವಿಭಕ್ತಿ. ಙಸ್, ಓಸ್, ಆಮ್, ಷಷ್ಠೀವಿಭಕ್ತಿ. ಙಿ ಓಸ್, ಸುಪ್, ಸಪ್ತಮೀವಿಭಕ್ತಿ. ಈ ಏಳು ವಿಭಕ್ತಿಗಳಿಗೆ ಹಿಂದೆ ಅರ್ಥವನ್ನು ಕುಂಡಲಿಯಲ್ಲಿ ಹೇಳಿದೆ ಇಲ್ಲಿ ಮೊದಲನೆಯ ಸು ತೆಗೆದುಕೊಂಡು ಕೊನೆಯ ಪ್ ಸೇರಿಸಿ ಹೇಳಿದರೆ ಸುಪ್ ಎಂದಾಗುತ್ತದೆ. ಆಗ 21 ಪ್ರತ್ಯಯಗಳಿಗೂ ಸಂಜ್ಞೆಯಾಗುತ್ತದೆ, ಸುಪ್ ಪ್ರತ್ಯಾಹಾರ. ಸುಪ್ ವಿಭಕ್ತಿಯೆಂದರೆ ಈ 21 ಪ್ರತ್ಯಯಗಳೆಂದರ್ಥವಾಗುತ್ತದೆ. ಇಲ್ಲಿ ಹಿಂದೆ ಹೇಳಿದ ಮೂರು ಅಧಿಕಾರ ಸೂತ್ರಗಳು ಬರುವುದರಿಂದ ಆಗುವ **ಸೂತ್ರಾರ್ಥ**—ಸು ಮುಂತಾದ 21, ಪ್ರತ್ಯಯ ಸಂಜ್ಞೆಯನ್ನು ಹೊಂದಿ ಜ್ಯಂತದ ಮೇಲೂ ಆಬಂತದ ಮೇಲೂ ಪ್ರಾತಿಪದಕದ ಮೇಲೂ (ಪರವಾಗಿ) ಬರುತ್ತವೆ. ಪ್ರಕೃತ ರಾಮ ಎಂಬುದು ಪ್ರಾತಿಪದಿಕ. ರಮ್(ಕ್ರೀಡಾಯಾಂ) ಧಾತುವಿನ ಮೇಲೆ ಘಞ್ (ಅ ಉಳಿಕೆ) ಪ್ರತ್ಯಯ ಬಂದು ರಾಮ ಎಂದಾಗಿದೆ. ಇದು ಕೃದಂತ ಪ್ರಾತಿಪದಿಕ. ಇದರ ಪರಕ್ಕೆ ಸು ಮುಂತಾದ 21 ಪ್ರತ್ಯಯಗಳು ಬರುತ್ತವೆ. " ಖಲೇಕಪೋತನ್ಯಾಯ " ದಿಂದ ಅಂದರೆ ಕಣದಲ್ಲಿ ಅಕ್ಕಿಯ ಕಾಳನ್ನು ಪರವಿದಾಗ

ಎಲ್ಲಾ ಪಾರಿವಾಳಗಳೂ ಏಕಕಾಲದಲ್ಲಿ ಎರಗುವಂತೆ ರಾಮವೆಂಬ ಒಂದು ಪ್ರಾತಿಪದಿಕದಮೇಲೆ ಏಕಕಾಲದಲ್ಲಿ ಈ 21 ಪ್ರತ್ಯಯಗಳೂ ಪ್ರಾಪ್ತವಾಗುತ್ತವೆ. ಹಾಗೆ ಬಂದರೆ ಅರ್ಥಸಾಮಂಜಸ್ಯವಾಗಲೀ ರೂಪ ಸಿದ್ಧಿಯಾಗಲೀ ಆಗುವುದಿಲ್ಲ. ಅದಕ್ಕೋಸ್ಕರ ಅವುಗಳನ್ನು ವಿಂಗಡಿಸುತ್ತಾನೆ.

(ವಚನವಿಧಾಯಕಸೂತ್ರ)

೧೨೨. ಸುಪಃ ॥ ೧-೪-೧೦೩ ॥

ಸುಪಸ್ತ್ರೀಣಿ ತ್ರೀಣಿ ವಚನಾನ್ಯೇಕಶ ಏಕವಚನದ್ವಿವಚನ ಬಹುವಚನ-ಸಂಜ್ಞಾನಿ ಸ್ಯುಃ ॥

ಏಕಪದಸೂತ್ರ. ಸುಪ್ ಪ್ರತ್ಯಾಹಾರ. ಹಿಂದೆ ಹೇಳಿದ 21ಪ್ರತ್ಯಯಗಳೂ ಇದರಿಂದ ಬೋಧಿತವಾಗುತ್ತವೆ. ಸುಪಃ ಎಂಬುದು ಷಷ್ಠ್ಯೇಕವಚನ. "ತಾನ್ಯೇಕವಚನದ್ವಿವಚನ ಬಹುವಚನಾನ್ಯೇಕಶಃ" ಸೂತ್ರದಿಂದ ಏಕವಚನದ್ವಿವಚನಬಹುವಚನಾನಿ. ಏಕಶಃ ಎಂದು ಎರಡುಪದಗಳು ಅನುವೃತ್ತವಾಗುತ್ತವೆ. ಏಕಶಃ ಅಂದರೆ ಒಂದೊಂದೂ ಎಂದರ್ಥ. "ತಿಙಸ್ತ್ರೀಣಿ ತ್ರೀಣಿ" ಸೂತ್ರದಿಂದ ತ್ರೀಣಿ ತ್ರೀಣಿ ಅನುವೃತ್ತವಾಗುತ್ತದೆ. ಇದಕ್ಕೆ ಸುಪಃ ಎಂಬುದರೊಡನೆ ಅನ್ವಯ. **ಸೂತ್ರಾರ್ಥ**—ಸುಪಿನ ಮೂರು ಮೂರುವಚನಗಳೂ ಕ್ರಮವಾಗಿ ಒಂದೊಂದೂ ಏಕವಚನ, ದ್ವಿವಚನ, ಬಹುವಚನವೆಂಬ ಸಂಜ್ಞೆಯನ್ನು ಹೊಂದುತ್ತವೆ. ಸುಪ್ ಅಂದರೆ 21 ವಿಭಕ್ತಿಪ್ರತ್ಯಯ. ಇದರಲ್ಲಿ ಮೂರು ಮೂರು ಅವಯವವುಳ್ಳ 7 ವಿಭಕ್ತಿಗಳಿವೆಯೆಂದು ಹಿಂದೆ ಹೇಳಿವೆ. ಆ ಮೂರು ಮೂರರಲ್ಲಿ ಒಂದೊಂದಕ್ಕೆ ಸೂತ್ರದಿಂದ ಸಂಜ್ಞೆ ಹೇಳುತ್ತಾನೆ. ಉದಾಹರಣೆಗಾಗಿ ಪ್ರಥಮಾದಲ್ಲಿ ಸು, ಔ, ಜಸ್ ಎಂದು ಮೂರು ಅವಯವಗಳು ಇವೆಯಷ್ಟೆ. ಅಲ್ಲಿ ಸು ಏಕವಚನ, ಔ ದ್ವಿವಚನ, ಜಸ್ ಬಹುವಚನವಾಗುತ್ತವೆ. ಹೀಗೇ ದ್ವಿತೀಯಾದಿಗಳಲ್ಲೂ ಊಹಿಸಿಕೊಳ್ಳಬೇಕು. ಪ್ರಕೃತ ರಾಮನು ಎಂಬರ್ಥವಿವಕ್ಷಾಮಾಡಿದಾಗ ಪ್ರಥಮಾವಿಭಕ್ತಿಯ ಮೂರುಪ್ರತ್ಯಯಗಳು ಬರುತ್ತವೆ. ಆಗ ಹದಿನೆಂಟು ಪ್ರತ್ಯಯಗಳನ್ನು ವ್ಯಾವೃತ್ತಿಪಡಿಸಿದಂತಾಗುತ್ತದೆ. ಸು, ಔ ಜಸ್‌ಗಳೂ ಕೂಡಾ ಏಕಕಾಲದಲ್ಲಿ ಪ್ರಪ್ತವಾದರೆ ಎರಡನ್ನು ವ್ಯಾವೃತ್ತಿಪಡಿಸಬೇಕು. ಅದಕ್ಕೋಸ್ಕರ ಈ ಪ್ರತ್ಯಯಗಳು ಯಾವ ಅರ್ಥದಲ್ಲಿ ಬರುತ್ತವೆಂದು ಮುಂದೆ ಹೇಳುತ್ತಾನೆ.

(ದ್ವಿವಚನ ಬಹುವಚನ ಪ್ರತ್ಯಯಾರ್ಥ ಹೇಳುವಸೂತ್ರ)

೧೨೩. ದ್ವ್ಯೇಕಯೋರ್ದ್ವಿವಚನೈಕವಚನೇ ॥ ೧-೪-೨೨ ॥

ದ್ವಿತ್ವೈಯೋರೇತೇ ಸ್ತಃ ॥

ದ್ವ್ಯೇಕಯೋಃ, ದ್ವಿವಚನೈಕವಚನೇ । ದ್ವಿಪದಸೂತ್ರ. ಇಲ್ಲಿ ದ್ವಿ. ಏಕ ಸೇರಿದರೆ ಮೂರಾಗುವುದರಿಂದ ಬಹುವಚನ ಬರಬೇಕಾಗುತ್ತದೆ. ಆದರೆ ದ್ವಿ ಎಂಬುದರಿಂದ ದ್ವಿತ್ವವನ್ನೂ ಏಕ ಪದದಿಂದ ಏಕತ್ವ ಸಂಖ್ಯೆಯನ್ನೂ ತೆಗೆದುಕೊಳ್ಳಬೇಕು. ದ್ವಿತ್ವ, ಏಕತ್ವ, ಎರಡೇ ಆದುದರಿಂದ ದ್ವಿವಚನ ಸಂಗತವಾಗುತ್ತದೆ. ಆದರ್ಥದಲ್ಲಿ ದ್ವಿತ್ವಸಂಖ್ಯಾ ತೋರಿದರೆ ದ್ವಿವಚನ ಪ್ರತ್ಯಯವೂ ಏಕತ್ವಸಂಖ್ಯಾ ತೋರಿದರೆ ಏಕವಚನ ಪ್ರತ್ಯಯವೂ ಬರುತ್ತದೆ. **ಸೂತ್ರಾರ್ಥ**—ಪ್ರಕೃತ ಒಬ್ಬ ರಾಮನು ಎಂಬರ್ಥವನ್ನು ವಿವಕ್ಷಾ ಮಾಡುವುದರಿಂದ ಪ್ರಥಮಾವಿಭಕ್ತಿಯ ಏಕವಚನವಾದ ಸು ಪ್ರತ್ಯಯ ಬರುತ್ತದೆ. ಆಗ ಉಳಿದ ಎರಡು ಪ್ರತ್ಯಯಗಳು ವ್ಯಾವೃತ್ತವಾಗುತ್ತವೆ. ಸು ಎಂಬಲ್ಲಿ ಉಕಾರ "ಉಪದೇಶೇಜನುನಾಸಿಕಇತ್" ಸೂತ್ರದಿಂದ ಇತ್ಸಾಗುತ್ತದೆ. "ತಸ್ಯ ಲೋಪಃ" ಎಂಬುದರಿಂದ ಆದಕ್ಕೆ ಲೋಪ. ಸ್ ಉಳಿಯುತ್ತದೆ. ರಾಮ+ಸ್ ಎಂದಿರುವಾಗ ಮುಂದಿನ ಕಾರ್ಯಕ್ಕೋಸ್ಕರ ಅವಸಾನ ಸಂಜ್ಞೆಯನ್ನು ಹೇಳುತ್ತಾನೆ.

(ಅವಸಾನಸಂಜ್ಞಾ ವಿಧಾಯಕ ಸೂತ್ರ)

೧೨೪. ವಿರಾಮೋಽವಸಾನಮ್ ॥ ೧-೪-೧೧೦ ॥

ವರ್ಣಾನಾಮಭಾವೋ೭ವಸಾನಸಂಜ್ಞಃ ಸ್ಯಾತ್ ॥ ರುತ್ವ ವಿಸರ್ಗೌ ॥ ರಾಮಃ ॥

ವಿರಾಮಃ ಅವಸಾನಮ್ ॥ ದ್ವಿಪದಸೂತ್ರ. ವಿರಮ್ಯತೇ ಅಸ್ಮಿನ್ ಇತಿ ವಿರಾಮಃ । ಯಾವ ವರ್ಣ ಉಚ್ಚರಿಸಿಮೊಡನೇ ನುಗಿಯುತ್ತದೋ ಮುಂದೆ ವರ್ಣಗಳು ಇರುವುದಿಲ್ಲವೋ ಅದು ವಿರಾಮ. ಆಗ ಕೊನೆಯ ವರ್ಣವೂ ವಿರಾಮವಾಗಬಹುದು ಮುಂದಿನ ಶೂನ್ಯವೂ ವಿರಾಮವಾಗಬಹುದು. ವೃತ್ತಿಯಲ್ಲಿ ಎರಡನೇ ಅರ್ಥವನ್ನೇ ಇಟ್ಟುಕೊಂಡು ವಿವರಿಸುತ್ತಾನೆ. **ಸೂತ್ರಾರ್ಥ**—ಮುಂದೆ ಯಾವವರ್ಣಗಳೂ ಇಲ್ಲದಿರುವುದೇ ಅವಸಾನ ಸಂಜ್ಞೆಯನ್ನು ಹೊಂದುತ್ತದೆ. ಪ್ರಕೃತ ರಾಮಸ್ ಎಂಬಲ್ಲಿ ಸ್ ಅವಸಾನ. ಅಥವಾ ಸ್ ಎಂಬುದರ ಮುಂದಿನ ಶೂನ್ಯಕ್ಕೆ ಅವಸಾನ ಸಂಜ್ಞೆ ಬರುತ್ತದೆ. ರಾಮಸ್ ಎಂಬುದು ಸುಬಂತವಾದುದರಿಂದ ಪದ. ಪದದ ಅಂತ್ಯದಲ್ಲಿ ಸಕಾರವಿರುವುದರಿಂದ "ಸಸುಜುಷೋರುಃ" ಸೂತ್ರದಿಂದ ಆದಕ್ಕೆ ರುತ್ವ. ರಾಮರ್ ಎಂದಾಗುತ್ತದೆ. ರ್ ಎಂಬುದಕ್ಕೆ ಅವಸಾನ ಪರವಾದುದರಿಂದ (ಏನೂ ಮುಂದೆ ಇಲ್ಲದಿರುವುದರಿಂದ) "ಖರವಸಾನರ್ಯೋರ್ವಿಸರ್ಜನೀಯಃ" ಸೂತ್ರದಿಂದ ವಿಸರ್ಗ. ರಾಮಃ ರಾಮನು. ಇಬ್ಬರು ರಾಮರು ಎಂದರ್ಥವಿವಕ್ಷಾಮಾಡಿದಾಗ ದ್ವಿವಚನವಾದ ಔ

ಪ್ರತ್ಯಯ ಬರುತ್ತದೆ. ಆದರೆ ರಾಮ, ರಾಮ ಎಂದು ಎರಡು ಪ್ರಾತಿಪದಿಕವನ್ನು ಹೇಳಬೇಕಾಗುತ್ತದೆ. ಈ ಪ್ರಯೋಗವನ್ನು ನಿವಾರಣೆ ಮಾಡಲು ಏಕಶೇಷ ವಿಧಾಯಕ ಸೂತ್ರವನ್ನು ಹೇಳುತ್ತಾನೆ.

(ಏಕಶೇಷವನ್ನು ಹೇಳುವ ಸೂತ್ರ)

೧೨೫. ಸರೂಪಾಣಾಮೇಕಶೇಷ ಏಕವಿಭಕ್ತೌ ॥

೧-೨-೬೪ ॥

ಏಕವಿಭಕ್ತೌ ಯಾನಿ ಸರೂಪಾಣ್ಯೇವ ದೃಷ್ಟಾನಿ ತೇಷಾಮೇಕ ಏವ ಶಿಷ್ಯತೇ॥

ಸರೂಪಾಣಾಂ, ಏಕಶೇಷಃ, ಏಕವಿಭಕ್ತೌ ॥ ತ್ರಿಪದಸೂತ್ರ. ಸಮಾನಂ ರೂಪಂ ಯೇಷಾಂ ತಾನಿ ಸರೂಪಾಣಿ, ತೇಷಾಂ ಸರೂಪಾಣಾಮ್. ಶಿಷ್ಯತೇ ಇತಿ ಶೇಷಃ. ಏಕಶ್ಚಾಸೌ ಶೇಷಶ್ಚ ಏಕಶೇಷಃ. ಏಕಸ್ಯಾಂ ವಿಭಕ್ತೌ ಏಕವಿಭಕ್ತೌ. ವೃದ್ಧೋ ಯೂನಾ– ” ಸೂತ್ರದಿಂದ “ ಏವ ” ಪದವು ಅನುವೃತ್ತವಾಗುತ್ತದೆ. ಒಂದು ವಿಭಕ್ತಿಪದದಲ್ಲಿರುವಾಗ ಸಮಾನವಾದರೂಪವುಳ್ಳವುಗಳೇ ಅನೇಕವಿದ್ದರೆ ಅವುಗಳಮಧ್ಯದಲ್ಲಿ ಒಂದೇರೂಪ ಉಳಿಯುತ್ತದೆ. ಉಳಿದವೆಲ್ಲವೂ ಲೋಪವಾಗುತ್ತವೆಂದು ಈಪದಗಳಿಂದ ತಿಳಿಯುತ್ತದೆ. **ಸೂತ್ರಾರ್ಥ**—ಒಂದುವಿಭಕ್ತಿಪರವಾದಾಗ ಯಾವ ಅನೇಕರೂಪಗಳು ಸಮಾನ ಅನುಪೂರ್ವಿಯಿಂದಲೇ ಇರುತ್ತವೆಯೋ ಅವುಗಳಲ್ಲಿ ಒಂದೇ ಉಳಿಯುತ್ತದೆ. ಪ್ರಕೃತ ಔ ಎಂಬ ವಿಭಕ್ತಿಪರವಾದಾಗ ರಾಮ ರಾಮವೆಂಬ ಸಮಾನರೂಪವುಳ್ಳ ಎರಡು ಪದಗಳು ದೃಷ್ಟವಾಗಿವೆ. ಅವುಗಳಲ್ಲಿ ಒಂದೇ ರಾಮವೆಂಬ ರೂಪಉಳಿಯುತ್ತದೆ. ಈ ಉಳಿದಿರುವ ಶಬ್ದವು ಲೋಪವಾದುದರ ಅರ್ಥವನ್ನೂ ಹೇಳುತ್ತದೆ. “ ಯಃ ಶಿಷ್ಯತೇ ಸ ಲುಪ್ಯಮಾನಾರ್ಥಾಭಿಧಾಯೀ ” ಲೋಪವಾದುದರ ಅರ್ಥವನ್ನು ಉಳಿದದ್ದು ಹೇಳುತ್ತದೆಂದು ಆಕರದಲ್ಲಿ ಹೇಳಿವೆ, ಪ್ರಕೃತ ರಾಮವೆಂದು ಒಂದೇಪದ ಉಳಿದಿರೆ ರಾಮ+ಔ ಎಂದಾಗುತ್ತದೆ. ವಾಸ್ತವವಾಗಿ ಇಲ್ಲಿ ಅಕಾರಕ್ಕೆ ಏಚ್ ಪರವಾದುದರಿಂದ ವೃದ್ಧಿ ಬರಬೇಕು. ಆದರೆ ಕ್ರಮಪ್ರಾಪ್ತವಾಗುವ ಕೆಲವು ಕಾರ್ಯಗಳನ್ನು ಆಶಂಕಿಸುತ್ತಾನೆ.

(ಪೂರ್ವಸವರ್ಣದೀರ್ಘಹೇಳುವಸೂತ್ರ)

೧೨೬ ಪ್ರಥಮಯೋಃ ಪೂರ್ವಸವರ್ಣಃ ॥ ೬-೧-೧೦೨ ॥

ಅಕಃ ಪ್ರಥಮಾದ್ವಿತೀಯಯೋರಚಿ ಪೂರ್ವಸವರ್ಣದೀರ್ಘ ಏಕಾದೇಶಃ ಸ್ಯಾತ್ ಇತಿ ಪ್ರಾಪ್ತೇ॥

ದ್ವಿಪದಸೂತ್ರ. “ ಏಕಃ ಪೂರ್ವಪರಯೋಃ ” ಅಧಿಕಾರ. “ ಅಕಃ ಸವರ್ಣೇ ” ಸೂತ್ರದಿಂದ “ ಅಕಃ ” “ ಇಕೋಯಣಚಿ ” ಸೂತ್ರದಿಂದ “ ಅಚಿ ” ಅನುವೃತ್ತವಾಗುತ್ತವೆ. ಇಲ್ಲಿ ಪ್ರಥಮಾ ಶಬ್ದವು ಪ್ರಥಮಾ ದ್ವಿತೀಯಾ ಎರಡು ವಿಭಕ್ತಿಯನ್ನೂ ಹೇಳುತ್ತದೆ. ಪ್ರಥಮಯೋಃ ಅವಯವಾರ್ಥದಲ್ಲಿ ಷಷ್ಠೀ. ಅಚಿನಲ್ಲಿ ಭಕ್ತಿಯ ಅಜ್ ಪರವಾದಾಗ ಪೂರ್ವ ಸವರ್ಣಗಳ ಸ್ಥಾನಕ್ಕೆ ಪೂರ್ವಸವರ್ಣ ದೀರ್ಘವು ಏಕಾದೇಶವಾಗಿ ಬರುತ್ತದೆ. ಪೂರ್ವದ ಅಕ್ ವರ್ಣಕ್ಕೂ ಪರದ ಅಚ್ ವರ್ಣಕ್ಕೂ ಒಂದೇ ಆದ ಪೂರ್ವದ ಸವರ್ಣದೀರ್ಘ ಬರುತ್ತದೆ. ಪ್ರಕೃತ ರಾಮೌ ಎಂದಿರುವಾಗ ಅಕ್ ಮಕಾರದ ಮೇಲಿರುವ ಅಕಾರ. ಇದಕ್ಕೆ ಪ್ರಥಮಾವಿಭಕ್ತಿಯ ಅಚ್ಚಾದ ಔ ಪರವಾಗಿದೆ. ಆದುದರಿಂದ ಅಕಾರ ಔಕಾರಗಳಿಗೆ ಒಟ್ಟಿಗೆ ಪೂರ್ವದ ಸವರ್ಣವಾದ ದೀರ್ಘವೆಂದರೆ ಆಕಾರವು ಪ್ರಾಪ್ತವಾಗಬೇಕು. ಆದರೆ ಇದಕ್ಕೆ ಅಪವಾದ ಸೂತ್ರವನ್ನು ಹೇಳುತ್ತಾನೆ.

(ಪೂರ್ವಸವರ್ಣ ನಿಷೇಧ ಹೇಳುವ ಸೂತ್ರ)

೧೨೭. ನಾದಿಚಿ ॥ ೬-೧-೧೦೪

ಆದಿಚಿ ನ ಪೂರ್ವಸವರ್ಣದೀರ್ಘಃ ॥ ವೃದ್ಧಿರೇಚಿ । ರಾಮೌ ॥

ನ, ಆತ್, ಇಚಿ ॥ ತ್ರಿಪದಸೂತ್ರ. ‘ಪೂರ್ವಸವರ್ಣಃ’, ‘ದೀರ್ಘಃ’ ಹಿಂದಿನ ಸೂತ್ರದಿಂದ ಅನುವೃತ್ತವಾಗುತ್ತವೆ. ಆತ್ ಪಂಚಮೀ. **ಸೂತ್ರಾರ್ಥ**—ಅಕಾರಕ್ಕೆ ಇಚ್ ಪರವಾದರೆ ಪೂರ್ವಸವರ್ಣದೀರ್ಘವು ಬರುವುದಿಲ್ಲ. ಇಚ್ ಪ್ರತ್ಯಾಹಾರ. ಅಕಾರ ಬಿಟ್ಟು ಉಳಿದ ಸ್ವರಗಳು. ಪ್ರಕೃತ ಅಕಾರಕ್ಕೆ ಔಕಾರರೂಪ ಇಚ್ ಪರವಾದುದರಿಂದ ಪೂರ್ವಸವರ್ಣದೀರ್ಘ ಬರುವುದಿಲ್ಲ. ಆಗ ಸಾಮಾನ್ಯಸೂತ್ರವಾದ ‘ವೃದ್ಧಿರೇಚಿ’ ಎಂಬ ಸೂತ್ರದಿಂದ ಅಕಾರಕ್ಕೆ ಏಚ್ ಪರವಾದುದರಿಂದ ಔಕಾರರೂಪ ವೃದ್ಧಿಯು ಏಕಾದೇಶವಾಗಿ ಬರುತ್ತದೆ. ರಾಮೌ. ಇಬ್ಬರು ರಾಮರು.

ಒಬ್ಬನು ಎಂದು ವಿವಕ್ಷಾಮಾಡಿದಾಗ ಏಕವಚನ ಪ್ರತ್ಯಯವಾದ ಸು ಬರುತ್ತದೆಂದೂ ಇಬ್ಬರು ಎಂದು ವಿವಕ್ಷಾಮಾಡಿದಾಗ ದ್ವಿವಚನ ಔ ಬರುತ್ತದೆಂದು ತಿಳಿಸಿದ್ದಾಯಿತು. ಈಗ ಮೂರು ರಾಮರು ಅಥವಾ ಬಹುರಾಮರು ಎಂದು ವಿವಕ್ಷಾಮಾಡಿದಾಗ ಬರುವ ಪ್ರತ್ಯಯವನ್ನು ಹೇಳುತ್ತಾನೆ.

(ಬಹುವಚನ ಪ್ರತ್ಯಯ ವಿಧಾಯಕ ಸೂತ್ರ)

೧೨೮. ಬಹುಷು ಬಹುವಚನಮ್ ॥ ೧-೪-೨೧ ॥

ಬಹುತ್ವವಿವಕ್ಷಾಯಾಂ ಬಹುವಚನಂ ಸ್ಯಾತ್ ॥

ದ್ವಿಪದಸೂತ್ರ. ಇಲ್ಲಿ ಬಹು ಎಂಬುದು ಬಹುತ್ವಸಂಖ್ಯಾ ವಾಚಕ. ಪದಾರ್ಥದಲ್ಲಿರುವ ಬಹುತ್ವಸಂಖ್ಯಾ ವಿವಕ್ಷೆ ಮಾಡಿದಾಗ ಬಹುವಚನ ಪ್ರತ್ಯಯ ಬರುತ್ತದೆ. ಬಹುತ್ವಸಂಖ್ಯಾ ಒಂದಾದುದರಿಂದ ಬಹುಷು ಎಂದು ಬಹುವಚನ ಹೇಳಿರುವುದೇ ಹೇಗೆ ಎಂಬ ಶಂಕೆ ಬರುತ್ತದೆ. ಬಹುತ್ವಸಂಖ್ಯೆಯುಳ್ಳ ದ್ರವ್ಯದಲ್ಲಿ ಅನೇಕ ಅವಯವಗಳಿವೆಯಷ್ಟೆ. ಆ ಅವಯವಗಳ ವಿವಕ್ಷೆಯಿಂದ ಬಹುಷು ಎಂದು ಬಹುವಚನ ಹೇಳಿದ್ದು. ಪ್ರಕೃತ ಬಹುರಾಮರು ಎಂದು ವಿವಕ್ಷೆನಮಾಡಿದುದರಿಂದ ಪ್ರಥಮಾಬಹುವಚನವಾದ ಜಸ್ ಪ್ರತ್ಯಯ ಬರುತ್ತದೆ. ಹಿಂದಿನಂತೆ ಎಷ್ಟು ರಾಮರಿರುವರೋ ಅಷ್ಟುಸಲ ರಾಮ ಪ್ರಕೃತಿಯನ್ನು ಹೇಳಬೇಕಾದಾಗ " ಸರೂಪಾಣಾಮೇಕಶೇಷ ಏಕವಿಭಕ್ತೌ " ಎಂಬುದರಿಂದ ಒಂದೇ ರೂಪ ಉಳಿಯುತ್ತದೆ. ಹೀಗೆ ಮುಂದೆ ಪ್ರತಿಯೊಂದು ದ್ವಿವಚನ ಬಹುವಚನಗಳಲ್ಲಿಯೂ ಈ ಸೂತ್ರಕಾರ್ಯವನ್ನು ಮಾಡಿಕೊಳ್ಳಬೇಕು.

ಪ್ರಕೃತ ರಾಮ+ಜಸ್ ಎಂದಿರುವಾಗ ಪ್ರತ್ಯಯದಲ್ಲಿ ಉಳಿಯುವ ವರ್ಣನಿಷ್ಠ ರ್ಫೆಗೋಸ್ತೇರ ಲೋಪ ಹೇಳುವ ಸೂತ್ರವನ್ನು ನಿರ್ದೇಶಿಸುತ್ತಾನೆ.

(ಪ್ರತ್ಯಯದಲ್ಲಿ ಇತ್ತನ್ನು ಹೇಳುವ ಸೂತ್ರ)

೧೫೯. ಚುಟೂ ॥ ೧-೩-೭ ॥

ಪ್ರತ್ಯಯಾದ್ಯಾ ಚುಟೂ ಇತೌ ಸ್ತಃ ॥

ಏಕಪದಸೂತ್ರ. " ಉಪದೇಶೇಜನುನಾಸಿಕ ಇತ್ " ಸೂತ್ರದಿಂದ " ಇತ್ " " ಷಃ ಪ್ರತ್ಯಯಸ್ಯ " ಸೂತ್ರದಿಂದ " ಪ್ರತ್ಯಯಸ್ಯ " " ಆದಿರ್ಞಿಟುಡವಃ " ಸೂತ್ರದಿಂದ " ಆದಿಃ " ಅನುವೃತ್ತವಾಗುತ್ತವೆ, " ಆದಿಃ " ಎಂಬುದನ್ನು ದ್ವಿವಚನಾಂತವಾಗಿ ವಿಪರಿಣಾಮ ಮಾಡಿಕೊಳ್ಳಬೇಕು. ಚುಶ್ಚ ಟುಶ್ಚ ಚುಟೂ. ಉದಿತ್ವಾದುದರಿಂದ ಚವರ್ಗಟವರ್ಗಗಳಿಂದರ್ಥ. **ಸೂತ್ರಾರ್ಥ**—ಪ್ರತ್ಯಯದ ಆದಿಯಲ್ಲಿರುವ ಚವರ್ಗ ಟವರ್ಗಗಳು ಇತ್ ಸಂಜ್ಞೆಯನ್ನು ಹೊಂದುತ್ತವೆ. ಜಸ್ ಪ್ರತ್ಯಯದ ಆದಿಯಲ್ಲಿ ಜಕಾರವಿದೆ. ಚವರ್ಗವಾದುದರಿಂದ ಅದಕ್ಕೆ ಇತ್ ಸಂಜ್ಞೆ ಬಂದಲ್ಲಿ " ತಸ್ಯಲೋಪಃ " ಸೂತ್ರದಿಂದ ಅದಕ್ಕೆ ಲೋಪ. ಅಸ್ ಉಳಿಯುತ್ತದೆ. ಅಸ್ ಎಂಬಲ್ಲಿ "ಹಲಂತ್ಯಮ್" ಸೂತ್ರದಿಂದ ಕೊನೆಯ ಸಕಾರಕ್ಕೆ ಇತ್ ಸಂಜ್ಞಾ ಬಂದು ಲೋಪ ಪ್ರಾಪ್ತವಾದ ಅದಕ್ಕೆ ಅಪವಾದವನ್ನು ಹೇಳುತ್ತಾನೆ. ಅಪವಾದ ಸೂತ್ರವು ವಿಭಕ್ತಿ ಎಂಬ ಪದದಿಂದ ಕೂಡಿರುವುದರಿಂದ ಮೊದಲು ವಿಭಕ್ತಿ ಸಂಜ್ಞೆಯನ್ನು ಹೇಳುತ್ತಾನೆ.

(ವಿಭಕ್ತಿ ಸಂಜ್ಞಾ ವಿಧಾಯಕಸೂತ್ರ)

೧೫೦. ವಿಭಕ್ತಿಶ್ಚ ॥ ೧-೪-೧೦೪ ॥

ಸುಪ್ತಿಙೌ ವಿಭಕ್ತಿಸಂಜ್ಞೌ ಸ್ತಃ ॥

ವಿಭಕ್ತಿಃ, ಚ, ॥ ದ್ವಿಪದಸೂತ್ರ. " ಸುಪಃ " " ತಿಙಸ್ತ್ರೀಣಿ " " ತಿಙಃ " ಎಂದೂ ಅನುವೃತ್ತವಾಗುತ್ತವೆ. **ಸೂತ್ರಾರ್ಥ**—ಸುಪ್ ತಿಙ್ ಪ್ರತ್ಯಯಗಳು ವಿಭಕ್ತಿ ಸಂಜ್ಞೆಯನ್ನು ಹೊಂದುತ್ತವೆ. ಸುಪ್ ಅಂದರೆ ಹಿಂದೆ ಹೇಳಿದ 21 ಪ್ರತ್ಯಯ ತಿಙ್ ಅಂದರೆ ಧಾತುವಿನ ಮೇಲೆ ಬರುವ 18 ಪ್ರತ್ಯಯಗಳು. ಇವೆರಡಕ್ಕೂ ವಿಭಕ್ತಿ ಎಂದು ಹೆಸರು. ಪ್ರಕೃತ ಜಸ್ ಪ್ರತ್ಯಯ ಸುಪ್ ಆದುದರಿಂದ ಅದಕ್ಕೆ ವಿಭಕ್ತಿ ಸಂಜ್ಞೆ ಬರುತ್ತದೆ.

(ವಿಭಕ್ತಿಯಲ್ಲಿ ಇತ್‌ಸಂಜ್ಞಾ ನಿಷೇಧ ಹೇಳುವ ಸೂತ್ರ)

೧೫೧. ನ ವಿಭಕ್ತೌ ತುಸ್ಮಾಃ॥ ೧-೩-೪ ॥

ವಿಭಕ್ತಿಸ್ಥಾಸ್ತವರ್ಗಸಮಾ ನೇತಃ । ಇತಿ ಸ್ಯ ನೇತ್ವಮ್ ॥ ರಾಮಾಃ॥

ತ್ರಿಪದಸೂತ್ರ. ತುಶ್ಚ ಸ್ಚ ಮಶ್ಚ ತುಸ್ಮಾಃ। ತು ಯಂಬಲ್ಲಿ ಉದಿತ್ವಾದುದರಿಂದ ತವರ್ಗ ತೆಗೆದುಕೊಳ್ಳಬೇಕು. ಮಕಾರದಲ್ಲಿ ಅಕಾರ ಉಚ್ಚಾರಣಾರ್ಥ. " ಉಪದೇಶೇಜನುನಾಸಿಕ ಇತ್ " ಸೂತ್ರದಿಂದ " ಇತ್ " ಅನುವೃತ್ತವಾಗಿ ಬಹುವಚನಾಂತವಾಗಿ ವಿಪರಿಣತವಾಗುತ್ತವೆ. **ಸೂತ್ರಾರ್ಥ**—ವಿಭಕ್ತಿಯಲ್ಲಿರುವ ತವರ್ಗ ಸಕಾರಮಕಾರಗಳು ಇತ್ ಸಂಜ್ಞೆಯನ್ನು ಹೊಂದುವುದಿಲ್ಲ. ಪ್ರಕೃತ ಜಸ್‌ವಿಭಕ್ತಿಯಲ್ಲಿ ಸಕಾರವಿರುವುದರಿಂದ ಅದಕ್ಕೆ ಇತ್‌ಸಂಜ್ಞೆ ಬರುವುದಿಲ್ಲ. ರಾಮ+ಅಸ್ ಎಂದಿರುವಾಗ ಅಕ್ಕಿಗೆ ಪ್ರಥಮಾವಿಭಕ್ತಿಯ ಅಚ್‌ಪರವಾದುದರಿಂದ " ಪ್ರಥಮಯೋಃ ಪೂರ್ವಸವರ್ಣಃ " ಸೂತ್ರದಿಂದ ಪೂರ್ವಸವರ್ಣದೀರ್ಘ. ರಾಮಾಸ್ ಎಂದು ರೂಪವಾದಾಗ ಪದಾಂತದಲ್ಲಿ ಸಕಾರವಿರುವುದರಿಂದ " ಸಸಜುಷೋರುಃ " ಸೂತ್ರದಿಂದ ಅದಕ್ಕೆ ರುತ್ವ. ಅಸಸಾನವಿರುವುದರಿಂದ ಅದಕ್ಕೆ ವಿಸರ್ಗ, ರಾಮಾರ್, ರಾಮಾಃ ರೂಪವಾಗುತ್ತದೆ. ಬಹುಜನರಾಮರು.

ರಾಮ+ಅಸ್ ಎಂದಿರುವಾಗ " ಅಕಃಸವರ್ಣೇದೀರ್ಘಃ " ಸೂತ್ರದಿಂದ ಸವರ್ಣದೀರ್ಘಸಂಧಿಮಾಡಿದರೂ ಪ್ರಕೃತರೂಪವಾಗುತ್ತದೆ. ಆದರೆ ಅದಕ್ಕೆ ಅಪವಾದವಾಗಿ " ಅತೋ ಗುಣೇ " ಎಂಬ ಸೂತ್ರವು ಪರರೂಪ ಏಕಾದೇಶವನ್ನು ಹೇಳು

ವುದರಿಂದ ಅದಕ್ಕೆ ಅಪವಾದವಾಗಿ ಹಿಂದೆ ಹೇಳಿದ ಪೂರ್ವಸವರ್ಣದೀರ್ಘಬಂದು ಇಷ್ಟ ರೂಪವಾಗಿಪೆ.

(ಸಂಬೋಧನಾ ವಿಭಕ್ತಿ.)

ಸಂಬೋಧನಾ ತಿಳಿಸುವಾಗ ಪ್ರಾತಿಪದಿಕದ ಹಿಂದೆ ಹೇ ಎಂದು ಸೇರಿಸುವುದು ಪದ್ಧತಿಯಾಗಿದೆ. ಇದರಿಂದ ಸ್ಪುಟವಾಗಿ ಸಂಬೋಧನೆಯಂದು ತಿಳಿಯುತ್ತದೆ. ಇಲ್ಲಿ ಹಿಂದೆ ಹೇಳಿದ ಸು, ಔ, ಜಸ್ ಎಂದು ಮೂರು ಪ್ರತ್ಯಯಗಳು ಬರುತ್ತವೆ. ಅವುಗಳಲ್ಲಿ ಏಕವಚನಕ್ಕೆ ಕಾರ್ಯವಿಶೇಷಕ್ಕೋಸ್ಕರ ವಿಶೇಷಸಂಜ್ಞೆಯನ್ನು ಹೇಳುತ್ತಾನೆ.

(ಸಂಬುದ್ಧಿಸಂಜ್ಞಾವಿಧಾಯಕಸೂತ್ರ)

೧೩೨. ಏಕವಚನಂ ಸಂಬುದ್ಧಿಃ ॥ ೨-೩-೪೯ ॥

ಸಂಬೋಧನೇ ಪ್ರಥಮಾಯಾ ಏಕವಚನಂ ಸಂಬುದ್ಧಿಸಂಜ್ಞಂ ಸ್ಯಾತ್ ॥

ದ್ವಿಪದ ಸೂತ್ರ. " ಪ್ರಾತಿಪದಿಕಾರ್ಥ ಲಿಂಗ–" ಸೂತ್ರದಿಂದ ಅನುವೃತ್ತವಾದ ಪ್ರಥಮಾ ಎಂಬುದು ಷಷ್ಠ್ಯಂತವಾಗಿ ವಿಪರಿಣತವಾಗುತ್ತದೆ. " ಸಂಬೋಧನೇ ಚ " ಸೂತ್ರದಿಂದ " ಸಂಬೋಧನೇ " ಪದವು ಅನುವೃತ್ತವಾಗುತ್ತದೆ. **ಸೂತ್ರಾರ್ಥ**—ಸಂಬೋಧನೆಯಲ್ಲಿರುವ ಪ್ರಥಮಾವಿಭಕ್ತಿಯ ಏಕವಚನವು ಸಂಬುದ್ಧಿಯಂಬ ಸಂಜ್ಞೆಯನ್ನು ಹೊಂದುತ್ತದೆ. ಹೇ ರಾಮಸ್ ಎಂದಿರುವಾಗ ಸ್ ವಿಭಕ್ತಿಯು ಸಂಬುದ್ಧಿಯಾಗುತ್ತದೆ. ಇಲ್ಲಿ ಕಾರ್ಯವಿಶೇಷವನ್ನು ಹೇಳಲು " ಅಂಗ " ಸಂಜ್ಞೆಯನ್ನು ಹೇಳುತ್ತಾನೆ.

(ಅಂಗಸಂಜ್ಞಾವಿಧಾಯಕಸೂತ್ರ)

೧೩೩. ಯಸ್ಮಾತ್ಪ್ರತ್ಯಯವಿಧಿಸ್ತದಾದಿ ಪ್ರತ್ಯಯೇಽಙ್ಗಮ್ ॥ ೧-೪-೧೩ ॥

ಯಃ ಪ್ರತ್ಯಯೋ ಯಸ್ಮಾತ್ ಕ್ರಿಯತೇ ತದಾದಿ ಶಬ್ದಸ್ವರೂಪಂ ತಸ್ಮಿನ್ನಙ್ಗಂ ಸ್ಯಾತ್ ॥

ಯಸ್ಮಾತ್, ಪ್ರತ್ಯಯವಿಧಿಃ, ತದಾದಿ, ಪ್ರತ್ಯಯೇ, ಅಂಗಮ್ ॥ ಪಂಚಪದ ಸೂತ್ರ. ಪ್ರತ್ಯಯಸ್ಯ ವಿಧಿಃ ಪ್ರತ್ಯಯವಿಧಿಃ. ತತ್ (ಪ್ರಕೃತಿರೂಪಂ) ಆದಿ ಯಸ್ಯ

ತತ್ ತದಾದಿ. ಶಬ್ದಸ್ವರೂಪವೆಂದು ವಿಶೇಷ್ಯವು ಅಧ್ಯಾಹೃತವಾಗುತ್ತದೆ. **ಸೂತ್ರಾರ್ಥ.** ಯಾವ ಪ್ರತ್ಯಯವು ಯಾವ ಒಂದು ಪ್ರಕೃತಿವಿಶೇಷದಮೇಲೆ ವಿಹಿತವಾಗುವುದೋ ಆ ಪ್ರತ್ಯಯ ಪರದಲ್ಲಿರುವಾಗ ಆ ಪ್ರಕೃತಿಯೇ ಆದಿಯಾಗಿರುವ ಶಬ್ದಸ್ವರೂಪವು " ಅಂಗ " ಎಂಬ ಸಂಜ್ಞೆಯನ್ನು ಹೊಂದುತ್ತದೆ. ಭೂ+ತಿ ಯಂದಿರುವಾಗ ಮುಖ್ಯ ಶಪ್ ವಿಕರಣಪ್ರತ್ಯಯ ಬರುತ್ತದೆ. ಹೇಳುತ್ತಾನೆ. ಭೂ ಧಾತುವಿಗೆ ತಿ ಪ್ರತ್ಯಯ ಶಪ್‌ಪ್ರತ್ಯಯದಲ್ಲಿ ಅ ಮಾತ್ರ ಉಳಿಯುತ್ತದೆ. ಭೂ + ಅ + ತಿಯಂದಿರುವಾಗ ಸೂತ್ರಾಂತರದಿಂದ ಊಕಾರಕ್ಕೆ ಗುಣ. (ಓ) ಅದಕ್ಕೆ ಅಚ್‌ಪರವಾದುದರಿಂದ ಅವಾದೇಶ. ಭವ+ತಿ ಇಲ್ಲಿ ಪ್ರತ್ಯಯ ತಿಪ್. ಇದು ಭೂಯಂಬ ಪ್ರಕೃತಿವಿಶೇಷದ ಮೇಲೆ ವಿಹಿತವಾಗಿದೆ. ಆಗ ತಿಪರವಾಗಿರುವಾಗ ಭೂ ಎಂಬುವೇ ಆದಿಯಾಗಿರುವುದು ಭವ ಆಗುತ್ತದೆ. " ಭವ " ಎಂಬುದು ಅಂಗಸಂಜ್ಞೆಯನ್ನು ಹೊಂದುತ್ತದೆ. ಪ್ರಕೃತ ರಾಮವೆಂಬ ಪ್ರಕೃತಿಯಮೇಲೆ ಸು ಪ್ರತ್ಯಯ ಹೇಳಿದೆ. ರಾಮವೆಂಬುದೇ ಆದಿಯಾಗಿರುವ ಶಬ್ದವೆಂದರೆ ರಾಮವೇ. ಇಲ್ಲಿ ಅದನ್ನು ಬಿಟ್ಟು ಬೇರೆ ಇಲ್ಲವಾದುದರಿಂದ ಆದಿಯೂ ಅದೇ. ಆದಿಯಾಗಿರುವ ಶಬ್ದವೂ ಅದೇ. ಆದುದರಿಂದ ರಾಮವೆಂಬುದಕ್ಕೆ ಅಂಗಸಂಜ್ಞಾ ಬರುತ್ತದೆ. ಅಂಗಸಂಜ್ಞೆಗೆ ಉಪಯೋಗವನ್ನು ಮುಂದಿನಸೂತ್ರದಲ್ಲಿ ಹೇಳುತ್ತಾನೆ.

(ಸಂಬುದ್ಧಿಗೆ ಲೋಪಹೇಳುವ ಸೂತ್ರ)

೧೩೪. ಏಜ್ ಹ್ರಸ್ವಾತ್ಸಂಬುದ್ಧೇಃ ॥ ೬ ೧-೬೯ ॥

ಏಜನ್ತಾದ್ಧ್ರಸ್ವಾನ್ತಾಚ್ಚಾಙ್ಗಾದ್ಧಲ್ಲುಪ್ಯತೇಸಂಬುದ್ಧೇಶ್ಚೇತ್ ॥
ಹೇ ರಾಮ ಹೇ ರಾಮಾ ಹೇ ರಾಮೂ ॥

ಏಜ್‌ಹ್ರಸ್ವಾತ್, ಸಂಬುದ್ಧೇಃ ॥ ದ್ವಿಪದಸೂತ್ರ. " ಲೋಪೋವ್ಯೋರ್ವಲಿ " ಸೂತ್ರದಿಂದ " ಲೋಪಃ " ಹಲ್‌ಜ್ಯಾಭ್ಯೋ.....ಹಲ್ " ಸೂತ್ರದಿಂದ " ಹಲ್ " ಪದವೂ ಅನುವೃತ್ತವಾಗುತ್ತವೆ. ಹಲ್ ಎಂಬುದಕ್ಕೆ ಲೋಪಃ ಎಂಬಲ್ಲಿ ಅನ್ವಯ. ಲುಪ್ಯತೇ ಇತಿ ಲೋಪಃ ಲೋಪಹೊಂದುವುದು ಎಂದರ್ಥ. ಸಂಬುದ್ಧಿ ಸುಪ್ರತ್ಯಯ. ಇದರಿಂದ ಅಂಗವು ಆಕ್ಷಿಪ್ತವಾಗುತ್ತದೆ. ಅಂಗಾಧಿಕಾರ ಆರನೇಅಧ್ಯಾಯದ ನಾಲ್ಕನೇ ಪಾದದಿಂದ ಆರಂಭವಾಗುತ್ತದೆ. ಆದುದರಿಂದ ಅದು ಇಲ್ಲಿ ಬರುವುದಿಲ್ಲ. ಆಕ್ಷಿಪ್ತವಾದ ಅಂಗಕ್ಕೆ ಏಜ್‌ಹ್ರಸ್ವಗಳು ವಿಶೇಷಣ, ವಿಶೇಷಣವಾದುದರಿಂದ ತದಂತ ಗ್ರಹಣ. ಏಜಂತವಾದ, ಹ್ರಸ್ವಾಂತವಾದ ಅಂಗ ವೆಂದಾಗುತ್ತದೆ. ಸಂಬುದ್ಧೇಃ ಅವಯವಷಷ್ಠ್ಯರ್ಥೇ. ಹಲಿನಲ್ಲಿ ಅನ್ವಯ. **ಸೂತ್ರಾರ್ಥ.**—ಏಜಂತವಾದ, ಹ್ರಸ್ವಾಂತವಾದ ಅಂಗದ ಪರದಲ್ಲಿರುವ ಹಲ್ (ವ್ಯಂಜನ) ಲೋಪಹೊಂದುತ್ತದೆ. ಅದು

ಸಂಬುದ್ಧಿಯ ಅವಯವವಾಗಿದ್ದರೆ ಮಾತ್ರ ಲೋಪ. ಪ್ರಕೃತ ರಾಮಪೆಂಬುದು ಹ್ರಸ್ವಾಂತವಾದ ಅಂಗ. ಅದರ ಪರದಲ್ಲಿ ಸಂಬುದ್ಧಿಯ ಅವಯವವಾದ ಸ್ ಎಂಬ ಹಲ್ ಇದೆ. ಅದಕ್ಕೆ ಲೋಪಬಂದರೆ ಹೇ ರಾಮ ಎಂದು ರೂಪವಾಗುತ್ತದೆ. (ಎಲೋ ರಾಮನೇ) ಹೇರಾಮ+ಔ ಎಂದು ದ್ವಿವಚನ ಪ್ರತ್ಯಯ ವಿವಕ್ಷಾಮಾಡಿದಾಗ ಹಿಂದಿನಂತೇ ಮೊದಲು ವೃದ್ಧಿ ಬಂದರೆ ಅದಕ್ಕೆ ಅಪವಾದವಾಗಿ " ಪ್ರಥಮಯೋಃ ಪೂರ್ವಸವರ್ಣಃ " ಸೂತ್ರದಿಂದ ಪೂರ್ವಸವರ್ಣದೀರ್ಘಪ್ರಾಪ್ತವಾಗುತ್ತದೆ. ಅದಕ್ಕೆ ಅಪವಾದವಾಗಿ " ನಾದಿಚಿ " ಸೂತ್ರದಿಂದ ದೀರ್ಘಕ್ಕೆ ನಿಷೇಧ. ಆಮೇಲೆ ಹಿಂದೆ ಹೇಳಿದ " ವೃದ್ಧಿರೇಚಿ " ಸೂತ್ರದಿಂದ ವೃದ್ಧಿ. ಹೇರಾಮೌ ಎಂದಾಗುತ್ತದೆ. (ಎಲೋ ಇಬ್ಬರುರಾಮರಿರಾ). ಹೇ ರಾಮ+ಜಸ್ ಎಂದಿರುವಾಗ ಬಹುವಚನದಲ್ಲಿ ಪ್ರಥಮಾಬಹುವಚನದಂತೇ ಕಾರ್ಯಗಳು ಬಂದರೆ ಹೇರಾಮಾಃ ಎಂದಾಗುತ್ತದೆ. (ಎಲೋ ಬಹುಜನರಾಮರಿರಾ)

॥ಅಥ ದ್ವಿತೀಯಾ ವಿಭಕ್ತಿಃ ॥

ಅಮ್, ಔಟ್, ಶಸ್, ಈ ಮೂರು ದ್ವಿತೀಯಾವಿಭಕ್ತಿ. ನಾಮಪದಕ್ಕೆ " ಅನ್ನು " ಸೇರಿಸಿದರೆ ಕನ್ನಡದಲ್ಲಿ ದ್ವಿತೀಯಾರ್ಥವಾಗುತ್ತದೆ. ಏಕತ್ವವಿವಕ್ಷಾ ಮಾಡಿದಾಗ ಏಕವಚನ ಅಮ್ ಪ್ರತ್ಯಯ. ಮಕಾರ ಅಂತದಲ್ಲಿದ್ದರೂ ವಿಭಕ್ತಿ ಸಂಬಂಧವಾದುದರಿಂದ " ನ ವಿಭಕ್ತೌ ತುಸ್ಮಾಃ " ಎಂಬುದರಿಂದ ಇತ್ ಸಂಜ್ಞೆಯನ್ನು ಹೊಂದುವುದಿಲ್ಲ. ರಾಮ+ಅಮ್ ಎಂದಿರುವಾಗ ಮೊದಲು ಅಕಾರಕ್ಕೆ ಅಕಾರಪರವಾದುದರಿಂದ " ಅಕಃ ಸವರ್ಣೇದೀರ್ಘಃ " ಎಂಬುದರಿಂದ ಸವರ್ಣದೀರ್ಘ ಪ್ರಾಪವಾಗುತ್ತದೆ. ಅದಕ್ಕೆ ಬಾಧಕವಾಗಿ " ಅತೋಗುಣೇ " ಸೂತ್ರದಿಂದ ಪರರೂಪ ಬಂದರೆ ಅದಕ್ಕೆ ಅಪವಾದವಾಗಿ " ಪ್ರಥಮಯೋಃ ಪೂರ್ವಸವರ್ಣಃ " ಸೂತ್ರದಿಂದ ಪೂರ್ವಸವರ್ಣದೀರ್ಘ ಪ್ರಾಪ್ತವಾದರೆ ಅದಕ್ಕೂ ಬಾಧಕವಾಗಿ ಪೂರ್ವರೂಪವನ್ನು ಹೇಳುತ್ತಾನೆ.

(ಪೂರ್ವರೂಪ ಹೇಳುವ ಸೂತ್ರ)

೧೩೫. ಅಮಿ ಪೂರ್ವಃ ॥ ೬-೧-೧೦೭ ॥

ಅಕೋೞಮ್ಯಚಿ ಪೂರ್ವರೂಪಮೇಕಾದೇಶಃ ಸ್ಯಾತ್ । ರಾಮಮ್ । ರಾಮೌ ॥

ಅಮಿ, ಪೂರ್ವಃ, ॥ ದ್ವಿಪದ ಸೂತ್ರ. ।" ಅಕಃ ಸವರ್ಣೇ ದೀರ್ಘಃ " ಸೂತ್ರದಿಂದ " ಅಕಃ " " ಇಕೋ ಯಣಚಿ " ಸೂತ್ರದಿಂದ " ಅಚಿ " ಅನುವೃತ್ತವಾಗುತ್ತವೆ. " ಏಕಃ ಪೂರ್ವಪರಯೋಃ " ಅಧಿಕಾರ ಸೂತ್ರಕ್ಕೆ ಇದು ಒಳಪಟ್ಟಿದೆ.

ಸೂತ್ರಾರ್ಥ—ಅಕ್ ವರ್ಣಗಳಿಗೆ ಅಮ್ ಸಂಬಂಧಿಯಾದ ಅಚ್ ಪರವಾದಾಗ ಪೂರ್ವ ಪರಸ್ಥಾನದಲ್ಲಿ ಪೂರ್ವದರೂಪವು ಏಕಾದೇಶವಾಗಿ ಬರುತ್ತದೆ. ಅಮ್ ಎಂಬಲ್ಲಿರುವ ಅಚ್ ಪರವಾದಾಗ ಎಂದರ್ಥ. ರಾಮ+ಅಮ್ ವೃತ್ತಿಯಲ್ಲಿದೆ. ಅಮ್ಮು ಎಂಬಲ್ಲಿರುವ ಅಚ್ ಪರವಾದಾಗ ಎಂದರ್ಥ. ಅಮ್ಮುಚಿ ಎಂದು ಇಲ್ಲಿ ಅಕ್ ಮಕಾರದ ಮೇಲಿರುವ ಅಕಾರ. ಇದಕ್ಕೆ ಅಮಿನ ಅಚ್ (ಅ) ಪರವಾಗಿದೆ. ಆಗ ಎರಡು ಅಕಾರಗಳಸ್ಥಾನದಲ್ಲಿ ಒಂದೇ ಪೂರ್ವದ ಅಕಾರವು ಏಕಾದೇಶವಾಗಿ ಬಂದರೆ ರಾಮಮ್ ಎಂದಾಗುತ್ತದೆ. ರಾಮನನ್ನು ಎಂದರ್ಥ. ದ್ವಿವಚನದಲ್ಲಿ ಔಟ್ ಪ್ರತ್ಯಯ. " ಹಲಂತ್ಯಮ್ " ಸೂತ್ರದಿಂದ ಅಂತ್ಯದ ಟಕಾರಕ್ಕೆ ಇತ್ ಸಂಜ್ಞೆ ಬಂದರೆ " ತಸ್ಯ ಲೋಪಃ " ಸೂತ್ರದಿಂದ ಅದಕ್ಕೆ ಲೋಪ. ರಾಮ+ಔ ಎಂದಿರುವಾಗ ಪ್ರಥಮಾ ದ್ವಿವಚನದಂತೇ ಕಾರ್ಯ. ರಾಮೌ. (ಇಬ್ಬರು ರಾಮರನ್ನು) ದ್ವಿತೀಯಾದಲ್ಲಿ ಬಹುತ್ವವಿವಕ್ಷಾಮಾಡಿದಾಗ ಶಸ್ ಪ್ರತ್ಯಯ. ಸಕಾರ ಅಂತ್ಯವಾದರೂ ವಿಭಕ್ತಿಯಸಕಾರವಾದುದರಿಂದ " ನ ವಿಭಕ್ತೌ ತುಸ್ಮಾಃ " ಸೂತ್ರದಿಂದ ಇತ್ ಸಂಜ್ಞೆಯನ್ನು ಹೇಳಲು ಸೂತ್ರಾಂತರವನ್ನು ಹೇಳುತ್ತಾನೆ.

(ಪ್ರತ್ಯಯದಲ್ಲಿ ಇತ್ ಸಂಜ್ಞೆ ಹೇಳುವ ಸೂತ್ರ)

೧೩೬. ಲಶಕ್ವತದ್ಧಿತೇ ॥ ೧—೩—೮ ॥

ತದ್ಧಿತವರ್ಜಪ್ರತ್ಯಯಾದ್ಯಾ ಲಶಕವರ್ಗಾ ಇತಃ ಸ್ಯುಃ॥

ಲಶಕು, ಅತದ್ಧಿತೇ॥ ದ್ವಿಪದ ಸೂತ್ರ. ನ ತದ್ಧಿತಃ ಅತದ್ಧಿತಃ ತಸ್ಮಿನ್, ಅತದ್ಧಿತೇ. ಷಷ್ಠ್ಯರ್ಥದಲ್ಲಿ ಸಪ್ತಮೀ ಬಂದಿದೆ. ಲಶ್ಚ, ಶಶ್ಚ, ಕುಶ್ಚ ತೇಷಾಂ ಸಮಾಹಾರಃ ಲಶಕು. ಕು ಉದಿತ್ವಾದುದರಿಂದ ಕವರ್ಗವನ್ನು ತೆಗೆದುಕೊಳ್ಳಬೇಕು, ಆದಿರ್ಞಿಟುಡವಃ " ಸೂತ್ರದಿಂದ " ಆದಿಃ " " ಷಃ ಪ್ರತ್ಯಯಸ್ಯ " ಸೂತ್ರದಿಂದ " ಪ್ರತ್ಯಯಸ್ಯ " " ಉಪದೇಶೇೞಜನುನಾಸಿಕ ಇತ್ " ಸೂತ್ರದಿಂದ ' ಇತ್ " ಅನುವೃತ್ತವಾಗುತ್ತವೆ. **ಸೂತ್ರಾರ್ಥ**—ತದ್ಧಿತಪ್ರತ್ಯಯವನ್ನು ಬಿಟ್ಟು ಉಳಿದ ಪ್ರತ್ಯಯದ ಆದಿಯಲ್ಲಿರುವ ಲಕಾರಶಕಾರಕವರ್ಗಗಳು ಇತ್ ಸಂಜ್ಞೆಯನ್ನು ಹೊಂದುತ್ತವೆ. ಪ್ರಕೃತ ಶಸ್ ತದ್ಧಿತಭಿನ್ನಪ್ರತ್ಯಯ. ಅದರ ಆದಿಯಲ್ಲಿರುವ ಶಕಾರಕ್ಕೆ ಈ ಸೂತ್ರದಿಂದ ಇತ್ ಸಂಜ್ಞೆ ಬಂದರೆ " ತಸ್ಯ ಲೋಪಃ " ಸೂತ್ರದಿಂದ ಅದಕ್ಕೆ ಲೋಪ. ರಾಮ+ಅಸ್ ಎಂದಿರುವಾಗ ಹಿಂದೆ ಹೇಳಿದ " ಪ್ರಥಮಯೋಃ ಪೂರ್ವಸವರ್ಣಃ " ಸೂತ್ರದಿಂದ ಪೂರ್ವಸವರ್ಣದೀರ್ಘ. ರಾಮಾಸ್ ಎಂದು ರೂಪವಾದಾಗ ಕೊನೆಯ ಸಕಾರಕ್ಕೆ ನಕಾರ ಹೇಳುತ್ತಾನೆ.

(ಶಸಿನ ಸಕಾರಕ್ಕೆ ನಕಾರ ಹೇಳುವ ಸೂತ್ರ)

೧೩೭. ತಸ್ಮಾಚ್ಛಸೋ ನಃ ಪುಂಸಿ ॥ ೬-೧-೧೦೩ ॥

ಪೂರ್ವಸವರ್ಣದೀರ್ಘಾತ್ಪರೋ ಯಃ ಶಸಃ ಸಸ್ತಸ್ಯ ನಃ ಸ್ಯಾತ್ಪುಂಸಿ॥

ತಸ್ಮಾತ್, ಶಸಃ. ನಃ, ಪುಂಸಿ ॥ ನಾಲ್ಕುಪದವುಳ್ಳ ಸೂತ್ರ. ತಚ್ಛಬ್ದವು ಪೂರ್ವವನ್ನು ಪರಾಮರ್ಶಿಸುತ್ತದೆ. ಇದರ ಹಿಂದೆ ಪೂರ್ವಸವರ್ಣದೀರ್ಘವು ಹೇಳಿದೆ. ಆಗ ತಸ್ಮಾತ್ ಎಂಬುದು ಪೂರ್ವಸವರ್ಣದೀರ್ಘವನ್ನು ಹೇಳುತ್ತದೆ. ಪೂರ್ವಸವರ್ಣದೀರ್ಘವು ಶಸಿನ ಸಕಾರಕ್ಕೆ ಬಂದುದರಿಂದ ಇಲ್ಲಿ ಶಸಃ ಎಂಬುದು ಅವಯವಷಷ್ಠೀ. **ಸೂತ್ರಾರ್ಥ**—ಪೂರ್ವಸವರ್ಣದೀರ್ಘದ ಪರದಲ್ಲಿರುವ ಯಾವ ಶಸಿನ ಅವಯವವಿದೆಯೋ (ಅರ್ಥಾತ್ ಅದು ಸಕಾರ) ಅದಕ್ಕೆ ಪುಲ್ಲಿಂಗದಲ್ಲಿ ನಕಾರಾದೇಶ ಬರುತ್ತದೆ. ರಾಮಾಸ್ ಎಂಬಲ್ಲಿ ಪೂರ್ವಸವರ್ಣದೀರ್ಘ ಬಂದಿದೆ. (ಆ) ಅದರಪರದಲ್ಲಿ ಶಸಿನ ಸಕಾರವಿದೆ. ಅದಕ್ಕೆ ನಕಾರಾದೇಶ ಬಂದರೆ ರಾಮಾನ್ ಎಂದಾಗುತ್ತದೆ. ಇಲ್ಲಿ ನಕಾರಕ್ಕೆ ಣಕಾರವನ್ನು ಆಶಂಕಿಸಿ ನಿಷೇಧಹೇಳುತ್ತಾನೆ.

(ನಕಾರಕ್ಕೆ ಣಕಾರ ಹೇಳುವ ಸೂತ್ರ)

೧೩೮. ಅಟ್ಕುಪ್ವಾಙ್ನುಮ್ವ್ಯವಾಯೇಽಪಿ ॥೮-೪-೨॥

ಅಟ್ಕವರ್ಗಪವರ್ಗ, ಆಙ್, ನುಮ್ ಏತೈರ್ವ್ಯವಧಾನೇ ತೈರ್ಯ್ಯಥಾ ಸಂಭವಂ ಮಿಲಿತೈಶ್ಚ ವ್ಯವಧಾನೇಽಪಿ ರಷಾಭ್ಯಾಂ ಪರಸ್ಯ ನಸ್ಯ ಣಃ ಸಮಾನಪದೇ ಇತಿ ಪ್ರಾಪ್ತೇ ॥

ಅಟ್ಕುಪ್ವಾಙ್ನುಮ್ವ್ಯವಾಯೇ, ಅಪಿ ॥ ದ್ವಿಪದಸೂತ್ರ. ಅಟ್ ಚ, ಕುಶ್ಚ, ಪುಶ್ಚ, ಆಙ್ ಚ, ನುಮ್ ಚ, ಅಟ್ ಕುಪ್ವಾಙ್ನುಮಃ. ತೇಷಾಂ ವ್ಯವಾಯಃ ಅಟ್ಕುಪ್ವಾಙ್ನುಮ್ವ್ಯವಾಯಃ । ತಸ್ಮಿನ್. ಅಟ್ಕುಪ್ವಾಙ್ನುಮ್ವ್ಯವಾಯೇ. " ರಷಾಭ್ಯಾಂ ನೋ ಣಃ ಸಮಾನಪದೇ " ಸೂತ್ರವು ಅನುವೃತ್ತವಾಗುತ್ತದೆ. ಅಲ್ಲಿ ನಃ ಷಷ್ಠೀ. ಣಃ ಪ್ರಥಮಾ. ರೇಫಷಕಾರದ ಅವ್ಯವಹಿತ ಪರದಲ್ಲಿರುವ ನಕಾರಕ್ಕೆ ಣಕಾರವು ಹೇಳಿದೆ. ಪ್ರಕೃತಸೂತ್ರದಲ್ಲಿ ಮಧ್ಯೆ ವ್ಯವಧಾನವಿದ್ದರೂ ಣತ್ವ ಹೇಳುತ್ತಾನೆ. ಅಟ್ ಪ್ರತ್ಯಾಹಾರ. ಕುಪು ಉದಿತ್ತಾದುದರಿಂದ ಕವರ್ಗಪವರ್ಗ ತೆಗೆದುಕೊಳ್ಳಬೇಕು. ಒಂದೊಂದರ ವ್ಯವಧಾನ ವಿರುವಾಗ ಎಂದರ್ಥಮಾಡಿದರೆ ರಾಮೇಣ ಎಂಬಲ್ಲಿ ಣತ್ವಬಾರದೇಹೋಗಬೇಕಾಗುತ್ತದೆ. ಎಲ್ಲವ್ಯವಧಾನವಿರುವಾಗ ಎಂದರೆ ಎಲ್ಲಿಯೂ ಉದಾಹರಣೆ ಸಿಗಲಾರದು. ಆದುದರಿಂದ (ಪ್ರತ್ಯೇಕ) ಬೇರೆಬೇರೆ ವ್ಯವಧಾನವಿರುವಾಗಲೂ

ಅನೇಕ (ಯಥಾಸಂಭವ) ವ್ಯವಧಾನವಿರುವಾಗಲೂ ಕಾರ್ಯಹೇಳಬೇಕು. **ಸೂತ್ರಾರ್ಥ**—ಅಟ್, ಕವರ್ಗಪವರ್ಗಆಙ್ನುಮ್ ಇವುಗಳಿಂದ ಪ್ರತ್ಯೇಕವಾಗಲೀ, ಯಥಾಸಂಭವಕೂಡಿಯಾಗಲೀ ಮಧ್ಯೆ ವ್ಯವಧಾನವಿರುವಾಗ (ರೇಫಷಕಾರಕ್ಕೂ ನಕಾರಕ್ಕೂ ಮಧ್ಯೆ ಇರುವಾಗ,) ರೇಫಷಕಾದ ಪರದಲ್ಲಿರುವ ನಕಾರಕ್ಕೆ ಣಕಾರಾದೇಶ ಬರುತ್ತದೆ. ಇವು ಒಂದೇಪದದಲ್ಲಿ ಇದ್ದರೆ ಮಾತ್ರ ಣತ್ವ. ನಕಾರಸ್ಥಾನಿ. ಣಕಾರ ಆದೇಶ. ರೇಫಷಕಾರಗಳು ನಿಮಿತ್ತ. ಸ್ಥಾನಿನಿಮಿತ್ತಗಳು ಅಖಂಡವೊಂದು ಪದದಲ್ಲಿ ಇದ್ದರೆ ಮಾತ್ರ ಈ ಣತ್ವ. ಸ್ಥಾನಿ ಒಂದುಪದದಲ್ಲಿ ನಿಮಿತ್ತ ಒಂದುಪದದಲ್ಲಿ ಇದ್ದರೆ ಣತ್ವವಿಲ್ಲ. ರಾಮನಾಮ. ಇಲ್ಲಿ ರೇಫ (ನಿಮಿತ್ತ) ರಾಮ ಎಂಬಪದದಲ್ಲಿದೆ. ಸ್ಥಾನಿ (ನ) ನಾಮವೆಂಬಪದದಲ್ಲಿದೆ. ಭಿನ್ನಪದವಾದುದರಿಂದ ಣತ್ವವಿಲ್ಲ. ಪ್ರಕೃತ ರಾಮಾನ್ ಎಂಬಲ್ಲಿ ರೇಫನಿಮಿತ್ತವಿದೆ. ರೇಫಪದಪರದಲ್ಲಿ ನಕಾರವಿದೆ. ಇವುಗಳ ಮಧ್ಯದಲ್ಲಿ ಆಕಾರ ಮಕಾರ ಆಕಾರಗಳಿವೆ. ಆಕಾರಗಳು ಅಟ್ಪ್ರತ್ಯಾಹಾರದಲ್ಲಿಯೂ, ಮಕಾರವು ಪವರ್ಗದಲ್ಲಿಯೂ ಸೇರುತ್ತವೆ. ಇವೆರಡರವ್ಯವಧಾನವಿದ್ದರೂ ಣತ್ವಬರುತ್ತದೆಯೆಂದುದರಿಂದ ನಕಾರಕ್ಕೆ ಣತ್ವವು ಈ ಸೂತ್ರದಿಂದ ಪ್ರಾಪ್ತವಾದರೆ ಅದಕ್ಕೆ ನಿಷೇಧ ಹೇಳುತ್ತಾನೆ.

(ಣತ್ವನಿಷೇಧ ಹೇಳುವ ಸೂತ್ರ)

೧೩೯. ಪದಾಂತಸ್ಯ ॥ ೮-೪-೩೭ ॥

ನಸ್ಯ ಣೋ ನ ॥ ರಾಮಾನ್ ॥

ಏಕಪದಸೂತ್ರ. " ರಷಾಭ್ಯಾಂ ಣೋ ನಃ " ಅನುವೃತ್ತವಾಗುತ್ತದೆ. " ನಭಾಭೂ.... ಸೂತ್ರದಿಂದ "ನ" ಎಂತಲೂ ಅನುವೃತ್ತಿ. **ಸೂತ್ರಾರ್ಥ**—ರೇಫಷಕಾರದಪರದಲ್ಲಿರುವ ಪದದಕೊನೆಯ ನಕಾರಕ್ಕೆ ಣತ್ವ ಬರುವುದಿಲ್ಲ. ಪ್ರಕೃತ ರಾಮಾನ್ ಎಂಬಲ್ಲಿ ನಕಾರವು ರೇಫದ ಪರದಲ್ಲಿದ್ದು ಪದದ ಕೊನೆಯಲ್ಲಿ ಇಪೆ. ಆದುದರಿಂದ ಣತ್ವಬರುವುದಿಲ್ಲ. ರಾಮಾನ್ ಎಂದೇ ಉಳಿಯುತ್ತದೆ. ಬಹುಜನರಾಮರನ್ನು ಎಂದರ್ಥ.

॥ ತೃತೀಯಾ ವಿಭಕ್ತಿ ॥

ಟಾ, ಭ್ಯಾಮ್, ಭಿಸ್, ಈ ಮೂರು ತೃತೀಯಾ ವಿಭಕ್ತಿ. ಇಂದ ಇದರ ಅರ್ಥ. ರಾಮಶಬ್ದದ ಮೇಲೆ ತೃತೀಯಾ ಏಕವಚನ ಮಾಡಿದಾಗ ಟಾ ವಿಭಕ್ತಿ ಬರುತ್ತದೆ. ಪ್ರಕೃತ ಅದಕ್ಕೆ ಬೇರೊಂದು ಆದೇಶ ಹೇಳುತ್ತಾನೆ.

(ಟಾದಿಗಳಿಗೆ ಇನಾದ್ಯಾದೇಶಗಳನ್ನು ಹೇಳುವ ಸೂತ್ರ)

೧೪೦. ಟಾಙಸಿ ಙಸಾಮಿನಾತ್ಸ್ಯಾಃ ॥ ೭-೧-೧೨ ॥

ಅದಂತಾಟ್ಟಾದೀನಾಮಿನಾದಯಃ ಸ್ಯುಃ ॥ ಣತ್ವಂ । ರಾಮೇಣ ॥

ಟಾಜಸಿಜಸಾಂ, ಇನಾತ್ಸ್ಯಾಃ ॥ ದ್ವಿಪದಸೂತ್ರ. ಟಾ ಚ, ಜಸಿ ಚ, ಜಸ್ ಚ, ಟಾಜಸಿಜಸಃ, ತೇಷಾಂ, ಟಾಜಸಿಜಸಾಮ್. ಇನಶ್ಚ ಆತ್ ಚ. ಸ್ಯಶ್ಚ ಇನಾತ್ಸ್ಯಾಃ ॥ " ಅಂಗಸ್ಯ " ಅಧಿಕಾರ. ಇಲ್ಲಿ ಆದು ಪಂಚಮ್ಯಂತವಾಗಿ ವಿಪರಿಣಮ್ಯತೆ ವಾಗುತ್ತದೆ. " ಅತೋಭಿಸ ಐಸ್ " ಸೂತ್ರದಿಂದ " ಅತಃ " ಅನುವೃತ್ತವಾಗಿ ಅಂಗಕ್ಕೆ ವಿಶೇಷಣವಾಗುವುದರಿಂದ ತದಂತಗ್ರಹಣ. ಅತಃ ತಪರಮಾಡಿರುವುದರಿಂದ ಹ್ರಸ್ವಾಕಾರಮಾತ್ರ ತೆಗೆದುಕೊಳ್ಳಬೇಕು. **ಸೂತ್ರಾರ್ಥ.**—ಹ್ರಸ್ವಾಕಾರಾಂತವಾದ ಅಂಗದ ಪರದಲ್ಲಿರುವ ಟಾ, ಜಸಿ, ಜಸ್ ಪ್ರತ್ಯಯಗಳಿಗೆ ಕ್ರಮವಾಗಿ ಇನ, ಆತ್, ಸ್ಯ ಆದೇಶಗಳು ಬರುತ್ತವೆ. ಯಾವ ಪ್ರತ್ಯಯವು ಯಾವ ಪ್ರಕೃತಿಯಮೇಲೆ ವಿಹಿತವಾಗಿರುತ್ತದೋ ಅವೇ ಆದಿಯಾಗಿರುವ ಶಬ್ದಸ್ವರೂಪಕ್ಕೆ ಅಂಗವೆಂಬ ಸಂಜ್ಞೆಯೆಂದು ಹಿಂದೆ ಹೇಳಿದೆ, ಇಲ್ಲಿ ಟಾಪ್ರತ್ಯಯ ರಾಮಶಬ್ದದ ಮೇಲೆವಿಹಿತವಾದುದರಿಂದ ರಾಮ ವೆಂಬುದು ಅಂಗ. ಆರನೇಅಧ್ಯಾಯದ ನಾಲ್ಕನೇಪಾದದ ಒಂದನೇಸೂತ್ರದಿಂದ " ಅಂಗಸ್ಯ " ಎಂಬ ಅಧಿಕಾರಸೂತ್ರ ಆರಂಭವಾಗಿ ಏಳನೇ ಅಧ್ಯಾಯಮುಗಿಯುವ ವರೆಗೂ ವ್ಯಾಪ್ತಿಯನ್ನು ಹೊಂದುತ್ತದೆ. ಅಲ್ಲಿ ಹೇಳುವ ಕಾರ್ಯಗಳೆಲ್ಲವೂ ಅಂಗಕ್ಕೇ ಹೇಳುವುದು, ಪ್ರಕೃತ ಸೂತ್ರವು ಏಳನೇ ಅಧ್ಯಾಯದ ಸೂತ್ರವಾದುದರಿಂದ "ಅಂಗಸ್ಯ" ಎಂದುದು ಇಲ್ಲಿಯೂ ಅನುವೃತ್ತವಾಗುತ್ತದೆ. ಮೂರು ಪ್ರತ್ಯಯಗಳಿಗೆ ಮೂರು ಆದೇಶಗಳನ್ನು ಹೇಳಿರುವುದರಿಂದ " ಯಥಾಸಂಖ್ಯಮನುದೇಶಃ ಸಮಾನಾಮ್ " ಎಂಬ ಪರಿಭಾಷೆಯಿಂದ ಕ್ರಮವಾಗಿ ಎಂದು ತಿಳಿಯುತ್ತದೆ. ರಾಮಯಂಬುದು ಹ್ರಸ್ವಾಕಾರಾಂತವಾದ ಅಂಗ. ಇದರ ಪರದಲ್ಲಿ ಟಾ ಇರುವುದರಿಂದ ಅದಕ್ಕೆ ಇನ ಆದೇಶ, ಇದು ಅನೇಕಾಲ್ ಅದುದರಿಂದ " ಅನೇಕಾಲ್ ಶಿತ್ ಸರ್ವಸ್ಯ " ಸೂತ್ರದಿಂದ ಟಾ ಸಂಪೂರ್ಣಕ್ಕೆ ಆದೇಶವಾಗಿ ಬರುತ್ತದೆ. ರಾಮ+ಇನ. ಅಕಾರಕ್ಕೆ ಅಚ್ ಪರವಾದುದರಿಂದ " ಆದ್ಗುಣಃ " ಸೂತ್ರದಿಂದ ಗುಣ. (ಆ+ಇ=ಏ) ರಾಮೇನ. ರೇಫದ ಪರದಲ್ಲಿ ನಕಾರ ಬಂದು ಅವುಗಳ ಮಧ್ಯದಲ್ಲಿ ಅಚ್ ಪವರ್ಗಗಳ ವ್ಯವಧಾನ ವಿರುವುದರಿಂದ " ಅಟ್ಕುಪ್ವಾಙ್ನುಮ್ವ್ಯವಾಯೇಽಪಿ ' ಸೂತ್ರದಿಂದ ನಕಾರಕ್ಕೆ ಣತ್ವ. ರಾಮೇಣ. ಇಲ್ಲಿ ನಕಾರ ಪದದ ಕೊನೆಯಲ್ಲಿ ಇಲ್ಲ. ಅಕಾರ ಕೊನೆಯಲ್ಲಿರುವುದು. ಆದುದರಿಂದ " ಪದಾಂತಸ್ಯ " ಸೂತ್ರದಿಂದ ನಿಷೇಧವಿಲ್ಲ. ರಾಮನಿಂದ ಎಂದರ್ಥ.

ರಾಮ ಶಬ್ದದ ಮೇಲೆ ತೃತೀಯಾ ದ್ವಿವಚನ ವಿವಕ್ಷಾಮಾಡಿದಾಗ ಭ್ಯಾಮ್ ಪ್ರತ್ಯಯ. ಮಕಾರ ಹಲ್ ಆಗಿ ಕೊನೆಯಲ್ಲಿದ್ದರೂ " ಹಲಂತ್ಯಮ್ " ಸೂತ್ರದಿಂದ ಇತ್ ಸಂಜ್ಞಾ ಬರುವುದಿಲ್ಲ. " ನ ವಿಭಕ್ತೌ ತುಸ್ಮಾಃ " ಎಂಬುದರಿಂದ ಮಕಾರಕ್ಕೆ

ಇತ್‌ಸಂಜ್ಞಾನಿಷೇಧಮಾಡಿರುತ್ತಾನೆ. ರಾಮ+ಭ್ಯಾಮ್ ಎಂದಿರುವಾಗ ಅಂಗಕ್ಕೆ ದೀರ್ಘಹೇಳುತ್ತಾನೆ.

(ಅಂಗಕ್ಕೆ ದೀರ್ಘವಿಧಾಯಕಸೂತ್ರ)

೧೪೧. ಸುಪಿ ಚ ॥ ೭-೩-೧೦೨ ॥

ಯಞ್ಞೌದ್ಭ್ಯಾಂ ಸುಪಿ ಅತೋಽಜ್ಞಸ್ಯ ದೀರ್ಘಃ । ರಾಮಾಭ್ಯಾಮ್ ॥

ಸುಪಿ, ಚ, " ದ್ವಿಪದ ಸೂತ್ರ. ಏಳನೇ ಅಧ್ಯಾಯದ ಸೂತ್ರವಾದುದರಿಂದ " ಅಂಗಸ್ಯ " ಎಂಬುದು ಅಧಿಕೃತವಾಗುತ್ತದೆ. " ಅತೋ ದೀರ್ಘೋಯಞಿ " ಸೂತ್ರ ಪೂರ್ತಿ ಅನುವೃತ್ತವಾಗುತ್ತದೆ. ಯಞ್ ಪ್ರತ್ಯಾಹಾರ. ಸುಪಿಯಂಬ ಸಪ್ತಮ್ಯಂತಕ್ಕೆ ವಿಶೇಷಣ. ವರ್ಣವನ್ನು ವಿಶೇಷಣಮಾಡಿರುವುದರಿಂದ " ಯಸ್ಮಿನ್ ವಿಧಿಸ್ತದಾದಾವಲ್ಗ್ರಹಣೇ " ಪರಿಭಾಷೆಯಿಂದ ಯಞ್ ಆದಿಯಾಗಿರುವ ಸುಪ್ ಎಂದರ್ಥವಾಗುತ್ತದೆ. ಅದು ಸಪ್ತಮಿಯಾದುದರಿಂದ ಪರದಲ್ಲಿರುವಾಗ ಕಾರ್ಯ ವೆಂದು ತಿಳಿಯುತ್ತದೆ. ಅತಃ ಎಂಬುದು ಅಂಗಸ್ಯ ಎಂಬುದಕ್ಕೆ ವಿಶೇಷಣವಾದುದ ರಿಂದ ಹಿಂದಿನಂತೆ ಅದಂತವಾದ ಅಂಗಕ್ಕೆ ಎಂದರ್ಥವಾಗುತ್ತದೆ. **ಸೂತ್ರಾರ್ಥ**— ಯಞ್‌ಆದಿಯಲ್ಲಿರುವ ಸುಪ್‌ಪರವಾದಾಗ ಹ್ರಸ್ವಾಕಾರಾಂತವಾದ ಅಂಗಕ್ಕೆ ದೀರ್ಘ ಬರುತ್ತದೆ. ಭ್ಯಾಮ್ ಸುಪ್. ಭಕಾರ ಯಞ್‌ನಲ್ಲಿ ಸೇರಿದೆ. ಯಞಾದಿಯಾದ ಸುಪ್=ಭ್ಯಾಮ್. ರಾಮ ಹ್ರಸ್ವಾಕಾರಾಂತವಾದ ಅಂಗ. ಅದಕ್ಕೆ ಭ್ಯಾಮ್‌ಪರವಾದುದರಿಂದ ದೀರ್ಘ ಬಂದರೆ ರಾಮಾಭ್ಯಾಮ್ ಆಗುತ್ತದೆ. ಇಬ್ಬರುರಾಮರಿಂದ ಎಂದರ್ಥ.

ರಾಮಶಬ್ದದಮೇಲೆ ತೃತೀಯಾ ಬಹುವಚನ ವಿವಕ್ಷಾಮಾಡಿದಾಗ ಭಿಸ್ ಪ್ರತ್ಯಯ. ಇಲ್ಲಿಯೂ " ನ ವಿಭಕ್ತೌ ತುಸ್ಮಾಃ " ಸೂತ್ರದಿಂದ ಸಕಾರಕ್ಕೆ ಇತ್ ಸಂಜ್ಞಾನಿಷೇಧಮಾಡಿರುವುದರಿಂದ ಇತ್ ಸಂಜ್ಞಾ ಬಂದುಲೋಪವಾಗುವುದಿಲ್ಲ. ರಾಮ+ಭಿಸ್ ಎಂದಿರುವಾಗ ಪ್ರತ್ಯಯಕ್ಕೆ ಆದೇಶವನ್ನು ಹೇಳುತ್ತಾನೆ.

(ಭಿಸ್‌ಪ್ರತ್ಯಯಕ್ಕೆ ಅದೇಶ ಹೇಳುವ ಸೂತ್ರ)

೧೪೨. ಅತೋ ಭಿಸ ಐಸ್ ॥ ೭-೧-೯ ॥

ಅಕಾರಾಂತಾದಙ್ಗಾದ್ಭಿಸ ಐಸ್ ಸ್ಯಾತ್ ॥ ಅನೇಕಾಲ್‌ಶಿತ್ ಸರ್ವಸ್ಯ ॥

ರಾಮೈಃ ॥

ಅತಃ, ಭಿಸಃ, ಐಸ್ ॥ ತ್ರಿಪದಸೂತ್ರ. "ಅಂಗಸ್ಯ" ಅಧಿಕಾರ. ಇಲ್ಲಿ ಪಂಚಮ್ಯಂತವಾಗಿ ವಿಪರಿಣತವಾಗುತ್ತದೆ. "ಅತಃ" ಅದಕ್ಕೆ ವಿಶೇಷಣ. ಇಲ್ಲಿ ವಿಶೇಷಣವಾದುದರಿಂದ ತದಂತಲಾಭ. **ಸೂತ್ರಾರ್ಥ**—ಹ್ರಸ್ವಾಕಾರಾಂತವಾದ ಅಂಗದಪರದಲ್ಲಿರುವ ಭಿಸ್‌ಪ್ರತ್ಯಯಕ್ಕೆ ಐಸ್ ಆದೇಶ ಬರುತ್ತದೆ. ಭಿಸಿಗೆ ಐಸ್ ಎಂದರೆ ಷಷ್ಠ್ಯನಿರ್ದಿಷ್ಟವಾದುದರಿಂದ "ಅಲೋಂತಸ್ಯ" ಪರಿಭಾಷೆಯಿಂದ ಭಿಸಿನ ಅಂತ್ಯ ಸಕಾರಕ್ಕೆ ಪ್ರಾಪ್ತವಾದರೆ "ಅಲೋಂತ್ಯಸ್ಯ" ಸೂತ್ರಕ್ಕೆ ಅಪವಾದವಾದ ಸರ್ವಾದೇಶನಿಯಮಮಾಡುವ ಸೂತ್ರವನ್ನು ವೃತ್ತಿಯಲ್ಲಿ ಹೇಳಿರುತ್ತಾನೆ. "ಅನೇಕಾಲ್ ಶಿತ್ ಸರ್ವಸ್ಯ" ಎಂಬುದರಿಂದ ಐಸ್ ಅನೇಕಾಲ್ ಆದುದರಿಂದ ಭಿಸ್‌ಸಂಪೂರ್ಣಕ್ಕೆ ಆದೇಶವಾಗಿ ಬರುತ್ತದೆ. ರಾಮ+ಐಸ್. ಇಲ್ಲಿ ಅಕಾರಕ್ಕೆ ಏಚ್‌ಪರವಾದುದರಿಂದ "ವೃದ್ಧಿರೇಚಿ" ಸೂತ್ರದಿಂದ ವೃದ್ಧಿಯು ಏಕಾದೇಶವಾಗಿ ಬಂದರೆ "ರಾಮೈಸ್" ಆಗುತ್ತದೆ. ಪದದ ಕೊನೆಯಲ್ಲಿ ಸಕಾರವಿರುವುದಿಂದ "ಸಸಜುಷೋರುಃ" ಸೂತ್ರದಿಂದ ರುತ್ವ. ಅವಸಾನವಿರುವುದರಿಂದ "ಖರವಸಾನಯೋರ್ವಿಸರ್ಜನೀಯಃ" ಸೂತ್ರದಿಂದ ರೇಫಕ್ಕೆ ವಿಸರ್ಗ. ರಾಮೈರ್, ರಾಮೈಃ. ಬಹುರಾಮರಿಂದ ಎಂದರ್ಥ.

॥ ಚತುರ್ಥೀವಿಭಕ್ತಿಃ ॥

ಙೀ, ಭ್ಯಾಮ್, ಭ್ಯಸ್, ಇವು ಚತುರ್ಥೀವಿಭಕ್ತಿ. ಗೆ ಅಥವಾ ಒಸ್ಕರ ಇದರ ಅರ್ಥ. ಕನ್ನಡದಲ್ಲಿ ಈಗ ಹೆಚ್ಚಾಗಿ ಬಳಕೆಯಲ್ಲಿಲ್ಲ. ಗೆ ಎಂದೇ ಉಪಯೋಗಿಸುತ್ತಾರೆ. ಷಷ್ಠಿಗೂ ಗೆ ಹೇಳುತ್ತಾರೆ. ರಾಮಶಬ್ದದಮೇಲೆ ಚತುರ್ಥೀ ಏಕವಚನ ವಿವಕ್ಷಾಮಾಡಿದಾಗ ಙೀ ವಿಭಕ್ತಿ ಬರುತ್ತದೆ. ರಾಮ+ಙೀ ಎಂದಿರುವಾಗ ವಿಭಕ್ತಿಗೆ ಆದೇಶವನ್ನು ಹೇಳುತ್ತಾನೆ.

(ಙೀವಿಭಕ್ತಿಗೆ ಆದೇಶಹೇಳುವ ಸೂತ್ರ)

೧೪೩. ಙೀರ್ಯಃ ॥ ೭-೧-೧೩ ॥

ಅತೋಽಜ್ಞಾತ್ವಪರಸ್ಯ ಙೀರ್ಯಾದೇಶಃ ॥

ಙೀಃ ಯಃ ॥ ದ್ವಿಪದಸೂತ್ರ. "ಅಂಗಸ್ಯ" ಅಧಿಕಾರ. ಇಲ್ಲಿ ಪಂಚಮ್ಯಂತ ಪರಿಣತಿ. "ಅತಃ" ಅನುವೃತ್ತವಾಗಿ ಅದಕ್ಕೆ ವಿಶೇಷಣ. ಙೀಃ ಎಂಬುದು ಚತುರ್ಥೀ ಏಕವಚನದ ಷಷ್ಠೀ. **ಸೂತ್ರಾರ್ಥ**—ಹ್ರಸ್ವಾಕಾರಾಂತವಾದ ಅಂಗದ ಪರದಲ್ಲಿರುವ ಙೀಗೆ ಯಾದೇಶ. ಚತುರ್ಥೀ ಏಕವಚನವಾದ ಙೀ ಯಂಬುದಕ್ಕೆ "ಯ" ಎಂಬ ಆದೇಶವೆಂದರ್ಥ. ರಾಮ ಹ್ರಸ್ವಾಕಾರಾಂತವಾದ ಅಂಗ. ಪರದ ಙೀ ವಿಭಕ್ತಿಗೆ ಯಾ ದೇಶ ಬಂದರೆ ರಾಮಯ ಎಂದಾಗುತ್ತದೆ. ಇಲ್ಲಿ "ಸುಪಿ ಚ

ಸೂತ್ರದಿಂದ ದೀರ್ಘ ಬರಬೇಕು. ಯ ಎಂಬುದು ಯಞಾದಿಯಾದರೂ ಸುಪ್ ಅಲ್ಲ. ಅದು 21 ವಿಭಕ್ತಿಗಳಲ್ಲಿ ಪಠಿತವಾಗಿಲ್ಲ. ಇದರ ಸ್ಥಾನಿಯಾದ ಙೀ ಯಂಬುದು ಸುಪ್. ಅದು ಯಞಾದಿಯಲ್ಲ. ಆದುದರಿಂದ ದೀರ್ಘಕ್ಕೆ ಅವಕಾಶವಿಲ್ಲ. ರೂಪಸಿದ್ಧಿಯಾಗಬೇಕು. ಅದಕ್ಕೋಸ್ಕರ ಆದೇಶವು ಯಾವುದರ ಸ್ಥಾನಕ್ಕೆ ಬರುತ್ತದೆಯೋ ಅದಲ್ಲ ಸ್ಥಾನಿಯಭಾವವು ಆ ಆದೇಶಕ್ಕೆ ಬರುತ್ತದೆಂದು ಸೂತ್ರದಿಂದ ಸ್ಪಷ್ಟಗೊಳಿಸುತ್ತಾನೆ.

(ಆದೇಶಕ್ಕೆ ಸ್ಥಾನಿವದ್ಭಾವ ಹೇಳುವಸೂತ್ರ)

೧೪೪. ಸ್ಥಾನಿವದಾದೇಶೋಽನಲ್ವಿಧೌ ॥ ೧-೧-೫೬ ॥

ಆದೇಶಃ ಸ್ಥಾನಿವತ್ಸ್ಯಾನ್ನತು ಸ್ಥಾನ್ಯಲಾಶ್ರಯವಿಧೌ ॥ ಇತಿ ಸ್ಥಾನಿವತ್ತ್ವಾತ್ಸುಪಿ ಚೇತಿ ದೀರ್ಘಃ ॥ ರಾಮಾಯ । ರಾಮಾಭ್ಯಾಮ್ ॥

ಸ್ಥಾನಿವತ್, ಆದೇಶಃ, ಅನಲ್‌ವಿಧೌ ॥ ತ್ರಿಪದಸೂತ್ರ. ವಿಧೀಯತ ಇತಿ ವಿಧಿಃ. ಅಲಾಶ್ರಯಃ ವಿಧಿಃ ಅಲ್ವಿಧಿಃ, ನ ಅಲ್ವಿಧಿಃ ಅನಲ್ವಿಧಿಃ ತಸ್ಮಿನ್ ಅನಲ್ವಿಧೌ. ಯಾವುದರಸ್ಥಾನಕ್ಕೆ ಬೇರೊಂದು ವಿಹಿತವಾಗುತ್ತದೋ ಅದು ಸ್ಥಾನಿ. ಯಾವುದು ಬಂದುದರಿಂದ ಪ್ರಸಕ್ತವು ಹೋಗುವುದೋ ಅದು ಆದೇಶ. ಸ್ಥಾನಿನಾ ತುಲ್ಯಂ ಸ್ಥಾನಿವತ್. **ಸೂತ್ರಾರ್ಥ**—ಸ್ಥಾನಿಯ ಅಲನ್ನು (ಒಂದುವರ್ಣ) ಆಶ್ರಯಿಸಿ ಮಾಡುವ ಕಾರ್ಯವನ್ನು ಬಿಟ್ಟು ಉಳಿದ ಸ್ಥಳದಲ್ಲಿ ಆದೇಶವು ಸ್ಥಾನಿಯಂತೆ ಆಗುತ್ತದೆ ಸ್ಥಾನಿಯಲ್ಲಿರುವ ಧರ್ಮವು ಆದೇಶದಲ್ಲಿಯೂ ಪ್ರಸಕ್ತವಾಗುವುದೆಂದರ್ಥ. ಅಲ್ ಎಂದರೆ ವರ್ಣ. ಸ್ಥಾನಿಯು ವರ್ಣರೂಪವಾಗಿದ್ದು ಅದನ್ನು ಆಶ್ರಯಿಸಿ ಕಾರ್ಯಮಾಡುವ ಸಂದರ್ಭದಲ್ಲಿ ಅಲ್ಲಿನ ಆದೇಶವು ಸ್ಥಾನಿಯ ಧರ್ಮವನ್ನು ಹೊಂದುವುದಿಲ್ಲ, ದಿವ್‌ಶಬ್ದದ ಮೇಲೆ ಸುವಿಭಕ್ತಿ ಸೇರಿಸಿದಾಗ "ದಿವೌಚ್" ಸೂತ್ರದಿಂದ ವಕಾರಕ್ಕೆ ಔಕಾರ ಬಂದು ದಿ+ಔಸ್ ಎಂದಿರುವಾಗ ಯಣ್. ಸಕಾರಕ್ಕೆ ರುತ್ವ ವಿಸರ್ಗ. ದ್ಯೌಃ ಎಂದಾಗುತ್ತದೆ. ಹಲಂತದ ಪರದಲ್ಲಿರುವ ಸುವಿಗೆ "ಹಲ್ ಙ್ಯಾಬ್ಭ್ಯಃ" ಸೂತ್ರದಿಂದ ಲೋಪಹೇಳಿದೆ. ಇಲ್ಲಿ ಆದೇಶವು ಸ್ಥಾನಿಯಂತಾಗುತ್ತದೆಯಂದು ಮಾತ್ರ ಹೇಳಿದುದಾದರೆ ಔಕಾರಾದೇಶವು ವಕಾರದಲ್ಲಿರುವ ಹಲ್ತ್ವ ಧರ್ಮವನ್ನು ಹೊಂದುತ್ತದೆಯಂದು ಹೇಳಿದಂತಾಗುತ್ತದೆ. ಔಕಾರವಿದ್ದರೂ ಅದು ಹಲಿನಂತಾಗುವುದರಿಂದ ಹಲಿನಪರದಲ್ಲಿರುವ ಸುವಿಗೆ ಲೋಪಬರಬೇಕಾಗುತ್ತದೆ. ಆದುದರಿಂದ ಅಲಾಶ್ರಯಕಾರ್ಯದಲ್ಲಿ ನಿಷೇಧ ಹೇಳಿರುತ್ತಾನೆ. ಇದು ಅಲಾಶ್ರಯ ಕಾರ್ಯ. ವಕಾರ ಒಂದುವರ್ಣ. ಇದರಲ್ಲಿರುವ ಧರ್ಮವನ್ನು ಇಟ್ಟುಕೊಂಡು

ಪರಕ್ಕೆ ಮಾಡುವ ಕಾರ್ಯವಾದುದರಿಂದ ಸ್ಥಾನಿವದ್ಭಾವ ಬರುವುದಿಲ್ಲ. ಹೀಗೆ ಎಲ್ಲಾ ಕಡೆಯಲ್ಲಿಯೂ ಒಂದು ವರ್ಣವನ್ನಾಶ್ರಯಿಸಿ ಕಾರ್ಯಮಾಡುವಲ್ಲಿ ನಿಷೇಧ. ಪ್ರಕೃತಿ ಆಶ್ರಯ ಕಾರ್ಯವಿಲ್ಲ. ಜೀ ವಿಭಕ್ತಿಗೆ ಯ ಆದೇಶಬಂದಿದೆ. ಯ ಆದೇಶಕ್ಕೆ ಸ್ಥಾನಿಯ ಧರ್ಮಸುಪ್ತ್ವ ಮಾತ್ರಬೇಕು. ಸ್ತುಪ್ತ್ವಧರ್ಮವು ವರ್ಣಧರ್ಮವಲ್ಲಿ ಸಮುದಾಯಧರ್ಮ. ಜಕಾರಾದಿತ್ವಮುಂತಾದ ಧರ್ಮತರುವುದಾಗಿದ್ದರೆ ಆಶ್ರಯಿಸಿ ವಿಧಿಯಾಗುತ್ತಿತ್ತು. ಈ ಸೂತ್ರದಿಂದ ಸ್ಥಾನಿವದ್ಭಾವ ಬಂದರೆ ಯ ಯಂಬುದೂ ಸುಪ್ ಆಯಿತು. ಯಾವಾಗ ಸ್ಥಾನಿವದ್ಭಾವದಿಂದ ಸುಪ್ ಆಯಿತೋ ಆಗ ಯಜ್ಞಾದಿಯಾದ ಸುಪ್‌ಪರವಾದುದರಿಂದ ಹಿಂದೆ ಹೇಳಿದ "ಸುಪಿ ಚ" (141) ಸೂತ್ರದಿಂದ ಅದಂತವಾದ ಅಂಗಕ್ಕೆ (ರಾಮ) ದೀರ್ಘ. ರಾಮಾಯ. ರಾಮಸ್ಮಿ ನೋಸ್ಕರವೆಂದರ್ಥ.

ರಾಮ ಶಬ್ದದಮೇಲೆ ಚತುರ್ಥಿ ದ್ವಿವಚನ ವಿಭಕ್ತಿ ವಿವಕ್ಷಾಮಾಡಿದಾಗ ಭ್ಯಾಮ್ ಪ್ರತ್ಯಯ. ಇದು ತೃತೀಯಾ, ಚತುರ್ಥೀ, ಪಂಚಮೀ ಮೂರರ ದ್ವಿವಚನಗಳಲ್ಲಿಯೂ ಒಂದೇ ರೂಪವುಳ್ಳದ್ದಾಗಿದೆ. ಆದುದರಿಂದ ತೃತೀಯಾ ದ್ವಿವಚನದಂತೆ ಪ್ರಕ್ರಿಯೆ. "ಸುಪಿ ಚ" ಸೂತ್ರದಿಂದ ಅಂಗಕ್ಕೆ ದೀರ್ಘ. ರಾಮಾಭ್ಯಾಮ್. ಇಬ್ಬರು ರಾಮರಿಗೋಸ್ಕರ.

ರಾಮ ಶಬ್ದದಮೇಲೆ ಚತುರ್ಥಿ ಬಹುವಚನ ಪ್ರತ್ಯಯ ವಿವಕ್ಷಾಮಾಡಿದರೆ ಭ್ಯಸ್‌ಪ್ರತ್ಯಯ. ಸಕಾರಕ್ಕೆ ವಿಭಕ್ತಿಯಲ್ಲಿರುವುದರಿಂದ ಹಿಂದಿನಂತೆ ಇತ್‌ಸಂಜ್ಞೆಯಿಲ್ಲ. ರಾಮ+ಭ್ಯಸ್ ಎಂದಿರುವಾಗ ಯಜ್ಞಾದಿಸುಪ್ ಪರವಾದುದರಿಂದ "ಸುಪಿ ಚ" ಸೂತ್ರದಿಂದ ದೀರ್ಘಪ್ರಾಪ್ತವಾದರೆ ಅದಕ್ಕೆ ಅಸವಾದವಾಗಿ ಏಕಾರವನ್ನು ವಿಧಿಸುತ್ತಾನೆ.

(ಬಹುವಚನದಲ್ಲಿ ಏಕಾರಹೇಳುವಸೂತ್ರ)

೧೪೫. ಬಹುವಚನೇ ಝಲ್ಯೇತ್ ॥ ೭-೩-೧೦೩

ಝಲಾದೌ ಬಹುವಚನೇ ಸುಪ್ಯತೋಽಙ್ಗಸ್ಯೈಕಾರಃ ॥ ರಾಮೇಭ್ಯಃ। ಸುಪಿ ಕಿಮ್ ಪಚಧ್ವಮ್ ॥

ಬಹುವಚನೇ, ಝಲಿ, ಏತ್। ತ್ರಿಪದಸೂತ್ರ. "ಅಂಗಸ್ಯ" ಅಧಿಕಾರ. "ಅತೋ ಭಿಸ ಐಸ್" ಸೂತ್ರದಿಂದ ಅನುವೃತ್ತವಾದ "ಅತಃ" ಎಂಬುದು ಅದಕ್ಕೆ ವಿಶೇಷಣವಾದುದರಿಂದ ತದಂತಲಾಭ. "ಸುಪಿ ಚ" ಸೂತ್ರದಿಂದ "ಸುಪಿ" ಅನುವೃತ್ತವಾಗುತ್ತದೆ. ಝಲಿಯಂಬ ಸಪ್ತಮ್ಯಂತವು ಸುಪಿಯಂಬ ಸಪ್ತಮ್ಯಂತಕ್ಕೆ

ವಿಶೇಷಣ. ಝಲ್ ವರ್ಣವಾದುದರಿಂದ "ಯಸ್ಮಿನ್ ವಿಧಿಸ್ತದಾದಾವಲ್ಗ್ರಹಣೇ" ಪರಿಭಾಷೆಯಿಂದ ಝಲಾದಿಯಾದ ಸುಪ್ ಎಂದರ್ಥವಾಗುತ್ತದೆ. ಏತ್‌ಯಂದರೆ ಏಕಾರವೆಂದರ್ಥ. **ಸೂತ್ರಾರ್ಥ**— ಝಲಾದಿಯಾದ ಬಹುವಚನ ಸುಪ್‌ಪರವಾದಾಗ ಹ್ರಸ್ವಾಕಾರಾಂತವಾದ ಅಂಗಕ್ಕೆ ಏಕಾರವು ಆದೇಶವಾಗಿ ಬರುತ್ತದೆ. ಅಂಗಕ್ಕೆ ಎಂದು ಷಷ್ಠಿಗೆ ಕಾರ್ಯಹೇಳಿರುವುದರಿಂದ ಅಲೋಂತ್ಯಸ್ಯ ಪರಿಭಾಷೆಯಿಂದ ಅಂಗದ ಅಂತ್ಯಕ್ಕೆ ಎಂದರ್ಥವಾಗುತ್ತದೆ. ಅಂತ್ಯ ಹ್ರಸ್ವಾಕಾರವೇ. ರಾಮ ಹ್ರಸ್ವಾಕಾರಾಂತವಾದ ಅಂಗ. ಝಲ್ ಭಕಾರ. ಇದೇ ಆದಿಯಾಗಿರುವ ಬಹುವಚನ ಸುಪ್ ಭ್ಯಸ್. ಇದು ಪರವಾದುದರಿಂದ ಅಕಾರಕ್ಕೆ ಏತ್ವಬಂದರೆ ರಾಮೇಭ್ಯಸ್ ಎಂದಾಗುತ್ತದೆ. ಹಿಂದಿನಂತೆ ಸಕಾರಕ್ಕೆ ಪದಾಂತದಲ್ಲಿರುವುದರಿಂದ ರುತ್ವವಿಸರ್ಗಬಂದರೆ ರಾಮೇಭ್ಯಃ ಎಂದಾಗುತ್ತದೆ. ಬಹುರಾಮರಿಗೋಸ್ಕರ ಎಂದರ್ಥ. ಸೂತ್ರದಲ್ಲಿರುವ ಪ್ರತಿಯೊಂದು ಪದವೂ ಒಂದು ಪ್ರಯೋಜನ ತಿಳಿಸುತ್ತದೆ. ವ್ಯರ್ಥಪದವನ್ನು ಹೇಳುವುದೇ ಇಲ್ಲ. ಹೀಗೆ ಸೂತ್ರದಲ್ಲಿರುವ ಕೆಲವು ಪದಗಳು ವ್ಯರ್ಥವೆಂದು ಭಾಸವಾದರೆ ಆಗ ವ್ಯಾಖ್ಯಾನಕಾರರು ಅದರ ವಿಶಿಷ್ಟಪ್ರಯೋಜನವನ್ನು ಹೇಳುತ್ತಾರೆ. ಸೂತ್ರದಲ್ಲಿರುವ ಪದವು ವ್ಯರ್ಥವೆಂದು ಆಶಂಕಿಸಿ ಪ್ರಯೋಜನವನ್ನು ಹೇಳುವಲ್ಲಿ ದಳಕೃತ್ಯವೆಂದು ಹೆಸರು. ದಳವೆಂದರೆ ಸೂತ್ರದಲ್ಲಿರುವ ಪದ. ಅದರ ಕೃತ್ಯ ಎಂದರೆ ಪ್ರಯೋಜನ. ಅದನ್ನು ವಿವರಿಸುವುದು. ಪ್ರಕೃತ ಏತ್ವವನ್ನು ಹೇಳುವಾಗ ಸಮಿತ್ತವು ಮೂರು ಅಂಶದಿಂದ ಕೂಡಿದೆ. ಝಲಾದಿತ್ವ, ಬಹುವಚನತ್ವ, ಸುಪ್ತ್ವ. ಇಲ್ಲಿ ಸುಪ್ ಎಂದು ಏಕೆ ಹೇಳಬೇಕು? ಸುಪಿ ಕಿಮ್? ಎಂಬುದಕ್ಕೆ ಸೂತ್ರದಲ್ಲಿರುವ ಸುಪಿಯಂಬ ಪದಕ್ಕೆ ಪ್ರಯೋಜನವೇನು? ಎಂದರ್ಥ. ಝಲಾದಿಯಾದ ಬಹುವಚನ ಪರವಾದಾಗ ಏತ್ವ ಎಂದರೂ ಪ್ರಕೃತ ಏತ್ವ ಬಂದೇ ಬರುತ್ತದೆ. ಹೀಗಿರುವಾಗ ಸುಪ್ ಎಂದುದೇಕೆ? ಎಂದರೆ "ಪಚಧ್ವಮ್" ಇಲ್ಲಿ ಪ್ರಯೋಜನವನ್ನು ಹೇಳುತ್ತಾನೆ. ಪಚಧಾತುವಿಗೆ ಲೋಟ್ ಮಧ್ಯಮ ಪುರುಷ ಬಹುವಚನದಲ್ಲಿ ಧ್ವಮ್ ಪ್ರತ್ಯಯ. ಸುಪ್ ಹೇಳದಿದ್ದರೆ ಇಲ್ಲಿಯೂ "ಪಚ" ಅದಂತವಾದ ಅಂಗ. ಇದಕ್ಕೆ ಝಲಾದಿಯಾದ ಬಹುವಚನ ಧ್ವಮ್ ಪರವಾಗಿದೆ. ಆದುದರಿಂದ ಏತ್ವಬರಬೇಕಾಗುತ್ತದೆ. ಝಲಾದಿಯಾದ ಬಹುವಚನ ಸುಪ್ ಯಂದರೆ ಇಲ್ಲಿ ಬರುವುದಿಲ್ಲ. ಇದು ತಿಙ್‌ಪ್ರತ್ಯಯ. ಸುಪಲ್ಲವಾದುದರಿಂದ ಏತ್ವಕ್ಕೆ ಅವಕಾಶವಿಲ್ಲ. ಆದುದರಿಂದ ಸುಪ್ ಸಾರ್ಥಕವಾಗಿದೆ. ಹೀಗೆ ಪ್ರತಿಯೊಂದು ವಿಶೇಷಣವೂ ಸಾರ್ಥಕವಾಗಿದೆ.

॥ ಪಂಚಮೀ ವಿಭಕ್ತಿ ॥

ಜಸಿ. ಭ್ಯಾಮ್, ಭ್ಯಸ್. ಈ ಮೂರು ಪಂಚಮೀವಿಭಕ್ತಿ. ದೆಸೆಯಿಂದ ಇದರ ಅರ್ಥ. ರಾಮ ಶಬ್ದದಮೇಲೆ ಪಂಚಮೀಏಕವಚನ ವಿವಕ್ಷಾಮಾಡಿದಾಗ ಜಸಿಪ್ರತ್ಯಯ. ರಾಮ+ಜಸಿ ಎಂದಿರುವಾಗ ಹ್ರಸ್ವಾಕಾರಾಂತವಾದ ಅಂಗದಪರದಲ್ಲಿ

ಜಸಿ ಬಂದುದರಿಂದ " ಟಾಜಸಿಜಸಾಮಿನಾತ್ಸ್ಯಾಂ " ಸೂತ್ರದಿಂದ ಜಸಿಪ್ರತ್ಯಯ ಆತ್ ಆದೇಶ. ಅನೇಕಾಲಾದುದರಿಂದ ಸರ್ವಾದೇಶ. ರಾಮ+ಆತ್. " ತಕ್ರ ಸವರ್ಣದೀರ್ಘಃ " ಸೂತ್ರದಿಂದ ಸವರ್ಣದೀರ್ಘ. ರಾಮಾತ್. (ತಕಾರ ಝಲ್) ಪದಾಂತದಲ್ಲಿ ಝಲ್‌ವರ್ಣವಿರುವುದರಿಂದ " ಝಲಾಂ ಜಶೋಽಂತೇ " ಸೂತ್ರದಿಂದ ತಕಾರಕ್ಕೆ ಜಶ್ತ್ವ. ಸ್ಥಾನಸಾನ್ಯದಿಂದ ದಕಾರಾದೇಶ ರಾಮಾದ್. ಈಗ ಜಕಾರವು ಕೊನೆಯಲ್ಲಿರುವುದರಿಂದ ಇದಕ್ಕೆ ವಿಕಲ್ಪವಾಗಿ ಚರ್ತ್ವವನ್ನು (ತ) ಹೇಳುತ್ತಾನೆ.

(ಝಲ್‌ವರ್ಣಗಳಿಗೆ ಚರ್ತ್ವಹೇಳುವಸೂತ್ರ)

೧೪೬. ವಾಽವಸಾನೇ ॥ ಲ-ಳ-ಶ್ಚಿ ॥

ಅವಸಾನೇ ಝಲಾಂ ಚರೋ ವಾ ॥ ರಾಮಾತ್, ರಾಮಾದ್।

ರಾಮಾಭ್ಯಾಂ । ರಾಮೇಭ್ಯಃ । ರಾಮಸ್ಯ ॥

ವಾ. ಅವಸಾನೇ। ದ್ವಿಪದಸೂತ್ರ. " ಝಲಾಂ ಜಶ್‌ಝಶಿ " ಸೂತ್ರದಿಂದ " ಝಲಾಂ " " ಅಭ್ಯಾಸೇ ಚರ್ಚ " ಸೂತ್ರದಿಂದ " ಚರ್ " ಪದವೂ ಅನುವೃತ್ತವಾಗುತ್ತವೆ. **ಸೂತ್ರಾರ್ಥ.**—ಅವಸಾನದಲ್ಲಿ ಝಲ್‌ವರ್ಣಗಳಿಗೆ ಚರ್‌ವರ್ಣಗಳು ವಿಕಲ್ಪವಾಗಿ ಬರುತ್ತವೆ. " ವಿರಾಮೋಽವಸಾನಮ್ " ಸೂತ್ರದಿಂದ ಅವಸಾನ ಸಂಜ್ಞಾಹೇಳಿದೆ. ಕೊನೆಯವರ್ಣ ಅಥವಾ ಏನೂಇಲ್ಲದಿರುವುದು ಅವಸಾನ. ರಾಮಾದ್ ಎಂಬಲ್ಲಿ ಝಲ್‌ವರ್ಣ ದಕಾರ ಅವಸಾನವಾಗುತ್ತದೆ. ಆದುದರಿಂದ ಅದಕ್ಕೆ ವಿಕಲ್ಪವಾಗಿ ಚ್ ಬಂದರೆ (ಸ್ಥಾನಸಾಮ್ಯದಿಂದ ತಕಾರ) ರಾಮಾತ್ ಆಗುತ್ತದೆ. ರಾಮಾತ್, ರಾಮಾದ್ ಎರಡುರೂಪಗಳು. ರಾಮನದೆಸೆಯಿಂದ. ರಾಮಶಬ್ದದಮೇಲೆ ಪಂಚಮೀ ದ್ವಿವಚನ ವಿಭಕ್ತ್ಯಾಮಾಡಿದಾಗ ಭ್ಯಾಮ್ ಪ್ರತ್ಯಯ. ತೃತೀಯಾ ದ್ವಿವಚನದಂತೇ ಪ್ರಕ್ರಿಯೆ. ರಾಮ+ಭ್ಯಾಮ್=ರಾಮಾಭ್ಯಾಮ್. (ಇಬ್ಬರುರಾಮರದೆಸೆಯಿಂದ) ರಾಮಶಬ್ದದಮೇಲೆ ಪಂಚಮೀಬಹುವಚನವಿಭಕ್ತ್ಯಾಮಾಡಿದಾಗ ಭ್ಯಸ್ ಪ್ರತ್ಯಯ. ರಾಮ+ಭ್ಯಸ್. ಚತುರ್ಥೀ ಪಂಚಮಿಬಹುವಚನಗಳಲ್ಲಿ ಒಂದೇ ಪ್ರತ್ಯಯವಾಗುದರಿಂದ ಒಂದೇರೂಪ. " ಬಹುವಚನೇಝಲ್ಯೇತ್ " ಸೂತ್ರದಿಂದ ಅಕಾರಕ್ಕೆ ಏತ್ವ. ಸಕಾರಕ್ಕೆ ರುತ್ವ ವಿಸರ್ಗ. ರಾಮೇಭ್ಯಃ (ಬಹುರಾಮರದೆಸೆಯಿಂದ)

॥ ಷಷ್ಠೀವಿಭಕ್ತಿ ॥

ಜಸ್, ಓಸ್, ಆಮ್ ಷಷ್ಠೀವಿಭಕ್ತಿ. ಅ ಅಥವಾ ಗೆ ಇದರ ಅರ್ಥ. ರಾಮಶಬ್ದದ ಮೇಲೆ ಷಷ್ಠೀವಿಭಕ್ತಿವಚನವಿಭಕ್ತ್ಯಾಮಾಡಿದಾಗ ಜಸ್ ಪ್ರತ್ಯಯ.

ಹಿಂದೆಯೇ ಕಾರ್ಯ ವಿಹಿತನಾದುದರಿಂದ ರಾಮಸ್ಯ ಎಂದು ಸಿದ್ಧರೂಪವನ್ನು ಬರೆದಿರುತ್ತಾನೆ. ರಾಮ+ಜಸ್ ಎಂದಿರುವಾಗ ಹ್ರಸ್ವಾಕಾರಾಂತ ಅಂಗದ ಪರದಲ್ಲಿ ಜಸ್ ಬಂದುದರಿಂದ " ಟಾಜಸಿಜಸಾಮಿನಾತ್ಸ್ಯಾಂ " ಸೂತ್ರದಿಂದ ಅದಕ್ಕೆ ಸ್ಯ ಆದೇಶ. ರಾಮಸ್ಯ. ದೀರ್ಘಾದಿಗಳಿಗೆ ನಿಮಿತ್ತವಿಲ್ಲದಿರುವುದರಿಂದ ರಾಮಸ್ಯ ಎಂದೇ ಇರುತ್ತದೆ. ರಾಮನ ಎಂದರ್ಥ. ರಾಮಶಬ್ದದ ಮೇಲೆ ಷಷ್ಠೀ ದ್ವಿವಚನ ವಿಭಕ್ತ್ಯಾಮಾಡಿದಾಗ ಓಸ್ ಪ್ರತ್ಯಯ. " ನವಿಭಕ್ತಾ ತುಸ್ಮಾಃ " ಸೂತ್ರದಿಂದ ಸಕಾರಕ್ಕೆ ಇತ್ ಸಂಜ್ಞಾ ನಿಷೇಧ. ರಾಮ+ಓಸ್ ಎಂದಿರುವಾಗ ಅಂಗಕ್ಕೆ ಕಾರ್ಯಹೇಳುತ್ತಾನೆ.

(ಅಂಗಕ್ಕೆ ಏಕಾರ ಹೇಳುವಸೂತ್ರ)

೧೪೭. ಓಸಿ ಚ ॥ ೭-೩-೧೦೪ ॥

ಅತೋಽಙ್ಗಸ್ಯೈಕಾರಃ ॥ ರಾಮಯೋಃ ॥

ದ್ವಿಪದಸೂತ್ರ. ಓಸಿ ಸಪ್ತಮೀ " ತಸ್ಮಿನ್ನಿತಿನಿರ್ದಿಷ್ಟೇಪೂರ್ವಸ್ಯ " ಪರಿಭಾಷೆಯಿಂದ ಓಸ್‌ಪರವಾದಾಗ ಪೂರ್ವಕ್ಕೆ ಕಾರ್ಯವೆಂದು ತಿಳಿಯಬೇಕು. "ಅತೋ ಭಿಸಸ್ " ಸೂತ್ರದಿಂದ ಅನುವೃತ್ತವಾದ " ಅತಃ " ಎಂಬುದು ಅಧಿಕೃತವಾದ " ಅಂಗಸ್ಯ " ಎಂಬುದಕ್ಕೆ ವಿಶೇಷಣ. ಹ್ರಸ್ವಾಕಾರಾಂತನಾದ ಅಂಗವೆಂದಾಗುತ್ತದೆ. "ಬಹುವಚನೇಝಲ್ಯೇತ್" ಸೂತ್ರದಿಂದ ಏತ್ ಅನುವೃತ್ತವಾಗುತ್ತದೆ. **ಸೂತ್ರಾರ್ಥ.**. ಹ್ರಸ್ವಾಕಾರಾಂತವಾದ ಅಂಗಕ್ಕೆ ಓಸ್‌ಪರದಲ್ಲಿರುವಾಗ ಏಕಾರಾದೇಶ ಬರುತ್ತದೆ. ರಾಮ ಹ್ರಸ್ವಾಕಾರಾಂತವಾದ ಅಂಗ. ಇದಕ್ಕೆ ಓಸ್‌ಪರವಾಗಿದೆ. ಅಂಗಕ್ಕೆ ಏತ್ವವೆಂದುದರಿಂದ " ಅಲೋಂತ್ಯಸ್ಯ " ಪರಿಭಾಷೆಯಿಂದ ಅಂಗದ ಅಂತ್ಯಅಕಾರಕ್ಕೆ ಏಕಾರಾದೇಶ. ರಾಮೇ+ಓಸ್. ಏಕಾರಕ್ಕೆ ಅಚ್‌ಪರವಾದುದರಿಂದ "ಏಙೋಽಯವಾಯಾವಃ" ಸೂತ್ರದಿಂದ ಆಯಾದೇಶ. ರಾಮಯ್+ಓಸ್. ರಾಮಯೋಸ್. ಸದಾಂತಸಕಾರಕ್ಕೆ ರುತ್ವ ವಿಸರ್ಗ ರಾಮಯೋಃ. (ಇಬ್ಬರು ರಾಮರ.)

ರಾಮಶಬ್ದದಮೇಲೆ ಷಷ್ಠೀಬಹುವಚನವಿಭಕ್ತ್ಯಾ ಮಾಡಿದಾಗ ಆಮ್‌ಪ್ರತ್ಯಯ. ಮಕಾರ ವಿಭಕ್ತಿಯಲ್ಲಿರುವುದರಿಂದ ಇತ್ತಾಗುವುದಿಲ್ಲ. ರಾಮ+ಅಮ್ ಎಂದಿರುವಾಗ "ಅಕಃ ಸವರ್ಣೇ ದೀರ್ಘಃ" ಎಂಬುದರಿಂದ ಸವರ್ಣದೀರ್ಘ ಪ್ರಾಪ್ತವಾದರೆ ಅದಕ್ಕೆ ಅಪವಾದವಾಗಿ ಕಾರ್ಯಾಂತರಹೇಳುತ್ತಾನೆ.

(ಆಮಿಗೆ ನುಡಾಗಮ ಹೇಳುವ ಸೂತ್ರ)

೧೪೮. ಹ್ರಸ್ವನದ್ಯಾಪೋ ನುಟ್ ॥ ೭-೧-೫೪ ॥

ಹ್ರಸ್ವಾಂತಾನ್ನದ್ಯಂತಾದಾಬಂತಾಚ್ಚಾಙ್ಗಾತ್ಪರಸ್ಯಾಮೋ ನುಡಾಗಮಃ ॥

ಹ್ರಸ್ವನದ್ಯಾಪಃ, ನುಟ್ ॥ ದ್ವಿಪದಸೂತ್ರ. ಹ್ರಸ್ವಶ್ಚ, ನದೀ ಚ, ಆಪ್ ಚ ತೇಷಾಂ ಸಮಾಹಾರಃ ಹ್ರಸ್ವನದ್ಯಾಪ್. ತಸ್ಮಾತ್. ಹ್ರಸ್ವನದ್ಯಾಪಃ. ಸ್ತ್ರೀಲಿಂಗದಲ್ಲಿ ಇಕಾರ ಉಕಾರಾಂತ ಶಬ್ದಗಳಿಗೆ ನದೀ ಸಂಜ್ಞೆ ಮುಂದೆ ಹೇಳುತ್ತಾನೆ. ಆಪ್. ಸ್ತ್ರೀ ಲಿಂಗವನ್ನು ಬೋಧಿಸುವ ಪ್ರತ್ಯಯ. "ಅಂಗಸ್ಯ" ಅಧಿಕಾರ. ಪಂಚಮ್ಯಂತವಾಗಿ ಇಲ್ಲಿ ವಿಪರಿಣತವಾಗುತ್ತದೆ. ಹ್ರಸ್ವಾದಿಗಳು ಅದಕ್ಕೆ ವಿಶೇಷಣ. "ಆಮಿ ಸರ್ವನಾಮ್ನಃ ಸುಟ್" ಸೂತ್ರದಿಂದ "ಆಮಿ" ಎಂಬುದು ಆನುವೃತ್ತವಾಗಿ ಷಷ್ಠ್ಯಂತವಾಗಿ ವಿಪರಿಣತವಾಗುತ್ತದೆ. ಪಂಚಮೀ ಸಪ್ತಮಿಗಳಲ್ಲಿ ಪಂಚಮಿಗೆ ಪ್ರಾಬಲ್ಯವೆಂದು ಹಿಂದೆ ಹೇಳಿದೆ. ನುಟ್ ಟಿತ್ತಾದುದರಿಂದ "ಆದ್ಯಂತೌ ಟಕಿತೌ" ಸೂತ್ರದಿಂದ ಆದ್ಯವಯವವಾಗಿ ಬರುವುದರಿಂದ ಆಗಮವೆನಿಸುತ್ತದೆ. **ಸೂತ್ರಾರ್ಥ**—ಹ್ರಸ್ವಾಂತವಾದ, ನದ್ಯಂತವಾದ ಆಬಂತವಾದ ಅಂಗದ ಪರದಲ್ಲಿರುವ ಆಮಿಗೆ ನುಡಾಗಮ ಬರುತ್ತದೆ. ರಾಮ+ಆಮ್ ಇಲ್ಲಿ ರಾಮ ಹ್ರಸ್ವಾಂತವಾದ ಅಂಗ. ಇದರಪರದಲ್ಲಿರುವ ಆಮಿಗೆ ನುಡಾಗಮ. ಟಿತ್ತಾದುದರಿಂದ ಆಮಿನ ಆದ್ಯವಯವವಾಗಿ ಬಂದರೆ ರಾಮ+ನ್ ಆಮ್ ಆಗುತ್ತದೆ. ನುಟಿನಲ್ಲಿ ಟಕಾರ "ಹಲಂತ್ಯಮ್" ಸೂತ್ರದಿಂದ ಇತ್ತಾಗಿ ಲೋಪ ಹೊಂದುತ್ತದೆ. ಉಕಾರ ಉಚ್ಚಾರಣಾರ್ಥ. ರಾಮ ನಾಮ್ ಎಂದಿರುವಾಗ ಅಂಗಕ್ಕೆ ದೀರ್ಘ ಹೇಳುತ್ತಾನೆ.

(ಅಂಗಕ್ಕೆ ದೀರ್ಘ ಹೇಳುವ ಸೂತ್ರ)

೧೪೯. ನಾಮಿ ॥ ೬-೪-೩ ॥

ನಾಮಿಪರೇ–ಅಜಂತಾಙ್ಗಸ್ಯ ದೀರ್ಘಃ ॥ ರಾಮಾಣಾಮ್ ॥

ರಾಮೇ । ರಾಮಯೋಃ । ಸುಪಿ—ಏತ್ವೇ ಕೃತೇ ॥

ಏಕಪದಸೂತ್ರ. ನಾಮ್ ಎಂಬುದರ ಸಪ್ತಮೀ ನಾಮಿ. "ಢ್ರಲೋಪೇ ಪೂರ್ವಸ್ಯ ದೀರ್ಘೋಽಣಃ" ಸೂತ್ರದಿಂದ "ದೀರ್ಘಃ" ಅನುವೃತ್ತವಾಗುತ್ತದೆ. ಯಾವ ಸೂತ್ರದಲ್ಲಿಯಾದರೂ ದೀರ್ಘವಿಧಾನಮಾಡಿದರೆ ಸ್ಥಾನಿಹೇಳದಿದ್ದರೆ "ಅಚಃ" ಎಂಬ ಷಷ್ಠ್ಯಂತಪದವು ಸನ್ನಿಹಿತವಾಗುತ್ತದೆ. ಇಲ್ಲಿ ದೀರ್ಘ ಹೇಳುವುದರಿಂದ "ಅಚಃ" ಉಪಸ್ಥಿತವಾದರೆ ಅದು ಅಂಗಕ್ಕೆ ವಿಶೇಷಣ. ಅಂಗಾಧಿಕಾರವಿರುವುದರಿಂದ "ಅಂಗಸ್ಯ" ಅಧಿಕೃತವಾಗುತ್ತದೆ. **ಸೂತ್ರಾರ್ಥ**–ನಾಮ್ ಪರದಲ್ಲಿರುವಾಗ ಅಜಂತವಾದ ಅಂಗಕ್ಕೆ ದೀರ್ಘ. ನಾಮ್ ಪರದಲ್ಲಿರುವ ರಾಮವೆಂಬುದು ಅಜಂತವಾದ ಅಂಗ. ದೀರ್ಘ ಒಂದರೆ ರಾಮಾನಾಮ್ ಆಗುತ್ತದೆ ರೇಫನಕಾರಗಳಮಧ್ಯದಲ್ಲಿ ಅಟ್‌ಪವರ್ಗ ವಿರು

ವುದರಿಂದ "ಅಟ್‌ಕುಪ್ವಾಙ್‌ನುಮ್‌ವ್ಯವಾಯೇಽಪಿ" ಸೂತ್ರದಿಂದ ನಕಾರಕ್ಕೆ ಣತ್ವ. ರಾಮಾಣಾಮ್ (ಬಹುರಾಮರ.)

॥ ಸಪ್ತಮೀ ವಿಭಕ್ತಿ ॥

ಙಿ, ಓಸ್, ಸುಪ್, ಈ ಮೂರು ಸಪ್ತಮೀ ವಿಭಕ್ತಿ. "ಅಲ್ಲಿ" ಸಪ್ತಮ್ಯರ್ಥ. ರಾಮ ಶಬ್ದದ ಮೇಲೆ ಸಪ್ತಮೀ ಏಕವಚನ ವಿವಕ್ಷಾಮಾಡಿದಾಗ ಙಿ ಪ್ರತ್ಯಯ. ಪ್ರತ್ಯಯದ ಆದಿಯಲ್ಲಿ ಙಕಾರವಿರುವುದರಿಂದ ಅದುಕವರ್ಗವಾದುದರಿಂದ "ಲಶಕ್ವತದ್ಧಿತೇ" ಸೂತ್ರದಿಂದ ಇತ್‌ಸಂಜ್ಞೆ ಬಂದು "ತಸ್ಯಲೋಪಃ" ಸೂತ್ರದಿಂದ ಲೋಪಹೊಂದುತ್ತದೆ. ರಾಮ+ಇ ಎಂದಿರುವಾಗ ಅಕಾರಕ್ಕೆ ಅಚ್‌ಪರವಾದುದರಿಂದ "ಆದ್ಗುಣಃ" ಸೂತ್ರದಿಂದ ಗುಣ ಏಕಾದೇಶ. (ಅ+ಇ=ಏ) ರಾಮೇ. (ರಾಮನಲ್ಲಿ) ರಾಮಶಬ್ದದಮೇಲೆ ಸಪ್ತಮೀದ್ವಿವಚನ ವಿವಕ್ಷಾಮಾಡಿದಾಗ ಓಸ್ ಪ್ರತ್ಯಯ. ಷಷ್ಠೀದ್ವಿವಚನಕ್ಕೂ ಇದಕ್ಕೂ ಪ್ರತ್ಯಯ ಒಂದೇಆದುದರಿಂದ ಕಾರ್ಯವಿಶೇಷವಿಲ್ಲ. ರಾಮ+ಓಸ್ "ಓಸಿಚ" ಸೂತ್ರದಿಂದ ಅಂಗಕ್ಕೆ ಏಕಾರ. ಅದಕ್ಕೆ ಅಯಾದೇಶ. ಸಕಾರಕ್ಕೆ ರುತ್ವವಿಸರ್ಗ ರಾಮಯೋಃ. (ಇಬ್ಬರು ರಾಮರಲ್ಲಿ). ರಾಮಶಬ್ದದಮೇಲೆ ಸಪ್ತಮೀ ಬಹುವಚನ ವಿವಕ್ಷಾಮಾಡಿದಾಗ ಸುಪ್‌ಪ್ರತ್ಯಯ ಇದು ಪ್ರತ್ಯಾಹಾರವಲ್ಲ, ಸುಪ್ ಹಿಂದೆ 21 ವಿಭಕ್ತಿಯಸಂಜ್ಞೆಯಂದು ಹೇಳಿದ್ದರೂ ಇಲ್ಲಿ ಸುಪ್‌ಎಂಬುದೇ ಆನುಪೂರ್ವಿ. "ಹಲಂತ್ಯಮ್" ಸೂತ್ರದಿಂದ ಪಕಾರಕ್ಕೆ ಇತ್‌ಸಂಜ್ಞಾ ಬರುವುದರಿಂದ ಅದು ಲೋಪವಾಗುತ್ತದೆ. ರಾಮ+ಸು ಎಂದಿರುವಾಗ ಸುಯಂಬುದು ಝಲಾದಿಬಹುವಚನವಾದುದರಿಂದ "ಬಹುವಚನೇ ಝಲ್ಯೇತ್" ಸೂತ್ರದಿಂದ ಅಂಗಕ್ಕೆ ಏಕಾರಾದೇಶ. ಇದನ್ನೇ "ಏತ್ವೇ ಕೃತೇ"–ಎಂದು ವೃತ್ತಿಯಲ್ಲಿ ಹೇಳಿರುತ್ತಾನೆ. ಏತ್ವಮಾಡಿದರೆ ರಾಮೇಸು ಎಂದಾಗುತ್ತದೆ. ಆಗ ಕಾರ್ಯವಿಶೇಷವನ್ನು ಹೇಳುತ್ತಾನೆ.

(ಷತ್ವವಿಧಾಯಕಸೂತ್ರ)

೧೫೦. ಆದೇಶಪ್ರತ್ಯಯಯೋಃ ॥ ೮-೩-೫೯ ॥

ಇಣ್ಕುಭ್ಯಾಂ ಪರಸ್ಯಾಪದಾಂತಸ್ಯಾದೇಶಸ್ಯ ಪ್ರತ್ಯಯಾವಯವಶ್ಚ ಯಃ ಸಃ ತಸ್ಯ ಮೂರ್ಧನ್ಯಾದೇಶಃ। ಈಷದ್ವಿವೃತಸ್ಯ ಸಸ್ಯ ತಾದೃಶ ಏವ ಷಃ । ರಾಮೇಷು । ಏವಂ ಕೃಷ್ಣಾದಯೋಽಪ್ಯಾದಂತಾಃ ॥

ಏಕಪದಸೂತ್ರ. "ಇಣ್ಕೋಃ" ಅಧಿಕಾರ. ಇಣ್‌ಕವರ್ಗದ ಪರಕ್ಕೆ ಕಾರ್ಯವೆಂದು ತಿಳಿಸುತ್ತದೆ. "ಅಪದಾಂತಸ್ಯ ಮೂರ್ಧನ್ಯಃ" ಇದೂ ಅಧಿಕಾರ. ಇಣ್‌ಕ

ವರ್ಗದ ಪರಕ್ಕೆ ಅಪದಾಂತದಲ್ಲಿ (ಪದದ ಕೊನೆಯನ್ನು ಬಿಟ್ಟು) ಮೂರ್ಧನ್ಯಾದೇಶ ಎಂದು ತಿಳಿಸುತ್ತದೆ. ಮೂರ್ಧ್ನಿಭವಃ ಮೂರ್ಧನ್ಯಃ "ಋಟುರಷಾಣಾಂ ಮೂರ್ಧಾ" ಎಂದು ಹಿಂದೆ ಹೇಳಿದೆ. ಮೂರ್ಧದಲ್ಲಿ ಹುಟ್ಟಿದ ವರ್ಣ. ಪ್ರಕೃತದಲ್ಲಿ ಷಕಾರ. ಆದೇಶಶ್ಚ ಪ್ರತ್ಯಯಶ್ಚ ಆದೇಶಪ್ರತ್ಯಯೌ, ತಯೋಃ ಆದೇಶಪ್ರತ್ಯಯಯೋಃ. ಷಷ್ಠೀ ಆದೇಶದಲ್ಲಿ ಅಭೇದಾರ್ಥ, ಪ್ರತ್ಯಯದಲ್ಲಿ ಅವಯವಾರ್ಥ ತಿಳಿಸುತ್ತದೆ. "ಸಹೇಃ ಸಾಡಃ ಸಃ" ಸೂತ್ರದಿಂದ "ಸಃ" ಅನುವೃತ್ತವಾಗುತ್ತದೆ. (ಸಃ ಸೋಃ ಸಾಮ್) ಅದು ಷಷ್ಠೀ ಏಕವಚನ. ಸಕಾರಕ್ಕೆ ಎಂದರ್ಥ. **ಸೂತ್ರಾರ್ಥ**—ಇಣ್ ಕವರ್ಗದ ಪರದಲ್ಲಿರುವ ಪದಾಂತದಲ್ಲಿ ಇಲ್ಲದಿರುವ, ಆದೇಶವಾಗಿ ಬಂದ, ಅಥವಾ ಪ್ರತ್ಯಯದ ಅವಯವವಾದ ಸಕಾರಕ್ಕೆ ಮೂರ್ಧನ್ಯಾದೇಶ ಬರುತ್ತದೆ. ರಾಮೇಸು ಇಲ್ಲಿ ಸಕಾರ ಪ್ರತ್ಯಯದ ಅವಯವ. ಇದು ಪದಾಂತದಲ್ಲಿ ಇಲ್ಲ. ಪದಾಂತದಲ್ಲಿರುವುದು ಉಕಾರ. ಪ್ರತ್ಯಯಾವಯವಾದ ಸಕಾರವು ಏಕಾರರೂಪವಾದ ಇಣ್ಣಿನ ಪರದಲ್ಲಿ ಇದೆ. ಇದಕ್ಕೆ ಮೂರ್ಧನ್ಯಾದೇಶ ಬರಬೇಕು. "ಈಷದ್ವಿವೃತಸ್ಯ"—ವಾಕ್ಯದಿಂದ ಸಕಾರಕ್ಕೆ ಬರಲು ಯೋಗ್ಯವಾದ ಮೂರ್ಧನ್ಯಾದೇಶ ಹೇಳುತ್ತಾನೆ. ಸಕಾರಕ್ಕೆ ಈಷದ್ವಿವೃತ ಆಭ್ಯಂತರಪ್ರಯತ್ನ. ಮೂರ್ಧನ್ಯಗಳಾದ ಋಕಾರ ಟವರ್ಗ ರೇಷ ಷಕಾರಗಳಲ್ಲಿ ಈಷದ್ವಿವೃತ ಪ್ರಯತ್ನವಿರುವುದು ಷಕಾರ. "ಈಷದ್ವಿವೃತಮೂಷ್ಮಣಾಮ್" ಎಂದು ಹಿಂದೆ ಹೇಳಿದೆ. ಹೀಗೆ ಷಕಾರಾದೇಶಬಂದರೆ ರಾಮೇಷು ಎಂದಾಗುತ್ತದೆ. ಬಹು ರಾಮರಲ್ಲಿ ಎಂದರ್ಥ. ರಾಮ ಶಬ್ದದಮೇಲೆ ಏಳುವಿಭಕ್ತಿ ಪ್ರತ್ಯಯಗಳೂ ಹೇಳಿದಂತಾಯಿತು.

ಪ್ರಥಮಾ— ರಾಮಃ ರಾಮೌ ರಾಮಾಃ ॥ ಸಂಬೋಧನ ಪ್ರಥಮಾ— ಹೇ ರಾಮ ಹೇ ರಾಮೌ ಹೇ ರಾಮಾಃ ॥ ದ್ವಿತೀಯಾ—ರಾಮಂ ರಾಮೌ ರಾಮಾನ್ ॥ ತೃತೀಯಾ—ರಾಮೇಣ ರಾಮಾಭ್ಯಾಮ್. ರಾಮೈಃ ॥ ಚತುರ್ಥೀ— ರಾಮಾಯ ರಾಮಾಭ್ಯಾಮ್ ರಾಮೇಭ್ಯಃ॥ ಪಂಚಮೀ—ರಾಮಾತ್ ರಾಮಾಭ್ಯಾಮ್ ರಾಮೇಭ್ಯಃ॥ ಷಷ್ಠೀ—ರಾಮಸ್ಯ ರಾಮಯೋಃ ರಾಮಾಣಾಮ್ ॥ ಸಪ್ತಮೀ—ರಾಮೇ ರಾಮಯೋಃ ರಾಮೇಷು.

ಹೀಗೆ ಪುಲ್ಲಿಂಗದಲ್ಲಿ ಅಕಾರಾಂತಗಳಾದ ಕೃಷ್ಣ. ಗೋವಿಂದ, ಘಟ, ಪಾಕ ಮುಂತಾದ ಶಬ್ದಗಳ ಪ್ರಕ್ರಿಯೆಗಳನ್ನು ಊಹಿಸಿ ತಿಳಿದುಕೊಳ್ಳಬೇಕು.

ಸರ್ವ ಮುಂತಾದ ಕೆಲವು ಶಬ್ದಗಳಿಗೆ "ಸರ್ವನಾಮ" ಎಂಬ ಸಂಜ್ಞೆಯನ್ನು ಹೇಳುತ್ತಾನೆ. ಸರ್ವ ಮುಂತಾದವು ಹ್ರಸ್ವಾಕಾರಾಂತವಾದರೂ ಕೆಲವೆಡೆಗಳಲ್ಲಿ ರಾಮಶಬ್ದಂತೆ ಪ್ರಕ್ರಿಯೆಯನ್ನು ಹೊಂದುವುದಿಲ್ಲ. ಸರ್ವನಾಮಕಾರ್ಯಗಳು

ಸಾಮಾನ್ಯವಾಗಿ ಪ್ರಥಮಾ ಬಹುವಚನ, ಚತುರ್ಥೀ, ಪಂಚಮೀ, ಸಪ್ತಮೀ ಏಕವಚನ, ಷಷ್ಠೀ ಬಹುವಚನ, ಈ ವಿಭಕ್ತಿಗಳಲ್ಲಿ ವಿಶೇಷವಾಗಿ ಬರುತ್ತವೆ. "ಸರ್ವನಾಮ" ಎಂದು ಮಹಾಸಂಜ್ಞೆ ಮಾಡಿರುವುದರಿಂದ ಈ ಗಣದಲ್ಲಿ ಸೇರಿರುವ ಶಬ್ದಗಳೆಲ್ಲವೂ ಅನ್ವರ್ಥನಾಮ ಹೊಂದಿರುತ್ತವೆ. ಅನ್ವರ್ಥವಿಲ್ಲವಾದರೆ ಅರ್ಥಮಾತ್ರಾಲಾಘವಾಭಿಲಾಷಿಯೈಯಾಕರಣಪಾಣಿನಿಯು ಬೇರಿಕಡೆಯಲ್ಲಿ ಮಾಡಿರುವ ಟಿ, ಘು ಮುಂತಾದವುಗಳಂತೇ ಹ್ರಸ್ವವಾದ ಹೆಸರನ್ನಿಡುತ್ತಿದ್ದನು. ಸರ್ವೇಷಾಂ ನಾಮ ಸರ್ವನಾಮ. ಎಲ್ಲರಲ್ಲಿಯೂ ಬಳಸಲು ಯೋಗ್ಯವಾದವುಗಳು. ನೀನು ನಾನು ಮುಂತಾದ ಸರ್ವನಾಮಪದಗಳು ಎಲ್ಲರಲ್ಲಿಯೂ ಹೇಳಲು ಅರ್ಹತೆಹೊಂದಿವೆ. ಮನುಷ್ಯ ಪಶುಪಕ್ಷ್ಯಾದಿಗಳೆಲ್ಲವೂ ತ್ವಂ, ಅಹಂ (ನೀನು, ನಾನು) ಎಂದು ವ್ಯವಹಾರ ಮಾಡುತ್ತವೆ. ಆದುದರಿಂದ ಇಂಥಾ ಶಬ್ದಗಳೇ ಈಗಣದಲ್ಲಿ ಸೇರಿರುತ್ತವೆ. ಸರ್ವನಾಮ ಕಾರ್ಯಕ್ಕೋಸ್ಕರ ಸರ್ವನಾಮಸಂಜ್ಞೆಯನ್ನು ಮೊದಲು ಹೇಳುತ್ತಾನೆ.

(ಸರ್ವನಾಮ ಸಂಜ್ಞೆ ಹೇಳುವ ಸೂತ್ರ)

೧೫೧. ಸರ್ವಾದೀನಿ ಸರ್ವನಾಮಾನಿ ॥ ೧-೧-೨೭ ॥

ಸರ್ವಾದೀನಿ ಶಬ್ದಸ್ವರೂಪಾಣಿ ಸರ್ವನಾಮಸಂಜ್ಞಾನಿ ಸ್ಯುಃ ॥ ಸರ್ವ, ವಿಶ್ವ, ಉಭ, ಉಭಯ, ಡತರ, ಡತಮ, ಅನ್ಯ, ಅನ್ಯತರ, ತ್ವತ್, ತ್ವ, ನೇಮ, ಸಮ, ಸಿಮ, । ಪೂರ್ವಪರಾವರದಕ್ಷಿಣೋತ್ತರಾಪರಾಧರಾಣಿ ವ್ಯವಸ್ಥಾಯಾಮಸಂಜ್ಞಾಯಾಮ್ । ಸ್ವಮಜ್ಞಾತಿಧನಾಖ್ಯಾಯಾಮ್ । ಅಂತರಂ ಬಹಿರ್ಯೋಗೋಪಸಂವ್ಯಾನಯೋಃ । ತ್ಯದ್, ತದ್, ಯದ್, ಏತದ್, ಇದಮ್, ಅದಸ್, ಏಕ, ದ್ವಿ, ಯುಷ್ಮದ್, ಅಸ್ಮದ್, ಭವತು, ಕಿಮ್ ॥

ದ್ವಿಪದಸೂತ್ರ. ಶಬ್ದಸ್ವರೂಪಾಣಿ ಎಂದು ವಿಶೇಷ್ಯವನ್ನು ಅಧ್ಯಾಹಾರಮಾಡಿಕೊಳ್ಳಬೇಕು. **ಸೂತ್ರಾರ್ಥ**— ಸರ್ವಮುಂತಾದ ಶಬ್ದಸ್ವರೂಪಗಳು "ಸರ್ವನಾಮ" ವೆಂಬ ಸಂಜ್ಞೆಯನ್ನು ಹೊಂದುತ್ತವೆ. ಸರ್ವಮುಂತಾದವುಗಳು ಯಾವುವೆಂದು ಪಾಣಿನಿಯೇ ಗಣಪಾಠದಲ್ಲಿ ಹೇಳಿರುತ್ತಾನೆ. ಸರ್ವಾದಿಗಳು ಮೂವತ್ತೈದು. ಈ ಮೂವತ್ತೈದನ್ನು ಹೇಳುವಾಗ ಮಧ್ಯೆ ಸೂತ್ರರೂಪವಾಗಿ ಹೇಳಿರುತ್ತಾನೆ. ಇವು ಗಣಾಂತರ್ಗತ (ಅಂತರ್ಗಣ) ಸೂತ್ರಗಳು. ಪೂರ್ವಮೊದಲಾದ ಏಳು ಶಬ್ದಗಳು ವ್ಯವಸ್ಥಾಯಮತ್ತು ಅಸಂಜ್ಞಾ ಅರ್ಥದಲ್ಲಿಮಾತ್ರ ಸರ್ವನಾಮಸಂಜ್ಞೆಯನ್ನು ಹೊಂದುತ್ತವೆ. ಇತರ ಅರ್ಥದಲ್ಲಿ ಸರ್ವನಾಮಸಂಜ್ಞೆಯಿಲ್ಲದುದರಿಂದ ಪೂರ್ವಾದಿಗಳು ರಾಮ

ಶಬ್ದದಂತೆಯೇ ಆಗುತ್ತವೆ. (ಸ್ವಮ್.....ಯಾಮ್) ಎರಡನೇ ಸೂತ್ರದಲ್ಲಿ ಸ್ವ ಎಂಬ ಒಂದು ಶಬ್ದ ಹೇಳಿದೆ. ಇದು ಜ್ಞಾತಿಧನ ಎಂದು ಅರ್ಥಕೊಡದಿರುವಾಗ ಸ್ವ ಎಂಬ ಸರ್ವನಾಮಸಂಜ್ಞೆಯನ್ನು ಹೊಂದುತ್ತದೆ. ಮೂರನೇ ಸೂತ್ರದಲ್ಲಿ ಹೇಳಿದ ಅಂತ್ಯ ಎಂಬ ಒಂದು ಶಬ್ದವು ಬಹಿರ್ಯೋಗ, ಉಪಸಂವ್ಯಾನವೆಂಬ ಎರಡು ಅರ್ಥದಲ್ಲಿ ಮತ್ತೆ ಸರ್ವನಾಮಸಂಜ್ಞೆಯನ್ನು ಹೊಂದುತ್ತವೆ. ಆ ಪದಗಳ ಅರ್ಥಗಳು ಮುಂದೆ ಸೂತ್ರದಲ್ಲಿ ಗ್ರಂಥಕಾರನೇ ವಿವರಿಸುವುದರಿಂದ ಅಲ್ಲಿಯೇ ಅದರ ಅರ್ಥ ತಿಳಿಯುತ್ತದೆ.

ಸರ್ವಾದಿಗಳ ಅರ್ಥ. ಸರ್ವ, ವಿಶ್ವ=ಎಲ್ಲಾ. ಉಭ=ಎರಡು (ಇಬ್ಬರು) ಉಭಯ=ಎರಡು ಅವಯವವಿರುವ, ಡತರ ಡತಮ ಇವೆರಡು ಪ್ರತ್ಯಯಗಳು. ನಿರ್ಧಾರಣೆ ಪ್ರಶ್ನೆಯಲ್ಲಿ ಬರುತ್ತವೆ. ಅನ್ಯ, ಅನ್ಯತರ, ಇತರ, ತ್ವತ್, ತ್ವ, ಈ ಆರು ಅನ್ಯಾರ್ಥಗಳು. ನೇಮ=ಅರ್ಧ. ಸಮ=ಎಲ್ಲಾ. ಸಿಮ=ಎಲ್ಲಾ. ಪೂರ್ವ....ಅಧರ=(?) ದಿಗ್ವಾಚಕಗಳು. ಸ್ವ=ತಾನು, ತನ್ನದು. ಅಂತರ=ಹೊರಗಿನ, ತ್ಯದ್, ತದ್=ಅವನು. (ಅದು) ಯದ್=ಯಾವ ಏತದ್, ಇದಮ್, ಅದಸ್,=ಇವನು, (ಇದು) ಏಕ=ಒಂದು, ದ್ವಿ=ಎರಡು. ಯುಷ್ಮದ್=ನೀನು. ಅಸ್ಮದ್=ನಾನು, ಭವತ್=ತಾವು. ಕಿಮ್=ಏನು ? ಇವುಗಳ ಅರ್ಥ ಮತ್ತು ವಿಶೇಷವನ್ನು ಮುಂದೆ ವಿವರವಾಗಿ ಹೇಳುತ್ತಾನೆ.

ಸರ್ವ ಶಬ್ದವು ಪ್ರಥಮಾ ವಿಭಕ್ತಿ ಏಕವಚನ, ದ್ವಿವಚನಗಳಲ್ಲಿ ರಾಮಶಬ್ದದಂತೆಯೇ ಪ್ರಕ್ರಿಯೆ ಹೊಂದುತ್ತದೆ. ಸರ್ವಃ, ಸರ್ವೌ.

ಪ್ರಥಮಾ ಬಹುವಚನದಲ್ಲಿ ಜಸ್‌ಪ್ರತ್ಯಯ ಬಂದಾಗ ಕಾರ್ಯವಿಶೇಷವನ್ನು ಹೇಳುತ್ತಾನೆ.

(ಜಸ್‌ವಿಭಕ್ತಿಗೆ ಕಾರ್ಯಹೇಳುವ ಸೂತ್ರ)

೧೫೨. ಜಸಃ ಶೀ ॥ ೭-೧-೧೭ ॥

ಅದಂತಾತ್ಸರ್ವನಾಮ್ನೋ ಜಸಃ ಶೀ ಸ್ಯಾತ್ ॥ ಅನೇಕಾಲ್ತ್ವಾತ್ಸರ್ವಾದೇಶಃ ॥ ಸರ್ವೇ

ದ್ವಿಪದಸೂತ್ರ. ಜಸಃ ಷಷ್ಠ್ಯೇ. "ಅತೋಭಿಸ ಐಸ್" ಸೂತ್ರದಿಂದ "ಅತಃ" "ಸರ್ವನಾಮ್ನಃ ಸ್ಮೈ" ಸೂತ್ರದಿಂದ "ಸರ್ವನಾಮ್ನಃ" ಎಂಬ ಪದಗಳು ಅನುವೃತ್ತವಾಗುತ್ತವೆ. ಅತಃ ಸರ್ವನಾಮ್ನಃ ಎಂಬುದಕ್ಕೆ ವಿಶೇಷಣ. ಅದು ಪಂಚಮಿಯಾದುದರಿಂದ ಪರಕ್ಕೆ ಕಾರ್ಯವೆಂದು ತಿಳಿಯಬೇಕು, **ಸೂತ್ರಾರ್ಥ.**—ಅದಂತವಾದ (ಹ್ರಸ್ವಾಕಾರ) ಸರ್ವನಾಮ ಶಬ್ದದ ಪರದಲ್ಲಿರುವ ಜಸ್‌ಪ್ರತ್ಯಯಕ್ಕೆ ಶೀ ಆದೇಶ

ಬರುತ್ತದೆ. ಸರ್ವಶಬ್ದವು ಹ್ರಸ್ವಾಕಾರಾಂತವಾದ ಸರ್ವನಾಮಶಬ್ದ. ಇದರ ಪರದ ಜಸಿಗೆ-ಶೀ ಆದೇಶ. ಶೀ ಯಂಬಲ್ಲಿ ಶಕಾರಕ್ಕೆ ಇತ್‌ಸಂಜ್ಞೆ ಹೇಳಬೇಕು. ಇದರ ಪರದ ಆದಿಗೆ "ಲಶಕ್ವತದ್ಧಿತೇ" ಸೂತ್ರವು ಇತ್‌ಸಂಜ್ಞೆಯನ್ನು ಹೇಳುತ್ತದೆ. ಪ್ರತ್ಯಯದ ವಾಗಬೇಕಾದರೆ ಜಸಿನ ಸ್ಥಾನಕ್ಕೆ ಬಂದಮೇಲೆ ಸ್ಥಾನಿನದ್ಭಾವ ಬಂದು ಆಗುತ್ತದೆ. ಶೀ ಪ್ರತ್ಯಯ ಜಸಿಗೆ ಬರುವುದಾದರೆ ಮೊದಲು ಪ್ರತ್ಯಯವಾಗದಿರುವುದರಿಂದ ಅದು ಅನೇಕಾಲಾಯಿತು. ಆಗ "ಅನೇಕಾಲ್‌ಶಿತ್ಸರ್ವಸ್ಯ" ಸೂತ್ರದಿಂದ ಅನೇಕಾಲಾದುದರಿಂದ ಸರ್ವಾದೇಶವಾಗಿ ಬರುತ್ತದೆ. ಇದನ್ನೇ "ಅನೇಕಾಲ್ಶಿತ್ ಸರ್ವಾದೇಶಃ" ಎಂದು ಗ್ರಂಥಕಾರನು ಹೇಳುತ್ತಾನೆ. ಜಸಿನ ಸ್ಥಾನಕ್ಕೆ ಬಂದಮೇಲೆ ಸರ್ವ+ಶೀ ಆಗುತ್ತದೆ. ಇಲ್ಲಿ ಸ್ಥಾನಿವದಾದೇಶೋನಲ್ವಿಧೌ" ಸೂತ್ರದಿಂದ ಆದೇಶವು ಸ್ಥಾನಿಯಧರ್ಮವನ್ನು ಹೊಂದುತ್ತದೆಯಂದುದರಿಂದ ಶೀ ಯಂಬುದಕ್ಕೆ ಪ್ರತ್ಯಯತ್ವ ಬರುತ್ತದೆ. ಆಗ ಪ್ರತ್ಯಯಾದಿಯಲ್ಲಿ ಶಕಾರವಿರುವುದರಿಂದ "ಲಶಕ್ವತದ್ಧಿತೇ" ಸೂತ್ರದಿಂದ ಆದಕ್ಕೆ ಇತ್‌ಸಂಜ್ಞೆ ಬಂದು "ತಸ್ಯಲೋಪಃ" ಸೂತ್ರದಿಂದ ಲೋಪವಾಗುತ್ತದೆ. ಸರ್ವ+ಈ ಎಂದಿರುವಾಗ "ಆದ್ಗುಣಃ" ಎಂಬುದರಿಂದ ಗುಣ ಬಂದರೆ ಸರ್ವೇ ಎಂದಾಗುತ್ತದೆ. ಎಲ್ಲರು ಎಂದರ್ಥ. ಸಂಬೋಧನ ಪ್ರಥಮೆಯಲ್ಲಿ ಪ್ರಥಮಾದಂತೆಯೇ ಕಾರ್ಯಗಳು. ಹೇ ಸರ್ವ, ಹೇ ಸರ್ವೌ, ಹೇಸರ್ವೇ. ಏಕವಚನದಲ್ಲಿ ರಾಮಶಬ್ದದಂತೆ ಪ್ರಕ್ರಿಯೆ. ಸುಲೋಪ. ದ್ವಿತೀಯಾ ತೃತೀಯಾ ವಿಭಕ್ತಿಗಳಲ್ಲಿ ರಾಮಶಬ್ದದಂತೆ ಪ್ರಕ್ರಿಯೆ. ಸರ್ವಂ ಸರ್ವೌ, ಸರ್ವಾನ್. ತೃ—ಸರ್ವೇಣ, ಸರ್ವಾಭ್ಯಾಮ್, ಸರ್ವೈಃ. ಸರ್ವಶಬ್ದದಮೇಲೆ ಚತುರ್ಥೀ ಏಕವಚನದಲ್ಲಿ ಜಿೀ ಪ್ರತ್ಯಯ. ಸರ್ವ ಜಿೀ ಎಂದಿರುವಾಗ ಪ್ರತ್ಯಯಕ್ಕೆ ಆದೇಶ ಹೇಳುತ್ತಾನೆ.

(ಸ್ಮೈ ಆದೇಶ ಹೇಳುವ ಸೂತ್ರ)

೧೫೩. ಸರ್ವನಾಮ್ನಃ ಸ್ಮೈ ॥ ೭-೧-೧೪ ॥

ಅತಃ ಸರ್ವನಾಮ್ನಃ "ಜಿೀ" ಇತ್ಯಸ್ಯ ಸ್ಮೈ ಸ್ಯಾತ್ ॥ ಸರ್ವಸ್ಮೈ ॥

ದ್ವಿಪದಸೂತ್ರ. "ಅತೋ ಭಿಸ ಐಸ್" ಸೂತ್ರದಿಂದ "ಅತಃ" ಅನುವೃತ್ತವಾಗಿ "ಸರ್ವನಾಮ್ನಃ" ಎಂಬುದಕ್ಕೆ ವಿಶೇಷಣವಾಗುತ್ತದೆ "ಜಿೀರ್ಯಃ" ಸೂತ್ರದಿಂದ "ಜಿೀಃ" ಅನುವೃತ್ತವಾಗುತ್ತದೆ. ಅದು ಷಷ್ಠ್ಯೇ. **ಸೂತ್ರಾರ್ಥ**—ಹ್ರಸ್ವಾಕಾರಾಂತವಾದ ಸರ್ವನಾಮದ ಪರದಲ್ಲಿರುವ ಜಿೀ ವಿಭಕ್ತಿಗೆ ಸ್ಮೈ ಆದೇಶ ಬರುತ್ತದೆ. ಸರ್ವ. ಹ್ರಸ್ವಾಕಾರಾಂತವಾದ ಸರ್ವನಾಮಶಬ್ದ ಪರದ ಜಿೀ ಪ್ರತ್ಯಯಕ್ಕೆ ಸ್ಮೈ ಆದೇಶ, ಅನೇಕಾಲಾದುದರಿಂದ ಸರ್ವಾದೇಶ. ಸರ್ವಸ್ಮೈ. ಚತುರ್ಥಿ ದ್ವಿವಚನ ಬಹುವಚನಗಳಲ್ಲಿ ರಾಮಶಬ್ದದಂತೆ ಪ್ರಕ್ರಿಯೆ. ಸರ್ವಾಭ್ಯಾಮ್ ಸರ್ವೇಭ್ಯಃ

ಸರ್ವಶಬ್ದದ ಮೇಲೆ ಪಂಚಮೀ ಏಕವಚನ ವಿವಕ್ಷಾಮಾಡಿದಾಗ ಜಸಿಪ್ರತ್ಯಯ. ಸರ್ವ+ಜಸಿ ಎಂದಿರುವಾಗ ಪ್ರತ್ಯಯಕ್ಕೆ ಆದೇಶ ಹೇಳುತ್ತಾನೆ.

(ಸ್ಮಾತ್‌ಸ್ಮಿನ್ ಆದೇಶಹೇಳುವ ಸೂತ್ರ)

೧೫೪. ಜಸಿ ಜ್ಞ್ಯೋಃ ಸ್ಮಾತ್‌ಸ್ಮಿನೌ ॥ ೭-೧-೧೫ ॥

ಅತಃ ಸರ್ವನಾಮ್ನ ಏತಯೋರೇತೌ ಸ್ತಃ ॥ ಸರ್ವಸ್ಮಾತ್ ॥

ಜಸಿಜ್ಞ್ಯೋಃ, ಸ್ಮಾತ್‌ಸ್ಮಿನೌ ॥ ದ್ವಿಪದಸೂತ್ರ. ಹಿಂದಿನ ಸೂತ್ರದಿಂದ "ಸರ್ವನಾಮ್ನಃ" "ಅತೋ ಭಿಸ ಐಸ್" ಸೂತ್ರದಿಂದ "ಅತಃ" ಅನುವೃತ್ತಿ. ಅತ್ ಸರ್ವನಾಮ್ನಃಕ್ಕೆ ವಿಶೇಷಣ. ವಿಶೇಷಣವಾದುದರಿಂದ ತದಂತಲಾಭ. **ಸೂತ್ರಾರ್ಥ**— ಹ್ರಸ್ವಾಕಾರಾಂತವಾದ ಸರ್ವನಾಮದ ಪರದಲ್ಲಿರುವ ಪಂಚಮ್ಯೇಕವಚನ (ಜಸಿ) ಸಪ್ತಮ್ಯೇಕವಚನ (ಜ್ಞಿ) ಪ್ರತ್ಯಯಗಳಿಗೆ ಕ್ರಮವಾಗಿ ಸ್ಮಾತ್ ಸ್ಮಿನ್ ಆದೇಶಗಳು ಬರುತ್ತವೆ. ಯಥಾಸಂಖ್ಯವಿರುವುದರಿಂದ ಕ್ರಮವು ಲಬ್ಧವಾಗುತ್ತದೆ. ಅದಂತವಾದ ಸರ್ವನಾಮವಾದ ಸರ್ವಶಬ್ದದ ಪರದಲ್ಲಿರುವ ಜಸಿಗೆ ಸ್ಮಾತ್ ಆದೇಶ ಬಂದಿದೆ. ಸರ್ವಸ್ಮಾತ್ ಎಂದಾಗುತ್ತದೆ. ಅನೇಕಾಲಾದುದರಿಂದ ಸರ್ವಾದೇಶವಾಗಿಬಂದಿದೆ. ಪಂಚಮೀ ದ್ವಿವಚನ ಬಹುವಚನ, ಷಷ್ಠೀ ಏಕವಚನ ದ್ವಿವಚನಗಳಲ್ಲಿ ರಾಮಶಬ್ದದಂತೆ ಪ್ರಕ್ರಿಯೆ. ಪಂಚಮೀ—ಸರ್ವಸ್ಮಾತ್, ಸರ್ವಾಭ್ಯಾಮ್, ಸರ್ವೇಭ್ಯಃ ॥ ಷಷ್ಠೀ ಸರ್ವಸ್ಯ—ಸರ್ವಯೋಃ

ಷಷ್ಠೀ ಬಹುವಚನದಲ್ಲಿ ಆಮ್ ಪ್ರತ್ಯಯ ಬಂದಾಗ ಕಾರ್ಯವಿಶೇಷ ಹೇಳುತ್ತಾನೆ.

(ಆಮಿಗೆ ಸುಡಾಗಮಹೇಳುವ ಸೂತ್ರ)

೧೫೫. ಆಮಿ ಸರ್ವನಾಮ್ನಃ ಸುಟ್ ॥ ೭-೧-೫೨ ॥

ಅವರ್ಣಾಂತಾತ್ಪರಸ್ಯ ಸರ್ವನಾಮ್ನೋ ವಿಹಿತಸ್ಯಾಮಃ ಸುಡಾಗಮಃ। ಏತ್ವಷತ್ವೇ। ಸರ್ವೇಷಾಮ್। ಸರ್ವಸ್ಮಿನ್। ಶೇಷಂ ರಾಮವತ್ ಏವಂ ವಿಶ್ವಾದಯೋಽಸ್ಯಾದಂತಾಃ ॥

ತ್ರಿಪದಸೂತ್ರ. "ಅಂಗಸ್ಯ" ಅಧಿಕಾರ. ಇಲ್ಲಿ ಪಂಚಮ್ಯಂತವಾಗಿ ವಿಪರಿಣತವಾಗುತ್ತದೆ. "ಆಜ್ಞಸೇರಸುಕ್" ಸೂತ್ರದಿಂದ ಅತ್ ಎಂಬ ಪಂಚಮ್ಯಂತಪದವು

ಅನುವೃತ್ತವಾಗಿ ಅಂಗಕ್ಕೆ ವಿಶೇಷಣವಾಗುತ್ತದೆ. ತದಂತಲಾಭ. ಅವರ್ಣಾಂತವಾದ ಅಂಗದಪರದಲ್ಲಿರುವ ಎಂದರ್ಥ. ಇದು ಪಂಚಮೀ. ಆಮಿ ಸಪ್ತಮೀ. "ಉಭಯನಿರ್ದೇಶೇ ಪಂಚಮೀ ನಿರ್ದೇಶೋ ಬಲೀಯಾನ್" ಪರಿಭಾಷೆಯಿಂದ ಪಂಚಮ್ಯಂತಕ್ಕೆ ಪ್ರಾಬಲ್ಯವಿರುವುದರಿಂದ ಆಮಿ ಸಪ್ತಮ್ಯಂತವು ಷಷ್ಠ್ಯಂತವಾಗಿ ಪರಿಣತವಾಗುತ್ತದೆ. ಸರ್ವನಾಮ್ನಃ ಎಂಬಲ್ಲಿ ವಿಹಿತಸ್ಯ ಎಂದು ಅಧ್ಯಾಹಾರಮಾಡಿಕೊಳ್ಳಬೇಕು. ಸರ್ವನಾಮಕ್ಕೆ ವಿಹಿತವಾದ ಆಮಿಗೆ ಎಂದರ್ಥ. ವಿಹಿತವಾದ ಆಮ್ ಎಂದು ಹೇಳದಿದ್ದರೆ ಕೆಲವುಕಡೆ ದೋಷಬರುತ್ತದೆ. ಸುಟ್ ಟಿತ್ವಾದುದರಿಂದ "ಆದ್ಯಂತೌ ಟಕಿತೌ" ಸೂತ್ರದಿಂದ ಆದ್ಯವಯವವಾಗಿ ಬರುತ್ತದೆ. ಇದರಿಂದ ಆಗಮ ಎಂದು ತಿಳಿಯುತ್ತದೆ. **ಸೂತ್ರಾರ್ಥ**—ಅವರ್ಣಾಂತವಾದ ಅಂಗದಪರದಲ್ಲಿರುವ, ಸರ್ವನಾಮಶಬ್ದಕ್ಕೆ ವಿಹಿತವಾದ ಆಮಿಗೆ ಸುಡಾಗಮ ಬರುತ್ತದೆ. ಸರ್ವ+ಆಮ್ ಎಂಬಲ್ಲಿ ಸರ್ವಎಂಬುದು ಅವರ್ಣಾಂತವಾದ ಅಂಗ. ಆಮ್ ಸರ್ವವೆಂಬ ಸರ್ವನಾಮದ ಮೇಲೆ ವಿಹಿತವಾಗಿದೆ. ಅದುದರಿಂದ ಪರದ ಅಮಿಗೆ ಸುಡಾಗಮ. ಟಿತ್ವಾದುದರಿಂದ ಆಮಿನ ಆದ್ಯವಯವವಾಗಿ ಬರುತ್ತದೆ. (ಸುಟಿನಲ್ಲಿ ಸ್ ಮಾತ್ರ ಉಳಿಯುವುದು) ಸರ್ವ+ಸ್+ಆಮ್। ಏತ್ವಷತ್ವೇ। ಮುಂದಿನಕಾರ್ಯವನ್ನು ಹೇಳುತ್ತಾನೆ. ಸರ್ವ+ಸಾಮ್ ಎಂದಿರುವಾಗ ಝಲಾದಿ ಬಹುವಚನಪರವಾದುದರಿಂದ "ಬಹುವಚನೇ ಝಲ್ಯೇತ್" ಸೂತ್ರದಿಂದ ಸರ್ವವೆಂಬ ಅಂಗದ ಅಕಾರಕ್ಕೆ ಏಕಾರಾದೇಶ. ಏತ್ವಬಂದಮೇಲೆ ಏಕಾರ ಇಣೆನಲ್ಲಿ ಸೇರುವುದರಿಂದ ಇಣೆನಪರದಲ್ಲಿ ಪ್ರತ್ಯಯ ಅವಯವವಾದ ಸಕಾರ ಇರುವುದರಿಂದ "ಆದೇಶ ಪ್ರತ್ಯಯಯೋಃ" ಸೂತ್ರದಿಂದ ಸಕಾರಕ್ಕೆ ಷಕಾರಾದೇಶ. ಸರ್ವೇಷಾಮ್. ಎಲ್ಲರ ಎಂದರ್ಥ. ಸಪ್ತಮೀ ಏಕವಚನದಲ್ಲಿ ಜ್ಞಿಪ್ರತ್ಯಯ. ಸರ್ವ+ಜ್ಞಿ ಎಂದಿರುವಾಗ ಹಿಂದೆ ಹೇಳಿದ "ಜಸಿಜ್ಞ್ಯೋಃ ಸ್ಮಾತ್‌ಸ್ಮಿನೌ" ಸೂತ್ರದಿಂದ ಜ್ಞಿಪ್ರತ್ಯಯಕ್ಕೆ ಸ್ಮಿನ್ ಆದೇಶ. ಅನೇಕಾಲಾದುದರಿಂದ ಸರ್ವಾದೇಶ. ಸರ್ವಸ್ಮಿನ್. ದ್ವಿವಚನ ಬಹುವಚನಗಳಲ್ಲಿ ರಾಮಶಬ್ದದಂತೇ ಪ್ರಕ್ರಿಯೆ. ಸರ್ವಯೋಃ, ಸರ್ವೇಷು. ಏವಮಿತಿ ॥ ಇದೇ ರೀತಿಯಾಗಿ ಮೂವತ್ತೈದು ಸರ್ವನಾಮಶಬ್ದಗಳಲ್ಲಿ ಅಕಾರಾಂತವಾದ ವಿಶ್ವಮುಂತಾದ ಶಬ್ದಗಳಿಗೆ ಸರ್ವಶಬ್ದದಂತೇ ರೂಪಹೊಂದಿಸಿಕೊಳ್ಳಬೇಕು. ವಿಶ್ವ, ಅನ್ಯ, ಅನ್ಯತರ ಮುಂತಾದ ಅದಂತ ಸರ್ವನಾಮಗಳು ಸರ್ವಶಬ್ದದಲ್ಲಿ ಹೇಳಿದ ಕಾರ್ಯಗಳನ್ನೇ ಹೊಂದುತ್ತವೆ.

ಉಭಶಬ್ದೋ ನಿತ್ಯಂ ದ್ವಿವಚನಾಂತಃ॥ ಉಭೌ ೨॥ ಉಭಾಭ್ಯಾಮ್ ೨॥ ಉಭಯೋಃ ೨ ॥ ತಸ್ಯೇಹಸಾಹೋಽಕಜರ್ಥಃ ।

ಉಭ ಎಂಬುದೂ ಸರ್ವನಾಮಶಬ್ದ. ಇದು ದ್ವಿತ್ವಸಂಖ್ಯಾದಿಂದಕೂಡಿದ ವಸ್ತುವನ್ನು ಹೇಳುವುದರಿಂದ ಯಾವಾಗಲೂ ದ್ವಿವಚನಾಂತವಾಗಿಯೇ ಇರುತ್ತದೆ. ಏಕತ್ವ

ಬಹುತ್ವಸಂಖ್ಯಾ ಹೇಳುವುದಾಗಿದ್ದರೆ ಏಕವಚನ ಬಹುವಚನ ಬರುತ್ತಿತ್ತು. ಆದ್ದರಿಂದ ದ್ವಿವಚನಮಾತ್ರವಿವೆ. ಸರ್ವನಾಮಶಬ್ದಗಳಿಗೆ ದ್ವಿವಚನದಲ್ಲಿ ಕಾರ್ಯವಿಶೇಷವಿಲ್ಲ. ಅದು ಏಕವಚನಬಹುವಚನದಲ್ಲಿ ಮಾತ್ರವೆಂದು ಹಿಂದೆ ಹೇಳಿಲ್ಲಿ. ದ್ವಿವಚನದಲ್ಲಿ ರಾಮಶಬ್ದದಂತೆಯೇ ಕಾರ್ಯವಾಗುವುದರಿಂದ ಅದರಂತೆ ಆದ ಸಿದ್ಧರೂಪವನ್ನು ತೋರಿಸಿರುತ್ತಾನೆ. ಪ್ರಥಮಾದ್ವಿತೀಯಾದ್ವಿವಚನದಲ್ಲಿ ಒಂದೇರೂಪ. ತೃ. ಚ. ಪಂ. ದ್ವಿವಚನಗಳಲ್ಲಿ ಉಭಾಭ್ಯಾಮ್ ಒಂದೇರೂಪ. ಷ. ಸ. ದ್ವಿವಚನಗಳಲ್ಲಿ ಉಭಯೋಃ ಒಂದೇರೂಪ. «ತಸ್ಯೇಹ =" ಹಾಗಾದರೆ ಈ ಉಭಶಬ್ದವನ್ನು ಸರ್ವನಾಮದಗಣದಲ್ಲಿ ಹೇಳಿದುದೇಕೆ? ಸರ್ವನಾಮಕಾರ್ಯ ಹೊಂದುವುದಾಗಿದ್ದರೆ ಅದರ ಮಧ್ಯೆ ಪಾಠಮಾಡಿರುವುದು ಸಾರ್ಥಕವಾಗುತ್ತಿತ್ತು. ಎಂದು ಆಶಂಕೆಬಂದರೆ ಅದಕ್ಕೆ ಸಮಾಧಾನ " ತಸ್ಯೇಹ- " ವಾಕ್ಯದಿಂದ ಹೇಳುತ್ತಾನೆ. (ಉಭಶಬ್ದ) ಅದರ ಪಾಠವು ಇಲ್ಲಿ ಅಕಚ್‌ಪ್ರತ್ಯಯಕ್ಕೋಸ್ಕರ. ಸರ್ವನಾಮ ಶಬ್ದಗಳಿಗೆಮಾತ್ರ ಮುಂಏ ತದ್ಧಿತಪ್ರಕರಣದಲ್ಲಿ ಅಕಚ್‌ಪ್ರತ್ಯಯ ಹೇಳುತ್ತಾನೆ. ಇತರ ಶಬ್ದಗಳಿಗೆ ಕೇವಲಕಪ್ರತ್ಯಯ. ಉಭಶಬ್ದ ಈಗಣದಲ್ಲಿ ಪಠಿತವಾಗದಿದ್ದರೆ ಅದಕ್ಕೆ ಅಕಚ್ ಬರುತ್ತಿರಲಿಲ್ಲ. ಅಕಚ್ ಬರುವುದಕ್ಕೋಸ್ಕರ ಈ ಗಣದಲ್ಲಿ ಹೇಳಿರುತ್ತಾನೆ. " ಅವ್ಯಯಸರ್ವನಾಮ್ನಾಮಕಚ್ ಪ್ರಾಕ್ಟೇಃ " ಸೂತ್ರದಿಂದ ಸರ್ವನಾಮವ ಟೆಯ ಹಿಂದೆ ಅಕಚ್ ಬರುತ್ತದೆ. ಉಭಎಂಬಲ್ಲಿ ಟ ಕೊನೆಯ ಅಕಾರ. ಅದರ ಹಿಂದೆ ಅಕಚ್ ಬಂದರೆ (ಅಕಚ್ ಪ್ರತ್ಯಯದಲ್ಲಿ ಅಕ್ ಉಳಿಯುವುದು) ಉಭ್ + ಅಕ್ + ಅ ಉಭಕ ಎಂದಾಗುತ್ತದೆ. ಕಪ್ರತ್ಯಯಬಂದರೂ ಉಭಕಎಂದಾಗುತ್ತದೆಯೆಂದು ಶಂಕೆ ಬಂದರೂ ಕ ಬಂದರೆ ಅದರೊಡನೆ ಇನ್ನೊಂದು ಪ್ರತ್ಯಯ ಅಯಚ್ ಬರಬೇಕಾಗುತ್ತದೆ. ಆಗ ಉಭಯಕ ಎಂದಾಗುತ್ತದೆ ಹೀಗೆ ಅಕಚ್‌ಪ್ರತ್ಯಯಬರುವುದಕ್ಕೋಸ್ಕರ ಸರ್ವಾದಿಗಣದಲ್ಲಿ ಉಭಶಬ್ದ ಪಾಠಮಾಡಿರುತ್ತಾನೆ.

ಉಭಯ ಶಬ್ದಸ್ಯ ದ್ವಿವಚನಂ ನಾಸ್ತಿ ॥ ಉಭಯಃ—ಉಭಯೇ ॥ ಉಭಯಮ್–ಉಭಯಾನ್ ॥ ಉಭಯೇನ–ಉಭಯೈಃ ॥ ಉಭಯಸ್ಮೈ–ಉಭಯೇಭ್ಯಃ ॥ ಉಭಯಸ್ಮಾತ್—ಉಭಯೇಭ್ಯಃ ॥ ಉಭಯಸ್ಯ—ಉಭಯೇಷಾಮ್। ಉಭಯಸ್ಮಿನ್–ಉಭಯೇಷು॥

ಉಭಯಶಬ್ದದಲ್ಲಿ ವಿಶೇಷವನ್ನು ಹೇಳುತ್ತಾನೆ. ಉಭಯ ಎರಡು ಅವಯವವುಳ್ಳದ್ದು, ಇದಕ್ಕೆ ದ್ವಿವಚನವಿಲ್ಲ. ದ್ವಿವಚನ ಪರದಲ್ಲಿ ಇಲ್ಲವೇ ಇರುವಾಗ ಉಭಶಬ್ದಕ್ಕೆ " ಉಭಯೋಽನ್ಯತ್ರ " ವಾರ್ತಿಕದಿಂದ ದ್ವಿವಚನಪರದಲ್ಲಿಲ್ಲದಿರುವಾಗ, ಅಯಚ್ ವಿಧಾನಮಾಡಿರುವುದರಿಂದ ಉಭಯಶಬ್ದಕ್ಕೆ ದ್ವಿವಚನವಿಲ್ಲವೆಂದು ತಿಳಿಯಬೇಕು. ಭಾಷ್ಯಕಾರರೂ "ಉಭಯೋಮನುಜೇ ಉಭಯೇದೇವಮನುಷ್ಯಾಃ" ಎಂದುಎರಡುವಚನಗಳ್ಲವನ್ನಾತ್ರ ಉದಾಹರಿಸಿರುತ್ತಾರೆ. ಇದು ಅಕಾರಾಂತವಾದುದರಿಂದ ಸರ್ವಶಬ್ದದಂತೇ ಕಾರ್ಯಹೊಂದಿದೆಯೆಂದು ಏಳುವಿಭಕ್ತಿಗಳಲ್ಲಿಯೂ ಸಿದ್ಧರೂಪವನ್ನು ತೋರಿಸಿರುತ್ತಾನೆ. ಪ್ರ. ಉಭಯಃ—ಉಭಯೇ। ದ್ವಿ. ಉಭಯಮ್—ಉಭಯಾನ್। ತೃ. ಉಭಯೇನ—ಉಭಯೈಃ। ಚ—ಉಭಯಸ್ಮೈ—ಉಭಯೇಭ್ಯಃ। ಪಂ. ಉಭಯಸ್ಮಾತ್—ಉಭಯೇಭ್ಯಃ। ಷ—ಉಭಯಸ್ಯ—ಉಭಯೇಷಾಮ್। ಸ. ಉಭಯಸ್ಮಿನ್—ಉಭಯೇಷು ॥ ಮುಂದಿನ ಶಬ್ದವಿಶೇಷವನ್ನು ಹೇಳುತ್ತಾನೆ.

ಡತರ ಡತಮೌ ಪ್ರತ್ಯಯೌ। « ಪ್ರತ್ಯಯಗ್ರಹಣೇ ತದಂತಗ್ರಹಣಮಿ'ತಿ ತದಂತಾ ಗ್ರಾಹ್ಯಾಃ ॥

ಡತರ, ಡತಮ ಎಂದು ಎರಡು ಶಬ್ದಗಳು ಗಣದಲ್ಲಿ ಹೇಳಿವೆ. ಅವು ಪದವಲ್ಲ. ಪ್ರತ್ಯಯಗಳು. ನಿರ್ಧಾರಣ ಪ್ರಶ್ನೆಯಲ್ಲಿ ಮುಂದೆ ಹೇಳುತ್ತಾನೆ. " ಪ್ರತ್ಯಯಗ್ರಹಣೇ ತದಂತಗ್ರಹಣಮ್ " ಇದು ಪರಿಭಾಷೆ. ಕೇವಲ ಪ್ರತ್ಯಯ ಕಾರ್ಯವನ್ನು ಹೊಂದುವುದಿಲ್ಲ. ಎಲ್ಲಿಯಾದರೂ ಕೇವಲ ಪ್ರತ್ಯಯ ಹೇಳಿದರೆ ಅಲ್ಲಿ ಆ ಪ್ರತ್ಯಯಾಂತ ಶಬ್ದಗಳನ್ನು ತೆಗೆದುಕೊಳ್ಳಬೇಕು. ಪ್ರಕೃತ ಪ್ರತ್ಯಯಗಳಾದುದರಿಂದ ಡತರ, ಡತಮ ಪ್ರತ್ಯಯಾಂತ ಶಬ್ದಗಳನ್ನು ತೆಗೆದುಕೊಳ್ಳಬೇಕು. ಕಿಮ್ ಶಬ್ದದಮೇಲೆ ಈ ಪ್ರತ್ಯಯಗಳು ಬಂದರೆ ಕತರ ಕತಮ ಎಂದಾಗುತ್ತದೆ. ಡತರ ಡತಮಗಳಲ್ಲಿ ಡಕಾರ ಪ್ರತ್ಯಯದ ಆದಿಯಲ್ಲಿರುವುದರಿಂದ " ಚುಟೂ " ಸೂತ್ರದಿಂದ ಇತ್ಸಾಗುತ್ತದೆ. ಕಿಮ್+ಅತರ ಎಂದಿರುವಾಗ ಟೆಗೆ ಲೋಪ. ಕಿಮ್ ಶಬ್ದದಲ್ಲಿ ಟ ಇಮ್. ಕ್+ಅತರ=ಕತರ. ಹೀಗೆಯೇ ಡತಮ ಪ್ರತ್ಯಯಬಂದರೆ ಕತಮ ಎಂದಾಗುತ್ತದೆ. ಯದ್‌ಶಬ್ದದಮೇಲೆ ಬಂದರೆ ಯತರ, ಯತಮ. ತದ್‌ಶಬ್ದದಮೇಲೆ ಬಂದರೆ ತತರ, ತತಮ, ಏಕಶಬ್ದದ ಮೇಲೆ ಬಂದರೆ ಏಕತರ, ಏಕತಮ ಎಂದಾಗುತ್ತದೆ. ಇವಿಷ್ಟು ಶಬ್ದದಮೇಲೆ ಮಾತ್ರ ಇವೆರಡು ಪ್ರತ್ಯಯಗಳು ಬರುತ್ತವೆ. ಈ ಪ್ರತ್ಯಯಾಂತವಾದ ಶಬ್ದಗಳು ಅಕಾರಾಂತವಾಗಿರುವುದರಿಂದ ಸರ್ವಶಬ್ದದಂತೇ ರೂಪವನ್ನು ಹೊಂದುತ್ತವೆ.

ನೇಮ ಇತ್ಯರ್ಧೇ। ಸಮಃ ಸರ್ವಪರ್ಯಾಯಃ ತುಲ್ಯಪರ್ಯಾಯಸ್ತು ನ, ಯಥಾಸಂಖ್ಯಮನುದೇಶಃ ಸಮಾನಾಮಿತಿ ಜ್ಞಾಪಕಾತ್ ॥

ಸರ್ವಾದಿಗಣದಲ್ಲಿರುವ ನೇಮ ಎಂಬ ಶಬ್ದವು ಅರ್ಧ ಎಂಬ ಅರ್ಥಕೊಡುತ್ತದೆ. ಇದೂ ಅದಂತವಾದುದರಿಂದ ಸರ್ವದಂತೇ ರೂಪವನ್ನು ಹೊಂದುತ್ತದೆ. ಕ್ಲಿಷ್ಟವಾಗಿರುವುದನ್ನೂ ಸಂದಿಗ್ಧವಾಗಿರುವುದನ್ನೂ ಮಾತ್ರ ವ್ಯಾಖ್ಯಾನಮಾಡುತ್ತಾನೆ. ಅನ್ಯಾದಿಗಳು ಸುಲಭವಾಗಿರುವುದಲ್ಲದೆ ಕನ್ನಡದಲ್ಲಿಯೂ ಪ್ರಸಿದ್ಧವಾಗಿವೆ. ಆದುದರಿಂದ ಅವುಗಳ ವಿಷಯವನ್ನು ಹೇಳಿಲ್ಲ. ಸಮ ಎಂಬ ಶಬ್ದಹೇಳಿದೆ. ಇದು ನಾನಾರ್ಥಕಶಬ್ದ. ಸರ್ವ,

ಸಮಾನ ಮುಂತಾದ ಹಲವು ಅರ್ಥಗಳಲ್ಲಿ ಈ ಶಬ್ದಗಳನ್ನು ಪ್ರಯೋಗಿಸುತ್ತಾರೆ. ಆದ್ದರಿಂದ ಯಾವ ಅರ್ಥದಲ್ಲಿ ಸರ್ವನಾಮ ಸಂಜ್ಞೆಯಂದು ವಿವರಿಸುತ್ತಾನೆ. "ಸಮಃ ಸರ್ವ—ಯ್ಯಃ" ಸರ್ವವೆಂಬ ಅರ್ಥಕೊಡುವ ಸಮವೆಂಬುದು ಮಾತ್ರ ಸರ್ವನಾಮಸಂಜ್ಞೆಯನ್ನು ಹೊಂದುತ್ತದೆ. ತುಲ್ಯವೆಂಬ ಅರ್ಥಕೊಡುವ ಸಮಶಬ್ದಕ್ಕೆ ಇಲ್ಲಿ ಗ್ರಹಣವಿಲ್ಲ. ಈ ರೀತಿಯಾದ ಅರ್ಥವಿವೇಕವು ತಿಳಿದುದು ಹೇಗೆ? ಅಂದರೆ ಈ ವಿಷಯದಲ್ಲಿ ಸೂತ್ರವೇ ಪ್ರಮಾಣವೆಂದು ತೋರಿಸುತ್ತಾನೆ. "ಯಥಾಸಂಖ್ಯಮನುದೇಶಃ ಸಮಾನಾನಾಮ್" ಸೂತ್ರದಲ್ಲಿ "ಸಮಾನಾನಾಮ್" ಎಂಬಪದವಿದೆ. ಇದಕ್ಕೆ ಸದೃಶವೆಂದರ್ಥ. ಸಾದೃಶ್ಯಾರ್ಥದಲ್ಲಿಯೂ "ಸರ್ವನಾಮ" ಸಂಜ್ಞೆ ಇದ್ದಿದ್ದರೆ ಷಷ್ಠೀಬಹುವಚನದಲ್ಲಿ "ಸಮೇಷಾಂ" ಎಂದು ಹೇಳಬೇಕಿತ್ತು. ಆದರೆ ಪಾಣಿನಿ ಹಾಗೆಹೇಳಿಲ್ಲ. ಆದುದರಿಂದ ಸಾದೃಶ್ಯಾರ್ಥದಲ್ಲಿ ಸರ್ವನಾಮಸಂಜ್ಞೆಯಿಲ್ಲವೆಂದು ತಿಳಿಯುತ್ತದೆ. ಎಲ್ಲಾ ಎಂಬರ್ಥದಲ್ಲಿ ಮಾತ್ರ ಸರ್ವನಾಮಸಂಜ್ಞೆಯನ್ನು ಹೊಂದುತ್ತದೆ. ಸರ್ವಶಬ್ದದಂತೇ ಪ್ರಕ್ರಿಯೆ. ಪೂರ್ವಾದಿಶಬ್ದಗಳಲ್ಲಿ ವಿಶೇಷವನ್ನು ಹೇಳಲು ಸೂತ್ರವನ್ನು ಆರಂಭಿಸುತ್ತಾನೆ.

(ಪೂರ್ವಾದಿಶಬ್ದಗಳಿಗೆ ವಿಕಲ್ಪಸರ್ವನಾಮ ಸಂಜ್ಞೆ ಹೇಳುವಸೂತ್ರ)

೧೫೭. ಪೂರ್ವಪರಾವರದಕ್ಷಿಣೋತ್ತರಾಪರಾಧರಾಣಿ ವ್ಯವಸ್ಥಾಯಾಮಸಂಜ್ಞಾಯಾಮ್ ॥ ೧-೧-೭೪ ॥

ವಿತೇಷಾಂ ವ್ಯವಸ್ಥಾಯಾಮಸಂಜ್ಞಾಯಾಂ ಚ ಸರ್ವನಾಮಸಂಜ್ಞಾ ಗಣಸೂತ್ರಾತ್ಸರ್ವತ್ರ ಯಾ ಪ್ರಾಪ್ತಾ ಸಾ ಜಸಿ ವಾ ಸ್ಯಾತ್। ಪೂರ್ವೇ, ಪೂರ್ವಾಃ। ಅಸಂಜ್ಞಾಯಾಂ ಕಿಮ್? ಉತ್ತರಾಃ ಕುರವಃ। ಸ್ವಾಭಿಧೇಯಾಪೇಕ್ಷಾವಧಿನಿಯಮೋ ವ್ಯವಸ್ಥಾ। ವ್ಯವಸ್ಥಾಯಾಂ ಕಿಮ್? ದಕ್ಷಿಣಾ ಗಾಥಕಾಃ, ಕುಶಲಾ ಇತ್ಯರ್ಥಃ॥

ಪೂರ್ವಪರಾವರದಕ್ಷಿಣೋತ್ತರಾಪರಾಧರಾಣಿ, ವ್ಯವಸ್ಥಾಯಾಮ್, ಅಸಂಜ್ಞಾಯಾಮ್। ತ್ರಿಪದ ಸೂತ್ರ. ಪೂರ್ವಂಚ, ಪರಂ ಚ, ಅವರಂ ಚ, ದಕ್ಷಿಣಂ ಚ, ಉತ್ತರಂ ಚ, ಅಪರಂ ಚ, ಅಧರಂ ಚ, ಪೂರ್ವಪ—ಧರಾಣಿ. "ಸರ್ವಾದೀನಿ ಸರ್ವನಾಮಾನಿ" ಸೂತ್ರದಿಂದ "ಸರ್ವನಾಮಾನಿ" ಪದವೂ ಮತ್ತು "ವಿಭಾಷಾ ಜಸಿ" ಎಂಬ ಸೂತ್ರವೂ ಅನುವೃತ್ತವಾಗುತ್ತವೆ. **ಸೂತ್ರಾರ್ಥ**—ಪೂರ್ವಾದಿ ಏಳು ಶಬ್ದಗಳಿಗೆ ವ್ಯವಸ್ಥಾ ಮತ್ತು ಅಸಂಜ್ಞಾ ಅರ್ಥದಲ್ಲಿ ಗಣಸೂತ್ರದಿಂದ ನಿತ್ಯವಾಗಿ ಸರ್ವನಾಮಸಂಜ್ಞೆ ಪ್ರಾಪ್ತವಾದರೆ ಆ ಸರ್ವನಾಮ ಸಂಜ್ಞೆಯು ಜಸಿನಲ್ಲಿ ವಿಕಲ್ಪವಾಗಿ ಒದುತ್ತವೆ. ನಿತ್ಯವಾಗಿ ಬಂದ ಸಂಜ್ಞೆಯು ಜಸ್ ಪ್ರತ್ಯಯದಲ್ಲಿ ಮಾತ್ರ ವಿಕಲ್ಪವೆಂದು

ಈ ಸೂತ್ರ ಬೋಧಿಸುತ್ತದೆ. ಸರ್ವನಾಮ ಸಂಜ್ಞಾಬಂದರೆ "ಜಸಃ ಶೀ" ಸೂತ್ರದಿಂದ ಈತ್ವ ಬಂದು ಸರ್ವಶಬ್ದದಂತೆ ಪೂರ್ವೇ ಎಂದಾಗುತ್ತದೆ. ಸಂಜ್ಞಾಬಾರದಿದ್ದರೆ ರಾಮಶಬ್ದದಂತೆ ಪೂರ್ವಸವರ್ಣದೀರ್ಘ ಬಂದು ಪೂರ್ವಾಃ ಎಂದಾಗುತ್ತದೆ. ಉಳಿದ ವಿಭಕ್ತಿಗಳಲ್ಲಿ ವಿಕಲ್ಪವಿಲ್ಲದಿರುವುದರಿಂದ ಸರ್ವಶಬ್ದದಂತೇ ರೂಪಹೊಂದುತ್ತದೆ. "ಅಸಂಜ್ಞಾಯಾಂ" ಪದವನ್ನು ಹೇಳಿದುದು ಏಕೆ? ಆದಕ್ಕೆ ಪ್ರಯೋಜನವೇನು? ದಳ ಕೃತ್ಯವಿದು. ಸಂಜ್ಞಾತೋರದಿರುವಾಗ ಮಾತ್ರ ಸರ್ವನಾಮಸಂಜ್ಞೆ ಹೇಳಿರುತ್ತಾನೆ. ಸಂಜ್ಞೆ ತೋರುವುದಾದರೆ ಸರ್ವನಾಮಸಂಜ್ಞೆ ಬರುವುದಿಲ್ಲ. ಉತ್ತರಾ ಎಂದರೆ ಉತ್ತರದೇಶದಲ್ಲಿರುವ ಕುರುಗಳು ಎಂದರ್ಥವಾಗುತ್ತೆ. ಕುರುಗಳಿಗೆ ಉತ್ತರವೆಂದು ಸಂಜ್ಞೆ. ಸಂಜ್ಞೆಯಾದುದರಿಂದ ಸರ್ವನಾಮಸಂಜ್ಞಾನಿಷೇಧ. ಉತ್ತರೇ ಎಂದಾಗುವುದಿಲ್ಲ. ರಾಮಶಬ್ದದಂತೆ ಪ್ರಕ್ರಿಯೆ. "ಸ್ವಾಭಿ.....ಇತಿ ॥" ವ್ಯವಸ್ಥಾ ಪದಾರ್ಥವನ್ನು ಹೇಳುತ್ತಾನೆ. ಸ್ವ=ತನ್ನನ್ನು ಆಭಿಧೇಯ=ಅರ್ಥದಿಂದ ಅಪೇಕ್ಷಾ= ಅಪೇಕ್ಷಿಸುವ ಅವಧಿನಿಯಮಃ=ಅವಧಿಯನಿಶ್ಚಯವು ವ್ಯವಸ್ಥಾ. ಪೂರ್ವ ಎಂದರೆ ಯಾವುದರ ಪೂರ್ವ ಎಂಬ ವಿವಕ್ಷಾಬರಬೇಕು. ಮೈಸೂರಿನಿಂದ ಪೂರ್ವವೆಂದರೆ ಶಾಂತಾಕಾಂಕ್ಷೆಯಾಗುತ್ತದೆ. ಹೀಗೆ ಇದ್ದರೆ ವ್ಯವಸ್ಥಾ ತೋರುವುದರಿಂದ ಅಲ್ಲಿ ಸರ್ವನಾಮಸಂಜ್ಞೆ. ವ್ಯವಸ್ಥಾ ಯಾಂಕಿನ್ಯ್? ವ್ಯವಸ್ಥಾ ತೋರುವಾಗ ಸರ್ವನಾಮ ಸಂಜ್ಞೆಯಂದುದೇಕೆ? ಅದು ತೋರದಿರುವಾಗ ಸರ್ವನಾಮಸಂಜ್ಞೆಯಿಲ್ಲ. ದಕ್ಷಿಣಾ ಗಾಥಕಾಃ ಕುಶಲಾ ಇತ್ಯರ್ಥಃ। ಇಲ್ಲಿ ದಕ್ಷಿಣಶಬ್ದವಿದೆ. ದಕ್ಷಿಣವೆಂದರೆ ಇಲ್ಲಿ ದಿಕ್ಕಾಗಲೀ ಕಾಲವಾಗಲೀ ತೋರುವುದಿಲ್ಲ. ಬುದ್ಧಿವಂತರು ಎಂದರ್ಥ. ಆಗ ಅವಧಿನಿಯಮವು ತೋರುವುದಿಲ್ಲ. ದಿಗ್ದೇಶಕಾಲರೂಪಾರ್ಥ ಪೂರ್ವಾದಿಪದದಿಂದ ತೋರಿದರೆ ಮಾತ್ರ ವ್ಯವಸ್ಥಾ ಇವೆಯಂದು ತಿಳಿಯಬೇಕು. ಈ ಮೂರಕ್ಕಿಂತ ಬೇರೆ ಅರ್ಥದಲ್ಲಿ ವ್ಯವಸ್ಥಾ ಇಲ್ಲದಿರುವುದರಿಂದ ಸರ್ವನಾಮಸಂಜ್ಞೆಯೂ ಬರುವುದಿಲ್ಲ. ಪೂರ್ವಾದಿಗಳಲ್ಲಿ ವಿಶೇಷ ಹೇಳಿ ಸ್ವಶಬ್ದದಲ್ಲಿ ವಿಶೇಷವನ್ನು ಹೇಳುತ್ತಾನೆ.

(ಸ್ವಶಬ್ದಕ್ಕೆ ವಿಕಲ್ಪಸರ್ವನಾಮಸಂಜ್ಞೆ ಹೇಳುವಸೂತ್ರ)

೧೫೮. ಸ್ವಮಜ್ಞಾತಿಧನಾಖ್ಯಾಯಾಮ್ ॥ ೧-೧-೭೫ ॥

ಜ್ಞಾತಿಧನಾನ್ಯವಾಚಿನಃ ಸ್ವಶಬ್ದಸ್ಯ ಪ್ರಾಪ್ತಾ ಸಂಜ್ಞಾ ಜಸಿ ವಾ ॥ ಸ್ವೇ ಸ್ವಾಃ ॥ ಆತ್ಮೀಯಾಃ, ಆತ್ಮಾನ ಇತಿ ವಾ। ಜ್ಞಾತಿಧನವಾಚಿನಸ್ತು ಸ್ವಾಃ; ಜ್ಞಾತಯೋಽರ್ಥಾ ವಾ॥

ಸ್ವಂ, ಅಜ್ಞಾತಿಧನಾಖ್ಯಾಯಾಮ್ ॥ ದ್ವಿಪದಸೂತ್ರ. ಹಿಂದಿನಂತೇ ವಿಭಾಷಾ ಜಸಿ," "ಸರ್ವನಾಮಾನಿ." ಅನುವೃತ್ತವಾಗುತ್ತವೆ. **ಸೂತ್ರಾರ್ಥ**—ಜ್ಞಾತಿಧನ

ನೆಂಬ ಆರ್ಥಕೊಡದಿರುವ ಸ್ವಶಬ್ದಕ್ಕೆ ಪ್ರಾಪ್ತವಾದ ಸರ್ವನಾಮಸಂಜ್ಞೆಯು ಜಸಿನಲ್ಲಿ ವಿಕಲ್ಪವಾಗಿ ಬರುತ್ತದೆ. ಜ್ಞಾತಿಧನ ಭಿನ್ನಾರ್ಥದಲ್ಲಿ ಗಣಸೂತ್ರದಿಂದ ನಿತ್ಯವಾಗಿ ಸಂಜ್ಞೆ ಬರುತ್ತಿದ್ದರೆ ಜಸಿನಲ್ಲಿ ಮಾತ್ರ ವಿಕಲ್ಪವಾಗಿ ಹೇಳುತ್ತಾನೆ. "ಸ್ವೋಜ್ಞಾತಾವಾತ್ಮನಿ ಸ್ವಂ ತ್ರಿಷ್ವಾತ್ಮೀಯೇ ಸ್ವೋಸ್ತ್ರಿಯಾಂಧನೇ" ಎಂಬ್ಯಮರದಲ್ಲಿ ಹೇಳಿದಂತೆ ಜ್ಞಾತಿ (ಬಂಧು) ಆತ್ಮ, ಆತ್ಮೀಯ, ಧನ ಹೀಗೆ ನಾಲ್ಕು ಅರ್ಥಗಳು ಇವೆ.

ಅವುಗಳಲ್ಲಿ ಜ್ಞಾತಿಧನಾರ್ಥದಲ್ಲಿ ಬರುವುದಿಲ್ಲ. ಆತ್ಮ, ಆತ್ಮೀಯ (ತಾನು, ತನ್ನದು) ಎರಡು ಅರ್ಥದಲ್ಲಿಮಾತ್ರ ಸರ್ವನಾಮಸಂಜ್ಞೆ ಗಣಸೂತ್ರದಲ್ಲಿ ಹೇಳಿದೆ. ಈ ಎರಡು ಅರ್ಥದಲ್ಲಿಯೇ ಜಸಿನಲ್ಲಿ ವಿಕಲ್ಪವೆಂದು ಈ ಸೂತ್ರದಲ್ಲಿ ಹೇಳಿದೆ. ಸರ್ವನಾಮಸಂಜ್ಞೆ ಬಂದರೆ ಜಸಿಗೆ ಶೀ ಆದೇಶ ಗುಣ ಬಂದು ಸ್ವೇ ಎಂದೂ ಬಾರದಿದ್ದರೆ ಸವರ್ಣದೀರ್ಘದಿಂದ ಸ್ವಾಃ ಎಂದೂ ಆಗುತ್ತದೆ. ತನ್ನದು, ಯಾ ತಾನು ಎಂದರ್ಥ. ಬಂಧು ಮತ್ತು ಧನ ಅರ್ಥವನ್ನು ಹೇಳುವುದಾದರೆ ಸರ್ವನಾಮಸಂಜ್ಞೆ ಇಲ್ಲದಿರುವುದರಿಂದ ಸ್ವಾಃ ಒಂದೇ ರೂಪವಾಗುತ್ತದೆ. ಹೀಗೆಯೇ ಅಂತರಶಬ್ದದಲ್ಲಿ ವಿಶೇಷವನ್ನು ಹೇಳುತ್ತಾನೆ.

(ಅಂತರಶಬ್ದಕ್ಕೆ ಸರ್ವನಾಮಸಂಜ್ಞೆವಿಕಲ್ಪ ಹೇಳುವಸೂತ್ರ)

೧೫೮. ಅಂತರಂ ಬಹಿರ್ಯೋಗೋಪಸಂವ್ಯಾನಯೋಃ ॥ ೧-೧-೩೯ ॥

ಬಾಹ್ಯೇ ಪರಿಧಾನೀಯೇ ಚಾರ್ಥೇಽಂತರಶಬ್ದಸ್ಯ ಪ್ರಾಪ್ತಾ ಸಂಜ್ಞಾ ಜಸಿ ವಾ । ಅಂತರೇ ಅಂತರಾ ವಾ ಗೃಹಾಃ, ಬಾಹ್ಯಾ ಇತ್ಯರ್ಥಃ । ಅಂತರೇ, ಅಂತರಾ ವಾ ಶಾಟಕಾಃ ; ಪರಿಧಾನೀಯಾ ಇತ್ಯರ್ಥಃ ॥

ದ್ವಿಪದಸೂತ್ರ. ಹಿಂದಿನಂತೆ "ವಿಭಾಷಾ ಜಸಿ," "ಸರ್ವನಾಮಾನಿ" ಇವು ಅನುವೃತ್ತವಾಗುತ್ತವೆ. **ಸೂತ್ರಾರ್ಥ**—ಬಾಹ್ಯ, ಪರಿಧಾನೀಯ ಈ ಅರ್ಥದಲ್ಲಿ ಅಂತರಶಬ್ದಕ್ಕೆ ಗಣಸೂತ್ರದಿಂದ ಪ್ರಾಪ್ತವಾದ ಸರ್ವನಾಮಸಂಜ್ಞೆಯು ಜಸಿನಲ್ಲಿ ವಿಕಲ್ಪವಾಗಿ ಬರುತ್ತದೆ. ಸೂತ್ರದಲ್ಲಿರುವ ಬಹಿರ್ಯೋಗ, ಉಪಸಂವ್ಯಾನ ಪದಗಳಿಗೆ ಬಾಹ್ಯ, ಪರಿಧಾನೀಯ ಎಂದರ್ಥ. ಬಹಿಃ ಅಂದರೆ ಆವರಣವಿಲ್ಲದ ಹೊರಗಿನದೇಶ. ಅದರಯೋಗ ಅಂದರೆ ಸಂಬಂಧವುಳ್ಳದ್ದು. ಹೊರಗಿರುವುದು ಎಂದರ್ಥ. ಉಪಸಂವೀಯತೇ=ಪರಿಧೀಯತೇ ಇತಿ ಉಪಸಂವ್ಯಾನಮ್. ಉಡುವವಸ್ತ್ರ. ಈ ಎರಡು ಅರ್ಥಗಳಲ್ಲಿ ಮಾತ್ರ ವಿಕಲ್ಪವಾಗಿ ಸರ್ವನಾಮಸಂಜ್ಞೆ. ಸರ್ವನಾಮ ಸಂಜ್ಞೆ ಬಂದರೆ

ಅಂತರೇ, ಸರ್ವನಾಮಸಂಜ್ಞಾ ಬಾರದಿದ್ದರೆ ಅಂತರಾಃ ಎಂತಲೂ ಆಗುತ್ತದೆ. ಹೊರಗಿನ ಮನೆ, ಅಥವಾ ಉಡುವಬಟ್ಟೆ ಎಂದರ್ಥವಾಗುತ್ತದೆ. ಇನೆರಡರ್ಥವನ್ನು ಬಿಟ್ಟರೆ ಬೇರೆ ಅರ್ಥದಲ್ಲಿ ಸರ್ವನಾಮಸಂಜ್ಞೆಯೇ ಇಲ್ಲದಿರುವುದರಿಂದ ರಾಮಶಬ್ದದಂತೇ ರೂಪ. ಹೀಗೆ ಪೂರ್ವಾದಿ ಒಂಭತ್ತು ಶಬ್ದಗಳಿಗೆ ಜಸಿನಲ್ಲಿ ವಿಕಲ್ಪಹೇಳಿ ಈಗ ಪಂಚಮೀ ಸಪ್ತಮೀ ಏಕವಚನಗಳಲ್ಲಿ ಸಂಜ್ಞಾವಿಕಲ್ಪವನ್ನು ಹೇಳುತ್ತಾನೆ.

(ಪೂರ್ವಾದಿ 9 ಶಬ್ದಗಳಿಗೆ ವಿಕಲ್ಪಸರ್ವನಾಮ ಸಂಜ್ಞೆಹೇಳುವಸೂತ್ರ)

೧೫೯. ಪೂರ್ವಾದಿಭ್ಯೋ ನವಭ್ಯೋ ವಾ ॥ ೭-೧-೧೬ ॥

ಏಭ್ಯೋ ಜಸಿಜಶ್ಯೋಃ ಸ್ಮಾತ್ಸ್ಮಿನಾ ವಾಸ್ತಃ । ಪೂರ್ವಸ್ಮಾತ್, ಪೂರ್ವಾತ್। ಪೂರ್ವಸ್ಮಿನ್ ಪೂರ್ವೇ । ಏವಂ ಪರಾದೀನಾಮ್। ಶೇಷಂ ಸರ್ವವತ್ ॥

ಪೂರ್ವಾದಿಭ್ಯಃ, ನವಭ್ಯಃ, ವಾ ॥ ತ್ರಿಪದಸೂತ್ರ. "ಜಸಿಜಶ್ಯೋಃ ಸ್ಮಾತ್ಸ್ಮಿನಾ" ಸೂತ್ರವೇ ಅನುವೃತ್ತವಾಗುತ್ತದೆ. ಪೂರ್ವಾದಿಭ್ಯಃ ಪಂಚಮೀ. ಪೂರ್ವಾದಿಗಳು ಈ ಮೂರು ಸೂತ್ರಗಳಲ್ಲಿ ಹೇಳಲ್ಪಟ್ಟವುಗಳು. (ಒಂಭತ್ತು) **ಸೂತ್ರಾರ್ಥ**—ಪೂರ್ವಾದಿ ಒಂಭತ್ತು ಶಬ್ದಗಳಿಗೆ ವಿಹಿತವಾದ ಜಸಿ, ಜಿ ಪ್ರತ್ಯಯಗಳಿಗೆ ಸ್ಮಾತ್, ಸ್ಮಿನ್ ಪ್ರತ್ಯಯಗಳು ವಿಕಲ್ಪವಾಗಿ ಬರುತ್ತವೆ. ವಿಕಲ್ಪ ಮೂರುರೀತಿಯಾಗಿದೆ. ನಿತ್ಯವಾಗಿ ಕಾರ್ಯ ಬರುತ್ತಿರುವಾಗ ಅದಕ್ಕೆ ವಿಕಲ್ಪಹೇಳಿದರೆ ಅದಕ್ಕೆ ಪ್ರಾಪ್ತವಿಭಾಷೆಯಂದು ಹೆಸರು. ಎಂದೂ ಬಾರದಿರುವುದಕ್ಕೆ ವಿಕಲ್ಪ ಹೇಳುವುದು ಅಪ್ರಾಪ್ತವಿಭಾಷೆ ಒಂದು ಸೂತ್ರದಲ್ಲಿ ಕೆಲವಂಶದಲ್ಲಿ ಪ್ರಾಪ್ತವಾದುದಕ್ಕೂ ಕೆಲವಂಶದಲ್ಲಿ ಬಾರದಿರುವುದಕ್ಕೂ ವಿಕಲ್ಪಹೇಳಿದರೆ ಅದು ಪ್ರಾಪ್ತಾಪ್ರಾಪ್ತವಿಭಾಷೆ ಎನಿಸುತ್ತದೆ. ಇಲ್ಲಿ ಸರ್ವನಾಮಸಂಜ್ಞೆಯಿರುವುದರಿಂದ ಜಸಿಜಶ್ಯಲ್ಲಿ ನಿತ್ಯವಾಗಿ ಸ್ಮಾತ್ಸ್ಮಿನ್ ಆದೇಶಬರುತ್ತಿದ್ದರೆ ಈ ಸೂತ್ರದಲ್ಲಿ ವಿಕಲ್ಪಹೇಳಿರುವುದರಿಂದ ಇದು ಪ್ರಾಪ್ತವಿಭಾಷೆ. ಪೂರ್ವಸ್ಮಾತ್, ಪೂರ್ವಾತ್, ಪೂರ್ವಸ್ಮಿನ್, ಪೂರ್ವೇ. ಆದೇಶ ಬಾರದಿದ್ದರೆ ರಾಮಶಬ್ದದಂತೆ ಒಂದುರೂಪವಾಗಿ ಎರಡೆರಡುರೂಪಗಳಾಗುತ್ತವೆ. ಹೀಗೆಯೇ ಪರಮುಂತಾದ ಎಂಟ್ಹು ಶಬ್ದಗಳ ಈ ಎರಡು ವಿಭಕ್ತಿಗಳಲ್ಲಿ ಎರಡೆರಡುರೂಪಗಳನ್ನು ತಿಳಿಯಬೇಕು, ಉಳಿದ ವಿಭಕ್ತಿಗಳಲ್ಲಿ ಸರ್ವಶಬ್ದದಂತೆ ರೂಪವಾಗುತ್ತದೆ. ಜಸ್, ಜಸಿ, ಜಸ್, ಈ ಮೂರರಲ್ಲಿ ವಿಕಲ್ಪವಾದುದರಿಂದ ಎರಡುರೂಪ.

(ಪ್ರಥಮಾದಿಶಬ್ದಗಳಿಗೆ ವಿಕಲ್ಪಸಂಜ್ಞೆಹೇಳುವ ಸೂತ್ರ)

೧೬೦. ಪ್ರಥಮಚರಮತಯಾಲ್ಪಾರ್ಧಕತಿಪಯ-ನೇಮಾಶ್ಚ ॥ ೧-೧-೩೫ ॥

ಏತೇ ಜಸಿ ಉಕ್ತಸಂಜ್ಞಾ ವಾ ಸ್ಯುಃ । ಪ್ರಥಮೇ, ಪ್ರಥಮಾಃ॥ ತಯಪ್ ಪ್ರತ್ಯಯಃ ॥ ದ್ವಿತಯೇ, ದ್ವಿತಯಾಃ । ಶೇಷಂ ರಾಮವತ್ । ನೇಮೇ, ನೇಮಾಃ । ಶೇಷಂ ಸರ್ವವತ್ ॥

ಪ್ರಥಮ..... ನೇಮಾಃ, ಜ ॥ ದ್ವಿಪದಸೂತ್ರ. ಪ್ರಥಮಶ್ಚ, ಚರಮಶ್ಚ, ತಯಶ್ಚ, ಅಲ್ಪಾಶ್ಚ, ಅರ್ಧಂಚ ಕತಿಪಯಶ್ಚ ನೇಮಶ್ಚ, ಪ್ರಥಮ.....ನೇಮಾಃ. ಇಲ್ಲಿ ಏಳು ಶಬ್ದಗಳಿವೆ. " ವಿಭಾಷಾ ಜಸಿ " " ಸರ್ವನಾಮಾನಿ " ಅನುವೃತ್ತವಾಗುತ್ತ ಜಸಿ

ಸೂತ್ರಾರ್ಥ—ಪ್ರಥಮಾದಿಗಳು ಜಸಿನಲ್ಲಿ ವಿಕಲ್ಪವಾಗಿ ಸರ್ವನಾಮಸಂಜ್ಞೆಯನ್ನು ಹೊಂದುತ್ತವೆ. ಇದು ಪ್ರಾಪ್ತಾಪ್ರಾಪ್ತವಿಭಾಷೆ. ನೇಮವೆಂಬುದು ಸರ್ವಾದಿಗಣದಲ್ಲಿ ಪಠಿತವಾದುದರಿಂದ ಅದಕ್ಕೆ ನಿತ್ಯವಾಗಿ ಬಂದರೆ ಜಸಿನಲ್ಲಿ ವಿಕಲ್ಪವೆಂದುದರಿಂದ ಪ್ರಾಪ್ತಾಪ್ರಾಪ್ತ ವಿಭಾಷೆ. ಎರಡೂ ಸೇರಿರುವುದರಿಂದ ಪ್ರಾಪ್ತಾಪ್ರಾಪ್ತವಿಭಾಷೆಯಾಯಿತು.

ಪ್ರಥಮಶಬ್ದಕ್ಕೆ ಸರ್ವನಾಮಸಂಜ್ಞಾ ಬಂದರೆ ಜಸಿಗೆ ಶೀಭಾವ, ಗುಣಬಂದು ಪ್ರಥಮೇ ಎಂದೂ, ಬಾರದಿದ್ದರೆ ಪೂರ್ವಸವರ್ಣದೀರ್ಘಬಂದು ಪ್ರಥಮಾಃ ಎಂದೂ ಆಗುತ್ತದೆ. ಹೀಗೆ ಮೀಚರಮಶಬ್ದ. ತಯ ಎಂಬುದು ಪ್ರತ್ಯಯ. " ಪ್ರತ್ಯಯಗ್ರಹಣೇ ತದಂತಗ್ರಹಣಮ್ " ಪರಿಭಾಷೆಯಿಂದ ತದಂತವನ್ನು ತೆಗೆದುಕೊಳ್ಳಬೇಕು. ದ್ವಿತಯ ಇದು ತಯಪ್ರತ್ಯಯಾಂತವಾದ ಶಬ್ದ. " ಸಂಖ್ಯಾಯಾ ಅವಯವೇ ತಯಪ್ " ಎಂಬ ಸೂತ್ರದಿಂದ ಅವಯವನವಾಚಕ ಸಂಖ್ಯಾವಾಚಕಶಬ್ದದ ಮೇಲೆ ತಯಪ್ ಪ್ರತ್ಯಯ ಮುಂದೆ ಹೇಳುತ್ತಾನೆ. ಎರಡು ಅವಯವ ಉಳ್ಳದ್ದು ಒಂದು ಅವಯವಿ. ಸಂಜ್ಞಾ ಬಂದರೆ ದ್ವಿತಯೇ, ಇಲ್ಲವಾದರೆ ದ್ವಿತಯಾಃ ಎಂದಾಗುತ್ತದೆ. ಹೀಗೆಯೇ ಅಲ್ಪೇ ಅಲ್ಪಾಃ, ಅರ್ಧೇ ಅರ್ಧಾಃ, ಕತಿಪಯೇ ಕತಿಪಯಾಃ, ಎಂದು ಉಳಿದವುಗಳಿಗೂ ಜಸಿನಲ್ಲಿ ಎರಡೆರಡುರೂಪ. ಉಳಿದ ವಿಭಕ್ತಿಗಳಲ್ಲಿ ರಾಮಶಬ್ದದಂತೇ ರೂಪವಾಗುತ್ತವೆ. ನೇಮ ಶಬ್ದಕ್ಕೆ ಮಾತ್ರ ಜಸಿನಲ್ಲಿ ವಿಕಲ್ಪ. ಉಳಿದವಿಭಕ್ತಿಗಳಲ್ಲಿ ಸರ್ವಶಬ್ದದಂತೆ ರೂಪವನ್ನು ತಿಳಿಯಬೇಕು.

(ತೀಯಪ್ರತ್ಯಯಾಂತಕ್ಕೆ ವಿಕಲ್ಪಸಂಜ್ಞೆ ಹೇಳುವವಾರ್ತಿಕ)

ವಾ॥ (ತೀಯಸ್ಯ ಜಿತ್ಸು ವಾ)

ದ್ವಿತೀಯಸ್ಮೈ, ದ್ವಿತೀಯಾಯೇತ್ಯಾದಿ ॥ ಏವಂ ತೃತೀಯಃ ॥

ತೀಯಸ್ಯ. ಜಿತ್ಸು, ವಾ॥ ತ್ರಿಪದವಾರ್ತಿಕ. ತೀಯವೆಂಬುದು ಪೂರಣಾರ್ಥ ದಲ್ಲಿ ಬಂದ ಪ್ರತ್ಯಯ. ಪ್ರತ್ಯಯವಾದುದರಿಂದ ತದಂತಗ್ರಹಣ. ತೀಯಪ್ರತ್ಯಯಾಂತ

ಶಬ್ದಕ್ಕೆ ಜಿತ್ತಾದ ಪ್ರತ್ಯಯಪರವಾದಾಗ ವಿಕಲ್ಪವಾಗಿ ಸರ್ವನಾಮಸಂಜ್ಞೆಯು ಬರುತ್ತದೆ. ಸುಪಿನಲ್ಲಿ ಜೀ, ಜಸಿ, ಜಸ್, ಜಿ, ಈ ನಾಲ್ಕು ಪ್ರತ್ಯಯಗಳು ಜಿತ್ತಾಗಿವೆ. ಇವು ಪರವಾದಾಗ ವಿಕಲ್ಪವಾಗಿ ಸಂಜ್ಞೆ. ದ್ವಿತೀಯನೆಂಬುದು ತೀಯಪ್ರತ್ಯಯಾಂತ ಶಬ್ದ. ಇದಕ್ಕೆ ಈ ನಾಲ್ಕು ಪ್ರತ್ಯಯಗಳು ಪರವಾದಾಗ ಸರ್ವನಾಮಸಂಜ್ಞೆ ಬಂದರೆ ಪ್ರತ್ಯಯಕ್ಕೆ ಸ್ಮೈ—ಸ್ಮಾತ್, ಸ್ಮಿನ್ ಆದೇಶಗಳು ಬರುತ್ತವೆ. ಬಾರದಿದ್ದರೆ ರಾಮ ಶಬ್ದದಂತೆ ರೂಪ. ದ್ವಿತೀಯಸ್ಮೈ—ದ್ವಿತೀಯಾಯ । ದ್ವಿತೀಯಸ್ಮಾತ್—ದ್ವಿತೀಯಾತ್ । ದ್ವಿತೀಯಸ್ಯ । ದ್ವಿತೀಯಸ್ಮಿನ್ ದ್ವಿತೀಯೇ ॥ ಷಷ್ಠೀಏಕವಚನದಲ್ಲಿ ಸರ್ವನಾಮ ಕಾರ್ಯವಿಲ್ಲವಾದುದರಿಂದ ಒಂದೇರೂಪ. ಹೀಗೆ ತೀಯಪ್ರತ್ಯಯಾಂತವಾದ ತೃತೀಯಶಬ್ದವೂ ರೂಪವನ್ನು ಹೊಂದುತ್ತದೆ. ಉಳಿದ ವಿಭಕ್ತಿಗಳಲ್ಲಿ ರಾಮ ಶಬ್ದದಂತೇ ರೂಪ. ಇದು ಅಪ್ರಾಪ್ತವಿಭಾಷೆ. ತೀಯಪ್ರತ್ಯಯಾಂತಕ್ಕೆ ಹಿಂದಿ ಯಾವುದರಿಂದಲೂ ಸರ್ವನಾಮಸಂಜ್ಞೆ ಬಂದಿಲ್ಲ. ಇಲ್ಲಿಯೇ ವಿಕಲ್ಪ ಹೇಳಿರುವುದರಿಂದ ಅಪ್ರಾಪ್ತವಿಭಾಷೆ.

ಅಕಾರಾಂತ ಸರ್ವನಾಮರೂಪಗಳನ್ನು ಇಲ್ಲಿಯವರೆಗೆ ಹೇಳಿ ಅಕಾರಾಂತದಲ್ಲಿ ವಿಶೇಷರೂಪ ಹೊಂದುವ ನಿರ್ಜರಶಬ್ದದ ರೂಪವನ್ನು ವಿವರಿಸುತ್ತಾನೆ. ನಿಷ್ಕ್ರಾಂತಃ ಜರಾಯಾ ನಿರ್ಜರಃ ಅಥವಾ ನಿರ್ಗತಾ ಜರಾ ಯಸ್ಮಾತ್ ನಿರ್ಜರಃ ಮುಪ್ಪಿನಿಂದ ಬಿಡಲ್ಪಟ್ಟವರು. ಸದಾಯೌವನದಲ್ಲಿರುವವರು. ದೇವತೆಗಳು. "ಅಮರಾ ನಿರ್ಜರಾ ದೇವಾಃ" ಅಮರ. ಪ್ರಥಮಾ ಸುಪರವಾದಾಗ ರುತ್ವವಿಸರ್ಗ. ನಿರ್ಜರಃ ಎಂದಾಗುತ್ತದೆ. ದ್ವಿವಚನದಲ್ಲಿ ೞೌ ಪ್ರತ್ಯಯ. ನಿರ್ಜರ+ೞ್ ಎಂದಿರುವಾಗ

(ಜರಾಶಬ್ದಕ್ಕೆ ಜರಸ್ ಆದೇಶಹೇಳುವ ಸೂತ್ರ)

೧೬೧. ಜರಾಯಾ ಜರಸನ್ಯತರಸ್ಯಾಮ್ ॥ ೭-೨-೧೦೧ ॥

ಅಜಾದೌ ವಿಭಕ್ತೌ ॥ (ಪ) ಪದಾಂಗಾಧಿಕಾರೇ ತಸ್ಯ ಚ ತದಂತಸ್ಯ ಚ (ಪ) ನಿರ್ದಿಶ್ಯಮಾನಸ್ಯಾದೇಶಾ ಭವಂತಿ । (ಪ) ಏಕದೇಶವಿಕೃತಮನನ್ಯವತ್ । ಇತಿ ಜರಶಬ್ದಸ್ಯ ಜರಸ್। ನಿರ್ಜರಪೌ । ನಿರ್ಜರಸ ಇತ್ಯಾದಿ । ಪಕ್ಷೇ ಹಲಾದೌ ಚ ರಾಮವತ್ ॥

ಜರಾಯಾಃ, ಜರಸ್, ಅನ್ಯತರಸ್ಯಾಮ್। ತ್ರಿಪದಸೂತ್ರ. "ಅಷ್ಟನ ಆ ವಿಭಕ್ತೌ" ಸೂತ್ರದಿಂದ " ವಿಭಕ್ತೌ " " ಅಚೀರಮ್ಶತಃ" ಸೂತ್ರದಿಂದ ಅಚಿ ಅನುವೃತ್ತವಾಗುತ್ತವೆ. ಅಚಿಎಂಬ ಸಪ್ತಮ್ಯಂತವು ವಿಭಕ್ತಿಗೆ ವಿಶೇಷಣ. " ಯಸ್ಮಿನ್ವಿಧಿಸ್ತದಾದಾವಲ್ಗ್ರಹಣೇ" ಪರಿಭಾಷೆಯಿಂದ ಅಜಾದಿ ವಿಭಕ್ತಿ ಎಂದಾಗುತ್ತವೆ. ಇದೂಸಪ್ತಮಿಯಾ

ದುದರಿಂದ ಪೂರ್ವಕ್ಕೆ ಕಾರ್ಯವೆಂದು ತಿಳಿಯುತ್ತದೆ. **ಸೂತ್ರಾರ್ಥ**—ಆಜಾದಿಯಾದ ವಿಭಕ್ತಿಪರವಾದಾಗ ಜರಾಶಬ್ದಕ್ಕೆ ವಿಕಲ್ಪವಾಗಿ ಜರಸಾದೇಶ ಬರುತ್ತದೆ. ಸೂತ್ರದಲ್ಲಿ ಜರಾಶಬ್ದಕ್ಕೆ ಜರಸ್ ಆದೇಶ ಹೇಳಿದೆ. ಇಲ್ಲಿ ನಿರ್ಜರಶಬ್ದವಿದೆ. ಇದಕ್ಕೆ ಹೇಗೆ ಜರಸಾದೇಶಪ್ರಸಕ್ತಿ ? ಅಂದರೆ ಇಲ್ಲಿ ಜರಸಾದೇಶ ಬರುವಂತೆ ಅರ್ಥಹೇಳುವ ಪರಿಭಾಷೆಯನ್ನು ಹೇಳುತ್ತಾನೆ. ಪದಾಂಗ ..... ಚ ॥ ಪದಾಧಿಕಾರದಲ್ಲಿಯೂ, ಅಂಗಾಧಿಕಾರದಲ್ಲಿಯೂ ಯಾವುದಕ್ಕೆ ಯಾವುದು ವಿಹಿತವಾಗಿದೆಯೋ ಅದು ಅದಕ್ಕೂ ಅದೇ ಅಂತದಲ್ಲಿರುವುದಕ್ಕೂ ಬರುತ್ತದೆ. ಎಂದು ಈ ಪರಿಭಾಷೆಯ ಅರ್ಥ. ಪ್ರಕೃತ ಜರಸಾದೇಶವು ಅಂಗಾಧಿಕಾರದಲ್ಲಿ ಹೇಳಿದೆ. ಆದುದರಿಂದ ಜರಾಶಬ್ದಕ್ಕೂ ಜರಾಶಬ್ದವೇ ಅಂತವಾಗಿರುವುದಕ್ಕೂ ಜರಸಾದೇಶವೆಂದು ಈ ಪರಿಭಾಷೆಯಿಂದ ನಿಶ್ಚಯವಾಗುತ್ತದೆ. ನಿರ್ಜರವೆಂಬಲ್ಲಿ ಜರಾಶಬ್ದವೇ ಅಂತವಾಗಿರುವುದರಿಂದ ಜರಸಾದೇಶ ಬರುತ್ತದೆ. ಜರಸ್ ಅನೇಕಾಲಾದುದರಿಂದ " ಅನೇಕಾಲ್‌ಶಿತ್ ಸರ್ವಸ್ಯ " ಸೂತ್ರದಿಂದ ಸರ್ವಕ್ಕೂ ಆದೇಶಪ್ರಾಪ್ತವಾದರೆ ಅದಕ್ಕೆ ಅಪವಾದವಾಗಿ ನಿರ್ದಿಷ್ಟವಾದುದಕ್ಕೇ ಬರುತ್ತದೆಂದು ನಿಯಮಿಸುವ ಪರಿಭಾಷೆಯನ್ನು ಹೇಳುತ್ತಾನೆ. " ನಿರ್ದಿಶ್ಯ..... ತಿ " ॥ ಹಿಂದೆಹೇಳಿದ ಆದೇಶ ಬರುವುದಾದರೆ ಪ್ರತ್ಯಕ್ಷ ಸೂತ್ರದಲ್ಲಿ ನಿರ್ದಿಷ್ಟವಾದುದು ಯಾವುದೋ ಅದಕ್ಕೇ ಬರುತ್ತದೆ. ಪ್ರಕೃತ ಜರಾಶಬ್ದಾಂತಕ್ಕೆ ಆದೇಶ ಪರಿಭಾಷೆಯಿಂದ ಲಬ್ಧವಾದರೂ ಸೂತ್ರದಲ್ಲಿ ಕೇವಲ ಜರಾಶಬ್ದಕ್ಕೆ ಹೇಳಿದುದರಿಂದ ನಿರ್ಜರವೆಂಬಲ್ಲಿ ಜರ+ಎಂಬುದಕ್ಕೆ ಮಾತ್ರ ಜರಸಾದೇಶ. ಪ್ರತ್ಯಕ್ಷವಾದ ಸ್ಥಾನಿ ಜರಾಶಬ್ದ. ಆನುಮಾನಿಕ ಸ್ಥಾನಿ ನಿರ್ಜರಶಬ್ದ. ಈ ಎರಡುಪರಿಭಾಷೆಗಳಿಂದ ಜರಾಶಬ್ದಕ್ಕೆ ಆದೇಶ ಹೇಳಿದರೂ ಪ್ರಕೃತ ನಿರ್ಜರಶಬ್ದಕ್ಕೆ ಆದೇಶ ಬರುವುದಿಲ್ಲ. ಏಕೆಂದರೆ ಜರಾಎಂಬ ದೀರ್ಘಾಂತಕ್ಕೆ ಆದೇಶ ಹೇಳಿರುವುದು. ಇಲ್ಲಿ ಜರ ಎಂದು ಹ್ರಸ್ವಾಂತವಿದೆ. ಆಗ ಹೇಗೆ ಬರುವುದು ಎಂದು ಶಂಕೆ ಬಂದರೆ ಅದಕ್ಕೆ ಸಮಾಧಾನರೂಪವಾಗಿ ಇನ್ನೊಂದು ಪರಿಭಾಷೆಯನ್ನು ಹೇಳುತ್ತಾನೆ. ಈ ಪರಿಭಾಷೆಗಳು ಸೂತ್ರದಿಂದ ಜ್ಞಾಪಿತವಾದವುಗಳು. " ಏಕದೇಶೇತಿ " ॥ ಏಕದೇಶದಲ್ಲಿ ವಿಕಾರವನ್ನು ಹೊಂದಿರುವುದು ಬೇರೆಯಾದುದಲ್ಲ. ಕತ್ತರಿಸಿಹೋದ ಬಾಲವುಳ್ಳ ನಾಯಿಯು ನಾಯಿಯೇ ಕುದುರೆಯಲ್ಲ. ಎಂಬ ನ್ಯಾಯದಂತೆ ಒಂದು ಶಬ್ದದಲ್ಲಿ ಸ್ವಲ್ಪವಿಕಾರವುಂಟಾದರೂ ಅದು ಅದೇ ಶಬ್ದವೆನಿಸುತ್ತದೆ. ಅನ್ಯಶಬ್ದವಾಗುವುದಿಲ್ಲ. ನಿರ್ಜರವೆಂಬಲ್ಲಿ ಜರಾಶಬ್ದಕ್ಕೆ ಹ್ರಸ್ವಬಂದಿದೆ. ಈ ವಿಕಾರದಿಂದ ಅದು ಜರಾಶಬ್ದವೇ ವಿನಾ ಬೇರೆಯಾಗುವುದಿಲ್ಲ. ಅದುದರಿಂದ ಜರಎಂಬುದಕ್ಕೆ ಜರಸಾದೇಶ ಬಂದರೆ ನಿರ್ಜರಸ್+ಔ=ನಿರ್ಜರಸೌ ಎಂದಾಗುತ್ತದೆ ಆದೇಶಬಾರದಿದ್ದರೆ ವೃದ್ಧಿ, ನಿರ್ಜರೌ. ಹೀಗೆ ಅಜಾದಿವಿಭಕ್ತಿಗಳಲ್ಲಿ ಮಾತ್ರ ಎರಡೆರಡುರೂಪ. ಜರಸ್ ಆದೇಶಬಂದರೆ ಹಲಂತವಾಗುತ್ತದೆ.

ಅಕಾರಾಂತ ಪುಲ್ಲಿಂಗ ನಿರ್ಜರ–ಶಬ್ದ.

ಪ್ರ—ನಿರ್ಜರಃ। ನಿರ್ಜರಸೌ ನಿರ್ಜರೌ। ನಿರ್ಜರಸಃ ನಿರ್ಜರಾಃ॥ ದ್ವಿ–ನಿರ್ಜರಂ ನಿರ್ಜರಸಂ । ನಿರ್ಜರಸೌ ನಿರ್ಜರೌ । ನಿರ್ಜರಾನ್ ನಿರ್ಜರಸಃ ॥ ತೃ—ನಿರ್ಜರೇಣ ನಿರ್ಜರಸಾ । ನಿರ್ಜರಾಭ್ಯಾಮ್ ನಿರ್ಜರೈಃ ॥ ಚ—ನಿರ್ಜರಾಯ ನಿರ್ಜರಸೇ । ನಿರ್ಜರಾಭ್ಯಾಮ್ ನಿರ್ಜರೇಭ್ಯಃ ॥ ಪಂ—ನಿರ್ಜರಾತ್ ನಿರ್ಜರಸಃ । ನಿರ್ಜರಾಭ್ಯಾಮ್ ನಿರ್ಜರೇಭ್ಯಃ ॥ ಷ—ನಿರ್ಜರಸ್ಯ ನಿರ್ಜರಸಃ । ನಿರ್ಜರಯೋಃ ನಿರ್ಜರಸೋಃ । ನಿರ್ಜರಾಣಾಮ್ ನಿರ್ಜರ ಸಾಮ್ ॥ ಸ—ನಿರ್ಜರೇ ನಿರ್ಜರಸಿ । ನಿರ್ಜರಯೋಃ ನಿರ್ಜರಸೋಃ । ನಿರ್ಜರೇಷು.

ಹಲಾದಿ ವಿಭಕ್ತಿಗಳಲ್ಲಿ ರಾಮಶಬ್ದದಂತೇ ಒಂದೇ ರೂಪ. ಭಿಸಿನಲ್ಲಿ ನಿರ್ಜರೈಃ ಒಂದೇರೂಪ. ಹೀಗೆ ಅಕಾರಾಂತ ಪುಲ್ಲಿಂಗ ಶಬ್ದಗಳು ಮುಗಿದಿವೆ.

(ಆಕಾರಾಂತ ಶಬ್ದಗಳು. ವಿಶ್ವಪಾ ಶಬ್ದ)

ವಿಶ್ವಂ ಪಾತಿ, ವಿಶ್ವಪಾಃ, ಲೋಕವನ್ನು ರಕ್ಷಿಸುವವನು. ಪಾ ಧಾತುವಿಗೆ ಕ್ವಿಪ್ ಪ್ರತ್ಯಯ. ಕ್ವಿಪ್‌ನಲ್ಲಿ ಸರ್ವಲೋಪ. ವಿಶ್ವಪಾ ಆಕಾರಾಂತವಾಗುತ್ತದೆ. ಪ್ರಥಮಾ ಏಕವಚನದಲ್ಲಿ ಸು ಪ್ರತ್ಯಯ. ವಿಶ್ವಪಾ+ಸ್. ರುತ್ವವಿಸರ್ಗ. ವಿಶ್ವಪಾಃ. ದ್ವಿವಚನದಲ್ಲಿ ಔ ಪ್ರತ್ಯಯ ವಿಶ್ವಪಾ+ಔ ಎಂದಿರುವಾಗ ಮೊದಲು " ವೃದ್ಧಿರೇಚಿ " ಸೂತ್ರದಿಂದ ವೃದ್ಧಿಪ್ರಾಪ್ತವಾದರೆ ಅದಕ್ಕೆ ಅಪವಾದವಾಗಿ " ಪ್ರಥಮಯೋಃಪೂರ್ವಸವರ್ಣಃ " ಸೂತ್ರದಿಂದ ಪೂರ್ವಸವರ್ಣದೀರ್ಘ ಬರುತ್ತದೆ. ಇದಕ್ಕೆ " ನಾದಿಚಿ " ಸೂತ್ರವು ಅಪವಾದವಿದ್ದರೂ ಇಲ್ಲಿ ಬೇರೊಂದು ಸೂತ್ರದಿಂದ ನಿಷೇಧ ಹೇಳುತ್ತಾನೆ.

(ಪೂರ್ವಸವರ್ಣದೀರ್ಘ ನಿಷೇಧ ಹೇಳುವಸೂತ್ರ)

೧೬೨. ದೀರ್ಘಾಜ್ಜಸಿ ಚ ॥ ೬-೧-೧೦೫ ॥

ದೀರ್ಘಾತ್ ಜಸಿ ಇಚಿ ಚ ಪರೇ ಪೂರ್ವಸವರ್ಣದೀರ್ಘೋ ನ ಸ್ಯಾತ್। ವಿಶ್ವಪೌ । ವಿಶ್ವಪಾಃ । ಹೇ ವಿಶ್ವಪಾಃ । ವಿಶ್ವಪಾಮ್ । ವಿಶ್ವಪೌ ॥

ದೀರ್ಘಾತ್, ಜಸಿ, ಚ ॥ ತ್ರಿಪದಸೂತ್ರ. " ಪ್ರಥಮಯೋಃ ಪೂರ್ವಸವರ್ಣಃ " ಸೂತ್ರದಿಂದ " ಪೂರ್ವಸವರ್ಣಃ, " " ಅಕಃ ಸವರ್ಣೇದೀರ್ಘಃ " ಸೂತ್ರದಿಂದ " ದೀರ್ಘಃ " " ನಾದಿಚಿ " ಸೂತ್ರದಿಂದ "ನ" "ಇಚಿ" ಈ ಪದಗಳು ಅನುವೃತ್ತವಾಗುತ್ತವೆ. **ಸೂತ್ರಾರ್ಥ**-— ದೀರ್ಘದ ಪರದಲ್ಲಿ ಜಸ್ ಪ್ರತ್ಯಯವಾಗಲೀ " ಇಚ್ "

(ಪ್ರತ್ಯಹಾರ) ಆಗಲೀ ಇವ್ಹರಿ ಪೂರ್ವಸವರ್ಣದೀರ್ಘಬರುವುದಿಲ್ಲ. ದೀರ್ಘಕ್ಕೆ (ಪಾ) ಪ್ಲುತಾಕಾರರೂಪ. ಇಚ್ ಪರವಾದುದರಿಂದ ದೀರ್ಘನಿಷೇಧ. ಪ್ರಜ್ಞಾ ಸಾಮಾನ್ಯಸೂತ್ರ(ವೃದ್ಧಿರೇಚಿ)ದಿಂದ ವೃದ್ಧಿ ಬಂದರೆ ವಿಶ್ವಪೌ ಎಂದಾಗುತ್ತದೆ. "ನಾದಿಚಿ" ಸೂತ್ರಕ್ಕೂ ಇಲ್ಲಿ ಪ್ರವೃತ್ತಿ ಇಲ್ಲ. ಆದರೂ ದೀರ್ಘದ ಪರದಲ್ಲಿಯಂದು ವಿಶೇಷವಾಗಿ ಹೇಳಿರುವುದರಿಂದಲೂ ಪರಸೂತ್ರವಾದುದರಿಂದಲೂ " ದೀರ್ಘಾಜ್ಜಸಿಚ " ಎಂಬುದರಿಂದಲೇ ನಿಷೇಧಹೇಳಿದೆ. ವಿಶ್ವಪಾ ಶಬ್ದದಮೇಲೆ ಪ್ರ – ಬಹುವಚನದಲ್ಲಿ ಜಸ್ ಪ್ರತ್ಯಯ ವಿಶ್ವಪಾ+ಅಸ್. "ಪ್ರಥಮಯೋಃ ಪೂರ್ವಸವರ್ಣಃ" ಸೂತ್ರಕ್ಕೆ "ದೀರ್ಘಾಜ್ಜಸಿಚ" ಎಂಬುದು ಅಪವಾದವಿರುವುದರಿಂದ (ದೀರ್ಘಕ್ಕೆ ಜಸ್ ಪರವಾದುದರಿಂದ) "ಅಕಃ ಸವರ್ಣೇ ದೀರ್ಘಃ" ಎಂಬುದರಿಂದ ದೀರ್ಘ. ವಿಶ್ವಪಾಸ್. "ಸಜುಷೋ ರುಃ", "ಖರವಸಾನಯೋರ್ವಿಸರ್ಜನೀಯಃ" ಸೂತ್ರಗಳಿಂದ ರುತ್ವ ವಿಸರ್ಗ. ವಿಶ್ವಪಾಃ. ಸಂಬೋಧನಸ್ಪ್ರಥಮಾದಲ್ಲಿ ಸುವಿಗೆ ರುತ್ವವಿಸರ್ಗ ಬಂದರೆ ಹೇ ವಿಶ್ವಪಾಃ. ದ್ವಿವಚನ ಬಹುವಚನಗಳಲ್ಲಿ ಪ್ರಥಮಾದಂತೆ ರೂಪ. ಹೇ ವಿಶ್ವಪಾ ಹೇ ವಿಶ್ವಪಾಃ ॥ ವಿಶ್ವಪಾ ಶಬ್ದಕ್ಕೆ ದ್ವಿತೀಯಾ ಏಕವಚನದಲ್ಲಿ ಅಮ್ ಪ್ರತ್ಯಯ. ವಿಶ್ವಪಾ+ಅಮ್ ಎಂದಿರುವಾಗ "ಪ್ರಥಮಯೋಃ ಪೂರ್ವಸವರ್ಣಃ" ಸೂತ್ರದಿಂದ ಪೂರ್ವಸವರ್ಣ ದೀರ್ಘ ಪ್ರಾಪ್ತವಾದರೆ ಅದಕ್ಕೆ ಅಪವಾದವಾಗಿ "ಅಮಿ ಪೂರ್ವಃ" ಸೂತ್ರದಿಂದ ಪೂರ್ವರೂಪ ಏಕಾದೇಶವಾಗಿ ಬಂದರೆ ವಿಶ್ವಪಾಮ್. ದೀರ್ಘವಿರುವುದರಿಂದ ಇಲ್ಲಿ ಯಾವಸೂತ್ರಬಂದರೂ ಒಂದೇ ರೂಪವಾದರೂ ನ್ಯಾಯದಿಂದ ಬರುವ ಗಳನ್ನೇ ಹೇಳಬೇಕು. ದ್ವಿವಚನದಲ್ಲಿ ಪ್ರ—ದ್ವಿವಚನಂತೇ ರೂಪ. ವಿಶ್ವಪೌ. ದ್ವಿತೀಯಾ ಬಹುವಚನದಲ್ಲಿ ಶಸ್ ಪ್ರತ್ಯಯ. "ಲಶಕ್ವತದ್ಧಿತೇ" ಸೂತ್ರದಿಂದ ಶಕಾರಕ್ಕೆ ಇತ್ ಸಂಜ್ಞಾ ಬಂದು " ತಸ್ಯ ಲೋಪಃ " ಸೂತ್ರದಿಂದ ಲೋಪ. ವಿಶ್ವಪಾ+ಅಸ್ ಎಂದಿರುವಾಗ ಕಾರ್ಯವಿಶೇಷಕ್ಕೋಸ್ಕರ ಕೆಲವು ಸಂಜ್ಞೆಗಳನ್ನು ಹೇಳುತ್ತಾನೆ.

(ಸರ್ವನಾಮಸ್ಥಾನ ಸಂಜ್ಞೆ ಹೇಳುವ ಸೂತ್ರ)

೧೬೩. ಸುಡನಪುಂಸಕಸ್ಯ ॥ ೧-೧-೪೩ ॥

ಸ್ವಾದಿಪಂಚವಚನಾನಿ ಸರ್ವನಾಮಸ್ಥಾನಸಂಜ್ಞಾನಿ ಸ್ಯುರಕ್ಲೀಬಸ್ಯ ॥

ಸುಟ್, ಅನಪುಂಸಕಸ್ಯ ॥ ದ್ವಿಪದ ಸೂತ್ರ. " ಶಿ ಸರ್ವನಾಮಸ್ಥಾನಮ್ " ಸೂತ್ರದಿಂದ " ಸರ್ವನಾಮಸ್ಥಾನಮ್ " ಅನುವೃತ್ತವಾಗುತ್ತದೆ. " ಅನಪುಂಸಕಸ್ಯ" ಎಂಬುದಕ್ಕೆ ವೃತ್ತಿಯಲ್ಲಿ ಅಕ್ಲೀಬಸ್ಯ ಎಂದಿದೆ. ನಪುಂಸಕ ಪ್ರಾತಿಪದಿಕವನ್ನು ಬಿಟ್ಟು ಎಂದರ್ಥ. ಸುಟ್ ಪ್ರತ್ಯಾಹಾರ. ಸು, ಔ, ಜಸ್, ಅಮ್, ಔಟ್ ಈ ಐದಕ್ಕೆ ಸಂಜ್ಞಾ. **ಸೂತ್ರಾರ್ಥ**—ನಪುಂಸಕಭಿನ್ನ ಪ್ರಾತಿಪದಿಕದ ಮೇಲೆ ವಿಹಿತವಾದ

ಸುಮುಂತಾದ ಐದು ಪ್ರತ್ಯಯಗಳಿಗೆ " ಸರ್ವನಾಮಸ್ಥಾನ" ಎಂಬ ಸಂಜ್ಞೆ ಬರುತ್ತದೆ. ಸರ್ವನಾಮ ಸಂಜ್ಞೆ ಸರ್ವಾದಿಶಬ್ದಗಳಿಗೆ. ಸರ್ವನಾಮಸ್ಥಾನ ಸಂಜ್ಞೆ ಸು ಮುಂತಾದ ಐದುಪ್ರತ್ಯಯಗಳಿಗೆ ಎಂದು ವಿಶೇಷ ತಿಳಿಯಬೇಕು.

(ಪದಸಂಜ್ಞಾವಿಧಾಯಕ ಸೂತ್ರ)

೧೬೪. ಸ್ವಾದಿಷ್ವಸರ್ವನಾಮಸ್ಥಾನೇ ॥ ೧-೪-೧೭ ॥

ಕಪ್ ಪ್ರತ್ಯಯಾವಧಿಷು ಸ್ವಾದಿಷ್ವಸರ್ವನಾಮಸ್ಥಾನೇಷು ಪೂರ್ವಂ ಪದಂ ಸ್ಯಾತ್ ॥

ಸ್ವಾದಿಷು, ಅಸರ್ವನಾಮಸ್ಥಾನೇ ॥ ದ್ವಿಪದಸೂತ್ರ. "ಸುಪ್ತಿಙಂತಂ ಪದಮ್" ಸೂತ್ರದಿಂದ " ಪದಂ " ಅನುವೃತ್ತವಾಗುತ್ತದೆ. ಸು ಆದಿಃ ಯೇಷಾಂ ತೇ ಸ್ವಾದಯಃ ತೇಷು ಸ್ವಾದಿಷು. ನ ಸರ್ವನಾಮಸ್ಥಾನಂ ಅಸರ್ವನಾಮಸ್ಥಾನಂ, ತಸ್ಮಿನ್ ಅಸರ್ವನಾಮಸ್ಥಾನೇ. ಬಹುವಚನಕ್ಕೆ ಬದಲಾಗಿ ಏಕವಚನವು ಆರ್ಷವಾಗಿ ಬಂದಿದೆ. **ಸೂತ್ರಾರ್ಥ**—ಕಪ್ ಎಂಬಪ್ರತ್ಯಯವೇ ಕೊನೆಯ ಅವಧಿಯಾಗಿರುವ ಸು ಪ್ರತ್ಯಯವೇ ಆದಿಯಾಗಿರುವ ಸರ್ವನಾಮಸ್ಥಾನಭಿನ್ನವಾದ ಪ್ರತ್ಯಯ ಪರದಲ್ಲಿರುವಾಗ ಪೂರ್ವಕ್ಕೆ "ಪದ" ಎಂಬ ಸಂಜ್ಞೆ ಬರುತ್ತದೆ. ಸು ಪ್ರತ್ಯಯ "ಸ್ಯಾಜಸಮ್ಔಟ್"....॥ ೪.೧-೩॥ ಸೂತ್ರದಲ್ಲಿ ಹೇಳಿದೆ. ಕಪ್ ಪ್ರತ್ಯಯ ಐದನೇ ಅಧ್ಯಾಯದ ಕೊನೆಯಲ್ಲಿ "ಉರಃ ಪ್ರಭೃತಿಭ್ಯಃ ಕಪ್ " ॥ ೫–೪–೧೫೧ ॥ ಎಂಬಲ್ಲಿ ಹೇಳುತ್ತಾನೆ. ಸುಮಾರು ನಾಲ್ಕು ಮತ್ತು ಐದನೆಯ ಅಧ್ಯಾಯಗಳಲ್ಲಿ ಹೇಳುವ ಪ್ರತ್ಯಯಗಳಾಗುತ್ತವೆ. ಸರ್ವನಾಮ ಸ್ಥಾನವಾಗಬಾರದೆಂದುದರಿಂದ ಸ್ವಾದಿ ಪಂಚವಚನಗಳನ್ನು ಬಿಡಬೇಕು. ಇದೂ ನಪುಂಸಕದಲ್ಲಿ ಬಿಡಬೇಕಾಗಿಲ್ಲ. ನಪುಂಸಕವನ್ನು ಬಿಟ್ಟು ಉಳಿದ ಸ್ವಾದಿಪಂಚಕಕ್ಕೆ ಸರ್ವನಾಮಸಂಜ್ಞೆ ಹೇಳಿದುದು. ಹೀಗೆ ಈ ಎರಡು ಅಧ್ಯಾಯಗಳಲ್ಲಿ ವಿಹಿತವಾದ ಪ್ರತ್ಯಯ ಪರವಾದಾಗ ಪೂರ್ವಕ್ಕೆ ಪದಸಂಜ್ಞೆ. ಸುಬಂತ ತಿಙಂತಗಳಿಗೆ "ಸುಪ್ತಿಙಂತಂ ಪದಮ್ " ಸೂತ್ರದಿಂದ ಪದಸಂಜ್ಞೆ ಹೇಳಿರುತ್ತಾನೆ. ಅದು ಪ್ರತ್ಯಯಾಂತಕ್ಕೆ. ಇದು ಕೆಲವು ಪ್ರತ್ಯಯಪರವಾದಾಗ ಪ್ರಾತಿಪದಿಕಕ್ಕೆಂದು ಭೇದ ತಿಳಿದುಕೊಳ್ಳಬೇಕು.

(ಭಸಂಜ್ಞಾವಿಧಾಯಕ ಸೂತ್ರ)

೧೬೫. ಯಚಿ ಭಮ್ ॥ ೧-೪-೧೮ ॥

ಯಾದಿಷು ಅಜಾದಿಷು ಚ ಕಪ್ಪ್ರತ್ಯಯಾವಧಿಷು ಸ್ವಾದಿಷ್ವಸರ್ವನಾಮಸ್ಥಾನೇಷು ಪೂರ್ವಂ ಭಸಂಜ್ಞಂ ಸ್ಯಾತ್ ॥

ದ್ವಿಪದ ಸೂತ್ರ ॥ ಯ್ ಚ, ಅಚ್ ಚ ತಯೋಃ ಸಮಾಹಾರಃ ಯಚ್, ತಸ್ಮಿನ್ ಯಚಿ. ಹಿಂದಿನ ಸೂತ್ರವೇ ಅನುವೃತ್ತವಾಗುತ್ತದೆ. ಯಚಿ ಸತ್ಯ ಮ್ಯಂತವು "ಸ್ವಾದಿಸು" ಎಂಬುದಕ್ಕೆ ವಿಶೇಷಣ. ಸಪ್ತಮ್ಯಂತ ಅಲ್ಗ್ರಹಣವಾದುದ ರಿಂದ " ಯಸ್ಮಿನ್ ವಿಧಿಸ್ತದಾದಾವಲ್ಗ್ರಹಣೇ " ಪರಿಭಾಷೆಯಿಂದ ತದಾದಿ ಲಾಭ. ಯಕಾರಾದಿಯಾದ, ಅಜಾದಿಯಾದ ಸ್ವಾದಿಪ್ರತ್ಯಯಗಳು ಎಂದರ್ಥ. **ಸೂತ್ರಾರ್ಥ**—ಕಪ್ ಪ್ರತ್ಯಯ ಕೊನೆಯ ಅವಧಿಯಾಗಿರುವ ಸುಪ್ರತ್ಯಯವೇ ಮೊದ ಲಾದ ಯಕಾರಾದಿಅಜಾದಿಪ್ರತ್ಯಯ ಪರವಾದಾಗ (ಸರ್ವನಾಮಸ್ಥಾನ ಭಿನ್ನವೂ ಆಗಿರಬೇಕು) ಪೂರ್ವಕ್ಕೆ " ಭ " ಎಂಬ ಸಂಜ್ಞೆ ಬರುತ್ತದೆ. ಹಿಂದೆ ಹೇಳಿದ ನಾಲ್ಕನೇ ಐದನೇ ಅಧ್ಯಾಯಗಳ ಪ್ರತ್ಯಯಗಳಲ್ಲಿ ಯಾವುದು ಯಕಾರಾದಿಯಾಗಿರು ವುದೋ ಅಥವಾ ಅಜಾದಿಯಾಗಿರುವುದೋ ಅಲ್ಲಿ ಅದು ಪರವಾದಾಗ ಭಸಂಜ್ಞಾ ಅದಕ್ಕಿಂತ ಬೇರೆಯಾದ ಪ್ರತ್ಯಯ ಪರವಾದಾಗ ಪೂರ್ವಕ್ಕೆ ಪದಸಂಜ್ಞೆಯೆಂದು ವ್ಯತ್ಯಾಸತಿಳಿಯಬೇಕು.

(ಭಪದಸಂಜ್ಞಾನಿಯಾಮಕ ಸೂತ್ರ)

೧೬೬. ಅ ಕಡಾರಾದೇಕಾ ಸಂಜ್ಞಾ ॥ ೧-೪-೧ ॥

ಇತ ಊರ್ಧ್ವಂ " ಕಡಾರಾಃ ಕರ್ಮಧಾರಯೇ " ಇತ್ಯತಃ ಪ್ರಾಗೇ-ಕಸ್ಯೇಕೈವ ಸಂಜ್ಞಾ ಜ್ಞೇಯಾ । ಯಾ ಪರಾऽನವಕಾಶಾ ಚ ॥

ಅ, ಕಡಾರಾತ್, ಏಕಾ, ಸಂಜ್ಞಾ ॥ ನಾಲ್ಕುಪದವುಳ್ಳ ಸೂತ್ರ. ಆಜ್ ಎಂಬುದು ಇಲ್ಲಿ ಮರ್ಯಾದಾರ್ಥವನ್ನು ತಿಳಿಸುತ್ತದೆ. ಕಡಾರಾತ್=ಕಡಾರಪದ ಘಟಿತಸೂತ್ರದವರೆಗೆ. **ಸೂತ್ರಾರ್ಥ**— ಈ ಸೂತ್ರವನ್ನಾರಂಭಿಸಿ " ಕಡಾರಾಃ ಕರ್ಮಧಾರಯೇ " ಸೂತ್ರದವರೆಗೆ (ಮರ್ಯಾದಾ=ಇದನ್ನು ಬಿಟ್ಟು ಅಭಿವಿಧಿ= ಇದನ್ನು ಸೇರಿಸಿ ಹೇಳುವ ಅವಧಿ) ಒಂದಕ್ಕೆ ಒಂದೇ ಸಂಜ್ಞೆ ಬರುತ್ತದೆ. ಇದು ನಿಯಮ ಸೂತ್ರ. ವಿಶ್ವಪಾ+ಶಸ್ (ಅಸ್) ಎಂದಿರುವಾಗ ಸರ್ವನಾಮಸ್ಥಾನ ಸಂಜ್ಞೆಗೆ ಅವಕಾಶವಿಲ್ಲ. ಶಸ್ ಸ್ವಾದಿ, ಕಪ್ ಪ್ರತ್ಯಯಾಂತದ ಮಧ್ಯೆ ಸೇರಿರುವುದ ರಿಂದ ಪದಸಂಜ್ಞೆಯೂ ಬರಬಹುದು. ಅಜಾದಿಯಾದುದರಿಂದ ಭ ಸಂಜ್ಞೆಯೂ ಬರಬಹುದು, ಇಲ್ಲಿ ಪರಸ್ಪರ ವಿರೋಧವಿಲ್ಲವಾದುದರಿಂದ ಎರಡೂಬರ ಬಹುದು. ತುಲ್ಯಬಲವಿರೋಧವಿರುವಾಗ " ವಿಪ್ರತಿಷೇಧೇ ಪರಂ ಕಾರ್ಯಮ್ " ಸೂತ್ರವು ನಿಯಮಮಾಡುತ್ತದೆ. ಇಲ್ಲಿ ಅಂಥ ವಿರೋಧವಿಲ್ಲದಿರುವುದರಿಂದ ಎರಡು ಸಂಜ್ಞೆಗಳೂ ಬರುವಾಗ ಈ ಸೂತ್ರವು ನಿಯಮಮಾಡುತ್ತದೆ. ಒಂದೇ ಸಂಜ್ಞೆಯಂದಿದೆ. ಯಾವಸಂಜ್ಞೆ ಇಲ್ಲಿ ಹೇಳಬೇಕು ? ಅಂದರೆ " ಯಾ ಪರಾ, ಅನವಕಾಶಾ ಚ " ಎಂದು ಉತ್ತರಹೇಳುತ್ತಾನೆ. ಯಾವುದು ಪರಸೂತ್ರವಾಗಿಯೂ

ಅನವಕಾಶವಾಗಿಯೂ ಇರುವುದೋ ಅದೇ ಬರುತ್ತದೆ. ನಿರವಕಾಶಸೂತ್ರವೆಂದರೆ ಉತ್ಸರ್ಗಸೂತ್ರ ಬಾರದಿರುವಲ್ಲಿ ಬಾರದಿರುವುದು (ಚರಿತಾರ್ಥತ್ವ ಹೊಂದದಿರುವುದು). ಉತ್ಸರ್ಗವೆಂದರೆ ಸಾಮಾನ್ಯಸೂತ್ರ. " ಉತ್ಸರ್ಗಶ್ಚಾಪವಾದೇನ ಬಾಧ್ಯತೇ ಬಾಧಕಸದ್ಭಾವೇ ತ್ಯಜ್ಯತೇ " ಇತಿ ಉತ್ಸರ್ಗ. ಪ್ರತಿಬಂಧಕ ಇಲ್ಲದಿರುವಾಗ ಬರುವುದು. ಪ್ರಕೃತ ಭಸಂಜ್ಞೆಯೇ ಪರವಾಗಿಯೂ ನಿರವಕಾಶವಾಗಿಯೂ ಇದೆ. ಪದಸಂಜ್ಞೆ ಅಜಾದಿಯಕಾರಾದಿಪ್ರತ್ಯಯ ಇಲ್ಲದಿರುವಾಗ ಬರುತ್ತದೆ. ಆದುದರಿಂದ ಸಾವಕಾಶ. ಇದು ಸಾಮಾನ್ಯಸೂತ್ರ. ಪದಸಂಜ್ಞೆ ಬಾರದಿದ್ದಲ್ಲಿ ಭಸಂಜ್ಞೆ ಬರುವುದಿಲ್ಲ. ಆದುದರಿಂದ ನಿರವಕಾಶ. ವಿಶ್ವಪಾ+ಅಸ್ ಎಂದಿರುವಾಗ ವಿಶ್ವಪಾ ಶಬ್ದಕ್ಕೆ ಭಸಂಜ್ಞಾ ಪ್ರಾಪ್ತವಾದರೆ ಮುಂದೆ ಕಾರ್ಯಹೇಳುತ್ತಾನೆ.

(ಆಕಾರಕ್ಕೆ ಲೋಪ ಹೇಳುವ ಸೂತ್ರ)

೧೬೭. ಆತೋ ಧಾತೋಃ ॥ ೬-೪-೧೪೦ ॥

ಆಕಾರಾಂತೋ ಯೋ ಧಾತುಸ್ತದಂತಸ್ಯ ಭಸ್ಯಾಙ್ಗಸ್ಯ ಲೋಪಃ । ಅಲೋಂತ್ಯಸ್ಯ । ವಿಶ್ವಪಃ । ವಿಶ್ವಪಾ । ವಿಶ್ವಪಾಭ್ಯಾಮ್, ಇತ್ಯಾದಿ। ಏವಂ ಶಂಖಧ್ಮಾದಯಃ । ಧಾತೋಃ ಕಿಮ್ ? ಹಾಹಾನ್ ।

ಆತಃ, ಧಾತೋಃ ॥ ದ್ವಿಪದಸೂತ್ರ. ಅಂಗಸ್ಯ, ಭಸ್ಯ ಎರಡು ಅಧಿಕಾರ ಇಲ್ಲಿವೆ. " ಆತಃ " ಧಾತುವಿಗೆ ವಿಶೇಷಣವಾದುದರಿಂದ ತದಂತಲಾಭ. ಧಾತೋಃ ಅ-ಗಕ್ಕೆ ವಿಶೇಷಣವಾದುದರಿಂದ ತದಂತಲಾಭ. " ಅಲ್ಲೋಽನ್ತ್ಯಸ್ಯ " ಸೂತ್ರ ದಿಂದ " ಲೋಪಃ " ಅನುವೃತ್ತವಾಗುತ್ತದೆ. **ಸೂತ್ರಾರ್ಥ**—ಆಕಾರವೇ ಅಂತ ವಾದ ಧಾತುವೇ ಅಂತ್ಯದಲ್ಲಿರುವ ಭಸಂಜ್ಞಾ ನಿಶಿಷ್ಟವಾದ ಅಂಗಕ್ಕೆ ಲೋಪ ಬರುತ್ತದೆ. ಅಂಗಕ್ಕೆ ಲೋಪವೆಂದರೆ " ಅಲೋಂತ್ಯಸ್ಯ " ಪರಿಭಾಷೆಯಿಂದ ಅಂಗದ ಅಂತ್ಯಕ್ಕೆ (ಆ) ಲೋಪವೆಂದು ತಿಳಿಯಬೇಕು. ಇದನ್ನು ತಿಳಿಸಲು " ಅಲೋಂತ್ಯಸ್ಯ " ಸೂತ್ರ ವನ್ನು ಬರೆದಿರುತ್ತಾನೆ. ವಿಶ್ವಪಾ+ಅಸ್ ಎಂಬಲ್ಲಿ ಪದಸಂಜ್ಞೆಯನ್ನು ನಿರವಕಾಶ ಮೂಲಕವಾಗಿ ಬಾಧಿಸಿ ಭಸಂಜ್ಞೆ ಬಂದಿದೆಯೆಂದು ಹಿಂದೆ ಹೇಳಿದೆ. ವಿಶ್ವಪಾ ಎಂಬುದು ಭಸಂಜ್ಞೆಯುಳ್ಳ ಅಂಗ. ಇದು ಆಕಾರಾಂತವಾದ ಧಾತು " ಪಾ " ಎಂಬುದೇ ಅಂತವಾಗಿ ಉಳ್ಳದ್ದಾಗಿದೆ. ಆದುದರಿಂದ ಇದರ ಅಂತ್ಯ ಅಂದರೆ ಆಕಾರ. ಇದಕ್ಕೆ ಲೋಪ ಬಂದರೆ ವಿಶ್ವಪ್+ಅಸ್=ವಿಶ್ವಪಸ್. ಪದಾಂತ ಸಕಾರಕ್ಕೆ ರುತ್ವವಿಸರ್ಗ. ವಿಶ್ವಪಃ. ಬಹಳ ಲೋಕ ರಕ್ಷಕರನ್ನು ಎಂದರ್ಥ.

ಮುಂದೆ ಅಜಾದಿಪ್ರತ್ಯಯ ಪರವಾದಾಗ ಎಲ್ಲಾಕಡೆಗಳಲ್ಲಿಯೂ "ಆತೋ

ಧಾತೋಃ" ಸೂತ್ರದಿಂದ ಧಾತುವಿನ ಆಕಾರಕ್ಕೆ ಲೋಪಬರುತ್ತದೆ. ತೃತೀಯಾ ಏಕವಚನದಲ್ಲಿ ಟಾಪ್ರತ್ಯಯ. " ಚುಟೂ " ಸೂತ್ರದಿಂದ ಟಕಾರಕ್ಕೆ ಇತ್ಸಂಜ್ಞೆ ಬಂದು ಲೋಪ ಬಂದರೆ ಆಕಾರ ಉಳಿಯುತ್ತದೆ. ವಿಶ್ವಪಾ+ಆ ಎಂದಿರುವಾಗ ಹಿಂದಿನ ಸೂತ್ರದಿಂದ ಧಾತುವಿನ ಆಕಾರಕ್ಕೆ ಲೋಪ. ವಿಶ್ವಪ್+ಆ=ವಿಶ್ವಪಾ. ಹಲಾದಿ ವಿಭಕ್ತಿಗಳಲ್ಲಿ ಭ ಸಂಜ್ಞಾ ಇರದಿರುವುದರಿಂದ ಧಾತುವಿನ ಆಕಾರಕ್ಕೆ ಲೋಪವಿಲ್ಲ. ಕೇವಲ ಪ್ರತ್ಯಯವನ್ನು ಸೇರಿಸಿದರೆ ರೂಪವಾಗುತ್ತದೆ. ವಿಶ್ವಪಾಭ್ಯಾಮ್ ಇತ್ಯಾದಿ. ಹೀಗೆಯೇ ಶಂಖಧ್ಮಾಮುಂತಾದ ಶಬ್ದಗಳನ್ನೂ ತಿಳಿಯಬೇಕು. ಶಂಖಂ ಧಮತಿ ಇತಿ ಶಂಖಧ್ಮಾ. ಶಂಖವನ್ನು ಊದುವವನು.

ಪ್ರ–ಶಂಖಧ್ಮಾಃ॥ ಶಂಖಧ್ಮೌ–ಶಂಖಧ್ಮಾಃ ಸಂ.॥ ಪ್ರ. ಹೇ ಶಂಖಧ್ಮಾಃ ಹೇ ಶಂಖಧ್ಮೌ-ಹೇ ಶಂಖಧ್ಮಾಃ ॥ ದ್ವಿ.-ಶಂಖಧ್ಮಾಮ್ ಶಂಖಧ್ಮೌ ಶಂಖಧ್ಮಃ ತೃ–ಶಂಖಧ್ಮಾ ಶಂಖಧ್ಮಾಭ್ಯಾಮ್. ಶಂಖಧ್ಮಾಭಿಃ ॥ ಚ–ಶಂಖಧ್ಮೈ ಶಂಖಧ್ಮಾಭ್ಯಾಮ್. ಶಂಖಧ್ಮಾಭ್ಯಃ ॥ ಪಂ–ಶಂಖಧ್ಮಃ ಶಂಖಧ್ಮಾಭ್ಯಾಮ್. ಶಂಖಧ್ಮಾಭ್ಯಃ ॥ ಷ–ಶಂಖಧ್ಮಃ ಶಂಖಧ್ಮೋಃ ಶಂಖಧ್ಮಾಮ್. ॥ ಸ–ಶಂಖಧ್ಮಿ ಶಂಖಧ್ಮೋಃ ಶಂಖಧ್ಮಾಸು ॥.

ಸೂತ್ರದಲ್ಲಿರುವ ದಳದಪ್ರಯೋಜನವನ್ನು ತಿಳಿಸುತ್ತಾನೆ. ಧಾತೋಃ ಕಿಮ್ ? ಸೂತ್ರದಲ್ಲಿ ಆಕಾರಾಂತಧಾತುವೆಂದುವೇಕೆ? ಆಕಾರಾಂತಶಬ್ದವೇ ಅಂತವಾದ ಭ ಸಂಜ್ಞಾ ವಿಶಿಷ್ಟ ಅಂಗಕ್ಕೆ ಲೋಪವೆಂದರೂ ಪ್ರಕೃತ ಲೋಪ ಬಂದೇ ಬರುತ್ತದೆ. ಹೀಗಿರುವಾಗ ಧಾತುವಿಗೆ ಪ್ರಯೋಜನವೇನು ? ಅಂದರೆ, ಹಾಹಾನ್, ಇಲ್ಲಿ ಲೋಪಬಾರದಿರುವುದೇ ಫಲ. ಹಾಹಾ ಇದೂ ಆಕಾರಾಂತಶಬ್ದ. (ದೇವಸಭೆಯಲ್ಲಿ ಗಾಯಕನಾದ ಗಂಧರ್ವ) ಆಕಾರಾಂತಧಾತುವೇ ಅಂತವಾದ ಶಬ್ದವಲ್ಲ. ಹಾಹಾ+ಶಸ್ ಎಂದಿರುವಾಗ ಇಲ್ಲಿ ಆಕಾರಕ್ಕೆ ಲೋಪಬರುವುದಿಲ್ಲ. ಧಾತುವೆಂದು ಸೂತ್ರದಲ್ಲಿ ಹೇಳದಿದ್ದರೆ ಇಲ್ಲಿಯೂ ಲೋಪಬರಬೇಕಾಗುತ್ತದೆ, ಧಾತುವೆಂದುದರಿಂದ ಇಲ್ಲಿ ಲೋಪವಿಲ್ಲ. ಪೂರ್ವಸವರ್ಣ ದೀರ್ಘ. "ತಸ್ಮಾಚ್ಛಸೋ ನಃ ಪುಂಸಿ" ಸೂತ್ರದಿಂದ ಸಕಾರಕ್ಕೆ ನಕಾರಾದೇಶ. ಟಾ ಪರವಾದಾಗ ಸವರ್ಣದೀರ್ಘ. ಹಾಹಾ. ಜಿೇ ಪರವಾದಾಗ " ವೃದ್ಧಿರೇಚಿ " ಸೂತ್ರದಿಂದ ವೃದ್ಧಿ. ಹಾಹೈ. ಜಸಿ, ಜಸ್‌ಗಳಲ್ಲಿ ಸವರ್ಣದೀರ್ಘ, ಸಕಾರಕ್ಕೆ ರುತ್ವ ವಿಸರ್ಗ. ಹಾಹಾಃ, ಓಸ್‌ಗಳಲ್ಲಿ ವೃದ್ಧಿ ಸಕಾರಕ್ಕೆ ರುತ್ವವಿಸರ್ಗ. ಹಾಹೌ॥ ಆಮಿನಲ್ಲಿ ಸವರ್ಣದೀರ್ಘ. ಹಾಹಾಮ್. ಜಿಪರವಾದಾಗ "ಆದ್ಗುಣಃ" ಸೂತ್ರದಿಂದ ಗುಣ. ಹಾಹೇ. ಹಲಾದಿವಿಭಕ್ತಿಗಳಲ್ಲಿ ಕೇವಲ ವಿಭಕ್ತಿಗಳನ್ನು ಸೇರಿಸುವುದು. ಹಾಹಾಭ್ಯಾಮ್ ಇತ್ಯಾದಿ.

ಪ್ರ–ಹಾಹಾಃ ಹಾಹೌ ಹಾಹಾಃ ॥ ಸಂಪ್ರ. ಹೇ ಹಾಹಾಃ ಹೇಹಾಹೌ ಹೇ ಹಾಹಾಃ॥ ದ್ವಿ. ಹಾಹಾನ್. ಹಾಹೌ ಹಾಹಾನ್ ॥ ತೃ. ಹಾಹಾ ಹಾಹಾಭ್ಯಾಮ್

ಹಾಹಾಭಃ॥ ಚ. ಹಾಹೈ ಹಾಹಾಭ್ಯಾಮ್. ಹಾಹಾಭ್ಯಃ ॥ ಪಂ– ಹಾಹಾಃ ಹಾಹಾಭ್ಯಾಮ್. ಹಾಹಾಭ್ಯಃ । ಷ. ಹಾಹಾಃ ಹಾಹೌಃ ಹಾಹಾನಾಮ್. ॥ ಸ. ಹಾಹೇ ಹಾಹಾಃ ಹಾಹಾಸು.

ಈ ರೀತಿ ಆಕಾರಾಂತ ಶಬ್ದಗಳ ವಿಶೇಷವನ್ನು ತಿಳಿಯಬೇಕು.

ಇಕಾರಾಂತ

ಹರಿ ಶಬ್ದ. ಏಕವಚನ.

ಹರಿಶಬ್ದದಮೇಲೆ ಪ್ರಥಮಾ ಏಕವಚನದಲ್ಲಿ ಸುಪ್ರತ್ಯಯ ಹರಿ+ಸ್ ಎಂದಿರುವಾಗ " ಸಸಜುಷೋರುಃ " " ಖರವಸಾನಯೋರ್ವಿಸರ್ಜನೀಯಃ " ಸೂತ್ರಗಳಿಂದ ಪದಾಂತ ಸಕಾರಕ್ಕೆ ರುತ್ವವಿಸರ್ಗ. ಹರಿಃ. ದ್ವಿವಚನದಲ್ಲಿ ಔಪ್ರತ್ಯಯ. ಹರಿ+ಔ ಎಂದಿರುವಾಗ " ಇಕೋ ಯಣಚಿ " ಸೂತ್ರದಿಂದ ಯಣ್‌ಪ್ರಾಪ್ತವಾದರೆ ಅದಕ್ಕೆ ಅಪವಾದವಾಗಿ " ಪ್ರಥಮಯೋಃ ಪೂರ್ವಸವರ್ಣಃ " ಸೂತ್ರದಿಂದ ಪೂರ್ವಸವರ್ಣ ದೀರ್ಘ. (ಇ+ಜಾ=ಈ) ಹರೀ. ಬಹುವಚನದಲ್ಲಿ ಜಸ್. ಹರಿ+ಜಸ್ ಎಂದಿರುವಾಗ " ಚುಟೂ " ಸೂತ್ರದಿಂದ ಜಕಾರಕ್ಕೆ ಇತ್ಸಂಜ್ಞೆ ಬಂದು ಲೋಪ. ಹರಿ+ಅಸ್. ಪೂರ್ವಸವರ್ಣದೀರ್ಘ ಬಂದರೆ ಅದಕ್ಕೆ ಬಾಧಕವಾಗಿ ಗುಣ ಹೇಳುತ್ತಾನೆ.

(ಅಂಗಕ್ಕೆ ಗುಣವಿಧಾಯಕ ಸೂತ್ರ)

೧೬೮. ಜಸಿ ಚ ॥ ೭-೩-೧೦೯ ॥

ಹ್ರಸ್ವಾಂತಸ್ಯಾಂಗಸ್ಯ ಗುಣಃ । ಹರಯಃ ॥

ದ್ವಿಪದಸೂತ್ರ॥ "ಅಂಗಸ್ಯ" ಅಧಿಕಾರ. "ಹ್ರಸ್ವಸ್ಯ ಗುಣಃ" ಸೂತ್ರವು ಅನುವೃತ್ತವಾಗುತ್ತದೆ. "ಹ್ರಸ್ವಸ್ಯ" ಪದವು "ಅಂಗಸ್ಯ" ಎಂಬುದಕ್ಕೆ ವಿಶೇಷಣವಾದುದರಿಂದ ತದಂತಲಾಭ. ಜಸಿ ಸಪ್ತಮೀ. " ತಸ್ಮಿನ್ನಿತಿ "–ಪರಿಭಾಷೆಯಿಂದ ಪೂರ್ವಕ್ಕೆ ಕಾರ್ಯವೆಂದು ತಿಳಿಯಬೇಕು. **ಸೂತ್ರಾರ್ಥ**—ಹ್ರಸ್ವವೇ ಕೊನೆಯಲ್ಲಿರುವ ಅಂಗಕ್ಕೆ ಜಸ್‌ಪರದಲ್ಲಿರುವಾಗ ಗುಣ ಬರುತ್ತದೆ. ಹರಿಎಂಬುದು ಹ್ರಸ್ವಾಂತವಾದ ಅಂಗ. ಅದಕ್ಕೆ ಜಸ್‌ಪರವಾಗಿದೆ. ಗುಣಬಂದರೆ ಸ್ಥಾನಸಾಮ್ಯದಿಂದ ಇಕಾರಕ್ಕೆ ಏಕಾರರೂಪ ಗುಣ. ಹರೇ+ಅಸ್ ಆಗುತ್ತದೆ. ಏಕಾರಕ್ಕೆ ಅಚ್‌ಪರವಾದುದರಿಂದ " ಏಚೋಯವಾಯಾವಃ " ಸೂತ್ರದಿಂದ ಏಕಾರಕ್ಕೆ ಅಯ್‌ಆದೇಶ. ಸಕಾರಕ್ಕೆ ರುತ್ವವಿಸರ್ಗ.

ಹರಯ್ + ಅಸ್ = ಹರಯಃ ಎಂದಾಗುತ್ತದೆ. ಸಂಬೋಧನಾ ಏಕವಚನದಲ್ಲಿ (ಸಂಬುದ್ಧಿಯಲ್ಲಿ) ಸು ಬಂದಾಗ ಹೇ ಹರಿ+ಸ್ ಎಂದಿರುವಾಗ ಕಾರ್ಯವಿಶೇಷ ಹೇಳುತ್ತಾನೆ.

(ಸಂಬುದ್ಧಿಯಲ್ಲಿ ಗುಣಹೇಳುವ ಸೂತ್ರ)

೧೬೯. ಹ್ರಸ್ವಸ್ಯ ಗುಣಃ ॥ ೭-೩-೧೦೮ ॥

ಹ್ರಸ್ವಸ್ಯ ಗುಣಃ ಸ್ಯಾತ್ ಸಂಬುದ್ಧೌ ॥ ಹೇ ಹರೇ। ಹರಿಮ್ । ಹರೀ। ಹರೀನ್ ॥

ದ್ವಿಪದಸೂತ್ರ. "ಅಂಗಸ್ಯ" ಅಧಿಕಾರ. "ಹ್ರಸ್ವಸ್ಯ" ಎಂಬುದು ಅದಕ್ಕೆ ವಿಶೇಷಣ. ತದಂತಲಾಭ. " ಸಂಬುದ್ಧೌ ಚ " ಸೂತ್ರವು ಅನುವೃತ್ತವಾಗುತ್ತದೆ. **ಸೂತ್ರಾರ್ಥ.**— ಸಂಬುದ್ಧಿ ಪರದಲ್ಲಿರುವಾಗ ಹ್ರಸ್ವಾಂತವಾದ ಅಂಗಕ್ಕೆ ಗುಣ ಬರುತ್ತದೆ. ಪ್ರಕೃತ ಸು ಸಂಬುದ್ಧಿ. ಇದು ಪರವಾದಾಗ ಹ್ರಸ್ವಾಂತವಾದ ಅಂಗ ಹರಿ ಎಂಬುದು ಅದಕ್ಕೆ ಗುಣ.(ಇಕಾರಕ್ಕೆ ಏಕಾಶ) ಹರೇ+ಸ್ ಎಂದಿರುವಾಗ ಏಕಾರದಪರದಲ್ಲಿ ಸಂಬುದ್ಧಿಯ ಸಕಾರವಿರುವುದರಿಂದ "ಏಜ್‌ಹ್ರಸ್ವಾತ್ ಸಂಬುದ್ಧೇಃ" ಸೂತ್ರದಿಂದ ಸಕಾರಕ್ಕೆ ಲೋಪ. ಹೇ ಹರೇ ಎಂದಾಗುತ್ತದೆ. ದ್ವಿವಚನ ಬಹುವಚನಗಳಲ್ಲಿ ಹಿಂದಿನಂತೇ ರೂಪ. ಹೇ ಹರೀ, ಹೇ ಹರಯಃ ॥ ಹರಿಶಬ್ದದಮೇಲೆ ದ್ವಿತೀಯಾ ಏಕವಚನದಲ್ಲಿ ಅಮ್‌ಪ್ರತ್ಯಯ. ಹರಿ+ಅಮ್ ಎಂದಿರುವಾಗ "ಅಮಿ ಪೂರ್ವಃ" ಸೂತ್ರದಿಂದ ಪೂರ್ವರೂಪ ಏಕಾದೇಶ. ಹರಿಮ್. ದ್ವಿವಚನದಲ್ಲಿ ಔಟ್‌ಪ್ರತ್ಯಯ. ಹರಿ+ಔ ಪೂರ್ವಸವರ್ಣದೀರ್ಘ. ಹರೀ. ಬಹುವಚನದಲ್ಲಿ ಶಸ್‌ಪ್ರತ್ಯಯ. ಶಕಾರಕ್ಕೆ ಇತ್‌ಸಂಜ್ಞಾ ಬಂದು ಲೋಪ ವಾದರೆ ಹರಿ+ಅಸ್ ಎಂದಿರುವಾಗ ಪೂರ್ವಸವರ್ಣದೀರ್ಘ ಹರೀಸ್. ಪೂರ್ವಸವರ್ಣದೀರ್ಘಪರದಲ್ಲಿ ಶಸಿನ ಸಕಾರ ಬಂದುದರಿಂದ " ತಸ್ಮಾಚ್ಛಸೋ ನಃ ಪುಂಸಿ " ಸೂತ್ರದಿಂದ ಸಕಾರಕ್ಕೆ ನಕಾರಾದೇಶ. ಹರೀನ್ ಹರಿಶಬ್ದಕ್ಕೆ ತೃತೀಯಾ ಏಕವಚನದಲ್ಲಿ ಟಾ ಪ್ರತ್ಯಯ. " ಚುಟೂ " ಸೂತ್ರದಿಂದ ಟಕಾರಕ್ಕೆ ಇತ್ ಸಂಜ್ಞಾ ಬಂದು ಲೋಪ. ಹರಿ+ಆ ಎಂದಿರುವಾಗ ಕಾರ್ಯವಿಶೇಷಕ್ಕೋಸ್ಕರ ಸಂಜ್ಞೆಹೇಳುತ್ತಾನೆ.

(ಘಿ ಸಂಜ್ಞೆ ಹೇಳುವ ಸೂತ್ರ)

೧೭೦. ಶೇಷೋ ಘ್ಯಸಖಿ ॥ ೧-೪-೭ ॥

ಹ್ರಸ್ವೌ ಯಾನಿದುತೌ ತದಂತಂ ಸಖಿವರ್ಜಂ ಘಿಸಂಜ್ಞಮ್ ॥ ಶೇಷ ಇತಿ ಸ್ಪಷ್ಟಾರ್ಥಮ್ ॥

ಶೇಷಃ, ಘಿ, ಅಸಖಿ ॥ ತ್ರಿಪದ ಸೂತ್ರ. " ಯೂಸ್ತ್ರ್ಯಾಖ್ಯೌ ನದೀ " ಸೂತ್ರದಿಂದ " ಯೂ ", ಜಾತಿ ಹ್ರಸ್ವೇಷ್ವಚ್ಚ " ಸೂತ್ರದಿಂದ " ಹ್ರಸ್ವಃ " ಪದಗಳು ಅನುವೃತ್ತವಾಗುತ್ತವೆ. ಇಚ್ಚ ಉಚ್ಚಯೂ. ಇಕಾರಕ್ಕೆ ಯಣ್ ಬಂದಿವೆ. ಇಕಾರಉಕಾರಗಳು. " ಹ್ರಸ್ವಃ " ಎಂಬುದಕ್ಕೆ ಪ್ರತ್ಯೇಕವಾಗಿ ಯೂ ಎಂಬಲ್ಲಿ ಅನ್ವಯ. ಉಕ್ತಾದನ್ಯಃ ಶೇಷಃ. ಹಿಂದೆ ಹೇಳಿದುದನ್ನು ಬಿಟ್ಟು ಉಳಿದಿರುವುದು ಶೇಷ. ಇದಕ್ಕೂ ಯೂ ಎಂಬಲ್ಲಿ ಅನ್ವಯ. " ಶಬ್ದಸ್ವರೂಪಂ " ಎಂದು ಅಧ್ಯಾಹಾರಮಾಡಿಕೊಳ್ಳಬೇಕು. ಅದಕ್ಕೆ ಯೂ ವಿಶೇಷಣವಾದುದರಿಂದ ತದಂತಲಾಭ. ನ ಸಖಿ ಅಸಖಿ. ಸಖಿಶಬ್ದವನ್ನು ಬಿಟ್ಟು ಎಂದರ್ಥ. **ಸೂತ್ರಾರ್ಥ.**—ನದೀಸಂಜ್ಞೆಯಿಲ್ಲದ (ಶೇಷ) ಹ್ರಸ್ವವಾದ ಇಕಾರ ಉಕಾರಗಳೇ ಅಂತವಾಗಿರುವ ಸಖಿಶಬ್ದವಲ್ಲದ ಶಬ್ದಸ್ವರೂಪವು ಘಿ ಸಂಜ್ಞೆಯನ್ನು ಹೊಂದುತ್ತದೆ. ಈ ಸೂತ್ರದ ಹಿಂದಿನ ಸ್ತ್ರೀತ್ವವನ್ನು ಹೇಳುವ ಇಕಾರ ಉಕಾರಗಳಿಗೆ ನದೀ ಸಂಜ್ಞೆಯನ್ನು ಹೇಳಿರುತ್ತಾನೆ. ಆದುದರಿಂದ ಶೇಷವೆಂದರೆ ನದೀಸಂಜ್ಞೆ ಇಲ್ಲದವುಗಳು ಎಂದರ್ಥವಾಗುತ್ತದೆ. ಸಖಿಶಬ್ದವು ಇಕಾರಾಂತವಾದರೂ ಅದನ್ನು ವ್ಯಾವೃತ್ತಿಪಡಿಸಲು ಅಸಖಿಯಂದು ನಿಷೇಧಮಾಡಿರುತ್ತಾನೆ. ಪ್ರಕೃತ ಹರಿಶಬ್ದವು ಇಕಾರಾಂತವಾಗಿ ಹ್ರಸ್ವವಾಗಿದೆ. ನದೀಸಂಜ್ಞೆಯೂ ಇಲ್ಲ. ಆದುದರಿಂದ ಅದಕ್ಕೆ ಘಿ ಸಂಜ್ಞೆ ಬರುತ್ತದೆ. "ಶೇಷ ಇತಿ ಸ್ಪಷ್ಟಾರ್ಥಮ್" ಸೂತ್ರದಲ್ಲಿ ಶೇಷವೆಂಬ ಪದವು ಸಿದ್ಧವಾದ ಅರ್ಥವನ್ನೇ ಹೇಳುವುದರಿಂದ ಸ್ಪಷ್ಟವಾಗಿ ತಿಳಿಯಲು ಹೇಳಿದೆ. ಶೇಷಪದದಿಂದ ನದೀಸಂಜ್ಞೆಯಿಲ್ಲದವುಗಳು ಎಂದರ್ಥವಾಗಿದೆ. ಮತಿಶಬ್ದವು ಇಕಾರಾಂತಸ್ತ್ರೀಲಿಂಗ. ಇದಕ್ಕೆ " ಜಾತಿ ಹ್ರಸ್ವೇಷ್ವಚ್ಚ " ಸೂತ್ರದಿಂದ ನದೀಸಂಜ್ಞೆ ಬರುತ್ತದೆ. ಶೇಷಪದವಿಲ್ಲವಾದರೆ ಇಲ್ಲಿಯೂ ಘಿ ಸಂಜ್ಞಾ ಬರಬೇಕಾಗುತ್ತದೆ ಎನ್ನಬೇಕು. ಆದರೆ ಇದಕ್ಕೋಸ್ಕರ ಶೇಷಪದಬೇಕಾಗಿಲ್ಲ. ನದೀ ಸಂಜ್ಞೆ ಘಿಸಂಜ್ಞೆ ಎರಡೂ ಪ್ರಾಪ್ತವಾದರೆ " ಆಕಡಾರಾದೇಕಾ ಸಂಜ್ಞಾ " ಸೂತ್ರವು ನಿಯಮ ಮಾಡುವುದರಿಂದ ಒಂದೇ ಸಂಜ್ಞೆಯು ಬರಬೇಕು. ಆಗ ಅನವಕಾಶ ನಿಮಿತ್ತವಾಗಿ ನದೀಸಂಜ್ಞೆಯೇ ಬರುತ್ತದೆ. ಹೀಗಿರುವಾಗ ಶೇಷಪದವೇಕೆ ? ಅದಕ್ಕೋಸ್ಕರ ಸ್ಪಷ್ಟಾರ್ಥವೆಂದು ಹೇಳಿದೆ. ಪ್ರಕೃತ ಹರಿಶಬ್ದಕ್ಕೆ ಘಿಸಂಜ್ಞಾ ಬಂದರೆ ಕಾರ್ಯ ವಿಶೇಷವನ್ನು ಹೇಳುತ್ತಾನೆ.

(ಟಾ ಪ್ರತ್ಯಯಕ್ಕೆ ನಾ ಆದೇಶ ಹೇಳುವಸೂತ್ರ)

೧೭೧. ಆಜಿೋ ನಾಽಸ್ತ್ರಿಯಾಮ್ ॥ ೭-೩-೧೨೦ ॥

ಘೇಃ ಪರಸ್ಯಾಜಿೋ ನಾ ಸ್ಯಾದಸ್ತ್ರಿಯಾಮ್ ॥ ಆಜಾತಿ ಟಾ ಸಂಜ್ಞಾ। ಹರಿಣಾ, ಹರಿಭ್ಯಾಮ್, ಹರಿಭಿಃ ॥

ಆಜಿಃ, ನಾ, ಅಸ್ತ್ರಿಯಾಮ್ । ತ್ರಿಪದಸೂತ್ರ, "ಅಜ್ಞಿ ಘೇಃ" ಸೂತ್ರದಿಂದ "ಘೇಃ" ಪದಕ್ಕೆ ಅನುವೃತ್ತಿ. ಅಂಗಸ್ಯ ಅಧಿಕಾರ. **ಸೂತ್ರಾರ್ಥ**—ಘಿ ಸಂಜ್ಞೆ

ಯುಳ್ಳ ಅಂಗದ ಪರದಲ್ಲಿರುವ ಆಜ್‌ಪ್ರತ್ಯಯಕ್ಕೆ (ಟಾ) ನಾ ಆದೇಶ ಬರುತ್ತದೆ. ಸ್ತ್ರೀಲಿಂಗದಲ್ಲಿ ಈ ಆದೇಶವಿಲ್ಲ. ಅಂಗಸ್ಯ ಎಂಬುದನ್ನು ಪಂಚಮ್ಯಂತವಾಗಿ ವಿಪರಿಣಾಮ ಮಾಡಿಕೊಂಡುದುದರಿಂದ ಪರಲಾಭ. ಆಜ್ ಎಂದರೆ ಏನು ಎಂದು ಶಂಕೆಬಂದರೆ ಅದಕ್ಕೆ ಸಮಾಧಾನ ಹೇಳುತ್ತಾನೆ. "ಆಜಾತಿ"-ಟಾ ವಿಭಕ್ತಿಗೆ ಆಜ್ ಎಂದು ಪ್ರಾಚೀನಾಚಾರ್ಯರ ಸಂಜ್ಞೆ. ಘಿ ಸಂಜ್ಞೆಯುಳ್ಳ ಹರಿಶಬ್ದದ ಪರದಲ್ಲಿರುವ ಟಾ ಪ್ರತ್ಯಯಕ್ಕೆ ನಾದೇಶಬಂದರೆ ಹರಿನಾ ಎಂದಾಗುತ್ತದೆ. ರೇಫದ ಪರದಲ್ಲಿ ನಕಾರವಿದ್ದ ಮಧ್ಯೆ ಅಟ್ (ಇ) ವ್ಯವಧಾನವಿರುವುದರಿಂದ "ಅಟ್‌ಕುಪ್ವಾಙ್‌ನುಮ್ ವ್ಯವಾಯೇಪಿ ಸ್ಥಿತಸ್ಯ" ಸೂತ್ರದಿಂದ ನಕಾರಕ್ಕೆ ಣತ್ವ. ಹರಿಣಾ. ಹರಿಶಬ್ದಕ್ಕೆ ತೃತೀಯಾ ದ್ವಿವಚನದಲ್ಲಿ ಭ್ಯಾಮ್ ಪ್ರತ್ಯಯ. ಹಲಾದಿಯಲ್ಲಿ ಏನೂ ಕಾರ್ಯವಿಶೇಷವಿಲ್ಲದಿರುವುದರಿಂದ ಹಾಗೇ ಇರುತ್ತದೆ. ಹರಿಭ್ಯಾಮ್. ಹರಿ + ಭಿಸ್ ರುತ್ವವಿಸರ್ಗ, ಹರಿಭಿಃ ॥

ಚತುರ್ಥೀ ಏಕವಚನದಲ್ಲಿ ಙೀ ಪ್ರತ್ಯಯ. "ಲಶಕ್ವತದ್ಧಿತೇ" ಸೂತ್ರದಿಂದ ಜಕಾರಕ್ಕೆ ಇತ್‌ಸಂಜ್ಞಾ ಬಂದು ಲೋಪ. ಹರಿ+ಏ ಎಂದಿರುವಾಗ ಅಂಗಕ್ಕೆ ಗುಣ ಹೇಳುತ್ತಾನೆ.

(ಘಿಸಂಜ್ಞೆಗೆ ಗುಣ ಹೇಳುವಸೂತ್ರ)

೧೭೨ ಘೇ ರ್ಙಿತಿ ॥ ೭-೩-೧೧೧ ॥

ಘಿಸಂಜ್ಞಸ್ಯ ಙಿತಿ ಸುಪಿ ಗುಣಃ । ಹರಯೇ । ಹರಿಭ್ಯಾಮ್ । ಹರಿಭ್ಯಃ ॥

ಘೇಃ ಙಿತಿ ॥ ದ್ವಿಪದಸೂತ್ರ. ಅಂಗಸ್ಯ ಅಧಿಕಾರ. "ಸುಪಿಚ" ಸೂತ್ರದಿಂದ "ಸುಪಿ" "ಹ್ರಸ್ವಸ್ಯ ಗುಣಃ" ಸೂತ್ರದಿಂದ "ಗುಣಃ" ಅನುವೃತ್ತವಾಗುತ್ತವೆ. ಙಿತಿ ಎಂಬುದಕ್ಕೆ ಸುಪಿ ಎಂಬಲ್ಲಿ, ಘೇಃ ಪದಕ್ಕೆ ಅಂಗಸ್ಯ ಎಂಬಲ್ಲಿ ಅನ್ವಯ. ಙ್ ಇತ್‌ಯಸ್ಯ ಙಿತ್ ತಸ್ಮಿನ್ ಙಿತಿ. ಜಕಾರ ಇತ್ತಾದ ಸುಪ್ ಎಂದರ್ಥ. **ಸೂತ್ರಾರ್ಥ-** ಜಕಾರ ಇತ್ತಾದ ಸುಪ್ ಪರವಾದಾಗ ಘಿ ಸಂಜ್ಞೆಯುಳ್ಳ ಅಂಗಕ್ಕೆ ಗುಣ. ಹರಿ+ಏ ಎಂದಿರುವಾಗ ಏ ಎಂಬುದು ಙಿತ್ತಾದ ಸುಪ್. ಇದು ಪರವಾದುದರಿಂದ ಇಕಾರಕ್ಕೆ ಗುಣ ಬಂದರೆ ಏಕಾರ. ಹರೇ+ಏ. ಏಚಿಗೆ ಅಜ್‌ಪರವಾದುದರಿಂದ "ಏಚೋಯವಾಯಾವಃ" ಸೂತ್ರದಿಂದ ಗುಣದ ಏಕಾರಕ್ಕೆ ಆಯಾದೇಶ. ಹರಯ್+ಏ= ಹರಯೇ. ಹಲಾದಿಯಲ್ಲಿ ಕೇವಲ ಪ್ರತ್ಯಯಸೇರಿಸುವುದು ಸೂತ್ರವೆಂದುದರಿಂದ ದ್ವಿವಚನಬಹುವಚನಗಳಲ್ಲಿ ಹರಿಭ್ಯಾಮ್, ಹರಿಭ್ಯಃ ಎಂದಾಗುತ್ತದೆ.

ಪಂಚಮೀ ಏಕವಚನದಲ್ಲಿ ಜಸಿ ಪ್ರತ್ಯಯ. ಹರಿ+ಅಸ್ ಎಂದಿರುವಾಗ ಙಿತ್ತಾದ ಸುಪ್ (ಙ್)+ಅಸ್+(ಇ) ಪರವಾದುದರಿಂದ ಹಿಂದಿನ ಸೂತ್ರದಿಂದ

ಘಿ ಸಂಜ್ಞೆಯುಳ್ಳ ಅಂಗಕ್ಕೆಗುಣ. ಹರೇ + ಅಸ್ ಎಂದಿರುವಾಗ ಪೂರ್ವರೂಪವನ್ನು ಹೇಳುತ್ತಾನೆ.

(ಜಸಿಜಸ್‌ಗಳಲ್ಲಿ ಪೂರ್ವರೂಪಹೇಳುವ ಸೂತ್ರ)

೧೭೩. ಜಸಿ ಜಸೋಶ್ಚ ॥ ೬-೧-೧೧೦ ॥

ಏಙಃ ಜಸಿಜಸೋರತಿ ಪೂರ್ವರೂಪಮೇಕಾದೇಶಃ ॥ ಹರೇಃ ೨ । ಹರೀಣಾಮ್ ॥

ಜಸಿಜಸೋಃ, ಚ ॥ ದ್ವಿಪದಸೂತ್ರ. "ಏಙಃ ಪದಾಂತಾದತಿ" ಸೂತ್ರದಿಂದ "ಏಙಃ" "ಅತಿ" "ಅಮಿಪೂರ್ವಃ" ಸೂತ್ರದಿಂದ "ಪೂರ್ವಃ" ಅನುವೃತ್ತವಾಗುತ್ತವೆ. "ಏಕಃ ಪೂರ್ವಪರಯೋಃ" ಅಧಿಕಾರ. ಅತಿ ಸಪ್ತಮೀ. **ಸೂತ್ರಾರ್ಥ-** ಏಙಿಗೆ (ಏ-ಓ) ಜಸಿ, ಜಸ್ ಪ್ರತ್ಯಯಗಳ ಅಕಾರಪರವಾದಾಗ ಪೂರ್ವಪರಗಳಿಗೆ (ಏ+ಅ) ಪೂರ್ವರೂಪವು ಏಕಾದೇಶವಾಗಿ ಬರುತ್ತದೆ. ಹರೇ+ಅಸ್. ಏಕಾರ ಅಕಾರಗಳಿಗೆ ಏಕಾರವೇ ಏಕಾದೇಶವಾಗಿ ಬಂದರೆ ಹರೇಸ್ ಆಗುತ್ತದೆ. ಪದಾಂತಸಕಾರಕ್ಕೆ ರುತ್ವ ವಿಸರ್ಗ. ಹರೇಃ. ಷಷ್ಠೀಏಕವಚನದಲ್ಲಿಯೂ ಹೀಗೆ ಗುಣ, ಪೂರ್ವರೂಪ, ರುತ್ವವಿಸರ್ಗ ಬರುವುದರಿಂದ ಹರೇಃ ಎಂದೇ ಆಗುತ್ತದೆಂದು ಸೂಚಿಸಲು ಎರಡು ಸಂಖ್ಯೆಯನ್ನು ಬರೆದಿರುತ್ತಾನೆ. ಪಂಚಮೀ ದ್ವಿವಚನ ಬಹುವಚನಗಳಲ್ಲಿ ಹರಿಭ್ಯಾಮ್, ಹರಿಭ್ಯಃ ಎಂದಾಗುತ್ತದೆ. ಷಷ್ಠೀ ದ್ವಿವಚನ, ಸಪ್ತಮೀ ದ್ವಿವಚನಗಳಲ್ಲಿ ಓಸ್‌ಪ್ರತ್ಯಯ. ಹರಿ=ಓಸ್ ಎಂದಿರುವಾಗ ಇಕಾರಕ್ಕೆ ಅಜ್ ಪರವಾದುದರಿಂದ "ಇಕೋಯಣಚಿ" ಸೂತ್ರದಿಂದ ಯಣ್. ಹರ್ಯೋಸ್. ಸಕಾರಕ್ಕೆ ರುತ್ವ ವಿಸರ್ಗ. ಹರ್ಯೋಃ ೨. ಎಂದಾಗುತ್ತದೆ. ಷಷ್ಠೀ ಬಹುವಚನದಲ್ಲಿ ಆಮ್. ಹರಿ+ಆಮ್. ಹ್ರಸ್ವಾಂತಅಂಗವಾದುದರಿಂದ "ಹ್ರಸ್ವನದ್ಯಾಪೋನುಟ್" ಸೂತ್ರದಿಂದ ಹ್ರಸ್ವದಪರವಾದ ಆಮಿಗೆ ನುಡಾಗಮ. ಟಿತ್ತಾದುದರಿಂದ ಆದ್ಯವಯವವಾಗಿ ಬಂದರೆ ಹರಿ+ನ್+ಆಮ್. "ನಾಮಿ" ಸೂತ್ರದಿಂದ ಅಂಗಕ್ಕೆ ದೀರ್ಘ. "ಅಟ್‌ಕುಪ್ವಾಙ್‌ನುಮ್‌ವ್ಯವಾಯೇಪಿ" ಸೂತ್ರದಿಂದ ನಕಾರಕ್ಕೆ ಣತ್ವ. ಹರೀಣಾಮ್.

ಸಪ್ತಮೀ ಏಕವಚನದಲ್ಲಿ ಹರಿ+(ಙಿ) ಇ ಎಂದಿರುವಾಗ ಙಿವಿಭಕ್ತಿಗೆ ಔತ್ವ ಹೇಳುತ್ತಾನೆ.

(ಘಿಗೆ ಅಕಾರ ಙಿಗೆ ಔತ್ವ ಹೇಳುವ ಸೂತ್ರ)

೧೭೪. ಅಚ್ಚ ಘೇಃ ॥ ೭-೩-೧೧೯ ॥

ಇದುದ್ಭ್ಯಾಮುತ್ತರಸ್ಯ ಜೀರೌತ್, ಘೇರಚ್ಚ । ಹರೌ । ಹರಿಷು ॥
ಏವಂ ಕವ್ಯಾದಯಃ ॥

ಅತ್, ಚ, ಘೇಃ ॥ ತ್ರಿಪದಸೂತ್ರ. "ಜೀರಾಮ್‌ನದ್ಯಾಮ್ನೀಭ್ಯಃ" ಸೂತ್ರದಿಂದ "ಜೀಃ" ಅನುವೃತ್ತಿ. "ಇದುದ್ಭ್ಯಾಮ್, ಔತ್," ಎರಡು ಸೂತ್ರಗಳೇ ಅನುವೃತ್ತವಾಗುತ್ತವೆ. "ಇದುದ್ಭ್ಯಾಮ್" ಪಂಚಮೀ. **ಸೂತ್ರಾರ್ಥ**— ಇಕಾರ ಉಕಾರಗಳ (ಇಕಾರೋಕಾರಾಂತ ಅಂಗ) ಪರದಲ್ಲಿರುವ ಜಿ ವಿಭಕ್ತಿಗೆ ಔತ್ವವೂ ಘಿಗೆ (ಇಕಾರೋಕಾರಗಳಿಗೆ) ಅಕಾರವೂ ಆದೇಶವಾಗಿ ಬರುತ್ತವೆ. ಹರಿ+ ಇ ಎಂದಿರುವಾಗ ಇ ವಿಭಕ್ತಿಗೆ ಔಕಾರ, ಹಿಂದಿನ ಘಿ ಇಕಾರಕ್ಕೆ ಅಕಾರ ಬಂದರೆ ಹರ+ಔ ಎಂದಾದಾಗ ಅಕಾರಕ್ಕೆ ಏಚ್‌ಪರವಾದುದರಿಂದ "ವೃದ್ಧಿರೇಚಿ" ಸೂತ್ರದಿಂದ ವೃದ್ಧಿ. ಹರೌ ಎಂದಾಗುತ್ತದೆ. ದ್ವಿವಚನದಲ್ಲಿ ಹರ್ಯೋಃ ಎಂದು ಹಿಂದೆ ಹೇಳಿದೆ. ಬಹುವಚನದಲ್ಲಿ ಹರಿ+ಸು ಎಂದಿರುವಾಗ "ಆದೇಶಪ್ರತ್ಯಯಯೋಃ" ಸೂತ್ರದಿಂದ ಇಣ್ಣಿನ ಪರದಲ್ಲಿ ಪ್ರತ್ಯಯಸಕಾರವಿರುವುದರಿಂದ ಷತ್ವ ಹರಿಷು. ಹೀಗೆಯೇ ಕವಿಮುಂತಾದ ಇಕಾರಾಂತ ಶಬ್ದಗಳ ರೂಪವನ್ನು ತಿಳಿಯಬೇಕು.

ಇಕಾರಾಂತಪುಲ್ಲಿಂಗ ಸಖಿ ಶಬ್ದ. ಸ್ನೇಹಿತನು.

ಪ್ರಥಮಾ ಏಕವಚನದಲ್ಲಿ ಸಖಿ+ಸ್ ಎಂದಿರುವಾಗ ಅಂಗಕ್ಕೆ ಅನಜಾದೇಶ ಹೇಳುತ್ತಾನೆ.

(ಸಖಿಶಬ್ದಕ್ಕೆ ಅನಜ್ ವಿಧಾಯಕಸೂತ್ರ)

೧೭೫. ಅನಜ್ ಸೌ ॥ ೭-೧-೯೩ ॥

ಸಖ್ಯುರಂಗಸ್ಯಾನಜ್ ಆದೇಶೋಽಸಂಬುದ್ಧೌ ಸೌ ॥

ದ್ವಿಪದಸೂತ್ರ. "ಸಖ್ಯುರಸಂಬುದ್ಧೌ" ಸೂತ್ರವು ಅನುವೃತ್ತವಾಗುತ್ತದೆ. ಅಂಗಸ್ಯ ಅಧಿಕಾರ. ಸೌ ಪ್ರಥಮಾವಿಭಕ್ತಿ ಏಕವಚನದ ಸಪ್ತಮೀ. **ಸೂತ್ರಾರ್ಥ**— ಸಖಿರೂಪವಾದ ಅಂಗಕ್ಕೆ ಸಂಬುದ್ಧಿಯಲ್ಲದ ಸು ಪರವಾದಾಗ ಅನಜ್ ಆದೇಶ ಬರುತ್ತದೆ. ಅನಜಿನಲ್ಲಿ ಜಕಾರ "ಹಲಂತ್ಯಮ್" ಸೂತ್ರದಿಂದ ಇತ್ ಆಗಿ ಲೋಪಹೊಂದುತ್ತದೆ. ನಕಾರದ ಮೇಲಿನ ಅಕಾರ ಉಚ್ಚಾರಣಾರ್ಥವಾಗಿ ಹೇಳಿದೆ. ಅನ್ ಉಳಿಯುತ್ತದೆ. ಅನೇಕಾಲಾದುದರಿಂದ ಸರ್ವಾದೇಶಪ್ರಾಪ್ತವಾದರೂ ಜಿತ್ತಾದುದರಿಂದ "ಜಿಚ್ಚ" ಸೂತ್ರದಿಂದ ಅಂತಾದೇಶವಾಗಿ ಬರುತ್ತದೆ. ಸಖಿ+ಸ್ ಎಂಬಲ್ಲಿ ಅಂತ್ಯ ಇಕಾರ. ಸಂಬುದ್ಧಿಯಲ್ಲದ ಸು ಪರವಾದುದರಿಂದ ಇಕಾರಕ್ಕೆ

ಅನಜ್ ಬಂದರೆ ಸಖನ್+ಸ್ ಎಂದಾಗುತ್ತದೆ. ಇಲ್ಲಿ ಉಪಧೆಗೆ ಮುಂದೆ ದೀರ್ಘ ಹೇಳುತ್ತಾನೆ. ಆಗ ಉಪಧೆಯಂದರೇನು ಎಂದು ಜಿಜ್ಞಾಸೆ ಬರುವುದರಿಂದ ಮೊದಲು ಉಪಧಾಸಂಜ್ಞೆ ಹೇಳುತ್ತಾನೆ.

(ಉಪಧಾಸಂಜ್ಞೆ ಹೇಳುವ ಸೂತ್ರ)

೧೭೬. ಅಲೋಽನ್ತ್ಯಾತ್ಪೂರ್ವ ಉಪಧಾ ॥ ೧-೧-೬೫ ॥

ಅಂತ್ಯಾದಲಃ ಪೂರ್ವೋ ವರ್ಣ ಉಪಧಾಸಂಜ್ಞಃ ॥

ಅಲಃ, ಅಂತ್ಯಾತ್, ಪೂರ್ವಃ, ಉಪಧಾ ॥ ನಾಲ್ಕು ಪದವುಳ್ಳ ಸೂತ್ರ. ಅಲಃ ಪಂಚಮೀ ಇದು ಪ್ರತ್ಯಾಹಾರ. ಸಕಲವರ್ಣಗಳು. ಇದರ ಪೂರ್ವವೂ ಅಂದರೆ ಸಾಜಾತ್ಯದಿಂದ ಅದೂ ವರ್ಣವೆಂದು ಇಟ್ಟುಕೊಳ್ಳಬೇಕು. **ಸೂತ್ರಾರ್ಥ**—ಅಂತ್ಯ ಅಲಿನ (ವರ್ಣದ) ಪೂರ್ವದಲ್ಲಿರುವ ವರ್ಣಕ್ಕೆ ಉಪಧಾ ಎಂಬ ಸಂಜ್ಞೆ ಬರುತ್ತದೆ. ಪಂಚಮಿಯಾದುದರಿಂದ ಪೂರ್ವವೆಂದರೆ ಅವ್ಯವಹಿತ ಪೂರ್ವವೆಂದು ತಿಳಿಯಬೇಕು. ಪ್ರಕೃತ ಸಖನ್+ಸ್ ಎಂಬಲ್ಲಿ ಅಂಗದ ಅಂತ್ಯವೆಂದರೆ ನಕಾರ. ಅದರ ಪೂರ್ವ ವರ್ಣ ಖಕಾರದ ಮೇಲಿರುವ ಅಕಾರ (ಸಖ್+ಅ+ನ್) ಇದು ಉಪಧೆಯಾಗುತ್ತದೆ. ಉಪಧಾಸಂಜ್ಞೆಗೆ ಪ್ರಯೋಜನವನ್ನು ಹೇಳುತ್ತಾನೆ.

(ನಾಂತಕ್ಕೆ ದೀರ್ಘವಿಧಾಯಕ ಸೂತ್ರ)

೧೭೭. ಸರ್ವನಾಮಸ್ಥಾನೇ ಚಾಸಂಬುದ್ಧೌ ॥ ೬-೪-೮ ॥

ನಾಂತಸ್ಯೋಪಧಾಯಾ ದೀರ್ಘೋಽಸಂಬುದ್ಧೌ ಸರ್ವನಾಮಸ್ಥಾನೇ ॥

ಸರ್ವನಾಮಸ್ಥಾನೇ, ಚ, ಅಸಂಬುದ್ಧೌ ॥ ತ್ರಿಪದಸೂತ್ರ. "ನೋಪಧಾಯಾಃ" ಸೂತ್ರವು ಅನುವೃತ್ತವಾಗುತ್ತದೆ. ಅಲ್ಲಿ "ನ" ಎಂಬುದು ಲುಪ್ತಷಷ್ಠೀಕ. ಅಧಿಕೃತವಾದ "ಅಂಗಸ್ಯ" ಎಂಬುದಕ್ಕೆ ಅದು ವಿಶೇಷಣ. ನಾಂತವಾದ ಅಂಗದ ಎಂದರ್ಥವಾಗುತ್ತದೆ. "ಢ್ರಲೋಪೇ" ಸೂತ್ರದಿಂದ "ದೀರ್ಘ" ಕ್ಕೆ ಅನುವೃತ್ತಿ. ಸರ್ವನಾಮಸ್ಥಾನೇ ಎಂಬಲ್ಲಿ "ಅಸಂಬುದ್ಧೌ" ಪದಕ್ಕೆ ಅನ್ವಯ. **ಸೂತ್ರಾರ್ಥ**—ಸಂಬುದ್ಧಿಯಲ್ಲದ ಸರ್ವನಾಮಸ್ಥಾನ ಪರವಾದಾಗ ನಕಾರಾಂತವಾದ ಅಂಗದ ಉಪಧೆಗೆ ದೀರ್ಘ. ಸು ಮುಂತಾದ ಐದು ಪ್ರತ್ಯಯಗಳಿಗೆ ಸರ್ವನಾಮಸ್ಥಾನ ಸಂಜ್ಞೆ ಹೇಳಿದೆ. ಪ್ರಕೃತ ಸರ್ವನಾಮಸ್ಥಾನ ಪ್ರಥಮಾ ಸು. ಅದು ಪರವಾದ ನಕಾರಾಂತ ಅಂಗ ಸಖನ್. ಅದರ ಉಪಧೆ ಖಕಾರದ ಮೇಲಿರುವ ಅಕಾರ. ಅದಕ್ಕೆ ದೀರ್ಘ ಬಂದರೆ ಸಖಾನ್+ಸ್

ಎಂದಾಗುತ್ತದೆ. ಇಲ್ಲಿ ಸುವಿಗೆ ಲೋಪ ಹೇಳಲು ಪ್ರತ್ಯಯಕ್ಕೆ ಅಪೃಕ್ತ ಎಂಬ ಸಂಜ್ಞೆಯನ್ನು ಹೇಳುತ್ತಾನೆ.

(ಅಪೃಕ್ತಸಂಜ್ಞೆ ಹೇಳುವ ಸೂತ್ರ)

೧೭೮. ಅಪೃಕ್ತ ಏಕಾಲ್ ಪ್ರತ್ಯಯಃ ॥ ೧-೨-೪೧ ॥

ಏಕಾಲ್ ಪ್ರತ್ಯಯೋ ಯಃ ಸೋಽಪೃಕ್ತಸಂಜ್ಞಃ ಸ್ಯಾತ್ ॥

ತ್ರಿಪದಸೂತ್ರ. ಏಕಶ್ಚಾಸೌ ಅಲ್ ಚ ಏಕಾಲ್. ಕರ್ಮಧಾರಯಸಮಾಸ. **ಸೂತ್ರಾರ್ಥ**—ಒಂದೇ ಅಲ್ (ವರ್ಣ) ಇರುವ ಪ್ರತ್ಯಯವು "ಅಪೃಕ್ತ" ಸಂಜ್ಞೆಯನ್ನು ಹೊಂದುತ್ತದೆ. ಪ್ರಕೃತ ಸುವಿನಲ್ಲಿ ಸ್ ಮಾತ್ರ ಉಳಿದಿರುವುದರಿಂದ ಒಂದೇ ಅಲಾದುದರಿಂದ ಅದು ಅಪೃಕ್ತವಾಗುತ್ತದೆ. ಈಗ ಅಪೃಕ್ತಸಂಜ್ಞೆ ಹೊಂದಿದ ಸುವಿಗೆ ಲೋಪ ಹೇಳುತ್ತಾನೆ.

(ಸು, ತಿ, ಸಿಗೆ ಲೋಪ ಹೇಳುವ ಸೂತ್ರ)

೧೭೯. ಹಲ್‌ಜ್ಯಾಬ್ಭ್ಯೋ ದೀರ್ಘಾತ್ಸುತಿಸ್ಯಪೃಕ್ತಂ ಹಲ್॥ ॥ ೬-೧-೬೮ ॥

ಹಲಂತಾತ್ಪರಂ ದೀರ್ಘಾ ಯೌ ಜ್ಯಾಪೌ ತದಂತಾಚ್ಚ ಪರಂ ಸುತಿಸೀ-ತ್ಯೇತದಪೃಕ್ತಂ ಹಲ್ ಲುಪ್ಯತೇ ॥

ಹಲ್ ಚ, ಙೀಪ್ ಚ, ಆಪ್ ಚ, ಹಲ್‌ಜ್ಯಾಪಃ, ತೇಭ್ಯಃ ಹಲ್‌ಜ್ಯಾಭ್ಯಃ ಪಂಚಮೀ ಬಹುವಚನ. ಹಲ್ ಪ್ರತ್ಯಾಹಾರ. ಙೀಪ್, ಆಪ್ ಸ್ತ್ರೀಲಿಂಗ ಬೋಧಕಪ್ರತ್ಯಯ. ಸಮಾಸದಲ್ಲಿ ಏಕದೇಶವಾದರೂ ದೀರ್ಘಾತ್ ಪದವು ಙೀಪ್ ಆಪ್ ಈ ಎರಡರಲ್ಲಿ ಮಾತ್ರ ಅನ್ವಯಹೊಂದುತ್ತದೆ. ಹಲ್‌ನಲ್ಲಿ ಅಸಂಭವವಾದುದರಿಂದ ಅನ್ವಯವಿಲ್ಲ. ದೀರ್ಘಾತ್ ಏಕವಚನ ಕೂಡದಿದ್ದರೂ ಆರ್ಷಪ್ರಯೋಗವಾದುದರಿಂದ ಸಾಧು. ಮುಂದೆ ಸುತಿಸಿ ಪ್ರತ್ಯಯಹೇಳಿರುವುದರಿಂದ ಅದರಿಂದ ಪ್ರಕೃತಿಯು ಆಕ್ಷಿಪ್ತವಾಗುತ್ತದೆ. ಆಕ್ಷಿಪ್ತವಾದ ಪ್ರಕೃತಿಗೆ ಹಲ್‌ಜ್ಯಾಭ್ಯಃ ವಿಶೇಷಣ. ಹಲಂತಪರದಲ್ಲಿರುವ, ದೀರ್ಘವಾದ ಜ್ಯಂತದಪರದಲ್ಲಿರುವ, ದೀರ್ಘವಾದ ಆಪಿನಪರದಲ್ಲಿರುವ ಎಂದರ್ಥವಾಗುತ್ತದೆ. ಸು ಚ, ತಿಚ, ಸಿಚ ತೇಷಾಂ ಸಮಾಹಾರಃ ಸುತಿಸಿ. ಅಪೃಕ್ತಮ್, ಹಲ್ ಇವೆರಡೂ ಸುತಿಸಿಯಲ್ಲಿ ಅನ್ವಯಹೊಂದುತ್ತವೆ. ಸುತಿಸಿಯಲ್ಲಿ ಉಕಾರ ಇಕಾರ ಇತ್ತಾಗುವುದರಿಂದ, ಸ್, ತ್, ಸ್ ಉಳಿಯುವುದರಿಂದ ಅಪೃಕ್ತವಾದ ಹಲ್ ಆಗುತ್ತದೆ. "ಲೋಪೋವ್ಯೋರ್ವಲಿ" ಸೂತ್ರದಿಂದ ಲೋಪಃ ಅನುವೃತ್ತಿ. ಲುಪ್ಯತೇ ಇತಿ ಲೋಪಃ ಲೋಪಹೊಂದಲ್ಪಡುವುದು. ಲುಪ್ ಧಾತುವಿಗೆ ಕರ್ಮಣಿಯಲ್ಲಿ ಘಞ್‌ಪ್ರತ್ಯಯ ಬಂದಿದೆ. **ಸೂತ್ರಾರ್ಥ**—ಹಲಂತದಪರದಲ್ಲಿರುವ, ದೀರ್ಘವಾದ ಜ್ಯಂತದಪರದಲ್ಲಿರುವ, ದೀರ್ಘವಾದ ಆಬಂತದಪರದಲ್ಲಿರುವ ಸು, ತಿ, ಸಿ, ರೂಪವಾದ ಅಪೃಕ್ತವಾದ ಹಲ್ ಲೋಪ ಹೊಂದುತ್ತದೆ. ಇಲ್ಲಿ ಙೀ ಅಂದರೆ ಙೀಪ್, ಙೀಷ್ ಙೀನ್. ಆಪ್ ಎಂದರೆ ಟಾಪ್, ಚಾಪ್, ಡಾಪ್ ಹೀಗೆ ಮೂರುಮೂರುಪ್ರತ್ಯಯಗಳನ್ನು ತೆಗೆದುಕೊಳ್ಳಬೇಕು. ಇವು ಸ್ತ್ರೀಪ್ರತ್ಯಯ ಪ್ರಕರಣದಲ್ಲಿ ವಿವೃತವಾಗುತ್ತವೆ. ತಿ ಸಿ ಧಾತುಪ್ರತ್ಯಯಗಳನ್ನು ತಿಙಂತದಲ್ಲಿ ಹೇಳುತ್ತಾನೆ. ಪ್ರಕೃತ ಸಖಾನ್ + ಸ್ ಎಂಬಲ್ಲಿ ಸ್ ಎಂಬುದು ಅಪೃಕ್ತವಾದ (ಸು) ಹಲ್. ಇದು ಸಖಾನ್ ಎಂಬ ಹಲಂತದಪರದಲ್ಲಿರುವುದರಿಂದ ಲೋಪಹೊಂದುತ್ತದೆ. ಜ್ಯಂತ, ಆಬಂತ ದೀರ್ಘವಾಗಿದ್ದರೂ ಸಮಾಸದಲ್ಲಿ ಹ್ರಸ್ವಬರುವುದರಿಂದ ಅಲ್ಲಿ ಲೋಪವ್ಯಾವೃತ್ತಿ ಪಡಿಸಲು ದೀರ್ಘವಾಗಿರಬೇಕೆಂದು ಪುನಃ ಹೇಳಿರುವುದು ಹೀಗೆ ಪ್ರತಿಯೊಂದು ಪದಕ್ಕೂ ಪ್ರಯೋಜನವಿದೆ. ಸಖಾನ್ ಎಂದಿರುವಾಗ ನಕಾರಕ್ಕೆ ಲೋಪ ಹೇಳುತ್ತಾನೆ.

(ಪದಾಂತ ನಕಾರಕ್ಕೆ ಲೋಪ ಹೇಳುವ ಸೂತ್ರ)

೧೮೦. ನಲೋಪಃ ಪ್ರಾತಿಪದಿಕಾಂತಸ್ಯ ॥ ೮-೨-೭ ॥

ಪ್ರಾತಿಪದಿಕಸಂಜ್ಞಕಂ ಯತ್ಪದಂ ತದಂತಸ್ಯ ನಸ್ಯ ಲೋಪಃ ॥ ಸಖಾ

ನ, ಲೋಪಃ, ಪ್ರಾತಿಪದಿಕ, ಅಂತಸ್ಯ ॥ ನಾಲ್ಕು ಪದವುಳ್ಳ ಸೂತ್ರ. ನ, ಪ್ರಾತಿಪದಿಕ ಇವೆರಡೂ ಷಷ್ಠ್ಯಂತ ಪದಗಳು. ಷಷ್ಠಿಗೆ ಆರ್ಷಲೋಪ. ಅಂತಸ್ಯ ನಕಾರಕ್ಕೆ ವಿಶೇಷಣ. ಅಂತಶಬ್ದವು ಸಾಪೇಕ್ಷಿತವಾದುದರಿಂದ ಯಾವುದರ ಅಂತವೆಂದು ಆಕಾಂಕ್ಷಿತವಾಗುತ್ತದೆ. "ಪದಸ್ಯ" ಅಧಿಕಾರ. ಅಲ್ಲಿ ಅವಯವ ಷಷ್ಠಿಯಾದುದರಿಂದ ಪದದ ಅಂತ್ಯ ಅವಯವವಾದ ನಕಾರಕ್ಕೆ ಎಂದರ್ಥವಾಗುತ್ತದೆ. ಯಾವರೀತಿ ಪದವೆಂದರೆ ಪ್ರಾತಿಪದಿಕವೆಂಬ ಲುಪ್ತಷಷ್ಠೀಕವು ಅಲ್ಲಿ ಅನ್ವಿತವಾಗುತ್ತದೆ. **ಸೂತ್ರಾರ್ಥ**—ಪ್ರಾತಿಪದಿಕಸಂಜ್ಞೆಯಿರುವ ಪದದ ಅಂತಾವಯವಾದ ನಕಾರಕ್ಕೆ ಲೋಪ. ಸಖಾನ್ ಎಂಬುದು ಪ್ರಾತಿಪದಿಕ. ಇದು ಸುಬಂತವಾದುದರಿಂದ ಪದವೂ ಹೌದು. ಅಂತ್ಯದ ನಕಾರಕ್ಕೆ ಲೋಪ ಬಂದರೆ ಸಖಾ ಎಂದಾಗುತ್ತದೆ. ಮಿತ್ರನು.

ದ್ವಿವಚನದಲ್ಲಿ ಸಖಿ + ಔ ಎಂದಿರುವಾಗ ಕಾರ್ಯ ವಿಶೇಷಕ್ಕೋಸ್ಕರ ಪ್ರತ್ಯಯಕ್ಕೆ ಣಿತ್ತಿನ ಭಾವವನ್ನು ಹೇಳುತ್ತಾನೆ.

(ಸರ್ವನಾಮಸ್ಥಾನಕ್ಕೆ ಣಿತ್ತ್ವ ಹೇಳುವ ಸೂತ್ರ)

೧೪೧. ಸಖ್ಯುರಸಂಬುದ್ಧೌ ॥ ೭-೧-೯೨ ॥

ಸಖ್ಯುರಂಗಾತ್ ಪರಂ ಸಂಬುದ್ಧಿವರ್ಜಂ ಸರ್ವನಾಮಸ್ಥಾನಂ ಣಿದ್ವತ್ ಸ್ಯಾತ್ ॥

ಸಖ್ಯುಃ, ಅಸಂಬುದ್ಧೌ ॥ ದ್ವಿಪದಸೂತ್ರ. "ಅಂಗಸ್ಯ" ಅಧಿಕಾರ. ಸಖ್ಯುಃ ಪಂಚಮ್ಯಂತವಾದುದರಿಂದ ಅಂಗಾತ್ ಎಂದು ಪಂಚಮ್ಯಂತವಾಗಿ ವಿಪರಿಣಾಮ ಮಾಡಿಕೊಳ್ಳಬೇಕು. ನ ಸಂಬುದ್ಧೌ ಅಸಂಬುದ್ಧೌ. "ಇತೋತ್ಸರ್ವನಾಮಸ್ಥಾನೇ" ಸೂತ್ರದಿಂದ "ಸರ್ವನಾಮಸ್ಥಾನೇ, "ಗೋತೋ ಣಿತ್" ಸೂತ್ರದಿಂದ "ಣಿತ್" ಅಪವೃತ್ತವಾಗುತ್ತದೆ. ಣಿತ್ ಪ್ರಥಮಾಂತವಾದುದರಿಂದ ಸರ್ವನಾಮಸ್ಥಾನೇ ಅಸಂಬುದ್ಧೌ ಇವೆರಡೂ ಪ್ರಥಮಾಂತವಾಗಿ ವಿಪರಿಣತವಾಗುತ್ತವೆ. **ಸೂತ್ರಾರ್ಥ** – ಸಖಿರೂಪ ಅಂಗದ ಪರದಲ್ಲಿರುವ ಸಂಬುದ್ಧಿವರ್ಜವಾದ ಸರ್ವನಾಮಸ್ಥಾನವು (ಸುಟ್) ಣಿತ್ತಿನಂತೆ ಆಗುತ್ತದೆ. ಇದು ಅತಿದೇಶಸೂತ್ರ. ಸರ್ವನಾಮಸ್ಥಾನವಾದ ಏಪ್ರತ್ಯಯಗಳು ಎಂದೂ ಣಿತ್ತಲ್ಲ. ಅಲ್ಲಿ ಣಕಾರವೇ ಇಲ್ಲ. ಹೀಗಿರುವಾಗ ಣಿತ್ ಆಗುತ್ತದೆಯೆಂದರೆ ಣಿತ್ತಿನಂತೆ ಆಗುತ್ತದೆ. ಣಿತ್ತಾದ ಪ್ರತ್ಯಯವಿದ್ದರೆ ಯಾವ ಕಾರ್ಯವಾಗುತ್ತಿತ್ತೋ ಆ ಕಾರ್ಯವು ಸರ್ವನಾಮಸ್ಥಾನವಿದ್ದರೂ ಆಗುತ್ತದೆ ಎಂದರ್ಥ. ಇದೇ ಕಾರ್ಯಾತಿದೇಶ. ಣಿತ್ತಾದರೆ ಬರುವ ಕಾರ್ಯವೇನು? ಎಂಬುದನ್ನು ಮುಂದೆ ಹೇಳುತ್ತಾನೆ.

(ಅಜಂತಾಂಗಕ್ಕೆ ವೃದ್ಧಿ ಹೇಳುವ ಸೂತ್ರ)

೧೪೨. ಅಚೋ ಞ್ಣಿತಿ ॥ ೭-೨-೧೧೫ ॥

ಅಜಂತಾಂಗಸ್ಯ ವೃದ್ಧಿರ್ಞಿತಿ ಣಿತಿ ಚ ಪರೇ। ಸಖಾಯೌ। ಸಖಾಯಃ। ಹೇ ಸಖೇ। ಸಖಾಯಮ್। ಸಖಾಯೌ। ಸಖೀನ್। ಸಖ್ಯಾ। ಸಖ್ಯೇ ॥

ಅಚಃ ಞ್ಣಿತಿ ॥ ದ್ವಿಪದಸೂತ್ರ. ಅಧಿಕೃತವಾದ "ಅಂಗಸ್ಯ" ಎಂಬುದಕ್ಕೆ "ಅಚಃ" ವಿಶೇಷಣ ಅಜಂತವಾದ ಅಂಗಕ್ಕೆ ಎಂದರ್ಥವಾಗುತ್ತದೆ. ಞ್ ಚ, ಣ್ ಚ, ಞ್ಣೌ. ಞ್ಣೌ ಇತ್ತೌ ಯಸ್ಯ ತತ್ ಞ್ಣಿತ್. ತಸ್ಮಿನ್ ಞ್ಣಿತಿ. ದ್ವಂದ್ವದ ಕೊನೆಯಲ್ಲಿರುವ ಪದವು ದ್ವಂದ್ವಸಮಾಸದ ಪ್ರತ್ಯೇಕ ಪದದಲ್ಲಿಯೂ ಅನ್ವಯವಾಗುವುದರಿಂದ ಞ್ಣಿತ್, ಣಿತ್ ಎಂದಾಗುತ್ತದೆ. ಸಪ್ತಮಿಯಾದುದರಿಂದ ಞಕಾರ, ಣಕಾರ, ಇತ್ತಾದ ಪ್ರತ್ಯಯಗಳು ಪರವಾದಾಗ ಎಂದರ್ಥವಾಗುತ್ತದೆ. ಞ್ಣಿತ್ತಿಗೆ ಞ್, ಣಿತ್ ಆದ ಪ್ರತ್ಯಯ ಪರವಾದಾಗ ಸರ್ವನಾಮಸ್ಥಾನ ಣಿತ್ತಿನಂತೆ ಆಗುತ್ತದೆ ಎಂದುದರಿಂದ ಅಜಂತವಾದ ಅಂಗ ಸಖಿ ಎಂಬುದಕ್ಕೆ ವೃದ್ಧಿ. ಸ್ಥಾನಸಾಮ್ಯದಿಂದ ಇಕಾರಕ್ಕೆ ಐಕಾರ ವೃದ್ಧಿ. "ಏಜೋಯವಾಯಾವಃ" ಸೂತ್ರದಿಂದ ಐಕಾರಕ್ಕೆ ಆಯಾದೇಶ. ಸಖ್ಯೈ+ಔ. ಸಖಾಯೌ. ಸಖಿ+ಜಸ್ ಎಂದಿರುವಾಗ ಣಿದ್ವದ್ಭಾವವಿರುವುದರಿಂದ ಈ ಸೂತ್ರದಿಂದ ವೃದ್ಧಿ ಆಯಾದೇಶ. ಪದಾಂತ ಸಕಾರಕ್ಕೆ ರುತ್ವ ವಿಸರ್ಗ. ಸಖಾಯಃ.

ಸಂಬುದ್ಧಿಯಲ್ಲಿ ಹೇ ಸಖಿ+ಸ್ ಎಂದಿರುವಾಗ ಸಂಬುದ್ಧಿವರ್ಜ ಸರ್ವನಾಮಸ್ಥಾನಕ್ಕೆ ಣಿದ್ವದ್ಭಾವ ಹೇಳಿದುದರಿಂದ ಸುವಿಗೆ ಣಿದ್ವದ್ಭಾವವಿಲ್ಲ. "ಅನಜ್ ಸೌ" ಸೂತ್ರದಲ್ಲಿಯೂ ಸಂಬುದ್ಧಿಯಲ್ಲಿ **ನಿಷೇಧ**ಮಾಡಿರುವುದರಿಂದ ಅನಜಾದೇಶವೂ ಬರುವುದಿಲ್ಲ. "ಹ್ರಸ್ವಸ್ಯ ಗುಣಃ" ಸೂತ್ರದಿಂದ ಇಕಾರಕ್ಕೆ ಗುಣ. ಹೇ ಸಖೇ ಸ್. "ಏಙ್ಹ್ರಸ್ವಾತ್ಸಂಬುದ್ಧೇಃ" ಸೂತ್ರದಿಂದ ಸುವಿಗೆ ಲೋಪ. ಹೇ ಸಖೇ. ದ್ವಿವಚನ ಬಹುವಚನಗಳಲ್ಲಿ ಪ್ರಥಮಾದಂತೇರೂಪ. ಹೇ ಸಖಾಯೌ ಹೇ ಸಖಾಯಃ.

ದ್ವಿತೀಯಾ ಏಕವಚನದಲ್ಲಿ ಸಖಿ+ಅಮ್ ಎಂದಿರುವಾಗ ಅಮಿಗೆ ಸರ್ವನಾಮಸ್ಥಾನ ನಿಮಿತ್ತ ಣಿತ್ತ್ವವಿರುವುದರಿಂದ ವೃದ್ಧಿ. ಆಯಾದೇಶ. ಸಖಾಯಮ್. ದ್ವಿವಚನ, ಪ್ರಥಮಾದ್ವಿವಚನದಂತೇ ಆಗಿರುವುದರಿಂದ ಸಖಾಯೌ ಎಂದಾಗುತ್ತದೆ. ಶಸಿನಲ್ಲಿ ಸರ್ವನಾಮಸ್ಥಾನ ಸಂಜ್ಞೆಯಿಲ್ಲದಿರುವುದರಿಂದ ಣಿದ್ವದ್ಭಾವವೂ ಇಲ್ಲ. ಅದನ್ನು ನಿಮಿತ್ತೀಕರಿಸಿ ವೃದ್ಧಿಯೂ ಇಲ್ಲ. ಸಖಿ+ಅಸ್ ಎಂದಿರುವಾಗ "ಪ್ರಥಮಯೋಃ ಪೂರ್ವಸವರ್ಣಃ" ಸೂತ್ರದಿಂದ ಪೂರ್ವಸವರ್ಣದೀರ್ಘ. ಸಖೀಸ್ ಎಂದಾಗ "ತಸ್ಮಾಚ್ಛಸೋ ನಃ ಪುಂಸಿ" ಸೂತ್ರದಿಂದ ಸಕಾರಕ್ಕೆ ನಕಾರಾದೇಶ ಸಖೀನ್. ॥

ತೃತೀಯಾ ಏಕವಚನದಲ್ಲಿ ಸಖಿ+(ಟ್) ಆ ಎಂದಿರುವಾಗ ಸಖಿ ಶಬ್ದವರ್ಜ ಇಕಾರಾಂತಗಳಿಗೆ ಘಿ ಸಂಜ್ಞಾ ಹೇಳಿರುವುದರಿಂದ ಪ್ರತ್ಯಯಕ್ಕೆ ನಾ ಭಾವವಿಲ್ಲ. "ಇಕೋಯಣಚಿ" ಸೂತ್ರದಿಂದ ಯಣಾದೇಶ. ಸಖ್ಯಾ. ಹಲಾದಿ ಪ್ರತ್ಯಯಗಳಲ್ಲಿ ಕೇವಲ ಪ್ರತ್ಯಯ ಸೇರಿಸುವುದು. ಸಖಿಭ್ಯಾಮ್, ಸಖಿಭಿಃ ॥

ಚತುರ್ಥೀ ಏಕವಚನದಲ್ಲಿ ಸಖಿ+(ಙ್) ಏ ಎಂದಿರುವಾಗ ಹಿಂದಿನಂತೆ ಯಣಾದೇಶ. ಸಖ್ಯೇ. ದ್ವಿಬಹುವಚನಗಳಲ್ಲಿ ಸಖಿಭ್ಯಾಮ್, ಸಖಿಭ್ಯಃ ॥

ಪಂಚಮೀ ಏಕವಚನದಲ್ಲಿ ಸಖಿ+(ಙ್) ಅಸ್ (ಇ) ಎಂದಿರುವಾಗ ಹಿಂದಿನಂತೆ ಯಣಾದೇಶ, ಸಖ್ಯುಸ್. ಇಲ್ಲಿ ಪ್ರತ್ಯಯದ ಉಕಾರಕ್ಕೆ ಉತ್ವ ಹೇಳುತ್ತಾನೆ,

(ಜಸಿ ಜಸ್‌ಗಳ ಅಕಾರಕ್ಕೆ ಉತ್ವ ಹೇಳುವ ಸೂತ್ರ)

೧೪೩. **ಖ್ಯತ್ಯಾತ್ಪರಸ್ಯ ॥ ೬-೧-೧೧೨ ॥**

ಖಿ-ತಿ ಶಬ್ದಾಭ್ಯಾಂ ಖೀ-ತೀ ಶಬ್ದಾಭ್ಯಾಂ ಕೃತಯಣಾದೇಶಾಭ್ಯಾಂ ಪರಸ್ಯ ಜಸಿ ಜಸೋರತ ಉಃ । ಸಖ್ಯುಃ ॥

ಖ್ಯತ್ಯಾತ್, ಪರಸ್ಯ ॥ ದ್ವಿಪದಸೂತ್ರ. ಖಿ ಖೀ ಗಳಿಗೂ ತಿ ತೀ ಗಳಿಗೂ ಯಣಾದೇಶ ಮಾಡಿದೆ ಖ್ಯ ತ್ಯ ಎಂದಾಗುತ್ತದೆ. ಇಲ್ಲಿ ಯ್ ಯಣಾ ದರೂ ಆದರ ಮೇಲೆ ಅಕಾರವು ಉಚ್ಚಾರಣಾರ್ಥವಾಗಿ ಹೇಳಿದೆ, ಖ್ಯಶ್ಚ ತ್ಯಶ್ಚ ತಯೋಃ ಸಮಾಹಾರಃ ಖ್ಯತ್ಯಂ. ತಸ್ಮಾತ್ ಖ್ಯತ್ಯಾತ್. "ಏಜಃ ಪದಾಂತಾದತಿ" ಸೂತ್ರದಿಂದ "ಅತಿ" ಅನುವೃತ್ತವಾಗುತ್ತದೆ. ಪರಸ್ಯ ಎಂಬುದಕ್ಕೆ ಅದು ವಿಶೇಷಣವಾದುದರಿಂದ ಷಷ್ಠ್ಯಂತವಾಗಿ ವಿಪರಿಣತವಾಗುತ್ತದೆ. " ಜಸಿ ಜಸೋಶ್ಚ " ಸೂತ್ರದಿಂದ " ಜಸಿಜಸೋಃ " ಎಂಬುದಕ್ಕೆ ಅನುವೃತ್ತಿ. ಅಲ್ಲಿ ಅನ್ವಯವಾರ್ಥದಲ್ಲಿ ಷಷ್ಠೀ. ಜಸಿ ಜಸ್‌ಗಳ ಅವಯವವಾದ ಹ್ರಸ್ವಾಕಾರಕ್ಕೆ ಎಂದರ್ಥ. " ಋತ ಉತ್ " ಸೂತ್ರದಿಂದ " ಉತ್ " ಅನುವೃತ್ತವಾಗುತ್ತದೆ. **ಸೂತ್ರಾರ್ಥ**—ಖಿತಿ ಶಬ್ದಗಳಿಗೆ ಖೀತೀ ಶಬ್ದಗಳಿಗೆ ಮಾಡಲ್ಪಟ್ಟ ಯಣಾದೇಶದ ಪರದಲ್ಲಿರುವ ಜಸಿ ಜಸ್ ಪ್ರತ್ಯಯಗಳ ಅಕಾರಕ್ಕೆ ಉಕಾರಾದೇಶ. ಪಂಚಮೀ ಏಕವಚನ, ಷಷ್ಠೀ ಏಕವಚನ ಪರವಾದಾಗ ಖಿ ತಿ, ಖೀ, ತೀ ಗಳಿಗೆ ಯಣ್ ಬಂದಿರಬೇಕು. ಆಗ ಆ ಯಣಿನ ಪರವಾದ ಪ್ರತ್ಯಯದ ಅಕಾರಕ್ಕೆ ಉತ್ವ. ಸಖ್ಯುಷ್ ಎಂಬಲ್ಲಿ ಖಿ ಶಬ್ದಕ್ಕೆ ಯಣ್ ಬಂದಿದೆ. ಯಕಾರದ ಪರದಲ್ಲಿ ಜಸಿನ ಅಕಾರವಿರುವುದರಿಂದ ಅದಕ್ಕೆ ಉತ್ವ ಬಂದರೆ ಸಖ್ಯುಸ್ ಎಂದಾಗುತ್ತದೆ. ಸಕಾರಕ್ಕೆ ರುತ್ವ, ವಿಸರ್ಗ. ಸಖ್ಯುಃ. ದ್ವಿಬಹುವಚನಗಳಲ್ಲಿ ಸಖಿಭ್ಯಾಮ್, ಸಖಿಭ್ಯಃ ॥

ಷಷ್ಠೀಏಕವಚನದಲ್ಲಿ ಜಸ್ ಪ್ರತ್ಯಯ ಬರುವುದರಿಂದ ಪಂಚಮೀ ಏಕವಚನದಂತೇ ರೂಪ. ಸಖ್ಯುಃ. ದ್ವಿವಚನದಲ್ಲಿ ಓಸ್ ಪರವಾದಾಗ ಯಣಾದೇಶ. ಸಕಾರಕ್ಕೆ ರುತ್ವವಿಸರ್ಗ. ಸಖ್ಯೋಃ. ಬಹುವಚನದಲ್ಲಿ ಆಮ್, ಸಖಿ + ಆಮ್ ಎಂದಿರುವಾಗ " ಹ್ರಸ್ವನದ್ಯಾಪ್ಸೋನುಟ್ " ಸೂತ್ರದಿಂದ ಆಮಿಗೆ ನುಡಾಗಮ ಸಖಿ + ನಾಮ್ " ನಾಮಿ " ಸೂತ್ರದಿಂದ ದೀರ್ಘ, ಸಖೀನಾಮ್,

ಸಪ್ತಮೀ ಏಕವಚನದಲ್ಲಿ ಙಿ ಪ್ರತ್ಯಯ, ಸಖಿ + ಇ ಎಂದಿರುನಾಗ ಙಿಗೆ ಔತ್ವ ಹೇಳುತ್ತಾನೆ,

(ಸಪ್ತಮ್ಯೇಕವಚನಕ್ಕೆ ಔತ್ವ ಹೇಳುವಸೂತ್ರ)

೧೪೪. **ಙೌತ್ ॥ ೭-೩.೧೧೭ ॥**

ಇತಃ ಪರಸ್ಯ ಙೀರಾತ್ । ಸಖ್ಯೌ ॥ ಶೇಷಂ ಹರಿವತ್ ॥

ಏಕಪದ ಸೂತ್ರ, " ಙೀರಾಮ್‌ನದ್ಯಾಮ್‌ನೀಭ್ಯಃ " ಸೂತ್ರದಿಂದ " ಙೀಃ " ಅನುವೃತ್ತವಾಗುತ್ತದೆ. " ಇದುದ್ಭ್ಯಾಮ್ " ಸೂತ್ರದ ಏಕಶೇಷದಲ್ಲಿ ಸ್ಥಿತ ವಿಧಾನವಿರುವುದರಿಂದ ಇತಃ ಎಂದು ಮಾತ್ರ ಅನುವೃತ್ತವಾಗುತ್ತದೆ. ಅದು ಪಂಚಮಿಯಾದುದರಿಂದ ಪರಕ್ಕೆ ಎಂದು ತಿಳಿಯುತ್ತದೆ. **ಸೂತ್ರಾರ್ಥ**.—ಇಕಾರದ ಪರದಲ್ಲಿರುವ ಙಿಗೆ (ಸಪ್ತಮ್ಯೇಕವಚನ) ಔತ್ ಆದೇಶ ಬರುತ್ತದೆ. ಸಖಿ+ಇ ಎಂದಿರುವಾಗ ಇಕಾರದ ಮೇಲಿರುವ ಇಕಾರದ ಪರದಲ್ಲಿ ಙಿ ಇರುವುದರಿಂದ ಅದಕ್ಕೆ ಔತ್ವ ಬಂದರೆ (ಔತ್—ತಕಾರಕ್ಕೆ " ಹಲಂತ್ಯಮ್ " ಇತ್ ಸಂಜ್ಞಾ ಬಂದು ಲೋಪ) ಸಖಿ+ಔ ಎಂದಿರುವಾಗ " ಇಕೋಯಣಚಿ " ಸೂತ್ರದಿಂದ ಯಣಾದೇಶ. ಸಖ್ಯೌ. ದ್ವಿವಚನದಲ್ಲಿ ಸಖಿ + ಓಸ್ ಎಂದಿರುವಾಗ ಯಣಾದೇಶ. ಸಕಾರಕ್ಕೆ ರುತ್ವ ವಿಸರ್ಗ. ಸಖ್ಯೋಃ. ಬಹುವಚನದಲ್ಲಿ ಸು ಪರವಾದಾಗ ಇಣಿನ ಪರದಲ್ಲಿರುವುದರಿಂದ " ಆದೇಶಪ್ರತ್ಯಯಯೋಃ " ಸೂತ್ರದಿಂದ ಷತ್ವ. ಸಖಿಷು. ಸಖಿ ಶಬ್ದದಲ್ಲಿ ವಿಶೇಷಕಾರ್ಯ ಹೇಳದಿದ್ದಲ್ಲಿ ಹರಿ ಶಬ್ದದಂತೇ ರೂಪ.

ಇಕಾರಾಂತ ಪತಿ ಶಬ್ದ

ಪತಿಶಬ್ದಕ್ಕೆ ಪ್ರಥಮಾ ದ್ವಿತೀಯೆಯಲ್ಲಿ ಹರಿಶಬ್ದದಂತೇ ರೂಪ.

ಪ್ರಥಮಾ. ಪತಿಃ—ಪತೀ—ಪತಯಃ ॥ ಸಂ. ಪ್ರ—ಹೇ ಪತೀ—ಹೇಪತೀ—ಹೇ ಪತಯಃ । ದ್ವಿವಚನ. ಪತಿಂ-ಪತೀ—ಪತೀನ್ ॥

ತೃತೀಯಾ ಏಕವಚನದಲ್ಲಿ ಟಾ ಪ್ರತ್ಯಯ ಬಂದಾಗ " ಶೇಷೋಘ್ಯಸಖಿ " ಸೂತ್ರದಿಂದ ಘಿ ಸಂಜ್ಞಾ ಪ್ರಾಪ್ತವಾದರಿ ನಿಯಮ ಸೂತ್ರ ಹೇಳುತ್ತಾನೆ.

(ಘಿ ಸಂಜ್ಞಾ ನಿಯಾಮಕ ಸೂತ್ರ)

೧೪೫. **ಪತಿಃ ಸಮಾಸ ಏವ ॥ ೧-೪-೮ ॥**

ಪತಿ ಶಬ್ದಃ ಸಮಾಸ ಏವ ಘಿಸಂಜ್ಞಃ ಸ್ಯಾತ್ ॥ ಪತ್ಯಾ । ಪತ್ಯೇ । ಪತ್ಯುಃ ೨ । ಪತ್ಯೌ ॥ ಶೇಷಂ ಹರಿವತ್ ।

ಪತಿಃ, ಸಮಾಸೇ, ಏವ । ತ್ರಿಪದಸೂತ್ರ. " ಶೇಷೋಘ್ಯಸಖಿ " ಸೂತ್ರದಿಂದ "ಘಿ" ಪದವು ಅನುವೃತ್ತವಾಗುತ್ತದೆ. **ಸೂತ್ರಾರ್ಥ**—ಪತಿಶಬ್ದವು ಸಮಾಸದಲ್ಲಿ

ಮಾತ್ರ ಘಿಸಂಜ್ಞೆ ಹೊಂದುತ್ತದೆ. ಕೇವಲ ಪತಿ ಶಬ್ದಕ್ಕೆ ಘಿಸಂಜ್ಞೆ ಬರುವುದಿಲ್ಲ. ಪ್ರಕೃತ ಘಿಸಂಜ್ಞೆ ಇಲ್ಲದಿರುವುದರಿಂದ ಟಾ ವಿಭಕ್ತಿಗೆ " ಆಙೋನಾಽಸ್ತ್ರಿಯಾಮ್ " ಸೂತ್ರದಿಂದ ನಾಭಾವ ಬರುವುದಿಲ್ಲ. ಯಣಾದೇಶ. ಪತಿ+ಆ=ಪತ್ಯಾ. ಹಲಾದಿಯಲ್ಲಿ ಪ್ರತ್ಯಯಸೇರಿಸುವುದುಮಾತ್ರ. ಪತಿಭ್ಯಾಮ್--ಪತಿಭಿಃ ॥ ಚತುರ್ಥಿಯಲ್ಲಿಯೂ ಘಿಸಂಜ್ಞೆ ಇಲ್ಲದುದರಿಂದ " ಘೇರ್ಙಿತಿ " ಸೂತ್ರದಿಂದ ಗುಣವಿಲ್ಲ. ಯಣ್. ಪತ್ಯೇ—ಪತಿಭ್ಯಾಮ್—ಪತಿಭ್ಯಃ ॥

ಪಂಚಮಿಯಲ್ಲಿ ಪ+ಅಸ್ ಎಂದಿರುವಾಗ ಯಣ್. ಪತ್ಯಸ್. ಇಲ್ಲಿ ತಿ ಶಬ್ದಕ್ಕೆ ಯಣಾದೇಶಬಂದು ಅದರಪರದಲ್ಲಿ ಜಸಿನ ಅಕಾರಬಂದುದರಿಂದ " ಖ್ಯತ್ಯಾತ್ಪರಸ್ಯ " ಸೂತ್ರದಿಂದ ಅಕಾರಕ್ಕೆ ಉಕಾರಾದೇಶ. ಸಕಾರಕ್ಕೆ ರುತ್ವವಿಸರ್ಗ. ಪತ್ಯುಃ–ಪತಿಭ್ಯಾಮ್–ಪತಿಭ್ಯಃ ॥

ಷಷ್ಠೀ, ಸಪ್ತಮಿಯಲ್ಲಿ ಸಖಿಶಬ್ದದಂತೇರೂಪ. ಷ—ಪತ್ಯುಃ—ಪತ್ಯೋಃ ಪತೀನಾಮ್ । ಸ—ಪತ್ಯೌ—ಪತ್ಯೋಃ—ಪತಿಷು ॥

॥ ಸಮಾಸೇತು (ಭೂಪತಿನಾ) ಭೂಪತಯೇ ॥

ಸಮಾಸದಲ್ಲಿ ಘಿಸಂಜ್ಞಾ ಬರುತ್ತದೆಯಂದುದರಿಂದ, ಭೂಪತಿಯಂಬುದು ಸಮಾಸ, ಇದು ಘಿಸಂಜ್ಞೆ ಹೊಂದುವುದರಿಂದ ಹರಿಶಬ್ದದಂತೇ ರೂಪ ಹೊಂದುತ್ತದೆ. ಭುವಃ ಪತಿಃ ಭೂಪತಿಃ—ಷಷ್ಠೀತತ್ಪುರುಷಸಮಾಸ. ಸಮಾಸದಲ್ಲಿಯಾದರೋ ಭೂಪತಯೇ ಎಂದು ಒಂದುರೂಪಮಾತ್ರ ತೋರಿಸಿರುತ್ತಾನೆ. ಇಲ್ಲಿ ಘಿಸಂಜ್ಞಾ ಕಾರ್ಯವನ್ನು ಮಾಡಿ ಹೇಳಿದೆ. ಭೂಪತಿನಾ ಎಂದು ಟಾವಿಭಕ್ತಿಯಲ್ಲಿಯೇ ಘಿಸಂಜ್ಞಾ ಕಾರ್ಯಹೇಳಿದ್ದರೆ ಸಮಂಜಸವಾಗುತ್ತಿತ್ತು. ಮೊದಲನೇಕಾರ್ಯವನ್ನು ಹೇಳಿ ಎರಡನೇದನ್ನು ಹೇಳಬೇಕು. ವೃತ್ತಿಯಲ್ಲಿ ಘಿಸಂಜ್ಞಾಕಾರ್ಯತೋರಿಸುವುದೇ ಮುಖ್ಯವೆಂದು ಈನಿಯಮವನ್ನು ಬಿಟ್ಟಿದ್ದಾರೆ. ಹರಿಶಬ್ದದಂತೆಯೇ ಈ ಶಬ್ದದರೂಪಗಳು ಆಗುತ್ತವೆ.

ಪ್ರಥಮಾ—ಭೂಪತಿಃ । ಭೂಪತೀ । ಭೂಪತಯಃ ॥ ಸಂ. ಪ್ರ—ಹೇ ಭೂಪತೇ । ಹೇ ಭೂಪತೀ । ಹೇ ಭೂಪತಯಃ ॥ ದ್ವಿ—ಭೂಪತಿಂ । ಭೂಪತೀ । ಭೂಪತೀನ್ ॥ ತೃ—ಭೂಪತಿನಾ । ಭೂಪತಿಭ್ಯಾಮ್ । ಭೂಪತಿಭಿಃ ॥ ಚ—ಭೂಪತಯೇ । ಭೂಪತಿಭ್ಯಾಮ್ । ಭೂಪತಿಭ್ಯಃ ॥ ಪಂ—ಭೂಪತೇಃ । ಭೂಪತಿಭ್ಯಾಮ್ ಭೂಪತಿಭ್ಯಃ ॥ ಷ—ಭೂಪತೇಃ । ಭೂಪತ್ಯೋಃ । ಭೂಪತೀನಾಮ್ ॥ ಸ—ಭೂಪತೌ । ಭೂಪತ್ಯೋಃ । ಭೂಪತಿಷು. ॥

ಹೀಗೆ ಪತಿಶಬ್ದವು ಸಮಾಸಾಂತದಲ್ಲಿರುವಾಗ ರೂಪವನ್ನು ತಿಳಿಯಬೇಕು.

ಇಕಾರಾಂತ ಕತಿ ಶಬ್ದ,

ಕತಿ ಶಬ್ದೋ ನಿತ್ಯಂ ಬಹುವಚನಾಂತಃ ॥

ಕಿಮ್ ಶಬ್ದದಮೇಲೆ ಬಹುತ್ವಸಂಖ್ಯಾವಿಶಿಷ್ಟವಸ್ತುವಿಷಯಕಪ್ರಶ್ನೆಯಲ್ಲಿ ಡತಿ ಪ್ರತ್ಯಯವೆಂದು ಭಾಷ್ಯದಲ್ಲಿ ಹೇಳಿದೆ. ಡತಿಯಲ್ಲಿ ಡಕಾರ ಇತ್ (ಚುಟೂ) ಡಿತ್ತಾದುದರಿಂದ ಕಿಮಿನ ಟಿಗೆ (ಇಮ್) ಲೋಪ. ಕ್+ಅತಿ=ಕತಿ. ಬಹುತ್ವ ಹೇಳುವುದರಿಂದ ಇದು ನಿತ್ಯ ಬಹುವಚನಾಂತ. ಎಷ್ಟು ಎಂದರ್ಥ. ಕತಿ+ಜಸ್ ಎಂದಿರುವಾಗ ಪ್ರಕೃತಿಗೆ ಸಂಜ್ಞಾವಿಶೇಷವನ್ನು ಹೇಳುತ್ತಾನೆ.

(ಸಂಖ್ಯಾಸಂಜ್ಞೆಹೇಳುವ ಸೂತ್ರ)

೧೮೬. ಬಹುಗಣವತುಡತಿ ಸಂಖ್ಯಾ ॥ ೧-೧-೨೩ ॥

ಏತೇ ಸಂಖ್ಯಾ ಸಂಜ್ಞಾಃ ಸ್ಯುಃ ॥

ದ್ವಿಪದ ಸೂತ್ರ. ಬಹುಶ್ಚ, ಗಣಶ್ಚ, ವತುಶ್ಚ, ಡತಿಶ್ಚ ತೇಷಾಂ ಸಮಾಹಾರಃ ಬಹುಗಣವತುಡತಿ. ವತು, ಡತಿ ಪ್ರತ್ಯಯಗಳಾದುದರಿಂದ " ಪ್ರತ್ಯಯಗ್ರಹಣೇ ತದಂತ ಗ್ರಹಣಮ್ " ಪರಿಭಾಷೆಯಿಂದ ತದಂತವನ್ನು ತೆಗೆದುಕೊಳ್ಳಬೇಕು. **ಸೂತ್ರಾರ್ಥ**—ಬಹುಗಣ ಶಬ್ದಗಳೂ ವತು,ಡತಿ, ಪ್ರತ್ಯಯಾಂತ ಶಬ್ದಗಳೂ "ಸಂಖ್ಯಾ" ಎಂಬ ಸಂಜ್ಞೆಯನ್ನು ಹೊಂದುತ್ತವೆ. ಪ್ರಕೃತ ಕತಿ ಶಬ್ದವು ಡತ್ಯಂತ ಶಬ್ದವಾದುದರಿಂದ ಇದಕ್ಕೆ ಸಂಖ್ಯಾ ಎಂಬ ಸಂಜ್ಞೆ ಬರುತ್ತದೆ. ಈ ಸಂಜ್ಞೆಗೆ ಇಲ್ಲಿ ಪ್ರಯೋಜನವಿಲ್ಲ. ಇದನ್ನು ಉದ್ದೇಶಿಸಿ ಮುಂದೆ " ಷಟ್ " ಎಂಬ ಸಂಜ್ಞೆ ಹೇಳುವುದರಿಂದ ಮೊದಲು ಸಂಖ್ಯಾ ಸಂಜ್ಞೆಯನ್ನು ಹೇಳಿರುತ್ತಾನೆ.

(" ಷಟ್ " ಸಂಜ್ಞೆಯನ್ನು ಹೇಳುವ ಸೂತ್ರ)

೧೮೭. ಡತಿ ಚ ॥ ೧-೧-೨೫ ॥

ಡತ್ಯಂತಾ ಸಂಖ್ಯಾ ಷಟ್‌ಸಂಜ್ಞಾ ಸ್ಯಾತ್ ॥

ದ್ವಿಪದ ಸೂತ್ರ. ॥ " ಷ್ಣಾಂತಾ ಷಟ್ " ಸೂತ್ರದಿಂದ " ಷಟ್ " ಹಿಂದಿನ ಸೂತ್ರದಿಂದ " ಸಂಖ್ಯಾ " ಪದವೂ ಅನುವೃತ್ತವಾಗುತ್ತವೆ. ಡತಿಯಂದು ಯಾವ ವಿಭಕ್ತಿಯೂ ಇಲ್ಲದೆ ಹೇಳಿರುತ್ತಾನೆ. ಇದು ಪ್ರತ್ಯಯವಾದುದರಿಂದ ತದಂತವನ್ನು

ತೆಗೆದುಕೊಳ್ಳಬೇಕು. **ಸೂತ್ರಾರ್ಥ**—ಡತ್ಯಂತವಾದ ಸಂಖ್ಯಾ ಸಂಜ್ಞೆಯುಳ್ಳ ಶಬ್ದವು "ಷಟ್" ಎಂಬ ಸಂಜ್ಞೆಯನ್ನು ಹೊಂದುತ್ತದೆ. ಕತಿ ಶಬ್ದವು ಡತ್ಯಂತ ಸಂಖ್ಯಾವಾಚಕವಾಮದರಿಂದ ಅದಕ್ಕೆ ಷಟ್ ಸಂಜ್ಞೆ ಬರುತ್ತದೆ. ಈ ಸಂಜ್ಞೆಗೆ ಪ್ರಯೋಜನವನ್ನು ಹೇಳುತ್ತಾನೆ.

(ಜಸ್ ಶಸ್‌ಗಳಿಗೆ ಲುಕ್ ಹೇಳುವ ಸೂತ್ರ)

೧೪೮. ಷಡ್ಭ್ಯೋ ಲುಕ್ ॥ ೭-೧-೨೨ ॥

ಷಡ್ಭ್ಯಃ ಪರಯೋಃ ಜಶ್ಶಸೋಃ ಲುಕ್ ಸ್ಯಾತ್ ॥

ಷಡ್ಭ್ಯಃ ಲುಕ್ ॥ ದ್ವಿಪದ ಸೂತ್ರ. "ಜಶ್ಶಸೋಃ ಶಿಃ" ಸೂತ್ರದಿಂದ "ಜಶ್ಶಸೋಃ" ಅನುವೃತ್ತಿ. ಷಡ್ಭ್ಯಃ ಪಂಚಮಿಯಾದುದರಿಂದ ಪರಕ್ಕೆ ಕಾರ್ಯ. **ಸೂತ್ರಾರ್ಥ**—ಷಟ್ ಸಂಜ್ಞೆಯುಳ್ಳ ಅಂಗದ ಪರದಲ್ಲಿರುವ ಜಸ್, ಶಸ್ ಪ್ರತ್ಯಯಗಳಿಗೆ ಲುಕ್ ಬರುತ್ತದೆ. ಕತಿ+ಶಸ್ ಎಂದಿರುವಾಗ ಕತಿ ಶಬ್ದಕ್ಕೆ ಷಟ್ ಸಂಜ್ಞೆಯಿದುವುದರಿಂದ ಪ್ರತ್ಯಯಗಳಿಗೆ ಲುಕ್. ಲುಕ್ ಎಂದರೂ ಲೋಪವೆಂದು ಮುಂದಿನ ಸೂತ್ರದಿಂದ ವಿವರಿಸುತ್ತಾನೆ.

(ಲುಕ್. ಶ್ಲು, ಲುಪ್ ಸಂಜ್ಞೆಹೇಳುವ ಸೂತ್ರ)

೧೪೯. ಪ್ರತ್ಯಯಸ್ಯ ಲುಕ್‌ಶ್ಲ್ಲುಪಃ ॥ ೧-೧-೬೧ ॥

ಲುಕ್, ಶ್ಲು, ಲುಪ್‌ಶಬ್ದೈಃ ಕೃತಂ ಪ್ರತ್ಯಯಾದರ್ಶನಂ ಕ್ರಮಾತ್ ತತ್ತತ್ಸಂಜ್ಞಂ ಸ್ಯಾತ್ ॥

ದ್ವಿಪದ ಸೂತ್ರ. ॥ ಲುಕ್ ಚ ಶ್ಲುಚ, ಲುಪ್ ಚ ಲುಕ್‌ಶ್ಲ್ಲುಪಃ | "ಅದರ್ಶನಂ ಲೋಪಃ" ಸೂತ್ರದಿಂದ "ಅದರ್ಶನಂ" ಅನುವೃತ್ತಿ. ಲುಕ್‌ಶ್ಲ್ಲುಪಃ ಎಂಬುದು ಆವೃತ್ತವಾಗುತ್ತದೆ. (ಎರಡುಸಲ ಹೇಳಿಕೊಳ್ಳಬೇಕು) **ಸೂತ್ರಾರ್ಥ**—ಲುಕ್, ಶ್ಲು, ಲುಪ್ ಎಂದು ಉಚ್ಚರಿಸಿ ಹೇಳಿದ ಪ್ರತ್ಯಯದ ಅದರ್ಶನವು (ಅದರ್ಶನ ಇಲ್ಲಿ ಅನುಜ್ಞಾರೂಪ) ಕ್ರಮವಾಗಿ ಲುಕ್, ಶ್ಲು, ಲುಪ್ ಸಂಜ್ಞೆಯನ್ನು ಹೊಂದುತ್ತದೆ. ಎಲ್ಲಿ ಲುಕ್ ಶಬ್ದಹೇಳಿ ಲೋಪಮಾಡುವನೋ ಅಲ್ಲಿ ಆ ಲೋಪಕ್ಕೆ ಲುಕ್ ಎಂದು ಹೆಸರು. ಇಲ್ಲಿ "ಷಡ್ಭ್ಯೋ ಲುಕ್" ಎಂದು ಲುಕ್ ಹೇಳಿರುವುದರಿಂದ ಜಸ್ ಶಸಿಗೆ ಲೋಪವೆನ್ನಬಾರದು. ಲುಕ್ ಎಂದೇ ಹೇಳಬೇಕು. ಲೋಪ ಎಂದರೆ ಸಾಮಾನ್ಯಸಂಜ್ಞೆ. ಲುಗಾದಿಮೂರು ವಿಶೇಷಸಂಜ್ಞೆ. "ಜುಹೋತ್ಯಾದಿಭ್ಯಃ ಶ್ಲುಃ"

ಜುಹೋತ್ಯಾದಿಗಳ ಪರದಲ್ಲಿರುವ ಶಪಿಗೆ ಶ್ಲು ಬರುತ್ತದೆ. ಇಲ್ಲಿ ಶಪ್ ಪ್ರತ್ಯಯಾದರ್ಶನಕ್ಕೆ ಶ್ಲು ಎಂದೇ ಹೇಳಬೇಕು. ಹೀಗೆ ವಿಶೇಷಸಂಜ್ಞೆ ಹೇಳಿದುದಕ್ಕೆ ಕಾರ್ಯ ವಿಶೇಷ ಹೇಳುತ್ತಾನೆ.

(ಪ್ರತ್ಯಯಾಶ್ರಿತಕಾರ್ಯಹೇಳುವಸೂತ್ರ)

೧೫೦. ಪ್ರತ್ಯಯಲೋಪೇ ಪ್ರತ್ಯಯಲಕ್ಷಣಮ್ ॥೧-೧-೬೨॥

ಪ್ರತ್ಯಯೇ ಲುಪ್ತೇ ತದಾಶ್ರಿತಂ ಕಾರ್ಯಂ ಸ್ಯಾತ್ | ಇತಿ ಜಸಿಚೇತಿ ಗುಣೇ ಪ್ರಾಪ್ತೇ ॥

ದ್ವಿಪದ ಸೂತ್ರ | ಪ್ರತ್ಯಯಃ ಲಕ್ಷಣಂ=ನಿಮಿತ್ತಂ ಯಸ್ಯ ತತ್—ಪ್ರತ್ಯಯ ಲಕ್ಷಣಮ್. ಪ್ರತ್ಯಯವೇ ನಿಮಿತ್ತವಾಗಿರುವುದು. **ಸೂತ್ರಾರ್ಥ**—ಪ್ರತ್ಯಯ ಲೋಪವಾದರೂ ಆ ಪ್ರತ್ಯಯ ನಿಮಿತ್ತಿಕ ಕಾರ್ಯವು ಬರುತ್ತದೆ. ಎಲ್ಲಿಯಾದರೂ ಪ್ರತ್ಯಯ ಲೋಪವಾದಾಗ ಪ್ರತ್ಯಯ ಇಲ್ಲವೆಂದು ಅದನ್ನು ನಿಮಿತ್ತೀಕರಿಸಿ ಬರುವ ಕಾರ್ಯ ಮಾಡದಿರಬಾರದು. ಪ್ರತ್ಯಯ ಇದೆಯೆಂದೇ ತಿಳಿದು ಆ ಕಾರ್ಯವನ್ನು ಮಾಡಬೇಕು ಪ್ರಕೃತ, ಕತಿ+ಜಸ್ ಎಂದಿರುವಾಗ ಜಸ್ ಲುಕ್ಕಾಗಿ ಕತಿ ಎಂದು ಉಳಿದಿದೆ. ಇಲ್ಲಿ ಜಸ್ ಇದ್ದಿದ್ದರೆ "ಜಸಿ ಚ" ಸೂತ್ರದಿಂದ ಗುಣ ಬರುತ್ತಿತ್ತು. ಈಗ ಜಸ್ ಇಲ್ಲವೆಂದು ಗುಣ ಮಾಡದಿರಬಾರದು. ಜಸ್ ಇದೆಯೆಂದೇ ತಿಳಿದು ಇಕಾರಕ್ಕೆ ಗುಣ ಹೇಳಬೇಕು. ಎಂದು ಈ ಸೂತ್ರ ಜ್ಞೋಧಿಸುತ್ತದೆ. ಪ್ರತ್ಯಯಕ್ಕೆ ಸ್ಥಾನಿವದ್ಭಾವ ಹೇಳಿದಂತಾಗುತ್ತದೆ. ಪ್ರಕೃತ ಕತಿ ಯಂಬಲ್ಲಿ ಇಕಾರಕ್ಕೆ ಗುಣ ಪ್ರಾಪ್ತವಾದರೆ ನಿಷೇಧ ಹೇಳುತ್ತಾನೆ.

(ಲುಗಾದಿಗಳಿಂದ ಲೋಪವಾದಲ್ಲಿ ಅಂಗಕಾರ್ಯ ನಿಷೇಧ ಹೇಳುವ ಸೂತ್ರ)

೧೫೧. ನ, ಲುಮತಾಽಙ್ಗಸ್ಯ ॥ ೧-೧-೬೩ ॥

ಲುಮತಾ ಶಬ್ದೇನ ಲುಪ್ತೇ ತನ್ನಿಮಿತ್ತಮುಂಗಕಾರ್ಯಂ ನ ಸ್ಯಾತ್ ॥

ಕತಿ ೨ | ಕತಿಭಿಃ | ಕತಿಭ್ಯಃ ೨ | ಕತೀನಾಮ್ | ಕತಿಷು ॥

ಯುಷ್ಮದಸ್ಮತ್ ಷಟ್ ಸಂಜ್ಞಕಾಸ್ತ್ರಿಷು ಸರೂಪಾಃ |

ನ, ಲುಮತಾ, ಅಂಗಸ್ಯ ॥ ತ್ರಿಪದಸೂತ್ರ. "ಪ್ರತ್ಯಯಲೋಪೇ ಪ್ರತ್ಯಯ ಲಕ್ಷಣಮ್" ಸೂತ್ರವು ಅನುವೃತ್ತವಾಗುತ್ತದೆ. ಲು ಅಸ್ಯಾಸ್ತೀತಿ ಲುಮಾನ್ ತೇನ ಲುಮತಾ | ಲು ಎಂಬುದರಿಂದ ಕೂಡಿರುವುದು ಲುಕ್, ಶ್ಲು, ಲುಪ್, ಈ ಮೂರರಲ್ಲಿಯೂ ಲು ಇರುವುದರಿಂದ ಇವು ಲುಮಂತಗಳು. **ಸೂತ್ರಾರ್ಥ**—ಲುಕ್, ಶ್ಲು,

ಲುಪ್, ಇವುಗಳಿಂದ ಪ್ರತ್ಯಯಲೋಪವಾದಾಗ ಅಲ್ಲಿ ಆ ಪ್ರತ್ಯಯವನ್ನು ನಿಮಿತ್ತವಾಗಿ ಕರಿಸಿ ಅಂಗಕ್ಕೆ ಕಾರ್ಯವು ಬರುವುದಿಲ್ಲ. ಪ್ರಕೃತ ಜಸ್ ಲುಕ್‌ಶಬ್ದದಿಂದ ಜಸ್ಸನ್ನು ಹೊಂದಿದೆ. ಆದುದರಿಂದ ಲುಮತಾಲುಪ್ತವಾಯಿತು. ಇಲ್ಲಿ ಜಸ್ಸನ್ನು ನಿಮಿತ್ತೀಕರಿಸಿ ಅಂಗಕ್ಕೆ ಗುಣರೂಪಕಾರ್ಯಬರುವುದಿಲ್ಲ. ಕತಿಯಂದೇ ಇರುತ್ತದೆ. ತೃತೀಯಾ ಬಹುವಚನದಲ್ಲಿಯೂ ಶಸಿಗೆ ಲುಕ್ ಬರುವುದರಿಂದ ಕತಿಯಂದೇ ರೂಪವು. ಹಲಾದಿಯಾದ ಭಿಸ್, ಭ್ಯಸ್‌ಗಳಲ್ಲಿ ಕತಿಭಿಃ, ಕತಿಭ್ಯಃ; ಕತಿಭ್ಯಃ ಎಂದಾಗುತ್ತದೆ. ಷಷ್ಠೀಬಹುವಚನದಲ್ಲಿ ಕತಿ+ಆಮ್ ಎಂದಿರುವಾಗ "ಹ್ರಸ್ವನದ್ಯಾಪ್ಪೋನುಟ್" ಸೂತ್ರದಿಂದ ಆಮಿಗೆ ನುಡಾಗಮ "ನಾಮಿ" ಅಂಗಕ್ಕೆ ದೀರ್ಘ ಕತೀನಾಮ್ ಸಪ್ತಮಿಯಲ್ಲಿ ಕತಿಷು. "ಆದೇಶಪ್ರತ್ಯಯಯೋಃ" ಸೂತ್ರದಿಂದ ಪ್ರತ್ಯಯಕ್ಕೆ ಷತ್ವಬಂದಿದೆ. ಪ್ರಸಂಗಸಂಗತಿಯಿಂದ ಈ ಕತಿಶಬ್ದದಲ್ಲಿ ವಿಶೇಷನನ್ನು ಹೇಳುತ್ತಾನೆ. "ಯುಷ್ಮದ್-ಅಸ್ಮದ್" ಯುಷ್ಮದ್ ಅಸ್ಮದ್ ಶಬ್ದಗಳೂ (ನೀನು, ನಾನು) ಷಟ್ ಸಂಜ್ಞೆಯಿರುವ ಶಬ್ದಗಳೂ ಮೂರುಲಿಂಗಗಳಲ್ಲಿಯೂ ಒಂದೇ ರೂಪವನ್ನು ಹೊಂದುತ್ತವೆ. ಲಿಂಗವ್ಯತ್ಯಾಸವಿಲ್ಲ. ಕತಿಶಬ್ದಕ್ಕೆ ಷಟ್ ಸಂಜ್ಞೆ ಇರುವುದರಿಂದ ಪುಂಸ್ತ್ರೀನಪುಂಸಕಲಿಂಗಗಳಲ್ಲಿ ಒಂದೇರೀತಿಯಾಗಿರುತ್ತದೆ.

ತ್ರಿ ಶಬ್ದ.

ತ್ರಿಶಬ್ದೋ ನಿತ್ಯಂ ಬಹುವಚನಾಂತಃ । ತ್ರಯಃ । ತ್ರೀನ್ । ತ್ರಿಭಿಃ । ತ್ರಿಭ್ಯಃ ೨ ॥

ಬಹುತ್ವಸಂಖ್ಯಾವಾಚಕವಾಗಿರುವುದರಿಂದ ತ್ರಿಶಬ್ದವು ನಿತ್ಯಬಹುವಚನಾಂತವಾಗಿರುತ್ತದೆ. ಏಕವಚನ ದ್ವಿವಚನಗಳಿಲ್ಲ. ತ್ರಿ+ಜಸ್ ಎಂದಿರುವಾಗ "ಜಸಿಚ" ಸೂತ್ರದಿಂದ ಗುಣ, ತ್ರೇ+ಅಸ್ ಅಯಾದೇಶ. ಸಕಾರಕ್ಕೆ ರುತ್ವವಿಸರ್ಗ. ತ್ರಯಃ. ಶಸಿನಲ್ಲಿ "ಪ್ರಥಮಯೋಃ ಪೂರ್ವಸವರ್ಣಃ" ಸೂತ್ರದಿಂದ ಪೂರ್ವಸವರ್ಣದೀರ್ಘ. ತ್ರೀಸ್. "ತಸ್ಮಾಚ್ಛಸೋ ನಃ ಪುಂಸಿ" ಸೂತ್ರದಿಂದ ಸಕಾರಕ್ಕೆ ನತ್ವ. ತ್ರೀನ್. ಹಲಾದಿಯಲ್ಲಿ ವಿಭಕ್ತಿಯನ್ನು ಸೇರಿಸುವುದು ಮಾತ್ರ. ತೃ–ತ್ರಿಭಿಃ, ಚ–ತ್ರಿಭ್ಯಃ, ಪಂ–ತ್ರಿಭ್ಯಃ ॥

ತ್ರಿಶಬ್ದಕ್ಕೆ ಷಷ್ಠೀ ಬಹುವಚನದಲ್ಲಿ ಆಮ್ ಬಂದಾಗ ಪ್ರಕೃತಿಗೆ ಆದೇಶ ಹೇಳುತ್ತಾನೆ.

(ತ್ರಿಗೆ ತ್ರಯಾದೇಶಹೇಳುವ ಸೂತ್ರ)

೧೯೨. ತ್ರೇಸ್ತ್ರಯಃ ॥ ೭-೧-೫೩ ॥

ತ್ರಿಶಬ್ದಸ್ಯ ತ್ರಯಾದೇಶಃ ಸ್ಯಾದಾಮಿ । ತ್ರಯಾಣಾಮ್ । ತ್ರಿಷು । ಗೌಣತ್ವೇಪಿ ಪ್ರಿಯತ್ರಯಾಣಾಮ್ ॥

ತ್ರೇಃ, ತ್ರಯಃ । ದ್ವಿಪದಸೂತ್ರ. "ಆಮಿ ಸರ್ವನಾಮ್ನಃ ಸುಟ್" ಸೂತ್ರದಿಂದ "ಆಮಿ" ಅನುನಾಸಿಕತ್ವವಾಗುತ್ತದೆ. ಅಂಗಾಧಿಕಾರದಲ್ಲಿ ಹೇಳಿದ ಸೂತ್ರ.

ಸೂತ್ರಾರ್ಥ—ತ್ರಿಶಬ್ದರೂಪ ಅಂಗಕ್ಕೆ ಆಮ್ ಪರವಾದಾಗ "ತ್ರಯ" ಆದೇಶ ಬರುತ್ತದೆ. ಆದೇಶವು ಅನೇಕಾಲಾದುದರಿಂದ "ಅನೇಕಾಲ್ಶಿತ್ ಸರ್ವಸ್ಯ" ಪರಿಭಾಷೆಯಿಂದ ಸರ್ವಾದೇಶವಾಗಿ ಬರುತ್ತದೆ. ತ್ರಯ+ಆಮ್ ಎಂದಿರುವಾಗ "ಹ್ರಸ್ವನದ್ಯಾಪ್ಪೋನುಟ್" ಸೂತ್ರದಿಂದ ಆಮಿಗೆ ನುಡಾಗಮ. "ನಾಮಿ" ಅಜಂತಾಂಗಕ್ಕೆ ದೀರ್ಘ. ತ್ರಯಾಣಾಮ್. "ಅಟ್‌ಕುಪ್ವಾಙ್‌ನುಮ್‌ವ್ಯವಾಯೇಪಿ" ಸೂತ್ರದಿಂದ ನಕಾರಕ್ಕೆ ಣತ್ವ. ತ್ರಯಾಣಾಮ್. ಸಪ್ತಮಿಯಲ್ಲಿ ಪ್ರತ್ಯಯಸಕಾರಕ್ಕೆ ಷತ್ವ. ತ್ರಿಷು. "ಗೌಣತ್ವೇತಿ" ॥ "ಗೌಣಮುಖ್ಯಯೋಃ ಮುಖ್ಯೇ ಕಾರ್ಯ ಸಂಪ್ರತ್ಯಯಃ" ಎಂದು ಪರಿಭಾಷೆ. ಒಂದು ಪ್ರಧಾನ, ಇನ್ನೊಂದು ಅಪ್ರಧಾನ (ಗೌಣ) ಇವುಗಳ ಮಧ್ಯೆ ಕಾರ್ಯಬರುವುದಾದರೆ ಮುಖ್ಯ (ಪ್ರಧಾನ) ವಾದುದಕ್ಕೇ ಕಾರ್ಯಬರುತ್ತದೆಂದು ಈ ಪರಿಭಾಷೆ ತಿಳಿಸುತ್ತದೆ. ಪ್ರಧಾನವೆಂದರೆ ಅದರ ಅರ್ಥವು ಇನ್ನೊಂದುಕಡೆ ವಿಶೇಷಣವಾಗದಿರುವುದು. ಅಪ್ರಧಾನವೆಂದರೆ ಅದರ ಅರ್ಥವು ಇನ್ನೊಂದರಲ್ಲಿ ವಿಶೇಷಣವಾಗಿರುವುದು. ತ್ರಯಃ ಎಂದರೆ ಮೂರು ಎಂದು ಅರ್ಥವಾಗುವುದರಿಂದ ಇದು ಪ್ರಧಾನ. ಪ್ರಿಯವಾದ ಮೂರು ಉಳ್ಳವನು. ಪ್ರಿಯತ್ರಿಃ. ಇಲ್ಲಿ ಮೂರು ಎಂಬುದು ಇನ್ನೊಂದರಲ್ಲಿ ವಿಶೇಷಣವಾದುದರಿಂದ ಅಪ್ರಧಾನ. ಪ್ರಿಯತ್ರಿ ಶಬ್ದ ಹೇಗೆ ಶಬ್ದದಂತೇ ಆಗುತ್ತದೆ. ಆಮಿನಲ್ಲಿ ತ್ರಿಶಬ್ದಕ್ಕೆ ತ್ರಯಾದೇಶ ಬರುತ್ತದೆಯೇ ಇಲ್ಲವೇ ಎಂದು ಜಿಜ್ಞಾಸೆ ಬಂದರೆ ಹಿಂದೆ ಹೇಳಿದ ಪರಿಭಾಷೆಯಿಂದ ಅಪ್ರಧಾನವಾದುದರಿಂದ ಇಲ್ಲವೆಂದು ಕೆಲವರ ಅಭಿಪ್ರಾಯ. ಗ್ರಂಥಕಾರನು ಅಪ್ರಧಾನವಾದರೂ ಬರುತ್ತದೆಯೆಂದು ಹೇಳುತ್ತಾನೆ. ಗೌಣಮುಖ್ಯನ್ಯಾಯವು ಪದಕಾರ್ಯದಲ್ಲಿ ಮಾತ್ರವೆಂದೂ ಇದು ಅಂಗಕಾರ್ಯವಾದುದರಿಂದ ಬರೇ ಯಾವ ಅಭ್ಯಂತರವೂ ಇಲ್ಲವೆಂದು ಅವರಮತ. ಪ್ರಿಯತ್ರಯಾಣಾಮ್. ಉಳಿದೆಡೆಗಳಲ್ಲಿ ಹರಿಶಬ್ದದಂತೇ ರೂಪವನ್ನು ತಿಳಿಯಬೇಕು. ಪ್ರಿಯವಾದಮೂರುಉಳ್ಳವನು ಎಂದುದರಿಂದ ಇಲ್ಲಿ ಏಕವಚನ ದ್ವಿವಚನಗಳೂ ಇವೆ. ಮೂರುಉಳ್ಳವನು ಅನ್ಯನು.

ದ್ವಿ ಶಬ್ದ

ಇದು ದ್ವಿತ್ವ ಸಂಖ್ಯಾವಾಚಕವಾದುದರಿಂದ ನಿತ್ಯದ್ವಿವಚನಾಂತ. ಪ್ರಥಮಾ ದ್ವಿವಚನದಲ್ಲಿ ಔ ಬಂದಾಗ ಪ್ರಕೃತಿಗೆ ಅಕಾರವನ್ನು ವಿಧಿಸುತ್ತಾನೆ.

(ತ್ಯದಾದಿಗಳಿಗೆ ಅಕಾರ ಹೇಳುವ ಸೂತ್ರ)

೧೯೩. ತ್ಯದಾದೀನಾಮಃ ॥ ೭-೨-೧೦೨ ॥

ಏಷಾಮಕಾರೋ ವಿಭಕ್ತೌ। (ದ್ವಿಪರ್ಯಂತಾನಾಮೇವೇಷ್ಟಿಃ) ದ್ವೌ ೨। ದ್ವಾಭ್ಯಾಮ್ ೩। ದ್ವಯೋಃ ೨।

ತ್ಯದಾದೀನಾಮ್, ಅಃ। ದ್ವಿಪದ ಸೂತ್ರ. "ಅಷ್ಟನ ಆ ವಿಭಕ್ತೌ" ಸೂತ್ರದಿಂದ "ವಿಭಕ್ತೌ" ಪದಕ್ಕೆ ಅನುವೃತ್ತಿ. ತ್ಯದ್ ಆದಿಃ ಏಷಾಂತೇ ತ್ಯದಾದಯಃ ತೇಷಾಂ ತ್ಯದಾದೀನಾಮ್. **ಸೂತ್ರಾರ್ಥ**—ತ್ಯದ್ ಮುಂತಾದ ಶಬ್ದಗಳಿಗೆ ವಿಭಕ್ತಿ ಪರವಾದಾಗ ಅಕಾರಾದೇಶ ಬರುತ್ತದೆ. "ಅಲೋಂತ್ಯಸ್ಯ" ಪರಿಭಾಷೆಯಿಂದ ಅಂತ್ಯಕ್ಕೆ ಆದೇಶ. ತ್ಯದಾದಿಗಳು ಸರ್ವನಾಮ ಗಣದಲ್ಲಿ ಪಠಿತವಾಗಿವೆ. ತ್ಯದ್ ಮೊದಲಾದವುಗಳು ಅನೇಕಗಳಾದರೂ ದ್ವಿಶಬ್ದದವರೆಗೇ ತೆಗೆದುಕೊಳ್ಳಬೇಕೆಂದು ಭಾಷ್ಯಕಾರರ ಅಭಿಪ್ರಾಯ. ಭಾಷ್ಯಕಾರರ ಸ್ವಂತ ಅಭಿಪ್ರಾಯಕ್ಕೆ ಇಷ್ಟಿಯಂದು ಹೆಸರು. ಪ್ರಕೃತ ದ್ವಿಶಬ್ದವು ತ್ಯದಾದಿಯಲ್ಲಿ ಸೇರಿರುವುದರಿಂದ ಔ ವಿಭಕ್ತಿ ಪರವಾದಾಗ ಅತ್ವ ಬರುತ್ತದೆ ಇಕಾರಕ್ಕೆ ಅತ್ವ ಬಂದರೆ ದ್ವ+ಔ, "ವೃದ್ಧಿರೇಚಿ" ವೃದ್ಧಿ. ದ್ವೌ. ದ್ವಿತೀಯಾದಲ್ಲಿಯೂ ಔ ಟ್ ಪ್ರತ್ಯಯವಾದುದರಿಂದ ಇದೇರೀತಿ ಅತ್ವವೃದ್ಧಿ. ತೃ. ಚ, ಪಂ–ಗಳಲ್ಲಿ ಭ್ಯಾಮ್ ಪ್ರತ್ಯಯ. ಅತ್ವ ಬಂದರೆ "ಸುಪಿ ಚ" ಸೂತ್ರದಿಂದ ದೀರ್ಘ. ದ್ವಾಭ್ಯಾಮ್ (೩) ಷ, ಸ–ಗಳಲ್ಲಿ ಓಸ್ ಪ್ರತ್ಯಯ. ಅತ್ವ. "ಓಸಿಚ" ಸೂತ್ರದಿಂದ ಅಕಾರಕ್ಕೆ ಏಕಾರ. "ಏಚೋಯವಾಯಾವಃ" ಸೂತ್ರದಿಂದ ಅಯಾದೇಶ. ದ್ವಯೋಃ, (೨)

ಇತಿ ಇಕಾರಾಂತಾಃ

ಈಕಾರಾಂತ ಪಪೀ ಶಬ್ದ

ಪಾತಿ ಲೋಕಮಿತಿ ಪಪೀಃ ಸೂರ್ಯಃ ॥

ಪಪೀ ಶಬ್ದದ ವ್ಯುತ್ಪತ್ತಿಯನ್ನು ತೋರಿಸುತ್ತಾನೆ. "ಯಾಪೋಃ ಕಿದ್ದ್ವೇಚ" ಔಣಾದಿಕ ಸೂತ್ರ. ಯಾ, ಪಾ ಧಾತುವಿಗೆ ಈ ಪ್ರತ್ಯಯ. ಧಾತುವಿಗೆ ದ್ವಿತ್ವ. ಪ್ರತ್ಯಯ ಕಿತ್ತಿನಂತಾಗುತ್ತದೆ ಎಂದುದರಿಂದ ಪ್ರಕೃತ ಪಾ ಧಾತುವಿಗೆ ಈ ಪ್ರತ್ಯಯ ಬಂದು ದ್ವಿತ್ವ ಬಂದರೆ ಪಾಪಾ+ಈ ಆಗುತ್ತದೆ. ಮೊದಲಿನ ಪಾ ಎಂಬುದಕ್ಕೆ ಹ್ರಸ್ವವೂ ಎರಡನೇದರ ಆಕಾರಕ್ಕೆ "ಆತೋಲೋಪ ಇಟಿಚ" ಸೂತ್ರದಿಂದ ಲೋಪವೂ ಬಂದರೆ ಪಪೀ ಎಂದಾಗುತ್ತದೆ. ಲೋಕವನ್ನು ರಕ್ಷಿಸುವವನು ಸೂರ್ಯ. ಪಪೀ ಸ್—ರುತ್ವ

ವಿಸರ್ಗ. ಪಪೀಃ. ದ್ವಿವಚನದಲ್ಲಿ ಔ ಪರವಾದಾಗ ಪೂರ್ವಸವರ್ಣದೀರ್ಘ ಪ್ರಾಪ್ತವಾದರೆ,

೧೯೪. ದೀರ್ಘಾಜ್ಜಸಿಚ ॥ ೬-೧-೧೦೫ ॥

ಪಪ್ಯೌ ೨ ॥ ಪಪ್ಯಃ ॥

ಈ ಸೂತ್ರವು ವ್ಯಾಖ್ಯಾತವಾಗಿದೆ. (ಸೂ. ೧೬೨) ದೀರ್ಘದಪರದಲ್ಲಿ ಇಚ್ ಬಂದುದರಿಂದ ನಿಷೇಧಬಂದರೆ "ಇಕೋಯಣಚಿ" ಸೂತ್ರದಿಂದ ಯಣಾದೇಶ. ಪಪ್ಯೌ. ದ್ವಿತೀಯಾ ದ್ವಿವಚನದಲ್ಲಿಯೂ ಇದೇರೂಪ. ಜಸ್ ಪ್ರತ್ಯಯ ಪರವಾದಾಗಲೂ ಈ ಸೂತ್ರದಿಂದ ನಿಷೇಧ ಬರುವುದರಿಂದ ಯಣಾದೇಶ. ಸಕಾರಕ್ಕೆ ರುತ್ವವಿಸರ್ಗ. ಪಪ್ಯಃ ॥

ಪಪೀಮ್। ಪಪೀನ್। ಪಪ್ಯಾ। ಪಪೀಭ್ಯಾಮ್ ೩। ಪಪೀಭಿಃ। ಪಪ್ಯೇ। ಪಪೀಭ್ಯಃ ೨। ಪಪ್ಯಃ ೨। ಪಪ್ಯೋಃ ೨॥ ದೀರ್ಘತ್ವಾನ್ನ ನುಟ್, ಪಪ್ಯಾಮ್। ಜೌತು ಸವರ್ಣದೀರ್ಘಃ, ಪಪೀ। ಪಪೀಷು ॥ ಏವಂ ವಾತಪ್ರಮ್ಯಾದಯಃ।—

ದ್ವಿತೀಯಾದಲ್ಲಿ ಅಮ್ ಪರವಾದಾಗ "ಅಮಿ ಪೂರ್ವಃ" ಪೂರ್ವರೂಪ. ಪಪೀಮ್. ದ್ವಿ–ಪಪ್ಯೌ. ಬಹುವಚನದಲ್ಲಿ ಶಸ್ ಬಂದಾಗ, "ಪ್ರಥಮಯೋಃ"—ಸೂತ್ರದಿಂದ ಪೂರ್ವಸವರ್ಣದೀರ್ಘ. "ತಸ್ಮಾಚ್ಛಸೋನಃ ಪುಂಸಿ" ಸೂತ್ರದಿಂದ ಸಕಾರಕ್ಕೆ ನಕಾರಾದೇಶ. ಪಪೀನ್. ತೃತೀಯಾದಲ್ಲಿ ಟಾಪರವಾದಾಗ ಯಣಾದೇಶ. ಪಪೀ+ಆ—ಪಪ್ಯಾ। ತೃ. ಚ, ಪಂ. ಭ್ಯಾಮ್ ಪರವಾದಾಗ ಒಂದೇರೂಪ. ಕಾರ್ಯವೇನೂ ಇಲ್ಲ. ಪಪೀಭ್ಯಾಮ್. ಬಹುವಚನದಲ್ಲಿ ಪಪೀಭಿಃ। ಚತುರ್ಥೀ ಏಕವಚನದಲ್ಲಿ ಪಪೀ+(ಜ್) ಏ ಯಣಾದೇಶ. ಪಪ್ಯೇ ಭ್ಯಸಿನಲ್ಲಿ ಪಪೀಭ್ಯಃ. ಪಂ. ಬಹುವಚನದಲ್ಲಿಯೂ ಹೀಗೇ ರೂಪ. ಪಂ. ಷಷ್ಠೀ ಏಕವಚನಗಳಲ್ಲಿ ಅಸ್ ಬಂದಾಗ ಯಣಾದೇಶ. ಸಕಾರಕ್ಕೆ ರುತ್ವವಿಸರ್ಗ. ಪಪ್ಯಃ ೨. ಷಷ್ಠೀ, ಸಪ್ತಮೀ ದ್ವಿವಚನಗಳಲ್ಲಿ ಓಸ್ ಬಂದಾಗ ಯಣ್. ರುತ್ವವಿಸರ್ಗ. ಪಪ್ಯೋಃ ೨. ಷಷ್ಠೀ ಬಹುವಚನದಲ್ಲಿ ಆಮ್. ಪಪೀ+ಆಮ್ ಎಂದಿರುವಾಗ ದೀರ್ಘದಪರದಲ್ಲಿ ಆಮಿರುವುದರಿಂದ ನುಡಾಗಮ (ಹ್ರಸ್ವನದ್ಯಾಪೋನುಟ್) ಬರುವುದಿಲ್ಲ. ಯಣ್. ಪಪ್ಯಾಮ್. ಸಪ್ತಮೀ ಏಕವಚನದಲ್ಲಿ ಪಪೀ+(ಜ್) ಇ ಎಂದಿರುವಾಗ "ಅಕಃ ಸವರ್ಣೇದೀರ್ಘಃ" ಸೂತ್ರದಿಂದ ಸವರ್ಣದೀರ್ಘ. ಪಪೀ. ಬಹುವಚನದಲ್ಲಿ ಷತ್ವ. ಪಪೀಷು. ಹೀಗೆಯೇ ವಾತಪ್ರಮೀಮುಂತಾದ ಶಬ್ದಗಳ ರೂಪವನ್ನು ತಿಳಿಯಬೇಕು.

ಈಕಾರಾಂತ " ಬಹುಶ್ರೇಯಸೀ " ಶಬ್ದ

ಬಹ್ವ್ಯಃ ಶ್ರೇಯಸ್ಯೋ ಯಸ್ಯ ಸಃ ಬಹುಶ್ರೇಯಸೀ ।

ಬಹಳವಾದ ಪ್ರಾಶಸ್ತ್ಯವಿರುವ ಸ್ತ್ರೀಯರು ಉಳ್ಳವನು (ಪುರುಷ). ಬಹುವ್ರೀಹಿ ಸಮಾಸ. ಪ್ರಶಸ್ಯ ಶಬ್ದಕ್ಕೆ ಈಯಸುನ್ ಪ್ರತ್ಯಯ ಬಂದಾಗ " ಪ್ರಶಸ್ಯಸ್ಯ ಶ್ರ " ಸೂತ್ರದಿಂದ ಪ್ರಕೃತಿಗೆ ಶ್ರ ಆದೇಶ. ಈಯಸಂತ ಬಹುವ್ರೀಹಿಗೆ ಹ್ರಸ್ವನಿಷೇಧ ಮಾಡಿರುವುದರಿಂದ ಸಮಾಸಾಂತದಲ್ಲಿ ಹ್ರಸ್ವ ಬರುವುದಿಲ್ಲ. ಶ್ರೇಯಸೀ ಎಂಬಲ್ಲಿ " ಉಗಿತಶ್ಚ " ಸೂತ್ರದಿಂದ ಸ್ತ್ರೀಲಿಂಗದಲ್ಲಿ ಙೀಪ್ ಪ್ರತ್ಯಯ ಬರುವುದರಿಂದ ದೀರ್ಘ ಜ್ಯಂತವಾದ ಶಬ್ದ. ಬಹುಶ್ರೇಯಸೀ+ಸ್ ಎಂದಿರುವಾಗ ದೀರ್ಘಜ್ಯಂತದ ಪರದಲ್ಲಿ ಸು ಬಂದುದರಿಂದ " ಹಲ್‌ಙ್ಯಾಭ್ಯೋದೀರ್ಘಾತ್.... " ಸೂತ್ರದಿಂದ ಸುವಿಗೆ ಲೋಪ. ಬಹುಶ್ರೇಯಸೀ. ಙೆ ಪರವಾದಾಗ ದೀರ್ಘದ ಪರದಲ್ಲಿ ಇಚ್ ಬಂದುದರಿಂದ ಪೂರ್ವಸವರ್ಣದೀರ್ಘ ಬರುವುದಿಲ್ಲ. ಯಣ್. ಬಹುಶ್ರೇಯಸ್ಯಾ. ಬಹುವಚನದಲ್ಲಿಯೂ ಯಣ್. ಬಹುಶ್ರೇಯಸ್ಯಃ ಸಂಬುದ್ಧಿಯಲ್ಲಿ ಸು ಪರವಾದಾಗ ಕಾರ್ಯ ವಿಶೇಷಕ್ಕೋಸ್ಕರ ಪ್ರಕೃತಿಗೆ ನದೀ ಸಂಜ್ಞೆ ಹೇಳುತ್ತಾನೆ.

(ನದೀ ಸಂಜ್ಞಾ ಹೇಳುವ ಸೂತ್ರ)

೧೯೫. ಯೂ ಸ್ತ್ರ್ಯಾಖ್ಯೌ ನದೀ ॥ ೧-೪-೩ ॥

ಈದೂದಂತೌ ನಿತ್ಯಸ್ತ್ರೀಲಿಂಗೌ ನದೀಸಂಜ್ಞೌ ಸ್ತಃ ॥ ವಾ ॥ (ಪ್ರಥಮಲಿಂಗಗ್ರಹಣಂಚ) ಪೂರ್ವಂ ಸ್ತ್ರ್ಯಾಖ್ಯಸ್ಯೋಪಸರ್ಜನಸ್ತ್ವೇಽಪಿ ನದೀತ್ವಂ ವಕ್ತವ್ಯಮಿತ್ಯರ್ಥಃ ॥

ಯೂ, ಸ್ತ್ರ್ಯಾಖ್ಯೌ, ನದೀ ॥ ತ್ರಿಪದ ಸೂತ್ರ. ಈಶ್ಚ ಊಶ್ಚ ಯೂ (ಈ+ಊ. ಯಣ್. ಯ್+ಊ=ಯೂ) ದೀರ್ಘವಾದ ಈಕಾರ, ಊಕಾರಗಳು. ದ್ವಿವಚನ ಪರವಾದಾಗ ಪೂರ್ವಸವರ್ಣದೀರ್ಘ ಬಂದಿದೆ. ಸ್ತ್ರಿಯಮಾಚಕ್ಷಾತೇ ಇತಿ ಸ್ತ್ರ್ಯಾಖ್ಯೌ. ಸ್ತ್ರೀಲಿಂಗವನ್ನು ಹೇಳುವ ಶಬ್ದಗಳು. ಯೂ ಅದಕ್ಕೆ ವಿಶೇಷಣವಾದುದರಿಂದ ತದಂತಲಾಭ. ಈಕಾರಾಂತ ಊಕಾರಾಂತ ಸ್ತ್ರೀಲಿಂಗ ಶಬ್ದಗಳು. ಇಲ್ಲಿ ಆಖ್ಯೌವೆಂದುದರಿಂದ ನಿತ್ಯಸ್ತ್ರೀಲಿಂಗವೆಂಬ ಅರ್ಥ ಸಿಗುತ್ತದೆ. **ಸೂತ್ರಾರ್ಥ**—ಈಕಾರಾಂತ ಊಕಾರಾಂತವಾದ ನಿತ್ಯಸ್ತ್ರೀಲಿಂಗ ಶಬ್ದಗಳು " ನದೀ " ಎಂಬ ಸಂಜ್ಞೆಯನ್ನು ಹೊಂದುತ್ತವೆ. ಪ್ರಕೃತ ಬಹುಶ್ರೇಯಸೀ ಶಬ್ದವು ಪುಲ್ಲಿಂಗವಾದುದರಿಂದ ಹೇಗೆ ನದೀ ಸಂಜ್ಞೆ ಬರುತ್ತದೆ ಎಂದು ಆಶಂಕೆ ಬಂದರೆ ವಾರ್ತಿಕದಲ್ಲಿ ಸಮಾಧಾನ ಹೇಳುತ್ತಾನೆ. " ಪ್ರಥಮ.... ॥ " ಪ್ರಥಮಸ್ಯ= ಸಮಾಸ ಬರಬೇಕಾದರೆ ಮೊದಲು ಇರುವ

ಲಿಂಗಸ್ಯ= ಸ್ತ್ರೀಲಿಂಗಕ್ಕೆ ಈ ಸೂತ್ರದಲ್ಲಿ ಗ್ರಹಣವಿದೆ ಎಂದರ್ಥ. ಇದೇ ಅರ್ಥವನ್ನು ವೃತ್ತಿಯಲ್ಲಿ ಸ್ಪಷ್ಟವಾಗಿ ವಿವರಿಸುತ್ತಾನೆ. " ಪೂರ್ವಮಿತಿ ॥ " ಪೂರ್ವಂ ಎಂದರೆ ಸಮಾಸಾದಿ ಪ್ರವೃತ್ತಿ. ಬರಬೇಕಾದರೆ ಮೊದಲು (ಸ್ತ್ರ್ಯಾಖ್ಯಸ್ಯ) ನಿತ್ಯಸ್ತ್ರೀಲಿಂಗ ವಾಚಕ ಶಬ್ದಕ್ಕೆ ಈಗ (ಉಪಸರ್ಜನತ್ವೇಽಪಿ) ಸಮಾಸದಲ್ಲಿ ಅಪ್ರಾಧಾನ್ಯವಿದ್ದರೂ ನದೀ ಸಂಜ್ಞೆ ಹೇಳಬೇಕು ಎಂದರ್ಥ. ಪ್ರಕೃತ ಬಹುಶ್ರೇಯಸೀ ಶಬ್ದದಲ್ಲಿ ಶ್ರೇಯಸೀ ಜೇರೆ ಇದ್ದಾಗ ನಿತ್ಯ ಸ್ತ್ರೀಲಿಂಗವಾಗಿ ಪ್ರಧಾನವಾಗಿತ್ತು. ಈಗ ಸಮಾಸದಲ್ಲಿ ಅನ್ಯ ಪದಾರ್ಥ (ಪುರುಷ) ದಲ್ಲಿ ವಿಶೇಷಣವಾಗಿ ಅಪ್ರಧಾನವಾಗಿದೆ. ಆದರೂ ನದೀ ಸಂಜ್ಞೆಗೆ ಬಾಧಕವಿಲ್ಲ. ಹೀಗೆ ಸಂಬುದ್ಧಿಯಲ್ಲಿ ನದೀ ಸಂಜ್ಞೆಯಿರುವುದರಿಂದ ಅದನ್ನು ನಿಮಿತ್ತೀಕರಿಸಿ ಬರುವ ಕಾರ್ಯವನ್ನು ಹೇಳುತ್ತಾನೆ.

(ನದೀಗೆ ಹ್ರಸ್ವ ಹೇಳುವ ಸೂತ್ರ)

೧೯೬. ಅಂಬಾರ್ಥನದ್ಯೋರ್ಹ್ರಸ್ವಃ ॥ ೭-೩-೧೦೭ ॥

ಅಂಬಾರ್ಥಾನಾಂ ನದ್ಯಂತಾನಾಂ ಚ ಹ್ರಸ್ವಃ ಸ್ಯಾತ್ಸಂಬುದ್ಧೌ ॥ ಹೇ ಬಹುಶ್ರೇಯಸಿ ॥

ಅಂಬಾರ್ಥನದ್ಯೋಃ, ಹ್ರಸ್ವಃ ॥ ದ್ವಿಪದ ಸೂತ್ರ. " ಅಂಗಸ್ಯ " ಅಧಿಕಾರ. ನದೀ ಅದಕ್ಕೆ ವಿಶೇಷಣ. " ಸಂಬುದ್ಧೌ ಚ " ಸೂತ್ರದಿಂದ " ಸಂಬುದ್ಧೌ " ಅನುವೃತ್ತಿ. ಅಂಬಾರ್ಥ ಶಬ್ದಗಳು ಅಂದರೆ ಅಂಬಾ (ತಾಯಿ) ಪರ್ಯಾಯ ಶಬ್ದಗಳು. ಅಕ್ಕಾ, ಅಲ್ಲಾ ಮುಂತಾದವುಗಳು. **ಸೂತ್ರಾರ್ಥ**—ಅಂಬಾರ್ಥವನ್ನು ಕೊಡುವ ಶಬ್ದಗಳಿಗೂ ನದ್ಯಂತವಾದ ಶಬ್ದಗಳಿಗೂ ಸಂಬುದ್ಧಿ (ಸು) ಪರವಾದಾಗ ಹ್ರಸ್ವ ಬರುತ್ತದೆ. ಹೇ ಬಹುಶ್ರೇಯಸಿ. ಸುವಿಗೆ ಹಿಂದಿನಂತೇ ಙ್ಯಂತದ ಪರದಲ್ಲಿರುವುದರಿಂದ ಲೋಪ. ದ್ವಿ, ಬಹುವಚನಗಳಲ್ಲಿ ಹಿಂದಿನಂತೇ ಯಣ್. ಹೇ ಬಹುಶ್ರೇಯಸ್ಯೌ. ಹೇ ಬಹುಶ್ರೇಯಸ್ಯಃ। ದ್ವಿತೀಯಾದಲ್ಲಿ ಅಮಿನಲ್ಲಿ " ಅಮಿ ಪೂರ್ವ " ಪೂರ್ವ ರೂಪ. ಬಹುಶ್ರೇಯಸೀಮ್. ಟಾಟನಲ್ಲಿ ಯಣ್. ಬಹುಶ್ರೇಯಸ್ಯಾ. ಶಸಿನಲ್ಲಿ ಪೂರ್ವಸವರ್ಣದೀರ್ಘ. ನತ್ವ. ಬಹುಶ್ರೇಯಸೀನ್. ತೃತೀಯಾದಲ್ಲಿ—ದೀರ್ಘಾಂತವಾದುದರಿಂದ ಘಿ ಸಂಜ್ಞಾ ಇಲ್ಲ. ಟಾ ಪರವಾದಾಗ ಯಣಾದೇಶ. ಬಹುಶ್ರೇಯಸೀ+ಆ=ಬಹುಶ್ರೇಯಸ್ಯಾ. ಹಲಾದಿಯಲ್ಲಿ ವಿಭಕ್ತಿ ಸೇರಿಸುವುದು ಮಾತ್ರ. ಬಹುಶ್ರೇಯಸೀಭ್ಯಾಮ್—ಬಹುಶ್ರೇಯಸೀಭಿಃ—ಚತುರ್ಥಿಯಲ್ಲಿ ಙೀ ಪ್ರತ್ಯಯ. ಬಹುಶ್ರೇಯಸೀ+ಏ ಎಂದಿರುವಾಗ ಪ್ರತ್ಯಯಕ್ಕೆ ಆಡಾಗಮ ಹೇಳುತ್ತಾನೆ.

(ಜಿತ್ತಾದ ಸುಪಿಗೆ ಆಡಾಗಮ ಹೇಳುವ ಸೂತ್ರ)

೧೯೭. ಆಣ್ನದ್ಯಾಃ ॥ ೭-೩-೧೧೨ ॥

ನದ್ಯಂತಾತ್ಪರೇಷಾಂ ಜಿತಾಮಾಡಾಗಮಃ ।

ಆಟ್, ನದ್ಯಾಃ ॥ ದ್ವಿಪದ ಸೂತ್ರ. " ಅಂಗಸ್ಯ " ಅಧಿಕಾರ. ನದ್ಯಾಃ ಅಂಗಸ್ಯ ವಿಶೇಷಣ. " ಘೇರ್ಙಿತಿ " ಸೂತ್ರದಿಂದ " ಜಿತಿ " ಅನುವೃತ್ತವಾಗಿ ಷಷ್ಠ್ಯಂತವಾಗಿ ವಿಪರಿಣತವಾಗುತ್ತದೆ. " ಅಂಗಸ್ಯ " ಎಂಬದೂ ವಿಶೇಷಣಾನುಸಾರವಾಗಿ ಪಂಚಮ್ಯಂತವಾಗಿ ಪರಿಣಾಮ ಮಾಡಿಕೊಳ್ಳಬೇಕು. ಆಟ್ ಟಿತ್ತಾದುದರಿಂದ ಆಗಮ. **ಸೂತ್ರಾರ್ಥ**—ನದ್ಯಂತವಾದ ಅಂಗದ ಪರದಲ್ಲಿರುವ ಜಿತ್ ಪ್ರತ್ಯಯಗಳಿಗೆ ಆಡಾಗಮ ಬರುತ್ತದೆ. ಬಹುಶ್ರೇಯಸೀ ನದ್ಯಂತವಾದ ಅಂಗ. ಇದರ ಪರವಾದ ಜಿತ್ತಾದ (ಜ್+ಏ) ಏಗೆ ಆಡಾಗಮ. " ಆದ್ಯಂತೌ ಟಕಿತೌ " ಸೂತ್ರದಿಂದ ಟಿತ್ತಾದುದರಿಂದ ಆದ್ಯವಯವವಾಗಿ ಬಂದರೆ ಬಹುಶ್ರೇಯಸೀ+ಆ+ಏ ಎಂದಿರುವಾಗ ವೃದ್ಧಿ ಹೇಳುತ್ತಾನೆ.

(ಆಟಿನಲ್ಲಿ ವೃದ್ಧಿ ಹೇಳುವ ಸೂತ್ರ)

೧೯೮. ಆಟಶ್ಚ ॥ ೬-೧-೯೦ ॥

ಆಟೋಽಚಿ ಪರೇ ವೃದ್ಧಿರೇಕಾದೇಶಃ । ಬಹುಶ್ರೇಯಸ್ಯೈ ॥ ಬಹುಶ್ರೇಯಸ್ಯಾಃ । ಬಹುಶ್ರೇಯಸೀನಾಮ್ ।

ಆಟಃ, ಚ । ದ್ವಿಪದ ಸೂತ್ರ. " ಇಕೋಯಣಚಿ " ಸೂತ್ರದಿಂದ " ಅಚಿ " " ವೃದ್ಧಿರೇಚಿ " ಸೂತ್ರದಿಂದ, " ವೃದ್ಧಿಃ " ಅನುವೃತ್ತವಾಗುತ್ತದೆ. " ಏಕಃ ಪೂರ್ವಪರಯೋಃ " ಅಧಿಕಾರ. **ಸೂತ್ರಾರ್ಥ**—ಆಟಿಗೆ ಅಚ್ ಪರವಾದಾಗ ಪೂರ್ವ ಪರ ಸ್ಥಾನದಲ್ಲಿ ವೃದ್ಧಿಯು ಏಕಾದೇಶವಾಗಿ ಬರುತ್ತದೆ. ಬಹುಶ್ರೇಯಸೀ+ಆ+ಏ ಎಂದಿರುವಾಗ ಆ ಏಗಳಿಗೆ ವೃದ್ಧಿ ಐಕಾರ ಏಕಾದೇಶವಾಗಿ ಬಂದರೆ ಬಹುಶ್ರೇಯಸೀ+ಐ ಎಂದಾಗುತ್ತದೆ. ಯಣಾದೇಶ. ಬಹುಶ್ರೇಯಸ್ಯೈ. ಬಹುಶ್ರೇಯಸೀಭ್ಯಾಮ್-ಬಹುಶ್ರೇಯಸೀಭ್ಯಃ ॥

ಪಂಚಮಿಯಲ್ಲಿ ಜಸಿ ಪ್ರತ್ಯಯ ಜಿತ್ತಾದುದರಿಂದ " ಆಣ್ನದ್ಯಾಃ " ಸೂತ್ರದಿಂದ ಆಡಾಗಮ. ವೃದ್ಧಿ. ಪ್ರಕೃತಿಯೊಡನೆ ಯಣಾದೇಶ. ಬಹುಶ್ರೇಯಸೀ+ಆ+ಅಸ್, ಬಹುಶ್ರೇಯಸ್ಯಾಸ್. ಸಕಾರಕ್ಕೆ ರುತ್ವವಿಸರ್ಗ. ಬಹುಶ್ರೇಯಸ್ಯಾಃ-ಬಹುಶ್ರೇಯಸೀಭ್ಯಾಮ್-ಬಹುಶ್ರೇಯಸೀಭ್ಯಃ ॥

ಷಷ್ಠೀ ಏಕವಚನದಲ್ಲಿ ಹಿಂದಿನಂತ್ರೀ ರೂಪ. ಬಹುಶ್ರೇಯಸ್ಯಾಃ. ಓಸ್‌ಪರವಾದಾಗ ಯಣಾದೇಶ. ಸಕಾರಕ್ಕೆ ರುತ್ವವಿಸರ್ಗ. ಬಹುಶ್ರೇಯಸ್ಯೋಃ. ಬಹುವಚನದಲ್ಲಿ ಆಮ್ ಬಂದಾಗ ಬಹುಶ್ರೇಯಸೀ+ಆಮ್ ಎಂದಿರುವಾಗ ನದ್ಯಂತವಾದುದರಿಂದ " ಹ್ರಸ್ವನದ್ಯಾಪ್ಸೋನುಟ್ " ಸೂತ್ರದಿಂದ ಆಮಿಗೆ ನುಡಾಗಮ. ಬಹುಶ್ರೇಯಸೀ+ನ್+ಆಮ್ ಬಹುಶ್ರೇಯಸೀನಾಮ್.

ಸಪ್ತಮೀ ಏಕವಚನದಲ್ಲಿ ಜಿ ಪ್ರತ್ಯಯ. ಬಹುಶ್ರೇಯಸೀ+ಇ ಎಂದಿರುವಾಗ ಪ್ರತ್ಯಯಕ್ಕೆ ಆಮ್ ಆದೇಶಹೇಳುತ್ತಾನೆ.

(ಜಿಪ್ರತ್ಯಯಕ್ಕೆ ಆಮ್ ಹೇಳುವ ಸೂತ್ರ)

೧೯೯. ಜೇರಾಮ್ನದ್ಯಾಮ್ನೀಭ್ಯಃ ॥ ೭-೩-೧೧೩ ॥

ನದ್ಯಂತಾತ್, ಆಬಂತಾತ್, ನೀಶಬ್ದಾಚ್ಚ ಪರಸ್ಯ ಜೇರಾಮ್ ।
ಬಹುಶ್ರೇಯಸ್ಯಾಮ್। ಶೇಷಂ ಪಪೀವತ್ ॥

ಜೇಃ. ಆಮ್, ನದ್ಯಾಮ್ನೀಭ್ಯಃ । ತ್ರಿಪದಸೂತ್ರ. " ಅಂಗಸ್ಯ " ಅಧಿಕಾರ ಪಂಚಮ್ಯಂತವಾಗಿ ವಿಪರಿಣಾಮಮಾಡಿಕೊಳ್ಳಬೇಕು. ತದಂತವಿಧಿ. ಜೇಃ ಸಪ್ತಮ್ಯೇಕವಚನದ ಷಷ್ಠೀ . **ಸೂತ್ರಾರ್ಥ**—ನದ್ಯಂತವಾದ, ಆಬಂತವಾದ ಅಂಗದ, ನೀ ಶಬ್ದರೂಪ ಅಂಗದ ಪರದಲ್ಲಿರುವ ಜಿಪ್ರತ್ಯಯಕ್ಕೆ ಆಮ್ ಆದೇಶ. ಅನೇಕಾಲ್ ಆದುದರಿಂದ " ಅನೇಕಾಲ್ಶಿತ್ ಸರ್ವಸ್ಯ " ಸೂತ್ರದಿಂದ ಸರ್ವಾದೇಶ. ಬಹುಶ್ರೇಯಸೀ ನದ್ಯಂತವಾದುದರಿಂದ ಅದರ ಪರದ ಜಿಗೆ ಆಮ್ ಬಂದರೆ ಬಹುಶ್ರೇಯಸೀ+ಆಮ್ ಎಂದಿರುವಾಗ ಪ್ರತ್ಯಯ ಜಿತ್ತಾದುದರಿಂದ " ಆಣ್ನದ್ಯಾಃ " ಸೂತ್ರದಿಂದ ಆಟಾಗಮ. ಬಹುಶ್ರೇಯಸೀ+ಆ-ಆಮ್. ಸವರ್ಣದೀರ್ಘ. ಬಹುಶ್ರೇಯಸೀ+ಆಮ್ ಯಣ್. ಬಹುಶ್ರೇಯಸ್ಯಾಮ್. ದ್ವಿ ಬಹುವಚನಗಳಲ್ಲಿ ಬಹುಶ್ರೇಯಸ್ಯೋಃ-ಬಹುಶ್ರೇಯಸೀಷು. ಇಲ್ಲಿ ವಿಶೇಷಪ್ರಕ್ರಿಯೆ ಹೇಳದಿರುವಾಗ ಪಪೀ ಶಬ್ದದಂತೇ ರೂಪ.

ಈಕಾರಾಂತ ಅತಿಲಕ್ಷ್ಮೀ ಶಬ್ದ.

ಅತಿಲಕ್ಷ್ಮೀಃ । ಅಜ್ಯಂತತ್ವಾತ್ ನ ಸುಲೋಪಃ । ಶೇಷಂ ಬಹುಶ್ರೇಯಸೀವತ್ ॥

ಲಕ್ಷ್ಮೀಂ ಅತಿಕ್ರಾಂತಃ ಲಕ್ಷ್ಮಿಯನ್ನು ಮೀರಿದವನು, ಅತಿಲಕ್ಷ್ಮೀ. ಸಮಾಸದಲ್ಲಿ ಪುಲ್ಲಿಂಗ. ಲಕ್ಷ್ಮೀಶಬ್ದ ಜ್ಯಂತವಲ್ಲ. "ಲಕ್ಷೇರ್ಮುಟ್ ಚ" ಉಣಾದಿಸೂತ್ರದಿಂದ ಲಕ್ಷಧಾತುವಿಗೆ ಈ ಪ್ರತ್ಯಯ. ಮುಟ್ ಆಗಮ. ಲಕ್ಷ್+ಮ್+ಈ=ಲಕ್ಷ್ಮೀ. ಈ ಪ್ರತ್ಯಯಾಂತಶಬ್ದ ಅತಿಲಕ್ಷ್ಮೀ+ಸ್ ಎಂದಿರುವಾಗ ದೀರ್ಘವಾದರೂ ಜೀ ಪ್ರತ್ಯಯಾಂತವಲ್ಲದಿರುವುದರಿಂದ "ಹಲ್‌ಜ್ಯಾಭ್ಯೋ-" ಸೂತ್ರದಿಂದ ಸುವಿಗೆ ಲೋಪವಿಲ್ಲ. ರುತ್ವವಿಸರ್ಗ. ಅತಿಲಕ್ಷ್ಮೀಃ. ದ್ವಿಬಹುವಚನಗಳಲ್ಲಿ ಯಣ್. ಅತಿಲಕ್ಷ್ಮ್ಯೌ ಅತಿಲಕ್ಷ್ಮ್ಯಃ. ಇಲ್ಲಿಯೂ ಲಕ್ಷ್ಮೀಶಬ್ದಕ್ಕೆ ಪ್ರಾಧಾನ್ಯ ವಿಲ್ಲವಾದರೂ ಹಿಂದೆ ಹೇಳಿದ ವಾರ್ತಿಕದಿಂದ ಸಮಾಸವಾಗಬೇಕಾದರೆ ಮೊದಲು ನಿತ್ಯಸ್ತ್ರೀಲಿಂಗವಾದುದರಿಂದ ನದೀಸಂಜ್ಞೆ ಬರುತ್ತದೆ. ಆದುದರಿಂದ ಸಂಬುದ್ಧ್ಯಾದಿ ವಿಭಕ್ತಿಗಳಲ್ಲಿ ಬಹುಶ್ರೇಯಸೀ ಶಬ್ದದಂತೇ ಆಗುತ್ತದೆ. ಸಂ—ಹೇ ಅತಿಲಕ್ಷ್ಮಿ | ಹೇ ಅತಿಲಕ್ಷ್ಮ್ಯೌ | ಹೇ ಅತಿಲಕ್ಷ್ಮ್ಯಃ ॥ ದ್ವಿ—ಅತಿಲಕ್ಷ್ಮೀಂ | ಅತಿಲಕ್ಷ್ಮ್ಯೌ | ಅತಿಲಕ್ಷ್ಮೀನ್ ॥ ತೃತೀಯಾ—ಅತಿಲಕ್ಷ್ಮ್ಯಾ | ಅತಿಲಕ್ಷ್ಮೀಭ್ಯಾಂ | ಅತಿಲಕ್ಷ್ಮೀಭಿಃ ॥ ಚ—ಅತಿಲಕ್ಷ್ಮ್ಯೈ | ಅತಿಲಕ್ಷ್ಮೀಭ್ಯಾಂ | ಅತಿಲಕ್ಷ್ಮೀಭ್ಯಃ ॥ ಪ—ಅತಿಲಕ್ಷ್ಮ್ಯಾಃ | ಅತಿಲಕ್ಷ್ಮೀಭ್ಯಾಮ್ | ಅತಿಲಕ್ಷ್ಮೀಭ್ಯಃ ॥ ಷ—ಅತಿಲಕ್ಷ್ಮ್ಯಾಃ | ಅತಿಲಕ್ಷ್ಮ್ಯೋಃ | ಅತಿಲಕ್ಷ್ಮೀನಾಮ್ ॥ ಸ—ಅತಿಲಕ್ಷ್ಮ್ಯಾಮ್ | ಅತಿಲಕ್ಷ್ಮ್ಯೋಃ | ಅತಿಲಕ್ಷ್ಮೀಷು ॥

ಈಕಾರಾಂತ ಪ್ರಧೀ ಶಬ್ದ

ಪ್ರಧೀಃ ॥

ಪ್ರಧ್ಯಾಯತಿ—ಚನ್ನಾಗಿ ಧ್ಯಾನಮಾಡುವವನು, ಪ್ರಧೀಃ ॥ ಪ್ರಕೃಷ್ಟಾಧೀಃ ಯಸ್ಯ ಸಃ—ಉತ್ಕೃಷ್ಟವಾದ ಬುದ್ಧಿಯುಳ್ಳವನು, ಪ್ರಧೀಃ "ಧ್ಯಾಯತೇಃ ಸಂಪ್ರಸಾರಣಂಚ" ಸೂತ್ರದಿಂದ ಧ್ಯೈ ಧಾತುವಿಗೆ ಈ ಪ್ರತ್ಯಯ ಬಂದು ಧೀ ಆಗಿದೆ ಇದು ಈ ಪ್ರತ್ಯಯಾಂತ ಶಬ್ದ. ಜ್ಯಂತವಲ್ಲ. ಆದುದರಿಂದ ಪ್ರಥಮಾ ಸುವಿಗೆ "ಹಲ್‌ಜ್ಯಾದಿ"—ಸೂತ್ರದಿಂದ ಲೋಪವಿಲ್ಲ. ರುತ್ವ ವಿಸರ್ಗ. ಪ್ರಧೀಃ. ದ್ವಿವಚನದಲ್ಲಿ ಔ ಪರವಾದಾಗ ಪ್ರಧೀ=ಔ ಎಂದಿರುವಾಗ ಈಕಾರಕ್ಕೆ ಇಯಜ್ ಆದೇಶ ಆಶಂಕಿಸುತ್ತಾನೆ.

(ಇಯಜ್ ಉವಜ್ ಆದೇಶ ಹೇಳುವ ಸೂತ್ರ)

೨೦೦. ಅಚಿ, ಶ್ನುಧಾತುಭ್ರುವಾಂ, ಯ್ವೋರಿಯಜುವಜೌ॥

೬-೪-೭೭ ॥

ಶ್ನುಪ್ರತ್ಯಯಾಂತಸ್ಯೇವರ್ಣೋವರ್ಣಾಂತಸ್ಯ ಧಾತೋರ್ಭ್ರೂ ಇತ್ಯಸ್ಯ

ಚಾಂಗಸ್ಯೇಯಜುವಜೌ ಸ್ತ್ರೋಽಜಾದಾ ಪ್ರತ್ಯಯೇ ಪರೇ। ಇತಿ ಪ್ರಾಪ್ತೇ ॥

ಅಚಿ, ಶ್ನುಧಾತುಭ್ರುವಾಂ, ಯ್ವೋಃ, ಇಯಜುವಜೌ॥ ನಾಲ್ಕು ಪದವುಳ್ಳ ಸೂತ್ರ. ಇಶ್ಚ ಉಶ್ಚ ಯೂ. ತಯೋಃ ಯ್ವೋಃ. ಇಕಾರ ಉಕಾರಗಳಿಗೆ ಎಂದರ್ಥ. ಇದು ಶ್ನುಧಾತುಭ್ರುವಾಂ ಎಂಬಲ್ಲಿರುವ ಧಾತುವಿನಲ್ಲಿ ಮಾತ್ರ ವಿಶೇಷಣ. ಶ್ನುಭ್ರುಯಾವಾಗಲೂ ಉವರ್ಣಾಂತವಾದುದರಿಂದ ಅಲ್ಲಿ ಹೇಳಬೇಕಾಗಿಲ್ಲ. ವಿಶೇಷಣವಾದುದರಿಂದ ತದಂತಲಾಭ. ಇಕಾರಾಂತ ಉಕಾರಾಂತ ಧಾತುವಿಗೆ ಎಂದರ್ಥ. ಅಂಗಾಧಿಕಾರವಿರುವುದರಿಂದ "ಪ್ರತ್ಯಯೇ" (ಪ್ರತ್ಯಯ ಪರವಾದಾಗ) ಎಂದು ಲಬ್ಧವಾಗುತ್ತದೆ. ಅದಕ್ಕೆ "ಅಚಿ" ಸಪ್ತಮ್ಯಂತವು ವಿಶೇಷಣವಾದುದರಿಂದ "ಯಸ್ಮಿನ್‌ವಿಧಿಃ"—ಪರಿಭಾಷೆಯಿಂದ ಅಜಾದಿ ಪ್ರತ್ಯಯ ಪರವಾದಾಗ ಎಂದರ್ಥವಾಗುತ್ತದೆ. ಶ್ನುಪ್ರತ್ಯಯವಾದುದರಿಂದ ಪ್ರತ್ಯಯ ಗ್ರಹಣ—ಪರಿಭಾಷೆಯಿಂದ ತದಂತಲಾಭ. **ಸೂತ್ರಾರ್ಥ**—ಶ್ನುಪ್ರತ್ಯಯಾಂತವಾದ ಅಂಗಕ್ಕೂ ಇವರ್ಣ, ಉವರ್ಣಾಂತ ಧಾತುರೂಪ ಅಂಗಕ್ಕೂ ಭ್ರೂ ಶಬ್ದಕ್ಕೂ ಅಜಾದಿ ಪ್ರತ್ಯಯ ಪರದಲ್ಲಿರುವಾಗ ಇಯಜ್ ಉವಜ್ ಆದೇಶ ಬರುತ್ತವೆ. ಅನೇಕಾಲಾದರೂ ಜಿತ್ತಾದುದರಿಂದ "ಜಿಚ್ಚ" ಸೂತ್ರದಿಂದ ಅಂತ್ಯಕ್ಕೆ ಆದೇಶ. ಇಕಾರಕ್ಕೆ ಇಯಜ್, ಉಕಾರಕ್ಕೆ ಉವಜ್ ಬರುತ್ತದೆ. ಪ್ರಕೃತ ಪ್ರಧೀ ಎಂಬುದು ಇಕಾರಾಂತವಾದ (ಇ=18 ಭೇದ) ಧಾತುವಾದುದರಿಂದ ಅದಕ್ಕೆ "ಔ" ಅಜಾದಿ ಪ್ರತ್ಯಯ ಪರವಾದುದರಿಂದ ಈಕಾರಕ್ಕೆ ಇಯಜ್ ಆದೇಶ ಪ್ರಾಪ್ತವಾದರೆ ಅದಕ್ಕೆ ಅಪವಾದವಾಗಿ ಯಣ್ ಹೇಳುತ್ತಾನೆ.

(ಧಾತುವಿನ ಇಕಾರಕ್ಕೆ ಯಣ್ ಹೇಳುವ ಸೂತ್ರ)

೨೦೧. ಏರನೇಕಾಚೋಽಸಂಯೋಗಪೂರ್ವಸ್ಯ ॥

೬-೪-೮೨ ॥

ಧಾತ್ವವಯವಸಂಯೋಗಪೂರ್ವೋ ನ ಭವತಿ ಯ ಇವರ್ಣಸ್ತದಂತೋ ಯೋ ಧಾತುಸ್ತದಂತಸ್ಯಾನೇಕಾಚೋಽಂಗಸ್ಯ ಯಣಜಾದೌ ಪ್ರತ್ಯಯೇ ॥ ಪ್ರಧ್ಯೌ । ಪ್ರಧ್ಯಃ । ಪ್ರಧ್ಯಮ್ । ಪ್ರಧ್ಯೌ । ಪ್ರಧ್ಯಃ । ಶೇಷಂ ಪಪೀವತ್ ॥ ಏವಂ ಗ್ರಾಮಣೀಃ । ಜೌತು ಗ್ರಾಮಣ್ಯಾಮ್ । ಅನೇಕಾಚಃ ಕಿಮ್ ? ನೀಃ । ನಿಯೌ । ನಿಯಃ । ಅಮಿ ಶಸಿ ಚ ಪರತ್ವಾದಿಯಜ್, ನಿಯಮ್ । ಜೀರಾಮ್, ನಿಯಾಮ್ ॥

ಅಸಂಯೋಗಪೂರ್ವಸ್ಯ ಕಿಮ್ ? ಸುಶ್ರಿಯಾ । ಯವಕ್ರಿಯಾ ॥

ಏಃ, ಅನೇಕಾಚಃ. ಅಸಂಯೋಗಪೂರ್ವಸ್ಯ ॥ ತ್ರಿಪದಸೂತ್ರ. " ಇಜ್ಞೋ ಯಣ್ " ಸೂತ್ರದಿಂದ ಯಣ್ ಅನುವೃತ್ತವಾಗುತ್ತದೆ. " ಅಚಿಶ್ನುಧಾತುಭ್ರುವಾಂ " ಸೂತ್ರದಲ್ಲಿ ಧಾತುಪದವು ಸಮಾಸದಲ್ಲಿ ಸೇರಿದ್ದರೂ ಇಲ್ಲಿ ಇಕಾರಾನ್ವಯಾನುಸಾರದಿಂದ ಅನುವೃತ್ತವಾಗುತ್ತದೆ. ಶ್ನು ಭ್ರು ಉಕಾರಾಂತಗಳು. "ಧಾತೋಃ" ಷಷ್ಠ್ಯಂತವು ಅನುವೃತ್ತವಾಗಿ ಆವೃತ್ತವಾಗುತ್ತದೆ, ಧಾತೋಃ ಧಾತೋಃ ಎರಡುಸಲ ಹೇಳಿ ಕೊಳ್ಳಬೇಕು. ಒಂದು ಅವಯವಷಷ್ಠ್ಯಂತ. ಇನ್ನೊಂದು ಸ್ಥಾನಷಷ್ಠ್ಯಂತ. ಅನಯವಷಷ್ಠ್ಯಂತವಾದ " ಧಾತೋಃ " ಎಂಬುದು " ಅಸಂಯೋಗಪೂರ್ವಸ್ಯ " ಎಂಬಲ್ಲಿರುವ ಸಂಯೋಗ ಪದದಲ್ಲಿ ಅನ್ವಯ ಹೊಂದುತ್ತದೆ, ಧಾತ್ವವಯಸಂಯೋಗ ಪೂರ್ವೋ ಯಸ್ಮಾತ್ ಸಃ ಧಾತ್ವವಯವಸಂಯೋಗಪೂರ್ವಃ, ತದ್ಭಿನ್ನಃ ಅಸಂಯೋಗ ಪೂರ್ವಃ. ಧಾತುವಿನ ಅವಯವವಾದ ಸಂಯೋಗವು ಪೂರ್ವದಲ್ಲಿ ಇರಬಾರದು. (ಇಕಾರಕ್ಕೆ) ಏಃ ಇಕಾರದ ಷಷ್ಠ್ಯಂ. ಇದು " ಧಾತೋಃ " ಎಂಬುದಕ್ಕೆ ವಿಶೇಷಣ. ತದಂತವಿಧಿಯಿಂದ ಇಕಾರಾಂತಧಾತುವೆಂದು ಲಬ್ಧವಾಗುತ್ತದೆ. " ಅಂಗಸ್ಯ " ಅಧಿಕಾರ. " ಧಾತೋಃ " ಅದಕ್ಕೆ ವಿಶೇಷಣವಾದುದರಿಂದ ಇಕಾರಾಂತ ಧಾತ್ವಂತವಾದ ಅಂಗಕ್ಕೆ ಎಂದರ್ಥವಾಗುತ್ತದೆ. ಅನೇಕಃ ಅಚ್ ಯಸ್ಯ ಸಃ ಅನೇಕಾಚ್. ತಸ್ಯ. ಅಂಗದಲ್ಲಿ ಅನ್ವಯ, ಅಂಗದಿಂದ ಆಕ್ಷಿಪ್ತವಾದ ಪ್ರತ್ಯಯಕ್ಕೆ " ಅಜಿ " ಪೂರ್ವಸೂತ್ರದಿಂದ ಅನುವೃತ್ತವಾಗಿ ವಿಶೇಷಣವಾದುದರಿಂದ (ಅದು ಸಪ್ತಮ್ಯಂತವಾದುದರಿಂದ) ಅಜಾದಿ ಪ್ರತ್ಯಯ ಎಂದರ್ಥವಾಗುತ್ತದೆ. **ಸೂತ್ರಾರ್ಥ**–ಧಾತ್ವವಯವ ಸಂಯೋಗವು ಪೂರ್ವದಲ್ಲಿಲ್ಲದಿರುವ ಇಕಾರನೇಅಂತವಾದ ಧಾತುವೇ ಕೊನೆಪ್ಪಿಯಲ್ಲಿರುವ ಅನೇಕಾಚಾದ ಅಂಗಕ್ಕೆ ಅಜಾದಿ ಪ್ರತ್ಯಯ ಪರವಾದಾಗ ಯಣಾದೇಶ ಬರುತ್ತದೆ. ಪ್ರಕೃತ ಪ್ರಧೀ ಶಬ್ದದಲ್ಲಿ ಧೀ–ಧಾತು. ಅದರ ಅವಯವ ಧಕಾರ. ಅದು ಸಂಯೋಗನಲ್ಲ. ಅದೇ ಪೂರ್ವದಲ್ಲಿರುವ ಈಕಾರ ಧೀಯಲ್ಲಿರುವ ಈಕಾರ. ಇದೇ ಅಂತವಾಗಿರುವ ಧಾತು ಧೀ. ಈ ಧಾತುವೇ ಅಂತವಾಗಿರುವ ಅನೇಕಾಚಾದ ಅಂಗ ಪ್ರಧೀ. ಇದಕ್ಕೆ ಔರೂಪ ಅಜಾದಿಪ್ರತ್ಯಯ ಪರವಾದುದರಿಂದ ಯಣ್. " ಅಲೋಂತ್ಯಸ್ಯ " ಪರಿಭಾಷೆಯಿಂದ ಅಂಗದ ಅಂತ್ಯ ಇಕಾರಕ್ಕೆ ಯಣ್ ಬಂದರೆ ಪ್ರಧ್+ಯ್+ಔ=ಪ್ರಧ್ಯ್. ಜಸ್, ಅಮ್, ಟೌಟ್, ಶಸ್‌ಗಳಲ್ಲಿಯೂ ಅಜಾದಿಯಾದುದರಿಂದ ಈ ಸೂತ್ರದಿಂದಲೇ ಯಣಾದೇಶ. ಪ್ರಧ್ಯಃ । ದ್ವಿ ಪ್ರಧ್ಯಮ್–ಪ್ರಧ್ಯೌ–ಪ್ರಧ್ಯಃ ॥ ಇನ್ನುಮುಂದೆ ಪಪೀಶಬ್ದದಂತೆ ರೂಪ. ಅಜಾದಿಯಲ್ಲಿ ಯಣಾದೇಶ. ಹಲಾದಿಯಲ್ಲಿ ಕೇವಲವಿಭಕ್ತಿಸೇರಿಸುವುದು. ತೃ—ಪ್ರಧ್ಯಾ । ಪ್ರಧೀಭ್ಯಾಮ್ । ಪ್ರಧೀಭಿಃ ॥ ಙ—ಪ್ರಧ್ಯೈ । ಪ್ರಧೀಭ್ಯಾಮ್ । ಪ್ರಧೀಭ್ಯಃ ॥ ಪಂ—ಪ್ರಧ್ಯಃ । ಪ್ರಧೀ

ಭ್ಯಾಮ್ । ಪ್ರಧೀಭ್ಯಃ ॥ ಷ—ಪ್ರಧ್ಯಃ । ಪ್ರಧ್ಯೋಃ । ಪ್ರಧ್ಯಾಮ್ ॥ ಸ—ಪ್ರಧ್ಯಿ । ಪ್ರಧೀಷು ॥

(ಪ್ರಧೀ+ಇ=ಪ್ರಧ್+ಯ್+ಇ=ಪ್ರಧ್ಯಿ)

ಏವಂ ಗ್ರಾಮಣೀಃ. ಹೀಗೆಯೆ ೀ ಗ್ರಾಮಣೀ. ಶಬ್ದ. ಗ್ರಾಮಂ ನಯತಿ–ಗ್ರಾಮದ ಮುಖಂಡ ಪಟೇಲ ಸುವಿಗೆ ರುತ್ವವಿಸರ್ಗ. ಗ್ರಾಮಣೀಃ (ನೀಗೆ ಣತ್ವ) ಅಜಾದಿಯಲ್ಲಿ ಅಸಂಯೋಗಪೂರ್ವಕ ಇಕಾರಾಂತ ಧಾತುವೇ ಅಂತವಾಗಿರುವ ಅನೇಕಾಚಾದ ಅಂಗವಾದುದರಿಂದ ಯಣಾದೇಶ. ಗ್ರಾಮಣ್ಯೌ–ಗ್ರಾಮಣ್ಯಃ ॥ ಇತ್ಯಾದಿ ಪಿಂಡಿನಂತೇ ರೂಪ. ಸಪ್ತಮೀ ಏಕವಚನದಲ್ಲಿ ಮಾತ್ರ ಗ್ರಾಮಣೀ+ಇ ಎಂದಿರುವಾಗ ನೀಶಬ್ದದಪರದಲ್ಲಿ ಜಿ ಬಂದುದರಿಂದ " ಜೀರಾಮ್ ನದ್ಯಾಮ್ನೀಭ್ಯಃ " ಸೂತ್ರದಿಂದ ಅದಕ್ಕೆ ಆಮ್ ಆದೇಶ. ಗ್ರಾಮಣೀ+ಆಮ್. ಯಣ್ ಗ್ರಾಮಣ್ಯಾಮ್. ಗ್ರಾಮಣ್ಯೋಃ ಗ್ರಾಮಣೀಷು.

ಸೂತ್ರದ ದಳದ ಪ್ರಯೋಜನವನ್ನು ಹೇಳುತ್ತಾನೆ. ಅನೇಕಾಜಃ ಕಿಮ್ ? ಅಂಗವು ಅನೇಕಾಚಾಕಿರಬೇಕೆಂಬುದೇಕೆ ? ನೀಃ–ನಿಯೌ–ನಿಯಃ ॥ ನಯತಿ ಇತಿ ನೀಃ. ಒಯ್ಯುವವ ನೀ ಧಾತು (ಣೀಞ್–ಪ್ರಾಪಣೇ) ಇಕಾರಾಂತ ಧಾತುವೇ ಅಂತವಾದ ಅಂಗವೆಂದರೆ ನೀ. ಇಕಾರದ ಹಿಂದೆ ಸಂಯೋಗವೂ ಇಲ್ಲ. ಸೂತ್ರದಲ್ಲಿ ಅನೇಕಾಚ್ ಪದವಿಲ್ಲವಾದರೆ ಇಲ್ಲಿಯೂ ಯಣ್ ಬರಬೇಕಾಗುತ್ತದೆ. (ಇಲ್ಲಿ ಯಣ್ ಬಾರದಿರಲು ಅನೇಕಾಜಃ ಎಂದಿದೆ) ಯಣ್ ಬಾರದಿದ್ದರೆ ಸಾಮಾನ್ಯಸೂತ್ರದಿಂದ(೨೦೦) ಇಯಜ್ ಆದೇಶ. " ಅಚಿಶ್ನು ಧಾತು ಭ್ರುವಾಂ"–ಸೂತ್ರದಲ್ಲಿ ಇಕಾರಾಂತ ಧಾತುವಿನ ಇಕಾರಕ್ಕೆ ಇಯಜ್ ಹೇಳಿದೆ. ಇಯಜ್‌ನಲ್ಲಿ ಜಕಾರ " ಹಲಂತ್ಯಮ್ " ಸೂತ್ರದಿಂದ ಇತ್ ಸಂಜ್ಞೆ ಬಂದು ಲೋಪವಾಗುತ್ತದೆ. ಅಕಾರ ಉಚ್ಚಾರಣಾರ್ಥ. ನ್+ಇಯ್+ಔ=ನಿಯೌ–ನಿಯಃ ಇತ್ಯಾದಿ. ಅಜಾದಿಯ.ಲ್ಲಿ ಇಯಜಾದೇಶ ವಿಶೇಷ. ಹಲಾದಿಯಲ್ಲಿ ಕಾರ್ಯವಿಲ್ಲ. ಅಮಿನಲ್ಲಿಯೂ ಶಸಿನಲ್ಲಿಯೂ ಪೂರ್ವರೂಪ, ಸವರ್ಣದೀರ್ಘವನ್ನು ಬಾಧಿಸಿ ಪರವಾದುದರಿಂದ ಇಯಜ್ ಆದೇಶವೇ ಬರುತ್ತದೆ. ಸಪ್ತಮೀ ಏಕವಚನದಲ್ಲಿ ಜಿಗೆ ಹಿಂದಿನಂತೇ " ಜೀರಾಮ್ ನದ್ಯಾಮ್ನೀಭ್ಯಃ " ಸೂತ್ರದಿಂದ ಆಮ್ ಆದೇಶ. ಈಕಾರಕ್ಕೆ ಇಯಜ್ ನಿಯಾಮ್. ನಿಯೋಃ–ನೀಷು ॥ ಅಸಂಯೋಗಪೂರ್ವಸ್ಯ ಕಿಮ್ ? ಧಾತುವಿನ ಇಕಾರದ ಹಿಂದೆ ಸಂಯೋಗವಿರಬಾರದು ಎಂದುದೇಕೆ? ಸುಶ್ರಿಯಾ–ಸುಶ್ರಿಯಃ॥ ಯವಕ್ರಿಯಾ॥ ಇಲ್ಲಿ ಯಣ್ ಬರುವುದಿಲ್ಲ. "ಅಚಿಶ್ನು ಧಾತು"-ಸೂತ್ರದಿಂದ ಇಯಜಾದೇಶ ಬಂದಿದೆ. ಸು ಶ್ರಯತಿ ಇತಿ ಸುಶ್ರೀಃ. ಚನ್ನಾಗಿ ಸೇವಿಸುವವನು. ಇಲ್ಲಿ ಧಾತು ಇಕಾರಾಂತವಾಗಿದೆ. ಆ ಧಾತುವೇ ಅಂತವಾದ ಅನೇಕಾಚಾದ ಅಂಗವೂ ಇದೆ. ಆದರೆ ಇಕಾರದ ಹಿಂದೆ ಸಂಯೋಗವಿದೆ. ಸುಶ್+ರ್+ಈ+ಟ್.

ಆದುದರಿಂದ ಯಣ್ ಬರುವುದಿಲ್ಲ. ಇಯಜ್ ಬಂದರೆ ಸುಶ್ರಿಯೌ ಇತ್ಯಾದಿ. ಯವಂ ಕ್ರೀಣಾತಿ ಇತಿ ಯವಕ್ರೀಃ. ಭತ್ತ ಮಾರುವವನು. ಇಲ್ಲಿಯೂ ಧಾತುವಿನ ಇಕಾರದ ಹಿಂದೆ ಧಾತುವಿನ ಅವಯವವಾದ ಸಂಯೋಗವಿದೆ. ಆದುದರಿಂದ ಯಣ್ ಬರಲಿಲ್ಲ. ಅಜಾದಿ ಪ್ರತ್ಯಯ ಪರವಾದಾಗ ಇಯಜ್. ಯವಕ್ರಿಯೌ ಇತ್ಯಾದಿ ಊಹಿಸಿಕೊಳ್ಳಬೇಕು.

ಈಕಾರಾಂತ ಶುದ್ಧಧೀ ಶಬ್ದ

ಶುದ್ಧಾ ಧೀಃ ಯಸ್ಯ ಸಃ ಶುದ್ಧಧೀಃ. ಶುದ್ಧವಾದ ಬುದ್ಧಿಯುಳ್ಳವನು. ಸುವಿನ ರುತ್ವವಿಸರ್ಗ. ಶುದ್ಧಧೀಃ ॥ ದ್ವಿವಚನದಲ್ಲಿ ಔಪರವಾದಾಗ ಪ್ರಧೀಶಬ್ದದಂತೆ ಯಣ್ ಪ್ರಾಪ್ತವಾದರೆ ವಾರ್ತಿಕದಿಂದ ನಿಷೇಧಹೇಳುತ್ತಾನೆ. ಅದಕ್ಕೊಸ್ಕರ ಮೊದಲು " ಗತಿ " ಎಂಬ ಸಂಜ್ಞೆ ಹೇಳುತ್ತಾನೆ.

(ಗತಿ ಸಂಜ್ಞೆ ಹೇಳುವ ಸೂತ್ರ)

೨೦೨. ಗತಿಶ್ಚ ॥೧-೪-೬೦ ॥

ಪ್ರಾದಯಃ ಕ್ರಿಯಾಯೋಗೇ ಗತಿಸಂಜ್ಞಾಃ ಸ್ಯುಃ ।

ಗತಿಃ, ಚ ॥ ದ್ವಿಪದಸೂತ್ರ. "ಉಪಸರ್ಗಾಃ ಕ್ರಿಯಾಯೋಗೇ" " ಪ್ರಾದಯಃ " ಸೂತ್ರಗಳು ಅನುವೃತ್ತವಾಗುತ್ತವೆ. ಕ್ರಿಯಾಯಾಃ ಯೋಗಃ ಕ್ರಿಯಾಯೋಗಃ ತಸ್ಮಿನ್ ಕ್ರಿಯಾಯೋಗೇ. **ಸೂತ್ರಾರ್ಥ**–ಪ್ರಾದಿಗಳು ಕ್ರಿಯಾಸಂಬಂಧ ವಿರುವಾಗ 'ಗತಿ' ಎಂಬ ಸಂಜ್ಞೆಯನ್ನು ಹೊಂದುತ್ತವೆ. ಹಿಂದೆ ಉಪಸರ್ಗಸಂಜ್ಞೆಯು ಇವುಗಳಿಗೆ ಹೇಳಿವೆ. ಕ್ರಿಯಾಸಂಬಂಧವಿರುವಾಗ ಎರಡು ಸಂಜ್ಞೆಹೇಳಿದಂತಾಯಿತು. ಪ್ರಾದಿಗಳು ಇಪ್ಪತ್ತೆರಡೆಂದು ಹಿಂದೆ ಹೇಳಿದೆ.

(ಯಣ್‌ನಿಷೇಧಮಾಡುವ ವಾರ್ತಿಕ)

ವಾ॥ (ಗತಿಕಾರಕೇತರ ಪೂರ್ವಪದಸ್ಯ ಯಣ್ ನೇಷ್ಯತೇ ॥) ಶುದ್ಧ ಧಿಯೌ॥

ಗತಿ, ಕಾರಕಾಭ್ಯಾಂ ಇತರತ್, ಪೂರ್ವಂ ಪದಂ ಯಸ್ಯ ॥ ಗತಿಕಾರಕಗಳಿಗಿಂತಲೂ ಬೇರೆಯಾದ ಪದವು ಪೂರ್ವಪದವಾಗಿರುವ ಅಂಗದ ಇಕಾರಕ್ಕೆ ಯಣ್ ಬರುವುದಿಲ್ಲ. ಗತಿಸಂಜ್ಞೆ ಇಲ್ಲಿಹೇಳಿದೆ. ಕಾರಕವೆಂದರೆ ಕರ್ಮಾದಿ ಆರು ಎಂದು ಮುಂದೆ ಹೇಳುತ್ತಾನೆ. ಪ್ರಕೃತ ಶುದ್ಧಧೀಶಬ್ದದಲ್ಲಿ ಶುದ್ಧವೆಂಬುದು ಪೂರ್ವಪದ. ಇದು ಗತಿಯೂ ಅಲ್ಲ. ಕಾರಕವೂ ಅಲ್ಲ. ಆದುದರಿಂದ ಈ ವಾರ್ತಿಕದಿಂದ ಯಣ್‌ನಿಷೇಧ. ಯಜ್‌ಬಾರದಿದ್ದರೆ " ಅಚಿಶ್ನುಧಾತುಭ್ರುವಾಮ್"–ಸೂತ್ರದಿಂದ ಅಜಾದಿಪ್ರತ್ಯಯಪರವಾದಾಗ ಎಲ್ಲಾಕಡೆಯಲ್ಲಿಯೂ ಇಯಜಾದೇಶ. ಶುದ್ಧಧಿಯೌ—ಶುದ್ಧಧಿಯಃ ಇತ್ಯಾದಿ

ರೂಪಗಳನ್ನು ಊಹಿಸಿಕೊಳ್ಳಬೇಕು. ಪರಾದಿಯಲ್ಲಿ ಕೇವಲ ಪ್ರತ್ಯಯ ಸೇರಿಸುವುದು ಮಾತ್ರ.

ಸುಧೀ ಶಬ್ದ. (ಒಳ್ಳೆಯ ಬುದ್ಧಿಯುಳ್ಳವನು.)

ಶೋಭನಾ ಧೀಃ ಯಸ್ಯ ಸಃ, ಸುಧೀಃ। ಪ್ರಥಮಾ ಸುಪರವಾದಾಗ ರುತ್ವವಿಸರ್ಗ. ಸುಧೀಃ ದ್ವಿವಚನದಲ್ಲಿ ಔ ಪರವಾದಾಗ ಮೊದಲು " ಅಚಿಶ್ನುಧಾತುಭ್ರುವಾಂ"–ಸೂತ್ರದಿಂದ ಈಕಾರಕ್ಕೆ ಇಯಜಾದೇಶ ಪ್ರಾಪ್ತವಾದರೆ ಅದಕ್ಕೆ ಅಪವಾದವಾಗಿ " ಏರನೇಕಾಚೋಽ ಸಂಯೋಗಪೂರ್ವಸ್ಯ " ಸೂತ್ರದಿಂದ ಯಣಾದೇಶ ಬರುತ್ತದೆ. ಇಲ್ಲಿ ಗತಿಪೂರ್ವವಾದುದರಿಂದ ವಾರ್ತಿಕದಿಂದ ನಿಷೇಧವಿಲ್ಲ. ಆದರೆ ಯಣ್ ನಿಷೇಧವನ್ನು ಸೂತ್ರದಿಂದ ಹೇಳುತ್ತಾನೆ.

(ಭೂ, ಸುಧೀ ಶಬ್ದಗಳಿಗೆ ಯಣ್ ನಿಷೇಧ ಹೇಳುವ ಸೂತ್ರ)

೨೦೩. ನ, ಭೂಸುಧಿಯೋಃ ॥ ೬-೪-೮೫

ಏತಯೋರಚಿ ಸುಪಿ ಯಣ್ನ ॥ ಸುಧಿಯೌ । ಸುಧಿಯ ಇತ್ಯಾದಿ ॥

ಸುಖಮಿಚ್ಛತೀತಿ ಸುಖೀಃ । ಸುಖ್ಯೌ । ಸುಖ್ಯಃ । ಸುತಮಿಚ್ಛತೀತಿ ಸುತೀಃ । ಸುತ್ಯೌ । ಸುತ್ಯಃ । ಶೇಷಂ ಪ್ರಧೀವತ್ ॥

ದ್ವಿಪದ ಸೂತ್ರ. " ಇಕೋಯಣಚಿ " ಸೂತ್ರದಿಂದ " ಅಚಿ " " ಇಣೋಯಣ್" ಸೂತ್ರದಿಂದ " ಯಣ್ " " ಓಃ ಸುಪಿ " ಸೂತ್ರದಿಂದ " ಸುಪಿ " ಶಬ್ದಗಳು ಅನುವೃತ್ತವಾಗುತ್ತವೆ. ಅಚಿ ಎಂಬುದು ಸುಪಿ ಎಂಬ ಸಪ್ತಮಂತ್ಯಕ್ಕೆ ವಿಶೇಷಣವಾದುದರಿಂದ " ಯಸ್ಮಿನ್ ವಿಧಿಃ"–ಪರಿಭಾಷೆಯಿಂದ ತದಾದಿಲಾಭ. **ಸೂತ್ರಾರ್ಥ**—ಭೂ, ಸುಧೀ ಶಬ್ದಗಳಿಗೆ ಅಜಾದಿಯಾದ ಸುಪ್ ಪರವಾದಾಗ ಯಣ್ ಬರುವುದಿಲ್ಲ. ಸುಧೀ+ ಔ ಎಂದಿರುವಾಗ ಯಣ್ ನಿಷೇಧ ಬಂದರೆ ಸಾಮಾನ್ಯ ಸೂತ್ರದಿಂದ (ಅಚಿಶ್ನುಧಾ–) ಇಯಜಾದೇಶ. ಸುಧಿಯೌ–ಸುಧಿಯಃ ಇತ್ಯಾದಿ. ಅಜಾದಿಯಲ್ಲಿ ಇಯಜಾದೇಶ. ಹಲಾದಿಯಲ್ಲಿ ಕೇವಲ ಪ್ರತ್ಯಯ ಸೇರಿಸುವುದು ಮಾತ್ರ.

ಸುಖೀ ಶಬ್ದ । ಸುಖವನ್ನು ಬಯಸುವವನು. ಇಚ್ಛಾರ್ಥ ತೋರುವಾಗ ಸುಖ ಶಬ್ದದ ಮೇಲೆ ಕ್ಯಚ್ (ಸುಪ ಆತ್ಮನಃ ಕ್ಯಚ್) ಪ್ರತ್ಯಯ. ಕ್ಯಚಿನಲ್ಲಿ " ಯ " ಉಳಿಯುತ್ತದೆ. ಸುಖ+ಯ ಎಂದಿರುವಾಗ " ಕ್ಯಚಿ ಚ " ಸೂತ್ರದಿಂದ ಖಕಾರದ ಮೇಲಿರುವ ಅಕಾರಕ್ಕೆ ಈಕಾರ. ಸುಖೀಯ ಶಬ್ದದ ಮೇಲೆ ಕ್ವಿಪ್ ಪ್ರತ್ಯಯ. ಕ್ವಿಪಿನಲ್ಲಿ ಸರ್ವವೂ ಲೋಪವಾಗುತ್ತದೆ. ಕ್ವಿಪನ್ನು ನಿಮಿತ್ತೀಕರಿಸಿ ಕ್ಯಚಿಗೂ ಲೋಪ. ಸುಖೀ ಉಳಿಯುತ್ತದೆ. ಕೃದಂತವಾದುದರಿಂದ " ಕೃತ್ತದ್ಧಿತಸಮಾಸಾಶ್ಚ " ಸೂತ್ರದಿಂದ ಪ್ರಾತಿಪದಿಕಸಂಜ್ಞಾ. ಹೀಗೆಯೇ ಸುತಮಿಚ್ಛತಿ. (ಮಗನನ್ನು ಬಯಸುವವನು)

ಎಂಬರ್ಥದಲ್ಲಿಯೂ ಹಿಂದಿನಂತೆಯೇ ಕ್ಯಚ್–ಕ್ವಿಪ್. ಸುತೀ ಆಗುತ್ತದೆ. ಇವುಗಳಿಗೆ ಸುಪರವಾದಾಗ ರುತ್ವವಿಸರ್ಗ. ಸುಖೀಃ, ಸುತೀಃ. ದ್ವಿವಚನದಲ್ಲಿ ಔ ಪರವಾದಾಗ ಇಯಙಿಗೆ ಅಪವಾದವಾಗಿ ಯಣ್. ಸುಖ್ಯೌ ಸುತ್ಯೌ. ॥ ಜಸ್–ಸುಖ್ಯಃ=ಸುತ್ಯಃ ॥ ಪ್ರಧೀಶಬ್ದದಂತೇರೂಪ. ಆದರೆ ಪಂಚಮಿಷಷ್ಠೀ ಏಕವಚನದಲ್ಲಿ ಅಸ್‌ಪರವಾದಾಗ ಯಣ್ ಬಂದರೆ ಸುಖ್ಯಃ, ಸುತ್ಯಃ ಎಂದಾದಾಗ ಖೀ–ತೀ ಶಬ್ದಗಳಿಗೆ ಯಣ್‌ಬಂದು ಅದರಪರದಲ್ಲಿ ಜಸ್ ಜಸಿ ನ ಅಕಾರ ಇರುವುದರಿಂದ "ಖ್ಯತ್ಯಾತ್ಪರಸ್ಯ" ಸೂತ್ರದಿಂದ ಅಕಾರಕ್ಕೆ ಉತ್ವ. ಸುಖ್ಯುಃ–ಸುತ್ಯುಃ ೨ ॥ ಈ ಎರಡು ರೂಪಗಳು ಮಾತ್ರ ಪ್ರಧೀಶಬ್ದಕ್ಕಿಂತ ಬೇರೆಯಾಗುತ್ತವೆ. ಉಳಿದೆಡೆಯಲ್ಲಿ ಪ್ರಧೀಶಬ್ದದಂತೇ ತಿಳಿಯಬೇಕು.

ಇತಿ ಈಕಾರಾಂತಾಃ

(ಉಕಾರಾಂತ ಪ್ರಕರಣಮ್.)

ಶಂಭು ಶಬ್ದ. (ಈಶ್ವರ.)

ಶಂಭುರ್ಹರಿವತ್ ॥ ಏವಂ ಭಾನ್ವಾದಯಃ ॥

ಶಂಭು ಶಬ್ದ ಹರಿಶಬ್ದದಂತೇ ಆಗುತ್ತದೆ. ಪ್ರಥಮಾಸುವಿಗೆ ರುತ್ವವಿಸರ್ಗ. ಶಂಭುಃ. ದ್ವಿವಚನದಲ್ಲಿ "ಪ್ರಥಮಯೋಃ ಪೂರ್ವಸವರ್ಣಃ" ಸೂತ್ರದಿಂದ ಪೂರ್ವಸವರ್ಣದೀರ್ಘ. ಶಂಭು+ಔ ಶಂಭೂ ॥ ಜಸ್ ಪರವಾದಾಗ, "ಜಸಿಚ" ಸೂತ್ರದಿಂದ ಗುಣ. ಅವಾದೇಶ. ಸಕಾರಕ್ಕೆ ರುತ್ವವಿಸರ್ಗ. ಶಂಭು+(ಜ್)ಅಸ್–ಶಂಭೋ+ಅಸ್–ಶಂಭವಸ್–ಶಂಭವಃ ॥ ಸಂಬುದ್ಧಿಯಲ್ಲಿ "ಹ್ರಸ್ವಸ್ಯ ಗುಣಃ" ಸೂತ್ರದಿಂದ ಅಂಗಕ್ಕೆ ಗುಣ. ಹೇ ಶಂಭು+ಸ್–ಹೇಶಂಭೋ+ಸ್ "ಏಙ್ ಹ್ರಸ್ವಾತ್"—ಸೂತ್ರದಿಂದ ಓಕಾರದಪರದಲ್ಲಿರುವುದರಿಂದ ಸುವಿಗೆ ಲೋಪ. ಹೇ ಶಂಭೋ—ಹೇ ಶಂಭೂ–ಹೇ ಶಂಭವಃ ॥ ಅಮಿನಲ್ಲಿ "ಅಮಿ ಪೂರ್ವಃ" ಸೂತ್ರದಿಂದ ಪೂರ್ವರೂಪ. ಶಂಭುಂ–ಶಂಭೂ–ಶಂಭೂನ್. ಪೂರ್ವಸವರ್ಣದೀರ್ಘದ ಪರದಲ್ಲಿ ಶಸಿನ ಸಕಾರವಿರುವುದರಿಂದ "ತಸ್ಮಾಚ್ಛಸೋನಃ ಪುಂಸಿ" ಸೂತ್ರದಿಂದ ನತ್ವ. ತೃತೀಯಾ ಏಕವಚನದಲ್ಲಿ "ಆಙೋನಾಽಸ್ತ್ರಿಯಾಮ್" ಸೂತ್ರದಿಂದ ಟಾವಿಭಕ್ತಿಗೆ ನಾ ಭಾವ. ಶಂಭುನಾ ಹಲಾದಿಯಲ್ಲಿ ಕಾರ್ಯವಿಶೇಷವಿಲ್ಲ. ಶಂಭುಭ್ಯಾಮ್–ಶಂಭುಭಿಃ ॥ ಚತುರ್ಥೀಏಕವಚನದಲ್ಲಿ ಙೀ ಪ್ರತ್ಯಯ. "ಶೇಷೋಘ್ಯಸಖಿ" ಸೂತ್ರದಿಂದ ಶಂಭುಶಬ್ದಕ್ಕೂ ಘಿಸಂಜ್ಞೆ ಬರುವುದರಿಂದ "ಘೇರ್ಙಿತಿ" ಸೂತ್ರದಿಂದ ಶಂಭುವಿನ ಉಕಾರಕ್ಕೆ ಗುಣ. ಅವಾದೇಶ. ಶಂಭೋ+ಏ–ಶಂಭವೇ

ಶಂಭುಭ್ಯಾಂ-ಶಂಭುಭ್ಯಃ ॥ ಪಂಚಮಿಯಲ್ಲಿ ಜಸಿಪರವಾದಾಗ "ಘೇರ್ಙಿತಿ" ಸೂತ್ರದಿಂದ ಗುಣ "ಜಸಿಜಸೋಶ್ಚ" ಸೂತ್ರದಿಂದ ಪೂರ್ವರೂಪ. ಶಂಭೋ+ಅಸ್=ಶಂಭೋಸ್–ಶಂಭೋಃ ॥ ಶಂಭುಭ್ಯಾಮ್–ಶಂಭುಭ್ಯಃ ॥ ಷಷ್ಠೀಏಕವಚನದಲ್ಲಿ ಹಿಂದಿನಂತೆ ಗುಣ, ಪೂರ್ವರೂಪ. ಶಂಭೋಃ. ದ್ವಿವಚನದಲ್ಲಿ ಓಸ್‌ಪರವಾದಾಗ ಯಣ್ ಶಂಭ್ವೋಃ ॥ ಬಹುವಚನದಲ್ಲಿ ಆಮ್. ಹ್ರಸ್ವದಪರದಲ್ಲಿರುವುದರಿಂದ "ಹ್ರಸ್ವನಾದ್ಯಾಪೋನುಟ್" ಸೂತ್ರದಿಂದ ಆಮಿಗೆ ನುಟಾಗಮ. "ನಾಮಿ" ಸೂತ್ರದಿಂದ ಅಂಗಕ್ಕೆ ದೀರ್ಘ. ಶಂಭೂನಾಮ್। ಸಪ್ತಮಿಏಕವಚನದಲ್ಲಿ ಙಿಪರವಾದಾಗ "ಅಚ್ಚಘೇಃ" ಸೂತ್ರದಿಂದ ಶಂಭುವಿನ ಉಕಾರಕ್ಕೆ ಅಕಾರದೇಶ. ಙಿಗೆ ಔಕಾರಾದೇಶ. ಶಂಭ+ಔ ವೃದ್ಧಿ. ಶಂಭೌ. ದ್ವಿವಚನದಲ್ಲಿ ಯಣ್ ಶಂಭ್ವೋಃ–ಬಹುವಚನದಲ್ಲಿ "ಆದೇಶಪ್ರತ್ಯಯಯೋಃ" ಸೂತ್ರದಿಂದ ಸಕಾರಕ್ಕೆ ಷತ್ವ. ಶಂಭುಷು. ಹೀಗೇ ಭಾನುಮುಂತಾದ ಶಬ್ದಗಳರೂಪವನ್ನು ತಿಳಿಯಬೇಕು.

(ಉಕಾರಾಂತ. ಕ್ರೋಷ್ಟು ಶಬ್ದ. ನರಿ.)

ಕ್ರುಶ್‌ಧಾತುವಿಗೆ ತುನ್ ಪ್ರತ್ಯಯ ಬಂದಾಗ ಕ್ರೋಷ್ಟುಶಬ್ದವಾಗಿದೆ. ಇದಕ್ಕೆ ತೃಜಂತದ ಭಾವವನ್ನು ಹೇಳುತ್ತಾನೆ.

(ಕ್ರೋಷ್ಟುಶಬ್ದಕ್ಕೆ ತೃಜಂತವದ್ಭಾವ ಹೇಳುವಸೂತ್ರ)

೨೦೪. ತೃಜ್ವತ್‌ಕ್ರೋಷ್ಟುಃ ॥ ೭-೧-೯೫ ॥

ಕ್ರೋಷ್ಟುಶಬ್ದಃ ತೃಜಂತವದ್ರೂಪಂ ಲಭತೇ ಅಸಂಬುದ್ಧೌ ಸರ್ವನಾಮಸ್ಥಾನೇ ಪರೇ ॥ ಕ್ರೋಷ್ಟುಶಬ್ದಸ್ಯ ಸ್ಥಾನೇ ಕ್ರೋಷ್ಟೃ ಶಬ್ದಃ ಪ್ರಯೋಕ್ತವ್ಯ ಇತ್ಯರ್ಥಃ ॥

ತೃಜ್ವತ್, ಕ್ರೋಷ್ಟುಃ ॥ ದ್ವಿಪದಸೂತ್ರ. ತೃಚ್‌ಪ್ರತ್ಯಯವಾದುದರಿಂದ ಪ್ರತ್ಯಯಗ್ರಹಣಪರಿಭಾಷೆಯಿಂದ ತೃಜಂತವೆಂದು ತೆಗೆದುಕೊಳ್ಳಬೇಕು. "ಇತೋತ್ಸರ್ವನಾಮಸ್ಥಾನೇ" ಸೂತ್ರದಿಂದ "ಸರ್ವನಾಮಸ್ಥಾನೆ" "ಸಖ್ಯುರಸಂಬುದ್ಧೌ" ಸೂತ್ರದಿಂದ "ಅಸಂಬುದ್ಧೌ ಎಂತಲೂ ಅನುವೃತ್ತವಾಗುತ್ತದೆ. **ಸೂತ್ರಾರ್ಥ—**. ಸಂಬುದ್ಧಿಯನ್ನು ಬಿಟ್ಟು ಉಳಿದಸರ್ವನಾಮಸ್ಥಾನವು (ಸುಟ್ ೫) ಪರದಲ್ಲಿರುವಾಗ ಕ್ರೋಷ್ಟುಶಬ್ದವು ತೃಜಂತದಂತೆ ರೂಪವನ್ನು ಹೊಂದುತ್ತದೆ. ತುನ್‌ಪ್ರತ್ಯಯಾಂತವಾದ ಕ್ರೋಷ್ಟುಶಬ್ದವು ತೃಚ್‌ಪ್ರತ್ಯಯಾಂತವಾದ ಕ್ರೋಷ್ಟೃ ಶಬ್ದರೂಪವನ್ನು ಹೊಂದುತ್ತದೆ. ಕ್ರೋಷ್ಟುಶಬ್ದದ ಸ್ಥಾನದಲ್ಲಿ ಕ್ರೋಷ್ಟೃ ಶಬ್ದವನ್ನು ಪ್ರಯೋಗಿಸಬೇಕು

ಎಂದರ್ಥ. ಇದು ಅತಿದೇಶ ಸೂತ್ರ. ಕಾರ್ಯ, ರೂಪ, ನಿಮಿತ್ತ, ಅರ್ಥ, ಕಾಲ, ತಾದಾತ್ಮ್ಯ, ಶಬ್ದವೆಂದು ಏಳುರೀತಿಯಾದ ಅತಿದೇಶಗಳಿವೆ. ಇಲ್ಲಿ ಮುಖ್ಯವಾಗಿ ರೂಪಾತಿದೇಶ. ತೃಜಂತದರೂಪಗಳು ಕರ್ತೃ, ಭರ್ತೃ ಮುಂತಾದವುಗಳು ಅನೇಕವಿದ್ದರೂ ಗಳಾಗಿದ್ದರೂ ಅರ್ಥವನ್ನು ಅನುಸರಿಸಿ ಕ್ರೋಷ್ಟೃ ಎಂಬ ತೃಜಂತದರೂಪವೇ ಬರುತ್ತದೆ. ಈಗ ಋಕಾರಾಂತಶಬ್ದವಾಗುತ್ತದೆ. ಕ್ರೋಷ್ಟೃ+ಸ್ ಎಂದಿರುವಾಗ ಅಂಗಕ್ಕೆ ಗುಣ ಹೇಳುತ್ತಾನೆ.

(ಋದಂತಾಂಗಕ್ಕೆ ಗುಣಹೇಳುವ ಸೂತ್ರ)

೨೦೫. ಋತೋ ಜಿ ಸರ್ವನಾಮಸ್ಥಾನಯೋಃ ॥ ೭-೩-೧೧೦॥

ಋತೋಽಂಗಸ್ಯ ಗುಣಃ ಜಾ ಸರ್ವನಾಮಸ್ಥಾನೇ ಚ । ಇತಿ ಪ್ರಾಪ್ತೇ ॥

ಋತಃ, ಜಿ ಸರ್ವನಾಮಸ್ಥಾನಯೋಃ ॥ ದ್ವಿಪದಸೂತ್ರ. " ಹ್ರಸ್ವಸ್ಯ ಗುಣಃ " ಸೂತ್ರದಿಂದ " ಗುಣಃ " ಅನುವೃತ್ತವಾಗುತ್ತದೆ. " ಅಂಗಸ್ಯ " ಆಧಿಕಾರ. " ಋತಃ " ಅದಕ್ಕೆ ವಿಶೇಷಣವಾದುದರಿಂದ ತದಂತಲಾಭ. ಜಿ ಚ, ಸರ್ವನಾಮಸ್ಥಾನಂ ಚ ಜಿ ಸರ್ವನಾಮಸ್ಥಾನೇ—ತಯೋಃ ಜಿಸರ್ವನಾಮಸ್ಥಾನಯೋಃ. ಸಪ್ತಮೀದ್ವಿವಚನ. **ಸೂತ್ರಾರ್ಥ.**—ಜಿಪ್ರತ್ಯಯ, ಮತ್ತು ಸರ್ವನಾಮಸ್ಥಾನ(ಸ್ಯಾದಿಪಂಚ)ಪರದಲ್ಲಿರುವಾಗ ಹ್ರಸ್ವಋಕಾರಾಂತವಾದ ಅಂಗಕ್ಕೆ ಗುಣ ಬರುತ್ತದೆ. ಅಂಗಕ್ಕೆ ಗುಣವೆಂದರೆ " ಅಲೋಂತ್ಯಸ್ಯ " ಪರಿಭಾಷೆಯಿಂದ ಅಂತ್ಯವಾದ ಋಕಾರಕ್ಕೆ ಎಂದೇ ಅರ್ಥವಾಗುತ್ತದೆ. ಪ್ರಥಮಸು ಸರ್ವನಾಮಸ್ಥಾನ. ಇದು ಪರವಾಗಿದೆ. ಆದುದರಿಂದ ಕ್ರೋಷ್ಟೃ ರೂಪ ಅಂಗದ ಋಕಾರಕ್ಕೆ ಗುಣವು ಪ್ರಾಪ್ತವಾದರೆ-ಅದಕ್ಕೆ ಅಪವಾದವಾಗಿ ಅನಜ್‌ಆದೇಶ ಹೇಳುತ್ತಾನೆ.

(ಋದಂತಾದಿಗಳಿಗೆ ಅನಜ್‌ಹೇಳುವಸೂತ್ರ)

೨೦೬. ಋದುಶನಸ್ಪುರುದಂಸೋಽನೇಹಸಾಂ ಚ
॥ ೭-೧-೯೪ ॥

ಋದಂತಾನಾಮುಶನಸಾದೀನಾಂ ಚಾನಜ್ ಸ್ಯಾದಸಂಬುದ್ಧೌ ಸೌ ॥

ಋದುಶನಸ್ಪುರುದಂಸೋನೇಹಸಾಂ, ಚ ॥ ದ್ವಿಪದಸೂತ್ರ " ಸಂಬುದ್ಧೌ " ಸೂತ್ರದಿಂದ "ಅಸಂಬುದ್ಧೌ"ಪದವೂ, " ಅನಜ್‌ಸ್ಸಾ" ಸೂತ್ರವೂ ಅನುವೃತ್ತವಾಗುತ್ತವೆ. ಋಚ್ಛ, ಉಶನಸ್ ಚ, ಪುರುದಂಸಸ್ ಚ, ಅನೇಹಸ್ ಚ ಋದುಶನಸ್ಪುರುದಂಸೋನೇಹಸಃ—ತೇಷಾಂ । ಋತ್ = ಋಕಾರ. ಉಳಿದ ಮೂರು ಸಾಂತ

ಶಬ್ದಗಳು " ಅಂಗಸ್ಯ " ಆಧಿಕಾರ, ಅದಕ್ಕೆ ಋದಾದಿಗಳು ವಿಶೇಷಣವಾದುದರಿಂದ ತದಂತಲಾಭ. **ಸೂತ್ರಾರ್ಥ.**—ಸಂಬುದ್ಧಿವರ್ಜವಾದ ಸು ಪರದಲ್ಲಿರುವಾಗ ಋದಂತವಾದ, ಮತ್ತು ಉಶನಸಾದಿರೂಪವಾದ ಅಂಗಕ್ಕೆ ಅನಜ್ ಆದೇಶ ಬರುತ್ತದೆ. ಜಕಾರದಿಂದ (ಜಕಾರ " ಹಲಂತ್ಯಮ್ " ಸೂತ್ರದಿಂದ ಇತ್. ಅಕಾರ ಉಚ್ಚಾರಣಾರ್ಥ) "ಜಿಚ್ಚ" ಪರಿಭಾಷೆಯಿಂದ ಅಂಗದ ಅಂತ್ಯಕ್ಕೆ ಬರುತ್ತದೆ. ಕ್ರೋಷ್ಟೃ ಋಕಾರಾಂತವಾದ ಅಂಗ ಇದಕ್ಕೆ ಸಂಬುದ್ಧಿಯಲ್ಲದ ಸು ಪರವಾಗಿದೆ. ಅನಜ್ ಆದೇಶ ಅಂಗದ ಅಂತ್ಯವಾದ ಋಕಾರಕ್ಕೆ ಬಂದರೆ ಕ್ರೋಷ್ಟೃ+ಅನ್+ಸ್=ಕ್ರೋಷ್ಟನ್+ಸ್ ಎಂದಾಗುತ್ತದೆ. ಈಗ ಅದರ ಉಪಧೆಗೆ ದೀರ್ಘ ಹೇಳುತ್ತಾನೆ.

(ಅಜಾದಿಗಳ ಉಪಧೆಗೆ ದೀರ್ಘ ಹೇಳುವ ಸೂತ್ರ)

೨೦೭. ಅಪ್ತೃನ್ತೃಚ್ಸ್ವಸೃನಪ್ತೃನೇಷ್ಟೃತ್ವಷ್ಟೃಕ್ಷತ್ತೃ,
ಹೋತೃಪೋತೃಪ್ರಶಾಸ್ತೃಣಾಮ್ ॥ ೬-೪-೧೧ ॥

ಅಜಾದೀನಾಮುಪಧಾಯಾ ದೀರ್ಘೋಽಸಂಬುದ್ಧೌ ಸರ್ವನಾಮಸ್ಥಾನೇ ॥ ಕ್ರೋಷ್ಟಾರೌ । ಕ್ರೋಷ್ಟಾರಃ । ಕ್ರೋಷ್ಟೂನ್ ॥

ಒಂದೇ ಪದವುಳ್ಳ ಸೂತ್ರ. ಅಪ್, ಇದೊಂದು ಶಬ್ದ. ತೃನ್, ತೃಚ್ ಇವೆರಡು ಪ್ರತ್ಯಯ. ಸ್ವಸೃ, ನಪ್ತೃ, ನೇಷ್ಟೃ, ತ್ವಷ್ಟೃ, ಕ್ಷತ್ತೃ, ಹೋತೃ, ಪೋತೃ, ಪ್ರಶಾಸ್ತೃ ಈ ಎಂಟು ಋಕಾರಾಂತ ಶಬ್ದಗಳು. ಇವುಗಳ ಮೇಲೆ ಷಷ್ಠ್ಯರ್ಥ ಬಹುವಚನ ಬಂದಿದೆ. " ನೋಪಧಾಯಾಃ " ಸೂತ್ರದಿಂದ " ಉಪಧಾಯಾಃ " " ಧ್ರಲೋಪೇ ಪೂರ್ವಸ್ಯ ದಿರ್ಘೋಽಣಃ " ಸೂತ್ರದಿಂದ " ದೀರ್ಘಃ ", " ಸರ್ವನಾಮಸ್ಥಾನೇ ಚಾಸಂಬುದ್ಧೌ " ಚಕಾರ ಬಿಟ್ಟು ಇಡೀ ಸೂತ್ರವೂ ಅನುವೃತ್ತವಾಗುತ್ತವೆ. **ಸೂತ್ರಾರ್ಥ**—ಸಂಬುದ್ಧಿವರ್ಜವಾದ ಸರ್ವನಾಮಸ್ಥಾನ ಪರವಾದಾಗ ಅಜಾದಿಗಳ ಉಪಧೆಗೆ ದೀರ್ಘ ಬರುತ್ತದೆ. " ಅಲೋಂತ್ಯಾತ್ಪೂರ್ವ ಉಪಧಾ " (176) ಎಂದು ಅಂತ್ಯವರ್ಣದ ಪೂರ್ವವರ್ಣಕ್ಕೆ ಉಪಧೆಯೆಂಬ ಸಂಜ್ಞೆ ಹೇಳಿದೆ. ಇಲ್ಲಿ ಸುನೆಂಬುದು ಸಂಬುದ್ಧಿವರ್ಜವಾದ ಸರ್ವನಾಮಸ್ಥಾನ. ಇದು ಪರವಾದುದರಿಂದ ಕ್ರೋಷ್ಟೃನ್ ಶಬ್ದದ ಉಪಧೆಗೆ ದೀರ್ಘ. ಅಂತ್ಯವರ್ಣ ನಕಾರ ಅದರ ಪೂರ್ವವರ್ಣ ಟಕಾರದ ಮೇಲಿರುವ ಅಕಾರ. ಆಗ ಕ್ರೋಷ್ಟಾನ್+ಸ್ ಎಂದಾಗುತ್ತದೆ. ಸ್ ಹಲಂತದ ಪರದಲ್ಲಿರುವುದರಿಂದ " ಹಲ್—ಙ್ಯಾಭ್ಯೋ ದೀರ್ಘಾ—" (ಸೂ. ೮೬೯) ಸೂತ್ರದಿಂದ ಅದಕ್ಕೆ ಲೋಪ. ಕ್ರೋಷ್ಟಾನ್. ನಕಾರವು ಪದದ ಕೊನೆಯಲ್ಲಿರುವುದರಿಂದ " ನಲೋಪಃ ಪ್ರಾ— " (ಸೂ ೧೦೦) ಸೂತ್ರದಿಂದ ಲೋಪ ಕ್ರೋಷ್ಟಾ.

ಕ್ರೋಷ್ಟೃ+ಔ ಎಂದಿರುವಾಗ "ಋತೋಽಜಾ ಸರ್ವನಾಮಸ್ಥಾನಯೋಃ।" ಸೂತ್ರದಿಂದ ಸರ್ವನಾಮಸ್ಥಾನ ಪರವಾದುದುರಿಂದ ಋಕಾರಕ್ಕೆ ಗುಣ. ಋಕಾರದ ಸ್ಥಾನಕ್ಕೆ ಬರುವುದರಿಂದ "ಉರಣ್ ರಪರಃ" ಸೂತ್ರದಿಂದ ಅಕಾರರೂಪ ಗುಣವು ರಪರವಾಗಿ ಬರುತ್ತದೆ. ಕ್ರೋಷ್ಟರ್+ಔ. "ಅಪ್ತೃನ್ತೃಚ್—" ಸೂತ್ರದಿಂದ ಉಪಧಾ ಅಕಾರಕ್ಕೆ ದೀರ್ಘ. ಕ್ರೋಷ್ಟಾರೌ. ಜಸಿನಲ್ಲಿಯೂ ಹೀಗೆ ಗುಣ, ದೀರ್ಘ. ಕ್ರೋಷ್ಟಾರಃ ॥

ಸಂಬುದ್ಧಿಯಲ್ಲಿ ತೃಜ್ವದ್ಭಾವ ನಿಷೇಧ ಮಾಡಿರುವುದರಿಂದ ಉಕಾರಾಂತವಾಗಿಯೇ ಇರುತ್ತದೆ. ಕ್ರೋಷ್ಟು+ಸ್ ಎಂದಿರುವಾಗ "ಹ್ರಸ್ವಸ್ಯ ಗುಣಃ" ಸೂತ್ರದಿಂದ ಉಕಾರಕ್ಕೆ ಗುಣ. ಕ್ರೋಷ್ಟೋ+ಸ್. ಏಜಂತದ ಪರದಲ್ಲಿ ಸು ಇರುವುದರಿಂದ "ಏಙ್ಹ್ರಸ್ವಾತ್ ಸಂಬುದ್ಧೇಃ" ಸೂತ್ರದಿಂದ ಸುವಿಗೆ ಲೋಪ. ಹೇ ಕ್ರೋಷ್ಟೋ. ದ್ವಿವಚನ ಬಹುವಚನಗಳಲ್ಲಿ ಪ್ರಥಮಾದಂತೇ ರೂಪ. ಹೇ ಕ್ರೋಷ್ಟಾರೌ—ಹೇ ಕ್ರೋಷ್ಟಾರಃ ॥

ದ್ವಿತೀಯಾ ಏಕವಚನ, ದ್ವಿವಚನ ಸರ್ವನಾಮಸ್ಥಾನವಾದುದರಿಂದ ಹಿಂದಿನಂತೇ ಗುಣ. ಉಪಧಾದೀರ್ಘ. ಕ್ರೋಷ್ಟೃ+ಅಮ್—ಕ್ರೋಷ್ಟಾರಮ್ ।—ಕ್ರೋಷ್ಟಾರೌ ಬಹುವಚನದಲ್ಲಿ ಶಸ್ ಪರವಾದಾಗ ಸರ್ವನಾಮಸ್ಥಾನವಲ್ಲದುದರಿಂದ ತೃಜ್ವದ್ಭಾವವಿಲ್ಲ. ಕ್ರೋಷ್ಟು+ಅಸ್. "ಪ್ರಥಮಯೋಃ ಪೂರ್ವಸವರ್ಣದೀರ್ಘಃ" ಸೂತ್ರದಿಂದ ಪೂರ್ವಸವರ್ಣದೀರ್ಘ. ಕ್ರೋಷ್ಟೂಸ್. "ತಸ್ಮಾಚ್ಛಸೋ ನಃ ಪುಂಸಿ" ಸೂತ್ರದಿಂದ ಸಕಾರಕ್ಕೆ ನತ್ವ. ಕ್ರೋಷ್ಟೂನ್.

ತೃತೀಯಾದಲ್ಲಿ ಟಾಪರವಾದಾಗ ವಿಕಲ್ಪವಾಗಿ ತೃಜ್ವದ್ಭಾವ ಹೇಳುತ್ತಾನೆ.

(ವಿಕಲ್ಪವಾಗಿ ತೃಜ್ವದ್ಭಾವಹೇಳುವ ಸೂತ್ರ)

೨೦೬. ವಿಭಾಷಾ ತೃತೀಯಾದಿಷ್ವಚಿ ॥ ೭-೧-೯೭ ॥

ಅಜಾದಿಷು ತೃತೀಯಾದಿಷು ಕ್ರೋಷ್ಟುರ್ವಾ ತೃಜ್ವತ್ । ಕ್ರೋಷ್ಟ್ರಾ ಕ್ರೋಷ್ಟ್ರೇ ॥

ವಿಭಾಷಾ, ತೃತೀಯಾದಿಷು, ಅಚಿ ॥ ತ್ರಿಪದಸೂತ್ರ. "ತೃಜ್ವತ್ಕ್ರೋಷ್ಟುಃ" ಸೂತ್ರವು ಅನುವೃತ್ತವಾಗುತ್ತದೆ. ಅಚಿ ಸಪ್ತಮ್ಯಂತವು "ತೃತೀಯಾದಿಷು" ಸಪ್ತಮ್ಯಂತಕ್ಕೆ ವಿಶೇಷಣ. "ಯಸ್ಮಿನ್ ವಿಧಿಸ್ತದಾದಾವಲ್ಗ್ರಹಣೇ" ಪರಿಭಾಷೆಯಿಂದ ತದಾದಿಲಾಭ. ಅಜಾದಿಯಾದ ತೃತೀಯಾದಿಗಳು ಪರವಾದಾಗ ಎಂದರ್ಥ.

ವಿಭಾಷಾಪದಕ್ಕೆ ವಿಕಲ್ಪವೆಂದರ್ಥ. **ಸೂತ್ರಾರ್ಥ**—ಅಜಾದಿ ತೃತೀಯಾದಿ ವಿಭಕ್ತಿ ಪರವಾದಾಗ ಕ್ರೋಷ್ಟುಶಬ್ದವು ವಿಕಲ್ಪವಾಗಿ ತೃಜ್ವದ್ಭಾವವನ್ನು ಹೊಂದುತ್ತದೆ. ಕ್ರೋಷ್ಟು ಶಬ್ದ ಸ್ಥಾನದಲ್ಲಿ ವಿಕಲ್ಪವಾಗಿ ಕ್ರೋಷ್ಟೃ ತೃಜ್ವದ್ಭಾವವನ್ನು ಹೊಂದುತ್ತದೆ. ಟಾ ಅಜಾದಿಯಾದುದರಿಂದ (ಟ್+ಆ) ವಿಕಲ್ಪವಾಗಿ ಕ್ರೋಷ್ಟೃ ಶಬ್ದವನ್ನು ಹೇಳಬೇಕು ಎಂದರ್ಥ. ಕ್ರೋಷ್ಟೃ +ಆ—ಎಂದಾಗುತ್ತದೆ. "ಇಕೋಯಣಚಿ" ಸೂತ್ರದಿಂದ ಯಣ್. ಕ್ರೋಷ್ಟ್ರಾ ॥ ಕ್ರೋಷ್ಟೃ ಭಾವಬಾರದಿದ್ದರಿ ಉಕಾರಾಂತವಾದುದರಿಂದ ಸ್ಯಸಂಜ್ಞಾ ಬಂದು "ಆಜಸೀನಾಮ್ಸ್ತ್ರಿಯಾಮ್" ಸೂತ್ರದಿಂದ ಟಾ ಪ್ರತ್ಯಯಕ್ಕೆ ನಾ ಭಾವ. ಕ್ರೋಷ್ಟು + ಆ—ಕ್ರೋಷ್ಟುನಾ ॥ ಹಲಾದಿಯಲ್ಲಿ ಯಾವಕಾರ್ಯವೂ ಇಲ್ಲ. ಕ್ರೋಷ್ಟು ಭ್ಯಾಮ್—ಕ್ರೋಷ್ಟುಭಿಃ ।

ಚತುರ್ಥಿಯಲ್ಲಿ ಙೇ ಪರವಾದಾಗ ಅಜಾದಿಯಾದುದರಿಂದ ವಿಕಲ್ಪವಾಗಿ ತೃಜ್ವದ್ಭಾವ. ಬಂದರೆ ಕ್ರೋಷ್ಟೃ+ಏ—ಯಣ್. ಕ್ರೋಷ್ಟ್ರೇ. ಬಾರದಿದ್ದರಿ "ಙೇರ್ಙಿತಿ" ಸೂತ್ರದಿಂದ ಉಕಾರಕ್ಕೆ ಗುಣ. ಅವಾದೇಶ. ಕ್ರೋಷ್ಟು+ಏ. ಕ್ರೋಷ್ಟೋ+ಏ. ಕ್ರೋಷ್ಟವೇ. ದ್ವಿ ಬಹುವಚನಗಳಲ್ಲಿ ಕ್ರೋಷ್ಟುಭ್ಯಾಮ್—ಕ್ರೋಷ್ಟುಭ್ಯಃ ॥

ಪಂಚಮಿಯಲ್ಲಿ ಙಸಿ ಪರವಾದಾಗ ಹಿಂದಿನಂತೆ ವಿಕಲ್ಪವಾಗಿ ತೃಜ್ವದ್ಭಾವ. ಕ್ರೋಷ್ಟೃ +ಅಸ್. ಎಂದಿರುವಾಗ ಯಣ್ ಪ್ರಾಪ್ತವಾದರೆ ಅದಕ್ಕೆ ಅಪವಾದವಾಗಿ ಋಕಾರಕ್ಕೆ ಉತ್ವವಹೇಳುತ್ತಾನೆ.

(ಋಕಾರಕ್ಕೆ ಉತ್ವಹೇಳುವ ಸೂತ್ರ)

೨೦೯. ಋತ ಉತ್ ॥ ೬-೧-೧೧೦ ॥

ಋತೋ ಙಸಿಙಸೋರತಿ ಉದೇಕಾದೇಶಃ । ರಪರಃ ॥

ಋತಃ, ಉತ್ ॥ ದ್ವಿಪದಸೂತ್ರ. "ಏಙಃ ಪದಾಂತಾದತಿ" ಸೂತ್ರದಿಂದ "ಅತಿ" "ಙಸಿಙಸೋಶ್ಚ" ಸೂತ್ರದಿಂದ "ಙಸಿಙಸೋಃ" ಅನುವೃತ್ತವಾಗುತ್ತವೆ. ಪ್ರತ್ಯಯದಿಂದ ಅಂಗವು ಆಶ್ರಿಸ್ತವಾಗುತ್ತದೆ. ಋತಃ ಎಂಬುದು ಅಂಗಕ್ಕೆ ವಿಶೇಷಣ. ತದಂತವಿಧಿ. "ಏಕಃಪೂರ್ವಪರಯೋಃ" ಅಧಿಕಾರ. ಅತಿ ಸಪ್ತಮ್ಯೇ. **ಸೂತ್ರಾರ್ಥ**—ಋದಂತವಾದ ಅಂಗದಪರದಲ್ಲಿ ಙಸಿಙಸ್ ಪ್ರತ್ಯಯಗಳ ಅಕಾರಪರವಾದಾಗ ಋಕಾರಅಕಾರಗಳಿಗೆ ಉಕಾರವು ಏಕಾದೇಶವಾಗಿ ಬರುತ್ತದೆ. ಋಕಾರದ ಸ್ಥಾನಕ್ಕೆ ಆದೇಶಬರುವುದಾದುದರಿಂದ "ಉರಣ್ರಪರಃ" ಸೂತ್ರದಿಂದ ರಪರವಾಗಿ

ಬರುತ್ತದೆ. ಕ್ರೋಷ್ಟೃ+ಉರ್–ಸ್–ಕ್ರೋಷ್ಟುರ್ಸ್. ಎಂದಿರುವಾಗ ಸಕಾರಕ್ಕೆ ಲೋಪಹೇಳುತ್ತಾನೆ.

(ಸಕಾರಕ್ಕೆ ಲೋಪಹೇಳುವಸೂತ್ರ)

೨೧೦. ರಾತ್ಸಸ್ಯ ॥ ಲ-೨-೨೪ ॥

ರೇಫಾತ್ಸಂಯೋಗಾಂತಸ್ಯ ಸಸ್ಯೈವ ಲೋಪೋ ನಾನ್ಯಸ್ಯ । ಕ್ರೋಷ್ಟುಃ ವಿಸರ್ಗಃ ॥ ಕ್ರೋಷ್ಟುಃ ೨ ॥ ಕ್ರೋಷ್ಟೋಃ ॥

ರಾತ್, ಸಸ್ಯ ॥ ದ್ವಿಪದ ಸೂತ್ರ. “ ಸಂಯೋಗಾಂತಸ್ಯ ಲೋಪಃ ” ಸೂತ್ರ ಅನುವೃತ್ತವಾಗುತ್ತದೆ. **ಸೂತ್ರಾರ್ಥ**—ರೇಫದ ಪರದಲ್ಲಿರುವ ಸಂಯೋಗದ ಅಂತ್ಯ ದಲ್ಲಿರುವ ಸಕಾರಕ್ಕೆ ಲೋಪ ಬರುತ್ತದೆ. ಪ್ರಕೃತ ಸಂಯೋಗ ರ್ಸ್. ಇದರ ಅಂತ್ಯದ ಸಕಾರಕ್ಕೆ ಲೋಪಬಂದರೆ ಕ್ರೋಷ್ಟುರ್ ಎಂದಾಗುತ್ತದೆ. ರೇಫ ಅವಸಾನ ದಲ್ಲಿರುವುದರಿಂದ “ ಖರವಸಾನಯೋರ್ವಿಸರ್ಜನೀಯಃ ” ಸೂತ್ರದಿಂದ ಅದಕ್ಕೆ ವಿಸರ್ಗ. ಕ್ರೋಷ್ಟುಃ. ಷಷ್ಠ್ಯೇಕವಚನದಲ್ಲಿಯೂ ಹೀಗೆಯೇ ರೂಪವಾಗುತ್ತದೆ. ಇಲ್ಲಿ ಸಕಾರಲೋಪಕ್ಕೋಸ್ಕರ “ ರಾತ್ಸಸ್ಯ ” ಸೂತ್ರ ಏಕೆ ಹೇಳಬೇಕು ? ಈ ಸೂತ್ರದಿಂದ ಆಗುವ ಕಾರ್ಯವು “ಸಂಯೋಗಾಂತಸ್ಯ ಲೋಪಃ” ಸೂತ್ರದಿಂದಲೇ ಆಗುತ್ತದೆಯಲ್ಲ. ಯಾವುದರ ಪರದಲ್ಲಿದ್ದರೂ ಸಂಯೋಗಾಂತವಾದ ಪದವಾದರೆ ಸರಿ. ಆಗ ಅಂತ್ಯದ ಸಕಾರ ಅದರಿಂದ ಲೋಪಬರುತ್ತದೆ. ಹೀಗಿರುವಾಗ ಪುನಃ ಈ ಸೂತ್ರವೇಕೆ ? ವ್ಯರ್ಥವಲ್ಲವೆ ? ಎಂದರೆ “ ಸಿದ್ಧೇ ಸತ್ಯಾರಭ್ಯಮಾಣೋ ವಿಧಿಃ ನಿಯಮಾಯ ” ಎಂದು ಸೂತ್ರದಿಂದ ಸಿದ್ಧಿಸುತ್ತಿರುವಾಗ ಪುನಃ ಆದನ್ನೇ ಇನ್ನೊಂದು ಸೂತ್ರ ಹೇಳುವುದಾದರೆ ಅದು ನಿಯಮಕ್ಕೋಸ್ಕರವೆಂದುದರಿಂದ ಈ ಸೂತ್ರವು ಸಂಯೋಗಾಂತಲೋಪವನ್ನು ನಿಯಮ ಮಾಡುತ್ತದೆ. ರೇಫದಪರದಲ್ಲಿ ಸಂಯೋಗಾಂತಲೋಪಬರುವುದಾದರೆ ಸಕಾರಕ್ಕೆ ಮಾತ್ರಲೋಪ. ಇತರವರ್ಣಗಳಿದ್ದರೆ ಲೋಪಬರುವುದಿಲ್ಲ. ಊರ್ಜ್ ಶಬ್ದವನ್ನು ಮುಂದೆ ಹೇಳುತ್ತಾನೆ. ಇಲ್ಲಿ ರೇಫದಪರದಲ್ಲಿ ಜಕಾರವಿರುವುದರಿಂದ ಲೋಪಬರುವುದಿಲ್ಲ. ಹೀಗೆ ಕ್ರೋಷ್ಟೃಭಾವಬಂದಾಗ ಕ್ರೋಷ್ಟುಃ ಎಂದು ಒಂದುರೂಪ. ಬಾರದಿದ್ದರೆ ಕ್ರೋಷು+(ಜಸಿ) ಅಸ್ ಎಂದಿರುವಾಗ “ ಫೇರ್ಜಂತಿ ” ಸೂತ್ರದಿಂದ ಉಕಾರಕ್ಕೆ ಗುಣ. “ ಕ್ರೋಷ್ಟೋ+ಅಸ್. “ಜಸಿಜಸೋಶ್ಚ ” ಸೂತ್ರದಿಂದ ಪೂರ್ವರೂಪ. ಕ್ರೋಷ್ಟೋಸ್. ರುತ್ವವಿಸರ್ಗ. ಕ್ರೋಷ್ಟೋಃ—ಕ್ರೋಷ್ಟುಭ್ಯಾಮ್—ಕ್ರೋಷ್ಟುಭ್ಯಃ ॥

ಷಷ್ಠೀ ಏಕವಚನದಲ್ಲಿ ಪಂಚಮೀ ಏಕವಚನದ ರೂಪವೇ, ಕ್ರೋಷ್ಟುಃ. ತೃಜ್ಜ್ವಾವ ಬಾರದಿದ್ದರೆ ಕ್ರೋಷ್ಟೋಃ । ದ್ವಿವಚನದಲ್ಲಿ ತೃಜದ್ಭಾವ ಬಂದಾಗಲೂ ಬಾರದಿರುವಾಗಲೂ ಯಣ್. ಕ್ರೋಷ್ಟೃ+ಜಸ್. ಕ್ರೋಷ್ಟ್ರೋಸ್—ಕ್ರೋಷ್ಟ್ರೋಃ ॥ ಕ್ರೋಷ್ಟು+ಓಸ್ ಕ್ರೋಷ್ಟ್ರೋಃ ॥ ಬಹುವಚನದಲ್ಲಿ ಆಮ್ ಪರವಾದಾಗ ಅಜಾದಿಯಾದುದರಿಂದ ತೃಜ್ಜ್ವದ್ಭಾವವೂ ಬರಬಹುದು. ಹ್ರಸ್ವದ ಪರದಲ್ಲಿರುವುದರಿಂದ “ಹ್ರಸ್ವನದ್ಯಾಪ್ನುಟ್” ಸೂತ್ರದಿಂದ ಆಮಿಗೆ ನುಡಾಗಮವೂ ಬರಬಹುದು. ಆಮಿಗೆ ನುಟ್ ಬಂದರೆ ತೃಜ್ಜ್ವದ್ಭಾವ ಬರುವುದಿಲ್ಲ. ಹಲಾದಿಯಾಗುತ್ತದೆ. “ ವಿಪ್ರತಿಷೇಧೇ ಪರಂ ಕಾರ್ಯಮ್” ಎಂಬುದರಿಂದ ಕಾರ್ಯ ಹೇಳುವುದಾದರೆ ಪರಸೂತ್ರತೃಜ್ಜ್ವದ್ಭಾವ ಹೇಳುವುದು. (ವಿಭಾಷಾತೃತೀಯಾದಿಷ್ವಚಿ) ತೃಜ್ಜ್ವದ್ಭಾವ ಬಂದಮೇಲೆ ನುಟ್ ಬರುವುದಿಲ್ಲ. ಅಜಾದಿ ಪ್ರತ್ಯಯವನ್ನು ನಿಮಿತ್ತೀಕರಿಸಿ ಬಂದ ತೃಜ್ಜ್ವದ್ಭಾವವು ಅಜಾದಿತ್ವನ್ನು ಭಂಗಮಾಡುವ ನುಟಿಗೆ ನಿಮಿತ್ತವಾಗುವುದಿಲ್ಲ. “ ಸಂಶಿಪಾತಲಕ್ಷಣೋ ವಿಧಿರ್ನಿಮಿತ್ತಂ ತದ್ವಿಘಾತಸ್ಯ ” ಎಂಬ ಪರಿಭಾಷೆಯು ಈ ಅರ್ಥವನ್ನು ಹೇಳುತ್ತದೆ. (ಉಂಡಮನೆಗೆರಡನ್ನು ಬಗೆಯಬಾರದು ಇದರ ತಾತ್ಪರ್ಯ) ಯಾವುದೋ ಒಂದು ಸಂಬಂಧವನ್ನು ನಿಮಿತ್ತೀಕರಿಸಿ ಬಂದ ಒಂದು ಕಾರ್ಯವು ಆ ಸಂಬಂಧ ವಿಘಾತಕವಾಗುವುದಿಲ್ಲ. ಹೀಗೆ ಪರಸೂತ್ರದಿಂದ ತೃಜ್ಜ್ವದ್ಭಾವ ಪ್ರಾಪ್ತವಾದರೆ ವಾರ್ತಿಕಕಾರರು ನುಟೇ ಇಲ್ಲಿ ಪ್ರಬಲವೆನ್ನುತ್ತಾರೆ.

(ಪೂರ್ವವಿಪ್ರತಿಷೇಧದಿಂದ ನುಟ್‌ನ್ನು ಹೇಳುವ ವಾರ್ತಿಕ)

ವಾ ॥ (ನುಮಚಿರತೃಜ್ವದ್ಭಾವೇಭ್ಯೋ, ನುಟ್, ಪೂರ್ವವಿಪ್ರತಿಷೇಧೇನ ॥) ಕ್ರೋಷ್ಟ್ರೋನಾಮ್ ॥ ಪಕ್ಷೇ ಹಲಾದೌ ಚ ಶಂಭುವತ್ ॥

ತ್ರಿಪದ ವಾರ್ತಿಕ. ನುಮ್, ಅಚಿರ, ತೃಜ್ವದ್ಭಾವಗಳಿಗಿಂತಲೂ ಪೂರ್ವವಿಪ್ರತಿಷೇಧದಿಂದ ನುಟೇ ಬರುತ್ತದೆ. ನುಮ್, ಅಚಿರ ಮುಂಪೆ ಬರುತ್ತವೆ. “ ವಿಪ್ರತಿಷೇಧೇ ಪರಂ ಕಾರ್ಯಂ ” ಎಂದಿದ್ದರೆ ಅಲ್ಲಿ ಪರಸ್ಥಾನದಲ್ಲಿ ಪೂರ್ವಂ ಕಾರ್ಯಮ್ ಎಂದು ಮಾಡಿಕೊಳ್ಳಬೇಕು. ಆಗ ಪೂರ್ವಸೂತ್ರ, ನುಡ್ ವಿಧಾಯಕವಾದ “ ಹ್ರಸ್ವನದ್ಯಾಪ್ನುಟ್ ” ಎಂಬುದು ಆಗುವುದರಿಂದ ಅದೇ ಬರುತ್ತದೆ. ಕೆಲವರು ಪರಂಕಾರ್ಯಂ ಎಂಬುದಕ್ಕೆ ಉತ್ಕೃಷ್ಟವಾದದ್ದು ಮಾಡಬೇಕು ಎಂದರ್ಥ ಸ್ವೀಕಾರಮಾಡಿ ಉತ್ಕೃಷ್ಟವೆಂದರೆ ಪ್ರಕೃತ ಬೇಕಾದದ್ದು ಎಂದು ಯಾವುದು ಬೇಕೋ ಅದನ್ನು ತೆಗೆದುಕೊಂಡು ಪ್ರಕೃತಕಾರ್ಯ ಮಾಡುತ್ತಾರೆ. ಇನ್ನು ಕೆಲವರು “ ವಿಪ್ರತಿಷೇಧೇಪರಂ ಕಾರ್ಯಮ್ ” ಎಂದು ಪಾಠಮಾಡಿ ಅಪರಂ ಕಾರ್ಯಂ ಎಂದು ಛೇದ ಮಾಡುತ್ತಾರೆ. ಆಗ ಅಪರಂ ಎಂದರೆ ಪೂರ್ವಸೂತ್ರ. ಬೇಕಾದಲ್ಲಿ ಹೀಗೆ ಮಾಡಿಕೊಳ್ಳುವುದು. ಪ್ರಕೃತ ಕ್ರೋಷ್ಟು+ಆಮ್ ಎಂದಿರುವಾಗ ತೃಜ್ವದ್ಭಾವವನ್ನು ಬಾಧಿಸಿ

ನುಟೇ ಬಂದರೆ ಕ್ರೋಷ್ಟು+ನಾಮ್ ಆಗುತ್ತದೆ. ಈಗ ಹಲಾದಿಯಾದುದರಿಂದ ತೃಜ್ವದ್ಭಾವ ಬರುವುದಿಲ್ಲ. "ನಾಮಿ" ಸೂತ್ರದಿಂದ ದೀರ್ಘ ಕ್ರೋಷ್ಟೂನಾಮ್.

ಸಪ್ತಮಿಯಲ್ಲಿ ಜಿ ಪರವಾದಾಗ ಆಜಾದಿಯಾದುದರಿಂದ ಕ್ರೋಷ್ಟೃಭಾಷ ಬಂದರೆ "ಋತೋಜಿಸಿ" (ಸೂ 205) ಸೂತ್ರದಿಂದ ಋಕಾರಕ್ಕೆ ಗುಣ. ರಪರವಾಗಿ ಬಂದರೆ ಕ್ರೋಷ್ಟರ್+ಇ=ಕ್ರೋಷ್ಟರಿ. ತೃಜ್ವದ್ಭಾವಬಾರದಿದ್ದರೆ ಕ್ರೋಷ್ಟು+ಇ ಎಂದಿರುವಾಗ "ಅಚ್ಚಸ್ಫೋಃ" ಸೂತ್ರದಿಂದ ಉಕಾರಕ್ಕೆ ಅಕಾರ. ಜಿಕಾರೇ ಷ್ಟಕಾರಾದೇಶ. ಕ್ರೋಷ್ಟ+ಷ್ಟಿ "ವೃದ್ಧಿರೇಚಿ" ಸೂತ್ರದಿಂದ ವೃದ್ಧಿ, ಕ್ರೌಷ್ಟಿ. ದ್ವಿವಚನದಲ್ಲಿ ಹಿಂದಿನಂತೇ ಕ್ರೋಷ್ಟ್ರೋಃ-ಕ್ರೋಷ್ಟ್ವೋಃ ಎರಡುರೂಪ. ಬಹುವಚನದಲ್ಲಿ ಹಲಾದಿಯಾದುದರಿಂದ ತೃಜ್ವದ್ಭಾವವಿಲ್ಲ. "ಆದೇಶಪ್ರತ್ಯಯಯೋಃ" ಸೂತ್ರದಿಂದ ಸಕಾರಕ್ಕೆ ಷತ್ವ. ಕ್ರೋಷ್ಟುಷು. ಇದನ್ನೇ ಹಲಾದಿಯಲ್ಲಿಯೂ, ತೃಜ್ವದ್ಭಾವಬಾರದಿರುವಾಗಲೂ ಶಂಭು ಶಬ್ದದಂತೇ ರೂಪವಾಗುತ್ತದೆ. ಎಂದು ಹೇಳಿರುತ್ತಾನೆ.

ಇತಿ ಉದಂತಪ್ರಕರಣಮ್ ॥

ಊಕಾರಾಂತ, ಹೂ ಹೂ ಶಬ್ದ. ದೇವಗಾಯಕ.

ಹೂಹೂ+ಸ್. ರುತ್ವವಿಸರ್ಗ. ಹೂಹೂಃ ॥ ಹೂಹೂ+ಔ. ಯಣ್. ಹೂಹ್ವೌ. ಹೂಹೂ+ಅಸ್ (ಜಸ್) ಯಣ್. ಸಕಾರಕ್ಕೆರುತ್ವವಿಸರ್ಗ ಹೂಹ್ವಃ ಸಂಬೋಧನೆಯಲ್ಲಿ ಇವೇರೂಪ. ದ್ವಿ ॥ ಹೂಹೂ+ಅಮ್ "ಅಮಿಪೂರ್ವಃ" ಸೂತ್ರದಿಂದ ಪೂರ್ವರೂಪ. ಹೂಹೂಮ್. ಹೂಹೂ+ಔ. ಯಣ್. ಹೂಹ್ವೌ. ಹೂಹೂ+ಅಸ್ (ಶಸ್) "ಪ್ರಥಮಯೋಃ ಪೂರ್ವಸವರ್ಣಃ" ಪೂರ್ವಸವರ್ಣದೀರ್ಘ. "ತಸ್ಮಾಚ್ಛಸೋ ನಃ ಪುಂಸಿ" ಸೂತ್ರದಿಂದ ಸಕಾರಕ್ಕೆ ನತ್ವ ಹೂಹೂನ್.

ತೃ ॥ ಹೂಹೂ+ಆ (ಟಾ) ಯಣ್. ಹೂಹ್ವಾ. ಹೂಹೂಭ್ಯಾಂ-ಹೂಹೂಭಿಃ ॥ ಚ ॥ ಹೂಹೂ+ಏ (ಙೇ) ಯಣ್. ಹೂಹ್ವೇ- ಹೂಹೂಭ್ಯಾಂ,-ಹೂಹೂಭ್ಯಃ ॥ ಪಂ॥ ಹೂಹೂ+ಅಸ್ (ಙಸಿ) ಯಣ್. ಹೂಹ್ವಃ ಹೂಹೂಭ್ಯಾಂ-ಹೂಹೂಭ್ಯಃ ॥ ಷ ॥ ಹೂಹೂ+ಅಸ್ (ಙಸ್) ಯಣ್ ಹೂಹ್ವಃ ಹೂಹ್ವೋಃ ಹೂಹೂ+ಅಮ್-ಹೂಹ್ವಾಮ್. ಸ ॥ ಹೂಹೂ+ಇ (ಙಿ) ಯಣ್ ಹೂಹ್ವಿ ಸೂಹ್ವೋಃ ಹೂಹೂಸು ॥

ಅತಿಚಮೂ ಶಬ್ದ. ಸೈನ್ಯವನ್ನು ಅತಿಕ್ರಮಿಸಿದವನು.

ಅತಿಚಮೂಶಬ್ದೇತು ನದೀಕಾರ್ಯಂ ವಿಶೇಷಃ ॥ ಹೇ ಅತಿಚಮು । ಅತಿಚನ್ವೌ । ಅತಿಚಮ್ವಃ ೨ । ಅತಿಚಮೂನಾಮ್ । ಅತಿಚಮ್ವಾಮ್ ॥

ಚಮೂಂ । ಅತಿಕ್ರಾಂತಃ ಅತಿಚಮೂಃ ॥ ಚಮೂ ಶಬ್ದಕ್ಕೆ ನದೀ ಸಂಜ್ಞೆಯಿರುವುದರಿಂದ ಸಮಾಸವಾದಾಗಲೂ "ಪ್ರಥಮಾನುಲಿಂಗಗ್ರಹಣಂ ಚ" ಎಂಬುದರಿಂದ ಅತಿಚಮೂ ಶಬ್ದಕ್ಕೂ ನದೀ ಸಂಜ್ಞಾ ಬರುವುದರಿಂದ ನದೀ ಕಾರ್ಯಗಳು ಬಂದ ರೂಪಗಳನ್ನು ಸೂತ್ರ ಹೇಳಿರುತ್ತಾನೆ. "ಅಂಬಾರ್ಥನದ್ಯೋರ್ಹ್ರಸ್ವಃ" ಎಂಬುದರಿಂದ ಊಕಾರಕ್ಕೆ ಹ್ರಸ್ವ ಬಂದು ಹ್ರಸ್ವದ ಪರದ ಸುವಿಗೆ "ಏಙ್ಹ್ರಸ್ವಾತ್ ಸಂಬುದ್ಧೇಃ" ಸೂತ್ರದಿಂದ ಲೋಪ. ಹೇ ಅತಿಚಮು. ಚತುರ್ಥ್ಯೇಕವಚನದಲ್ಲಿ "ಆಣ್ನದ್ಯಾಃ" ಸೂತ್ರದಿಂದ ಜೋಸ್. ಹೇ ಅತಿಚಮ್ವೌ. "ಆಟ್ಚ" ಸೂತ್ರದಿಂದ ವೃದ್ಧಿ. ಅತಿಚಮೂ+ಸ್-ಅತಿಚಮೂ+ಅ+ಸ್ ಅತಿಚಮೂ=ಐ. ಯಣ್ ಅತಿಚಮ್ವ್+ಐ ॥ ಸಂಜ್ಞಿಮೀ ಷಷ್ಠೀ ಸಪ್ತಮೀ ವಚನವಚನಗಳಲ್ಲಿ ಅಸ್ ವಿಭಕ್ತಿಗೆ "ಆಣ್ನದ್ಯಾಃ" ಸೂತ್ರದಿಂದ ಆಡಾಗಮ "ಆಟ್ಚ" ಸೂತ್ರದಿಂದ ವೃದ್ಧಿ. ಅತಿಚಮೂ+ಅಸ್- ಅತಿಚಮೂ+ಆ+ಅಸ್-ಅತಿಚಮೂ+ಆಸ್. ಯಣ್ ಅಕಾರಕ್ಕೆ ರುತ್ವವಿಸರ್ಗ. ಅತಿಚಮ್ವಾಸ್ ಅತಿಚಮ್ವಾಃ ೨ ॥ ಷಷ್ಠೀ ಬಹುವಚನದಲ್ಲಿ ಆಮ್ ಪರವಾದಾಗ "ಹ್ರಸ್ವನದ್ಯಾಪ್ತೋ ನುಟ್" ಸೂತ್ರದಿಂದ ಆಮಿಗೆ ನುಟಾಗಮ. ಅತಿಚಮೂನಾಮ್ ॥ ಸಪ್ತಮ್ಯೇಕವಚನದಲ್ಲಿ ಜಿ ಪರವಾದಾಗ ಅದಕ್ಕೆ "ಜಿೞರಾಮ್ನದ್ಯಾಮ್ನೀಭ್ಯಃ" ಸೂತ್ರದಿಂದ ನದಿಯಪರದಲ್ಲಿರುವುದರಿಂದ ಆಮ್ ಆದೇಶ. ಆಮಿಗೆ ಆಡಾಗಮ ವೃದ್ಧಿ. ಅತಿಚಮೂ+ಇ-ಅತಿಚಮೂ+ಆಮ್-ಅತಿಚಮೂ+ಅ-ಆಮ್. ಅತಿಚಮೂ+ಆಮ್ ಯಣ್. ಅತಿಚಮ್ವಾಮ್. ಹೀಗೆ ನದೀಕಾರ್ಯಗಳಿಂದ ಮಾತ್ರ ವಿಶೇಷರೂಪ ಹೊಂದುತ್ತದೆ. ಉಳಿದ ವಿಭಕ್ತಿಗಳಲ್ಲಿ ಹೂಹೂ ಶಬ್ದದಂತೇ ರೂಪವಾಗುತ್ತದೆ.

ಖಲಪೂ ಶಬ್ದ. (ಅಂಗಳಗುಡಿಸುವವನು)

ಖಲಂ ಪುನಾತಿ ಇತಿ ಖಲಪೂಃ. ಅಂಗಳವನ್ನು ಶುದ್ಧಿಮಾಡುವನು. ಪೂಞ್ ಪವನೇ ಧಾತು. ಕ್ವಿಪ್ಪ್ರತ್ಯಯ. ಸುನಿಗೆ ರುತ್ವವಿಸರ್ಗ. ಖಲಪೂಃ. ದ್ವಿವಚನ ಔಪರವಾದಾಗ ಉವರ್ಣಾಂತಧಾತುವಾಮದರಿಂದ "ಅಚಿಶ್ನುಧಾತುಭ್ರುವಾಂ-(ಸೂ. ೨೦೦) ಸೂತ್ರದಿಂದ ಇಯಜಾದೇಶಪ್ರಾಪ್ತವಾದರೆ ಅದಕ್ಕೆ ಅಪವಾದವಾಗಿ ಯಣ್ ಹೇಳುತ್ತಾನೆ

(ಧಾತುವಿನ ಉಕಾರಕ್ಕೆ ಯಣ್ ಹೇಳುವ ಸೂತ್ರ)

೨೧೧. ಓಃ ಸುಪಿ ॥ ೬-೪-೮೩ ॥

ಧಾತ್ವವಯವಸಂಯೋಗಪೂರ್ವೋ ನ ಭವತಿಯ ಉವರ್ಣಸ್ತದಂತೋ ಯೋ ಧಾತುಃ ತದಂತಸ್ಯ ಅನೇಕಾಚೋಂಗಸ್ಯ ಯಣ್ ಸ್ಯಾದಚಿ ಸುಪಿ ॥ ಖಲಪ್ವೌ । ಖಲಪ್ವಃ । ಏವಂ ಸುಲ್ವಾದಯಃ ॥

ಓಃ, ಸುಪಿ ॥ ದ್ವಿಪದ ಸೂತ್ರ. " ಏರನೇಕಾಚೋ೬ಸಂಯೋಗ ಪೂರ್ವಸ್ಯ " ಏಃ ಬಿಟ್ಟು ಎಲ್ಲವೂ ಅನುವೃತ್ತವಾಗುತ್ತದೆ. "ಅಚಿಶ್ನುಧಾತು"–(ಸೂ 201) ಸೂತ್ರದಿಂದ " ಅಚಿ " ಅನುವೃತ್ತಿ. ಏಃ ಸ್ಥಾನದಲ್ಲಿ ಓಃ ಸೇರಿಸಿಕೊಂಡರೆ ಏರನೇಕಾಚ್ಸ್ (ಸೂ 201) ಸೂತ್ರದಲ್ಲಿ ಹೇಳಿದಂತೇ ಸೂತ್ರಾರ್ಥವಾಗುತ್ತದೆ. ' ಅಚಿ ' ಎಂಬುದು ಸುಪಿಗೆ ವಿಶೇಷಣ. " ಯಸ್ಮಿನ್‌ವಿಧಿಸ್ತದಾದಾವಲ್ಗ್ರಹಣೇ " ಪರಿಭಾಷೆಯಿಂದ ಅಜಾದಿ ಯಾದ ಸುಪ್ ಎಂದರ್ಥವಾಗುತ್ತದೆ. "ಏರನೇಕಾಚಃ"– ಸೂತ್ರದಲ್ಲಿ ಹೇಳಿದಂತೆಯೇ ಅನ್ವಯಕ್ರಮ. **ಸೂತ್ರಾರ್ಥ.**— ಧಾತ್ವವಯವಸಂಯೋಗವು ಪೂರ್ವದಲ್ಲಿ ಇಲ್ಲದೇ ಇರುವ ಉಕಾರವೇ ಅಂತವಾದ ಧಾತುವೇ ಅಂತವಾದ ಅನೇಕಾಚಾದ ಅಂಗಕ್ಕೆ ಅಜಾದಿಯಾದ ಸುಪ್ ಪರವಾದಾಗ ಯಣ್ ಬರುತ್ತದೆ. ಖಲಪೂ+ಔ ಎಂದಿರುವಾಗ ಔ ಅಜಾದಿಯಾದ ಪ್ರತ್ಯಯ. ಇದು ಪರವಾದಾಗ ಅನೇಕಾಚಾದ ಅಂಗ= ಖಲಪೂ ಇದು ಉಕಾರಾಂತವಾದ ಧಾತುವೇ ಪೂ ಎಂಬುದು ಅಂತದಲ್ಲಿಕೂಡಿದೆ. ಉಕಾರದಹಿಂದೆ ಧಾತ್ವವಯವಸಂಯೋಗವೂ ಇಲ್ಲ. ಆದುದರಿಂದ ಯಣ್ ಬಂದರೆ ಖಲಪ್ವ್ ಎಂದಾಗುತ್ತದೆ. ಹೀಗೆ ಅಜಾದಿಯಲ್ಲಿ ಎಲ್ಲಾ ಕಡೆಯಲ್ಲಿಯೂ ಯಣ್ ಬರುತ್ತದೆ. ಹೇಲಾದಿಯಲ್ಲಿ ಕೇವಲ ವಿಭಕ್ತಿಯನ್ನು ಸೇರಿಸಬೇಕು. ಪ್ರ ।। ಖಲಪೂಃ ಖಲಪ್ವೌ–ಖಲಪ್ವಃ । ದ್ವಿ–ಖಲಪ್ವಮ್–ಖಲಪ್ವೌ । ಖಲಪ್ವಃ॥ ತೃ–ಖಲಪ್ವಾ–ಖಲಪೂಭ್ಯಾಮ್ ಖಲಪೂಭಿಃ । ಚ–ಖಲಪ್ವೇ –ಖಲಪೂಭ್ಯಾಮ್–ಖಲಪೂಭ್ಯಃ ॥ ಪಂ–ಖಲಪ್ವಃ–ಖಲಪೂಭ್ಯಃ ॥ ಷ–ಖಲಪ್ವಃ–ಖಲಪ್ವೋಃ–ಖಲಪ್ವಾಮ್ ॥ ಸ– ಖಲಪ್ವಿ–ಖಲಪ್ವೋಃ–ಖಲಪೂಷು ॥

ಹೀಗೇ ಸುಲೂ ಮುಂತಾದ ಶಬ್ದಗಳನ್ನೂ ತಿಳಿಯಬೇಕು. ಊಕಾರಾಂತ ಧಾತುವೇ ಅಂತನಾದ ಶಬ್ದಗಳಾದುದರಿಂದ ಯಣ್ ಬರುತ್ತದೆ.

ಸ್ವಭೂ ಶಬ್ದ (ಕಾರಣವಿಲ್ಲದವನು)

ಸ್ವಸ್ಮಾತ್ ಭವತಿ ಇತಿ ಸ್ವಭೂಃ । ಭೂ ಧಾತುವಿಗೆ ಕ್ವಿಪ್ ಬಂದಿದೆ. ತನ್ನಿಂದಲೇ ತಾನು ಆಗುವವನು. ಬೇರೆ ಕಾರಣವಿಲ್ಲದವನು. ಸು ಪರವಾದಾಗ ರುತ್ವವಿಸರ್ಗ. ಸ್ವಭೂಃ । ಸ್ವಭೂ + ಔ ಎಂದಿರುವಾಗ ಉವರ್ಣಾಂತ ಧಾತುವಾಗಿ ಸಂಯೋಗ ಪೂರ್ವದಲ್ಲಿ ಇಲ್ಲವ ಉಕಾರವಿರುವುದರಿಂದ " ಓಃ ಸುಪಿ " ಸೂತ್ರದಿಂದ ಯಣ್ ಪ್ರಾಪ್ತವಾದರೆ " ನ ಭೂಸುಧಿಯೋಃ " (ಸೂ 203) ಸೂತ್ರದಿಂದ ಅದಕ್ಕೆ ನಿಷೇಧ. ಆಗ " ಅಚಿಶ್ನುಧಾತುಭ್ರುವಾಂ–ಸೂತ್ರದಿಂದ ಉವಜಾದೇಶ. ಸ್ವಭ್+ಉವ್+ಔ–ಸ್ವಭುವೌ ಹೀಗೆ ಅಜಾದಿಯಲ್ಲಿ ಎಲ್ಲಾ ಕಡೆಯಲ್ಲಿಯೂ ಉವಜಾದೇಶ.

ಪ್ರ—ಸ್ವಭೂಃ । ಸ್ವಭುವೌ । ಸ್ವಭುವಃ ॥ ದ್ವಿ—ಸ್ವಭುವಮ್ । ಸ್ವಭುವೌ । ಸ್ವಭುವಃ ॥ ತೃ—ಸ್ವಭುವಾ । ಸ್ವಭೂಭ್ಯಾಮ್ । ಸ್ವಭೂಭಿಃ ॥ ಚ—ಸ್ವಭುವೇ ।

ಸ್ವಭೂಭ್ಯಾಮ್ । ಸ್ವಭೂಭ್ಯಃ ॥ ಪಂ—ಸ್ವಭುವಃ । ಸ್ವಭೂಭ್ಯಾಮ್ । ಸ್ವಭೂಭ್ಯಃ ॥ ಷ—ಸ್ವಭುವಃ । ಸ್ವಭುವೋಃ । ಸ್ವಭುವಾಮ್ ॥ ಸ—ಸ್ವಭುವಿ । ಸ್ವಭುವೋಃ । ಸ್ವಭೂಷು ॥

ವರ್ಷಾಭೂ ಶಬ್ದ (ಕಪ್ಪೆ)

ವರ್ಷಾಸು ಭವತಿ ॥ ಮಳೆಗಾಲದಲ್ಲಿ ಹೆಚ್ಚಾಗುವುದು ಕಪ್ಪೆ. ಸುವಿಗೆ ರುತ್ವವಿಸರ್ಗ. ವರ್ಷಾಭೂಃ ॥ ದ್ವಿವಚನ ಔ ಪರವಾದಾಗ ಮೊದಲು " ಅಚಿಶ್ನು–ಧಾತುಭ್ರುವಾಂ"–ಸೂತ್ರದಿಂದ ಉವಜಾದೇಶ ಪ್ರಾಪ್ತಿ. ಅದನ್ನು ಬಾಧಿಸಿ " ಓಃ ಸುಪಿ" ಸೂತ್ರದಿಂದ ಪುನಃ ಯಣ್. ಆಮೇಲೆ " ನಭೂಸುಧಿಯೋಃ " ಸೂತ್ರದಿಂದ ಯಣಿಗೆ ನಿಷೇಧ ಪ್ರಾಪ್ತವಾದರೆ ಪುನಃ ಯಣ್ ಹೇಳುವ ಸೂತ್ರವನ್ನು ಹೇಳುತ್ತಾನೆ.

(ವರ್ಷಾಭೂ ಶಬ್ದಕ್ಕೆ ಯಣ್ ಹೇಳುವ ಸೂತ್ರ)

೨೧೨. ವರ್ಷಾಭ್ವಶ್ಚ ॥ ೬-೪-೮೪ ॥

ಅಸ್ಯ ಯಣ್ ಸ್ಯಾದಚಿ ಸುಪಿ ॥ ವರ್ಷಾಭ್ವಾವಿತ್ಯಾದಿ ॥

ವರ್ಷಾಭ್ವಶ್ಚ ॥ ದ್ವಿಪದ ಸೂತ್ರ. " ಓಃ ಸುಪಿ " ಸೂತ್ರವೇ ಅನುವೃತ್ತವಾಗುತ್ತದೆ. " ಅಚಿಶ್ನುಧಾತುಭ್ರುವಾಂ–" ಸೂತ್ರದಿಂದ " ಅಚಿ " "ಇಣೋಯಣ್" ಸೂತ್ರದಿಂದ " ಯಣ್ " ಅನುವೃತ್ತವಾಗುತ್ತವೆ. **ಸೂತ್ರಾರ್ಥ**—ವರ್ಷಾಭೂಶಬ್ದದ ಉಕಾರಕ್ಕೆ ಅಜಾದಿಯಾದ ಸುಪ್ ಪರದಲ್ಲಿರುವಾಗ ಯಣ್ ಬರುತ್ತದೆ. ಯಣ್ ನಿಷೇಧಕ್ಕೆ ನಿಷೇಧ. ವರ್ಷಾಭ್ವಾ. ಹೀಗೆ ಅಜಾದಿಯಾದ ವಿಭಕ್ತಿಗಳಲ್ಲೆಲ್ಲಾ ಈ ಸೂತ್ರದಿಂದ ಯಣಾದೇಶ. ವರ್ಷಾಭ್ವಃ ಇತ್ಯಾದಿ. ಪ್ರಧೀ ಶಬ್ದದಂತೆ ತಿಳಿಯಬೇಕು.

ದೃನ್ಭಾ ಶಬ್ದ (ಹಿಂಸೆಯನ್ನು ಹೊಂದುವುದು)

ದೃನ್ ಎಂಬ ನಾಂತವಾದ ಹಿಂಸಾರ್ಥಕವಾದ ಅವ್ಯಯ ಉಪಪದವಾಗಿರುವಾಗ ಭೂ ಧಾತುವಿಗೆ ಕ್ವಿಪ್. ಹಿಂಸೆಯನ್ನು ಹೊಂದುವುದು ಮರ ಮುಂತಾದವು. ದೃನ್ಭೂಃ. ಔ ಪರವಾದಾಗ ವಾರ್ತಿಕದಿಂದ ಯಣ್ ಹೇಳುತ್ತಾನೆ.

(ಭೂವಿಗೆ ಯಣ್ ಹೇಳುವ ವಾರ್ತಿಕ)

ವಾ ॥ (ದೃನ್, ಕರ, ಪುನಃ ಪೂರ್ವಸ್ಯ ಭುವೋ ಯಣ್ ವಕ್ತವ್ಯಃ)

ದೃನ್ಭ್ವೌ । ಏವಂ ಕರಭ್ವಃ ॥

ದೃನ, ಕರ, ಪುನಃ ಈ ಮೂರು ಶಬ್ದಗಳೇ ಪೂರ್ವದಲ್ಲಿರುವ ಭೂವಿಗೆ ಅಜಾದಿ ಸುಪ್ ಪರವಾದಾಗ ಯಣ್ ಬರುತ್ತದೆ. (ಹೇಳಬೇಕು) " ನಭೂಸುಧಿಯೋಃ " ಸೂತ್ರಕ್ಕೆ ಅಪವಾದ. ಆದರಿಂದ ನಿಷೇಧ ಪ್ರಾಪ್ತವಾದರೆ ಪುನಃ ಯಣ್ ಹೇಳಿದ್ದಾನೆ. ಅಜಾದಿ ಸುಪ್ ಪರವಾದಾಗ ಎಲ್ಲಾ ಕಡೆಯಲ್ಲಿಯೂ ಯಣ್. ದೃನ್ಭ್ವಾ–ದೃನ್ಭ್ವಃ ॥ ಇತ್ಯಾದಿ ವರ್ಷಾಭೂ ಶಬ್ದದಂತೇ ತಿಳಿದುಕೊಳ್ಳಬೇಕು. ಹೀಗೆಯೇ ಕರಭೂಃ, ಪುನರ್ಭೂಃ ಶಬ್ದಗಳೂ ಅಜಾದಿಯಲ್ಲಿ ಯಣ್ ಹೊಂದುತ್ತವೆ.

ಇತಿ ಊಕಾರಾಂತ ಶಬ್ದಾಃ

ಋಕಾರಾಂತ ಧಾತೃ ಶಬ್ದ (ಬ್ರಹ್ಮ)

ಧಾ ಧಾತುವಿಗೆ ತೃಚ್ ಪ್ರತ್ಯಯ ಬಂದರೆ ಧಾತೃ ಎಂದಾಗುತ್ತದೆ. ಧಾತೃ+ಸು (ಉ ಇತ್) ಎಂದಿರುವಾಗ " ಋದುಶನಸ್ಪುರುದಂಸೋಽನೇಹಸಾಂ ಚ " ಸೂತ್ರದಿಂದ ಋಕಾರಕ್ಕೆ ಅನಜಾದೇಶ. (ಅನ್ ಉಳಿಯುತ್ತದೆ) ಧಾತನ್+ಸ್ ಎಂದಿರುವಾಗ "ಅಪ್‌ತೃನ್‌ತೃಚ್"–(ಸೂ207) ಸೂತ್ರದಿಂದ ತೃಜಂತವಾದುದರಿಂದ ಉಪಧಾದೀರ್ಘ ಧಾತಾನ್+ಸ್. ಹಲಂತದ ಪರದಲ್ಲಿ ಸು ಪರವಾದುದರಿಂದ " ಹಲ್‌ಙ್ಯಾಭ್ಯೋ–" (ಸೂ. 179) ಸೂತ್ರದಿಂದ ಸುವಿಗೆ ಲೋಪ. ಪ್ರಾತಿಪದಿಕ ಸಂಜ್ಞೆಯುಳ್ಳ ಪದದ ಕೊನೆಯಲ್ಲಿ ನಕಾರವಿರುವುದರಿಂದ " ನಲೋಪಃ ಪ್ರಾತಿಪದಿಕಾಂತಸ್ಯ " ಸೂತ್ರದಿಂದ ನಲೋಪ. ಧಾತಾನ್–ಧಾತಾ. ದ್ವಿವಚನದಲ್ಲಿ ಔ ಪರವಾದಾಗ "ಋತೋಙಿ ಸರ್ವನಾಮಸ್ಥಾನಯೋಃ " ಸೂತ್ರದಿಂದ ಋಕಾರಕ್ಕೆ ಗುಣ. " ಉರಣ್ರಪರಃ " ಸೂತ್ರದಿಂದ ರಪರವಾಗಿ ಬಂದರೆ ಧಾತಾರ್+ಔ ಎಂದಾಗುತ್ತದೆ. ಆಗ "ಅಪ್‌ತೃನ್–" (ಸೂತ್ರ 207) ಸೂತ್ರದಿಂದ ಉಪಧಾದೀರ್ಘ. ಧಾತಾರೌ. ಜಸಿನಲ್ಲಿಯೂ ಹಿಂದಿನಂತೇ ಗುಣದೀರ್ಘ. ಧಾತಾರಸ್. ಸಕಾರಕ್ಕೆ ರುತ್ವ ವಿಸರ್ಗ. ಧಾತಾರಃ ॥ ಸಂಬುದ್ಧಿಯಲ್ಲಿ ಸು ಪರವಾದಾಗ ಅಸಂಬುದ್ಧಿ ಸುವಿನಲ್ಲಿ ಅನಜಾದೇಶ ಹೇಳಿದುದರಿಂದ ಅನಜ್ ಬರುವುದಿಲ್ಲ. "ಋತೋಙಿಸ–" ಸೂತ್ರದಿಂದ ಗುಣ. ಹೇ ಧಾತರ್ + ಸ್. ದೀರ್ಘವೂ ಅಸಂಬುದ್ಧಿಯಲ್ಲಿ ಹೇಳಿದುದರಿಂದ ದೀರ್ಘವಿಲ್ಲ. " ಹಲ್‌ಙ್ಯಾಭ್ಯೋದೀರ್ಘಾತ್–" ಸೂತ್ರದಿಂದ ಸು ಲೋಪ. " ಖರವಸಾನಯೋರ್ವಿಸರ್ಜನೀಯಃ " ಸೂತ್ರದಿಂದ ರೇಫಕ್ಕೆ ವಿಸರ್ಗ. ಹೇ ಧಾತಃ. ದ್ವಿಬಹುವಚನಗಳಲ್ಲಿ ಹಿಂದಿನಂತೇ ರೂಪ. ಹೇ ಧಾತಾರೌ–ಹೇ ಧಾತಾರಃ । ಅಮಿನಲ್ಲಿ " ಋತೋಙಿ–" ಸೂತ್ರದಿಂದ ಗುಣ. "ಅಪ್‌ತೃನ್" ಸೂತ್ರದಿಂದ ಉಪಧಾದೀರ್ಘ. ಧಾತಾರಮ್. ದ್ವಿವಚನದಲ್ಲಿ ಧಾತಾರೌ॥ ಶಸಿನಲ್ಲಿ ಸರ್ವನಾಮಸ್ಥಾನವಲ್ಲದುದರಿಂದ ಗುಣಾದಿಗಳು ಬರುವುದಿಲ್ಲ. ಧಾತೃ+ಅಸ್ ಎಂದಿರುವಾಗ "ಪ್ರಥಮಯೋಃ ಪೂರ್ವಸವರ್ಣಃ" ಸೂತ್ರದಿಂದ ಪೂರ್ವಸವರ್ಣದೀರ್ಘ.

ಧಾತ್ಮಾಸ್–" ತಸ್ಮಾಚ್ಛಸೋನಃ ಪುಂಸಿ" ಸೂತ್ರದಿಂದ ಸಕಾರಕ್ಕೆ ನಕಾರ. ಧಾತ್ಮಾನ್. ತೃತೀಯಾದಲ್ಲಿ ಟಾ ಪರವಾದಾಗ ಯಣ್. ಧಾತೃ+ಆ=ಧಾತ್ರಾ–ಧಾತೃಭ್ಯಾಮ್–ಧಾತೃಭಿಃ ।

ಚತುರ್ಥೀ ಏಕವಚನದಲ್ಲಿ ಙೇ ಪರವಾದಾಗ ಯಣ್. ಧಾತೃ+ಏ=ಧಾತ್ರೇ ಧಾತೃಭ್ಯಾಮ್ ಧಾತೃಭ್ಯಃ ॥

ಪಂಚಮಿ ಏಕವಚನದಲ್ಲಿ ಙಸಿ ಪ್ರತ್ಯಯ. ಧಾತೃ+ಅಸ್ ಎಂದಿರುವಾಗ " ಋತಉತ್ " ಸೂತ್ರದಿಂದ ಋಕಾರಕ್ಕೂ ಙಸಿನ ಅಕಾರಕ್ಕೂ ಉಕಾರಏಕಾದೇಶ. ಅದು ರಪರವಾಗಿಬಂದರೆ ಧಾತರ್‌ಸ್ ಎಂದಾಗುತ್ತದೆ. " ರಾತ್ಸಸ್ಯ " ಸೂತ್ರದಿಂದ ಸಂಯೋಗಾಂತದ ಸಕಾರಕ್ಕೆ ಲೋಪ. ರೇಫಕ್ಕೆ ವಿಸರ್ಗ. ಧಾತುಃ–ಧಾತೃಭ್ಯಾಮ್-ಧಾತೃಭ್ಯಃ ॥

ಷಷ್ಠೀ ಏಕವಚನದಲ್ಲಿಯೂ ಪಂಚಮಿ ಏಕವಚನದಂತೇ ರೂಪ. ಧಾತುಃ. ದ್ವಿವಚನದಲ್ಲಿ ಓಸ್‌ಪರವಾದಾಗ ಯಣ್. ಧಾತೃ+ಓಸ್=ಧಾತ್ರೋಸ್. ಸಕಾರಕ್ಕೆ ರುತ್ವವಿಸರ್ಗ .ಧಾತ್ರೋಃ. ಬಹುವಚನದಲ್ಲಿ ಧಾತೃ+ಆಮ್ ಎಂದಿರುವಾಗ " ಹ್ರಸ್ವನದ್ಯಾಪೋನುಟ್ " ಸೂತ್ರದಿಂದ ಆಮಿಗೆ ನುಟಾಗಮ. " ನಾಮಿ " ಸೂತ್ರದಿಂದ ಅಂಗಕ್ಕೆ ದೀರ್ಘ. ಧಾತೃ+ನಾಮ್ ಧಾತ್ಮಾನಾಮ್. ಋಕಾರಪರದಲ್ಲಿ ನಕಾರ ಬಂದುದರಿಂದ ವಾರ್ತಿಕದಿಂದ ಣತ್ವಹೇಳುತ್ತಾನೆ.

(ನಕಾರಕ್ಕೆ ಣತ್ವ ಹೇಳುವ ವಾರ್ತಿಕ)

ವಾ॥ (ಋವರ್ಣಾನ್ನಸ್ಯ ಣತ್ವಂ ವಾಚ್ಯಮ್ ॥)

ಋಕಾರದ ಪರದಲ್ಲಿರುವ ನಕಾರಕ್ಕೆ ಣಕಾರಾದೇಶ ಬರುತ್ತದೆಂದು ಹೇಳಬೇಕು. ಈ ವಾರ್ತಿಕದಿಂದ ಣತ್ವಬಂದರೆ ಧಾತ್ಮಾಣಾಮ್.

ಸಪ್ತಮಿಯಲ್ಲಿ ಙಿಪರವಾದಾಗ " ಋತೋಙಿಸರ್ವನಾಮಸ್ಥಾನಯೋಃ " ಸೂತ್ರದಿಂದ ಋಕಾರಕ್ಕೆ ಗುಣ. (ಅರ್) ರಪರವಾಗಿ ಬಂದರೆ ಧಾತರ್+ಇ= ಧಾತರಿ. ಓಸಿನಲ್ಲಿ ಯಣ್. ಧಾತ್ರೋಃ. ಸುಪಿನಲ್ಲಿ " ಆದೇಶಪ್ರತ್ಯಯಯೋಃ " ಷತ್ವ. ಧಾತೃಷು. ಹೀಗೆಯೇ ನಪ್ತೃಮುಂತಾದ ಋಕಾರಾಂತ ಶಬ್ದಗಳನ್ನು ತಿಳಿಯಬೇಕು.

" ಅಪ್‌ತೃನ್‌ತೃಚ್— " ಸೂತ್ರದಲ್ಲಿ ತೃನ್‌ತೃಚ್ ಎರಡು ಪ್ರತ್ಯಯಗಳು ಉಕ್ತವಾಗಿವೆ. ಅವು ಧಾತುಸಾಮಾನ್ಯದ ಮೇಲೆ ಬರುತ್ತವೆ. ಪಾಣಿನಿಯು ಹೇಳ

ದಿದ್ದರೂ ಶಾಕಟಾಯನರು ಉಣಾದಿಯಲ್ಲಿ ಎಲ್ಲಾ ಶಬ್ದಗಳೂ ಧಾತುವಿನಿಂದೇ ನಿಷ್ಪನ್ನವಾಗಿವೆಯೆಂದು ಪ್ರತಿಪಾದಿಸಿರುತ್ತಾರೆ. ಪ್ರಕೃತಿ ಪ್ರತ್ಯಯವನ್ನು ವಿವೇಚನಮಾಡುವುದಾದರೆ ನಪ್ತ್ರಾದಿಶಬ್ದಗಳೂ ತೃಜಂತರೂಪಗಳೆಂದು ಉಣಾದಿಸೂತ್ರದಿಂದ ತಿಳಿದು ಬರುತ್ತದೆ. ಪ್ರಕೃತಿಪ್ರತ್ಯಯ ವಿವೇಚನೆ ಮಾಡುವುದಕ್ಕೆ ವ್ಯುತ್ಪತ್ತಿಪಕ್ಷವೆಂದು ಹೆಸರು. ಉಣಾದಿನಿಷ್ಪನ್ನಶಬ್ದಗಳಲ್ಲಿ ವ್ಯುತ್ಪತ್ತಿಪಕ್ಷವೂ ಇವೆ. ಅವ್ಯುತ್ಪತ್ತಿಪಕ್ಷವೆಂದರೆ ಶಬ್ದ ಹೇಗಾಯಿತು ? ಯಾವಪ್ರಕೃತಿ ಪ್ರತ್ಯಯವೆಂದು ವಿಚಾರಿಸದೇ ಇರುವುದು. ಪ್ರಕೃತ ನಪ್ತ್ರಾದಿವಿಷಯದಲ್ಲಿ ವ್ಯುತ್ಪತ್ತಿಪಕ್ಷವನ್ನು ಆಶ್ರಯಣಮಾಡಿದರೆ ಅವುಗಳು ತೃನ್ ಪ್ರತ್ಯಯಾಂತಗಳೆಂದು ತಿಳಿಯುತ್ತೇವೆ. ಆಗ ಅವುಗಳನ್ನು ಪುನಃ ಹೇಳಬೇಕಾಗಿಲ್ಲ. ಸೂತ್ರದಲ್ಲಿ ತೃನ್ ತೃಜಂತಗಳ ಉಪಧೆಗೂ ಉಪಧೆಯ ದೀರ್ಘವು ಸಾಮಾನ್ಯವಾಗಿ ವಿಹಿತವಾದುದರಿಂದ ಅವುಗಳ ಉಪಧೆಗೂ ಬರುತ್ತವೆ. ಹೀಗೆ ಸಿದ್ಧವಾಗುವಾಗ ಪುನಃ ಹೇಳಿದುದೇಕೆ ? ಎಂದರೆ ನಿಯಮಕ್ಕೆ ಸ್ಮರ ಪುನಃ ಹೇಳಿದೆ ಎನ್ನಬೇಕು. " ಸಿದ್ಧೇ ಸತಿ ಆರಭ್ಯಮಾಣಃ ವಿಧಿಃ ನಿಯಮಾಯ " ಎಂದು ಹಿಂದೆ ಹೇಳಿದೆ. ಉಣಾದಿನಿಷ್ಪನ್ನಗಳಾದ ತೃನ್ತೃಜಂತಗಳಲ್ಲಿ ಉಪಧಾದೀರ್ಘಬರುವುದಾದರೆ ಸೂತ್ರದಲ್ಲಿ ಪಠಿತವಾದ ನಪ್ತ್ರಾದಿಗಳಿಗೆ ಮಾತ್ರ. ಬೇರೆ ಶಬ್ದಗಳ (ತೃನ್ತೃಜಂತಗಳ) ಉಪಧೆಗೆ ದೀರ್ಘಬರುವುದಿಲ್ಲ, ಎಂದು ನಿಯಮಾಕಾರ. ಆಗ ಪಿತ್ರಾದಿಶಬ್ದಗಳು ತೃನ್ನಂತಗಳಾದರೂ ಅವುಗಳ ಉಪಧೆಗೆ ದೀರ್ಘಬರುವುದಿಲ್ಲ.

ಪಿತೃಶಬ್ದ (ತಂದೆ)

ಇದು ಧಾತೃಶಬ್ದದಂತೇ ಪ್ರಕ್ರಿಯೆಯನ್ನು ಹೊಂದಿದರೂ ಸರ್ವನಾಮಸ್ಥಾನದಲ್ಲಿ ಮೇಲೆ ಹೇಳಿದ ನಿಯಮದಿಂದ "ಅಸ್ತೃನ್ತೃಚ್"-ಸೂತ್ರದಿಂದ ಉಪಧಾದೀರ್ಘವನ್ನು ಮಾತ್ರ ಹೊಂದುವುದಿಲ್ಲ. ಪ್ರ. ಪಿತಾ–ಪಿತರೌ–ಪಿತರಃ ॥ ದ್ವಿ. ಪಿತರಂ–ಪಿತರೌ–ಪಿತೄನ್. ಇನ್ನು ಉಳಿದ ವಿಭಕ್ತಿಗಳಲ್ಲಿ ಧಾತೃಶಬ್ದದಂತೇರೂಪ. ಹೀಗೆಯೇ ಜಾಮಾತೃ (ಅಳಿಯ) ಭ್ರಾತೃ=(ಸಹೋದರ) ಶಬ್ದಗಳೂ ಆಗುತ್ತವೆ.

ನೃ ಶಬ್ದ (ಮನುಷ್ಯನು.)

ನೃ+ಸು ಎಂದಿರುವಾಗ " ಋದುಶನಸ್ಪುರುದಂಸೋಽನೇಹಸಾಂಚ " ಸೂತ್ರದಿಂದ ಋಕಾರಕ್ಕೆ ಅನಙಾದೇಶ. ನನ್+ಸ್. ನಾಂತಕ್ಕೆ ಸರ್ವನಾಮಸ್ಥಾನಪರವಾದುದರಿಂದ "ಸರ್ವನಾಮಸ್ಥಾನೇ ಚಾಸಂಬುದ್ಧೌ" ಸೂತ್ರದಿಂದ ಉಪಧಾದೀರ್ಘ. ತೃಜಂತವಾಗದಿದ್ದುದರಿಂದ "ಅಸ್ತೃನ್"–ಸೂತ್ರದಿಂದ ದೀರ್ಘಬರುವುದಿಲ್ಲ. ನಾನ್+ಸ್

"ಹಲ್ಙ್ಯಾಭ್ಯೋದೀರ್ಘಾತ್"–ಸೂತ್ರದಿಂದ ಸು ಲೋಪ. "ನ ಲೋಪಃ ಪ್ರಾತಿಪದಿಕಾಂತಸ್ಯ" ಸೂತ್ರದಿಂದ ನಲೋಪ. ನಾ. ನೃ+ಔ ಎಂದಿರುವಾಗ "ಋತೋಜ್ಞಿಸರ್ವನಾಮಸ್ಥಾನಯೋಃ" ಸೂತ್ರದಿಂದ ಋಕಾರಕ್ಕೆ ಗುಣ. ನರ್+ಔ=ನರೌ ॥ ಜಸಿನಲ್ಲಿಯೂ ಹೀಗೆ ಗುಣ. ನರಃ ॥ ಸಂಬುದ್ಧಿಯಲ್ಲಿ ಗುಣ. ಹೇ ನರ್+ಸ್. "ಹಲ್ಙ್ಯಾಭ್ಯೋದೀರ್ಘಾತ್–" ಸೂತ್ರದಿಂದ ಸು ಲೋಪ. ರೇಫಕ್ಕೆ ಅವಸಾನದಲ್ಲಿ ವಿಸರ್ಗ. ಹೇ ನಃ–ಹೇ ನರೌ–ಹೇ ನರಃ ॥ ಅಮ್–ಔಟ್‌ನಲ್ಲಿ ಹಿಂದಿನಂತೇ ಗುಣ. ನರಮ್–ನರೌ. ನೃ+ಶಸ್–ನೃ+ಅಸ್ ಎಂದಿರುವಾಗ ಪೂರ್ವಸವರ್ಣದೀರ್ಘ. ಸಕಾರಕ್ಕೆ ನಕಾರಾದೇಶ. ನೄನ್. ಷಷ್ಠೀ ದ್ವಿವಚನದವರೆಗೂ ಧಾತೃಶಬ್ದದಂತೇ ರೂಪ. ತೃ–ನ್ತ್ರಾ–ನೃಭ್ಯಾಮ್–ನೃಭಿಃ ॥ ಙ– ನ್ಯೈ–ನೃಭ್ಯಾಮ್–ನೃಭ್ಯಃ । ಪಂ–ನುಃ–ನೃಭ್ಯಾಮ್–ನೃಭ್ಯಃ । ಷಷ್ಠೀ—ನುಃ—ನ್ರೋಃ, ನೃ+ಆಮ್ ಎಂದಿರುವಾಗ "ಹ್ರಸ್ವನದ್ಯಾಪೋನುಟ್" ಸೂತ್ರದಿಂದ ಆಮಿಗೆ ನುಟಾಗಮ. ನೃ+ನಾಮ್. ಇಲ್ಲಿ "ನಾಮಿ" ಸೂತ್ರದಿಂದ ದೀರ್ಘ ಪ್ರಾಪ್ತವಾದರೆ ವಿಕಲ್ಪದೀರ್ಘ ಹೇಳುತ್ತಾನೆ.

(ನೃ ಶಬ್ದಕ್ಕೆ ವಿಕಲ್ಪದೀರ್ಘ ಹೇಳುವ ಸೂತ್ರ)

೨೧೩. ನೃ ಚ ॥ ೬-೪-೬ ॥

ಅಸ್ಯ ನಾಮಿ ವಾ ದೀರ್ಘಃ । ನೄಣಾಮ್ । ನೃಣಾಮ್ ॥

ನೃ ಚ ॥ ದ್ವಿಪದಸೂತ್ರ. ನೃ ಎಂಬುದು ಲುಪ್ತಷಷ್ಠೀಕ. ಷಷ್ಠ್ಯಂತವಾಗಿ ಹೇಳುವಲ್ಲಿ ಹೇಳಲಿಲ್ಲ. "ನಾಮಿ" ಸೂತ್ರವೇ ಅನುವೃತ್ತವಾಗುತ್ತದೆ. "ಢ್ರಲೋಪೇ-ದೀರ್ಘೋ"–ಸೂತ್ರದಿಂದ "ದೀರ್ಘಃ" "ಛಂದಸ್ಯುಭಯಥಾ" ಸೂತ್ರದಿಂದ "ಉಭಯಥಾ" ಪದಗಳಿಗೆ ಅನುವೃತ್ತಿ. ಉಭಯಥಾ ಎಂದರೆ ವಿಕಲ್ಪ. **ಸೂತ್ರಾರ್ಥ–** ನೃಶಬ್ದಕ್ಕೆ ನಾಮ್ ಪರವಾದಾಗ ವಿಕಲ್ಪವಾಗಿ ದೀರ್ಘ ಬರುತ್ತದೆ. ನೄನಾಂ–ನೃಣಾಂ ॥ ಋಕಾರದಪರವಲ್ಲಿ ನಕಾರಬಂದುದರಿಂದ "ಋವರ್ಣಾನ್ನಸ್ಯ ಣತ್ವಂ ವಾಚ್ಯಮ್" ವಾರ್ತಿಕದಿಂದ ನಕಾರಕ್ಕೆ ಣತ್ವ. ನೄಣಾಮ್–ನೃಣಾಮ್ ॥ ಸಪ್ತಮೀ ಏಕವಚನದಲ್ಲಿ "ಋತೋಜ್ಞಿಸರ್ವನಾಮಸ್ಥಾನಯೋಃ" ಸೂತ್ರದಿಂದ ಗುಣ. ನರ್+ಇ=ನರಿ. ಓಸಿನಲ್ಲಿ ಯಣ್. ನ್ರೋಃ ಸುಪಿನಲ್ಲಿ ಷತ್ವ. ನೃಷು ॥

ಇತಿ ಋಕಾರಾಂತಾಃ ॥

ಇಕಾರಾಂತ, ಏಕಾರಾಂತ, ಏಕಾರಾಂತಶಬ್ದಗಳು ಸಂಸ್ಕೃತದಲ್ಲಿ ಅಪ್ರಸಿದ್ಧವಾದುದರಿಂದ ಹೇಳಲಿಲ್ಲ.

ಓಕಾರಾಂತ. ಗೋ ಶಬ್ದ. (ಎತ್ತು.)

ಗೋಶಬ್ದದಮೇಲೆ ಪ್ರಥಮಾ ಸುಪರವಾದಾಗ ಸರ್ವನಾಮಸ್ಥಾನಕ್ಕೆ ಜ ದ್ವದ್ಭಾವ ಹೇಳುತ್ತಾನೆ.

(ಸುಟಗೆ ಣಿದ್ವದ್ಭಾವ ಹೇಳುವ ಸೂತ್ರ)

೨೧೪. ಗೋತೋ ಣಿತ್ ॥ ೭-೧-೯೦ ॥

ಓಕಾರಾದ್ವಿಹಿತಂ ಸರ್ವನಾಮಸ್ಥಾನಂ ಣಿದ್ವತ್ ॥ ಗೌಃ, ಗಾವೌ, ಗಾವಃ ॥

ಗೋತಃ, ಣಿತ್ ॥ ದ್ವಿಪದ ಸೂತ್ರ. ವಾರ್ತಿಕಕಾರರು "ಓತೋಣಿದಿತ್ಯಾವಾಚ್ಯಮ್" ಗೋತಃ ಶಬ್ದ ಸ್ಥಾನದಲ್ಲಿ ಓತಃ ಎಂದು ಪಾಠಮಾಡಿರುವುದರಿಂದ ವ್ಯಾಖ್ಯಾನ ಯಲ್ಲಿ ಅದನ್ನು ಆಶ್ರಯಿಸಿ ವ್ಯಾಖ್ಯಾನ ಮಾಡಿರುತ್ತಾನೆ. "ಇತೋತ್ಸರ್ವನಾಮಸ್ಥಾನೇ" ಸೂತ್ರದಿಂದ "ಸರ್ವನಾಮಸ್ಥಾನೇ" ಪದವು ಅನುವೃತ್ತವಾಗಿ ವಿಪರಿಣತವಾಗುತ್ತದೆ. **ಸೂತ್ರಾರ್ಥ**—ಓಕಾರದ ಮೇಲೆ ವಿಹಿತವಾದ ಸರ್ವನಾಮಸ್ಥಾನವು ಣಿತ್ತಿನಂತೆ ಆಗುತ್ತದೆ. ಣಿತ್ ಪರವಾದಾಗ ಯಾವ ಕಾರ್ಯ ಬರುತ್ತದೆಯೋ ಆ ಕಾರ್ಯ ಬರುತ್ತದೆ. ಇದು ಕಾರ್ಯಾತಿದೇಶ. ಸುಟ್ ಪಂಚಕ ಸರ್ವನಾಮಸ್ಥಾನ. ಇದು ಣಿತ್ತಲ್ಲ. ಣಿತ್ತಿನಂತೆ ಆಗುತ್ತದೆ ಎಂದುದರಿಂದ ಣಿತ್ತಿನ ಕಾರ್ಯ ಬರುತ್ತದೆ ಎಂದು ತಿಳಿಯಬೇಕು ಓಕಾರದ ಪರದಲ್ಲಿರುವ ಎಂದು ಅರ್ಥಮಾಡಿಲ್ಲ. ಓಕಾರದ ಮೇಲೆ ವಿಹಿತವಾಗಿರಬೇಕು. ವಿಹಿತ ವಿಶೇಷಣ ಮಾಡದೇ ಹೋದರೆ ಹೇ ಭಾನೋ+ಸ ಎಂದಿರುವಾಗಲೂ ಣಿತ್ ಕಾರ್ಯ ಬರಬೇಕಾಗುತ್ತದೆ. ಆದರೆ ಅಲ್ಲಿ ಸು ಓಕಾರದ ಮೇಲೆ ವಿಹಿತವಾಗಿಲ್ಲ. ಉಕಾರದ ಮೇಲೆ ವಿಹಿತವಾಗಿ ಅದನ್ನು ನಿಮಿತ್ತೀಕರಿಸಿ ಗುಣ ಬಂದಿದೆ, ಆದುದರಿಂದ ಅಲ್ಲಿ ಣಿತ್ಕಾರ್ಯವಿಲ್ಲ. ಗೋಶಬ್ದ ಒಂದನ್ನೇ ತೆಗೆದುಕೊಂಡಿದ್ದರೆ ಸುಡ್ಯೋ ಮುಂತಾದ ಓಕಾರಾಂತಗಳಲ್ಲಿ ಈಕಾರ್ಯ ಬರುತ್ತಿತ್ತಲ್ಲ. ಎಲ್ಲಾ ಕಡೆಯೂ ಣಿತ್ಕಾರ್ಯ ಬರುವುದಕ್ಕೋಸ್ಕರ ಸಾಮಾನ್ಯವಾಗಿ ಓತಃ ಎಂದಿರುತ್ತಾನೆ. ಪ್ರಕೃತ ಗೋ+ಸ್ ಎಂದಿರುವಾಗ ಸ್ ಣಿತ್ತಾದುದರಿಂದ "ಅಜೋ ಞ್ಣಿತಿ" ಸೂತ್ರದಿಂದ ಓಕಾರಕ್ಕೆ ವೃದ್ಧಿ. ಔ ಸ್ಥಾನಸಾಮ್ಯದಿಂದ ಬರುತ್ತದೆ. ಸಕಾರಕ್ಕೆ ರುತ್ವ ವಿಸರ್ಗ. ಗೌಃ. ದ್ವಿವಚನದಲ್ಲಿ ವೃದ್ಧಿ ಬಂದಾಗ "ಏಚೋಽಯವಾಯಾವಃ" ಸೂತ್ರದಿಂದ ಅವಾದೇಶ. ಗಾವೌ. ಜಸಿನಲ್ಲಿಯೂ ವೃದ್ಧಿ ಅವಾದೇಶ. ಸಕಾರಕ್ಕೆ ರುತ್ವ ವಿಸರ್ಗ. ಗಾವಃ ॥ ಸಂಬೋಧನೆಯಲ್ಲಿಯೂ ವಿಶೇಷವಿಲ್ಲದುದರಿಂದ ಪ್ರಥಮಾದಂತೇರೂಪವಾಗುತ್ತದೆ.

ದ್ವಿತೀಯಾದಲ್ಲಿ ಅಮ್ ಪರವಾದಾಗ "ಗೋತೋಣಿತ್" ಸೂತ್ರದಿಂದ ಣಿದ್ವದ್ಭಾವ ಬಂದು ವೃದ್ಧಿಪ್ರಾಪ್ತವಾದರೆ ಆಕಾರ ಏಕಾದೇಶ ಹೇಳುತ್ತಾನೆ.

(ಅಮ್‌ಶಸ್‌ಗಳಲ್ಲಿ ಆಕಾರಹೇಳುವಸೂತ್ರ)

೨೧೫. ಔತೋಽಮ್‌ಶಸೋಃ ॥ ೬-೧-೯೩ ॥

ಓತೋಽಮ್‌ಶಸೋರಚಿ ಆಕಾರ ಏಕಾದೇಶಃ ॥ ಗಾಮ್ । ಗಾವೌ । ಗಾಃ । ಗವಾ । ಗವೇ । ಗೋಃ । ಇತ್ಯಾದಿ ॥

ಔ–ಓತಃ–ಅಮ್‌ಶಸೋಃ ॥ ತ್ರಿಪದಸೂತ್ರ. ಅಮ್, ಶಸ್‌ಚ, ಅಮ್‌ಶಸೌ–ತಯೋಃ ಅಮ್‌ಶಸೋಃ. ಓತಃ ಪಂಚಮೀ. "ಇಕೋಯಣಚಿ" ಸೂತ್ರದಿಂದ "ಅಚಿ" ಅನುವೃತ್ತವಾಗುತ್ತದೆ. ಅಮ್‌ಶಸೋಃ ಅವಯವಷಷ್ಠ್ಯಂತವಾದುದರಿಂದ ಅಚಿನಲ್ಲಿ ಅನ್ವಯ. "ಏಕಃ ಪೂರ್ವಪರಯೋಃ" ಅಧಿಕಾರ. **ಸೂತ್ರಾರ್ಥ.**—ಓಕಾರದ ಪರದಲ್ಲಿ ಅಮ್, ಶಸ್‌ಗಳ ಅಚ್‌ಪರವಾದಾಗ ಓಕಾರ ಮತ್ತು ಅಮ್‌ಶಸ್‌ಗಳ ಅಚಿಗೆ ಆಕಾರವು ಏಕಾದೇಶವಾಗಿ ಬರುತ್ತದೆ. ಗೋ+ಅಮ್ ಎಂದಿರುವಾಗ ಓ+ಅಕಾರಗಳಿಗೆ ಆಕಾರ ಏಕಾದೇಶವಾಗಿ ಬಂದರೆ ಗ್+ಆ+ಮ್ = ಗಾಮ್ । ಗೋ+ಔ ಎಂದಿರುವಾಗ ಸರ್ವನಾಮಸ್ಥಾನವಾದುದರಿಂದ ಣಿದ್ವದ್ಭಾವಬಂದು ವೃದ್ಧಿ–ಆವಾದೇಶಬಂದರೆ, ಗಾವೌ ॥ ಶಸಿನಲ್ಲಿ ಅಮಿನಂತೆರೂಪ. ಗೋ+ಅಸ್ = ಗ್+ಆ+ಸ್ = ಗಾಃ ॥ ತೃತೀಯಾದಲ್ಲಿ ಟಾಪರವಾದಾಗ ಗೋ+ಆ ಎಂದಿರುವಾಗ ಅವಾದೇಶ. ಗವಾ. ಹಲಾದಿಯಲ್ಲಿ ಕಾರ್ಯವಿಶೇಷವಿಲ್ಲ. ಗೋಭ್ಯಾಮ್–ಗೋಭಿಃ ॥ ಚತುರ್ಥೀಏಕವಚನದಲ್ಲಿ ಅವಾದೇಶ. ಗೋ+ಏ = ಗವೇ–ಗೋಭ್ಯಾಮ್–ಗೋಭ್ಯಃ ॥ ಪಂಚಮೀಷಷ್ಠೀಏಕವಚನದಲ್ಲಿ ಗೋ+ಅಸ್ ಎಂದಿರುವಾಗ "ಙಸಿಙಸೋಶ್ಚ" ಸೂತ್ರದಿಂದ ಪೂರ್ವರೂಪ ಏಕಾದೇಶ. ಗೋಸ್ (ಓ+ಅ = ಓ) ಸಕಾರಕ್ಕೆ ರುತ್ವವಿಸರ್ಗ. ಗೋಃ ಗೋಭ್ಯಾಮ್–ಗೋಭ್ಯಃ। ಷ–ಗೋಃ. ದ್ವಿವಚನದಲ್ಲಿ ಅವಾದೇಶ. ಸಕಾರಕ್ಕೆ ರುತ್ವವಿಸರ್ಗ. ಗೋ+ಓಸ್ = ಗವೋಸ್-ಗವೋಃ. ಬಹುವಚನದಲ್ಲಿ ಆಮ್ ಪರವಾದಾಗ ಅವಾದೇಶ. ಗವಾಮ್. ಸಂಪ್ತಮೀತದಲ್ಲಿ ಏಚಿಗೆ (ಏ ಓ ಐ ಔ) ಹ್ರಸ್ವವಿಲ್ಲವೆಂದುದರಿಂದ "ಹ್ರಸ್ವನದ್ಯಾಪಃ"–ಸೂತ್ರದಿಂದ ನುಡಾಗಮ ಬರುವುದಿಲ್ಲ. ಸಪ್ತಮೀ ಏಕವಚನ ದ್ವಿವಚನಗಳಲ್ಲಿ ಅವಾದೇಶ. ಗೋ+ಇ = ಗವಿ. ಗೋ+ಓಸ್ = ಗವೋಃ. ಬಹುವಚನದಲ್ಲಿ ಇಣಿನಪರದಲ್ಲಿರುವುದರಿಂದ ಸಕಾರಕ್ಕೆ ಷತ್ವ. ಗೋಷು ॥

ಐಕಾರಾಂತ ರೈ ಶಬ್ದ. (ಸಂಪತ್ತು.)

ಪ್ರಥಮಾದಲ್ಲಿ ರೈಸ್ ಎಂದಿರುವಾಗ ಐಕಾರಕ್ಕೆ ಆತ್ವ ಹೇಳುತ್ತಾನೆ.

(ರೈ ಶಬ್ದಕ್ಕೆ ಆತ್ವವ್ಯಹೇಳುವ ಸೂತ್ರ)

೨೧೬. ರಾಯೋ ಹಲಿ ॥ ೭-೨-೮೫ ॥

ರೈ ಶಬ್ದಸ್ಯಾಕಾರೋಽಂತಾದೇಶಃ ಸ್ಯಾದ್ಧಲಿ ವಿಭಕ್ತೌ ॥ ರಾಃ ರಾಯೌ ರಾಯಃ । ರಾಭ್ಯಾಮ್ ಇತ್ಯಾದಿ ॥

ರಾಯಃ ಹಲಿ ॥ ದ್ವಿಪದಸೂತ್ರ. "ಅಷ್ಟನ ಆ ವಿಭಕ್ತೌ" ಸೂತ್ರದಿಂದ "ಅ–" "ವಿಭಕ್ತೌ" ಎರಡು ಪದಗಳು ಅನುವೃತ್ತವಾಗುತ್ತವೆ. ರಾಯಃ ಷಷ್ಠೀ. ಹಲಿ ಸಪ್ತಮ್ಯಂತವು ವಿಭಕ್ತೌ ಎಂಬ ಸಪ್ತಮ್ಯಂತಕ್ಕೆ ವಿಶೇಷಣ. "ಯಸ್ಮಿನ್ ವಿಧಿಃ ತದಾದಾವಲ್ಗ್ರಹಣೇ" ಪರಿಭಾಷೆಯಿಂದ ತದಾದಿಲಾಭ. **ಸೂತ್ರಾರ್ಥ.** ರೈ ಶಬ್ದಕ್ಕೆ ಹಲಾದಿಯಾದ ವಿಭಕ್ತಿಪರವಾದಾಗ ಆಕಾರವು ಅಂತಾದೇಶವಾಗಿಬರುತ್ತದೆ. "ಅಲೋಂತ್ಯಸ್ಯ" ಪರಿಭಾಷೆಯಿಂದ ಅಂತ್ಯಕ್ಕೆ ಎಂದು ಲಬ್ಧವಾಗುವುದರಿಂದ ವೃತ್ತಿಯಲ್ಲಿ ಅಂತಾದೇಶವೆಂದಿರುತ್ತಾನೆ. ಪ್ರಕೃತ ಸು ಹಲಾದಿಯಾದುದರಿಂದ ರೈ ಶಬ್ದದ ಅಂತ್ಯವಾದ ಐಕಾರಕ್ಕೆ ಆತ್ವಬಂದು ರಾಸ್ ಎಂದಾಗುತ್ತದೆ. ಸುವಿಗೆ ರುತ್ವವಿಸರ್ಗ. ರಾಃ. ರೈ+ಔ ಎಂದಿರುವಾಗ ಅಜಾದಿವಿಭಕ್ತಿಯಿರುವುದರಿಂದ ಆತ್ವವಿಲ್ಲ. "ಏಚೋಽಯವಾಯಾವಃ" ಸೂತ್ರದಿಂದ ಆಯಾದೇಶ. ಅಜಾದಿಯಾದ ಎಲ್ಲಾ ವಿಭಕ್ತಿಗಳಲ್ಲಿಯೂ ಹೀಗೆಯೇ ಆಯಾದೇಶ. ರಾಯೌ. ಜಸಿನಲ್ಲಿ ರಾಯಃ. ದ್ವಿತೀಯಾ ಸಂಬೋಧನೆಯಲ್ಲಿ ಪ್ರಥಮೆಯಂತೇ ರೂಪ. ಹೇ ರಾಃ ಹೇರಾಯೌ–ಹೇರಾಯಃ | ರಾಯಮ್–ರಾಯೌ–ರಾಯಃ | ತೃತೀಯಾ ಏಕವಚನದಲ್ಲಿ ಟಾಪರವಾದಾಗ ಆಯಾದೇಶ. ರಾಯಾ. ಭ್ಯಾಮ್ ಪರವಾದಾಗ ಹಲಾದಿಯಾದುದರಿಂದ ಐಕಾರಕ್ಕೆ ಆಕಾರಾದೇಶ. ರಾಭ್ಯಾಮ್. ಹಲಾದಿಯಲ್ಲೆಲ್ಲಾ ಹೀಗೇ ಆತ್ವ ಬರುತ್ತದೆ. ರಾಭಿಃ | ಚ–ರೈ+ಏ=ರಾಯೇ–ರಾಭ್ಯಾಮ್–ರಾಭ್ಯಃ | ಪಂ–ರೈ+ಅಸ್. ರಾಯಃ–ರಾಭ್ಯಾಮ್–ರಾಭ್ಯಃ | ಷಷ್ಠೀ–ರಾಯಃ–ರಾಯೋಃ–ರೈ+ಆಮ್=ರಾಯಾಮ್ | ಸ–ರಾಯಿ–ರಾಯೋಃ–ರಾಸು. ಇಣಿನಪರದಲ್ಲಿಲ್ಲದಿರುವುದರಿಂದ ಸಕಾರಕ್ಕೆ ಷತ್ವ ಬರುವುದಿಲ್ಲ.

ಔಕಾರಾಂತ ಗ್ಲೌ ಶಬ್ದ=(ಚಂದ್ರ)

ಗ್ಲೌಃ । ಗ್ಲಾವೌ । ಗ್ಲಾವಃ । ಗ್ಲೌಭ್ಯಾಮ್ — ಇತ್ಯಾದಿ ॥

ಇತ್ಯಜಂತ ಪುಲ್ಲಿಂಗಾಃ ॥

ಗ್ಲೌಸ್ ಎಂದಿರುವಾಗ ಸಕಾರಕ್ಕೆ ರುತ್ವ ವಿಸರ್ಗ. ಗ್ಲೌಃ. ಇನ್ನು ಅಜಾದಿಯಲ್ಲಿ "ಏಚೋಽಯವಾಯಾವಃ" ಸೂತ್ರದಿಂದ ಆವಾದೇಶ. ಹಲಾದಿಯಲ್ಲಿ ಕೇವಲ ಪ್ರತ್ಯಯ ಸೇರಿಸುವುದು ಮಾತ್ರ. ಗ್ಲೌ+ಔ=ಗ್ಲಾವೌ–ಗ್ಲೌ+ಅಸ್=ಗ್ಲಾವಃ |

ಪ್ರ.—ಗ್ಲೌಃ । ಗ್ಲಾವೌ । ಗ್ಲಾವಃ ॥ ದ್ವಿ—ಗ್ಲಾವಂ । ಗ್ಲಾವೌ । ಗ್ಲಾವಃ ॥ ತೃ—ಗ್ಲಾವಾ । ಗ್ಲೌಭ್ಯಾಮ್ । ಗ್ಲೌಭಿಃ ॥ ಚ—ಗ್ಲಾವೇ । ಗ್ಲೌಭ್ಯಾಮ್ । ಗ್ಲೌಭ್ಯಃ ॥ ಪಂ—ಗ್ಲಾವಃ । ಗ್ಲೌಭ್ಯಾಮ್ । ಗ್ಲೌಭ್ಯಃ ॥ ಷ—ಗ್ಲಾವಃ । ಗ್ಲಾವೋಃ । ಗ್ಲಾವಾಮ್ ॥ ಸ—ಗ್ಲಾವಿ । ಗ್ಲಾವೋಃ । ಗ್ಲೌಷು ॥

ಹೀಗೆ ಅಜಂತಪುಲ್ಲಿಂಗ ಶಬ್ದಗಳು ವಿವರಿಸಲ್ಪಟ್ಟವೆ.

ಅಥಾಜಂತ ಸ್ತ್ರೀಲಿಂಗಾಃ ॥

ಅಜಂತಸ್ತ್ರೀಲಿಂಗ ಶಬ್ದಗಳಲ್ಲಿ ಹ್ರಸ್ವಾಕಾರಾಂತಶಬ್ದಗಳು ಇಲ್ಲ. ಅದಂತವಾದ ಪ್ರಾತಿಪದಿಕಗಳಿಗೆ ಸಾಮಾನ್ಯವಾಗಿ ಸ್ತ್ರೀಲಿಂಗದಲ್ಲಿ ಟಾಪ್‌ಪ್ರತ್ಯಯ ಬರುವುದರಿಂದ ಆದಂತಗಳಾಗುತ್ತವೆ.

ಆಕಾರಾಂತ ಸ್ತ್ರೀಲಿಂಗ ರಮಾ ಶಬ್ದ (ಲಕ್ಷ್ಮೀ.)

ರಮಾ

ರಮತೇ ಇತಿ ರಮಾ. ರಮು ಕ್ರೀಡಾಯಾಂ ಧಾತು. ಪಚಾದಿಯಲ್ಲಿ ಸೇರಿರುವುದರಿಂದ ಅಚ್ ಪ್ರತ್ಯಯ. ರಮ್+ಅ=ರಮ. ಅದಂತವಾದುದರಿಂದ ಸ್ತ್ರೀಲಿಂಗದಲ್ಲಿ ಟಾಪ್ ಪ್ರತ್ಯಯ ರಮ+ಆ=ರಮಾ.

ರಮಾ ಶಬ್ದ ಆಬಂತವಾಗಿದೆ. (ಟಾಪಿನಲ್ಲಿ ಆಪ್ ಉಳಿಯುವುದು. ಕೊನೆಗೆ ಪಕಾರವೂ ಹೋಗುತ್ತದೆ.) ರಮಾ+ಸು ಎಂದಿರುವಾಗ ಆಬಂತದಪರದಲ್ಲಿ ಸು ಬಂದುದರಿಂದ "ಹಲ್‌ಜ್ಯಾಭ್ಯೋದೀರ್ಘಾತ್"–ಸೂತ್ರದಿಂದ ಸುವಿಗೆ ಲೋಪ. ರಮಾ. ದ್ವಿವಚನದಲ್ಲಿ ರಮಾ+ಔ ಎಂದಿರುವಾಗ ವಿಭಕ್ತಿಗೆ ಶೀಭಾವ ಹೇಳುತ್ತಾನೆ.

(ಆಪಿನ ಪರದಲ್ಲಿರುವ ಔ ವಿಭಕ್ತಿಗೆ ಶೀಭಾವ ಹೇಳುವ ಸೂತ್ರ)

೨೧೭. ಔಜಸ ಆಪಃ ॥ ೭-೧-೧೯ ॥

ಆಬಂತಾದಂಗಾತ್ಪರಸ್ಯ ಔಜಸಃ ಶೀ ಸ್ಯಾತ್ । ಔಜಸ್ತ್ಯಾಕಾರವಿಭಕ್ತೇಃ ಸಂಜ್ಞಾ । ರಮೇ । ರಮಾಃ ॥

ಔಜಸಃ, ಆಪಃ ॥ ದ್ವಿಪದ ಸೂತ್ರ. "ಜಸಃಶೀ" ಸೂತ್ರದಿಂದ "ಶೀ" ಅನುವೃತ್ತವಾಗುತ್ತದೆ. ಆಪ್ ಪ್ರತ್ಯಯವಾದುದರಿಂದ ತದಂತಗ್ರಹಣ. "ಅಂಗಸ್ಯ" ಅಧಿಕಾರ. ಆಪಃ ಪಂಚಮಿಯಾದುದರಿಂದ ವಿಶೇಷಣಾನುಸಾರವಾಗಿ ಅಂಗಾತ್ ಎಂದು ವಿಪರಿಣಾಮಮಾಡಿಕೊಳ್ಳಬೇಕು. ಔಜಸಃ, ಷಷ್ಠೀ. **ಸೂತ್ರಾರ್ಥ**—ಆಬಂತವಾದ ಅಂಗದ ಪರದಲ್ಲಿರುವ ಔಜಸ್‌ಗೆ ಶೀ ಆದೇಶ ಬರುತ್ತದೆ. ಔಜ್ ಅಂದರೆ ಏನು ಎಂಬುದನ್ನು ವಿವರಿಸುತ್ತಾನೆ. "ಔಜಸಿತಿ"—ಔ–ಔಟ್ ಇವೆರಡಕ್ಕೂ ಪ್ರಾಚೀನರು ಔಜ್ ಎಂದು ವ್ಯವಹರಿಸುತ್ತಾರೆ. ಪ್ರಕೃತ ರಮಾ ಆಬಂತ ಅಂಗ. ಅದರ ಪರದಲ್ಲಿ ಔ ಬಂದುದರಿಂದ ಅದಕ್ಕೆ ಶೀಭಾವ. ಅನೇಕಾಲಾದುದರಿಂದ ಸರ್ವಾದೇಶ. ಔ ಸ್ಥಾನಕ್ಕೆ ಬಂದ ಮೇಲೆ "ಸ್ಥಾನಿವದಾದೇಶೋಽನಲ್ವಿಧೌ" ಸೂತ್ರದಿಂದ ಅದಕ್ಕೆ ಸ್ಥಾನಿವದ್ಭಾವದಿಂದ ಪ್ರತ್ಯಯಸಂಜ್ಞೆ ಬರುವುದರಿಂದ "ಲಶಕ್ವತದ್ಧಿತೇ" ಸೂತ್ರದಿಂದ ಶಕಾರಕ್ಕೆ ಇತ್ ಸಂಜ್ಞಾ ಬಂದು ಲೋಪವಾಗುತ್ತದೆ. ರಮಾ+ಈ ಎಂದಿರುವಾಗ "ಆದ್ಗುಣಃ" ಸೂತ್ರದಿಂದ ಗುಣ ರಮೇ. ರಮಾ+ಜಸ್ ಎಂದಿರುವಾಗ ಸವರ್ಣದೀರ್ಘ. ರಮಾಸ್. ಸಕಾರಕ್ಕೆ ರುತ್ವವಿಸರ್ಗ. ರಮಾಃ ॥

ಸಂಬುದ್ಧಿಯಲ್ಲಿ ಸುಪರವಾದಾಗ ಆಬಂತಕ್ಕೆ ಏಕಾರಾದೇಶ ಹೇಳುತ್ತಾನೆ.

(ಆಬಂತಕ್ಕೆ ಏಕಾರ ಹೇಳುವಸೂತ್ರ)

೨೧೮. ಸಂಬುದ್ಧೌ ಚ ॥ ೭-೩-೧೦೬ ॥

ಆಪ ಏಕಾರಃ ಸ್ಯಾತ್ಸಂಬುದ್ಧೌ । ಏಜ್‌ಹ್ರಸ್ವಾದಿತಿ ಸಂಬುದ್ಧಿಲೋಪಃ ಹೇ ರಮೇ । ಹೇ ರಮೇ । ಹೇ ರಮಾಃ । ರಮಾಂ । ರಮೇ ಸ್ತ್ರೀತ್ವಾನ್ನತ್ವಾಭಾವಃ ॥ ರಮಾಃ ॥

ದ್ವಿಪದ ಸೂತ್ರ । "ಆಜ್ ಞಾಪಃ" ಸೂತ್ರದಿಂದ "ಆಪಃ", "ಬಹುವಚನೇ ಝಲ್ಯೇತ್" ಸೂತ್ರದಿಂದ "ಏತ್" ಅನುವೃತ್ತವಾಗುತ್ತವೆ. ಅಂಗಸ್ಯ ಅಧಿಕಾರ, ಆಪಃ ಆದಕ್ಕೆ ವಿಶೇಷಣ. **ಸೂತ್ರಾರ್ಥ**—ಆಬಂತವಾದ ಅಂಗಕ್ಕೆ ಸಂಬುದ್ಧಿಪರದಲ್ಲಿರುವಾಗ ಏಕಾರಾದೇಶ ಬರುತ್ತದೆ. ಅಂಗಕ್ಕೆ ಎಂದುದರಿಂದ " ಅಲೋಂತ್ಯಸ್ಯ " ಪರಿಭಾಷೆಯಿಂದ ಅಂತ್ಯಕ್ಕೆ ಆದೇಶ. ರಮಾ+ಸ್ ಎಂದಿರುವಾಗ " ಹಲ್‌ಜ್ಯಾಭ್ಯೋ" ಸೂತ್ರವನ್ನು ಬಾಧಿಸಿ ಈ ಸೂತ್ರದಿಂದ ಏತ್ವಬಂದರೆ ರಮೇ+ಸ್ ಎಂದಾಗುತ್ತದೆ. ಆಗ ಏಜಂತದಪರದಲ್ಲಿ ಸುಬಂದುದರಿಂದ " ಏಜ್ ಹ್ರಸ್ವಾತ್ ಸಂಬುದ್ಧೇಃ " ಸೂತ್ರದಿಂದ ಸುವಿಗೆ ಲೋಪ. ಹೇ ರಮೇ. ದ್ವಿಬಹುವಚನಗಳಲ್ಲಿ ಪ್ರಥಮಾದಂತೇ ರೂಪ. ಹೇರಮೇ—ಹೇರಮಾಃ ॥

ದ್ವಿತೀಯಾ ಏಕವಚನದಲ್ಲಿ ಅಮ್ ಬಂದಾಗ " ಅಮಿಪೂರ್ವಃ " ಸೂತ್ರದಿಂದ ಪೂರ್ವರೂಪ. ರಮಾ+ಅಮ್–ರಮಾಮ್. ರಮಾ+ಔ (ಟ್) ಎಂದಿರುವಾಗ " ಔಜಸಆಪಃ " ಸೂತ್ರದಿಂದ ಪ್ರತ್ಯಯಕ್ಕೆ ಶೀ ಭಾವ. ರಮಾ+ಈ ಗುಣ. ರಮೇ. ಬಹುವಚನದಲ್ಲಿ ರಮಾ+(ಶ್) ಅಸ್ ಎಂದಿರುವಾಗ ಪೂರ್ವಸವರ್ಣದೀರ್ಘ. ರಮಾಸ್. ಸಕಾರಕ್ಕೆ ನತ್ವ ಬರಲಿ ಎಂದರೆ " ತಸ್ಮಾಚ್ಛಸೋ ನಃ ಪುಂಸಿ " ಸೂತ್ರದಲ್ಲಿ ಪುಲ್ಲಿಂಗದಲ್ಲಿ ಮಾತ್ರವೆಂದುದರಿಂದ ಬರುವುದಿಲ್ಲ. ಅದನ್ನೇ " ಸ್ತ್ರೀತ್ವಾತ್– " ಎಂದು ಹೇಳಿರುತ್ತಾನೆ. ರುತ್ವವಿಸರ್ಗ, ರಮಾಃ ।

ತೃತೀಯಾ ಏಕವಚನದಲ್ಲಿ ಟಾ ಬಂದಾಗ ಆಬಂತಕ್ಕೆ ಏತ್ವ ಹೇಳುತ್ತಾನೆ.

(ಆಬಂತಕ್ಕೆ ಏತ್ವ ಹೇಳುವ ಸೂತ್ರ)

೨೧೯. ಆಜಿ ಚಾಪಃ ॥ ೭-೩-೧೦೫ ॥

ಆಜಿ ಓಸಿ ಚ ಪರೇ ಆಬಂತಸ್ಯ ಅಂಗಸ್ಯ ಏಕಾರಃ ಸ್ಯಾತ್ ॥ ರಮಯಾ ರಮಾಭ್ಯಾಮ್ । ರಮಾಭಿಃ ।

ಆಜಿ, ಚ, ಆಪಃ ॥ ತ್ರಿಪದ ಸೂತ್ರ. "ಬಹುವಚನೇಝಲ್ಯೇತ್" ಸೂತ್ರದಿಂದ "ಏತ್" ಪದವೂ "ಓಸಿಚ" ಸೂತ್ರವೂ ಅನುವೃತ್ತವಾಗುತ್ತವೆ. "ಅಂಗಸ್ಯ" ಅಧಿಕಾರ. ಆಪಃ ಅದಕ್ಕೆ ವಿಶೇಷಣ. ತದಂತವಿಧಿ. **ಸೂತ್ರಾರ್ಥ**—ಆಜ್ ಓಸ್ ವಿಭಕ್ತಿಗಳು ಪರವಾದಾಗ ಆಬಂತವಾದ ಅಂಗಕ್ಕೆ ಏತ್ವ ಬರುತ್ತದೆ. "ಅಲೋಂತ್ಯಸ್ಯ" ಪರಿಭಾಷೆಯಿಂದ ಅಂಗದ ಅಂತ್ಯ ಆಕಾರಕ್ಕೆ ಆದೇಶ. ಆಜ್ ಟಾವಿಭಕ್ತಿಯ ಸಂಜ್ಞೆಯಿಂದ ಹಿಂದೆ ಹೇಳಿದೆ. ಪ್ರಕೃತ ಟಾಪರವಾದುದರಿಂದ ಆಪಿಗೆ ಏಕಾರ ಬಂದರೆ ರಮಾ + ಏ = ರಮೇ + ಏ ಎಂದಾಗುತ್ತದೆ. ಏಕಾರಕ್ಕೆ ಅಚ್‌ಪರವಾದುದರಿಂದ "ಏಜೋಽಯವಾಯಾವಃ" ಸೂತ್ರದಿಂದ ಅಯಾದೇಶ. ರಮಯಾ. ಹಲಾದಿಯಲ್ಲಿ ಕಾರ್ಯವಿಶೇಷವಿಲ್ಲ. ರಮಾಭ್ಯಾಮ್–ರಮಾಭಿಃ ॥

ಚತುರ್ಥಿಯಲ್ಲಿ ಜಿೀಪರವಾದಾಗ ಪ್ರತ್ಯಯಕ್ಕೆ ಯಾಡಾಗಮ ಹೇಳುತ್ತಾನೆ.

(ಆಪಿನ ಪರವಾದ ಜಿತ್ತಿಗೆ ಯಾಟ್ ಹೇಳುವ ಸೂತ್ರ)

೨೨೦. ಯಾಡಾಪಃ ॥ ೭-೩-೧೧೩ ॥

ಆಪಃ ಪರಸ್ಯ ಜಿದ್ವಚನಸ್ಯ ಯಾಡಾಗಮಃ ಸ್ಯಾತ್ ॥ ವೃದ್ಧಿರೇಚಿ । ರಮಾಯೈ । ರಮಾಭ್ಯಾಮ್ । ರಮಾಭ್ಯಃ । ರಮಾಯಾಃ ೨ । ರಮಯೋಃ ೨ । ರಮಾಣಾಮ್ । ರಮಾಯಾಮ್ । ರಮಾಸು ॥ ಏವಂ ದುರ್ಗಾಂಬಿಕಾದಯಃ ॥

ಯಾಟ್ ಆಪಃ । ದ್ವಿಪದ ಸೂತ್ರ. "ಘೇರ್ಙಿತಿ" ಸೂತ್ರದಿಂದ "ಜಿತಿ" ಅನುವೃತ್ತವಾಗಿ ಷಷ್ಠ್ಯಂತವಾಗಿ ವಿಪರಿಣತವಾಗುತ್ತದೆ, ಆಪಃ ಪಂಚಮೀ. "ತಸ್ಮಾದಿತ್ಯುತ್ತರಸ್ಯ" ಪರಿಭಾಷೆಯಿಂದ ಪರಕ್ಕೆ ಕಾರ್ಯವೆಂದು ತಿಳಿಯಬೇಕು. ಯಾಟ್ ಟಿತ್ತಾದುದರಿಂದ ಆಗಮ. **ಸೂತ್ರಾರ್ಥ**—ಆಬಂತದ ಪರದಲ್ಲಿರುವ

ಜಿದ್ವಿಭಕ್ತಿಗೆ ಯಾಡಾಗಮ ಬರುತ್ತದೆ. ಚತುರ್ಥೀ ಪಂಚಮೀ ಷಷ್ಠೀ, ಸಪ್ತಮೀ ಏಕವಚನಗಳು ಜಿತ್ತಾಗುತ್ತವೆ. ಯಾಟ್ ಟಿತ್ತಾದುದರಿಂದ "ಆದ್ಯಂತಾ ಟಕಿತಾ" ಪರಿಭಾಷೆಯಿಂದ ಆದ್ಯವಯವನಾಗಿ ಬರುತ್ತದೆ. ರಮಾ + ಏ = ರಮಾ + ಯಾ + ಏ. ಆಕಾರಕ್ಕೆ ಏಕಾರಪರವಾದುದರಿಂದ "ವೃದ್ಧಿರೇಚಿ" ಸೂತ್ರದಿಂದ ವೃದ್ಧಿ. ರಮಾಯೈ। ರಮಾಭ್ಯಾಮ್ । ರಮಾಭ್ಯಃ ॥

ಪಂಚಮೀ ಏಕವಚನದಲ್ಲಿ ಹಿಂದಿನಂತೆ ಜಿಸಿಗೆ ಯಾಡಾಗಮ. ರಮಾ+ಯಾ+ಅಸ್. "ಪ್ರಕೃತಿವದನುಕರಣಂ ಭವತಿ" ಸೂತ್ರದಿಂದ ಸವರ್ಣದೀರ್ಘ. ಸಕಾರಕ್ಕೆ ರುತ್ವ ವಿಸರ್ಗ. ರಮಾಯಾಃ । ರಮಾಭ್ಯಾಮ್ । ರಮಾಭ್ಯಃ ॥

ಷಷ್ಠೀ ಏಕವಚನದಲ್ಲಿ ಪಂಚಮೀ ಏಕವಚನದಂತೇ ರೂಪ. ರಮಾಯಾಃ । ದ್ವಿವಚನದಲ್ಲಿ ಓಸ್ ಪರವಾದಾಗ "ಆಜಿ ಚಾಪಃ" ಸೂತ್ರದಿಂದ ಆಪಿಗೆ ಏಕಾರಾದೇಶ. ರಮಾ+ಓಸ್ = ರಮೇ + ಓಸ್. ಅಯಾದೇಶ. ರಮಯೋಸ್. ರುತ್ವವಿಸರ್ಗ ರಮಯೋಃ । ಬಹುವಚನದಲ್ಲಿ ಆಮ್. "ಹ್ರಸ್ವನದ್ಯಾಪ್ಸೋ ನುಟ್" ಸೂತ್ರದಲ್ಲಿ ಆಪ್ ಸೇರಿಸಿರುವುದರಿಂದ ಆಪಿನ ಪರವಾದ ಆಮಿಗೆ ಆದರಿಂದ ನುಡಾಗಮ. ರಮಾ+ನ್+ಆಮ್ = ರಮಾನಾಮ್. ರೇಫ ನಕಾರ ಮಧ್ಯದಲ್ಲಿ ಅಟ್, ಪವರ್ಗವಿರುವುದರಿಂದ "ಅಟ್‌ಕುಪ್ವಾಙ್‌ನುಮ್‌ವ್ಯವಾಯೇಽಪಿ" ಸೂತ್ರದಿಂದ ನಕಾರಕ್ಕೆ ಣತ್ವ. ರಮಾಣಾಮ್.

ಸಪ್ತಮೀ ಏಕವಚನದಲ್ಲಿ ಜಿ ಬಂದಾಗ ಆಬಂತದ ಪರದಲ್ಲಿರುವುದರಿಂದ "ಜಿೀರಾಮ್ನದ್ಯಾಮ್ನೀಭ್ಯಃ" ಸೂತ್ರದಿಂದ ಜಿಗೆ ಆಮ್ ಆದೇಶ. "ಯಾಡಾಪಃ" ಸೂತ್ರದಿಂದ ಆದಕ್ಕೆ ಯಾಡಾಗಮ. ರಮಾ + ಯಾ + ಆಮ್ = ರಮಾಯಾಮ್. ದ್ವಿವಚನದಲ್ಲಿ ಷಷ್ಠೀ ದ್ವಿವಚನದಂತೇ ರೂಪ. ರಮಯೋಃ. ಬಹುವಚನದಲ್ಲಿ ಸು (ಪ್) ಬಂದಾಗ ರಮಾಸು ರೂಪವಾಗುತ್ತದೆ. ಇಣಿನ ಪರದಲ್ಲಿಲ್ಲದುದರಿಂದ ಷತ್ವವಿಲ್ಲ. ಹೀಗೇ ದುರ್ಗಾ, ಅಂಬಿಕಾ ಮುಂತಾದ ಆಬಂತ ಶಬ್ದಗಳ ರೂಪವನ್ನು ತಿಳಿಯಬೇಕು.

ಆಕಾರಾಂತ ಸ್ತ್ರೀಲಿಂಗ ಸರ್ವನಾಮ ಶಬ್ದಗಳು

ಸರ್ವ ಶಬ್ದದ ಮೇಲೆ ಸ್ತ್ರೀಲಿಂಗದಲ್ಲಿ ಅದಂತವಾದುದರಿಂದ "ಅಜಾದ್ಯತಷ್ಟಾಪ್" ಸೂತ್ರದಿಂದ ಟಾಪ್ ಬಂದಮೆ ಸರ್ವಾ ಎಂದಾಗುತ್ತದೆ. ಇದೂ ರಮಾ ಶಬ್ದದಂತೇ ಸಾಮಾನ್ಯವಾಗಿ ರೂಪವನ್ನು ಹೊಂದುತ್ತದೆ. ಜಿದ್ವಿಭಕ್ತಿಗಳಲ್ಲಿ, ಆಮಿನಲ್ಲಿ ಮಾತ್ರ ವಿಶೇಷ ರೂಪವನ್ನು ಹೊಂದುತ್ತದೆ. ತೃತೀಯಾದವರೆಗೆ ರಮಾದಂತೇರೂಪ.

ಪ್ರ–ಸರ್ವಾ। ಸರ್ವೇ। ಸರ್ವಾಃ॥ ಸಂ–ಪ್ರ–ಹೇ ಸರ್ವೇ। ಹೇ ಸರ್ವೇ ।ಹೇಸರ್ವಾಃ॥

ದ್ವಿ—ಸರ್ವಾಮ್ | ಸರ್ವೇ | ಸರ್ವಾಃ ॥ ತೃ—ಸರ್ವಯಾ | ಸರ್ವಾಭ್ಯಾಮ್ | ಸರ್ವಾಭಿಃ ॥

ಚತುರ್ಥಿ ಏಕವಚನದಲ್ಲಿ ಜಿಗೇ ಯಾಟ್ ಪ್ರಾಪ್ತವಾದರೆ ಅದಕ್ಕೆ ಅಪವಾದವಾಗಿ ಸ್ಯಾಟ್ ಆಗಮ ಹೇಳುತ್ತಾನೆ.

(ಸರ್ವನಾಮದಲ್ಲಿ ಸ್ಯಾಡಾಗಮ ಹೇಳುವ ಸೂತ್ರ)

೨೨೧. ಸರ್ವನಾಮ್ನಃ ಸ್ಯಾಡ್ ಢ್ರಸ್ವಶ್ಚ ॥ ೭-೩-೧೧೪ ॥

ಆಬಂತಾತ್ಸರ್ವನಾಮ್ನೋ ಜ್ಞಿತಃ ಸ್ಯಾಟ್ ಸ್ಯಾದಾಪಶ್ಚ ಹ್ರಸ್ವಃ | ಸರ್ವಸ್ಯೈ | ಸರ್ವಸ್ಯಾಃ | ಸರ್ವಸ್ಯಾಃ ಸರ್ವಾಸಾಮ್ | ಸರ್ವಸ್ಯಾಮ್ | ಶೇಷಂ ರಮಾವತ್ | ಏವಂ ವಿಶ್ವಾದಯ ಆಬಂತಾಃ ॥

ಸರ್ವನಾಮ್ನಃ, ಸ್ಯಾಟ್, ಹ್ರಸ್ವಃ, ಚ॥ ನಾಲ್ಕು ಪದವುಳ್ಳ ಸೂತ್ರ. "ಯಾಡಾಪಃ" ಸೂತ್ರದಿಂದ "ಆಪಃ" ಅನುವೃತ್ತವಾಗುತ್ತದೆ. ಇದು ಸರ್ವನಾಮ್ನಃ ಪದಕ್ಕೆ ವಿಶೇಷಣವಾದುದರಿಂದ ಆಬಂತವಾದ ಸರ್ವನಾಮದ ಪರದ ಎಂದರ್ಥವಾಗುತ್ತದೆ. "ಘೇರ್ಜ್ಞಿತಿ" ಸೂತ್ರದಿಂದ ಅನುವೃತ್ತವಾದ ಜ್ಞಿತಿ ಎಂಬುದು ಷಷ್ಠ್ಯಂತವಾಗಿ ವಿಪರಿಣತವಾಗುತ್ತದೆ. ಹ್ರಸ್ವಃ ಚ ಎಂದಿರುವಾಗ ಇಲ್ಲಿ ಎರಡು ವಾಕ್ಯ ಮಾಡಿಕೊಳ್ಳಬೇಕು. " ಆಬಂತಾತ್ ಸರ್ವನಾಮ್ನಃ ಪರಸ್ಯ ಜ್ಞಿತಃ ಸ್ಯಾಟ್ ಸ್ಯಾತ್ " ಎಂದು ಒಂದು ವಾಕ್ಯ. ಹ್ರಸ್ವಶ್ಚ ಎಂಬಲ್ಲಿ ಆಪಃ ಅನುವೃತ್ತವಾಗುತ್ತದೆ. ಇಲ್ಲಿ ಅದು ಷಷ್ಠಿಎಂದು ಭಾವಿಸಬೇಕು. " ಆಪಃ ಸ್ಥಾನೇ ಹ್ರಸ್ವೋ ಭವತಿ " ಎಂದು ಎರಡನೇ ವಾಕ್ಯ. **ಸೂತ್ರಾರ್ಥ**—1) ಆಬಂತವಾದ ಸರ್ವನಾಮ ಶಬ್ದಗಳ ಪರದಲ್ಲಿರುವ ಜ್ಞಿತ್ತಾದ ವಿಭಕ್ತಿಗಳಿಗೆ ಸ್ಯಾಟ್ ಆಗಮ. 2) ಆಪಿಗೆ ಹ್ರಸ್ವವೂ ಬರುತ್ತದೆ. ಸರ್ವಾ + ಏ ಎಂದಿರುವಾಗ ಏ ಜ್ಞಿದ್ವಿಭಕ್ತಿ. ಆಪಿನ ಪರದಲ್ಲಿರುವುದರಿಂದ ಅದಕ್ಕೆ ಸ್ಯಾಟಾಗಮ. ಸರ್ವಾ + ಸ್ಯಾ + ಏ ಆಪಿಗೆ ಹ್ರಸ್ವ. ಸರ್ವ + ಸ್ಯಾ + ಏ. ಆಕಾರ ಏಕಾರಗಳಿಗೆ ವೃದ್ಧಿ. ಸರ್ವಸ್ಯೈ | ಸರ್ವಾಭ್ಯಾಮ್ ಸರ್ವಾಭ್ಯಃ ॥

ಪಂಚಮಿಯ ಏಕವಚನವೂ ಜ್ಞಿತ್ತಾದುದರಿಂದ ಜಸಿಗೆ ಸ್ಯಾಟಾಗಮ. ಆಪಿಗೆ ಹ್ರಸ್ವ. ಸರ್ವಾ + ಅಸ್ = ಸರ್ವಾ + ಸ್ಯಾ + ಅಸ್ = ಸರ್ವಸ್ಯಾಸ್ = ಸರ್ವಸ್ಯಾಃ | ಸರ್ವಾಭ್ಯಾಮ್—ಸರ್ವಾಭ್ಯಃ | ಅದಂತವಾಗದಿರುವುದರಿಂದ ಏತ್ವವಿಲ್ಲ.

ಷಷ್ಠಿ ಏಕವಚನದಲ್ಲಿ ಜಸಿನುತೇ ರೂಪ. ಸರ್ವಸ್ಯಾಃ. ದ್ವಿವಚನದಲ್ಲಿ ಓಸ್ ಪರವಾದಾಗ " ಓಸಿಚ " ಸೂತ್ರದಿಂದ ಆಪಿಗೆ ಏತ್ವ. ಸರ್ವಾ + ಓಸ್ = ಸರ್ವೇ + ಓಸ್

ಏಕಾರಕ್ಕೆ ಅಯಾದೇಶ. ಸರ್ವಯೋಃ ಸರ್ವಾ + ಓಸ್ " ಸರ್ವನಾಮ್ನಃ ಸುಟ್ " ಸೂತ್ರದಿಂದ ಆಮಿಗೆ ಸುಡಾಗನು. ಟಿತ್ತಾದುದರಿಂದ ಆದ್ಯವಯನ. ಸರ್ವಾ + ಸ್ + ಆಸ್ = ಸರ್ವಾಸಾಮ್. ಇಣಿನ ಪರದಲ್ಲಿ ಇಲ್ಲದಿರುವುದರಿಂದ ಸಕಾರಕ್ಕೆ ಷತ್ವವಿಲ್ಲ.

ಸಪ್ತಮಿಯಲ್ಲಿ ಸರ್ವಾ+ಜ್ ಎಂದಿರುವಾಗ "ಜ್ಞೇರಾಮ್ನದ್ಯಾಮ್ನೀಭ್ಯಃ" ಸೂತ್ರದಿಂದ ಜ್ಞಿಗೆ ಆಮ್ ಆದೇಶ. ಜ್ಞಿತಾದ್ದುದರಿಂದ ಹಿಂದಿನಂತೆ ಸ್ಯಾಟ್ ಆಗಮ ಆಪಿಗೆ ಹ್ರಸ್ವ. ಸರ್ವಾ + ಆಮ್ = ಸರ್ವಾ + ಸ್ಯಾಮ್ = ಸರ್ವಸ್ಯಾಮ್. ಓಸಿನಲ್ಲಿ ಹಿಂದಿನಂತೇರೂಪ. ಸರ್ವಯೋಃ. ಬಹುವಚನದಲ್ಲಿ ಸರ್ವಾಸು. ಆಕಾರದ ಪರದಲ್ಲಿರುವುದರಿಂದ ಷತ್ವವಿಲ್ಲ. ಹೀಗೆಯೇ ಆಬಂತ ಸರ್ವನಾಮಗಳಿಗೆ ಸ್ತ್ರೀಲಿಂಗದಲ್ಲಿ ಟಾಪ್ ಬಂದು ಇದರಂತೇ ರೂಪವಾಗುತ್ತವೆ. ವಿಶ್ವ ಮುಂತಾದವುಗಳನ್ನು ಊಹಿಸಿಕೊಳ್ಳಬೇಕು.

ಆಕಾರಾಂತ ಉತ್ತರಪೂರ್ವಾ ಶಬ್ದ. (ಉತ್ತರಪೂರ್ವದ ಮುಖ್ಯೆ)

ಉತ್ತರಸ್ಯಾಃ ಪೂರ್ವಸ್ಯಾಶ್ಚ ದಿಶೋಽಂತರಾಲಮ್, ಉತ್ತರಪೂರ್ವಾ. ಇದು ಬಹುವ್ರೀಹಿಸಮಾಸ. ಬಹುವ್ರೀಹಿಯಲ್ಲಿ ವಿಗ್ರಹದಲ್ಲಿರುವ ಪದಗಳಿಗೆ ಪ್ರಾಧಾನ್ಯವಿಲ್ಲ. ಅನ್ಯಪದಾರ್ಥಪ್ರಾಧಾನ್ಯ. ಆಗ ಉತ್ತರಪೂರ್ವಾ ಉಪಸರ್ಜನ, ಗೌಣ, ಅಥವಾ ಅಪ್ರಧಾನವಾಗುವುದರಿಂದ ಸರ್ವನಾಮಸಂಜ್ಞಾ ಬರುವುದಿಲ್ಲ. ರಮಾಶಬ್ದದಂತೇ ರೂಪಪ್ರಾಪ್ತವಾದರೆ ವಿಕಲ್ಪವಾಗಿ ಸರ್ವನಾಮಸಂಜ್ಞೆಯನ್ನು ಹೇಳುತ್ತಾನೆ.

(ದಿಕ್ಸಮಾಸದಲ್ಲಿ ವಿಕಲ್ಪಸರ್ವನಾಮ ಸಂಜ್ಞೆ ಹೇಳುವ ಸೂತ್ರ)

೨೨೨. ವಿಭಾಷಾ ದಿಕ್ಸಮಾಸೇ ಬಹುವ್ರೀಹೌ ॥೧-೧-೭೯॥

ಅತ್ರ ಸರ್ವನಾಮತಾ ವಾ | ಉತ್ತರಪೂರ್ವಸ್ಯೈ | ಉತ್ತರಪೂರ್ವಾಯೈ ॥ ಇತ್ಯಾದಿ.

ತ್ರಿಪದ ಸೂತ್ರ. " ಸರ್ವಾದೀನಿ ಸರ್ವನಾಮಾನಿ " ಸೂತ್ರದಿಂದ " ಸರ್ವನಾಮಾನಿ " ಅನುವೃತ್ತವಾಗುತ್ತದೆ. **ಸೂತ್ರಾರ್ಥ**—ದಿಕ್ಪದಘಟಿತವಾದ (ಕೂಡಿದ) ಬಹುವ್ರೀಹಿಸಮಾಸದಲ್ಲಿ ವಿಕಲ್ಪವಾಗಿ ಸರ್ವನಾಮಸಂಜ್ಞೆ ಬರುತ್ತದೆ. ಇದು ಅಪ್ರಾಪ್ತವಿಭಾಷೆ. ಗೌಣವಾದುದರಿಂದ ಸರ್ವನಾಮಸಂಜ್ಞೆಗೆ ಪ್ರಾಪ್ತಿಯಿಲ್ಲ. ಇಲ್ಲಿ ವಿಕಲ್ಪವಾಗಿ ಹೇಳಿರುವುದರಿಂದ ಅಪ್ರಾಪ್ತವಿಭಾಷೆ. ಉತ್ತರಪೂರ್ವಾ ಬಹುವ್ರೀಹಿ

ಯಲ್ಲಿ ದಿಕ್ಸಮಾಸ. ಆದುದರಿಂದ ವಿಕಲ್ಪವಾಗಿ ಸರ್ವನಾಮ ಸಂಜ್ಞೆ ಬರುತ್ತದೆ. ಸರ್ವನಾಮಕಾರ್ಯ ಜಾತ್ತಾದ ನಾಲ್ಕು ವಿಭಕ್ತಿಗಳಲ್ಲಿಯೂ ಆಮಿನಲ್ಲಿಯೂ ಮೂತ್ತ ಬರುವುದರಿಂದ ಅಲ್ಲಿ ಎರಡೆರಡುರೂಪಗಳಾಗುತ್ತವೆ. ಒಂದು ರಮಾಶಬ್ದದಂತೆಯೂ ಇನ್ನೊಂದು ಸರ್ವಾಶಬ್ದದಂತೆಯೂ ಆಗುತ್ತದೆ.

ಪ್ರ—ಉತ್ತರಪೂರ್ವಾ । ಉತ್ತರಪೂರ್ವೇ । ಉತ್ತರಪೂರ್ವಾಃ ॥ ಸಂ—ಹೇ ಉತ್ತರಪೂರ್ವೇ। ಹೇಉತ್ತರಪೂರ್ವೇ। ಹೇಉತ್ತರಪೂರ್ವಾಃ॥ ದ್ವಿ—ಉತ್ತರಪೂರ್ವಾಂ। ಉತ್ತರಪೂರ್ವೇ । ಉತ್ತರಪೂರ್ವಾಃ॥ ತೃ—ಉತ್ತರಪೂರ್ವಯಾ । ಉತ್ತರಪೂರ್ವಾಭ್ಯಾಮ್ । ಉತ್ತರಪೂರ್ವಾಭಿಃ ॥ ಚ—ಉತ್ತರಪೂರ್ವಸ್ಯೈ ಉತ್ತರಪೂರ್ವಾಯೈ । ಉತ್ತರಪೂರ್ವಾಭ್ಯಾಮ್ । ಉತ್ತರಪೂರ್ವಾಭ್ಯಃ ॥ ಪಂ—ಉತ್ತರಪೂರ್ವಸ್ಯಾಃ । ಉತ್ತರಪೂರ್ವಾಯಾಃ । ಉತ್ತರಪೂರ್ವಾಭ್ಯಾಮ್ । ಉತ್ತರಪೂರ್ವಾಭ್ಯಃ ॥ ಷ—ಉತ್ತರಪೂರ್ವಸ್ಯಾಃ ಉತ್ತರಪೂರ್ವಾಯಾಃ । ಉತ್ತರಪೂರ್ವಯೋಃ । ಪೂರ್ವಾಸಾಮ್ ಉತ್ತರಪೂರ್ವಾಣಾಮ್ ॥ ಸ—ಉತ್ತರಪೂರ್ವಸ್ಯಾಮ್ ಉತ್ತರಪೂರ್ವಾಯಾಮ್ । ಉತ್ತರಪೂರ್ವಯೋಃ । ಉತ್ತರಪೂರ್ವಾಸು ॥

ಹೀಗೆ ದಿಕ್ಸಮಾಸದಲ್ಲಿ ಇತರಶಬ್ದಗಳರೂಪವನ್ನೂ ತಿಳಿಯಬೇಕು.

ಆಕಾರಾಂತ ದ್ವಿತೀಯಾ ಶಬ್ದ (ಎರಡನೆಯವಳು)

ದ್ವಿತೀಯ ಶಬ್ದಕ್ಕೆ ಸ್ತ್ರೀಲಿಂಗದಲ್ಲಿ ಅದಂತವಾದುದರಿಂದ ಟಾಪ್. ದ್ವಿತೀಯಾ ಆಗುತ್ತದೆ.

ತೀಯಸ್ಯೇತಿ ವಾ ಸರ್ವನಾಮಸಂಜ್ಞಾ । ದ್ವಿತೀಯಸ್ಯೈ । ದ್ವಿತೀಯಾಯೈ ॥ ಏವಂ ತೃತೀಯಾ ॥

ದ್ವಿತೀಯಾ ಶಬ್ದ ತೃತೀಯಾ ಬಹುವಚನದವರೆಗೆ ರಮಾ ಶಬ್ದದಂತೇ ಆಗುತ್ತದೆ. ಚತುರ್ಥಿಯಿಂದ ಏಕವಚನದಲ್ಲಿ ಎರಡೆರಡು ರೂಪಗಳನ್ನು ಹೊಂದುತ್ತವೆ. ಇದು ತೀಯ ಪ್ರತ್ಯಯಾಂತ ಶಬ್ದ. " ತೀಯಸ್ಯ ಜಿತ್ಸು ವಾ " ವಾರ್ತಿಕದಿಂದ ಜಿತ್ತಿನಲ್ಲಿ ವಿಕಲ್ಪವಾಗಿ ಸರ್ವನಾಮ ಸಂಜ್ಞೆ ಬರುತ್ತದೆ. ಸರ್ವನಾಮ ಸಂಜ್ಞೆ ಇದ್ದಾಗ ಸ್ಯಾಡಾಗಮ. ಇಲ್ಲದಾಗ ಯಾಡಾಗಮ. ಆಮ್ (ಷ. ಬ.) ಒಂದನ್ನು ಬಿಟ್ಟರೆ ಉತ್ತರ ಪೂರ್ವಾ ಶಬ್ದದಂತೇ ರೂಪವಾಗುತ್ತದೆ. ಆಮಿನಲ್ಲಿ ದ್ವಿತೀಯಾನಾಮ್. ರಮಾದಂತೇರೂಪ. ದ್ವಿತೀಯಸ್ಯೈ—ದ್ವಿತೀಯಾಯೈ ಇತ್ಯಾದಿ ಹಿಂದಿನಂತೇ ತಿಳಿಯಬೇಕು. ಹೀಗೇ ತೃತೀಯಾ ಶಬ್ದ. ಇವುಗಳ ವ್ಯುತ್ಪತ್ತಿ ಪುಲ್ಲಿಂಗದಲ್ಲಿ ಹೇಳಿದೆ.

ಆಕಾರಾಂತ ಅಂಬಾ ಶಬ್ದ

ಅಂಬಾರ್ಥೇತಿ ಹ್ರಸ್ವಃ । ಹೇ ಅಂಬ । ಹೇ ಅಕ್ಕ । ಹೇ ಅಲ್ಲ ॥

ಅಂಬಾ ಎಂದರೆ ತಾಯಿ. ಇದು ಆಬಂತ. ರಮಾ ಶಬ್ದದಂತೇ ರೂಪ ಹೊಂದುತ್ತದೆ. ಸಂಬುದ್ಧಿಯಲ್ಲಿ ಮಾತ್ರ ವಿಶೇಷ ಹೇಳುತ್ತಾನೆ. ಅಂಬಾರ್ಥೇತಿ ॥ " ಅಂಬಾರ್ಥನದ್ಯೋರ್ಹ್ರಸ್ವಃ " ಸೂತ್ರದಲ್ಲಿ ಅಂಬಾಯಂಬರ್ಥಕೊಡುವ ಪದಗಳಿಗೆ ಸಂಬುದ್ಧಿಯಲ್ಲಿ ಹ್ರಸ್ವ ಹೇಳಿರುವುದರಿಂದ " ಸಂಬುದ್ಧೌ ಚ " ಸೂತ್ರದಿಂದ ಹೇಳಿದ ಏಕಾರ ಬರುವುದಿಲ್ಲ. ಆಗ ಹ್ರಸ್ವಬಂದರೆ ಹೇ ಅಂಬ+ಸ್ ಎಂದಾಗುತ್ತದೆ. ಹ್ರಸ್ವದ ಪರದಲ್ಲಿ ಸ್ ಇರುವುದರಿಂದ " ಏಜ್ಹ್ರಸ್ವಾತ್ ಸಂಬುದ್ಧೇಃ " ಸೂತ್ರದಿಂದ ಸುವಿಗೆ ಲೋಪ. ಹೇ ಅಂಬ ಎಂದಾಗುತ್ತದೆ, ಅಂಬಾರ್ಥಕೊಡುವ ಶಬ್ದಗಳನ್ನು ಹೇಳುತ್ತಾನೆ. ಹೇ ಅಕ್ಕ. ಹೇ ಅಲ್ಲ. ಅಕ್ಕ, ಅಲ್ಲ ಶಬ್ದಗಳಿಗೂ ತಾಯಿಯೆಂದರ್ಥ. ಇವುಗಳಿಗೂ ಸಂಬುದ್ಧಿಯಲ್ಲಿ ಹ್ರಸ್ವ. ಉಳಿದ ಎಲ್ಲಾ ವಿಭಕ್ತಿಗಳಲ್ಲಿಯೂ ರಮಾ ಶಬ್ದದಂತೇ ರೂಪವಾಗುತ್ತದೆ.

ಆಕಾರಾಂತ ಜರಾ ಶಬ್ದ. (ಮುಪ್ಪು)

ಜರಾ ಆಬಂತಶಬ್ದ. ಇದರಲ್ಲಿ ಕಾರ್ಯವಿಶೇಷಗಳು ಪುಲ್ಲಿಂಗದಲ್ಲಿ ಹೇಳಿದಂತೆಯೇ ಆಗುವುದರಿಂದ ಸಂಗ್ರಹವಾಗಿ ಬರೆದಿರುತ್ತಾನೆ.

ಜರಾ । ಜರಸೌ । ಇತ್ಯಾದಿ । ಪಕ್ಷೇ ರಮಾವತ್ ॥

ಜರಾಶಬ್ದವೂ ರಮಾಶಬ್ದದಂತೇ ರೂಪ ಹೊಂದುತ್ತದೆ. ಅಜಾದಿಯಲ್ಲಿ ಮಾತ್ರ " ಜರಾಯಾ ಜರಸನ್ಯತರಸ್ಯಾಮ್ " ಸೂತ್ರದಿಂದ ಜರಾಶಬ್ದಕ್ಕೆ ಜರಸ್ ಆದೇಶಬಂದು ಹಲಂತವಾಗುತ್ತದೆ. ಜರಸ್ ಆದೇಶ ಬಂದಾಗ ಕೇವಲಪ್ರತ್ಯಯ ಸೇರಿಸುವುದು ಮಾತ್ರ. ಅಜಾದಿಯಲ್ಲಿ ಹೀಗೆ ಎರಡು ರೂಪಗಳಾಗುತ್ತವೆ. ಔ ವಿಭಕ್ತಿಯಲ್ಲಿ ಶೀ ಭಾವಕ್ಕಿಂತಲೂ ಪರವಾದುದರಿಂದ ಜರಸಾದೇಶ. ಆಗ ಹಲಂತವಾದುದರಿಂದ ಪುನಃ ಶೀಭಾವವಿಲ್ಲ. ಆಮಿನಲ್ಲಿಯೂ ನುಟ್‌ಗಿಂತ ಪರವಾದುದರಿಂದ ಜರಸಾದೇಶ. ಆದೇಶಬಂದಮೇಲೆ ಆಬಂತವಿಲ್ಲದುದರಿಂದ ನುಡಾಗಮವಿಲ್ಲ.

ಪ್ರ—ಜರಾ । ಜರಸೌ ಜರೇ । ಜರಸಃ ಜರಾಃ ॥ ಸಂ. ಪ್ರ—ಹೇ ಜರೇ । ಹೇ ಜರಸೌ ಹೇ ಜರೇ ।ಹೇ ಜರಸಃ ಹೇ ಜರಾಃ ॥ದ್ವಿ—ಜರಸಮ್ ಜರಾಮ್ ।ಜರಸೌ ಜರೇ । ಜರಸಃ ಜರಾಃ ॥ ತೃ—ಜರಸಾ ಜರಯಾ । ಜರಾಭ್ಯಾಮ್ । ಜರಾಭಿಃ ॥ ಚ—ಜರಸೇ ಜರಾಯೈ । ಜರಾಭ್ಯಾಮ್ । ಜರಾಭ್ಯಃ ॥ ಪಂ—ಜರಸಃ ಜರಾಯಾಃ ।

ಜರಾಭ್ಯಾಮ್ । ಜರಾಭ್ಯಃ ॥ ಷ—ಜರಸಃ ಜರಾಯಾಃ । ಜರಸೋಃ ಜರಯೋಃ । ಜರಸಾಮ್ ಜರಾಣಾಮ್ ॥ ಸ—ಜರಸಿ ಜರಾಯಾಮ್ । ಜರಸೋಃ ಜರಯೋಃ । ಜರಾಸು ॥

ಆಕಾರಾಂತ ಗೋಪಾ ಶಬ್ದ (ಗೊಲ್ಲರವಳು)

ಗೋಪಾ ವಿಶ್ವಪಾವತ್ ॥

ಗಾಂ ಪಾತಿ ಇತಿ ಗೋಪಾ. ಗೋವನ್ನು ಸಾಕುವವಳು. ಇದು ಆಕಾರಾಂತ ಧಾತ್ವಂತವಾದ ಶಬ್ದ. ವಿಶ್ವಪಾ ಶಬ್ದದಲ್ಲಿ ಹೇಳಿದ ಕಾರ್ಯಗಳೇ ಬರುತ್ತವೆ ಆಬಂತವಾಗದಿರುವುದರಿಂದ ಆಪ್ ನಿಮಿತ್ತಕ ಕಾರ್ಯಗಳು ಬರುವುದಿಲ್ಲ. ಭ ಸಂಜ್ಞೆ ಯಿರುವಾಗ (ಯಚಿಭಮ್) ಅಂದರೆ ಶಸಾದಿ ಅಜಾದಿ ವಿಭಕ್ತಿಗಳಲ್ಲಿ " ಆತೋಧಾತೋರ್ಲೋಪ ಸೂತ್ರದಿಂದ ಆಕಾರಕ್ಕೆ ಲೋಪ. ಗೋಪಾಃ ಗೋಪೌ ಗೋಪಾಃ । ಗೋಪಾಂ ಗೋಪೌ ಗೋಪಃ ಇತ್ಯಾದಿ. ವಿಶ್ವಪಾ ಶಬ್ದದಂತೇ ತಿಳಿಯಬೇಕು.

ಇತಿ ಆಕಾರಾಂತಾಃ ॥

ಇಕಾರಾಂತ ಮತಿ ಶಬ್ದ (ಬುದ್ಧಿ)

ಮತೀಃ । ಮತ್ಯಾ ॥

ಸ್ವಾದಿ ಪಂಚವಚನಗಳಲ್ಲಿ ಹರಿಶಬ್ದದಂತೇ ರೂಪ ತಿಳಿಯಬೇಕು. ಪ್ರ—ಮತೀಃ-ಮತೀ—ಮತಯಃ ॥ ಸಂ. ಪ್ರ—ಹೇ ಮತೇ—ಹೇಮತೀ—ಹೇ ಮತಯಃ ॥ ದ್ವಿ. ಮತಿಂ-ಮತೀ. ಬಹುವಚನದಲ್ಲಿ ಮತಿ+ಶಸ್ ಎಂದಿರುವಾಗ ಪೂರ್ವಸವರ್ಣದೀರ್ಘ ಮತೀನ್. " ತಸ್ಮಾಚ್ಛಸೋ ನಃ ಪುಂಸಿ ' ಸೂತ್ರದಲ್ಲಿ ಪುಲ್ಲಿಂಗದಲ್ಲಿ ಮಾತ್ರ ನತ್ವ ಹೇಳಿರುವುದರಿಂದ ಸಕಾರಕ್ಕೆ ನತ್ವವಿಲ್ಲ. ರುತ್ವವಿಸರ್ಗ. ಮತೀಃ ॥ ತೃತೀಯಾ ಏಕವಚನದಲ್ಲಿಯೂ " ಆಜಿೋನ್ಯಾಸ್ತ್ರಿಯಾಮ್ " ಸೂತ್ರದಲ್ಲಿ ಸ್ತ್ರೀಲಿಂಗದಲ್ಲಿ ನಿಷೇಧ ಮಾಡಿರುವುದರಿಂದ ಟಾ ಪ್ರತ್ಯಯಕ್ಕೆ ನಾಭಾವವಿಲ್ಲ. ಮತಿ+ಆ ಎಂದಿರುವಾಗ " ಇಕೋಯಣಚಿ " ಸೂತ್ರದಿಂದ ಯಣ್. ಮತ್ಯಾ. ಹಲಾದಿಯಲ್ಲಿ ಕಾರ್ಯ ವಿಶೇಷವಿಲ್ಲ. ಮತಿಭ್ಯಾಮ್. ಮತಿಭಿಃ ॥ ಚತುರ್ಥಿಯಲ್ಲಿ ನಿತ್ಯವಾಗಿ ಘಿಸಂಜ್ಞಾ ಪ್ರಾಪ್ತವಾದರೆ ಅಪವಾದವಾಗಿ ವಿಕಲ್ಪವಾಗಿ ನದೀಸಂಜ್ಞೆ ಹೇಳುತ್ತಾನೆ.

(ವಿಕಲ್ಪ ನದೀ ಸಂಜ್ಞೆಯನ್ನು ಹೇಳುವ ಸೂತ್ರ)

೨೫೩. ಜೀತಿ ಹ್ರಸ್ವಶ್ಚ ॥ ೧-೪-೬ ॥

ಇಯಜುವಜ್‌ಸ್ಥಾನೌ ಸ್ತ್ರೀಶಬ್ದಭಿನ್ನೌ ನಿತ್ಯಸ್ತ್ರೀಲಿಂಗಾವೀದೂತೌ, ಜೀತಿ ಪರೇ । ಮತ್ಯೈ ।ಮತಯೇ। ಮತ್ಯಾಃ ।ಮತ್ಯಾಃ। ಮತೇಃ ।

ಜೀತಿ, ಹ್ರಸ್ವಶ್ಚ ॥ ತ್ರಿಪದಸೂತ್ರ. " ಯೂಸ್ತ್ರ್ಯಾಖ್ಯೌ ನದೀ " ಸೂತ್ರ ಅನುವೃತ್ತವಾಗುತ್ತದೆ " ನೇಯಜ್‌ಇುವಜ್‌ಸ್ಥಾನಾವಸ್ತ್ರೀ " ಸೂತ್ರದಿಂದ ನ ಬಿಟ್ಟು ಉಳಿದ ಎಲ್ಲಾ ಪದಗಳು ಅನುವೃತ್ತವಾಗುತ್ತವೆ. ಯೂ ಎಂದರೆ ಈಕಾರ ಊಕಾರಗಳಿಂದು ಹಿಂದೆ ಹೇಳಿವೆ. ಸ್ತ್ರ್ಯಾಖ್ಯೌ ಎಂದರೆ ಯಾವಾಗಲೂ ಸ್ತ್ರೀಲಿಂಗವನ್ನು ಹೇಳುವುಗಳು, ಅಂದರೆ ನಿತ್ಯಸ್ತ್ರೀಲಿಂಗಗಳು. ಇಯಜ್ ಉವಜಿತಿಃ=) ಯಯೋಸ್ತೌ ಇಯಜುವಜ್‌ಸ್ಥಾನೌ. ಇಯಜ್ ಉವಜ್ ಆದೇಶಗಳನ್ನು ಹೊಂದಲು ಯೋಗ್ಯವಾದವುಗಳು ಎಂದರ್ಥ. ನಸ್ತ್ರೀ ಅಸ್ತ್ರೀ. ಸ್ತ್ರೀಶಬ್ದವೂ ಇಯಜ್ ಹೊಂದಲು ಯೋಗ್ಯವಾದುದರಿಂದ ಅದನ್ನು ಬಿಟ್ಟು ಇತರ ಶಬ್ದಗಳನ್ನು ತೆಗೆದುಕೊಳ್ಳಬೇಕು. ಹೀಗೆ ಇಲ್ಲಿ ಜಕಾರವಿರುವುದರಿಂದ ಎರಡು ವಾಕ್ಯಗಳಾಗುತ್ತವೆ. 1) ಇಯಜ್ ಉವಜ್ ಸ್ಥಾನೌ ಸ್ತ್ರೀ ಶಬ್ದಭಿನ್ನೌ ನಿತ್ಯಸ್ತ್ರೀಲಿಂಗೌ, ಈದೂತೌ ನದೀಸಂಜ್ಞೌ ವಾ ಸ್ತಃ ಜೀತಿ ಪರೇ. **ಸೂತ್ರಾರ್ಥ**— ಇಯಜುವಜ್ ಆದೇಶ ಹೊಂದಲು ಯೋಗ್ಯವಾದ ಸ್ತ್ರೀ ಶಬ್ದ ಭಿನ್ನವಾದ ನಿತ್ಯಸ್ತ್ರೀಲಿಂಗವಾದ ಈಕಾರಾಂತ, ಊಕಾರಾಂತ ಶಬ್ದಗಳು ಜೀತ್ತಾದ ಪ್ರತ್ಯಯ ಪರವಾದಾಗ ವಿಕಲ್ಪವಾಗಿ ನದೀಸಂಜ್ಞೆಯನ್ನು ಹೊಂದುತ್ತವೆ. " ನೇಯಜುವಜ್‌ಸ್ಥಾನಾವಸ್ತ್ರೀ " ಸೂತ್ರದಿಂದ ಇಯಜುವಜ್ ಹೊಂದುವವುಗಳಿಗೆ ನದೀಸಂಜ್ಞಾ ನಿಷೇಧಮಾಡಿರುವುದರಿಂದ ವಿಕಲ್ಪವಾಗಿ ಇಲ್ಲಿ ಹೇಳಿರುವುದು. ಹ್ರಸ್ವಶ್ಚ ಎಂಬುದೇ ಎರಡನೇ ವಾಕ್ಯ. ಇಲ್ಲಿಯೂ ಯೂ ಅನುವೃತ್ತವಾಗುತ್ತದೆ. ಇಶ್ಚ ಉಶ್ಚ ಯೂ. ಹ್ರಸ್ವಃ ಎಂಬುದು ಪ್ರತ್ಯೇಕ ಇಕಾರೋಕಾರಗಳಲ್ಲಿ ಅನ್ವಯ ಹೊಂದುತ್ತದೆ. ಸ್ತ್ರ್ಯಾಖ್ಯೌ ಪದವು ಇಲ್ಲಿ ಸಂಬದ್ಧವಾದರೂ ಹಿಂದಿನಂತೆ ಇಲ್ಲಿ ಅರ್ಥವಿಲ್ಲ. ಸ್ತ್ರೀಲಿಂಗವಾಚಕಗಳು ಎಂದು ಸಾಮಾನ್ಯಾರ್ಥ. ನಿತ್ಯಸ್ತ್ರೀಲಿಂಗ ವೆಂದಲ್ಲ. ಹೀಗೆ ವಿಶೇಷಾರ್ಥ ಸ್ವೀಕರಿಸುವುದರಲ್ಲಿ ವ್ಯಾಖ್ಯಾನವೇ ಪ್ರಮಾಣ, " ವಾಮಿ " ಸೂತ್ರದಿಂದ " ವಾ " ಅನುವೃತ್ತಿ. 2) ಸ್ತ್ರೀಲಿಂಗೌ ಹ್ರಸ್ವೌ ಜೇವರ್ಣೋವರ್ಣೌ ನದೀಸಂಜ್ಞೌ ವಾ ಸ್ತೋ ಜೀತಿ ಪರೇ ಎಂದು ಎರಡನೇವಾಕ್ಯ. ಸ್ತ್ರೀಲಿಂಗವಾಚಕವಾದ ಹ್ರಸ್ವವಾದ ಇವರ್ಣೋವರ್ಣಾಂತ ಪದಗಳು ಜೀತ್ತಾದ ಪ್ರತ್ಯಯ ಪರವಾದಾಗ ವಿಕಲ್ಪವಾಗಿ ನದೀಸಂಜ್ಞೆಯನ್ನು ಹೊಂದುತ್ತವೆ. ಇದು ಅಪ್ರಾಪ್ತವಿಭಾಷ್ಟೆ ಒಟ್ಟಿಗೆ **ಸೂತ್ರಾರ್ಥ.**—ಇಯಜುವಜ್ ಹೊಂದಲು ಯೋಗ್ಯವಾದ ಸ್ತ್ರೀಶಬ್ದ ಭಿನ್ನವಾದ ನಿತ್ಯಸ್ತ್ರೀಲಿಂಗವಾದ ಈಕಾರ ಊಕಾರಗಳೂ, ಹ್ರಸ್ವವಾದ ಇಕಾರ ಉಕಾರಗಳೂ ಸ್ತ್ರೀಲಿಂಗದಲ್ಲಿ ಜೀತ್‌ಪ್ರತ್ಯಯ ಪರವಾದಾಗ ವಿಕಲ್ಪವಾಗಿ ನದೀಸಂಜ್ಞೆಯನು

ಹೊಂದುತ್ತವೆ. ಎರಡನೇ ವಾಕ್ಯದಂತೆ ಮತಿ ಶಬ್ದಕ್ಕೆ ವಿಕಲ್ಪವಾಗಿ ನದೀಸಂಜ್ಞೆ. ಮತಿಯಂಬುದು ಸ್ತ್ರೀಲಿಂಗ, ಇಕಾರಾಂತವಾಗಿದೆ. (ಜಸ್ಸೀ) ಚತುರ್ಥಿಯಿಂದ ಪ್ರಥಮ ವಚನವೆಲ್ಲಾ ಜಸ್ತ್ರಾದಿ ಪ್ರತ್ಯಯ. ಮತಿ+ಏ, ಎಂದಿರುವಾಗ ನದೀಸಂಜ್ಞೆ ಬಂದರೆ "ಆಣ್ನಾದ್ಯಾಃ" ಸೂತ್ರದಿಂದ ಜೀಗೆ ಆಟ್ಆಗಮ. ಟಿತ್ತಾದುದರಿಂದ ಆದ್ಯವಯವವಾಗಿ ಬಂದರೆ ಮತಿ+ಆ+ಏ ಎಂದಾಗ "ಆಟಶ್ಚ" ಸೂತ್ರದಿಂದ ಆ ಏಗಳಿಗೆ ವೃದ್ಧಿ. ಮತಿ+ಏ. ಯಣ್. ಮತ್ಯೈ. ನದೀಸಂಜ್ಞಾ ಬಾರದಿರುವಾಗ "ಘೇರ್ಙಿತಿ" ಸೂತ್ರದಿಂದ ಇಕಾರಕ್ಕೆ ಗುಣ. ಗುಣದ ಏಕಾರಕ್ಕೆ ಅಯಾದೇಶ. ಹರಿಶಬ್ದದಂತೇ ರೂಪ. ಮತಿ+ಏ=ಮತೇ+ಏ=ಮತಯೇ. ಹಲಾದಿಯಲ್ಲಿ ಕೇವಲ ವಿಭಕ್ತಿ ಸೇರಿಸುವುದು ಸೂತ್ರ. ಮತಿಭ್ಯಾಮ್ ಮತಿಭ್ಯಃ ॥ ಪಂಚಮಿ, ಷಷ್ಠಿ ಏಕವಚನಗಳಲ್ಲಿ ಜಸ್ ಪ್ರತ್ಯಯ ಬಂದು ಅಸ್ ಉಳಿಯುತ್ತದೆ. ಜಿತ್ತಾದುದರಿಂದ ವಿಕಲ್ಪ ನದೀಸಂಜ್ಞಾ ಬಂದರೆ ಹಿಂದಿನಂತೆ "ಆಣ್ನಾದ್ಯಾಃ" ಸೂತ್ರದಿಂದ ಆಟ್. "ಆಟಶ್ಚ" ಸೂತ್ರದಿಂದ ವೃದ್ಧಿ. ಮತಿ+ಅಸ್=ಮತಿ+ಆ+ಅಸ್ ಮತಿ+ಆಸ್. ಯಣ್. ಮತ್ಯಾಸ್. ಸಕಾರಕ್ಕೆ ರುತ್ವವಿಸರ್ಗ. ಮತ್ಯಾಃ–ಮತ್ಯಾಃ ದ್ವಿಬಹುವಚನಗಳಲ್ಲಿ ಹರಿಶಬ್ದದಂತೇ ರೂಪ. ಪಂ–ಮತಿಭ್ಯಾಮ್–ಮತಿಭ್ಯಃ । ಮತ್ಯೋಃ–ಮತೀನಾಮ್. (ನುಟ್–ದೀರ್ಘ.)

ಸಪ್ತಮಿ ಏಕವಚನದಲ್ಲಿ ಜಿಪರವಾವಾಗ ನದೀಸಂಜ್ಞಾ ಬಂದಾಗ ಜಿಗೆ ಆಮ್ ಆದೇಶ ಹೇಳುತ್ತಾನೆ.

(ಜಿಗೆ ಆಮ್ ಹೇಳುವ ಸೂತ್ರ)

೨೨೪. ಇದುದ್ಭ್ಯಾಮ್ ॥ ೭-೩-೧೧೭ ॥

ನದೀಸಂಜ್ಞಕಾಭ್ಯಾಮಿದುದ್ಭ್ಯಾಂ ಪರಸ್ಯ ಜೇರಾಮ್ ಸ್ಯಾತ್ ।
ಮತ್ಯಾಮ್ ಮತ್ಯಾಃ ಶೇಷಂ ಹರಿವತ್ ॥ ಏವಂ ಬುದ್ಧ್ಯಾದಯಃ॥

ಏಕಪದಸೂತ್ರ. "ಜೇರಾಮ್ನದ್ಯಾಮ್ನೀಭ್ಯಃ" ಸೂತ್ರದಿಂದ "ನದೀ" "ಆಮ್" ಅನುವೃತ್ತವಾಗುತ್ತವೆ. ಇದುದ್ಭ್ಯಾಮ್ ಪಂಚಮೀ. ಅಲ್ಲಿ ನದೀ ಎಂಬುದಕ್ಕೆ ಅನ್ವಯ. **ಸೂತ್ರಾರ್ಥ**—ನದೀಸಂಜ್ಞೆಯುಳ್ಳ ಇಕಾರಉಕಾರಗಳ ಪರದಲ್ಲಿರುವ ಜಿ ಪ್ರತ್ಯಯಕ್ಕೆ ಆಮ್ ಬರುತ್ತದೆ. ಯದ್ಯಪಿ ಇಲ್ಲಿ "ಜೇರಾಮ್–" ಸೂತ್ರದಿಂದಲೇ ಆಮ್ ಬರಬಹುದು. ಆದರೆ ಅದಕ್ಕೆ ಬಾಧಕವಾಗಿ "ಔತ್" ಸೂತ್ರದಿಂದ ಜಿಗೆ ಔತ್ವ ಬರಬೇಕಾಗುತ್ತದೆ. ಜೇರಾಮ್–ಗೌರೀಮುಂತಾದಸ್ಥಳದಲ್ಲಿ ಚರಿತಾರ್ಥವನ್ನು ಹೊಂದುತ್ತದೆ. "ಔತ್" ಸೂತ್ರಕ್ಕೆ ಸಖ್ಯೌ ಎಂಬಲ್ಲಿ ಚರಿತಾರ್ಥ. ಪ್ರಕೃತ ಪರವಾದುದರಿಂದ ಔತ್ವವನ್ನು ಬಾಧಿಸಿ ಈ ಸೂತ್ರದಿಂದ

ಆಮ್ ಬಂದರೆ ಮತಿ+ಆಮ್. ಜಿತ್ತಾದುದರಿಂದ ಆಟ್. ಮತಿ+ಆ+ಆಮ್. ಮತಿ+ಆಮ್. ಯಣ್. ಮತ್ಯಾಮ್. ಆಟ್ ಮಾಡದಿದ್ದರೂ ಮತ್ಯಾಮ್ ರೂಪಸಿದ್ಧಿಯಾದರೂ ಆಟಿಗೆ ಲಕ್ಷ್ಯವಾದುದರಿಂದ ಮಾಡಲೇಬೇಕು. "ಪರ್ಜನ್ಯವತ್ ಲಕ್ಷಣಪ್ರವೃತ್ತಿಃ" ಸೂತ್ರವು ಮಳೆಯಂತೆ ಪ್ರವೃತ್ತಿ ಹೊಂದುವುದೆಂದು ಪರಿಭಾಷೆ ಹೇಳುತ್ತದೆ. ಮಳೆಯು ಬೇಕಾದಲ್ಲಿಯೂ, ಬೇಡವಾದಲ್ಲೂ ಬರುತ್ತದೆ. ಅದರಂತೆ ಸೂತ್ರವು ತನ್ನಲಕ್ಷ್ಯದಲ್ಲಿ ಪ್ರಯೋಜನವಿರಲೀ ಇಲ್ಲದಿರಲಿ ಬರುತ್ತದೆ. ಅದರಂತೆ ಬಾರದಿದ್ದರೆ "ಅಚ್ಚಸ್ಫೇಃ" ಸೂತ್ರದಿಂದ ಜಿಗೆ ಔತ್ವ. ತಕಾರದಮೇಲಿರುವ ಇಕಾರಕ್ಕೆ ಅಕಾರಾದೇಶ. ಮತ+ಔ. ವೃದ್ಧಿ. ಮತೌ. ಉಳಿದಡೆ ಹರಿಶಬ್ದದಂತೇರೂಪ. ಮತ್ಯೋಃ–ಮತಿಷು. ಇಣಿನಪರದಲ್ಲಿರುವುದರಿಂದ "ಆದೇಶ್ಪ್ರತ್ಯಯಯೋಃ" ಸೂತ್ರದಿಂದ ಷತ್ವ. ಹೀಗೆಯೇ ಬುದ್ಧಿ ಮುಂತಾದ ಇಕಾರಾಂತ ಸ್ತ್ರೀಲಿಂಗಶಬ್ದಗಳ ರೂಪವನ್ನು ತಿಳಿದುಕೊಳ್ಳಬೇಕು.

ಇಕಾರಾಂತ ಸ್ತ್ರೀಲಿಂಗ ತ್ರಿ ಶಬ್ದ. (ಮೂರು)

ಬಹುತ್ವಸಂಖ್ಯಾವಾಚಕವಾದುದರಿಂದ ಇದು ನಿತ್ಯಬಹುವಚನಾಂತ. ತ್ರಿ+ಜಸ್ ಎಂದಿರುವಾಗ ಪ್ರಕೃತಿಗೆ ಆದೇಶಹೇಳುತ್ತಾನೆ.

(ತ್ರಿಚತುರ್‌ಗಳಿಗೆ ಆದೇಶಹೇಳುವಸೂತ್ರ)

೨೨೫. ತ್ರಿಚತುರೋಃ, ಸ್ತ್ರಿಯಾಂ, ತಿಸೃಚತಸೃ, ॥ ೭-೨-೯೯ ॥

ಸ್ತ್ರೀಲಿಂಗಯೋರೇತಯೋರೇತಾವಾದೇಶೌ ಸ್ತಃ ವಿಭಕ್ತೌ ಪರತಃ ॥

ತ್ರಿಪದಸೂತ್ರ. "ಅಷ್ಟನ ಆ ವಿಭಕ್ತೌ" ಸೂತ್ರದಿಂದ "ವಿಭಕ್ತೌ" ಅನುವೃತ್ತವಾಗುತ್ತದೆ. **ಸೂತ್ರಾರ್ಥ**—ತ್ರಿ. ಚತುರ್ ಶಬ್ದಗಳಿಗೆ ಸ್ತ್ರೀಲಿಂಗದಲ್ಲಿ ವಿಭಕ್ತಿ ಪರವಾದಾಗ ಕ್ರಮವಾಗಿ ತಿಸೃ, ಚತಸೃ ಆದೇಶಗಳು ಬರುತ್ತವೆ. ಪ್ರಕೃತ ಅಜಾದಿಯಾದುದರಿಂದ ತಿಸೃ ಆದೇಶಬಂದರೆ ತಿಸೃ+ಅಸ್ ಎಂದಾಗುತ್ತದೆ. ಆಗ ಋಕಾರಕ್ಕೆ ಕಾರ್ಯ ಹೇಳುತ್ತಾನೆ.

(ಋಕಾರಕ್ಕೆ ರೇಫಾದೇಶ ಹೇಳುವ ಸೂತ್ರ)

೨೨೬. ಅಚಿ ರ ಋತಃ ॥ ೭-೨-೧೦೦ ॥

ತಿಸೃ ಚತಸೃ ಏತಯೋರ್ಋಕಾರಸ್ಯ ರೇಫಾದೇಶಃ ಸ್ಯಾದಚಿ । ಗುಣ ದೀರ್ಘೋತ್ವಾನಾಮಪವಾದಃ । ತಿಸ್ರಃ । ತಿಸ್ರಃ । ತಿಸೃಭಿಃ । ತಿಸೃಭ್ಯಃ । ತಿಸೃಭ್ಯಃ । ಆಮಿ ನುಟ್ ॥

ತ್ರಿಪದ ಸೂತ್ರ. ಹಿಂದಿನಸೂತ್ರದಿಂದ " ತಿಸೃಚತಸೃ " ಅನುವೃತ್ತವಾಗುತ್ತದೆ. ಅದು ಇಲ್ಲಿ ಷಷ್ಠ್ಯಂತವಾಗಬೇಕಾದುದರಿಂದ ಲುಪ್ತಷಷ್ಠೀಕವೆಂದು (ಷಷ್ಠೀ ಲುಪ್ತವಾಗಿದೆಯೆಂದು) ಭಾವಿಸಬೇಕು. ರಃ ಅಂದರೆ ರೇಫ. **ಸೂತ್ರಾರ್ಥ**—ತಿಸೃ ಚತಸೃಶಬ್ದಗಳ ಋಕಾರಕ್ಕೆ ಅಟ್‌ಪರವಾದಾಗ ರೇಫಾದೇಶ ಬರುತ್ತದೆ, ಪ್ರಕೃತ ಜಸ್ ಪರವಾದಾಗ ಅಜಾದಿಪ್ರತ್ಯಯವಿರುವುದರಿಂದ ಋಕಾರಕ್ಕೆ ರೇಫಾದೇಶ. ತಿಸೃ+ಅಸ್=ತಿಸ್-ರ್+ಅಸ್=ತಿಸ್ರಸ್. ಸಕಾರಕ್ಕ ರುತ್ವವಿಸರ್ಗ. ತಿಸ್ರಃ ಹೀಗೆಯೇ ಶಸಿನಲ್ಲಿಯೂ ರೇಫಾದೇಶ. ತಿಸ್ರಃ.

ತಿಸ್ರಃ ರೂಪಸಿದ್ಧಿಗೋಸ್ಕರ ಈ ಸೂತ್ರ ಹೇಳಬೇಕಾಗಿಲ್ಲ, ತಿಸೃ+ಅಸ್ ಎಂದಿರುವಾಗ " ಇಕೋಯಣಚಿ" ಸೂತ್ರದಿಂದ ಯಣಾದೇಶಬಂದರೆ ತಿಸ್ರಃ ಎಂದಾಗುತ್ತದೆ. ಹೀಗಿರುವಾಗ ಏಕೆ ಪುನಃ ಹೇಳಿದುದು ? ಅಂದರೆ ಗುಣ, ದೀರ್ಘ, ಉತ್ವಗಳಿಗೆ ಇದು ಅಪವಾದವೆಂದು ತಿಳಿಸುತ್ತಾನೆ. ತಿಸೃ+ಅಸ್ ಎಂದಿರುವಾಗ ಪ್ರಥಮಾ ಬಹುವಚನದಲ್ಲಿ " ಜಸಿ ಚ " ಸೂತ್ರದಿಂದ ಋಕಾರಕ್ಕೆ ಗುಣಬರಬೇಕಾಗುತ್ತದೆ. ಹಾಗೆಯೇ ಶಸಿನಲ್ಲಿ " ಪ್ರಥಮಯೋಃ ಪೂರ್ವಸವರ್ಣಃ " ಎಂಬುದರಿಂದ ಪೂರ್ವಸವರ್ಣದೀರ್ಘ ಪ್ರಾಪ್ತವಾಗುತ್ತದೆ. ಪ್ರಿಯತಿಸೃ+ಅಸ್ ಎಂದು ಪಂಚಮೀ ಷಷ್ಠೀ ಏಕವಚನದಲ್ಲಿ " ಋತ ಉತ್ " ಸೂತ್ರದಿಂದ ಉತ್ವ ಬರಬೇಕಾಗುತ್ತದೆ. ತಿಸೃ ಶಬ್ದ ಗೌಣವಾದಾಗ ಏಕವಚನದಲ್ಲಿಯೂ ಪ್ರಯೋಗವಿದೆ. ಈ ಮೂರು ಕಾರ್ಯಗಳನ್ನೂ ಬಾಧಿಸಿ ಪುನಃ ಪ್ರಕೃತಸೂತ್ರದಿಂದ ರೇಫಾದೇಶ ಹೇಳಿರುತ್ತಾನೆ. ಆದುದರಿಂದ ಇದು ಸಾರ್ಥಕವಾಗಿದೆ. ಹಲಾದಿಯಲ್ಲಿ ಕಾರ್ಯವಿಲ್ಲ. ತೃ-ತಿಸೃಭಿಃ ಚ. ಪಂ-ತಿಸೃಭ್ಯಃ ೨ । ತಿಸೃ+ಆಮ್ ಎಂದಿರುವಾಗ " ಹ್ರಸ್ವನದ್ಯಾಪೋನುಟ್ " ಸೂತ್ರದಿಂದ ಆಮಿಗೆ ನುಡಾಗಮ. ತಿಸೃ+ನಾಮ್ ಎಂದಿರುವಾಗ " ನಾಮಿ " ಸೂತ್ರದಿಂದ ದೀರ್ಘಪ್ರಾಪವಾದರೆ ನಿಷೇಧಹೇಳುತ್ತಾನೆ.

(ನಾಮಿ ದೀರ್ಘನಿಷೇಧಹೇಳುವ ಸೂತ್ರ)

೨೨೭. ನ, ತಿಸೃಚತಸೃ ॥ ೬-೪-೪ ॥

ಏತಯೋರ್ನಾಮಿ ದೀರ್ಘೋ ನ । ತಿಸೃಣಾಮ್ । ತಿಸೃಷು ॥ ದ್ವೇ ದ್ವೇ । ದ್ವಾಭ್ಯಾಮ್ । ದ್ವಾಭ್ಯಾಮ್ । ದ್ವಾಭ್ಯಾಮ್ । ದ್ವಯೋಃ ।

ದ್ವಯೋಃ ॥ ಗೌರೀ । ಗೌರ್ಯೌ । ಗೌರ್ಯಃ । ಹೇ ಗೌರಿ । ಇತ್ಯಾದಿ । ಏವಂ ನದ್ಯಾದಯಃ । ಲಕ್ಷ್ಮೀಃ । ಶೇಷಂ ಗೌರೀವತ್ । ಏವಂ ತರೀತಂತ್ರ್ಯಾದಯಃ । ಸ್ತ್ರೀ । ಹೇ ಸ್ತ್ರಿ ॥

ದ್ವಿಪದ ಸೂತ್ರ. " ಢ್ರಲೋಪೇದೀ—" ಸೂತ್ರದಿಂದ " ದೀರ್ಘಃ " ಅನುವೃತ್ತವಾಗುತ್ತದೆ. " ನಾಮಿ " ಸೂತ್ರಾನುವೃತ್ತಿ. ತಿಸೃ ಚತಸೃ ಲುಪ್ತಷಷ್ಠೀಕ ಪದ. **ಸೂತ್ರಾರ್ಥ**—ತಿಸೃ, ಚತಸೃಶಬ್ದಗಳಿಗೆ ನಾಮ್ ಪರವಾದಾಗ ದೀರ್ಘ ಬರುವುದಿಲ್ಲ. ತಿಸೃನಾಮ್ ಎಂದಿರುವಾಗ ಋಕಾರದ ಪರದಲ್ಲಿರುವುದರಿಂದ ನಕಾರಕ್ಕೆ ಣತ್ವ. ತಿಸೃಣಾಮ್- ಸಪ್ತ-ತಿಸೃಷು.

ಇಕಾರಾಂತಸ್ತ್ರೀಲಿಂಗ ದ್ವಿಶಬ್ದ. (ಎರಡು) ಇದು ದ್ವಿತ್ವ ಸಂಖ್ಯಾವಿಶಿಷ್ಟ ವಾಚಕವಾದುದರಿಂದ ನಿತ್ಯದ್ವಿವಚನಾಂತ. ದ್ವಿ+ಔ ಎಂದಿರುವಾಗ " ತ್ಯದಾದೀ ನಾಮಃ " ಸೂತ್ರದಿಂದ ತ್ಯದಾದಿಯಲ್ಲಿ ದ್ವಿಶಬ್ದಸೇರಿರುವುದರಿಂದ ಅಕಾರಾದೇಶ. ದ್ವ+ಔ. ಅದಂತವಾದುದರಿಂದ " ಅಜಾದ್ಯತಷ್ಟಾಪ್ " ಸೂತ್ರದಿಂದ ಸ್ತ್ರೀಲಿಂಗದಲ್ಲಿ ಟಾಪ್. ದ್ವಾ+ಔ. " ಔಜ ಆಪಃ " ಸೂತ್ರದಿಂದ ವಿಭಕ್ತಿಗೆ ಶೀಭಾವ. ಗುಣ. ದ್ವೇ. ಇನ್ನು ಎಲ್ಲಾವಿಭಕ್ತಿಗಳಲ್ಲಿಯೂ ರಮಾಶಬ್ದದಂತೇ ಆಗುತ್ತದೆ. ದ್ವೇ-ತೃ-ಚ-ಪಂ-ದ್ವಾಭ್ಯಾಮ್. ಷ-ಸ-ದ್ವಯೋಃ ॥ ಹೀಗೆ ಇಕಾರಾಂತ ಸ್ತ್ರೀಲಿಂಗ ಶಬ್ದಗಳು ಆಗುತ್ತವೆ.

ಈಕಾರಾಂತ ಸ್ತ್ರೀಲಿಂಗ ಗೌರೀ ಶಬ್ದ. (ಪಾರ್ವತಿ) ಗೌರ ಶಬ್ದದ ಮೇಲೆ ಸ್ತ್ರೀತ್ವದಲ್ಲಿ " ಗೌರಾದಿಭ್ಯಶ್ಚ " ಸೂತ್ರದಿಂದ ಙೀಷ್ ಪ್ರತ್ಯಯ. ಗೌರ+ಈ ಎಂದಿರುವಾಗ " ಯಸ್ಯೇತಿಚ " ಸೂತ್ರದಿಂದ ಅಕಾರ ಲೋಪ. ಗೌರೀ. ನಿತ್ಯಸ್ತ್ರೀಲಿಂಗವಾಗಿ ಈಕಾರಾಂತವಾದುದರಿಂದ ನದೀ ಸಂಜ್ಞೆಯನ್ನು ಹೊಂದುತ್ತದೆ. ಸು ಪರವಾದಾಗ " ಹಲ್‌ಙ್ಯಾಭ್ಯೋ "-ಸೂತ್ರದಿಂದ ಙ್ಯಂತದ ಪರದಲ್ಲಿರುವುದರಿಂದ ಸುವಿಗೆ ಲೋಪ. ಗೌರೀ. ದ್ವಿವಚನದಲ್ಲಿ ಔ ಪರವಾದಾಗ ದೀರ್ಘದ ಪರದಲ್ಲಿರುವುದರಿಂದ ಪೂರ್ವಸವರ್ಣದೀರ್ಘ ಬರುವುದಿಲ್ಲ. ಯಣ್. ಗೌರೀ+ಔ=ಗೌರ್ಯೌ. ಜಸಿನಲ್ಲಿ ಹಿಂದಿನಂತೇ ಯಣ್. ಗೌರ್ಯಃ. ಸಂಬುದ್ಧಿಯಲ್ಲಿ ನದ್ಯಂತವಾದುದರಿಂದ "ಅಂಬಾರ್ಥನದ್ಯೋರ್ಹ್ರಸ್ವಃ" ಸೂತ್ರದಿಂದ ಹ್ರಸ್ವ. ಹೇ ಗೌರಿ+ಸ್. ಹ್ರಸ್ವದ ಪರದಲ್ಲಿರುವುದರಿಂದ " ಏಙ್‌ಹ್ರಸ್ವಾತ್ ಸಂಬುದ್ಧೇಃ " ಸೂತ್ರದಿಂದ ಸುವಿಗೆ ಲೋಪ. ಹೇ ಗೌರಿ. ದ್ವಿಬಹುವಚನಗಳಲ್ಲಿ ಪ್ರಥಮಾದಂತೇ ರೂಪ. ಹೇ ಗೌರ್ಯೌ-ಹೇ ಗೌರ್ಯಃ. ಗೌರೀ+ಅಮ್ ಎಂದಿರುವಾಗ " ಅಮಿ ಪೂರ್ವಃ " ಸೂತ್ರದಿಂದ ಪೂರ್ವರೂಪ. ಗೌರೀಮ್. ಗೌರ್ಯೌ. ಗೌರೀ+ಶಸ್ ಎಂದಿರುವಾಗ ಪೂರ್ವಸವರ್ಣ

ದೀರ್ಘ. ಗೌರೀಸ್. ಸಕಾರಕ್ಕೆ ರುತ್ವವಿಸರ್ಗ. ಗೌರೀಃ. ತೃತೀಯಾ ಏಕವಚನದಲ್ಲಿ ಟಾ ಯಣ್. ಗೌರೀ+ಆ. ಗೌರ್ಯಾ. ಹಲಾದಿಯಲ್ಲಿ ವಿಭಕ್ತಿ ಸೇರಿಸುವುದು ಸೂತ್ರ. ಗೌರೀಭ್ಯಾಮ್–ಗೌರೀಭಿಃ ॥ ಚತುರ್ಥೀ ಏಕವಚನದಲ್ಲಿ ಗೌರೀ+ಏ ಎಂದಿರುವಾಗ ನದೀಕಾರ್ಯ. “ ಆಣ್ನದ್ಯಾಃ ” ಸೂತ್ರದಿಂದ ಆಡಾಗಮ. “ ಆಟಶ್ಚ ” ಸೂತ್ರದಿಂದ ವೃದ್ಧಿ. ಗೌರೀ+ಆ–ಏ=ಗೌರೀ+ಐ. ಯಣ್. ಗೌರ್ಯೈ. ಗೌರೀಭ್ಯಾಮ್, ಗೌರೀಭಿಃ ॥ ಪಂಚಮೀ ಷಷ್ಠೀ ಏಕವಚನಗಳಲ್ಲಿ ಹಿಂದೆ ಹೇಳಿದಂತೆ ಪ್ರತ್ಯಯಸ್ವರ, ಆಡಾಗಮ ವೃದ್ಧಿ. ಗೌರೀ+ಆ+ಅಸ್=ಗೌರೀ+ಆಸ್. ಗೌರ್ಯಾಸ್ (ಯಣ್) ಗೌರ್ಯಾಃ ॥ ಷಷ್ಠೀ ದ್ವಿವಚನದಲ್ಲಿ ಯಣ್. ಗೌರೀ+ಓಸ್=ಗೌರ್ಯೋಃ. ಗೌರೀ+ಆಮ್ ಎಂದಿರುವಾಗ ನದಿಯ ಪರದಲ್ಲಿರುವುದರಿಂದ “ ಹ್ರಸ್ವನದ್ಯಾ ” ಸೂತ್ರದಿಂದ ಆಮಿಗೆ ನುಡಾಗಮ. ಗೌರೀ+ನಾಮ್ “ ಅಟ್‌ಕುಪ್ವಾಙ್ ” –ಸೂತ್ರದಿಂದ ನಕಾರಕ್ಕೆ ಣತ್ವ. ಗೌರೀಣಾಮ್ ॥ ಸಪ್ತಮೀ ಏಕವಚನದಲ್ಲಿ ಙಿ ಬಂದಾಗ ಅದಕ್ಕೆ “ ಙೀರಾಮ್ ” –ಸೂತ್ರದಿಂದ ಆಮಾದೇಶ. ಅದಕ್ಕೆ ಆಡಾಗಮ. ವೃದ್ಧಿ. ಯಣಾದೇಶ. ಗೌರೀ+ಇ=ಗೌರೀ+ಆಮ್. ಗೌರೀ+ಆ+ಆಮ್. ಗೌರ್ಯಾಮ್. ಗೌರ್ಯೋಃ–ಗೌರೀಷು. ಇಣಿನ ಪರದಲ್ಲಿರುವುದರಿಂದ ಷತ್ವ. ಹೀಗೆಯೇ ನದೀ ಮುಂತಾದ ಙ್ಯಂತ ಶಬ್ದಗಳನ್ನು ತಿಳಿಯಬೇಕು. ಲಕ್ಷ್ಮ್ಯೀ ಶಬ್ದ ಙ್ಯಂತವಲ್ಲ. ಈ ಪ್ರತ್ಯಯಾಂತ ಶಬ್ದವೆಂದು ಹಿಂದೆ ಹೇಳಿದೆ. ಅದಕ್ಕೊಸ್ಕರ ಪ್ರಥಮಾ ಸು ಪರವಾದಾಗ ಙ್ಯಂತದ ಪರದಲ್ಲಿಲ್ಲದುದರಿಂದ “ ಹಲ್‌ಙ್ಯಾಬ್ಭ್ಯಃ– ” ಸೂತ್ರದಿಂದ ಸುಲೋಪ ಬರುವುದಿಲ್ಲ. ಸುವಿಗೆ ರುತ್ವ, ವಿಸರ್ಗ. ಲಕ್ಷ್ಮ್ಯೀಃ. ಇದನ್ನು ತಿಳಿಸಲು ಬೇರೆ ಬರೆದಿರುತ್ತಾನೆ. ನದೀ ಸಂಜ್ಞೆಗೆ ಬಾಧವಿಲ್ಲದುದರಿಂದ ಇನ್ನು ಉಳಿದ ಎಲ್ಲಾ ವಿಭಕ್ತಿಗಳಲ್ಲಿಯೂ ಗೌರೀ ಶಬ್ದದಂತೇ ಆಗುತ್ತದೆ. ಹೀಗೆಯೇ ತರೀ, ತಂತ್ರೀ ಮುಂತಾದ ಈ ಪ್ರತ್ಯಯಾಂತ ಶಬ್ದಗಳಲ್ಲಿ ಪ್ರಥಮಾಂತದಲ್ಲಿ ಮಾತ್ರ ಸು ಲೋಪವಿಲ್ಲ. ಉಳಿದೆಡೆಗಳಲ್ಲಿ ಗೌರೀ ಶಬ್ದದಂತೇ ರೂಪ ತಿಳಿಯಬೇಕು.

ಈಕಾರಾಂತ ಸ್ತ್ರೀ ಶಬ್ದ. (ಹೆಂಗಸು)

ಸ್ತ್ರೈಶ್ಲಿ ಧಾತುವಿಗೆ ಡ್ರಟ್ ಪ್ರತ್ಯಯ ಬಂದಾಗ ಸ್ತ್ರೀ ರೂಪವಾಗುತ್ತದೆ. ಟಿತ್ತಾದುದರಿಂದ ಙೀಪ್‌ಬಂದು ಙ್ಯಂತವಾಗಿದೆ. “ಹಲ್‌ಙ್ಯಾಭ್ಭ್ಯೋದೀರ್ಘಾತ್ ”–ಸೂತ್ರದಿಂದ ಸುವಿಗೆ ಲೋಪ. ಸ್ತ್ರೀ. ನದೀ ಸಂಜ್ಞೆ ಇರುವುದರಿಂದ ಸಂಬುದ್ಧಿಯಲ್ಲಿ ಹ್ರಸ್ವ. ಸುಲೋಪ. (ಗೌರೀವತ್) ಹೇಸ್ತ್ರಿ. ದ್ವಿವಚನದಲ್ಲಿ ಔಪರವಾದಾಗ ಯಣಾದೇಶ ಪ್ರಾಪ್ತವಾದರೆ ಅಪವಾದವಾಗಿ ಇಯಜ್ ಆದೇಶಹೇಳುತ್ತಾನೆ.

(ಸ್ತ್ರೀ ಶಬ್ದಕ್ಕೆ ಇಯಜ್ ಹೇಳುವ ಸೂತ್ರ)

೨೨೮. ಸ್ತ್ರಿಯಾಃ ॥ ೬-೪-೭೯ ॥

ಅಸ್ಯ ಇಯಜ್ ಸ್ಯಾದಜಾದೌ ಪ್ರತ್ಯಯೇ ಪರೇ ॥ ಸ್ತ್ರಿಯೌ । ಸ್ತ್ರಿಯಃ ॥

ಏಕಪದಸೂತ್ರ. “ ಅಚಿ ಶ್ನುಧಾತುಭ್ರುವಾಂ”–ಸೂತ್ರದಿಂದ “ಇಯಜ್” “ಅಚಿ” ಪದಗಳು ಅನುವೃತ್ತವಾಗುತ್ತವೆ. “ಸ್ತ್ರಿಯಾಃ” ಷಷ್ಠೀ. **ಸೂತ್ರಾರ್ಥ**–ಸ್ತ್ರೀಶಬ್ದಕ್ಕೆ ಅಜಾದಿಯಾದಪ್ರತ್ಯಯ ಪರವಾದಾಗ ಇಯಜ್ ಆದೇಶಬರುತ್ತದೆ. ಜಶ್ತಾ ದುದರಿಂದ ಅಂತಾವಯವವಾಗಿ ಬರುತ್ತದೆ. ಸ್ತ್ರೀ+ಔ–ಸ್ತ್ರ್+ಇಯ್+ಔ=ಸ್ತ್ರಿಯೌ. ದ್ವಿತೀಯಾದಿ ವಚನದಲ್ಲಿಯೂ ಹೀಗೇರೂಪವಾಗುತ್ತದೆ. ಜಸ್ ಪರವಾದಾಗಲೂ ಅಜಾದಿಯಾದುದರಿಂದ ಇಯಜಿ. ಸಕಾರಕ್ಕೆ ರುತ್ವವಿಸರ್ಗ. ಸ್ತ್ರಿಯಃ. ದ್ವಿತೀಯಾದಲ್ಲಿ ಅಮ್ ಪರವಾದಾಗ ಪೂರ್ವರೂಪವನ್ನು ಬಾಧಿಸಿ ಈಸೂತ್ರದಿಂದ ಇಯಜ್ ಪ್ರಾಪ್ತವಾದರೆ ವಿಕಲ್ಪಹೇಳುತ್ತಾನೆ

(ಸ್ತ್ರೀ ಶಬ್ದಕ್ಕೆ ವಿಕಲ್ಪ ಇಯಜ್ ಹೇಳುವ ಸೂತ್ರ)

೨೨೯. ವಾಮ್‌ಶಸೋಃ ॥ ೬-೪-೮೦ ॥

ಅಮಿ ಶಸಿ ಚ ಸ್ತ್ರಿಯಾ ಇಯಜ್ ವಾ ಸ್ಯಾತ್॥ ಸ್ತ್ರಿಯಮ್। ಸ್ತ್ರೀಮ್। ಸ್ತ್ರಿಯಃ ಸ್ತ್ರೀಃ ॥ ಸ್ತ್ರಿಯಾ । ಸ್ತ್ರಿಭ್ಯೈ । ಸ್ತ್ರಿಯಾಃ । ಸ್ತ್ರಿಯೋಃ ೨ ॥ ಪರತ್ವಾನ್ನುಟ್। ಸ್ತ್ರೀಣಾಮ್। ಸ್ತ್ರೀಷು ॥ ಶ್ರೀಃ। ಶ್ರಿಯೌ। ಶ್ರಿಯಃ॥

ವಾ, ಅಮ್‌ಶಸೋಃ। ದ್ವಿಪದಸೂತ್ರ. ಹಿಂದಿನಿಂದ “ ಸ್ತ್ರಿಯಾಃ ” ಸೂತ್ರವೂ “ಇಯಜ್-”ಪದವೂ ಅನುವೃತ್ತವಾಗುತ್ತವೆ. **ಸೂತ್ರಾರ್ಥ**-ಸ್ತ್ರೀಶಬ್ದಕ್ಕೆ ಅಮ್,ಶಸ್ ಪರವಾದಾಗ ಇಯಜ್ ವಿಕಲ್ಪವಾಗಿ ಬರುತ್ತದೆ. ಪ್ರಕೃತ ಅಮ್‌ಪರವಾದುದರಿಂದ ಇಯಜ್ ಬಂದರೆ ಸ್ತ್ರಿಯ್+ಅಮ್=ಸ್ತ್ರಿಯಮ್. ಬಾರದಿದ್ದರೆ “ಅಮಿಪೂರ್ವ ” ಸೂತ್ರದಿಂದ ಪೂರ್ವರೂಪ (2) ಸ್ತ್ರೀಮ್. ಶಸಿನಲ್ಲಿಯೂ ಹೀಗೆ ಇಯಜ್ ಬಂದರೆ. ಸ್ತ್ರಿಯ್+ಅಸ್=ಸ್ತ್ರಿಯಃ. ಬಾರದಿದ್ದರೆ ಪೂರ್ವಸವರ್ಣದೀರ್ಘ. ಸ್ತ್ರೀಃ. ಪುಲ್ಲಿಂಗವಾಗದಿರುವುದರಿಂದ ಸಕಾರಕ್ಕೆನತ್ವವಿಲ್ಲ. ತೃತೀಯಾದಲ್ಲಿ ಟಾಪರವಾದಾಗ “ಸ್ತ್ರಿಯಾ”ಃ ಸೂತ್ರದಿಂದ ಇಯಜ್‌ಆದೇಶ. ಸ್ತ್ರೀ+ಆ=ಸ್ತ್ರಿಯಾ–ಸ್ತ್ರೀಭ್ಯಾಮ್-ಸ್ತ್ರೀಭಿಃ ॥ ಚತುರ್ಥಿಏಕವಚನದಲ್ಲಿ ಙೀ ಬಂದಾಗ “ ಆಣ್ನದ್ಯಾಃ ” ಸೂತ್ರದಿಂದ ಆದಕ್ಕೆ ಆಟಾಗಮ. ಸ್ತ್ರೀ+ಆ–ಏ ಎಂದಿರುವಾಗ “ ಆಟಶ್ಚ ’ ಸೂತ್ರದಿಂದವೃದ್ಧಿ ಸ್ತ್ರೀ+ಐ ಈಗ “ ಸ್ತ್ರಿಯಾ ” ಸೂತ್ರದಿಂದ ಇಯಜಾದೇಶ. ಸ್ತ್ರಿಯೈ.–ಸ್ತ್ರೀ

ಭ್ಯಾಮ್–ಸ್ತ್ರೀಭ್ಯಃ | ಪಂಚಮಿಯಲ್ಲಿ ಜಸಿಗೆ ಆಟ್‌ವೃದ್ಧಿ. ಈಕಾರಕ್ಕೆ ಇಯಜ್ ಸ್ತ್ರೀ+ಅಸ್–ಸ್ತ್ರೀ+ಆ–ಅಸ್. ಸ್ತ್ರೀಯಾಸ್ ಸ್ತ್ರಿಯಾಃ | ಸ್ತ್ರೀಭ್ಯಾಮ್–ಸ್ತ್ರೀಭ್ಯಃ || ಷಷ್ಠಿ ಏಕವಚನದಲ್ಲಿಯೂ ಸ್ತ್ರಿಯಾಃ | ಓಸ್‌ಪರವಾದಾಗ ಇಯಜ್. ಸ್ತ್ರಿಯೋಃ. ಆಮಿನಲ್ಲಿ ಅಜಾದಿಯಾದುದರಿಂದ ಇಯಜ್ ಆದೇಶವೂ ಬರಬಹುದು. ನದಿಯಪರದಲ್ಲಿರುವುದರಿಂದ ಆಮಿಗೆ ನುಟ್ ಆಗಮವೂ ಬರಬಹುದು. ನುಡಾಗಮ ಬಂದರೆ ಅಜಾದಿತ್ವಭಂಗಬರುವುದರಿಂದ ತಿರುಗಿ ಇಯಜ್ ಬರುವುದಿಲ್ಲ. ಇಯಜ್ ಬಂದರೆ ನದೀತ್ವಭಂಗಬರುವುದರಿಂದ ನುಟ್‌ಬರುವುದಿಲ್ಲ. ಆಗ ಪರತ್ವಾನ್ನುಟ್ ಎನ್ನುತ್ತಾನೆ. " ವಿಪ್ರತಿಷೇಧೇಪರಂ ಕಾರ್ಯಮ್ " ಎಂದುದರಿಂದ ಪರಸೂತ್ರದಿಂದ ನುಟೇಮೊದಲು ಬರುತ್ತದೆ. ಸ್ತ್ರೀನಾಮ್ "ಅಟ್‌ಕುಪ್ವಾಙ್–"ಸೂತ್ರದಿಂದ ಣತ್ವ. ಸ್ತ್ರೀಣಾಮ್|| ಸಪ್ತಮಿಯಲ್ಲಿ ಙಿಪರವಾದಾಗ ಙೇರಾಮ್ ಸೂತ್ರದಿಂದ ಅದಕ್ಕೆ ಆಮ್. ಆಮಿಗೆ ಆಟ್ ವೃದ್ಧಿ. ಸ್ತ್ರೀ+ಆಮ್ "ಸ್ರಿಯಾ" ಸೂತ್ರದಿಂದ ಇಯಜ್| ಸ್ತ್ರಿಯಾಮ್ | ಸ್ತ್ರಿಯೋಃ | ಸ್ತ್ರೀಷು.

ಈಕಾರಾಂತ ಶ್ರೀ ಶಬ್ದ. (ಲಕ್ಷ್ಮಿ)

ಶ್ರಿಞ್ ಸೇವಾಯಾಂ ಧಾತು. (ಇವಳನ್ನು ಎಲ್ಲರೂ ಆಶ್ರಯಿಸುತ್ತಾರೆ) ಕ್ವಿಪ್ ಪ್ರತ್ಯಯ ಬಂದು ಪ್ರಕೃತಿಗೆ ದೀರ್ಘ ಬಂದಿದೆ. ಕ್ವಿಪಿನಲ್ಲಿ ಸರ್ವವೂ ಲೋಪವಾಗುತ್ತದೆ. ಶ್ರೀ ಈಕಾರಾಂತವಾಯಿತು. ಜೀಬಂತವಲ್ಲ ಆದುದರಿಂದ ಸುವಿಗೆ ಲಕ್ಷ್ಮೀಶಬ್ದದಂತೆ ಲೋಪವಿಲ್ಲ. ಶ್ರೀಃ. ಶ್ರೀ+ಔ ಎಂದಿರುವಾಗ ಇಕಾರಾಂತಧಾತುವಾದುದರಿಂದ "ಅಚಿಶ್ನು" (ಸೂ. ೨೦೦) ಸೂತ್ರದಿಂದ ಇಯಜಾದೇಶ ಶ್ರಿಯೌ. ಇನ್ನುಮುಂದೆ ಅಜಾದಿಯಲ್ಲೆಲ್ಲಾ ಇದೇ ಸೂತ್ರದಿಂದ ಇಯಜಾದೇಶ ಇಕಾರದ ಹಿಂದೆ ಧಾತ್ವವಯವ ಸಂಯೇಗವಿರುವುದರಿಂದ "ಏರನೇಕಾಚಃ–(ಸೂ. ೨೦೧)" ಸೂತ್ರದಿಂದ ಯಣ್ ಬರುವುದಿಲ್ಲ. ಜಸಿನಲ್ಲಿ ಶ್ರಿಯಃ|| ಸಂಬುದ್ಧಿಯಲ್ಲಿ ನದ್ಯಂತವಾದುದರಿಂದ ಹ್ರಸ್ವಪ್ರಾಪ್ತವಾದರೆ ನದೀಸಂಜ್ಞಾ ನಿಷೇಧಹೇಳುತ್ತಾನೆ.

(ನದೀಸಂಜ್ಞಾ ನಿಷೇಧಹೇಳುವಸೂತ್ರ)

೨೩೦. ನೇಯಜುವಜ್‌ಸ್ಥಾನಾವಸ್ತ್ರೀ || ೧-೪-೪ ||

ಇಯಜುವಜೋಃ ಸ್ಥಿತಿರ್ಯಯೋಸ್ತಾವೀದೂತೌ ನದೀಸಂಜ್ಞೌನಸ್ತಃ ನ ತು ಸ್ತ್ರೀ| ಹೇ ಶ್ರೀಃ| ಶ್ರಿಯೈ–ಶ್ರಿಯೇ | ಶ್ರಿಯಾಃ ಶ್ರಿಯಃ–೨ ||

ನ, ಇಯಜುವಜ್‌ಸ್ಥಾನೌ, ಅಸ್ತ್ರೀ | ತ್ರಿಪದಸೂತ್ರ. "ಯೂಸ್ತ್ರ್ಯಾಖ್ಯೌನದೀ" ಸೂತ್ರದಿಂದ " ಯೂ ನದೀ " ಪದಗಳು ಅನುವೃತ್ತವಾಗುತ್ತವೆ. ಈಶ್ಚ ಊಶ್ಚ ಯೂ ಈಕಾರ ಊಕಾರಗಳು. ಇಯಜುವಜೋಃ ಸ್ಥಾನಂ (=ಸ್ಥಿತಿಃ) ಯಯೋಸ್ತೌ ಇಯಜುವಜ್‌ಸ್ಥಾನೌ. **ಸೂತ್ರಾರ್ಥ.**—ಇಯಜ್ ಉವಜ್ ಹೊಂದಲು ಯೋಗ್ಯವಾದ ಈಕಾರ ಉಕಾರಗಳು ನದೀಸಂಜ್ಞೆಯನ್ನು ಹೊಂದುವುದಿಲ್ಲ. ಸ್ತ್ರೀ ಶಬ್ದಕ್ಕೆ ಈ ನಿಷೇಧವಿಲ್ಲ. ಅದು ಇಯಜ್‌ಹೊಂದಿದರೂ ನದೀಸಂಜ್ಞೆ ಇದ್ದೇ ಇದೆ. ಪ್ರಕೃತ ಶ್ರೀ ಶಬ್ದವು ಇಯಜ್‌ಹೊಂದುವುದಾದುದರಿಂದ ನದೀಸಂಜ್ಞಾ ಬರುವುದಿಲ್ಲ. ಆಗ " ಅಂಬಾರ್ಥನದ್ಯೋರ್ಹ್ರಸ್ವಃ " ಸೂತ್ರದಿಂದ ಸಂಬುದ್ಧಿಯಲ್ಲಿ ಹ್ರಸ್ವಬರುವುಲ್ಲ. ಹೇ ಶ್ರೀಃ–ಹೇ ಶ್ರಿಯೌ–ಹೇ ಶ್ರಿಯಃ. ದ್ವಿ–ಶ್ರಿಯಮ್ (" ಅಮಿಪೂರ್ವಃ " ಬಾಧಿಸಿ ಇಯಜಾದೇಶ) ಶ್ರಿಯೌ–ಶ್ರಿಯಃ || ತೃ–ಶ್ರಿಯಾ ಶ್ರೀಭ್ಯಾಮ್–ಶ್ರೀಭಿಃ || ಚತುರ್ಥಿಯಲ್ಲಿ ಙೀ ಬಂದಾಗ ಅದು ಙಿತ್ತಾದುದರಿಂದ " ಙಿತಿ ಹ್ರಸ್ವಶ್ಚ " (ಸೂ. ೨೨೩) ಸೂತ್ರದಿಂದ ವಿಕಲ್ಪವಾಗಿ ನದೀಸಂಜ್ಞಾ. ನದೀಸಂಜ್ಞಾ ಬಂದರೆ ಪ್ರತ್ಯಯಕ್ಕೆ " ಆಣ್ನದ್ಯಾಃ" ಸೂತ್ರದಿಂದ ಆಟ್ " ಆಟಶ್ಚ " ಸೂತ್ರದಿಂದ ವೃದ್ಧಿ. ಶ್ರೀ+ಏ=ಶ್ರೀ+ಆ-ಏ=ಶ್ರೀ+ಏ "ಅಚಿಶ್ನು-"(ಸೂ. ೨೦೦) ಸೂತ್ರದಿಂದ ಇಯಜ್. ಶ್ರಿಯೈ– ನದೀಸಂಜ್ಞಾ ಬಾರದಿದ್ದರೆ ಕೇವಲ ಇಯಜ್. ಶ್ರಿಯೇ.–ಶ್ರೀಭ್ಯಾಮ್-ಶ್ರೀಭ್ಯಃ || ಪಂಚಮೀ ಷಷ್ಠೀ ಏಕವಚನಗಳಲ್ಲಿ ನದೀಸಂಜ್ಞಾ ಬಂದರೆ ಹಿಂದಿನಂತೆ ಕ್ರಮವಾಗಿ ಆಟ್ ವೃದ್ಧಿ ಇಯಜ್. ಶ್ರೀ+ಅಸ್–ಶ್ರೀ+ಆ+ಅಸ್–ಶ್ರೀ +ಆಸ್–ಶ್ರೀಯಾಸ್ ಶ್ರೀಯಾಃ ೨. ಓಸಿನಲ್ಲಿ ಇಯಜ್ ಶ್ರಿಯೋಃ ೨. ಶ್ರೀ+ಆಮ್ ಎಂದಿರುವಾಗ ಙಿತ್ತಲ್ಲವಾದುದರಿಂದ ವಿಕಲ್ಪನದೀಸಂಜ್ಞೆಯೂಬಾರದಿರುವಾಗ ನದೀಸಂಜ್ಞೆ ಹೇಳುತ್ತಾನೆ.

(ವಿಕಲ್ಪನದೀ ಸಂಜ್ಞೆಹೇಳುವ ಸೂತ್ರ)

೨೩೧. ವಾಮಿ || ೧-೪-೫ ||

ಇಯಜುವಜ್‌ಸ್ಥಾನೌ ಸ್ತ್ರ್ಯಾಖ್ಯೌ ಯೂ ಆಮಿ ವಾ ನದೀಸಂಜ್ಞೌ ಸ್ತಃ ನತು ಸ್ತ್ರೀ | ಶ್ರೀಣಾಮ್–ಶ್ರಿಯಾಮ್ | ಶ್ರಿಯಿ–ಶ್ರಿಯಾಮ್ || ಧೇನುರ್ಮತಿವತ್ ||

ವಾ, ಆಮಿ || ದ್ವಿಪದ ಸೂತ್ರ. " ಯೂಸ್ತ್ರ್ಯಾಖ್ಯೌನದೀ " ಸೂತ್ರವೇ ಅನುವೃತ್ತವಾಗುತ್ತದೆ. " ನೇಯಜುವಜ್‌ಸ್ಥಾನಾವಸ್ತ್ರೀ " ಸೂತ್ರದಿಂದ ನಞ್ ಬಿಟ್ಟು ಎಲ್ಲಾ ಪದಗಳೂ ಬರುತ್ತವೆ. ಪದಾರ್ಥ ಹಿಂದೆ ವಿವರಿಸಿದೆ. **ಸೂತ್ರಾರ್ಥ–** ಇಯಜ್‌ಉವಜ್‌ಹೊಂದಲು ಯೋಗ್ಯವಾಗ ಸ್ತ್ರೀಲಿಂಗವಾದ ಈಕಾರ ಊಕಾರಗಳು ಆಮ್‌ಪರವಾದಾಗ ವಿಕಲ್ಪವಾಗಿ ನದೀಸಂಜ್ಞೆಯನ್ನು ಹೊಂದುತ್ತವೆ. ಸ್ತ್ರೀ

ಶಬ್ದಕ್ಕೆ ಈ ವಿಕಲ್ಪವಿಲ್ಲ. ಇಯಜ್ ಹೊಂದುವ ಶ್ರೀ ಶಬ್ದಕ್ಕೆ ಆಮಿನಲ್ಲಿ ನದೀ ಸಂಜ್ಞಾ ಬಂದರೆ " ಹ್ರಸ್ವನದ್ಯಾಪ್ಶೋನುಟ್ " ಸೂತ್ರದಿಂದ ಆಮಿಗೆ ನುಟ್ ಬರುತ್ತದೆ. ನುಟ್ ಬಂದಾಗ ಅಜಾದಿಯಾಗದಿರುವುದರಿಂದ ಇಯಜ್ ಬರುವುದಿಲ್ಲ. ಶ್ರೀಣಾಮ್. ನದೀಸಂಜ್ಞಾ ಬಾರದಿದ್ದರೆ ಇಯಜ್ ಆದೇಶ. ॥ ಸಪ್ತಮಿ ಏಕವಚನದಲ್ಲಿ ಜಿತ್ತಾ ದುದರಿಂದ ವಿಕಲ್ಪನದೀಸಂಜ್ಞೆ. ನದೀಸಂಜ್ಞೆ ಬಂದಾಗ ಜಿಗೆ " ಜ್ಞೀರಾಮ್ " / ಸೂತ್ರದಿಂದ ಆಮ್ ಆದೇಶ. ಅದಕ್ಕೆ ಆಟ್, ವೃದ್ಧಿ. ಇಯಜಾದೇಶ. ಶ್ರೀಯಾಮ್ (ನುಟ್‌ಬಾರದ ಷಷ್ಠೀಬಹುವಚನದಂತೇ ರೂಪ). ಶ್ರಿಯೋಃ—ಶ್ರೀಷು.

ಇತಿ ಈಕಾರಾಂತಾಃ ॥

ಉಕಾರಾಂತ ಸ್ತ್ರೀಲಿಂಗ ಧೇನು ಶಬ್ದ. (ಹಸು) ಇದು ಮತಿ ಶಬ್ದದಂತೆ ಪ್ರಕ್ರಿಯೆ ಹೊಂದುತ್ತದೆ. ಜಿತ್ತಿನಲ್ಲಿ ವಿಕಲ್ಪ ನದೀಸಂಜ್ಞಾ ಪ್ರಯುಕ್ತ ಕಾರ್ಯ. ಆಮ್ ಬಾರದಿರುವಾಗ ಘಿಸಂಜ್ಞಾ ಪ್ರಯುಕ್ತ ಕಾರ್ಯ.

ಪ್ರ—ಧೇನುಃ । ಧೇನೂ । ಧೇನವಃ ॥ ಸಂ—ಹೇ ಧೇನೋ । ಹೇ ಧೇನೂ । ಹೇ ಧೇನವಃ ॥ ದ್ವಿ—ಧೇನುಂ । ಧೇನೂ । ಧೇನೂಃ ॥ (ಸ್ತ್ರೀಲಿಂಗವಾದುದರಿಂದ ನತ್ವವಿಲ್ಲ) ತೃ—ಧೇನ್ವಾ । ಧೇನುಭ್ಯಾಮ್ । ಧೇನುಭಿಃ ॥ ಚ—ಧೇನ್ವೈ । ಧೇನವೇ । ಧೇನುಭ್ಯಾಮ್ । ಧೇನುಭ್ಯಃ ॥ ಪಂ—ಧೇನ್ವಾಃ । ಧೇನೋಃ । ಧೇನುಭ್ಯಾಮ್ । ಧೇನುಭ್ಯಃ ॥ ಷ—ಧೇನ್ವಾಃ । ಧೇನೋಃ । ಧೇನ್ವೋಃ । ಧೇನೂನಾಮ್ ॥ ಸ—ಧೇನ್ವಾಮ್ । ಧೇನೌ । ಧೇಸ್ವೋಃ । ಧೇನುಷು ॥

ಉಕಾರಾಂತ ಕ್ರೋಷ್ಟು ಶಬ್ದ (ನರಿ)

ಇದಕ್ಕೆ ಸರ್ವನಾಮಸ್ಥಾನಾದಿಗಳಲ್ಲಿ ತೃಜ್ವದ್ಭಾವ ಪ್ರಾಪ್ತವಾದರೆ ಸ್ತ್ರೀಲಿಂಗದಲ್ಲಿ ಎಲ್ಲಾ ವಿಭಕ್ತಿಗಳಲ್ಲಿಯೂ ತೃಜ್ವದ್ಭಾವ ಹೇಳುತ್ತಾನೆ.

(ಕ್ರೋಷ್ಟು ಶಬ್ದಕ್ಕೆ ತೃಜ್ವದ್ಭಾವ ಹೇಳುವ ಸೂತ್ರ)

೨೩೨. ಸ್ತ್ರಿಯಾಂ ಚ ॥ ೭-೧-೯೬ ॥

ಸ್ತ್ರೀವಾಚೀ ಕ್ರೋಷ್ಟುಶಬ್ದಸ್ತೃಜಂತವದ್ರೂಪಂ ಲಭತೇ ॥

ಸ್ತ್ರಿಯಾಂ, ಚ, ॥ ದ್ವಿಪದ ಸೂತ್ರ. " ತೃಜ್ವತ್ ಕ್ರೋಷ್ಟುಃ " ಅನುವೃತ್ತವಾಗುತ್ತದೆ. **ಸೂತ್ರಾರ್ಥ**—ಸ್ತ್ರೀವಾಚಕವಾದ ಕ್ರೋಷ್ಟು ಶಬ್ದವು ತೃಜಂತದ

ರೂಪವನ್ನು ಹೊಂದುತ್ತದೆ. ರೂಪಾತಿದೇಶಸೂತ್ರ. ಆರ್ಥಾನುಸಾರದಿಂದ ತೃಜಂತವಾದ ಕ್ರೋಷ್ಟೃ ಶಬ್ದದ ರೂಪವನ್ನು ಹೊಂದುತ್ತದೆ. ಸ್ತ್ರೀಲಿಂಗದಲ್ಲಿ ಉಕಾರಾಂತ ಕ್ರೋಷ್ಟು ಶಬ್ದವೇ ಇಲ್ಲವೆಂದು ಹೇಳಿದಂತಾಗುತ್ತದೆ. ಕ್ರೋಷ್ಟೃ ಎಂದು ಋಕಾರಾಂತವಾದಾಗ ಅದಕ್ಕೆ ಜ್ಞೀಪ್ ಪ್ರತ್ಯಯ ಹೇಳುತ್ತಾನೆ.

(ಋಕಾರಾಂತ ನಾಂತಗಳಿಗೆ ಜ್ಞೀಪ್ ಹೇಳುವ ಸೂತ್ರ)

೨೩೩. ಋನ್ನೇಭ್ಯೋ ಙೀಪ್ ॥ ೪-೧-೫ ॥

ಋದಂತೇಭ್ಯೋ ನಾಂತೇಭ್ಯಶ್ಚ ಸ್ತ್ರಿಯಾಂ ಙೀಪ್ । ಕ್ರೋಷ್ಟ್ರೀ ಗೌರೀವತ್ ॥ ಭ್ರೂಃ ಶ್ರೀವತ್ ॥ ಸ್ವಯಂಭೂಃ ಪುಂವತ್ ॥

ಋನ್ನೇಭ್ಯಃ, ಙೀಪ್ ॥ ದ್ವಿಪದ ಸೂತ್ರ. ಋತಶ್ಚ ನಾಶ್ಚ ಋನ್ನಾಃ ತೇಭ್ಯಃ ಋನ್ನೇಭ್ಯಃ ॥ (ಋಕಾರ ನಕಾರಗಳು) " ಸ್ತ್ರಿಯಾಂ " ಅಧಿಕಾರ. " ಙ್ಯಾಪ್ ಪ್ರಾತಿಪದಿಕಾತ್ " ಸೂತ್ರದಿಂದ "ಪ್ರಾತಿಪದಿಕಾತ್" ಅನುವೃತ್ತಿ. ಬಹುವಚನಾಂತವಾಗಿ ವಿಪರಿಣಾಮ ಮಾಡಿಕೊಂಡ ಅದಕ್ಕೆ " ಋನ್ನೇಭ್ಯಃ " ಪದವು ವಿಶೇಷಣ. " ಯೇನ ವಿಧಿಸ್ತದಂತಸ್ಯ " ಪರಿಭಾಷೆಯಿಂದ ತದಂತಲಾಭ. **ಸೂತ್ರಾರ್ಥ**—ಋದಂತ, ನಾಂತ ಪ್ರಾತಿಪದಿಕಗಳಿಗೆ ಸ್ತ್ರೀತ್ವ ತೋರುವಾಗ ಜ್ಞೀಪ್ ಬರುತ್ತದೆ. ಪ್ರಕೃತ ಋದಂತವಾದುದರಿಂದ ಜ್ಞೀಪ್ ಬಂದರೆ ಕ್ರೋಷ್ಟೃ+ಜ್ಞೀಪ್. ಜ್ಞೀಪಿನಲ್ಲಿ ಪಕಾರ " ಹಲಂತ್ಯಮ್ " ಸೂತ್ರದಿಂದ ಜಕಾರ " ಲಶಕ್ವತ್ಧಿತೇ " ಸೂತ್ರದಿಂದಲೂ ಇತ್ ಸಂಜ್ಞೆ ಹೊಂದಿ ಲೋಪವಾಗುತ್ತದೆ. ಈ ಉಳಿದಾಗ ಯಣ್. ಕ್ರೋಷ್ಟ್ರೀ. ಈಕಾರಾಂತ ಶಬ್ದವಾಯಿತು. ಙ್ಯಂತವಾದುದರಿಂದ ನದೀಸಂಜ್ಞೆಯನ್ನು ಹೊಂದಿ ಗೌರೀ ಶಬ್ದದಂತೇ ರೂಪ ಹೊಂದುತ್ತದೆ. ಕ್ರೋಷ್ಟ್ರೀ–ಕ್ರೋಷ್ಟ್ರ್ಯೌ–ಕ್ರೋಷ್ಟ್ರ್ಯಃ । ಇತ್ಯಾದಿ. ಊಕಾರಾಂತ ಭ್ರೂಶಬ್ದ (ಹುಬ್ಬು) ಇದು ಶ್ರೀ ಶಬ್ದದಂತೆ ರೂಪ ಹೊಂದುತ್ತದೆ. " ಅಚಿಶ್ನುಧಾತುಭ್ರುವಾಂ"–(ಸೂ ೩೦೦) ಸೂತ್ರದಲ್ಲಿ ಭ್ರೂ ಶಬ್ದವನ್ನೂ ಹೇಳಿರುವುದರಿಂದ ಅಜಾದಿಯಲ್ಲಿ ಉವಜಾದೇಶ. ಜಿತ್ತಿನಲ್ಲಿಯೂ ಆಮಿನಲ್ಲಿಯೂ ಉವಜ್ ಹೊಂದುವುದರಿಂದ ವಿಕಲ್ಪ ನದೀಸಂಜ್ಞೆಯನ್ನು ಹೊಂದಿ ಶ್ರೀಶಬ್ದದಂತೆ ಅಲ್ಲಿ ಎರಡೆರಡುರೂಪಗಳನ್ನು ಹೊಂದುತ್ತದೆ.

ಊಕಾರಾಂತಸ್ತ್ರೀಲಿಂಗ ಸ್ವಯಂಭೂ ಶಬ್ದ. ತಾನಾಗಿ ಆಗುವುದು. ಮೂಲಪ್ರಕೃತಿ. ಇದು ಪುಲ್ಲಿಂಗದಂತೇ ರೂಪ ಹೊಂದುತ್ತದೆ. ಉವರ್ಣಾಂತ ಧಾತುವಾದರೂ " ನಭ್ರಾಸುಧಿಯೋಃ " ಸೂತ್ರದಿಂದ ಯಣ್ ನಿಷೇಧಮಾಡಿರುವು

ದರಿಂದ ಯಣ್ ಬರುವುದಿಲ್ಲ. ಅಜಾದಿಯಲ್ಲಿ ಉವಙ್ ಸ್ವಯಂಭೂಃ—ಸ್ವಯ್ಯಂ ಭುವೌ—ಸ್ವಯಂಭುವಃ ॥ ಇತ್ಯಾದಿ (ಪುಲ್ಲಿಂಗ ನೋಡಿ).

ಅಥ ಋಕಾರಾಂತಾಃ ॥

ಋಕಾರಾಂತ ಸ್ತ್ರೀಲಿಗ ಸ್ವಸೃಶಬ್ದ. (ತಂಗಿ) ಋಕಾರಾಂತವಾದುದರಿಂದ ಸ್ತ್ರೀ ಲಿಂಗದಲ್ಲಿ ಜೀಪ್ ಪ್ರಾಪ್ತವಾದರೆ ನಿಷೇಧ ಹೇಳುತ್ತಾನೆ.

(ಜೀಪ್ ಟಾಪ್ ನಿಷೇಧ ಹೇಳುವ ಸೂತ್ರ)

೨೩೪. ನ ಷಟ್ ಸ್ವಸ್ರಾದಿಭ್ಯಃ ॥ ೪-೧-೧೦ ॥

ಷಟ್‌ಸಂಜ್ಞಕೇಭ್ಯಃ ಸ್ವಸ್ರಾದಿಭ್ಯಶ್ಚ ಜೀಪ್ ಟಾಪೌ ನಸ್ತಃ ॥ ಸ್ವಸಾ ತಿಸ್ರಶ್ಚತಸ್ರಶ್ಚ ನನಾಂದಾ ದುಹಿತಾ ತಥಾ । ಯಾತಾ ಮಾತೇತಿ ಸಪ್ತೈತೇ ಸ್ವಸ್ರಾದಯ ಉದಾಹೃತಾಃ ॥ ಸ್ವಸಾ । ಸ್ವಸಾರೌ । ಸ್ವಸಾರಃ । ಮಾತಾ ಪಿತೃವತ್ । ಶಸಿ ಮಾತೄಃ । ದ್ಯೌರ್ದೇವತ್ । ರಾಃ ಪುಂವತ್ । ನೌರ್ನ್ಯಾವತ್ ॥

ಸ್ವ ಷಟ್‌ಸ್ವಸ್ರಾದಿಭ್ಯಃ ॥ ದ್ವಿಪದ ಸೂತ್ರ. “ ಋನ್ನೇಭ್ಯೋಙೀಷ್ ” ಸೂತ್ರದಿಂದ ಜೀಪ್. “ ಟಾಬ್ಙಿಙ್ ” ಸೂತ್ರದಿಂದ ಟಾಪ್ ಅನುವೃತ್ತವಾಗುತ್ತದೆ. **ಸೂತ್ರಾರ್ಥ**—ಷಟ್ ಸಂಜ್ಞೆಯಿರುವ ಶಬ್ದಗಳಿಗೂ ಸ್ವಸೃಮುಂತಾದ ಶಬ್ದಗಳಿಗೂ ಸ್ತ್ರೀತ್ವದಲ್ಲಿ ಜೀಪ್ ಟಾಪ್ ಬರುವುದಿಲ್ಲ. “ಷ್ಣಾಂತಾಷಟ್ ” ಸೂತ್ರದಿಂದ ಷ್ಣಾಂತ ನಾಂತಗಳಿಗೆ ಷಟ್‌ಸಂಜ್ಞೆ ಹೇಳಿದೆ. ಅಲ್ಲಿ ನಾಂತಗಳಿಗೆ ಋನ್ನೇಭ್ಯೋಙೀಷ್ ” ಸೂತ್ರದಿಂದ ಜೀಪ್ ಪ್ರಾಪ್ತವಾದರೆ ಇದರಿಂದ ನಿಷೇಧ. ಸ್ವಸೃ ಮುಂತಾದವುಗಳು ಋಕಾರಾಂತಗಳು. ಅವು ಎಷ್ಟು ಅಂದರೆ ಶ್ಲೋಕದಿಂದ ಗಣನೆ ಮಾಡಿರುತ್ತಾನೆ. ಸ್ವಸೃ—ತಿಸೃ—ಚತಸೃ—ನನಾಂದೃ—ದುಹಿತೃ—ಯಾತೃ—ಮಾತೃ—ಇವು ಏಳು ಸ್ವಸ್ರಾದಿಗಳು. ಇವುಗಳಿಗೆ ಜೀಪ್ ಬರುವುದಿಲ್ಲ. “ ಅಪ್‌ತೃನ್‌ತೃಚ್ ” ಸೂತ್ರದಲ್ಲಿ ಸ್ವಸೃ ಶಬ್ದ ವನ್ನೂ ಸೇರಿಸಿರುವುದರಿಂದ ಧಾತೃ ಶಬ್ದದಂತೇ ರೂಪವಾಗುತ್ತದೆ. ಸ್ವಸಾ—ಸ್ವಸಾರೌ—ಸ್ವಸಾರಃ । (ಧಾತೃಶಬ್ದ ನೋಡಿ) ಮಾತೃ (ತಾಯಿ) ಶಬ್ದವು ಪಿತೃ ಶಬ್ದದಂತೇ ರೂಪ ಹೊಂದುತ್ತದೆ. ”ಅಪ್‌ತೃನ್”—ಸೂತ್ರದಲ್ಲಿ ಮಾತೃಶಬ್ದ ಹೇಳದಿರುವುದರಿಂದ ಉಪಧಾ ದೀರ್ಘ ಬರುವುದಿಲ್ಲ. ಮಾತಾ—ಮಾತರೌ—ಮಾತರಃ (ಪಿತೃಶಬ್ದ ನೋಡಿ). ಶಸಿನಲ್ಲಿ

ಮಾತೃ ಪೂರ್ವಸವರ್ಣದೀರ್ಘ ಬಂದಾಗ ನತ್ವ ಬರುವುದಿಲ್ಲ. ಪುಲ್ಲಿಂಗದಲ್ಲಿ ಮಾತ್ರ ನತ್ವ. ಮಾತೄಃ ಎಂದಾಗುತ್ತದೆ.

ಓಕಾರಾಂತಸ್ತ್ರೀಲಿಂಗ ದ್ಯೌ ಶಬ್ದ. (ಸ್ವರ್ಗ ಅಥವಾ ಆಕಾಶ) ಇದು ಗೋ ಶಬ್ದದಂತೇ ಆಗುತ್ತದೆ. ಸರ್ವನಾಮಸ್ಥಾನದಲ್ಲಿ ಣಿದ್ವದ್ಭಾವ. ಅಮ್ ಶಸ್‌ಗಳಲ್ಲಿ ಓಕಾರಕ್ಕೆ ಆಕಾರಾದೇಶ. ಉಳಿದ ಆಜಾದಿಗಳಲ್ಲಿ ಆವಾದೇಶ. ದ್ಯೌಃ—ದ್ಯಾವೌ—ದ್ಯಾವಃ ಇತ್ಯಾದಿ (ಗೋ ಶಬ್ದನೋಡಿ).

ಐಕಾರಾಂತ ಸ್ತ್ರೀಲಿಂಗ ರೈ ಶಬ್ದ (ಲಕ್ಷ್ಮಿ ಅಥವಾ ಹಣ.) ಇದು ಪುಲ್ಲಿಂಗ ದಂತೇ ರೂಪ ಹೊಂದುತ್ತದೆ. ಹಲವಾದಿಯಲ್ಲಿ ಐಕಾರಕ್ಕೆ ಆಯಾದೇಶ. (ಪುಲ್ಲಿಂಗದ ರೈಶಬ್ದ ನೋಡಿ) ರಾಃ—ರಾಯೌ—ರಾಯಃ ಇತ್ಯಾದಿ ॥

ಔಕಾರಾಂತ ನೌ ಶಬ್ದ (ದೋಣಿ) ಇದು ಗ್ಲೌ ಶಬ್ದದಂತೇ ರೂಪ ಹೊಂದುತ್ತದೆ ಆಜಾದಿಯಲ್ಲಿ ಆವಾದೇಶ. ನೌಃ—ನಾವೌ—ನಾವಃ ಇತ್ಯಾದಿ ॥ (ಗ್ಲೌ ಶಬ್ದನೋಡಿ).

ಇತ್ಯಜಂತ ಸ್ತ್ರೀಲಿಂಗಾಃ ॥

ಹೀಗೆ ಅಜಂತಸ್ತ್ರೀಲಿಂಗ ಶಬ್ದಗಳು ವಿವೃತವಾಗಿವೆ.

ಅಥ ಅಜಂತ ನಪುಂಸಕಲಿಂಗಾಃ ॥

ಅಕಾರಾಂತ ನಪುಂಸಕಲಿಂಗ ಜ್ಞಾನ ಶಬ್ದ

ಜ್ಞಾ ಧಾತುವಿಗೆ ಲ್ಯುಟ್ ಪ್ರತ್ಯಯ. ಲ್ಯುಟಿಗೆ ಅನಾದೇಶ. ಜ್ಞಾನನೆಂತಾಗುತ್ತದೆ. ಪ್ರಥಮಾ ಸು ಬಂದಾಗ “ ಸ್ವಮೋರ್ನಪುಂಸಕಾತ್ ” ಸೂತ್ರದಿಂದ ಅದಕ್ಕೆ ಲೋಪ ಪ್ರಾಪ್ತವಾದರೆ ಅಮ್ ಆದೇಶ ಹೇಳುತ್ತಾನೆ.

(ಸು ಅಮ್ ಪ್ರತ್ಯಯಗಳಿಗೆ ಅಮ್ ಹೇಳುವ ಸೂತ್ರ)

೨೩೫. ಅತೋಽಮ್ ॥ ೭-೧-೨೪ ॥

ಅತೋಽಂಗಾತ್ ಕ್ಲೀಬಾತ್ ಸ್ವಮೋರಮ್ ಸ್ಯಾತ್ । ಅಮಿ ಪೂರ್ವಃ॥
ಜ್ಞಾನಮ್ । ಏಜ್‌ಹ್ರಸ್ವಾದಿತಿ ಹಲ್ಲೋಪಃ । ಹೇ ಜ್ಞಾನ ॥

ಅತಃ, ಅಮ್ । ದ್ವಿಪದ ಸೂತ್ರ. "ಅಂಗಸ್ಯ" ಅಧಿಕಾರ. ಇಲ್ಲಿ ಪಂಚಮ್ಯಂತವಾಗಿ ವಿಪರಿಣತವಾಗುತ್ತದೆ. ಅತಃ ಎಂಬ ಪಂಚಮ್ಯಂತವು ಅದಕ್ಕೆ ವಿಶೇಷಣ. ಆದುದರಿಂದ ತದಂತವಿಧಿ. "ಸ್ವಮೋರ್ನಪುಂಸಕಾತ್" ಸೂತ್ರವೇ ಅನುವೃತ್ತವಾಗುತ್ತದೆ. ನಪುಂಸಕಾತ್ ಶಬ್ದಕ್ಕೆ ಅಂಗದಲ್ಲಿ ಅನ್ವಯ. **ಸೂತ್ರಾರ್ಥ**—ಹ್ರಸ್ವಾಂತವಾದ ನಪುಂಸಕವಾದ ಅಂಗದ ಪರದಲ್ಲಿರುವ ಸು, ಅಮ್ ಎರಡು ಪ್ರತ್ಯಯಗಳಿಗೆ ಅಮ್ ಆದೇಶ ಬರುತ್ತದೆ. ಜ್ಞಾನವೆಂಬುದು ಹ್ರಸ್ವಾಕಾರಾಂತ ನಪುಂಸಕ ಅಂಗ. ಇದರ ಪರದ ಸುವಿಗೆ ಅಮ್ ಬಂದರೆ ಜ್ಞಾನ+ಅಮ್ ಎಂದಾಗುತ್ತದೆ. ಆಗ "ಅಮಿ ಪೂರ್ವಃ" ಸೂತ್ರದಿಂದ ಪೂರ್ವರೂಪ. ಜ್ಞಾನಮ್. ಸಂಬುದ್ಧಿ ಸುವಿಗೂ ನಿಷೇಧವಿಲ್ಲವಾದುದರಿಂದ ಅಮ್ ಆದೇಶ ಬಂದು ಪೂರ್ವರೂಪ ಬಂದಾಗ ಹೇ ಜ್ಞಾನಮ್ ಎಂದಾಗುತ್ತದೆ. ಪೂರ್ವರೂಪ ಬಂದಮೇಲೆ ಹ್ರಸ್ವದ ಪರದಲ್ಲಿ ಸಂಬುದ್ಧಿಯ ಹಲ್ ಮ್ ಬಂದುದರಿಂದ "ಏಜ್‌ಹ್ರಸ್ವಾತ್ ಸಂಬುದ್ಧೇಃ" ಸೂತ್ರದಿಂದ ಮಕಾರಕ್ಕೆ ಲೋಪ. ಹೇ ಜ್ಞಾನ, ದ್ವಿತೀಯಾ ಏಕವಚನದ ಅಮಿಗೂ ಅಮ್ ಆದೇಶ. ಪೂರ್ವರೂಪ. ಜ್ಞಾನಮ್. ಅಮಿಗೆ ಪುನಃ ಅಮ್ ಆದೇಶ ಏಕೆ ಹೇಳಬೇಕು ? ಅಂದರೆ ಸಾಮಾನ್ಯವಾಗಿ ನಪುಂಸಕದಲ್ಲಿ "ಸ್ವಮೋರ್ನಪುಂಸಕಾತ್" ಸೂತ್ರದಿಂದ ಸು ಮತ್ತು ಅಮ್‌ಗಳಿಗೆ ಲುಕ್ ಹೇಳುತ್ತಾನೆ. ಅದಕ್ಕೆ ಬಾಧಕವಾಗಿ ಅಮ್ ಪುನಃ ವಿಧಿಸಿರುತ್ತಾನೆ. ನಪುಂಸಕದಲ್ಲಿ ಪ್ರಥಮಾ ದ್ವಿತೀಯಾ ವಿಭಕ್ತಿಗಳಿಗೆ ಸೇರಿ ಒಂದೇ ಕಾರ್ಯ ಹೇಳಿದುದರಿಂದ ಪ್ರಥಮಾ ದ್ವಿತೀಯಾದಲ್ಲಿ ಒಂದೇ ರೂಪವಾಗುತ್ತದೆ. ಜ್ಞಾನ ಶಬ್ದದ ಮೇಲೆ ದ್ವಿವಚನದ ಔ ಇರುವಾಗ ವಿಭಕ್ತಿಗೆ ಆದೇಶ ಹೇಳುತ್ತಾನೆ.

(ಔಜಸ್‌ಗೆ ಶೀ ಆದೇಶ ಹೇಳುವ ಸೂತ್ರ)

೨೩೬. ನಪುಂಸಕಾಚ್ಚ ॥ ೭-೧-೧೯ ॥

ಕ್ಲೀಬಾದೌಜಃ ಶೀ ಸ್ಯಾತ್ ಭಸಂಜ್ಞಾಯಾಮ್ ॥

ನಪುಂಸಕಾತ್, ಚ ॥ ದ್ವಿಪದ ಸೂತ್ರ. "ಔಜ ಆಪಃ" ಸೂತ್ರದಿಂದ "ಔಜಃ" "ಜಸಃ ಶೀ" ಸೂತ್ರದಿಂದ "ಶೀ" ಅನುವೃತ್ತವಾಗುತ್ತದೆ. **ಸೂತ್ರಾರ್ಥ**—ನಪುಂಸಕ ಶಬ್ದದ (ಲಿಂಗದ) ಪರದಲ್ಲಿರುವ ಔಜಸ್‌ಗೆ ಶೀ ಆದೇಶ ಬರುತ್ತದೆ. ಔಜ್, ಔಕಾರಾತ್ಮಕ ವಿಭಕ್ತಿಗೆ ಸಂಜ್ಞೆಯೆಂದು ಹಿಂದೆ ಹೇಳಿದೆ. ಆಗ ಪ್ರಥಮಾ ದ್ವಿತೀಯಾ ದ್ವಿವಚನಗಳಿಗೆ ಶೀ ಆದೇಶವೆಂದಾಗುತ್ತವೆ. ನಪುಂಸಕದಲ್ಲಿ ಸಾಮಾನ್ಯವಾಗಿ ಈ

ಆದೇಶ ಬರುತ್ತದೆ. ಶೀಯಲ್ಲಿ "ಲಶಕ್ವತದ್ಧಿತೇ" ಸೂತ್ರದಿಂದ ಶಕಾರ ಇತ್ ಸಂಜ್ಞೆಯನ್ನು ಹೊಂದಿ ಲೋಪವಾಗುತ್ತದೆ. ಜ್ಞಾನ+ಈ ಎಂದಿರುವಾಗ ಜ್ಞಾನನೆಂಬುದಕ್ಕೆ ಅಜಾದಿ ಪ್ರತ್ಯಯ ಪರವಾದುದರಿಂದ "ಯಚಿಭಮ್" ಸೂತ್ರದಿಂದ ಭ ಸಂಜ್ಞಾ ಬರುತ್ತದೆ. ಸ್ವಾದಿ ಪಂಚವಚನದಲ್ಲಿ ಸೇರಿದರೂ ನಪುಂಸಕದಲ್ಲಿ ಸರ್ವನಾಮಸ್ಥಾನ ಸಂಜ್ಞೆಯಿಲ್ಲ. ಈಗ ಭ ಸಂಜ್ಞಾ ಇರುವಾಗ ಕಾರ್ಯ ಹೇಳುತ್ತಾನೆ.

(ಭ ಸಂಜ್ಞೆಯ ಇಕಾರ ಉಕಾರಗಳಿಗೆ ಲೋಪ ಹೇಳುವ ಸೂತ್ರ)

೨೩೭. ಯಸ್ಯೇತಿ ಚ ॥ ೬-೪-೧೪೮ ॥

ಈಕಾರೇ ತದ್ಧಿತೇ ಚ ಪರೇ ಭಸ್ಯೇವರ್ಣಾವರ್ಣಯೋರ್ಲೋಪಃ ॥
ಇತ್ಯಲ್ಲೋಪೇ ಪ್ರಾಪ್ತೇ

ವಾ ॥ (ಔಜಃ ಶ್ಯಾಂ ಪ್ರತಿಷೇಧೋ ವಾಚ್ಯಃ) । ಜ್ಞಾನೇ ॥

ಯಸ್ಯ, ಈತಿ, ಚ । ತ್ರಿಪದ ಸೂತ್ರ. ಇಶ್ಚ ಅಶ್ಚ ತಯೋಃ ಸಮಾಹಾರಃ ಯಂ. ತಸ್ಯ ಯಸ್ಯ. ಇಕಾರ ಅಕಾರಗಳಿಗೆ ಎಂದರ್ಥ. "ಭಸ್ಯ" ಅಧಿಕಾರ. "ನಸ್ತದ್ಧಿತೇ" ಸೂತ್ರದಿಂದ "ತದ್ಧಿತೇ" ಅನುವೃತ್ತವಾಗುತ್ತದೆ. ಈತಿ ಸಪ್ತಮೀ. (ದೀರ್ಘ ಈಕಾರ) **ಸೂತ್ರಾರ್ಥ**—ಭ ಸಂಜ್ಞೆಯುಳ್ಳ ಅಂಗದ ಇಕಾರ ಅಕಾರಗಳಿಗೆ ಈಕಾರವೂ ತದ್ಧಿತವೂ ಪರವಾದಾಗ ಲೋಪ ಬರುತ್ತದೆ. ಯಕಾರಾದಿ, ಅಜಾದಿ ಪ್ರತ್ಯಯ ಪರವಾದಾಗ ಪೂರ್ವಕ್ಕೆ ಭ ಸಂಜ್ಞೆಯೆಂದು ಹಿಂದೆ ಹೇಳಿದೆ. ಈಗ ಅಜಾದಿಪ್ರತ್ಯಯ ಪರವಾದುದರಿಂದ ಭ ಸಂಜ್ಞೆಯಿರುವ ಅಂಗ ಜ್ಞಾನ ಶಬ್ದ. ಇದಕ್ಕೆ ಈಕಾರ ಪರವಾದುದರಿಂದ ಜ್ಞಾನ ಎಂಬಲ್ಲಿ ನಕಾರದ ಮೇಲಿರುವ ಅಕಾರಕ್ಕೆ ಲೋಪ ಪ್ರಾಪ್ತವಾದರೆ ವಾರ್ತಿಕದಿಂದ ನಿಷೇಧ ಹೇಳುತ್ತಾನೆ.

ವಾ ॥ ಚತುಷ್ಪದ ವಾರ್ತಿಕ. ಔಜಸ್‌ಗೆ ಶೀ ಆದೇಶ ಬಂದು ಅದು ಪರವಾದಾಗ ಭ ಸಂಜ್ಞೆಯ ಇಕಾರ ಅಕಾರ ಲೋಪಕ್ಕೆ ನಿಷೇಧ ಹೇಳಬೇಕು ಎಂದರ್ಥ. ಪ್ರಕೃತ ಈಕಾರ ಔಜಸ್‌ಗೆ ಬಂದ ಶೀ ಆದೇಶವಾದುದರಿಂದ ಅಕಾರ ಲೋಪಬರುವುದಿಲ್ಲ. ಜ್ಞಾನ+ಈ ಎಂದಿರುವಾಗ "ಆದ್ಗುಣಃ" ಸೂತ್ರದಿಂದ ಗುಣ. ಜ್ಞಾನೇ. ದ್ವಿತೀಯಾ ದ್ವಿವಚನದಲ್ಲಿಯೂ ಇದೇ ರೂಪ. ಪ್ರಥಮಾ ಬಹುವಚನದಲ್ಲಿ ಜಸ್ ಬಂದಾಗ ಜ್ಞಾನ+ಜಸ್ ಎಂದಿರುವಾಗ ವಿಭಕ್ತಿಗೆ ಆದೇಶ ಹೇಳುತ್ತಾನೆ.

(ಜಸ್‌ಶಸ್ ಗಳಿಗೆ ಶಿ ಆದೇಶ ಹೇಳುವ ಸೂತ್ರ)

೨೩೮. ಜಶ್ಶಸೋ ಶಿಃ ॥ ೭-೧-೨೦ ॥

ಕ್ಲೀಬಾದನಯೋಃ ಶಿಃ ಸ್ಯಾತ್ ॥

ದ್ವಿಪದಸೂತ್ರ. " ಸ್ವಮೋರ್ನಪುಂಸಕಾತ್ " ಸೂತ್ರದಿಂದ " ನಪುಂಸಕಾತ್ " ಅನುವೃತ್ತಿ. ಜಸ್‌ಚ ಶಸ್‌ಚ ಜಶ್ಯಸಾಂ ತಯೋಃ ಜಶ್ಯಸೋಃ **ಸೂತ್ರಾರ್ಥ**—ನಪುಂಸಕ ಪರದಲ್ಲಿರುವ ಜಸ್ ಶಸ್ ವಿಭಕ್ತಿಗಳಿಗೆ ಶಿ ಆದೇಶ ಬರುತ್ತದೆ. ಅನೇಕಾಲ್ತ್ವಾದುದರಿಂದ ಸರ್ವಾದೇಶ. ಆದೇಶವಾಗಿ ಬಂದಮೇಲೆ ಸ್ಥಾನಿವದ್ಭಾವದಿಂದ ಪ್ರತ್ಯಯತ್ವಬಂದು "ಲುಕ್ಕ್ಷತದ್ಧಿತೇ " ಸೂತ್ರದಿಂದ ಶಕಾರಕ್ಕೆ ಇತ್‌ಸಂಜ್ಞಾಬಂದು ಲೋಪ. ಜ್ಞಾನ+ನ+ಇ ಎಂದಾಗುತ್ತದೆ. ಕಾರ್ಯವಿಶೇಷಕ್ಕೋಸ್ಕರ ಶಿಗೆ ಸರ್ವನಾಮಸ್ಥಾನ ಸಂಜ್ಞೆಯನ್ನು ಹೇಳುತ್ತಾನೆ.

(ಸರ್ವನಾಮಸ್ಥಾನ ಸಂಜ್ಞೆ ಹೇಳುವಸೂತ್ರ)

೨೫೯. ಶಿ ಸರ್ವನಾಮಸ್ಥಾನಮ್ ॥ ೧-೧-೪೨ ॥

ಶಿ ಇತ್ಯೇತದುಕ್ತಸಂಜ್ಞಂ ಸ್ಯಾತ್ ।

ದ್ವಿಪದಸೂತ್ರ. ಇದಕ್ಕೆ ಅನುವೃತ್ತಿಇಲ್ಲ. **ಸೂತ್ರಾರ್ಥ**— ಶಿ ಎಂಬುದು " ಸರ್ವನಾಮಸ್ಥಾನ " ಎಂಬ ಸಂಜ್ಞೆಯನ್ನು ಹೊಂದುತ್ತದೆ. ನಪುಂಸಕದಲ್ಲಿ ಈ ಸಂಜ್ಞೆಯಿಲ್ಲವಾದುದರಿಂದ ಇಲ್ಲಿ ಪುನಃ ಹೇಳಿರುತ್ತಾನೆ. ಶಿಗೆ ಸರ್ವನಾಮಸ್ಥಾನ ಸಂಜ್ಞೆಯಿಂದ ಪ್ರಕೃತ ಉಪಯೋಗವನ್ನು ಹೇಳುತ್ತಾನೆ.

(ನುಮಾಗಮವಿಧಾಯಕ ಸೂತ್ರ)

೨೬೦. ನಪುಂಸಕಸ್ಯ ಝಲಚಃ ॥ ೧-೧-೪೩ ॥

ಝಲಂತಸ್ಯ ಅಜಂತಸ್ಯ ಚ ಕ್ಲೀಬಸ್ಯ ನುಮ್ ಸ್ಯಾತ್ ಸರ್ವನಾಮಸ್ಥಾನೇ ॥

ದ್ವಿಪದ ಸೂತ್ರ. ಝಲ್ ಚ ಅಚ್ ಚ ತಯೋಃ ಸಮಾಹಾರಃ ಝಲಚ್ ತಸ್ಯ ಝಲಚಃ. ಅಂಗಸ್ಯ ಅಧಿಕಾರ. ಝಲಚಃ ಅದಕ್ಕೆ ವಿಶೇಷಣ. ತದಂತಲಾಭ. ಝಲಂತ ಅಜಂತವಾದ ಅಂಗಕ್ಕೆ ಎಂದರ್ಥವಾಗುತ್ತದೆ. " ಉಗಿದಚಾಂ ಸರ್ವನಾಮಸ್ಥಾನೇಽಧಾತೋಃ" ಸೂತ್ರದಿಂದ "ಸರ್ವನಾಮಸ್ಥಾನೇ" "ಇದಿತೋನುಮ್‌ಧಾತೋಃ" ಸೂತ್ರದಿಂದ " ನುಮ್ " ಅನುವೃತ್ತವಾಗುತ್ತದೆ. **ಸೂತ್ರಾರ್ಥ**— ಝಲಂತವಾದ ಅಜಂತವಾದ ನಪುಂಸಕಾಂಗಕ್ಕೆ ಸರ್ವನಾಮಸ್ಥಾನಪರವಾದಾಗ ನುಮಾಗಮ ಬರುತ್ತದೆ. ಪ್ರಕೃತ ಅಜಂತವಾದ ನಪುಂಸಕಾಂಗವಾಗಿ ಅದಕ್ಕೆ ಶಿರೂಪ ಸರ್ವನಾಮಸ್ಥಾನಪರವಾದುದರಿಂದ ನುಮ್ ಬರುತ್ತದೆ. ಇದು ಬರುವುದಾದರೆ ಎಲ್ಲಿಗೆ ಬರಬೇಕು? ಆದೇಶವೇ ಆಗಮವೇ ಅಂದರೆ ಆಗಮವೆಂದು ಮುಂದಿನ ಸೂತ್ರದಿಂದ ತೋರಿಸುತ್ತಾನೆ. ನುಮಿನಲ್ಲಿ ಮಕಾರವು " ಹಲಂತ್ಯಮ್ " ಸೂತ್ರದಿಂದ ಇತ್ಸಾಗುತ್ತದೆ. ಉಕಾರ ಉಚ್ಚಾರಣಾರ್ಥವಾಗಿದೆ. ನ್ ಉಳಿಯುವುದು. ಇದು ಎಲ್ಲಿಗೆ ಬರುವುದೆಂಬುದನ್ನು ತಿಳಿಸುತ್ತಾನೆ.

(ನುಮ್ ಎಲ್ಲಿಗೆ ಬರುವುದೆಂದು ತಿಳಿಸುವ ಸೂತ್ರ)

೨೬೧. ನುದಚೋಽನ್ತ್ಯಾತ್ಪರಃ ॥ ೧-೧-೪೭ ॥

ಅಚಾಂ ಮಧ್ಯೇ ಯೋಽನ್ತ್ಯಸ್ತಸ್ಮಾತ್ಪರಸ್ತಸ್ಯೈವಾಂತಾವಯವೋ ನುಮ್ ಸ್ಯಾತ್ ॥ ಉಪಧಾದೀರ್ಘಃ । ಜ್ಞಾನಾನಿ । ಪುನಸ್ತದ್ವತ್ । ಶೇಷಂ ಪುಂವತ್ । ಏವಂ ಧನವನಫಲಾದಯಃ ॥

ನುಮ್, ಅಜಃ, ಅಂತ್ಯಾತ್. ಪದಃ । ನಾಲ್ಕುಪದವುಳ್ಳ ಸೂತ್ರ. ಮಕಾರಃ ಇತ್ ಯಸ್ಯ ಸಃ ನುಮ್. ಮಕಾರವೇ ಇತ್‌ಸಂಜ್ಞೆಯಾಗಿರುವುದು. ಅಚಃ ಎಂಬಲ್ಲಿ ನಿರ್ಧಾರಣಷಷ್ಠೀ. ಅಚ್‌ಗಳ ಮಧ್ಯೇ ಎಂದರ್ಥ. ಆಗ ಏಕವಚನ ಆರ್ಷವೆನ್ನಬೇಕು. ಅಚಾಂ ಎಂದಿದ್ದರೆ ಸಾಧುವಾಗುತ್ತಿತ್ತು. " ಆದ್ಯಂತೌಟಕಿತೌ " ಸೂತ್ರದಿಂದ ಅಂತ ಪದಮಾತ್ರ ಅನುವೃತ್ತವಾಗುತ್ತದೆ. **ಸೂತ್ರಾರ್ಥ**—ಅಚ್‌ಗಳ ಮಧ್ಯದಲ್ಲಿ ಯಾವುದು ಅಂತ್ಯವೋ ಅದರ ಪರವಾಗಿ ಅದರ ಅಂತ್ಯಾವಯವವಾಗಿ ನುಮ್ ಬರುತ್ತದೆ. ಒಂದು ಶಬ್ದದಲ್ಲಿ ಅನೇಕ ಅಚ್ ಇದ್ದರೆ ಅದರಲ್ಲಿ ಕೊನೆಯ ಅಚಿನ ಅಂತಾವಯವವಾಗಿ ನುಮ್ ಬರುತ್ತದೆ. ಪ್ರಕೃತ ಜ್ಞಾನವೆಂಬಲ್ಲಿ ಎರಡು ಅಚ್ ಇವೆ. ಅದರಲ್ಲಿ ಕೊನೆಯ ಅಚ್ ನಕಾರದಮೇಲಿರುವ ಅಕಾರ. ಅದರ ಪರಕ್ಕೆ ಅಂತಾವಯವವಾಗಿ ನುಮ್ ಬಂದರೆ ಜ್ಞಾನ+ನ್+ಇ ಎಂದಾಗುತ್ತದೆ. ನಾಂತವಾಗಿ ಅದಕ್ಕೆ ಸರ್ವನಾಮಸ್ಥಾನಪರವಾದುದರಿಂದ " ಸರ್ವನಾಮಸ್ಥಾನೇ ಚಾಸಂಬುದ್ಧೌ " (ಸೂ. 177) ಸೂತ್ರದಿಂದ ಉಪಧಾದೀರ್ಘ. ಜ್ಞಾನಾನಿ. ಪುನಸ್ತದ್ವತ್. ದ್ವಿತೀಯಾ ಶಸ್ಸಿಗೂ ಶಿ ಆದೇಶ ಹೇಳಿದುದರಿಂದ ಅಲ್ಲಿಯೂ ಇದೇ ರೂಪವಾಗುತ್ತದೆ. ಇನ್ನು ನಪುಂಸಕದಲ್ಲಿ ಯಾವಾಗಲೂ ಪ್ರಥಮಾದ್ವಿತೀಯಾಗಳಲ್ಲಿ ಒಂದೇ ರೂಪವೆಂದು ತಿಳಿಯಬೇಕು. ಶೇಷಂ ಪುಂವತ್. ತೃತೀಯಾದಿಂದ ನಪುಂಸಕದಲ್ಲಿ ಇತರಕಾರ್ಯವಿಲ್ಲದುದರಿಂದ ಪುಲ್ಲಿಂಗದಂತೇ ರೂಪವಾಗುತ್ತದೆ. ಜ್ಞಾನೇನ–ಜ್ಞಾನಾಭ್ಯಾಮ್–ಜ್ಞಾನೈಃ ಇತ್ಯಾದಿ ರಾಮಶಬ್ದದಂತೇ ತಿಳಿಯಬೇಕು. ಹೀಗೆಯೇ ಧನ, ವನ (ಕಾಡು) ಫಲ (ಹಣ್ಣು) ಮುಂತಾದವುಗಳನ್ನು ತಿಳಿಯಬೇಕು.

ಅಕಾರಾಂತ ಕತರ ಶಬ್ದ (ಯಾವುದು)

ಕತರ+ಸ್ ಎಂದಿರುವಾಗ ಸುವಿಗೆ " ಅತೋಽಮ್ " ಸೂತ್ರದಿಂದ ಅಮ್ಆದೇಶ ಪ್ರಾಪ್ತವಾದರೆ ಅದಕ್ಕೆ ಅಪವಾದವಾಗಿ ಅದ್ ಡ್ ಆದೇಶ ಹೇಳುತ್ತಾನೆ.

(ಅದ್ ಡಾದೇಶ ಹೇಳುವ ಸೂತ್ರ)

೨೪೨. ಅದ್ಡತರಾದಿಭ್ಯಃ ಪಂಚಭ್ಯಃ ॥ ೭-೧-೨೫ ॥

ಏಭ್ಯಃ ಕ್ಲೀಬೇಭ್ಯಃ ಸ್ವಮೋರದ್ ಡಾದೇಶಃ ಸ್ಯಾತ್ ॥

ಅದ್ ಡ್, ಡತರಾದಿಭ್ಯಃ, ಪಂಚಭ್ಯಃ ॥ ತ್ರಿಪದಸೂತ್ರ. " ಸ್ವಮೋರ್ನಪುಂಸಕಾತ್ " ಸೂತ್ರವು ಅನುವೃತ್ತವಾಗುತ್ತದೆ. ನಪುಂಸಕಾತ್ ಇಲ್ಲಿ ಬಹುವಚನಾಂತವಾಗಿ ವಿಪರಿಣತವಾಗುತ್ತದೆ. **ಸೂತ್ರಾರ್ಥ**— ಡತರಾದಿ ಐದು ನಪುಂಸಕಶಬ್ದಗಳ ಪರದಲ್ಲಿರುವ ಸು, ಅಮ್ ಗಳಿಗೆ ಅದ್ ಡ್ ಆದೇಶಬರುತ್ತದೆ. ಡತರ, ಡತಮ, ಅನ್ಯ, ಅನ್ಯತರ, ಇತರ ಇವು ಡತರಾದಿಗಳು. ಕತರವೆಂಬುದು ಡತರಾಂತಶಬ್ದ. ಐದರಲ್ಲಿ ಮೊದಲಿನ ಎರಡು ಪ್ರತ್ಯಯಗಳಾದುದರಿಂದ ತದಂತಗ್ರಹಣ. ಅದ್ ಡ್ ನಲ್ಲಿ " ಹಲಂತ್ಯಮ್ " ಸೂತ್ರದಿಂದ ಡಕಾರ ಇತ್ಸಾಗುತ್ತದೆ. ಕತರ+ಅದ್ ಎಂದಿರುವಾಗ ಸವರ್ಣದೀರ್ಘ ಪ್ರಾಪ್ತವಾದರೆ ಅಪವಾದವಾಗಿ ಲೋಪಹೇಳುತ್ತಾನೆ.

(ಟಿಗೆ ಲೋಪಹೇಳುವ ಸೂತ್ರ)

೨೪೩. ಟೇಃ ॥ ೬-೪-೧೪೩ ॥

ಡಿತಿ ಭಸ್ಯ ಟೇರ್ಲೋಪಃ ॥ ಕತರತ್ ಕತರದ್ । ಕತರೇ ಕತರಾಣಿ। ಹೇ ಕತರತ್ । ಶೇಷಂ ಪುಂವತ್ ॥ ಏವಂ ಕತಮತ್ । ಇತರತ್ । ಅನ್ಯತ್ । ಅನ್ಯತರತ್ । ಅನ್ಯತಮಸ್ಯ ತ್ವನ್ಯತಮಮಿತ್ಯೇವ ।

ಏಕಪದಸೂತ್ರ. ಭಸ್ಯ ಅಧಿಕಾರ. (" ಯಾದಿ ಅಜಾದಿ ಪರವಾದಾಗ ಭಸಂಜ್ಞೆ) " ತಿವಿಂಶತೇರ್ಡಿತಿ " ಸೂತ್ರದಿಂದ " ಡಿತಿ " " ಅಲ್ಲೋಽನೋಽನಃ " ಸೂತ್ರದಿಂದ " ಲೋಪಃ " ಅನುವೃತ್ತಿ. **ಸೂತ್ರಾರ್ಥ**—ಡಕಾರ ಇತ್ಸಾದ ಪ್ರತ್ಯಯಪರವಾದಾಗ ಭಸಂಜ್ಞೆಯಿರುವ ಅಂಗದ ಟಿಗೆ ಲೋಪ. ಪ್ರಕೃತ ಅದ್ ಡ್ ಡಿತ್ಸಾಗಿದೆ. ಅಜಾದಿಪ್ರತ್ಯಯಪರವಾದುದರಿಂದ ಭಸಂಜ್ಞಾ ಇದೆ. ಕತರ ಎಂಬಲ್ಲಿ ಟ ರೇಫದಮೇಲಿರುವ ಅಕಾರ. ಅದಕ್ಕೆ ಲೋಪಬಂದರೆ ಕತರ್+ಅದ್=ಕತರದ್. ಅವಸಾನವಿರುವುದರಿಂದ " ವಾವಸಾನೇ " ಸೂತ್ರದಿಂದ ದಕಾರಕ್ಕೆ ಚರ್ತ್ವ ಬಂದರೆ ಕತರತ್. ವಿಕಲ್ಪವಾದುದರಿಂದ ಕತರದ್. ದ್ವಿವಚನದಿಂದ ಜ್ಞಾನಶಬ್ದದಂತೇರೂಪ. ಔಜಸ್‌ಗೆ ಶೀ ಆದೇಶ. ಗುಣ. ಕತರೇ·

ಜಸಿಗೆ ಶಿ ಆದೇಶ. ನುಮಾಗಮ. ದೀರ್ಘ. ಕತರಾನಿ. " ಆಟ್‌ಕುಪ್ವಾಙ್ "–ಸೂತ್ರದಿಂದ ನಕಾರಕ್ಕೆ ಣತ್ವ. ಕತರಾಣಿ. ಸಂಬುದ್ಧಿಯಲ್ಲಿಯೂ ಸುವಿಗೆ ಅದ್ ಡ್ ಆದೇಶ ಟ್ಲೋಪ. ಹೇ ಕತರತ್. ಇಲ್ಲಿ ಸಂಬುದ್ಧಿಯ ಹಲ್ ಇದ್ದರೂ ಲೋಪವಿಲ್ಲ. ಹ್ರಸ್ವದಪರವಲ್ಲಿದ್ದರೂ ಹ್ರಸ್ವಾಂತ ಅಂಗವಲ್ಲ. ಲೋಪವಾದಾಗ ಕತರ್ ಮಾತ್ರ ಅಂಗ. ಉಳಿದದ್ದು ಹಿಂದಿನಂತೇ ಆಗುತ್ತದೆ. ತೃತೀಯಾದಿಯಲ್ಲಿ ಪುಲ್ಲಿಂಗದಂತೇರೂಪವಾಗುತ್ತದೆ. ಸರ್ವಶಬ್ದನೋಡಿ. ಕತಮವೆಂಬುದು ಡತಮಪ್ರತ್ಯಯಾಂತವಾದ ಶಬ್ದ. ಇದರ ಪರದ ಸುವಿಗೂ ಅದ್ ಡ್ ಆದೇಶ ಬಂದರೆ. ಕತಮತ್ ಕತಮದ್ ಎಂದು ಹಿಂದಿನಂತೇಆಗುತ್ತದೆ. ಹೀಗೆಯೇ ಇನ್ನುಳಿದ ಇತರ, ಅನ್ಯ, ಅನ್ಯತರ, ಮೂರಕ್ಕೂ ಸು ಅಮ್‌ಗಳಲ್ಲಿ ಇತರತ್, ಅನ್ಯತ್, ಅನ್ಯತರತ್ ರೂಪಗಳಾಗುತ್ತವೆ. ಅನ್ಯತಮಶಬ್ದಕ್ಕಾದರೋ ಅನ್ಯತಮಮ್ ಎಂದೇ ರೂಪ. ಇದು ಡತಮ ಪ್ರತ್ಯಯಾಂತದಂತೆ ತೋರಿದರೂ ಡತಮಾಂತವಲ್ಲ. ಇದು ಅವ್ಯುತ್ಪನ್ನಪ್ರಾತಿಪದಿಕ. (ಪ್ರಕೃತಿಪ್ರತ್ಯಯ ವಿವೇಚನೆ ಇಲ್ಲ.) ಆದುದರಿಂದ ನಪುಂಸಕದಲ್ಲಿ ಜ್ಞಾನಶಬ್ದದಂತೇರೂಪ. ಸುವಿಗೆ ಅಮಾದೇಶ. ಏಕತರ ಶಬ್ದ ಯದ್ಯಪಿ ಡತರಪ್ರತ್ಯಯಾಂತವಾದುದರಿಂದ ಅದ್ ಡ್ ಆದೇಶವನ್ನು ಹೊಂದಬೇಕು. ಆದರೆ ವಾರ್ತಿಕ ಕಾರರು ಇದಕ್ಕೆ ನಿಷೇಧಹೇಳುತ್ತಾರೆ.

ವಾ ॥ (ಏಕತರಾತ್ಪ್ರತಿಷೇಧೋ ವಕ್ತವ್ಯಃ ॥)

ಏಕತರಮ್ ।

ಏಕತರಾತ್ ಪ್ರತಿಷೇಧಃ, ವಕ್ತವ್ಯಃ ॥ ಏಕತರ ಶಬ್ದದ ಪರದಲ್ಲಿರುವ ಸು ಅಮ್‌ಗಳಿಗೆ ಅದ್ ಡ್ ಆದೇಶ ನಿಷೇಧ ಹೇಳಬೇಕು. ಅದ್ ಡ್ ಆದೇಶ ಬಾರದಿದ್ದರೆ ಸಾಮಾನ್ಯ ಪ್ರಾಪ್ತವಾದ ಅಮಾದೇಶವೇ ಬರುತ್ತದೆ. ಏಕತರಮ್. ಜ್ಞಾನ ಶಬ್ದದಂತೇ ರೂಪ ಹೊಂದುತ್ತದೆ.

ಶ್ರಿಯಂ ಪಾತಿ ಶ್ರೀಪಾ. ಲಕ್ಷ್ಮಿಯನ್ನು ಕಾಪಾಡಿಕೊಂಡು ಬಂದ ಕುಲ. ಆಕಾರಾಂತವಾಗಿದ್ದರೆ ನಪುಂಸಕದಲ್ಲಿ ಹ್ರಸ್ವ ಹೇಳುತ್ತಾನೆ.

(ಪ್ರಾತಿಪದಿಕಕ್ಕೆ ಹ್ರಸ್ವ ಹೇಳುವ ಸೂತ್ರ)

೨೪೪. ಹ್ರಸ್ವೋ ನಪುಂಸಕೇ ಪ್ರಾತಿಪದಿಕಸ್ಯ ॥ ೧-೨-೪೭ ॥

ಕ್ಲೀಬೇ ಪ್ರಾತಿಪದಿಕಸ್ಯಾಜಂತಸ್ಯ ಹ್ರಸ್ವಃ ಸ್ಯಾತ್ ॥ ಶ್ರೀಪಂ ಜ್ಞಾನವತ್ ॥

ಹ್ರಸ್ವಃ, ನಪುಂಸಕೇ, ಪ್ರಾತಿಪದಿಕಸ್ಯ ॥ ತ್ರಿಪದ ಸೂತ್ರ. " ಅಜಶ್ಯ " ಎಂಬ ಪರಿಭಾಷೆಯಲ್ಲಿ ಎಲ್ಲಿಯಾದರೂ ಹ್ರಸ್ವದೀರ್ಘ ಪ್ಲುತಗಳು ಸ್ಥಾನಿ ಹೇಳಲ್ಪಟ್ಟರೆ ಅಲ್ಲಿ " ಅಜಃ " ಎಂಬ ಷಷ್ಠ್ಯಂತ ಪದವು ಉಪಸ್ಥಿತವಾಗುತ್ತದೆ ಎಂದು ಹೇಳಿದುದರಿಂದ ಇಲ್ಲಿ ಹ್ರಸ್ವಃ ಎಂದು ವಿಧಾನ ಮಾಡಿರುವುದರಿಂದ " ಅಜಃ " ಬಂದಲ್ಲಿ ಅದು ಪ್ರಾತಿಪದಿಕಕ್ಕೆ ವಿಶೇಷಣ. ತದಂತಲಾಭ. **ಸೂತ್ರಾರ್ಥ**—ನಪುಂಸಕದಲ್ಲಿ ಅಜಂತವಾದ ಪ್ರಾತಿಪದಿಕಕ್ಕೆ ಹ್ರಸ್ವ ಬರುತ್ತದೆ. ಪ್ರಕೃತ ಶ್ರೀಪಾ ಪ್ರಾತಿಪದಿಕಕ್ಕೆ ಹ್ರಸ್ವ ಬಂದರೆ ಶ್ರೀಪವೆಂದಾಗುತ್ತದೆ. ಹ್ರಸ್ವಾಕಾರಾಂತವಾದ ಮೇಲೆ ಅದು ಜ್ಞಾಪ್ಯ ಶಬ್ದದಂತೇ ರೂಪ ಹೊಂದುತ್ತದೆ. ಶ್ರೀಪಂ–ಶ್ರೀಪೇ–ಶ್ರೀಪಾಣಿ. ಇತ್ಯಾದಿ. ಈ ಸೂತ್ರವು ಎಲ್ಲಾ ದೀರ್ಘಗಳಿಗೂ ಹ್ರಸ್ವ ಹೇಳುವುದರಿಂದ ನಪುಂಸಕದಲ್ಲಿ ದೀರ್ಘಾಂತವೇ ಇಲ್ಲ.

ಇತಿ ಅದಂತಾಃ ॥

ಇಕಾರಾಂತ " ವಾರಿ " ಶಬ್ದ (ನೀರು)

ವಾರಿ ಶಬ್ದದ ಮೇಲೆ ಪ್ರಥಮಾ ಸು ಬಂದಾಗ ಅದಂತವಾಗಿರುವುದರಿಂದ ಅಮ್ ಬರುವುದಿಲ್ಲ. ರುತ್ವವಿಸರ್ಗ ಪ್ರಾಪ್ತವಾದರೆ ಲೋಪ ಹೇಳುತ್ತಾನೆ.

(ಸು ಅಮ್‌ಗಳಿಗೆ ಲುಕ್ ಹೇಳುವ ಸೂತ್ರ)

೨೪೫. ಸ್ವಮೋರ್ನಪುಂಸಕಾತ್ ॥ ೭-೧-೨೩ ॥

ಕ್ಲೀಬಾದಂಗಾತ್ ಸ್ವನೋರ್ಲುಕ್ ಸ್ಯಾತ್ ॥ ವಾರಿ ॥

ಸ್ವಮೋಃ, ನಪುಂಸಕಾತ್ ॥ ದ್ವಿಪದ ಸೂತ್ರ. " ಅಂಗಸ್ಯ " ಅಧಿಕಾರ. ಪಂಚಮ್ಯಂತ ವಿಪರಿಣಾಮ. " ಷಡ್ಭ್ಯೋ ಲುಕ್ " ಸೂತ್ರದಿಂದ " ಲುಕ್ " ಅನುವೃತ್ತಿ. **ಸೂತ್ರಾರ್ಥ**—ನಪುಂಸಕಾಂಗದ ಪರದಲ್ಲಿರುವ ಸು, ಅಮ್‌ಗಳಿಗೆ ಲುಕ್ ಬರುತ್ತದೆ. ಲುಕ್ ಲೋಪದ ಪರ್ಯಾಯ ಶಬ್ದ. ಲುಕ್ ಎಂದು ಲೋಪಮಾಡಿದಲ್ಲಿ ಸ್ಥಾನಿನ ದ್ಭಾವ ಬರುವುದಿಲ್ಲ. ನಪುಂಸಕ ಸಾಮಾನ್ಯದಲ್ಲಿಯೂ ಇದು ಬರುತ್ತದೆ. ಪ್ರಕೃತ ಸು ಲುಕ್ಕಾದರೆ ವಾರಿ ಎಂದು ಉಳಿಯುತ್ತದೆ. ವಾರಿ+ಔ ಎಂದಿರುವಾಗ " ನಪುಂಸಕಾಚ್ಚ " ಸೂತ್ರದಿಂದ ಔಗೆ ಶೀ ಭಾವ. ವಾರಿ+ಈ ಎಂದಿರುವಾಗ ನುಮಾಗಮ ಹೇಳುತ್ತಾನೆ.

(ನಪುಂಸಕದಲ್ಲಿ ನುಮಾಗಮ ಹೇಳುವ ಸೂತ್ರ)

೨೪೬. ಇಕೋಽಚಿ ವಿಭಕ್ತೌ ॥ ೭-೧-೨೪ ॥

ಇಂತಗಸ್ಯ ಕ್ಲೀಬಸ್ಯ ನುಮಚಿ ವಿಭಕ್ತೌ ॥ ವಾರಿಣೀ । ವಾರೀಣಿ ॥
ನ ಲುಮತೇತ್ಯಸ್ಯಾನಿತ್ಯತ್ವಾತ್ತವಷೇ ಸಂಬುದ್ಧಿ ನಿಮಿತ್ತೋ ಗುಣಃ ॥
ಹೇ ವಾರೇ ಹೇ ವಾರಿ । ಘೇರ್ಙಿತೀತಿ ಗುಣೇ ಪ್ರಾಪ್ತೇ

ವಾ ॥ (ವೃದ್ಧ್ಯುತ್ವತೃಜ್ವದ್ಭಾವಗುಣೇಭ್ಯೋ ನುಮ್ ಪೂರ್ವವಿಪ್ರತಿಷೇಧೇನ) ವಾರಿಣೇ । ವಾರಿಣಃ । ವಾರಿಣೋಃ । ನುಮಚಿರೀತಿ ನುಟ್ । ವಾರೀಣಾಮ್ । ವಾರಿಣಿ । ಹಲಾದೌ ಹರಿವತ್ ।

ಇಕಃ, ಅಚಿ, ವಿಭಕ್ತೌ ॥ ತ್ರಿಪದಸೂತ್ರ. " ಇದಿತೋನುಮ್‌ಧಾತೋಃ " ಸೂತ್ರದಿಂದ " ನುಮ್ " " ನಪುಂಸಕಸ್ಯ ಝಲಚಃ " ಸೂತ್ರದಿಂದ "ನಪುಂಸಕಸ್ಯ" ಪದಗಳು ಅನುವೃತ್ತವಾಗುತ್ತವೆ. ಅಂಗಸ್ಯ ಅಧಿಕಾರ. ಇಕಃ ಅದಕ್ಕೆ ವಿಶೇಷಣವಾದುದರಿಂದ ತದಂತಲಾಭ. ಅಚಿ ಸಪ್ತಮ್ಯಂತವು ವಿಭಕ್ತೌ ಸಪ್ತಮಂತ್ಯಕ್ಕೆ ವಿಶೇಷಣವಾದುದರಿಂದ ತದಾದಿಲಾಭ. **ಸೂತ್ರಾರ್ಥ**– ಇಗಂತವಾದ ನಪುಂಸಕಾಂಗಕ್ಕೆ ಅಜಾದಿ ವಿಭಕ್ತಿಪರವಾದಾಗ ನುಮಾಗಮ ಬರುತ್ತದೆ. ಪ್ರಕೃತ ಶೀ ಅಜಾದಿವಿಭಕ್ತಿಪರವಾಗಿದೆ. ವಾರಿ ಇಗಂತನಪುಂಸಕಾಂಗ. " ಮಿದಚೋಂತ್ಯಾತ್ಪರಃ " ಸೂತ್ರದಿಂದ ನುಮ್ ಮಿತ್ತಾದುದರಿಂದ ಅಂತ್ಯವಾದ ಅಚಿನಪರಕ್ಕೆ ಬರುತ್ತದೆ. ವಾರಿ+ನ್+ಈ ವಾರಿನೀ. " ಅಟ್‌ಕುಪ್ವಾಙ್–" ಸೂತ್ರದಿಂದ ನಕಾರಕ್ಕೆ ಣತ್ವ. ವಾರಿಣೀ. ವಾರಿ+ಜಸ್ ಎಂದಿರುವಾಗ " ಜಶ್ಶಸೋಃ ಶಿಃ " ಸೂತ್ರದಿಂದ ಶಿ ಆದೇಶ. ವಾರಿ+ಇ. ಎಂದಿರುವಾಗ ನುಮಾಗಮ. ವಾರಿನ್+ಇ. ಸರ್ವನಾಮಸ್ಥಾನ ಪರವಾದುದರಿಂದ " ಸರ್ವನಾಮಸ್ಥಾನೇಚಾಸಂಬುದ್ಧೌ " ಸೂತ್ರದಿಂದ ನಾಂತದ ಉಪಧೆಗೆ ದೀರ್ಘ. ವಾರೀನ್+ಇ. ವಾರೀನಿ. ಹಿಂದಿನಂತೇ ಣತ್ವ. ವಾರೀಣಿ. ಸಂಬುದ್ಧಿಯಲ್ಲಿ ಸು ಬಂದಾಗ ಅದಕ್ಕೆ ಲುಕ್. ಹೇ ವಾರಿ ಎಂದಾಗುತ್ತದೆ. ಲುಕ್ಕಾದುದರಿಂದ ಅದಕ್ಕೆ ಸ್ಥಾನಿವದ್ಭಾವವಿಲ್ಲ. ಆದರೆ ಸ್ಥಾನಿವದ್ಭಾವವನ್ನು ನಿಷೇಧ ಮಾಡುವ " ನ ಲುಮತಾಂಗಸ್ಯ " ಸೂತ್ರವು ಅನಿತ್ಯ. " ಇಕೋಚಿ ವಿಭಕ್ತೌ " ಸೂತ್ರದಲ್ಲಿ ಅಚ್‌ಗ್ರಹಣ ಈ ವಿಷಯವನ್ನು ಜ್ಞಾಪಿಸುತ್ತದೆ. ಯಾವಾಗ ಅದು ಅನಿತ್ಯವಾಯಿತೋ ನಿಷೇಧಮಾಡದಿರುವಾಗ ಸ್ಥಾನಿವದ್ಭಾವ ಬರುವುದರಿಂದ ಸು ಪರದಲ್ಲಿ ಇದ್ದಂತೆ ಆಯಿತು. ಆಗ " ಹ್ರಸ್ವಸ್ಯ ಗುಣಃ " ಸೂತ್ರದಿಂದ ವಾರಿ ಎಂಬಲ್ಲಿ ಗುಣ ಬಂದರೆ ಹೇ ವಾರೇ ಎಂದಾಗುತ್ತದೆ. ನಿಷೇಧಬಂದರೆ ಸಂಬುದ್ಧಿ ಪರದಲ್ಲಿಲ್ಲದಿರುವುದರಿಂದ ಗುಣ ಬರುವುದಿಲ್ಲ. ಹೇ ವಾರಿ. ಹೀಗೆ ಸಂಬುದ್ಧಿ

ಯಲ್ಲಿ ಎರಡು ರೂಪವಾಗುತ್ತವೆ. ಇದನ್ನೇ " ನಲುಮತಾ—" ಎಂಬ ವ್ಯಾಖ್ಯಾನದಿಂದ ವಿವರಿಸಿರುತ್ತಾನೆ. "ನಲುಮತಾ" ಎಂಬುದಕ್ಕೆ ಅನಿತ್ಯತ್ವವನ್ನಂಗೀಕರಿಸಿರುವುದರಿಂದ ಸೂತ್ರಪ್ರವರ್ತಿಸದಿರುವಾಗ ಸಂಬುದ್ಧಿಯನ್ನು ನಿಮಿತ್ತೀಕರಿಸಿ ಗುಣ ಬರುತ್ತದೆ ಎಂದರ್ಥ. ದ್ವಿತೀಯಾವಿಭಕ್ತಿಯಲ್ಲಿ ಹಿಂದಿನರೂಪವೇ. ವಾರಿ—ವಾರಿಣೇ—ವಾರೀಣಿ ತೃತೀಯಾವಿಕವಚನದಲ್ಲಿ ಅಜಾದಿವಿಭಕ್ತಿ ಪರವಾದುದರಿಂದ ಹಿಂದಿನಸೂತ್ರದಿಂದ ನುಮಾಗಮ. ಣತ್ವ. ವಾರಿ+ಆ—ವಾರಿಣಾ. ವಾರಿಭ್ಯಾಮ್ ವಾರಿಭಿಃ. ಹೀಗೆ ಆದಿಯಲ್ಲಿ ಕಾರ್ಯವಿಶೇಷವಿಲ್ಲದಿರುವುದರಿಂದ ಹರಿಶಬ್ದದಂತೇ ರೂಪ.

ಚತುರ್ಥಿಯಲ್ಲಿ ಜಿ ಬಂದಾಗ ವಾರಿ + ಏ ಎಂದಿರುವಾಗ ಅಜಾದಿ ಪ್ರತ್ಯಯ ಪರವಾದುದರಿಂದ " ಇಕೋಚಿ ವಿಭಕ್ತಾ " ಸೂತ್ರದಿಂದ ನುಮಾಗಮವೂ ಬರಬಹುದು. ಜಿತ್ವಾದ ಪ್ರತ್ಯಯ ಪರವಾದುದರಿಂದ " ಘೇರ್ಜಿತಿ " ಸೂತ್ರದಿಂದ ವಾರಿಯಲ್ಲಿ ಇಕಾರಕ್ಕೆ ಗುಣವೂ ಬರಬಹುದು. ಹೀಗೆ ಪ್ರಬಲ ಎರಡು ಸೂತ್ರಗಳೂ ಪ್ರಾಪ್ತವಾದರೆ " ವಿಪ್ರತಿಷೇಧೇ ಪರಂ ಕಾರ್ಯಂ " ಎಂಬುದರಿಂದ ಪರಸೂತ್ರದಿಂದ ಕಾರ್ಯ ಮಾಡಬೇಕು. ಆದರೆ ಅದು ಇಷ್ಟವಲ್ಲ. ಅದಕ್ಕೋಸ್ಕರ ವಾರ್ತಿಕಕಾರರು ಪೂರ್ವ ವಿಪ್ರತಿಷೇಧ ಹೇಳುತ್ತಾರೆ.

ವೃದ್ಧಿ, ಔತ್ವ, ತೃಜ್ವದ್ಭಾವ, ಗುಣ ಈ ನಾಲ್ಕು ಕಾರ್ಯಗಳಿಗಿಂತ ನುಮ್ ಎಂಬುದೇ ಪೂರ್ವವಿಪ್ರತಿಷೇಧದಿಂದ ಬರುತ್ತದೆ ಎಂದು ವಾರ್ತಿಕಾರ್ಥ. " ವಿಪ್ರತಿಷೇಧೇ ಪೂರ್ವಂ ಕಾರ್ಯಂ " ಎಂದು ಅವರ ಮತ. ಪ್ರಕೃತ ಗುಣ ಮಾತ್ರ ಇಲ್ಲಿ ಪ್ರಸಕ್ತವಾಗಿದೆ. ವೃದ್ಧ್ಯಾದಿಗಳಿಗೆ ಮುಂದೆ ಉದಾಹರಣೆ ಬರುತ್ತದೆ. ಪೂರ್ವಕ್ಕೇ ಪ್ರಾಬಲ್ಯವೆಂದುದರಿಂದ ಗುಣನನ್ನು ಬಾಧಿಸಿ ನುಮ್ ಬಂದರೆ ವಾರಿನ್ + ಏ = ವಾರಿಣೇ. " ಆಟ್‌ಕುಪ್ವಾಙ್—" ಸೂತ್ರದಿಂದ ಣತ್ವ. ವಾರಿಣೇ. ವಾರಿಭ್ಯಾಮ್—ವಾರಿಭ್ಯಃ ॥

ಪಂಚಮಿ ಏಕವಚನದಲ್ಲಿಯೂ ಹೀಗೆಯೇ ಪ್ರಾಪ್ತವಾದ ಗುಣವನ್ನು ಬಾಧಿಸಿ ನುಮ್ ಬಂದರೆ ವಾರಿ + ನ್ + ಅಸ್. ವಾರಿಣಃ—ವಾರಿಭ್ಯಾಮ್—ವಾರಿಭ್ಯಃ ॥

ಷಷ್ಠೀ ಏಕವಚನದಲ್ಲಿಯೂ ನುಮ್. ವಾರಿಣಃ । ದ್ವಿವಚನದಲ್ಲಿ ಅಜಾದಿಯಾದುದರಿಂದ ನುಮ್. ವಾರಿಣೋಃ=ವಾರಿಣೋಃ । ಆಮ್ ಪರವಾದಾಗ ಹ್ರಸ್ವದ ಪರದಲ್ಲಿರುವುದರಿಂದ ಆಮಿನ ನುಡಾಗಮವೂ ಬರಬಹುದು. ಅಜಾದಿಯಾದುದರಿಂದ ಅಂಗಕ್ಕೆ ನುಮಾಗಮವೂ ಬರಬಹುದು. ಹೀಗೆ ನುಟ್, ನುಮ್ ಪ್ರಾಪ್ತವಾದರೆ " ನುಮ್, ಆಚಿರ, ತೃಜ್ವದ್ಭಾವೇಭ್ಯೋ ನುಟ್ ಪೂರ್ವವಿಪ್ರತಿಷೇಧೇನ" ವಾರ್ತಿಕದಿಂದ ನುಮನ್ನು ಬಾಧಿಸಿ ಪೂರ್ವವಿಪ್ರತಿಷೇಧದಿಂದ ನುಟೇ ಬರುತ್ತವೆಯೆಂದುದರಿಂದ ನುಟ್ ಬಂದರೆ ಅಜಾದಿ ಪರವಾಗದಿರುವುದರಿಂದ ನುಮ್ ಬರುವುದಿಲ್ಲ. ವಾರಿ+ನ್ ಆಮ್. "ನಾಮಿ"

ಸೂತ್ರದಿಂದ ಇಕಾರಕ್ಕೆ ದೀರ್ಘ. " ಆಟ್‌ಕುಪ್ವಾಙ್ "—ಸೂತ್ರದಿಂದ ಣತ್ವ. ವಾರೀ ನಾಮ್=ವಾರೀಣಾಮ್.

ಸಪ್ತಮ್ಯೇಕವಚನದಲ್ಲಿ ವಾರಿ + ಙಿ ಎಂದಿರುವಾಗ " ಅಚ್ಚಘೇಃ " ಸೂತ್ರದಿಂದ ಔತ್ವ ಪ್ರಾಪ್ತವಾದರೆ " ವೃದ್ಧ್ಯೌತ್ವೇ "—ವಾರ್ತಿಕದಿಂದ ಔತ್ವವನ್ನು ಬಾಧಿಸಿ ಅಂಗಕ್ಕೆ ನುಮಾಗಮ. ವಾರಿನ್ + ಇ. ಣತ್ವ. ವಾರಿಣಿ—ವಾರಿಣೋಃ—ವಾರಿಷು.

ಇಕಾರಾಂತ ದಧಿ ಶಬ್ದ. (ಮೊಸರು)

ದಧಿ + ಸ್ ಎಂದಿರುವಾಗ " ಸ್ವಮೋರ್ನಪುಂಸಕಾತ್ " ಸೂತ್ರದಿಂದ ಸುವಿಗೆ ಲುಕ್. ದಧಿ. ಔ ಪರವಾದಾಗ " ಇಕೋಚಿ ವಿಭಕ್ತಾ " ಸೂತ್ರದಿಂದ ನುಮಾಗಮ. ಔಗೆ ಶೀ ಭಾವ. ದಧೀನೀ. ಜಸ್ ಪರವಾದಾಗ ಹಿಂದಿನಂತೆ ಜಸಿಗೆ ಶಿ ಭಾವ. ನುಮಾಗಮ. ದೀರ್ಘ. ದಧೀನಿ. ಸಂಬುದ್ಧಿಯಲ್ಲಿ ಹಿಂದಿನಂತೇ ಹೇ ದಧೇ ಹೇ ದಧಿ ಎರಡು ರೂಪ. ದ್ವಿತೀಯಾ ಪ್ರಥಮದಂತೇ ಆಗುತ್ತದೆ. ದಧಿ—ದಧೀನೀ—ದಧೀನಿ ॥ ತೃತೀಯಾದಲ್ಲಿ ಟಾ ಪರವಾದಾಗ ಅನಜ್ ಆದೇಶ ಹೇಳುತ್ತಾನೆ.

(ದಧ್ಯಾದಿಗಳಿಗೆ ಅನಜ್ ಹೇಳುವ ಸೂತ್ರ)

೨೪೭. ಅಸ್ಥಿದಧಿಸಕ್ಥ್ಯಕ್ಷ್ಣಾಮನಜುದಾತ್ತಃ ॥ ೭-೧-೭೫ ॥

ಏಷಾಮನಜ್ ಸ್ಯಾಟ್ಟಾದಾವಜಿ ॥

ಅಸ್ಥಿದಧಿಸಕ್ಥ್ಯಕ್ಷ್ಣಾಂ, ಅನಜ್, ಉದಾತ್ತಃ ॥ ತ್ರಿಪದಸೂತ್ರ. " ಇಕೋಽಚಿ ವಿಭಕ್ತಾ " ಸೂತ್ರದಿಂದ " ಅಜಿ " " ತೃತೀಯಾದಿಷು ಭಾಷಿತಪುಂಸ್ಕಂ ಪುಂವದ್ಗಾಲವಸ್ಯ " ಸೂತ್ರದಿಂದ " ತೃತೀಯಾದಿಷು " ಪದಗಳು ಅನುವೃತ್ತವಾಗುತ್ತವೆ. (ಅಸ್ಥಿ, ದಧಿ, ಸಕ್ಥಿ, ಅಕ್ಷಿ, ನಾಲ್ಕು ಶಬ್ದಗಳು.) ತೃತೀಯಾದಿಗೆ ಅಜಿ ವಿಶೇಷಣವಾದುದರಿಂದ ಆಜಾದಿಯಂಬ ಅರ್ಥವಾಗುತ್ತದೆ. **ಸೂತ್ರಾರ್ಥ.**— ಅಸ್ಥಿ, ದಧಿ, ಸಕ್ಥಿ, ಅಕ್ಷಿ ಈ ನಾಲ್ಕುಶಬ್ದಗಳಿಗೆ ಆಜಾದಿಯಾದ ತೃತೀಯಾದಿವಿಭಕ್ತಿ ಪರವಾದಾಗ ಅನಜ್ ಬರುತ್ತದೆ. ಪ್ರಕೃತ ದಧಿ+ಆ ಎಂದು ಆಜಾದಿವಿಭಕ್ತಿ ಪರವಾದುದರಿಂದ ಅನಜ್ ಆದೇಶ. ಜಿತ್ವಾದುದರಿಂದ " ಜಿಚ್ಚ " ಪರಿಭಾಷೆಯಿಂದ ದಧಿ ಎಂಬಲ್ಲಿ ಅಂತ್ಯ ಇಕಾರಕ್ಕೆ ಬಂದರೆ ದಧ್ ಅನ್+ಆ ಎಂದಾಗುತ್ತದೆ. ದಧನ್ + ಆ ಎಂದಿರುವಾಗ ಅನ್ನಿನ ಅಕಾರಕ್ಕೆ ಟೋಪಹೇಳುತ್ತಾನೆ.

(ಅನ್ನಿನ ಅಕಾರಕ್ಕೆ ಲೋಪಹೇಳುವ ಸೂತ್ರ.)

೨೪೪. ಅಲ್ಲೋಪೋಽನಃ ॥ ೬-೪-೧೩೪ ॥

ಅಂಗಾವಯವೋಽಸರ್ವನಾಮಸ್ಥಾನಯಜಾದಿಸ್ವಾದಿಪರೋ ಯೋಽನ್ ತಸ್ಯಾಕಾರಸ್ಯ ಲೋಪಃ // ದಧ್ನಾ ದಧ್ನೇ। ದಧ್ನಃ। ದಧ್ನಃ ದಧ್ನೋಃ। ದಧ್ನೋಃ।

ಅತ್, ಲೋಪಃ, ಅನಃ। ತ್ರಿಪದಸೂತ್ರ. ಅತ್ ಎಂಬುದು ಲುಪ್ತಷಷ್ಠ್ಯೇಕ ಪದ. ಅತಃ ಎಂದಿರಬೇಕಾಗಿತ್ತು. ಷಷ್ಠೀಲುಪ್ತವಾಗಿದೆ. ಅನಃ ಷಷ್ಠ್ಯೇ. ಅತ್ ಎಂಬಲ್ಲಿ ಇದಕ್ಕೆ ಅನ್ವಯ. ಅನಿನ ಅವಯವವಾದ ಹ್ರಸ್ವಾಕಾರಕ್ಕೆ ಎಂದರ್ಥ. "ಭಸ್ಯ" ಅಧಿಕಾರ. "ಯಚಿಭಮ್" ಸೂತ್ರದಿಂದ ಸರ್ವನಾಮಸ್ಥಾನವಲ್ಲದ ಅಜಾದಿ, ಯಾದಿ ಪ್ರತ್ಯಯ (ಕಪಿನವರೆಗಿರುವ) ಪರವಾದಾಗ ಪೂರ್ವಕ್ಕೆ ಭ ಸಂಜ್ಞೆ ಹೇಳಿರುತ್ತಾನೆ. ಆಗ **ಸೂತ್ರಾರ್ಥ**—ಸರ್ವನಾಮಸ್ಥಾನವಲ್ಲದ ಯಕಾರಾದಿ, ಅಜಾದಿ ಪ್ರತ್ಯಯಪರವಾದ ಅಂಗಾವಯವವಾದ ಯಾವ ಅನ್ ಇದೆಯೋ ಅದರ ಅವಯವವಾದ ಅಕಾರಕ್ಕೆ ಲೋಪ ಬರುತ್ತದೆ. ಪ್ರಕೃತ ಕಪ್ ಪ್ರತ್ಯಯದವಳನ್ನು ಸೇರಿದ ಸರ್ವನಾಮಸ್ಥಾನವಲ್ಲದ ಅಜಾದಿಪ್ರತ್ಯಯ ಪರವಾದುದರಿಂದ ದಧನ್ ಎಂಬಲ್ಲಿರುವ ಅನಿನ ಅಕಾರಕ್ಕೆ ಲೋಪ ಬಂದರೆ ದಧ್ನ್+ಆ=ದಧ್ನಾ ಎಂದಾಗುತ್ತದೆ. ಹೀಗೆ ಮುಂದೆ ಅಜಾದಿಯಲ್ಲೆಲ್ಲಾ ಲೋಪ ಬಂದುದನ್ನು ತೋರಿಸಿರುತ್ತಾನೆ. ಚ ॥ ದಧ್ನೇ। ಪಂ ॥ ದಧ್ನಃ। ಷ–ದಧ್ನಃ ॥ ಷ–ದ್ವಿ–ದಧಿ+ಓಸ್=ದಧನ್+ಓಸ್ ದಧ್ನೋಸ್–ದಧ್ನೋಃ। ಸ–ದ್ವಿ–ದಧ್ನೋಃ ॥ ಷ–ಬ–ದಧ್ನಾಮ್. ಸಪ್ತಮೀ ಏಕವಚನವಲ್ಲಿಯೂ ಅಜಾದಿಯಾದುದರಿಂದ ನಿತ್ಯಲೋಪಪ್ರಾಪ್ತವಾದರೆ ವಿಕಲ್ಪ ಲೋಪ ಹೇಳುತ್ತಾನೆ.

(ಅನಿನ ಅಕಾರಕ್ಕೆ ವಿಕಲ್ಪಲೋಪಹೇಳುವ ಸೂತ್ರ)

೨೪೫. ವಿಭಾಷಾ ಜ್ಞಿಶ್ಯೋಃ ॥ ೬-೪-೧೩೬ ॥

ಅಂಗಾವಯವೋಽಸರ್ವನಾಮಸ್ಥಾನಯಜಾದಿಸ್ವಾದಿಪರೋ ಯೋಽನ್ ತಸ್ಯಾಕಾರಸ್ಯ ಲೋಪೋ ವಾ ಸ್ಯಾತ್, ಜ್ಞಿಶ್ಯೋಃ ಪರಯೋಃ ॥ ದಧ್ನಿ, ದಧನಿ। ಶೇಷಂ ವಾರಿವತ್ ! ಏವಮಸ್ಥಿಸಕ್ಥ್ಯಕ್ಷಿ ॥

ದ್ವಿಪದಸೂತ್ರ "ಅಲ್ಲೋಪೋಽನಃ" ಸೂತ್ರವು ಅನುವೃತ್ತವಾಗುತ್ತದೆ. ಅದರಂತೇ ಸೂತ್ರಾರ್ಥ. "ಅಂಗಸ್ಯ" "ಭಸ್ಯ" ಅಧಿಕಾರ. ಇಲ್ಲಿ ವಿಕಲ್ಪಮಾತ್ರವಿಶೇಷ.

ಸೂತ್ರಾರ್ಥ—ಸರ್ವನಾಮಸ್ಥಾನವರ್ಜವಾದ ಅಜಾದಿ, ಯಾದಿ ಪರವಾದ, ಅಂಗಾವಯವವಾದ ಅನಿನ ಅಕಾರಕ್ಕೆ ಜ್ಞಿ, ಶೀ ಎರಡು ಪ್ರತ್ಯಯಪರವಾದಾಗ ವಿಕಲ್ಪವಾಗಿ ಲೋಪಬರುತ್ತದೆ. ಪ್ರಕೃತ ಸರ್ವನಾಮಸ್ಥಾನವಲ್ಲದ ಅಜಾದಿ ಪ್ರತ್ಯಯ ಪರವಾದರೂ ಜ್ಞಿ ಆದುದರಿಂದ ಇದರಿಂದ ವಿಕಲ್ಪಲೋಪ. ಲೋಪಬಂದರೆ ದದ್ನ್+ಇ=ದಧ್ನಿ. ಲೋಪಬಾರದಿದ್ದರೆ ಇದ್ದಂತೇ ಇರುತ್ತದೆ. ದಧನ್+ಇ=ದಧನಿ. ಶೇಷಂವಾರಿವತ್. ಜಸ್ನು ತೃತೀಯಾದಿಹಲಾದಿ ವಿಭಕ್ತಿಗಳಲ್ಲಿ ಕಾರ್ಯವಿಶೇಷ ವಿಲ್ಲದುದರಿಂದ ವಾರಿಶಬ್ದಂತೇ ಆಗುತ್ತದೆ. ದಧಿಭ್ಯಾಂ–ದಧಿಭಿಃ ಇತ್ಯಾದಿ. ಹೀಗೆಯೇ ಸೂತ್ರೋಪಾತ್ತಗಳಾದ ಅಸ್ಥಿ, (ಮೂಳೆ) ಸಕ್ಥಿ (ತೊಡೆ) ಅಕ್ಷಿ(ಕಣ್ಣು) ಮೂರುಶಬ್ದಗಳೂ ಆಗುತ್ತವೆ. ಅಜಾದಿ ಟಾದಿಯಲ್ಲಿ ಅನಜ್ ಬಂದು ಅಕಾರಲೋಪಹೊಂದುತ್ತವೆ. ಸಪ್ತಮೀಏಕವಚನವಲ್ಲಿ ವಿಕಲ್ಪಲೋಪ. ಅಸ್ಥಿ–ಅಸ್ಥಿನೀ, ಅಸ್ಥ್ನಿ. ತೃ. ಅಸ್ಥ್ನಾ–ಅಸ್ಥಿಭ್ಯಾಮ್ –ಅಸ್ಥಿಭಿಃ ॥ ಇತ್ಯಾದಿ.

(ಇಕಾರಾಂತ ಸುಧಿ ಶಬ್ದ.)

॥ ಸುಧಿ। ಸುಧಿನೀ। ಸುಧೀನಿ ॥ ಹೇ ಸುಧೇ–ಹೇ ಸುಧಿ ॥

ಶೋಭನಾ ಧೀಃ ಯಸ್ಯ ತತ್. ಒಳ್ಳೇಬುದ್ಧಿಯುಳ್ಳಕುಲ. ಸುಧೀ ಎಂದಿರುವಾಗ "ಹ್ರಸ್ವೋನಪುಂಸಕೇ ಪ್ರಾತಿಪದಿಕಸ್ಯ" ಸೂತ್ರದಿಂದ ನಪುಂಸಕದಲ್ಲಿ ಹ್ರಸ್ವ. ಸುಧಿ ಹ್ರಸ್ವಇಕಾರಾಂತವಾಗುತ್ತದೆ. ಪ್ರಥಮ, ದ್ವಿತೀಯಾ ಏಕವಚನಗಳಲ್ಲಿ "ಸ್ವಮೋರ್ನಪುಂಸಕಾತ್" ಸೂತ್ರದಿಂದ ಸು, ಅಮ್‌ಗಳಿಗೆ ಲುಕ್. ಸುಧಿ. ದ್ವಿವಚನದಲ್ಲಿ ಔಪರವಾದಾಗ "ನಪುಂಸಕಾಚ್ಚ" ಸೂತ್ರದಿಂದಔಗೆ ಶೀ ಭಾವ. ಸುಧಿ+ಈ. "ಇಕೋಚಿವಿಭಕ್ತೌ" ಸೂತ್ರದಿಂದ ನುಮಾಗಮ. ಸುಧಿನ್+ಈ=ಸುಧಿನೀ ॥ ಜಸ್‌ಶಸ್‌ಗಳಿಗೆ ಶಿ ಭಾವ. ಸುಧಿ+ಇ ಎಂದಿರುವಾಗ ನುಮ್. "ಸರ್ವನಾಮಸ್ಥಾನೇಚಾಸಂಬುದ್ಧೌ" ಸೂತ್ರದಿಂದ ದೀರ್ಘ. ಸುಧೀನಿ ॥ ಸಂಬುದ್ಧಿಯಲ್ಲಿ ಸುವಿಗೆ ಲುಕ್. ಹೇ ಸುಧಿ. ಲುಕಿಗೆ ಸ್ಥಾನಿವದ್ಭಾವವಿದ್ದರೆ "ಹ್ರಸ್ವಸ್ಯಗುಣಃ" ಸೂತ್ರದಿಂದ ಗುಣ. ಹೇ ಸುಧೇ. ತೃತೀಯಾದಿ ಅಜಾದಿಗಳಲ್ಲಿ ನಿತ್ಯವಾಗಿ "ಇಕೋಚಿವಿಭಕ್ತೌ" ಸೂತ್ರದಿಂದ ನುಮ್ ಬಂದು ಒಂದೇರೂಪವಾಗುವುದಾದರೆ ಪುಲ್ಲಿಂಗದಂತೆಯೂ ಒಂದುರೂಪವನ್ನು ಹೇಳುತ್ತಾನೆ.

(ನಪುಂಸಕಕ್ಕೆ ಪುಂವದ್ಭಾವ ಹೇಳುವ ಸೂತ್ರ)

೨೫೦. ತೃತೀಯಾದಿಷು ಭಾಷಿತಪುಂಸ್ಕಂ ಪುಂವದ್ಗಾಲವಸ್ಯ ॥ ೭-೧-೭೪ ॥

ಪ್ರವೃತ್ತಿನಿಮಿತ್ತೈಕ್ಯೇ ಭಾಷಿತಪುಂಸ್ಕಮಿಗಂತಂ ಕ್ಲೀಬಂ ಪುಂವದ್ಭಾ ಟಾದಾವಚಿ ॥ ಸುಧಿಯಾ, ಸುಧಿನೇತ್ಯಾದಿ ॥

ತೃತೀಯಾದಿಷು, ಭಾಷಿತಪುಂಸ್ಕಂ, ಪುಂವತ್, ಗಾಲವಸ್ಯ ॥ ನಾಲ್ಕುಪದ ಗಳುಳ್ಳ ಸೂತ್ರ. "ಇಕೋಽಚಿ ವಿಭಕ್ತೌ" ಸೂತ್ರದಿಂದ "ಅಚಿ" "ಇಕ್" ಅನುವೃತ್ತವಾಗುತ್ತವೆ. ತೃತೀಯಾದಿಗೆ ಅಚಿ ವಿಶೇಷಣ. ಸಪ್ತಮ್ಯಂತವಾದುದರಿಂದ ತದಾದಿಲಾಭ. ಭಾಷಿತಃ ಪುಮಾನ್ ಯೇನ ಪ್ರವೃತ್ತಿನಿಮಿತ್ತೇನ ತತ್ ಭಾಷಿತಪುಂಸ್ಕಮ್. ಪುಲ್ಲಿಂಗದಲ್ಲಿಯೂ ನಪುಂಸಕದಲ್ಲಿಯೂ ಒಂದೇ ಪ್ರವೃತ್ತಿ ನಿಮಿತ್ತವುಳ್ಳ ಶಬ್ದ. ಪುಲ್ಲಿಂಗಕ್ಕೂ ನಪುಂಸಕಕ್ಕೂ ಸಮನ್ವಯವಾಗುವ ಅರ್ಥವುಳ್ಳ ಶಬ್ದ. "ನಪುಂಸಕಸ್ಯ ಝಲಚಃ" ಸೂತ್ರದಿಂದ "ನಪುಂಸಕಸ್ಯ" ಅನುವೃತ್ತಿ. ಇಕಃ ಎಂಬುದು ಅದಕ್ಕೆ ವಿಶೇಷಣವಾದುದರಿಂದ ಇಗಂತವಾದ ನಪುಂಸಕಕ್ಕೆ ಎಂದರ್ಥವಾಗುತ್ತದೆ. ಸುಧೀ ಎಂಬುದು ಭಾಷಿತಪುಂಸ್ಕ. ಒಳ್ಳೇಬುದ್ಧಿಉಳ್ಳವ ಎಂದು ಪುಲ್ಲಿಂಗದಲ್ಲಿಯೂ ಪುರುಷನಿಗೆ ವಿಶೇಷಣವಾಗಿ ಹೇಳಬಹುದು. ಕುಲ ರೂಪ ನಪುಂಸಕಕ್ಕೆ ವಿಶೇಷಣವಾಗಿ ಹೇಳಬಹುದು. ಎರಡರಲ್ಲಿಯೂ ಹೊಂದುವ ಒಂದರ್ಥವಿರುವ ಶಬ್ದವೇ ಭಾಷಿತಪುಂಸ್ಕಶಬ್ದ. ಶಬ್ದ ಒಂದು ಅರ್ಥದಲ್ಲಿ ಪ್ರಯೋಗಿಸುಲು ಕಾರಣ ಯಾವುದೋ ಅದು ಪ್ರವೃತ್ತಿನಿಮಿತ್ತ. ಗೋತ್ವವಿರುವುದರಿಂದ ಗೌಃ ಎಂದು ಪ್ರಯೋಗಿಸುತ್ತೇವೆ. ಈ ನಿಮಿತ್ತ ಎರಡು ಲಿಂಗಗಳಲ್ಲಿಯೂ ಒಂದಾಗಿದ್ದರೆ ಅದು ಭಾಷಿತಪುಂಸ್ಕ. ಗಾಲವಸ್ಯ ಎಂದುದರಿಂದ ಗಾಲವಋಷಿಗಳ ಮತದಲ್ಲಿ ಮಾತ್ರ ಈ ಕಾರ್ಯವೆಂದುದರಿಂದ ಪಾಣಿನಿಗಳಿಗೆ ಇದು ಇಷ್ಟವಲ್ಲ. ಆಗ ಅದು ವಿಕಲ್ಪವೆಂದಾಗುತ್ತದೆ. **ಸೂತ್ರಾರ್ಥ**—ಪ್ರವೃತ್ತಿನಿಮಿತ್ತವು ಒಂದೇ ಆಗಿರುವಾಗ ಭಾಷಿತಪುಂಸ್ಕವಾದ ಇಗಂತನಪುಂಸಕವು ಅಜಾದಿತೃತೀಯಾದಿವಿಭಕ್ತಿಪರವಾದಾಗ ವಿಕಲ್ಪವಾಗಿ ಪುಲ್ಲಿಂಗದಂತೆ ಆಗುತ್ತದೆ. ಸುಧೀಶಬ್ದ ಭಾಷಿತಪುಂಸ್ಕ- ಎರಡು ಲಿಂಗಗಳಲ್ಲಿಯೂ ಒಳ್ಳೇ ಬುದ್ಧಿಯಿರುವಿಕೆ ರೂಪವಾದ ಪ್ರವೃತ್ತಿನಿಮಿತ್ತ ಒಂದೇ ಆಗಿದೆ. ವಿಕಲ್ಪವಾಗಿ ಪುಂವದ್ಭಾವಬಂದರೆ ನುಮಾಗಮ ಬರುವುದಿಲ್ಲ. ಸುಧೀ+ಆ ಎಂದಿರುವಾಗ "ಅಚಿಶ್ನುಧಾತುಭ್ರುವಾಂ—" (ಸೂ 200) ಸೂತ್ರದಿಂದ ಇಯಜಾದೇಶ. ಸುಧ್‌ಇಯ್+ಆ=ಸುಧಿಯಾ ಎಂದಾಗುತ್ತದೆ. ಪುಂವದ್ಭಾವ ಬಾರದಿದ್ದರೆ ನುಮಾಗಮ. ಸುಧಿನಾ ಎಂದಾಗುತ್ತದೆ. ಹೀಗೆ ಅಜಾದಿಯಲ್ಲಿ ಎರಡೆರಡು ರೂಪ. ಹಲಾದಿಯಲ್ಲಿ ಕೇವಲ ವಿಭಕ್ತಿಸೇರಿಸುವುದುಮಾತ್ರ. ಚ ॥ ಸುಧಿಯೆ-ಸುಧಿನೆ ॥ ಸುಧಿಭ್ಯಾಂ ಸುಧಿಭ್ಯಃ ॥ ಪಂ ॥ ಸುಧಿಯಃ-ಸುಧಿನಃ ॥ ಸುಧಿಭ್ಯಾಂ ॥ ಸುಧಿಭ್ಯಃ ॥ ಷ-ಸುಧಿಯಃ-ಸುಧಿನಃ ॥ ಸುಧಿಯೋಃ-ಸುಧಿನೋಃ ॥ ಸುಧಿಯಾಂ-ಸುಧೀನಾಮ್ ॥ ಸ-ಸುಧಿಯಿ-ಸುಧಿನಿ ॥ ಸುಧಿಯೋಃ-ಸುಧಿನೋಃ । ಸುಧಿಷು ॥

ಉಕಾರಾಂತ ಮಧು ಶಬ್ದ. (ಜೇನು)

ಮಧು । ಮಧುನೀ । ಮಧೂನಿ । ಹೇ ಮಧೋ-ಹೇ ಮಧು ॥

ಇದು ವಾರಿ ಶಬ್ದದಂತೇ ಕಾರ್ಯ ಹೊಂದುತ್ತದೆ. ಏಕವಚನದಲ್ಲಿ ಪ್ರತ್ಯಯಕ್ಕೆ ಲುಕ್. ದ್ವಿವಚನದಲ್ಲಿ ಶೀ ಭಾವ ನುಮ್. ಬಹುವಚನದಲ್ಲಿ ಶಿ ಭಾವ. ನುಮ್ ದೀರ್ಘ. ಸಂಬುದ್ಧಿಯಲ್ಲಿ ವಿಕಲ್ಪ ಗುಣ. ತೃತೀಯಾದ್ಯಜಾದಿಯಲ್ಲಿ ನುಮ್. ಮಧುನಾ-ಇತ್ಯಾದಿ.

ಉಕಾರಾಂತ ಸುಲು ಶಬ್ದ. (ಚನ್ನಾಗಿ ಕತ್ತರಿಸುವ ಕುಲ)

ಸುಲು । ಸುಲುನೀ । ಸುಲೂನಿ । ಸುಲ್ವಾ । ಸುಲುನಾ । ಇತ್ಯಾದಿ ॥

ಸುಷ್ಠು ಲುನಾತಿ ಇತಿ ಸುಲೂ ಚನ್ನಾಗಿ ಕತ್ತರಿಸುವುದು. ಕುಲಕ್ಕೆ ವಿಶೇಷಣ ಮಾಡಿದರೆ ನಪುಂಸಕವಾಗುತ್ತದೆ. "ಹ್ರಸ್ವೋ ನಪುಂಸಕೇ ಪ್ರಾತಿಪದಿಕಸ್ಯ" ಸೂತ್ರದಿಂದ ಹ್ರಸ್ವ. ಪ್ರಥಮಾ ದ್ವಿತೀಯಾಗಳಲ್ಲಿ ಮಧು ಶಬ್ದದಂತೇ ಆಗುತ್ತದೆ. ಇಲ್ಲಿಯೂ ಚನ್ನಾಗಿ ಕತ್ತರಿಸುವಿಕೆ ಈ ಅರ್ಥ ಪುಲ್ಲಿಂಗದಲ್ಲಿಯೂ ನಪುಂಸಕದಲ್ಲಿಯೂ ಒಂದಾದುದರಿಂದ ಪ್ರವೃತ್ತಿ ನಿಮಿತ್ತೈಕ್ಯವಿರುವುದರಿಂದ ಭಾಷಿತಪುಂಸ್ಕವಾಗುತ್ತದೆ. ಆಗ ಅಜಾದಿ ತೃತೀಯಾದಿಯಲ್ಲಿ ವಿಕಲ್ಪವಾಗಿ ಪುಲ್ಲಿಂಗದಂತಾಗುವುದರಿಂದ ಪುಲ್ಲಿಂಗದಂತೆ ಒಂದು ರೂಪ. ಪುಲ್ಲಿಂಗದಲ್ಲಿ "ಓಃ ಸುಪಿ" ಸೂತ್ರದಿಂದ ಯಣ್ ಬರುವುದರಿಂದ ಸುಲ್ವಾ ಎಂದಾಗುತ್ತದೆ. ಪುಲ್ಲಿಂಗದಂತೆ ಆಗದಿರುವಾಗ ನುಮ್. ಸುಲುನಾ ಎಂದಾಗುತ್ತದೆ. ಹೀಗೆ ಅಜಾದಿಯಲ್ಲಿ ಚ ॥ ಸುಲ್ವೇ-ಸುಲುನೇ ॥ ಪಂ ಸುಲ್ವಃ-ಸುಲುನಃ ॥ ಷ. ಸುಲ್ವಃ ಸುಲುನಃ ॥ ಸುಲ್ವೋಃ ಸುಲುನೋಃ॥ ಸುಲ್ವಾಂ-ಸುಲುನಾಂ॥ ಸ-ಸುಲ್ವಿ-ಸುಲಿನಿ ॥ ಸುಲ್ವೋಃ-ಸುಲುನೋಃ ॥ ಎಂದು ಎರಡೆರಡು ರೂಪಗಳಾಗುತ್ತವೆ. ಹಲಾದಿಯಲ್ಲಿ ವಿಶೇಷವಿಲ್ಲ.

ಋಕಾರಾಂತ ಧಾತೃ ಶಬ್ದ. (ಸೃಷ್ಟಿಮಾಡುವುದು)

ಧಾತೃ । ಧಾತೃಣೀ । ಧಾತೄಣಿ ॥ ಹೇ ಧಾತಃ-ಹೇ ಧಾತೃ ॥ ಧಾತೄ-ಣಾಮ್ । ಏವಂ ಜ್ಞಾತ್ರಾದಯಃ ॥

ಧಾತೃ ಶಬ್ದದ ಮೇಲೆ ಸು, ಅಮ್, ಬಂದಾಗ "ಸ್ವಮೋರ್ನಪುಂಸಕಾತ್" ಸೂತ್ರದಿಂದ ಲುಕ್. ಧಾತೃ. ಔ ಪರವಾದಾಗ ಶೀ ಭಾವ ನುಮ್. (ವಾರಿ ಶಬ್ದ

ದಂತೇ.) ಧಾತೃನೀ ಎಂದಿರುವಾಗ " ಋವರ್ಣಾನ್ನಸ್ಯ ಣತ್ವಂ ವಾಚ್ಯಮ್ " ವಾರ್ತಿಕ ದಿಂದ ಋಕಾರದ ಪರದಲ್ಲಿ ನಕಾರವಿರುವುದರಿಂದ ಣತ್ವ. ಧಾತೃಣೀ. ಜಸಿನಲ್ಲಿ ನುಮ್, ದೀರ್ಘ, ಣತ್ವ. ಧಾತೃಣಿ ॥ ಸಂಬುದ್ಧಿಯಲ್ಲಿ " ನಲುಮತಾಂಗಸ್ಯ " ಸೂತ್ರ ಪ್ರವರ್ತಿಸದಿರುವಾಗ " ಹ್ರಸ್ವಸ್ಯ ಗುಣಃ " ಸೂತ್ರದಿಂದ ಗುಣ. ಹೇ ಧಾತರ್. " ಖರವಸಾನಯೋರ್ವಿಸರ್ಜನೀಯಃ " ಸೂತ್ರದಿಂದ ರೇಫಕ್ಕೆ ವಿಸರ್ಗ. ಹೇ ಧಾತಃ ಸ್ಥಾನಿವದ್ಭಾವ ಬಾರದಿದ್ದರೆ ಗುಣವಿಲ್ಲ. ಹೇ ಧಾತೃ. ತೃತೀಯಾದಿಯಲ್ಲಿ ಅಜಾದಿ ಪ್ರತ್ಯಯ ಪರವಾದಾಗ " ಇಕೋಚಿ ವಿಭಕ್ತೌ " ಸೂತ್ರದಿಂದ ನುಮಾಗಮ. ತೃ ॥ ಧಾತೃಣಾ–ಧಾತೃಭ್ಯಾಮ್–ಧಾತೃಭಿಃ ॥ ಚ ಧಾತೃಣೇ–ಧಾತೃಭ್ಯಾಮ್–ಧಾತೃಭ್ಯಃ ॥ ಪಂ–ಧಾತೃಣಃ–ಧಾತೃಭ್ಯಾಮ್–ಧಾತೃಭ್ಯಃ ॥ ಷ–ಧಾತೃಣಃ–ಧಾತೃಣೋಃ ॥ ಬಹುವಚನದಲ್ಲಿ ಆಮ್ ಪರವಾದಾಗ ನುಮನ್ನು ಬಾಧಿಸಿ " ನುಮಚಿರತೃಜ್ವದ್ಭಾವೇಭ್ಯೋ ನುಟ್ ಪೂರ್ವವಿಪ್ರತಿಷೇಧೇನ " ವಾರ್ತಿಕದಿಂದ ಆಮಿಗೆ ನುಟ್. ಹಲಾದಿಯಾದುದರಿಂದ ಪುನಃ ನುಟ್ ಬರುವುದಿಲ್ಲ. "ನಾಮಿ" ಸೂತ್ರದಿಂದ ದೀರ್ಘ. ಧಾತೃಣಾಮ್. ॥ ಸ–ಧಾತೃಣಿ–ಧಾತೃಣೋಃ–ಧಾತೃಷು ॥ ಹೀಗೆಯೇ ಜ್ಞಾತೃ ಮುಂತಾದ ಶಬ್ದಗಳ ರೂಪವನ್ನು ತಿಳಿಯಬೇಕು.

ಉಕಾರಾಂತ ಪ್ರದ್ಯು ಶಬ್ದ (ಒಳ್ಳೇ ಆಕಾಶವುಳ್ಳ ದಿನ)

ಪ್ರಕೃಷ್ಟಾ ದ್ಯೌಃ ಯಸ್ಮಿನ್ ತತ್. ಉತ್ಕೃಷ್ಟವಾದ ಆಕಾಶವುಳ್ಳದ್ದು ಪ್ರದ್ಯೋ ಎಂದು ಆದಾಗ ನಪುಂಸಕದಲ್ಲಿ ಹ್ರಸ್ವ ಹೇಳಬೇಕು. ಓಕಾರಕ್ಕೆ ಹ್ರಸ್ವ ಅಕಾರವೂ ಚರಬಹುದು. ಉಕಾರವೂ ಬರಬಹುದು ಅದಕ್ಕೋಸ್ಕರ ನಿಯಮ ಮಾಡುತ್ತಾನೆ.

(ಏಚಿಗೆ ಹ್ರಸ್ವ ಹೇಳುವ ಸೂತ್ರ)

೨೫೧. ಏಚ ಇಗ್ಘ್ರಸ್ವಾದೇಶೇ ॥ ೧-೧-೪೮ ॥

ಆದಿಶ್ಯಮಾನೇಷು ಹ್ರಸ್ವೇಷು ಏಚಃ ಇಗೇವ ಸ್ಯಾತ್ ॥ ಪ್ರದ್ಯು । ಪ್ರದ್ಯುನೀ । ಪ್ರದ್ಯೂನಿ । ಪ್ರದ್ಯುನಾ । ಇತ್ಯಾದಿ ॥ ಪ್ರರಿ । ಪ್ರರಿಣೀ । ಪ್ರರೀಣಿ । ಪ್ರರಿಣಾ । ಏಕದೇಶವಿಕೃತಮನನ್ಯವತ್ ॥ ಪ್ರರಾಭ್ಯಾಮ್ । ಪ್ರರೀಣಾಮ್ ॥ ಸುನು । ಸುನುನೀ । ಸುನೂನಿ । ಸುನುನೇತ್ಯಾದಿ ॥

ಏಚಃ, ಇಕ್, ಹ್ರಸ್ವಾದೇಶೇ ॥ ತ್ರಿಪದಸೂತ್ರ. ಆದಿಶ್ಯತೇ ಇತಿ ಆದೇಶಃ ಆದೇಶಿಸಲ್ಪಡುವುದು. ಹ್ರಸ್ವಶ್ಚಾಸೌ ಆದೇಶಶ್ಚ ಹ್ರಸ್ವಾದೇಶಃ. ತಸ್ಮಿನ್. ನಿರ್ಧಾ

ರಣ ಸಪ್ತಮೀ ಏಕವಚನ ಆರ್ಷ. **ಸೂತ್ರಾರ್ಥ**—ಆದೇಶಿಸಲ್ಪಡುವ (ಆದೇಶ ಹೊಂದುವ) ಹ್ರಸ್ವಗಳ ಪೈಕಿ (ಮಧ್ಯದಲ್ಲಿ) ಏಚಿಗೆ ಇಕ್ಕೇ ಬರುತ್ತದೆ. ಏಚಿಗೆ ಇಕ್ಕೂ ಬರುತ್ತಿರುವಾಗ ಪುನಃ ಇಕ್ ಬರುತ್ತವೆ ಎಂದುದರಿಂದ ನಿಯಮವಾಗುತ್ತದೆ. ಇಕ್ಕೇ ವಿನಾ ಬೇರೆಯಾವುದೂ ಬರುವುದಿಲ್ಲ. ಇದರಿಂದ ಅಕಾರವನ್ನು ನಿವೃತ್ತಿಪಡಿಸಿದಂತಾಯಿತು. ಪ್ರಕೃತ ಪ್ರದ್ಯೋ ಎಂಬಲ್ಲಿ ಏಚಾದ ಓಕಾರಕ್ಕೆ ಹ್ರಸ್ವ ಬರುವುದಾದರೆ ಇಕ್ ಎಂದುದರಿಂದ ಸ್ಥಾನಸಾಮ್ಯದಿಂದ ಉಕಾರವೇ ಬರುತ್ತದೆ. ಆಗ ಪ್ರದ್ಯೋ ಎಂಬುದು ಉಕಾರಾಂತಶಬ್ದವಾಯಿತು. ಮಧುಶಬ್ದದಂತೆ ರೂಪಹೊಂದುತ್ತದೆ. ಅಜಾದಿಯಲ್ಲಿ ನುಮಾಗಮ. ಪ್ರದ್ಯು ಪ್ರದ್ಯುನೀ, ಪ್ರದ್ಯೂನಿ, ಇತ್ಯಾದಿ

ಪ್ರಕೃಷ್ಟೋ ರಾಃ ಯಸ್ಯ ತತ್. ಅಧಿಕಹಣವುಳ್ಳಕುಲ. ಪ್ರರೈ ಎಂದಿರುವಾಗ ಹಿಂದಿನಂತೆ ಹ್ರಸ್ವ ಬಂದರೆ ಸ್ಥಾನಸಾಮ್ಯದಿಂದ ಏಕಾರಕ್ಕೆ ಇಕಾರಬರುತ್ತದೆ. ಪ್ರರಿ ಎಂದು ಇಕಾರಾಂತವಾಗುತ್ತದೆ. ವಾರಿ ಶಬ್ದದಂತೇ ರೂಪತಿಳಿಯಬೇಕು. ಅಜಾದಿಯಲ್ಲಿ ನುಮಾಗಮ. ಭ್ಯಾಮಾದಿ ಹಲಾದಿ ವಿಭಕ್ತಿಪರವಾದಾಗ " ರಾಯೋ ಹಲಿ ". ಸೂತ್ರದಿಂದ ಆತ್ವ ಹೇಳಬೇಕು. ಆದರೆ ರೈ ಶಬ್ದವಿಲ್ಲ. ಅದಕ್ಕೋಸ್ಕರ " ಏಕದೇಶವಿಕೃತಮನನ್ಯವತ್ " ಪರಿಭಾಷೆಯಿಂದ ಆತ್ವಹೇಳುತ್ತಾನೆ. ಸ್ವಲ್ಪವಿಕಾರ ಬಂದುದರಿಂದ ಇದು ಬೇರೆಯಲ್ಲವೆಂದು ತಿಳಿದು ಆತ್ವಹೇಳಬೇಕು. ಪ್ರರಾಭ್ಯಾಮ್-ಪ್ರರಾಭಿಃ ಇತ್ಯಾದಿ. ಹಲಾದಿಯಲ್ಲೆಲ್ಲಾ ಹೀಗೆ ಆತ್ವಬರುತ್ತದೆ. ಷಷ್ಠೀಬಹುವಚನದಲ್ಲಿ ನುಮನ್ನು ಬಾಧಿಸಿ ಪೂರ್ವವಿಪ್ರತಿಷೇಧದಿಂದ ಆಮಿಗೆ ನುಟ್. " ನಾಮಿ " ಸೂತ್ರದಿಂದ ದೀರ್ಘ. ಪ್ರರೀಣಾಮ್ (ಅಟ್‌ಕುಪ್ವಾಙ್–ಸೂತ್ರದಿಂದ ಣತ್ವ) ಪ್ರರಾಸು. ಇಣಿನಪರದಲ್ಲಿಲ್ಲದಿರುವುದರಿಂದ ಷತ್ವವಿಲ್ಲ. ॥

ಶೋಭನಾ ನೌಃ ಯಸ್ಯ ತತ್. ಒಳ್ಳೇ ದೋಣಿಇರುವ ಕುಲ. ಸುನೌಶಬ್ದ. ಇದಕ್ಕೂ ನಪುಂಸಕದಲ್ಲಿ ಹ್ರಸ್ವ ಪ್ರಾಪ್ತವಾದರೆ ಹಿಂದಿನ ನಿಯಮದಿಂದ ಇಕಿನಲ್ಲಿ ಉಕಾರವೇ ಬರುತ್ತದೆ. ಸುನು ಎಂದು ಉಕಾರಾಂತಶಬ್ದವಾಗುತ್ತದೆ. ಮಧುಶಬ್ದದಂತೇ ರೂಪ. ಸುನು–ಸುನುನೀ–ಸುನೂನಿ ಇತ್ಯಾದಿ. ॥ ಅಜಾದಿಯಲ್ಲಿ ನುಮಾಗಮ. ಸುನುನಾ–ಸುನುಭ್ಯಾಮ್–ಸುನುಭಿಃ ಇತ್ಯಾದಿ.

ಹೀಗೆ ಅಜಂತನಪುಂಸಕಲಿಂಗ ಶಬ್ದಗಳು ವಿವೃತವಾಗಿವೆ.

–ಶ್ರೀಃ–

ಶ್ರೀಃ

ಅಥ ಹಲಂತ ಪುಲ್ಲಿಂಗ ಪ್ರಕರಣಮ್ ॥

ಹಕಾರಾಂತ " ಲಿಹ್ " ಶಬ್ದ. (ರುಚಿ ನೋಡುವವನು)

ಲಿಹ=ಆಸ್ವಾದನೇ. ಲಿಹ್ ಧಾತುವಿಗೆ ಕ್ವಿಪ್ ಪ್ರತ್ಯಯ. ಕ್ವಿಪಿನಲ್ಲಿ ಎಲ್ಲವೂ ಲೋಪವಾಗುತ್ತದೆ. ಲಿಹ್ ಉಳಿಯುತ್ತದೆ. ಇದು ಕೃದಂತವಾದುದರಿಂದ " ಕೃತ್ತದ್ಧಿತ ಸಮಾಸಾಶ್ಚ " ಸೂತ್ರದಿಂದ ಪ್ರಾತಿಪದಿಕ ಸಂಜ್ಞೆಯನ್ನು ಹೊಂದುತ್ತದೆ. ವರ್ಣ ಸಮಾಮ್ನಾಯದಲ್ಲಿ ಹೇಳಿದ ವರ್ಣಕ್ರಮವನ್ನನುಸರಿಸಿ ಹಲಂತ ಶಬ್ದಗಳನ್ನು ಹೇಳುತ್ತಾನೆ. ಹಕಾರ ಮೊದಲಿರುವುದರಿಂದ ಹಕಾರಾಂತ ಶಬ್ದ ಮೊದಲು ಹೇಳಿದೆ. ಲಿಹ್+ಸ್ ಎಂದಿರುವಾಗ ಹಲಂತದ ಪರದಲ್ಲಿರುವುದರಿಂದ " ಹಲ್ಙ್ಯಾಭ್ಯೋ ದೀರ್ಘಾತ್–" ಸೂತ್ರದಿಂದ ಸುಲೋಪ. ಲಿಹ್ ಎಂದಿರುವಾಗ ಹಕಾರಕ್ಕೆ ಢಕಾರಾದೇಶ ಹೇಳುತ್ತಾನೆ.

(ಹಕಾರಕ್ಕೆ ಢಕಾರ ಹೇಳುವ ಸೂತ್ರ)

೨೫೨. ಹೋಢಃ ॥ ೮-೨-೩೧ ॥

ಹಸ್ಯ ಢಃ ಸ್ಯಾಜ್ಝಲಿ ಪದಾಂತೇ ಚ । ಲಿಟ್, ಲಿಡ್ ॥ ಲಿಹೌ । ಲಿಹಃ ॥ ಲಿಡ್ಭ್ಯಾಮ್ । ಲಿಟ್ತ್ಸು, ಲಿಟ್ಸು ॥

ಹಃ ಢಃ ॥ ದ್ವಿಪದ ಸೂತ್ರ. " ಝಲೋಝಲಿ " ಸೂತ್ರದಿಂದ " ಝಲಿ " " ಸ್ಕೋಃಸಂಯೋಗಾದ್ಯೋರಂತೇ ಚ " ಸೂತ್ರದಿಂದ " ಅಂತೇ " ಅನುವೃತ್ತಿ. "ಪದಸ್ಯ" ಅಧಿಕಾರ. ಅದಕ್ಕೆ ಅಂತೇ ಎಂಬಲ್ಲಿ ಅನ್ವಯ. ಹಃ ಷಷ್ಠೀ, ಢಃ ಪ್ರಥಮಾ. **ಸೂತ್ರಾರ್ಥ** –ಹಕಾರಕ್ಕೆ ಝಲ್ ಪರದಲ್ಲಿರುವಾಗಲೂ ಪದಾಂತದಲ್ಲಿಯೂ ಢಕಾರಾದೇಶ ಬರುತ್ತದೆ. ಪ್ರಕೃತ ಲಿಹ್ ಶಬ್ದದಲ್ಲಿ ಹಕಾರ ಪದದ ಕೊನೆಯಲ್ಲಿರುವುದರಿಂದ ಅದಕ್ಕೆ ಢಕಾರಾದೇಶ. ಲಿಢ್. ಢಕಾರ ಪದದ ಕೊನೆಯಲ್ಲಿರುವುದರಿಂದ "ಝಲಾಂ ಜಶೋಂತೇ " ಸೂತ್ರದಿಂದ ಜಸ್ತ್ವ ಬಂದರೆ ಲಿಡ್ ಎಂದಾಗುತ್ತದೆ. ಅವಸಾನದಲ್ಲಿ ಡಕಾರರೂಪ ಝಲ್ ಇರುವುದರಿಂದ ಅದಕ್ಕೆ " ವಾವಸಾನೇ " ಸೂತ್ರದಿಂ . ದಚರ್

ಆದೇಶ ಬಂದರೆ ಟಕಾರಬರುತ್ತದೆ. ಲಿಟ್. ಇದು ವಿಕಲ್ಪವಾದುದರಿಂದ ಲಿಡ್ ಎಂದೂ ಆಗುತ್ತೆ. ಇನ್ನು ಅಜಾದಿ ವಿಭಕ್ತಿಪರವಾದಾಗ ಯಾವಕಾರ್ಯವಿಶೇಷವೂ ಬರುವುದಿಲ್ಲ. ಕೇವಲ ವಿಭಕ್ತಿಸೇರಿಸುವುದು ಮಾತ್ರ. ಲಿಹೌ–ಲಿಹಃ ॥ ದ್ವಿ. ಲಿಹಂ ಲಿಹೌ–ಲಿಹಃ ॥ ತೃ–ಲಿಹಾ. ಭ್ಯಾಮ್ ಪರವಾದಾಗ ಲಿಹ್+ಭ್ಯಾಮ್ ಎಂದಿರುವಾಗ ಮೊದಲು " ಹೋಢಃ " ಸೂತ್ರದಿಂದ ಹಕಾರಕ್ಕೆ ಢಕಾರಾದೇಶ. ಝಲ್ ಪರವಾಗಿರುವುದೇ ನಿಮಿತ್ತ. ಲಿಢ್+ಭ್ಯಾಮ್. ಇಲ್ಲಿ " ಸ್ವಾದಿಷ್ವಸರ್ವನಾಮಸ್ಥಾನೇ" ಸೂತ್ರದಿಂದ ಪದಸಂಜ್ಞೆಯಿರುವುದರಿಂದ " ಝಲಾಂ ಜಶೋಂತೇ " ಸೂತ್ರದಿಂದ ಢಕಾರಕ್ಕೆ ಜಸ್ತ್ವ. ಲಿಡ್ಭ್ಯಾಮ್. ಇನ್ನು ಹಲಾದಿಪ್ರತ್ಯಯ ಪರವಾದಾಗ ಹೀಗೆ ಈ ಎರಡು ಸೂತ್ರಗಳಿಂದ ಢತ್ವ, ಜಸ್ತ್ವ ಹೇಳಬೇಕು. ಲಿಡ್ಭಿಃ ॥ ಚ–ಲಿಹೇ–ಲಿಡ್ಭ್ಯಾಮ್-ಲಿಡ್ಭ್ಯಃ ॥ ಪಂ-ಲಿಹಃ–ಲಿಡ್ಭ್ಯಾಮ್-ಲಿಡ್ಭ್ಯಃ ॥ ಷ-ಲಿಹಃ-ಲಿಹೋಃ-ಲಿಹಾಮ್ ॥ ಸ–ಲಿಹಿ–ಲಿಹೋಃ. ಬಹುವಚನದಲ್ಲಿ ಲಿಹ್+ಸು ಎಂದಿರುವಾಗ " ಹೋಢಃ " ಸೂತ್ರದಿಂದ ಹಕಾರಕ್ಕೆ ಢತ್ವ. ಲಿಢ್+ಸು. ಜಸ್ತ್ವ. ಲಿಡ್+ಸು. ಇಲ್ಲಿ ಡಕಾರದಪರದಲ್ಲಿ ಸಕಾರಬಂದುದರಿಂದ " ಡಃ ಸಿ ಧುಟ್ " ಸೂತ್ರದಿಂದ ಸಕಾರಕ್ಕೆ ಧುಟಾಗಮ. ತಟ್ತೊದುದರಿಂದ ಆದ್ಯವಯವವಾಗಿ ಬಂದರೆ ಲಿಡ್+ಧ್‌ಸು. ಧಕಾರಕ್ಕೆ ಖರ್ ಪರವಾದುದರಿಂದ " ಖರಿಚ " ಸೂತ್ರದಿಂದ ಅದಕ್ಕೆ ಚರ್. ಸ್ಥಾನ ಸಾಮ್ಯದಿಂದ ತಕಾರಾದೇಶ. ತಕಾರವನ್ನು ನಿಮಿತ್ತೀಕರಿಸಿ ಧಕಾರಕ್ಕೆ ಚರ್ತ್ವ. ಲಿಡ್+ತ್‌ಸು. ಲಿಟ್+ತ್‌ಸು=ಲಿಟ್ತ್ಸು. ದುಢಾಗಮ ವಿಕಲ್ಪವಾದುದರಿಂದ ಬಾರದಿದ್ದರೆ ಡಕಾರಕ್ಕೆ ಚರ್ತ್ವ ಬಂದು ಲಿಟ್ಸು ಎಂದಾಗುತ್ತದೆ. ಲಿಟ್ತ್ಸು–ಲಿಟ್ಸು ಹೀಗೆ ಎರಡುರೂಪ

ಹಕಾರಾಂತ ದುಹ್ ಶಬ್ದ (ಹಾಲುಕರೆಯುವವನು)

ದುಹ=ಪ್ರಪೂರಣೇ. ಧಾತು. ಕ್ವಿಪ್ ಪ್ರತ್ಯಯ ಬಂದು ದುಹ್‌ಶಬ್ದವಾಗಿದೆ. ದುಹ್+ಸ್ ಎಂದಿರುವಾಗ " ಹೋಢಃ " ಸೂತ್ರದಿಂದ ಹಕಾರಕ್ಕೆ ಢಕಾರ ಪ್ರಾಪ್ತವಾದರೆ ಅಪವಾದವಾಗಿ ಘಕಾರಾದೇಶ ಹೇಳುತ್ತಾನೆ.

(ಹಕಾರಕ್ಕೆ ಘಕಾರ ಹೇಳುವಸೂತ್ರ)

೨೫೩. ದಾದೇರ್ಧಾತೋರ್ಘಃ ॥ ೮-೨-೩೨ ॥

ಝಲಿ ಪದಾಂತೇ ಚ ಉಪದೇಶೇ ದಾದೇರ್ಧಾತೋರ್ಹಸ್ಯ ಘಃ ॥

ದಾದೇಃ, ಧಾತೋಃ, ಘಃ ॥ ತ್ರಿಪದಸೂತ್ರ. " ಝಲೋಝಲಿ " ಸೂತ್ರದಿಂದ " ಝಲಿ " " ಸ್ಕೋಃಸಂಯೋ–" ಸೂತ್ರದಿಂದ " ಅಂತೇ " ಅನುವೃತ್ತಿ " ಪದಸ್ಯ "

ಅಧಿಕಾರ. ಸೂತ್ರದಲ್ಲಿರುವ " ಧಾತೋಃ " ಎಂಬಪದವು ಆವೃತ್ತವಾಗುತ್ತಿದೆ. ಎರಡುಬಾರಿ ಹೇಳಿಕೊಳ್ಳಬೇಕು ಒಂದು " ಧಾತೋಃ " ಎಂಬುದಕ್ಕೆ " ಹೋಡ್ಲುಃ " ಸೂತ್ರದಿಂದ ಅನುವೃತ್ತವಾದ ಹಃ ಎಂಬಲ್ಲಿ ಅನ್ವಯ. ಧಾತುವಿನ ಅವಯವವಾದ ಹಕಾರಕ್ಕೆ ಎಂದರ್ಥವಾಗುತ್ತದೆ. ಇನ್ನೊಂದು " ಧಾತೋಃ " ಪದಕ್ಕೆ ದಾದೇಃ ಎಂಬಲ್ಲಿ ಅನ್ವಯ. ದಃ ಆದಿಃ ಯಸ್ಯಸಃ, ದಾದಿಃ. ದಕಾರವೇ ಆದಿಯಾಗಿರುವ ಎಂದರ್ಥ. ಧಾತುವೆಂದು ಹಿಂದಿನಿಂದಲೇ ಸಿಕ್ಕುತ್ತಿರುವಾಗ ತಿರುಗಿ ಹೇಳಿರುವುದರಿಂದ ಉಪದೇಶಕಾಲದಲ್ಲಿಯೇ ದಕಾರಾದಿಯಾಗಿರಬೇಕೆಂದು ಸೂಚಿಸುತ್ತದೆ. ಕೆಲವು ಧಾತುಗಳು ಮೊದಲು ಪಾಣಿನಿಯಿಂದ ಉಚ್ಚರಿಸುವಾಗ ದಕಾರಾದಿಯಾಗಿಮ್ದ ಕೊನೆಗೆ ಕಾರ್ಯಾಂತರ ಹೊಂದಿ ದಕಾರಾದಿಯಾಗದೇ ಇರುತ್ತವೆ. ಇನ್ನು ಕೆಲವು ಪಾಣಿನಿಯ ಉಪದೇಶಕಾಲದಲ್ಲಿ ದಕಾರಾದಿಯಾಗದೇ ಆಮೇಲೆ ಕಾರ್ಯಾಂತರದಿಂದ ದಕಾರಾದಿ ಯಾವ ಧಾತುವಾಗುತ್ತವೆ. ಇವೆರಡರಲ್ಲಿ ಮೊದಲನೆಯದಕ್ಕೆಮಾತ್ರ ಈ ಕಾರ್ಯ ಬರಬೇಕೆಂದು ಉಪದೇಶಕಾಲದಲ್ಲಿ ದಕಾರಾದಿಯಾಗಿರಬೇಕೆಂದು ಹೇಳಿವೆ.

ಸೂತ್ರಾರ್ಥ.—ಉಪದೇಶಕಾಲದಲ್ಲಿ ದಕಾರಾದಿಯಾದ ಧಾತುವಿನ ಹಕಾರಕ್ಕೆ ಝಲ್ ಪರವಾದಾಗ ಅಥವಾ ಪದಾಂತದಲ್ಲಿ ಘಕಾರಾದೇಶ ಬರುತ್ತದೆ. ಪ್ರಕೃತ್ತ ದುಹ್ ಎಂಬುದು ಉಪದೇಶಕಾಲದಲ್ಲಿಯೇ ದಕಾರಾದಿಯಾಗಿದೆ. ಇದರ ಹಕಾರ ಪದಾಂತದಲ್ಲಿರುವುದರಿಂದ ಅದಕ್ಕೆ ಘಕಾರಾದೇಶ. ಸುವಿಗೆ " ಹಲ್ಙ್ಯಾಭ್ಯೋ- " ಸೂತ್ರದಿಂದ ಲೋಪ. ದುಘ್ ಎಂದಿರುವಾಗ ಆದಿಯ ದಕಾರಕ್ಕೆ ಧಕಾರಾದೇಶ ಹೇಳುತ್ತಾನೆ.

(ಧಾತುವಿನ ಬಶಿಗೆ ಭಷ್ ಹೇಳುವ ಸೂತ್ರ)

೨೫೪. ಏಕಾಚೋ ಬಶೋ ಭಷ್ ಝಷಂತಸ್ಯ ಸ್ಧ್ವೋಃ ॥

೮-೨-೩೭ ॥

ಧಾತ್ವಯವಸ್ಯೈಕಾಚೋ ಝಷಂತಸ್ಯ ಬಶೋ ಭಷ್ ಸೇ ಧ್ವೇ ಪದಾಂತೇ ಚ ॥ ಧುಕ್, ಧುಗ್ । ದುಹೌ ದುಹಃ । ಧುಗ್ಭ್ಯಾಮ್। ಧುಕ್ಷು ॥

ಏಕಾಚಃ, ಬಶಃ, ಭಷ್, ಝಷಂತಸ್ಯ, ಸ್ಧ್ವೋಃ ॥ ಐದು ಪದವುಳ್ಳ ಸೂತ್ರ. ಏಕಃ ಅಚ್ ಯಸ್ಯ ಸಃ ಏಕಾಚ್. ತಸ್ಯ ಏಕಾಚಃ, ಒಂದು ಅಚ್ ಇರುವ ಸಮುದಾಯಕ್ಕೆ ಎಂದರ್ಥ. ಬಶಃ ಸ್ಥಾನ ಷಷ್ಠೀ. ಬಶ್‌ನ ಸ್ಥಾನಕ್ಕೆ ಎಂದರ್ಥ. ಸ್ಚ ಧ್ವಜ ಸ್ಧ್ವ. ತಯೋಃ ಸ್ಧ್ವೋಃ. ಸಕಾರ, ಧ್ವಶಬ್ದ ಪರವಾದಾಗ ಎಂದರ್ಥ. " ದಾದೇರ್ಧಾತೋರ್ಘಃ " ಸೂತ್ರದಿಂದ " ಧಾತೋಃ " ಅನುವೃತ್ತವಾಗುತ್ತದೆ.

ಪಕ್ಷಚಿನಲ್ಲಿ ಅದಕ್ಕೆ ಅನ್ವಯ. **ಸೂತ್ರಾರ್ಥ**—ಧಾತುವಿನ ಅವಯವವಾದ ಝಷ್ ಹೊನೆಯಲ್ಲಿರುವ ಏಕಾಚುಳ್ಳ ಶಬ್ದದಲ್ಲಿರುವ ಬಶ್ ವರ್ಣಗಳಿಗೆ ಸಕಾರ, ಧ್ವ ಎಂಬುದು ಪರವಾದಾಗಲೂ ಪದಾಂತದಲ್ಲಿಯೂ ಭಷ್ ವರ್ಣ ಆದೇಶವಾಗಿ ಬರುತ್ತದೆ. " ಪದಸ್ಯ " ಅಧಿಕಾರ. ಅಂತೇ ಅನುವೃತ್ತಿ. ಪ್ರಕೃತ ಪದಾಂತ ವಿಷಯವಾಗಿದೆ. ಧಾತುವಿನ ಅವಯವವಾದ ಏಕಾಚೆಂದರೆ ದುಘ್. ಇದು ಏಕಾಚಾಗಿ ಝಷಂತವಾಗಿದೆ. ಘಕಾರ ಝಷ್. ಇದರ ಬಶ್ ದಕಾರ. ಅದಕ್ಕೆ ಭಷ್ ಅಂದರೆ ಸ್ಥಾನ ಸಾಮ್ಯದಿಂದ ಧಕಾರ ಬಂದರೆ ಧುಘ್ ಎಂದಾಗುತ್ತದೆ. ಪದಾಂತ ಘಕಾರಕ್ಕೆ ಹಿಂದಿನಂತೆ ಜಸ್ತ್ವದಿಂದ ಗಕಾರಾದೇಶ. ಅದಕ್ಕೆ ವಿಕಲ್ಪವಾಗಿ " ವಾವಸಾನೇ " ಸೂತ್ರದಿಂದ ಚರ್ತ್ವ ಬಂದರೆ ಕಕಾರಾದೇಶ. ಧುಕ್-ಧುಗ್. ಅಜಾದಿಯಲ್ಲಿ ಪ್ರತ್ಯಯ ಸೇರಿಸುವುದು ಮಾತ್ರ. ದುಹೌ-ದುಹಃ ॥ ದ್ವಿ-ದುಹಂ-ದುಹೌ-ದುಹಃ ॥ ತೃ-ದುಹಾ. ಭ್ಯಾಮಾದಿಗಳು ಪರವಾದಾಗ " ದಾದೇರ್ಧಾತೋರ್ಘಃ " ಸೂತ್ರದಿಂದ ಹಕಾರಕ್ಕೆ ಘಕಾರ. " ಏಕಾಜ್ಬೋ ಬಶೋ- " ಸೂತ್ರದಿಂದ ದಕಾರಕ್ಕೆ ಧಕಾರ. ಧುಘ್+ಭ್ಯಾಮ್ ಎಂದಿರುವಾಗ " ಝಲಾಂ ಜಶೋಂತೇ " ಸೂತ್ರದಿಂದ ಘಕಾರಕ್ಕೆ ಜಸ್ತ್ವ. ಧುಗ್ಭ್ಯಾಮ್-ಧುಗ್ಭಿಃ । ಚ-ದುಹೇ-ಧುಗ್ಭ್ಯಾಮ್ ಧುಗ್ಭ್ಯಃ ॥ ಪಂ-ದುಹಃ-ದುಹೋಃ-ಧುಕ್ಷು. ದುಹ್+ಸು ಎಂದಿರುವಾಗ ಹಿಂದಿನಂತೆ ಘಕಾರ, ಧಕಾರ ಆದೇಶ. ಧುಘ್+ಸು ಎಂದಾಗ ಜಸ್ತ್ವ. ಧುಗ್+ಸು. " ಖರಿಚ " ಸೂತ್ರದಿಂದ ಗಕಾರಕ್ಕೆ ಕಕಾರಾದೇಶ. ಧುಕ್+ಸು. " ಆದೇಶಪ್ರತ್ಯಯಯೋಃ " ಸೂತ್ರದಿಂದ ಸಕಾರಕ್ಕೆ ಷಕಾರಾದೇಶ. ಧುಕ್+ಷು. ಕ ಷ ಸೇರಿದರೆ ಕ್ಷ ಆಗುತ್ತದೆ. ಹೀಗೆ ಧುಕ್ಷು ಎಂದಾಗಿದೆ.

ಹಕಾರಾಂತ ದ್ರುಹ್ ಶಬ್ದ. (ದ್ರೋಹಮಾಡುವವನು)

ದ್ರುಹ ಜಘಾಂಸಾಯಾಮ್. ಧಾತು. ಕ್ವಿಪ್ ಪ್ರತ್ಯಯಬಂದರೆ ದ್ರುಹ್ ಎಂದಾಗುತ್ತದೆ. ಇದು ದಕಾರಾದಿಯಾದುದರಿಂದ ನಿತ್ಯವಾಗಿ ಹಿಂದಿನಂತೆ ಹಕಾರಕ್ಕೆ ಘತ್ವಬಂದೆ ವಿಕಲ್ಪ ಹೇಳುತ್ತಾನೆ.

(ವಿಕಲ್ಪವಾಗಿ ಹಕಾರಕ್ಕೆ ಘಕಾರ ಹೇಳುವ ಸೂತ್ರ)

೨೫೫. ವಾ ದ್ರುಹಮುಹ ಷ್ಣುಹ ಷ್ಣಿಹಾಮ್ ॥ ೮-೨-೩೩ ॥

ಏಷಾಂ ಹಸ್ಯ ವಾ ಘಃ ಸ್ಯಾತ್ ಝಲಿ ಪದಾಂತೇ ಚ ॥ ಧ್ರುಕ್-ಧ್ರುಗ್ । ಧ್ರುಟ್-ಧ್ರುಡ್ । ದ್ರುಹೌ-ದ್ರುಹಃ । ಧ್ರುಗ್ಭ್ಯಾಮ್,

ಧ್ರುಡ್‌ಭ್ಯಾಮ್ ॥ ಧ್ರುಕ್ಷು, ಧ್ರುಟ್ತ್ಸು ಧ್ರುಟ್ಸು ॥ ಏವಂ ಮುಕ್, ಮುಗ್ ಇತ್ಯಾದಿ ॥

ತ್ರಿಪದಸೂತ್ರ. "ದ್ರುಹಶ್ಚ, ಮುಹಶ್ಚ, ಷ್ಣುಹಶ್ಚ, ಷ್ಣಿಹ್ ಚ, ಧ್ರುಷ್ಣು ಮುಹಷ್ಣುಷ್ಣಿಹಃ. ತೇಷಾಮ್ ದ್ರುಹ....ಷ್ಣಿಹಾಮ್" ಹಿಂದಿನಂತಿ ಪದಾಂತೇ ಆನುವೃತ್ತಿ. **ಸೂತ್ರಾರ್ಥ**—ದ್ರುಹ್. ಮುಹ್, ಷ್ಣುಹ್ ಷ್ಣಿಹ್ ಈ ನಾಲ್ಕರ ಹಕಾರಕ್ಕೆ ಝಲ್‌ಪರವಾದಾಗಲೂ ಪದಾಂತದಲ್ಲಿಯೂ ವಿಕಲ್ಪವಾಗಿ ಘಕಾರ ಬರುತ್ತದೆ. ಹಿಂದಿನಸೂತ್ರಗಳಿಂದಲೇ ಹಃ, ಘಃ ಅನುವೃತ್ತಿ. ಪ್ರಕೃತ ಪದಾಂತ ವಾದುದರಿಂದ ದ್ರುಹಿನ ಹಕಾರಕ್ಕೆ ಘ ಬಂದರೆ ದ್ರುಘ್ ಎಂದಾಗುತ್ತದೆ, "ಏಕಾಜ್ಜಃ" (ಸೂ 255) ಸೂತ್ರದಿಂದ ದಕಾರಕ್ಕೆ ಧಕಾರಾದೇಶ. ಘಕಾರಕ್ಕೆ ಹಿಂದಿನಂತೆ ಜಸ್ತ್ವ. ವಿಕಲ್ಪ ಚರ್ತ್ವ. ಧ್ರುಕ್–ಧ್ರುಗ್. ಹಕಾರಕ್ಕೆ ಘಕಾರಬಾರದಿದ್ದಲ್ಲಿ ಸಾಮಾನ್ಯ ಸೂತ್ರವಾದ "ಹೋಢಃ" ಸೂತ್ರದಿಂದ ಢಕಾರಾದೇಶ. ಹಿಂದಿನಂತೆಯೇ ಈಗಲೂ "ಏಕಾಜಃ"—ಸೂತ್ರದಿಂದ ಆದಿದಕಾರಕ್ಕೆ ಧಕಾರಾದೇಶ. ಢಕಾರಕ್ಕೆ ಜಸ್ತ್ವ. ವಿಕಲ್ಪಚರ್ತ್ವ. ಧ್ರುಟ್–ಧ್ರುಡ್. ಹೀಗೆ ಪ್ರಥಮಾ ಸುವಿನಲ್ಲಿ ನಾಲ್ಕು ರೂಪ. ಅಜಾದಿಯಲ್ಲಿ ಕಾರ್ಯವಿಲ್ಲ. ದ್ರುಹೌ—ದ್ರುಹಃ ॥ ಲಿಹ್ ಶಬ್ದದಂತೆ ಭ್ಯಾಮಾದಿಗಳು ಪರವಾದಾಗ ಘಕಾರಬಂದರೆ ದ್ರುಹ್‌ಶಬ್ದದಂತೆ ರೂಪ. ಧ್ರುಗ್ಭ್ಯಾಮ್. ಢಕಾರ ಬಂದರೆ ಧ್ರುಡ್ಭ್ಯಾಮ್. ಹೀಗೆ ಎರಡೆರಡುರೂಪ. ಸಪ್ತಮೀ ಬಹುವಚನದಲ್ಲಿ ಘಕಾರಬಂದರೆ ದುಹ್‌ನಂತೇರೂಪ. ಧ್ರುಕ್ಷು. ಢಕಾರಬಂದಾಗ ಲಿಹ್‌ಶಬ್ದದಲ್ಲಿ ಹೇಳಿದಂತೆ ವಿಕಲ್ಪವಾಗಿ " ಡಃ ಸಿಧುಟ್ " ಸೂತ್ರದಿಂದ ಧುಟಾಗಮ. ಧ್ರುಟ್ತ್ಸು–ಧ್ರುಟ್ಸು. ಹೀಗೆಯೇ ಮುಹ್, ಶಬ್ದರೂಪ. ಏಕಾಜಃ "—ಸೂತ್ರಕ್ಕೆ ಇಲ್ಲಿ ಪ್ರವೃತ್ತಿ ಇಲ್ಲ. ಮುಕ್—ಮುಗ್—ಮುಟ್—ಮುಡ್. ಭ್ಯಾಮಾದಿಗಳಲ್ಲಿ ಮುಗ್ಭ್ಯಾಮ್–ಮುಡ್ಭ್ಯಾಮ್. ಹೀಗೆ ಎರಡುರೂಪ. ಸಪ್ತಮೀ ಬಹುವಚನದಲ್ಲಿ ಮುಕ್ಷು–ಮುಟ್ತ್ಸು–ಮುಟ್ಸು. ಎಂದಾಗುತ್ತದೆ. ಮುಕ್–ಮೋಹಗೊಂಡವ.

ಷ್ಣುಹ, ಷ್ಣಿಹ ಈ ಎರಡುಧಾತುಗಳಿಗೆ ಕ್ವಿಪ್ ಬಂದರೆ ಷ್ಣುಹ್–ಷ್ಣಿಹ್ ಶಬ್ದವಾಗುತ್ತದೆ. ಇವುಗಳ ಹಕಾರಕ್ಕೂ ಘತ್ವವಿಕಲ್ಪವಾದುದರಿಂದ ಪ್ರಥಮಾಸುವಿನಲ್ಲಿ ನಾಲ್ಕುರೂಪ. ಆದಿಯ ಷಕಾರಕ್ಕೆ ಸಕಾರಾದೇಶಹೇಳುತ್ತಾನೆ.

(ಧಾತ್ವಾದಿಷಕಾರಕ್ಕೆ ಸಕಾರಹೇಳುವಸೂತ್ರ)

೨೫೬. ಧಾತ್ವಾದೇಃ, ಷಃ, ಸಃ ॥ ೬-೧-೬೪ ॥

ಧಾತೋರಾದೇಃ ಷಸ್ಯ ಸಃ ಸ್ಯಾತ್। ಸ್ನುಕ್–ಸ್ನುಗ್–ಸ್ನುಟ್–ಸ್ನುಡ್। ಏವಂ ಸ್ನಿಕ್–ಸ್ನಿಗ್–ಸ್ನಿಟ್–ಸ್ನಿಡ್ ॥ ಇತ್ಯಾದಿ ॥

ತ್ರಿಪದಸೂತ್ರ. ಷಃ ಷಷ್ಠೀ. ಸಃ ಪ್ರಥಮಾ. ತಲ್ಲಿ ಅಕಾರಉಚ್ಚಾರಣಾರ್ಥ. ಅನುವೃತ್ತಿ ಯಾವುದೂ ಇಲ್ಲ. **ಸೂತ್ರಾರ್ಥ**–ಧಾತುವಿನ ಆದಿಯಲ್ಲಿರುವ ಷಕಾರಕ್ಕೆ ಸಕಾರಾದೇಶ ಬರುತ್ತದೆ. ಪ್ರಕೃತ ಎರಡು ಧಾತುಗಳ ಆದಿಯಲ್ಲಿರುವ ಷಕಾರಕ್ಕೆ ದರಿಂದ ಅದಕ್ಕೆ ಸಕಾರ ಬರುತ್ತದೆ. ಸಕಾರ ಬಂದಾಗ ಣಕಾರ ಸ್ಥಾನದಲ್ಲಿ ನಕಾರ ಹೇಳಬೇಕು. ಷಕಾರವಿದ್ದುದರಿಂದ ಣಕಾರವಿತ್ತು. ತನ್ನ ನಿಮಿತ್ತಹೋದರೆ ತಾನೂ ಹೋಗುತ್ತದೆ. ಸ್ನು, ಸ್ನಿ ಎಂದಾಗುತ್ತದೆ. ಇಂದಿನಂತೆ ಪ್ರಥಮಾ ಸುವಿನಲ್ಲಿ ನಾಲ್ಕುರೂಪ. ಸಪ್ತಮೀ ಸುವಿನಲ್ಲಿ ಮೂರುರೂಪ. ಭ್ಯಾಮಾದಿಗಳಲ್ಲಿ ಎರಡು ರೂಪ. ಸ್ನುಕ್ = ಪಾಂತಿಮಾಡುವವ. ಸ್ನಿಕ್ = ಸ್ನೇಹಿತ.

ಹಕಾರಾಂತ "ವಿಶ್ವವಾಹ್" ಶಬ್ದ. (ಪ್ರಪಂಚಧರಿಸಿದವ)

ವಿಶ್ವಂ ವಹತಿ ಇತಿ ವಿಶ್ವವಾಹ್. (ಪ್ರಪಂಚವನ್ನು ಧರಿಸುವವ) ವಹ್ ಧಾತುವಿಗೆ ಣ್ವಿಪ್ರತ್ಯಯಬಂದು ವಿಶ್ವವಾಹ್ ಎಂದಾಗಿದೆ. ಪ್ರಥಮಾ ಸುವಿನಲ್ಲಿ "ಹೋಢಃ" ಸೂತ್ರದಿಂದ ಹಕಾರಕ್ಕೆ ಢಕಾರಾದೇಶ. ಜಸ್ತ್ವ ವಿಕಲ್ಪಚರ್ತ್ವ. ಹೀಗೆ ಎಲ್ಲಾ ಶಬ್ದಗಳಲ್ಲಿಯೂ ಸುವಿಗೆ "ಹಲ್‌ಙ್ಯಾಭ್ಯೋ ದೀರ್ಘಾತ್—" ಸೂತ್ರದಿಂದ ಲೋಪವೆಂದು ತಿಳಿಯಬೇಕು. ವಿಶ್ವವಾಟ್-ವಿಶ್ವವಾಡ್. ವಿಶ್ವವಾಹೌ+ವಿಶ್ವವಾಹಃ ॥ ದ್ವಿ. ವಿಶ್ವವಾಹಮ್–ವಿಶ್ವವಾಹೌ. ವಿಶ್ವವಾಹ್+(ಶ್) ಅಸ್ ಎಂದಿರುವಾಗ ವಕಾರಕ್ಕೆ ಸಂಪ್ರಸಾರಣ ಹೇಳಲು ಮೊದಲು ಸಂಪ್ರಸಾರಣ ಸಂಜ್ಞೆಯನ್ನು ವಿವರಿಸುತ್ತಾನೆ.

(ಸಂಪ್ರಸಾರಣ ಸಂಜ್ಞೆಹೇಳುವಸೂತ್ರ)

೨೫೭. ಇಗ್ಯಣಃ ಸಂಪ್ರಸಾರಣಮ್ ॥ ೧-೧-೪೫ ॥

ಯಣಃ ಸ್ಥಾನೇ ಪ್ರಯುಜ್ಯಮಾನೋ ಯ ಇಕ್ ಸ ಸಂಪ್ರಸಾರಣ ಸಂಜ್ಞಃ ಸ್ಯಾತ್ ॥

ಇಕ್, ಯಣಃ ಸಂಪ್ರಸಾರಣಮ್ ॥ ತ್ರಿಪದಸೂತ್ರ. ಯಣಃ ಸ್ಥಾನಷಷ್ಠೀ. **ಸೂತ್ರಾರ್ಥ**–ಯಣಿನಸ್ಥಾನದಲ್ಲಿ ಪ್ರಯೋಗಿಸಲ್ಪಡುವ ಇಕ್ಕಿಗೆ " ಸಂಪ್ರಸಾರಣ"ವೆಂದು ಹೆಸರು. ಯ, ವ, ರ, ಲಗಳ ಸ್ಥಾನದಲ್ಲಿ ಬರುವ ಇ ಉ ಋ ೪ ಗಳಿಗೆ ಸಂಪ್ರಸಾರಣವೆಂಬ ಸಂಜ್ಞೆ ಬರುತ್ತದೆ.

(ವಾಹ್ ಶಬ್ದಕ್ಕೆ ಸಂಪ್ರಸಾರಣ ಹೇಳುವಸೂತ್ರ)

೨೫೮. ವಾಹ ಊಠ್ ॥ ೬-೪-೧೩೨ ।

ಭಸ್ಯ ವಾಹಃ ಸಂಪ್ರಸಾರಣಮೂಠ್ ॥

ವಾಹಃ, ಊಠ್ । ದ್ವಿಪದಸೂತ್ರ. "ಭಸ್ಯ" ಅಧಿಕಾರ. "ವಸೋಃ ಸಂಪ್ರಸಾರಣಮ್" ಸೂತ್ರದಿಂದ "ಸಂಪ್ರಸಾರಣಮ್" ಅನುವೃತ್ತಿ. ಇದಕ್ಕೆ ಊಠ್ ಶಬ್ದದಲ್ಲಿ ಅನ್ವಯ. ಯಕಾರಾದಿ.ಅಜಾದಿ ಪ್ರತ್ಯಯಪರವಾದಾಗ ಪೂರ್ವಕ್ಕೆ ಭಸಂಜ್ಞಾ ಹೇಳಿದೆ. **ಸೂತ್ರಾರ್ಥ**–ಭಸಂಜ್ಞೆಯಿರುವ ವಾಹಿಗೆ (ವಾಹ್ ಶಬ್ದಕ್ಕೆ) ಸಂಪ್ರಸಾರಣವಾದ ಊಠ್ ಬರುತ್ತದೆ. ಸಂಪ್ರಸಾರಣ ಊಠೆಂದುದರಿಂದ ಯಣಿನಲ್ಲಿ ಸೇರಿದ ವಕಾರಕ್ಕೆಂತೇ ತಿಳಿಯಬೇಕು. ಸಂಪ್ರಸಾರಣ ಊಠೆಂದು ಹೇಳದಿದ್ದರೆ "ಅಲೋಂತ್ಯಸ್ಯ" ಪರಿಭಾಷೆಯಿಂದ ಅಂತ್ಯವಾದ ಹಕಾರಕ್ಕೆ ಬರುತ್ತಿತ್ತು. ವಕಾರಕ್ಕೆ ಅಜಾದಿ ಪ್ರತ್ಯಯಪರವಾದುದರಿಂದ ಭಸಂಜ್ಞಾನಿಮಿತ್ತ ಊಠ್ ಬಂದರೆ ವಿಶ್ವ ಊ+ಆಹ್+ಅಸ್ ಎಂದಾಗುತ್ತದೆ. ಈಗ ಪೂರ್ವರೂಪ ಹೇಳುತ್ತಾನೆ.

(ಸಂಪ್ರಸಾರಣ ಬಂದಾಗ ಪೂರ್ವರೂಪ ಹೇಳುವ ಸೂತ್ರ)

೨೫೯. ಸಂಪ್ರಸಾರಣಾಚ್ಚ ॥ ೬-೧-೧೦೮ ॥

ಸಂಪ್ರಸಾರಣಾದಚಿ ಪೂರ್ವರೂಪಮೇಕಾದೇಶಃ । "ಏತ್ಯೇಧತ್ಯೂಠ್ಸು" ಇತಿ ವೃದ್ಧಿಃ । ವಿಶ್ವೌಹಃ । ವಿಶ್ವೌಹೇತ್ಯಾದಿ ॥

ಸಂಪ್ರಸಾರಣಾತ್, ಚ ॥ ದ್ವಿಪದ ಸೂತ್ರ. "ಇಕೋಯಣಚಿ" ಸೂತ್ರದಿಂದ "ಅಚಿ" "ಅಮಿ ಪೂರ್ವಃ" ಸೂತ್ರದಿಂದ "ಪೂರ್ವ." ಎಂಬ ಪದಗಳು ಅನುವೃತ್ತವಾಗುತ್ತವೆ. "ಏಕಃ ಪೂರ್ವಪರಯೋಃ" ಅಧಿಕಾರ. **ಸೂತ್ರಾರ್ಥ**–ಸಂಪ್ರಸಾರಣದ ಪರದಲ್ಲಿ ಅಚ್‌ಬಂದಾಗ ಪೂರ್ವಪರಸ್ಥಾನಕ್ಕೆ (ಸಂಪ್ರಸಾರಣ ಮತ್ತು ಅಚಿಗೆ) ಪೂರ್ವರೂಪವು ಏಕಾದೇಶವಾಗಿ ಬರುತ್ತದೆ. ವಿಶ್ವ+ಊ+ಆಹ್+ಅಸ್ ಎಂದಿರುವಾಗ ಸಂಪ್ರಸಾರಣ ಊ, ಅಚ್ ಆಕಾರ. ಊಕಾರಾಕಾರ ಇವೆರಡಕ್ಕೂ ಪೂರ್ವದ ರೂಪವಾದ ಊಕಾರವೇ ಬಂದರೆ ವಿಶ್ವ+ಊಹ್+ಅಸ್ ಎಂದಾಗುತ್ತದೆ. ಇಲ್ಲಿ ಅಕಾರಕ್ಕೆ ಊಠ್ ಪರವಾದುದರಿಂದ ಗುಣವನ್ನು ಬಾಧಿಸಿ "ಏತ್ಯೇಧತ್ಯೂಠ್ಸು" ಸೂತ್ರದಿಂದ ವೃದ್ಧಿ. ಆ+ಊಗಳಿಗೆ ಔಕಾರ ವೃದ್ಧಿ. ವಿಶ್ವೌಹಸ್. ಸಕಾರಕ್ಕೆ ರುತ್ವವಿಸರ್ಗ. ವಿಶ್ವೌಹಃ ಎಂದಾಗುತ್ತದೆ. ಇನ್ನು ತೃತೀಯಾದಿಗಳಲ್ಲಿ ಅಜಾದಿ ಪ್ರತ್ಯಯ ಪರವಾದಾಗ ಭ ಸಂಜ್ಞೆಯಿರುವುದರಿಂದ ವಾಹಿನ ವಕಾರಕ್ಕೆ

ಊಠ್. **ಪೂರ್ವರೂಪ**, ವೃದ್ಧಿ ಬರುತ್ತವೆ. ತೃ–ವಿಶ್ವೌಹಾ. ವಿಶ್ವವಾಹ್+ಭ್ಯಾಮ್ ಎಂದಿರುವಾಗ "ಹೋಢಃ" ಸೂತ್ರದಿಂದ ಹಕಾರಕ್ಕೆ ಢತ್ವ. ಜಸ್ತ್ವದಿಂದ ಅದಕ್ಕೆ ಡಕಾರಾದೇಶ. ವಿಶ್ವವಾಡ್ಭ್ಯಾಮ್. ವಿಶ್ವವಾಡ್ಭಿಃ ॥ ಚ–ವಿಶ್ವೌಹೇ–ವಿಶ್ವವಾಡ್ಭ್ಯಾಮ್–ವಿಶ್ವವಾಡ್ಭ್ಯಃ ॥ ಪಂ–ವಿಶ್ವೌಹಃ–ವಿಶ್ವವಾಡ್ಭ್ಯಾಮ್ ವಿಶ್ವವಾಡ್ಭ್ಯಃ ॥ ಷ–ವಿಶ್ವೌಹಃ–ವಿಶ್ವೌಹೋಃ–ವಿಶ್ವೌಹಾಮ್ ॥ ಸ–ವಿಶ್ವೌಹಿ–ವಿಶ್ವೌಹೋಃ–ವಿಶ್ವವಾಟ್ಸು–ವಿಶ್ವವಾಟ್ಸು ॥

ಹಕಾರಾಂತ ಅನಡುಹ್ ಶಬ್ದ. (ಎತ್ತು)

ಅನಡುಹ್+ಸ್ ಎಂದಿರುವಾಗ ಸು ಆದಿ ಐದುಸರ್ವನಾಮಸ್ಥಾನವಾದುದರಿಂದ ಅದುಪರವಾದಾಗ ಆಮ್ ಹೇಳುತ್ತಾನೆ.

(ಚತುರ್ ಅನುಡುಹ್‌ಗಳಿಗೆ ಆಮ್ ಹೇಳುವಸೂತ್ರ.)

೨೬೦. ಚತುರನಡುಹೋರಾಮುದಾತ್ತಃ ॥ ೭-೧-೯೮ ॥

ಅನಯೋರಾಮ್ ಸ್ಯಾತ್ಸರ್ವನಾಮಸ್ಥಾನೇ ಪರೇ ॥

ಚತುರನಡುಹೋಃ, ಆಮ್, ಉದಾತ್ತಃ ॥ ತ್ರಿಪದಸೂತ್ರ. "ಚತುರ್ ಚ ಅನುಡುಹ್ ಚ. ಚತುರನಡುಹೌ–ತಯೋಃ ಚತುರನಡುಹೋಃ" "ಇತೋತ್ಸರ್ವನಾಮಮಸ್ಥಾನೇ" ಸೂತ್ರದಿಂದ "ಸರ್ವನಾಮಸ್ಥಾನೇ" ಎಂಬುದಕ್ಕೆ ಅನುವೃತ್ತಿ. **ಸೂತ್ರಾರ್ಥ**—ಚತುರ್, ಅನುಡುಹ್ ಶಬ್ದಗಳಿಗೆ ಸರ್ವನಾಮಪರವಾದಾಗ ಆಮ್. ಬರುತ್ತದೆ. ಅದು ಉದಾತ್ತಸ್ವರದಿಂದ ಕೂಡಿರುತ್ತದೆ. ಸ್ವರಕ್ಕೆ ವೇದದಲ್ಲಿ ಪ್ರಯೋಜನ. ಪ್ರಕೃತ ಅನುಡುಹ್‌ಶಬ್ದಕ್ಕೆಸರ್ವನಾಮಸ್ಥಾನಪರವಾದುದರಿಂದ ಆಮ್. ಆಮಿನಲ್ಲಿ ಮಕಾರ "ಹಲಂತ್ಯಮ್" ಸೂತ್ರದಿಂದ ಇತ್ ಸಂಜ್ಞೆಹೊಂದಿ ಲೋಪವಾಗುತ್ತದೆ. ಮಿತ್ತಾದುದರಿಂದ "ಮಿದಚೋಂತ್ಯಾತ್ಪರಃ" ಪರಿಭಾಷೆಯಿಂದ ಅನಡುಹ್ ಶಬ್ದದ ಅಂತ್ಯವಾದ ಅಚಿನ ಪರಕ್ಕೆ ಅದರ ಅವಯವವಾಗಿ ಬರುತ್ತದೆ. ಅಂತ್ಯ ಅಚ್ ಉಕಾರ. ಅದರಪರವಾಗಿ ಬಂದರೆ ಅನಡು+ಆಹ್+ಸ್ ಎಂದಾಗುತ್ತದೆ. ಯಣ್. ಅನಡ್ವಾಹ್+ಸ್ ಎಂದಿರುವಾಗ ನುಮಾಗಮ ಹೇಳುತ್ತಾನೆ.

(ಅನಡುಹ್ ಶಬ್ದಕ್ಕೆ ನುಮ್ ಹೇಳುವ ಸೂತ್ರ)

೨೬೧. ಸಾವನಡುಹಃ ॥ ೭-೧-೮೨ ॥

ಅಸ್ಯ ನುಮ್ ಸ್ಯಾತ್ ಸಾ ಪರೇ ॥ ಅನಡ್ವಾನ್ ॥

ಸಾ, ಅನಡುಹಃ ॥ ದ್ವಿಪದ ಸೂತ್ರ. "ಆಚ್ಛೀನದ್ಯೋರ್ನುಮ್" ಸೂತ್ರದಿಂದ "ನುಮ್" ಅನುವೃತ್ತಿ. ಅನುಡುಹಃ ಷಷ್ಠೀ. **ಸೂತ್ರಾರ್ಥ**—ಅನಡುಹ್ ಶಬ್ದಕ್ಕೆ ಸುಪರವಾದಾಗ ನುಮ್ ಆಗಮ ಬರುತ್ತದೆ. ನುಮಿನಲ್ಲಿ ಮಕಾರ "ಹಲಂತ್ಯಮ್" ಸೂತ್ರದಿಂದ ಇತ್ಸಾಗುತ್ತದೆ. ಉಕಾರ ಉಚ್ಚಾರಣಾರ್ಥ. ನ್ ಉಳಿಯುತ್ತದೆ ಇದೂ ಮಿತ್ತಾದುದರಿಂದ ಅಂತ್ಯವಾದ ಅಚ್ ಆಕಾರ. ಅದರ ಪರವಾಗಿ ಅವಯವವಾಗಿ ಬಂದರೆ ಅನಡ್ವಾನ್ಹ್ + ಸ್ ಎಂದಾಗುತ್ತದೆ. "ಹಲ್ ಜ್ಯಾಭ್ಯೋ ದೀರ್ಘಾತ್"—ಸೂತ್ರದಿಂದ ಸುಲೋಪ. ಅನಡ್ವಾನ್ಹ್. ಸಂಯೋಗಾಂತಪದವಾದುದರಿಂದ "ಸಂಯೋಗಾಂತಸ್ಯ ಲೋಪಃ" ಸೂತ್ರದಿಂದ ಸಕಾರಕ್ಕೆ ಲೋಪ. ಅನಡ್ವಾನ್. ಇಲ್ಲಿ ನಕಾರಕ್ಕೆ "ನ ಲೋಪಃ ಪ್ರಾತಿಪದಿಕಾಂತಸ್ಯ" ಸೂತ್ರದಿಂದ ಲೋಪ ಬರುವುದಿಲ್ಲ. ಆ ಸೂತ್ರಕ್ಕೆ ಹಕಾರ ಲೋಪವಾದದ್ದು ಅಸಿದ್ಧವಾದುದರಿಂದ ಕೊನೆಯಲ್ಲಿ ಹಕಾರವಿದೆಯೆಂದೇ ತಿಳಿಯುತ್ತದೆ. ಆದ್ದರಿಂದ ಲೋಪವಿಲ್ಲ. ಅನಡ್ವಾನ್—ಅನಡ್ವಾಹೌ—ಅನಡ್ವಾಹಃ । ಸರ್ವನಾಮ ಸ್ಥಾನವಾದುದರಿಂದ ಆಮ್. ನುಮ್ ಸುವಿನಲ್ಲಿ ಮಾತ್ರ. ಸಂಬುದ್ಧಿಸುಪರವಾದಾಗ ಆಮಿನ ಬದಲಾಗಿ ಅಮ್ ಆದೇಶ ಹೇಳುತ್ತಾನೆ.

(ಸಂಬುದ್ಧಿಯಲ್ಲಿ ಅಮ್ ಹೇಳುವ ಸೂತ್ರ)

೨೬೨. ಅಮ್ ಸಂಬುದ್ಧೌ ॥ ೭-೧-೯೯ ॥

ಚತುರನಡುಹೋರಮ್ ಸ್ಯಾತ್ ಸಂಬುದ್ಧೌ ॥ ಹೇ ಅನಡ್ವನ್ । ಹೇ ಅನಡ್ವಾಹೌ । ಹೇ ಅನಡ್ವಾಹಃ । ಅನಡುಹಃ ॥ ಅನಡುಹಾ ॥

ದ್ವಿಪದಸೂತ್ರ. ಹಿಂದಿನಸೂತ್ರದಿಂದ "ಚತುರನಡುಹೋಃ" ಅನುವೃತ್ತಿ. **ಸೂತ್ರಾರ್ಥ**—ಚತುರ್ ಅನಡುಹ್ ಶಬ್ದಗಳಿಗೆ ಸಂಬುದ್ಧಿಪರವಾದಾಗ ಅಮ್ ಆಗಮ ಬರುತ್ತದೆ. ಇದು ಅಮ್ ಬರುತ್ತಿರುವಾಗ ಹೇಳಿದುದರಿಂದ ಅದಕ್ಕೆ ಅಪವಾದ. ಅಂತ್ಯಾಚಿಗೆ ಪರವಾಗಿ ಬಂದರೆ ಅನಡು+ಅಹ್+ಸ್. ಯಣ್. ಅನಡ್ವಹ್ + ಸ್. ಹಿಂದಿನಂತೇನುನೂಗಮ. ಸುಲೋಪ. ಹಲೋಪ, ಹೇ. ಅನಡ್ವನ್ಹ + ಸ್—ಅನಡ್ವನ್ಹ್—ಅನಡ್ವನ್ । ಹೇ ಅನಡ್ವಾಹೌ—ಹೇ ಅನಡ್ವಾಹಃ ದ್ವಿ. ಅನಡ್ವಾಹಂ—ಅನಡ್ವಾಹೌ—ಅನಡುಹಃ. ಶಸ್ ಸರ್ವನಾಮಸ್ಥಾನವಲ್ಲ. ಆದುದರಿಂದ ಆಮ್ ಇಲ್ಲ. ಇನ್ನು ಅಜಾದಿಯಲ್ಲಿ ಕ್ತ ಪ್ರತ್ಯಯ ಸೇರಿಸುವುದು ಮಾತ್ರ. ತೃ॥ ಅನಡುಹಾ ಅನಡುಹ್ + ಭ್ಯಾಮ್ ಎಂದಿರುವಾಗ ಹಕಾರಕ್ಕೆ ದಕಾರಾದೇಶ ಹೇಳುತ್ತಾನೆ.

(ವಸ್ವಾದಿಗಳಿಗೆ ದಕಾರಾದೇಶ ಹೇಳುವಸೂತ್ರ)

೨೬೩. ವಸುಸ್ರಂಸುಧ್ವಂಸ್ವನಡುಹಾಂ ದಃ ॥ ೮-೨-೭೨॥

ಸಾಂತವಸ್ವಂತಸ್ಯ ಸ್ರಂಸಾದೇಶ್ಚ ದಃ ಸ್ಯಾತ್ಪದಾಂತೇ। ಅನಡುದ್ಭ್ಯಾಮಿತ್ಯಾದಿ ॥ ಸಾಂತೇತಿ ಕಿಮ್ ? ವಿದ್ವಾನ್ । ಪದಾಂತೇ ಕಿಮ್ ? ಸ್ರಸ್ತಮ್ । ಧ್ವಸ್ತಮ್ ॥

ವಸುಸ್ರಂಸುಧ್ವಂಸ್ವನಡುಹಾಂ, ದಃ ॥ ದ್ವಿಪದ ಸೂತ್ರ. ವಸು ಪ್ರತ್ಯಯವಾದುದರಿಂದ "ಪ್ರತ್ಯಯಗ್ರಹಣೇ ತದಂತಗ್ರಹಣಮ್" ಪರಿಭಾಷೆಯಿಂದ ವಸ್ವಂತ ತೆಗೆದುಕೊಳ್ಳಬೇಕು. "ಸಸಜುಷೋರುಃ" ಸೂತ್ರದಿಂದ "ಸ" ಎಂಬುದು ಅನುವೃತ್ತ ನಾಗಿ ವಸುವಿಗೆ ಮಾತ್ರ ವಿಶೇಷಣ. ತದಂತಲಾಭ. ಸಾಂತವಾದವ ಸ್ವಂತಕ್ಕೆ ಎಂದರ್ಥ. ಸ್ರಂಸ್, ಧ್ವಂಸ್ ಯಾವಾಗಲೂ ಸಾಂತವಾದುದರಿಂದ ಅಲ್ಲಿ ವಿಶೇಷಣವಿಲ್ಲ. ಅನುಪ್ ಶಬ್ದದಲ್ಲಿ ಸಕಾರವಿಲ್ಲದಿರುವುದರಿಂದ ಸಂಭವವೇ ಇಲ್ಲ. ವಸುವಿನಲ್ಲಿ ಕೆಲವುಕಡೆ ವಿಕಾರ ಬರುವುದರಿಂದ ಸಾಂತವೆಂದರೆ ಸಾರ್ಥಕವಾಗುತ್ತದೆ. "ಪದಸ್ಯ" ಅಧಿಕಾರ. ಅಂತೇ ಅನುವೃತ್ತಿ. **ಸೂತ್ರಾರ್ಥ**—ಸಕಾರಾಂತವಾದ ವಸ್ವಂತಕ್ಕೂ ಸ್ರಂಸ್ ಧ್ವಂಸ್ ಅನುಡುಹ್ ಶಬ್ದಗಳಿಗೂ ಪದಾಂತ ವಿಷಯದಲ್ಲಿ ದಕಾರಾದೇಶ ಬರುತ್ತದೆ. "ಆಲೋಂತ್ಯಸ್ಯ" ಪರಿಭಾಷೆಯಿಂದ ಅಂತ್ಯಕ್ಕೆ ಆದೇಶ. ಪ್ರಕೃತ "ಸ್ವಾದಿಷ್ವಸರ್ವನಾಮಸ್ಥಾನೇ" ಸೂತ್ರದಿಂದ ಅನಡುಹ್ ಶಬ್ದಕ್ಕೆ ಭ್ಯಾಮ್ ಪರವಾದಾಗ ಪದಸಂಜ್ಞೆಯಿರುವುದರಿಂದ ಹಕಾರಕ್ಕೆ ದಕಾರಾದೇಶ. ಅನಡುದ್ಭ್ಯಾಮ್—ಅನುಡುದ್ಭಿಃ ॥ ಹೀಗೆ ಹಲಾದಿಯಲ್ಲಿ ದಕಾರಾದೇಶ. ಸೂತ್ರದಲ್ಲಿರುವ ಪದದ ಪ್ರಯೋಜನ ಹೇಳುತ್ತಾನೆ. ಸಾಂತೇತಿಕಿಮ್ ? ಸಾಂತವಾದ ವಸ್ವಂತವೆಂದುದೇಕೆ ? ವಿದ್ವಾನ್. ಇಲ್ಲಿ ಹಾಗೆ ಹೇಳಿರುವುದರಿಂದ ದತ್ವ ಬರುವುದಿಲ್ಲ. ವಿದ್ ಧಾತುವಿಗೆ ಶತೃ ಪ್ರತ್ಯಯ. ಅದಕ್ಕೆ ವಸು ಆದೇಶ. ವಿದ್ + ವಸ್ = ವಿದ್ವಸ್ ಶಬ್ದ. ಪ್ರಥಮಾ ಸು ಪರವಾದಾಗ ಉಗಿತ್ತಾಮದುದರಿಂದ ನುಮ್. ವಿದ್ವನ್ಸ್ + ಸ್. "ಸಾಂತಮಹತಃ—" ಸೂತ್ರದಿಂದ ದೀರ್ಘ. ವಿದ್ವಾನ್ಸ್ + ಸ್ ಹಲ್ಜ್ಯಾದಿ ಸೂತ್ರದಿಂದ ಸುಲೋಪ. "ಸಂಯೋಗಾಂತಸ್ಯಲೋಪಃ" ಸೂತ್ರದಿಂದ ಸಕಾರ ಲೋಪ. ವಿದ್ವಾನ್. ಇಲ್ಲಿ ವಸ್ವಂತವಾದರೂ ಸಾಂತವಾಗಿಲ್ಲ. ಆದುದರಿಂದ ದತ್ವವಿಲ್ಲ. ಪದಾಂತದಲ್ಲಿಲ್ಲಿ ಮಾತ್ರ ದಕಾರಾದೇಶವೆಂದುದರಿಂದ ಸ್ರಸ್ತಮ್, ಧ್ವಸ್ತಮ್ ಎಂಬಲ್ಲಿ ಸಕಾರಕ್ಕೆ ದಕಾರವಿಲ್ಲ. ಸ್ರಂಸ್, ಧ್ವಂಸ್ ಧಾತುಗಳಿಗೆ ಕ್ತ ಪ್ರತ್ಯಯ ಬಂದಾಗ ಅನುನಾಸಿಕ ಲೋಪವಾಗಿ ಸ್ರಸ್ತಮ್, ಧ್ವಸ್ತಮ್ ಎಂದಾಗಿದೆ. ಇಲ್ಲಿ ಸ್ರಸ್, ಧ್ವಸ್, ಪದಾಂತವಲ್ಲ. ಕ್ತ ಸೇರಿದ ಮೇಲೆ ಪದವಾಗುತ್ತದೆ. ಆದ್ದರಿಂದ ದತ್ವವಿಲ್ಲ.

ಹಕಾರಾಂತ ತುರಾಸಾಹ್ ಶಬ್ದ. (ಇಂದ್ರ)

ತುರಾಸಾಹ್+ಸ್ ಎಂದಿರುವಾಗ "ಹಲ್‌ಜ್ಯಾಭ್ಯೋ—" ಸೂತ್ರದಿಂದ ಸುಲೋಪ. "ಹೋಢಃ" ಸೂತ್ರದಿಂದ ಹಕಾರಕ್ಕೆ ಢಕಾರಾದೇಶ. "ಝಲಾಂ ಜಶೋಂತೇ" ಸೂತ್ರದಿಂದ ಢಕಾರಕ್ಕೆ ಜಶ್, ಡಕಾರ. ತುರಾಸಾಡ್ ಎಂದಿರುವಾಗ ಸಕಾರಕ್ಕೆ ಷತ್ವ ಹೇಳುತ್ತಾನೆ.

(ಸಹ್‌ಧಾತುವಿನ ಸಕಾರಕ್ಕೆ ಷತ್ವಹೇಳುವಸೂತ್ರ)

೨೬೪. ಸಹೇಃ ಸಾಡಃ ಸಃ ॥ ೮-೩-೫೬ ॥

ಸಾಡ್‌ರೂಪಸ್ಯ ಸಹೇಃ ಸಸ್ಯ ಮೂರ್ಧನ್ಯಾದೇಶಃ ಸ್ಯಾತ್। ತುರಾಷಾಟ್, ತುರಾಷಾಡ್ ॥ ತುರಾಸಾಹೌ। ತುರಾಸಾಹಃ। ತುರಾಷಾಡ್ಭ್ಯಾಮ್। ಇತ್ಯಾದಿ ॥

ತ್ರಿಪದಸೂತ್ರ.। ಧಾತುವನ್ನು ನಿರ್ದೇಶಿಸುವಾಗ ಇಕ್‌ಸೇರಿಸಿಯಾಗಲೀ (ಶ್) ತಿಪ್‌ಸೇರಿಸಿಯಾಗಲೀ ಹೇಳಬೇಕೆಂದು "ಇಕ್‌ಶ್ತಿಪೌಧಾತುನಿರ್ದೇಶೇ" ವಾರ್ತಿಕವು ಹೇಳುತ್ತದೆ. ಅದರಂತೆ ಇಲ್ಲಿ ಸಹ ಎಂದು ಇಕ್‌ಸೇರಿಸಿ ಹೇಳಿದೆ. ಸಾಡಃ ಅದಕ್ಕೆ **ವಿಶೇಷಣ.** ಸಾಡ್ ಎಂಬ ರೂಪಹೊಂದಿರುವ ಸಹ್ ಧಾತುವಾಗಬೇಕೆಂದುದರಿಂದ ಪದಾಂತವಿಷಯದಲ್ಲಿ ಎಂದರ್ಥವಾಗುತ್ತದೆ. ಪದಾಂತದಲ್ಲಿ ಮಾತ್ರ ಷತ್ವ-ಢತ್ವ ಬರುವುದು. "ಅಪದಾಂತಸ್ಯ ಮೂರ್ಧನ್ಯಃ" ಎಂದು ಅಧಿಕಾರ. ಮೂರ್ಧನ್ಸಿ ಭವಃ ಮೂರ್ಧನ್ಯಃ. ಸಕಾರಕ್ಕೆ ಮೂರ್ಧನ್ಯ ಷಕಾರವೇ. **ಸೂತ್ರಾರ್ಥ**—ಸಾಡ್ ರೂಪವನ್ನು ಹೊಂದಿದ ಸಹ್‌ಧಾತುವಿನ ಸಕಾರಕ್ಕೆ ಮೂರ್ಧನ್ಯಾದೇಶ ಬರುತ್ತದೆ. ಪದಾಂತದಲ್ಲಿ ಷತ್ವಬರುವುದೆಂದು ತಾತ್ಪರ್ಯ. ಪ್ರಕೃತ ಸಾಡ್‌ರೂಪಹೊಂದಿರುವುದರಿಂದ ಷತ್ವಬಂದರೆ ತುರಾಷಾಡ್. "ವಾವಸಾನೇ" ಸೂತ್ರದಿಂದ ಜರ್ತ್ವಬಂದರೆ ತುರಾಷಾಟ್. ಜಾತಿಯಲ್ಲಿ ವಿಶೇಷವಿಲ್ಲ. ತುರಾಸಾಹೌ—ತುರಾಸಾಹಃ। ಇತ್ಯಾದಿ. ಭ್ಯಾಮಾದಿಯಲ್ಲಿ ಪದಸಂಜ್ಞಾ ಇದ್ದು ಸಾಡ್‌ರೂಪ ಹೊಂದುವುದರಿಂದ ಷತ್ವ. ತುರಾಷಾಡ್ಭ್ಯಾಮ್—ತುರಾಷಾಡ್ಭಿಃ ॥ ಇತ್ಯಾದಿ. ಸಪ್ತಮೀ ಬಹುವಚನದಲ್ಲಿ ತುರಾಷಾಡ್ಸು—ತುರಾಷಾಟ್ಸು ಎಂದಾಗುತ್ತದೆ. ಧುಡಾಗಮವಿಕಲ್ಪ.

ವಕಾರಾಂತ ಸುದಿವ್ ಶಬ್ದ. (ಶುಭ್ರಾಕಾಶವುಳ್ಳದಿನ)

ಶೋಭನಾ ದ್ಯೌಃ ಯಸ್ಯ ಸಃ. ಸುದ್ಯೌಃ. ಒಳ್ಳೆಯ ಆಕಾಶವುಳ್ಳದಿನ ಮುಂತಾದವು. ಸುದಿವ್+ಸ್ ಎಂದಿರುವಾಗ ವಕಾರಕ್ಕೆ ಔಕಾರಾದೇಶ ಹೇಳುತ್ತಾನೆ.

(ದಿವ್‌ಶಬ್ದಕ್ಕೆ ಔತ್ವಹೇಳುವಸೂತ್ರ)

೨೬೫. ದಿವ ಔತ್ ॥ ೬.೧-೧೪೮ ॥

ದಿವಿತಿ ಪ್ರಾತಿಪದಿಕಸ್ಯ ಔತ್ಸ್ಯಾತ್ ಸೌ ಪರೇ ॥ ಸುದ್ಯೌಃ—ಸುದಿವೌ—ಸುದಿವಃ ॥

ದಿವಃ ಔತ್ ॥ ದ್ವಿಪದಸೂತ್ರ. "ಸಾವನಡುಹಃ" ಸೂತ್ರದಿಂದ "ಸೌ" ಅನುವೃತ್ತವಾಗುತ್ತದೆ, ದಿವಃ ಷಷ್ಠೀ **ಸೂತ್ರಾರ್ಥ.**—ದಿವ್ ಎಂಬ ಪ್ರಾತಿಪದಿಕಕ್ಕೆ ಸುಪರವಾದಾಗ ಔತ್ ಆದೇಶ ಬರುತ್ತದೆ. ಔತ್‌ನಲ್ಲಿ ತಕಾರ ಸುಖೋಚ್ಚಾರಣೆಗೋಸ್ಕರ ಹೇಳಿದೆ. ಆದುದರಿಂದ ಅನೇಕಾಲಲ್ಲ. "ಅಲೋಂತ್ಯಸ್ಯ" ಪರಿಭಾಷೆಯಿಂದ ಅಂತ್ಯಕ್ಕೆ ಬರುತ್ತದೆ. ದಿವ್ ಎಂಬುದು ಅವ್ಯುತ್ಪನ್ನ ಪ್ರಾತಿಪದಿಕ. (ಉಣಾದಿಯಿಂದ ನಿಷ್ಪನ್ನವಾಗಿದೆ) ಸುದಿವ್ ಎಂಬಲ್ಲಿ ವಕಾರಕ್ಕೆ ಔಕಾರಬಂದರೆ ಸುದಿ+ಔ+ಸ್. ಎಂದಾಗುತ್ತದೆ. ಯಣ್. ಸುದ್ಯೌಸ್. ಹಲಿನಪರದಲ್ಲಿ ಸುಬಾರದಿರುವುದರಿಂದ "ಹಲ್‌ಜ್ಯಾಪ್"—ಸೂತ್ರದಿಂದ ಸುಲೋಪವಿಲ್ಲ. ರುತ್ವ. ವಿಸರ್ಗ. ಸುದ್ಯೌಃ. ಆಜಾದಿಯಲ್ಲಿ ಕಾರ್ಯವಿಲ್ಲ. ಸುದಿವೌ—ಸುದಿವಃ ॥ ದ್ವಿ. ಸುದಿವಂ—ಸುದಿವೌ ಸುದಿವಃ ॥ ತೃ ಸುದಿವಾ—ಸುದಿವ್+ಭ್ಯಾಮ್ ಎಂದಿರುವಾಗ ವಕಾರಕ್ಕೆ ಉತ್ವ ಹೇಳುತ್ತಾನೆ.

(ದಿವಿಗೆ ಉತ್ವ ಹೇಳುವ ಸೂತ್ರ)

೨೬೬. ದಿವ ಉತ್ ॥ ೬-೧-೧೪೯ ॥

ದಿವೋಂತಾದೇಶ ಉಕಾರಃ ಸ್ಯಾತ್ ಪದಾಂತೇ ॥ ಸುದ್ಯುಭ್ಯಾಮಿತ್ಯಾದಿ ॥

ದಿವಃ ಉತ್ ॥ ದ್ವಿಪದ ಸೂತ್ರ. "ಏಜಃ ಪದಾಂತಾದತಿ" ಸೂತ್ರದಿಂದ "ಪದಾಂತಾತ್" ಅನುವೃತ್ತವಾಗಿ ಸಪ್ತಮ್ಯಂತವಾಗಿ ವಿಪರಿಣತವಾಗುತ್ತದೆ. **ಸೂತ್ರಾರ್ಥ**—ದಿವ್ ಪ್ರಾತಿಪದಿಕಕ್ಕೆ ಪದಾಂತ ವಿಷಯದಲ್ಲಿ ಉಕಾರಾದೇಶ ಬರುತ್ತದೆ. "ಅಲೋಂತಸ್ಯ" ಪರಿಭಾಷೆಯಿಂದ ಅಂತ್ಯಕ್ಕೆಂದು ಲಬ್ಧವಾಗುವುದರಿಂದ ವೃತ್ತಿಯಲ್ಲಿ ಅಂತಾದೇಶವೆಂದು ಬರೆದಿರುತ್ತಾನೆ. "ಸ್ವಾದಿಷ್ವಸರ್ವನಾಮಸ್ಥಾನೇ" ಸೂತ್ರದಿಂದ ಭ್ಯಾನಾದಿಗಳಲ್ಲಿ ಪದಸಂಜ್ಞಾ. ವಕಾರಕ್ಕೆ ಉಕಾರಾದೇಶ ಬಂದರೆ ದಿ+ಉ+

ಭ್ಯಾಮ್. ಯಣ್. ದ್ಯುಭ್ಯಾಮ್. ಹೀಗೆ ಹಲಾದಿ ವಿಭಕ್ತಿಯಲ್ಲಿ ಉಕಾರಾಂತಾದೇಶ. ದ್ಯುಭಿಃ ಇತ್ಯಾದಿ. ಸಪ್ತಮೀ ಬಹುವಚನದಲ್ಲಿ ದಿವ್ + ಸು ದಿ+ಉ+ಸು–ದ್ಯುಸು. "ಆದೇಶಪ್ರತ್ಯಯೋಃ" ಷತ್ವ ದ್ಯುಷು ॥

ಇತಿ ವಾಂತಾಃ

ರೇಫಾಂತ ಚತುರ್ ಶಬ್ದ

ಯಾವ ವರ್ಣಾಂತವಾದುದು ಪ್ರಸಿದ್ಧವಾಗಿದೆಯೋ ಅಂಥಾ ಶಬ್ದಗಳನ್ನು ಹೇಳುತ್ತಾನೆ. ಯಕಾರಾಂತ ಶಬ್ದ ಪ್ರಸಿದ್ಧವಾಗಿಲ್ಲದಿರುವುದರಿಂದ ಹೇಳಿಲ್ಲ. ಚತುರ್ ಶಬ್ದ ಬಹುತ್ವಸಂಖ್ಯಾ ಹೇಳುವುದರಿಂದ ನಿತ್ಯ ಬಹುವಚನಾಂತ. ಚತುರ್ + ಜಸ್ ಎಂದಿರುವಾಗ "ಚತುರನಡುಹೋಃ–" ಸೂತ್ರದಿಂದ ಆಮ್ ಆಗಮು. ಮಿತ್ವಾದುದರಿಂದ ಅಂತ್ಯಾಚಿನ ಪರವಾಗಿ ಬಂದರೆ ಚತು + ಆರ್ + ಅಸ್. ಯಣ್. ಚತ್ವಾರ್ + ಅಸ್. ಸಕಾರಕ್ಕೆ ರುತ್ವವಿಸರ್ಗ. ಚತ್ವಾರಃ । ದ್ವಿ. ಶಸ್ ಸರ್ವನಾಮಸ್ಥಾನವಾದುದರಿಂದ ಆಮ್ ಇಲ್ಲ. ಚತುರ್ + ಅಸ್ ಚತುರಃ ॥ ತೃ–ಚತುರ್ಭಿಃ ॥ ಚ–ಚತುರ್ಭ್ಯಃ ॥ ಪಂ–ಚತುರ್ಭ್ಯಃ ॥ ಷ. ಚತುರ್ + ಆಮ್ ಎಂದಿರುವಾಗ ನುಡಾಗಮು ಹೇಳುತ್ತಾನೆ.

(ಆಮಿಗೆ ನುಡಾಗಮು ಹೇಳುವ ಸೂತ್ರ)

೨೬೭. ಷಟ್‌ಚತುರ್ಭ್ಯಶ್ಚ ॥ ೭-೧-೫೫ ॥

ಷಟ್ ಸಂಜ್ಞಕೇಭ್ಯಃ ಚತುರಶ್ಚ ಪರಸ್ಯ ಆಮಃ ನುಡಾಗಮಃ ॥

ಷಟ್‌ಚತುರ್ಭ್ಯಃ, ಚ ॥ ದ್ವಿಪದ ಸೂತ್ರ. "ಆಮಿ ಸರ್ವನಾಮ್ನಃ ಸುಟ್" ಸೂತ್ರದಿಂದ "ಆಮಿ" ಅನುವೃತ್ತನಾಗಿ ಷಷ್ಠ್ಯಂತವಾಗಿ ವಿಪರಿಣತವಾಗುತ್ತದೆ. "ಹ್ರಸ್ವನದ್ಯಾಪ್ನೋನುಟ್" ಸೂತ್ರದಿಂದ ನುಟ್ ಅನುವೃತ್ತಿ- ಷಟ್ ಚತುರ್ಭ್ಯಃ ಪಂಚಮೀ. ಷಟ್ ಶಬ್ದವಲ್ಲ. "ಷ್ಣಾಂತಾಷಟ್" ಸೂತ್ರದಿಂದ ಹೇಳಿದ ಷಟ್ ಸಂಜ್ಞೆಯುಳ್ಳಶಬ್ದ. **ಸೂತ್ರಾರ್ಥ—ಷಟ್** ಸಂಜ್ಞೆಯಿರುವ ಶಬ್ದದಪರದಲ್ಲಿರುವ, ಚತುರ್ ಶಬ್ದದ ಪರದಲ್ಲಿರುವ ಆಮಿಗೆ ನುಡಾಗಮ ಬರುತ್ತದೆ. ನುಟಿನಲ್ಲಿ ಟಕಾರ ಇತ್. ಉಕಾರಉಚ್ಚಾರಣಾರ್ಥ. ನ್ ಉಳಿಯುತ್ತದೆ. ಟಿತ್ವಾದುದರಿಂದ ಆಮಿಗೆ ಅವ್ಯವಯವವಾಗಿ ಬರುತ್ತದೆ. ಚತುರ್ + ನ್ ಆಮ್. ರೇಫದಪರನಾದ ನಕಾರಕ್ಕೆ ಣತ್ವ ಹೇಳುತ್ತಾನೆ.

(ನಕಾರಕ್ಕೆ ಣಕಾರಹೇಳುವ ಸೂತ್ರ)

೨೬೮. ರಷಾಭ್ಯಾಂ ನೋ ಣಃ ಸಮಾನಪದೇ ॥ ೮-೪-೧ ॥

ಏಕಪದಸ್ಥಾಭ್ಯಾಂ ರೇಫಷಕಾರಾಭ್ಯಾಂ ಪರಸ್ಯ ನಸ್ಯ ಣಃ ಸ್ಯಾತ್ ॥

ರಷಾಭ್ಯಾಂ–ನಃ–ಣಃ–ಸಮಾನಪದೇ ॥ ನಾಲ್ಕು ಪದವುಳ್ಳಸೂತ್ರ. ರಷಾಭ್ಯಾಂ ಪಂಚಮೀ. "ತಸ್ಮಾದಿತ್ಯುತ್ತರಸ್ಯ" ಪರಿಭಾಷೆಯಿಂದ ಅವ್ಯವಹಿತ ಪರಕ್ಕೆ ಕಾರ್ಯವಾದ ಎಂದೇಷವ. ಸಮಾಸ ಬಂದು ಒಂದುಪದವನಾಗಬಾರದು. ರಾಮನಾಮ. ಇದು ಒಂದುಪದವಲ್ಲ. **ಸೂತ್ರಾರ್ಥ—** ಒಂದೇಪದದಲ್ಲಿ ರೇಫಷಕಾರದ ಅವ್ಯವಹಿತ ಪರದಲ್ಲಿರುವ ನಕಾರಕ್ಕೆ ಣಕಾರಬರುತ್ತದೆ. ಚತುರ್‌ನಾಮ್ ಇದು ಒಂದೇ ಪದವಾದುದರಿಂದ ರೇಫದಪರದ ನಕಾರಕ್ಕೆ ಣಕಾರ ಬಂದರೆ ಚತುರ್ಣಾಮ್ ಎಂದಾಗುತ್ತದೆ. ಇಲ್ಲಿ ವಿಕಲ್ಪದ್ವಿತ್ವ ಹೇಳುತ್ತಾನೆ.

(ಯರ್‌ವರ್ಣಗಳಿಗೆ ದ್ವಿತ್ವಹೇಳುವಸೂತ್ರ)

೨೬೯. ಅಚೋರಹಾಭ್ಯಾಂ ದ್ವೇ ॥ ೮-೪-೪೬ ॥

ಅಚಃ ಪರಾಭ್ಯಾಂ ರೇಫಹಕಾರಾಭ್ಯಾಂ ಪರಸ್ಯ ಯರೋ ದ್ವೇ ವಾ ಸ್ತಃ ॥
ಚತುರ್ಣಾಮ್-ಚತುರ್ಣಾಮ್ ॥

ಅಚಃ, ರಹಾಭ್ಯಾಂ, ದ್ವೇ ॥ ತ್ರಿಪದಸೂತ್ರ. ಅಚಃ, ರಹಾಭ್ಯಾಂ, ಎರಡೂ ಪಂಚಮ್ಯಂತವಾದುದರಿಂದ "ತಸ್ಮಾದಿತ್ಯುತ್ತರಸ್ಯ" ಪರಿಭಾಷೆ ಉಪಸ್ಥಿತವಾಗುತ್ತದೆ. "ಯರೋನುನಾಸಿಕೇ" ಸೂತ್ರದಿಂದ "ಯರಃ" "ವಾ" ಅನುವೃತ್ತಿ. **ಸೂತ್ರಾರ್ಥ–** ಅಚಿನ ಅವ್ಯವಹಿತಪರದಲ್ಲಿರುವ ರೇಫಹಕಾರಗಳ ಅವ್ಯವಹಿತ ಪರದಲ್ಲಿರುವ ಯರ್ ವರ್ಣಗಳಿಗೆ ವಿಕಲ್ಪವಾಗಿ ದ್ವಿತ್ವ ಬರುತ್ತದೆ. ಚತುರ್ಣಾಮ್ ಎಂದಿರುವಾಗ ಅಚ್ ತಕಾರದ ಮೇಲಿರುವ ಉಕಾರ. ಅದರ ಪರದಲ್ಲಿ ರೇಫವಿದೆ. ಅದರ ಪರದಲ್ಲಿ ಯರ್ ಣಕಾರ. ಅದಕ್ಕೆ ದ್ವಿತ್ವಬಂದರೆ ಚತುರ್ಣ್ಣಾಮ್. ಬಾರದಿದ್ದರೆ ಚತುರ್ಣಾಮ್ ಎಂದು ಎರಡುರೂಪಗಳು. ಸಪ್ತಮೀ ಬಹುವಚನದಲ್ಲಿ ಸುಸ್‌ಪರವಾದಾಗ ಚತುರ್ + ಸು ಎಂದಿರುವಾಗ ರೇಫಕ್ಕೆ ವಿಸರ್ಗಪ್ರಾಪ್ತವಾದರೆ ನಿಯಮಮಾಡುತ್ತಾನೆ.

(ರುವಿಗೆ ವಿಸರ್ಗ ಹೇಳುವ ಸೂತ್ರ)

೨೭೦. ರೋಃ ಸುಸಿ ॥ ೮-೩-೧೭ ॥

ರೋರೇವ ವಿಸರ್ಗಃ ಸುಪಿ । ಷತ್ವಮ್ । ಷಸ್ಯ ದ್ವಿತ್ವೇ ಪ್ರಾಪ್ತೇ ॥

ದ್ವಿಪದ ಸೂತ್ರ. " ಖರವಸಾನಯೋರ್ವಿಸರ್ಜನೀಯಃ " ಸೂತ್ರದಿಂದ " ವಿಸರ್ಜನೀಯಃ " ಅನುವೃತ್ತಿ. **ಸೂತ್ರಾರ್ಥ**—ಸಪ್ತಮೀ ಬಹುವಚನ ಸು ಪರವಾದಾಗ ರುವಿನ ರೇಫಕ್ಕೆ ಮಾತ್ರ ವಿಸರ್ಗ ಬರುತ್ತದೆ. ಇದು ನಿಯಮ ಸೂತ್ರ. ಚತುರ್ ಸು ಎಂಬಲ್ಲಿ ವಿಸರ್ಗ ಬರುವಂತೇ ರುವಿನ ರೇಫವಿದ್ದಲ್ಲಿಯೂ ವಿಸರ್ಗ " ಖರವಸಾ— " ಸೂತ್ರದಿಂದಲೇ ಬರುತ್ತಿರುವಾಗ ಪುನಃ ಈ ಸೂತ್ರ ಏಕೆ ಹೇಳಬೇಕು ? " ಸಿದ್ಧೇ ಸತ್ಯಾರಭ್ಯಮಾಣೋ ವಿಧಿಃ ನಿಯಮಾಯ " ಒಂದು ಸೂತ್ರದಿಂದ ಒಂದು ಕಾರ್ಯ ಬರುತ್ತಿರುವಾಗ ಅದನ್ನೇ ಇನ್ನೊಂದು ಸೂತ್ರ ಹೇಳುವುದಾದರೆ ಅಲ್ಲಿ ನಿಯಮ ಹೇಳಬೇಕು. ಸಪ್ತಮೀ ಬಹುವಚನ ಪರವಾದಾಗ ಎಲ್ಲಿಯಾದರೂ ರೇಫಕ್ಕೆ ವಿಸರ್ಗ ಬರುವುದಾದರೆ " ಸಸಜುಷೋರುಃ " ಸೂತ್ರದಿಂದ ಬಂದ ರುವಿನ ಸಂಬಂಧಿ ರೇಫಕ್ಕೆ ಮಾತ್ರ ವಿಸರ್ಗ ಬರುತ್ತದೆ. ಇತರ ಸ್ವಾಭಾವಿಕ ರೇಫಕ್ಕೆ ಬರುವುದಿಲ್ಲ. ಪ್ರಕೃತ ಸ್ವಾಭಾವಿಕ ರೇಫ. ರು ಬಂದ ರೇಫವಲ್ಲ. ಆದುದರಿಂದ ರೇಫಕ್ಕೆ ವಿಸರ್ಗವಿಲ್ಲ. ಚತುರ್+ಸು ಎಂದಿರುವಾಗ ಇಣಿನ ಪರದಲ್ಲಿ ಸಕಾರವಿರುವುದರಿಂದ " ಆದೇಶ ಪ್ರತ್ಯಯೋಃ " ಸೂತ್ರದಿಂದ ಷತ್ವ. ಚತುರ್ಷು. " ಅಚೋರಹಾಭ್ಯಾಂದ್ವೇ " ಸೂತ್ರದಿಂದ ರೇಫಪರದಲ್ಲಿ ಯರಿನ ಷಕಾರವಿರುವುದರಿಂದ ದ್ವಿತ್ವಪ್ರಾಪ್ತವಾದರೆ ನಿಷೇಧ ಹೇಳುತ್ತಾನೆ.

(ಶರಿಗೆ ದ್ವಿತ್ವ ನಿಷೇಧ ಹೇಳುವಸೂತ್ರ)

೨೭೧. ಶರೋಽಚಿ । ೮-೪-೪೯ ॥

ಅಚಿ ಪರೇ ಶರೋ ನ ದ್ವೇಸ್ತಃ । ಚತುರ್ಷು ॥

ಶರಃ ಅಚಿ । ದ್ವಿಪದಸೂತ್ರ. " ನಾದಿನ್ಯಾಕ್ರೋಶೇ ಪುತ್ರಸ್ಯ " ಸೂತ್ರದಿಂದ "ನ" " ಅಚೋರಹಾಭ್ಯಾಂದ್ವೇ " ಸೂತ್ರದಿಂದ " ದ್ವೇ " ಅನುವೃತ್ತವಾಗುತ್ತವೆ. ಶರಃ ಷಷ್ಠೀ. **ಸೂತ್ರಾರ್ಥ**—ಶರ್‌ವರ್ಣಗಳಿಗೆ ಅಚ್‌ಪರವಾದಾಗ ದ್ವಿತ್ವ ಬರುವುದಿಲ್ಲ. ಪ್ರಕೃತ ಷಕಾರರೂಪ ಶರಿಗೆ ಉಕಾರರೂಪ ಅಚ್‌ಪರವಾದುದರಿಂದ ದ್ವಿತ್ವ ಬರುವುದಿಲ್ಲ. ಚತುರ್ಷು ಎಂದೇ ಇರುತ್ತದೆ.

ಮಕಾರಾಂತ " ಪ್ರಶಾಮ್ " ಶಬ್ದ. (ಶಾಂತನು)

ಪ್ರ ಉಪಸರ್ಗಸಹಿತವಾದ ಶಮು (ಉಪಶಮೇ) ಧಾತುವಿಗೆ ಕ್ವಿಪ್ ಬಂದು

ರೀರ್ಘಬಂದಿದೆ. ಪ್ರಶಾಮ್+ಸ್ ಎಂದಿರುವಾಗ " ಹಲ್‌ಙ್ಯಾಭ್ಯೋ"—ಸೂತ್ರದಿಂದ ಲೋಪ. ಪ್ರಶಾಮ್ ಎಂದಿರುವಾಗ ಮಕಾರಕ್ಕೆ ನಕಾರಾದೇಶ ಹೇಳುತ್ತಾನೆ.

(ಮಕಾರಕ್ಕೆ ನಕಾರ ಹೇಳುವಸೂತ್ರ)

೨೭೨. ಮೋ ನೋ ಧಾತೋಃ ॥ ೮-೨-೬೪ ॥

ಧಾತೋರ್ಮಸ್ಯ ನಃ ಸ್ಯಾತ್ಪದಾಂತೇ । ಪ್ರಶಾನ್ ॥

ಮಃ, ನಃ, ಧಾತೋಃ ॥ ತ್ರಿಪದಸೂತ್ರ. ಮಃ ಷಷ್ಠೀ. ನಃ ಪ್ರಥಮಾ. " ಪದಸ್ಯ " ಅಧಿಕಾರ. " ಸ್ಕೋಃ ಸಂಯೋಗಾದ್ಯೋರಂತೇ ಚ " ಸೂತ್ರದಿಂದ " ಅಂತೇ " ಅನುವೃತ್ತಿ. ಮಃ ಧಾತೋ ಎಂಬುದಕ್ಕೆ ವಿಶೇಷಣ. ತಂದತಲಾಭ. **ಸೂತ್ರಾರ್ಥ**—ಮಕಾರಾಂತ ಧಾತುವಿಗೆ ಪದಾಂತದಲ್ಲಿ ನಕಾರಾದೇಶ ಬರುತ್ತದೆ. " ಅಲೋಂತ್ಯಸ್ಯ " ಪರಿಭಾಷೆಯಿಂದ ಅಂತ್ಯವಾದ ಮಕಾರಕ್ಕೆ ಆದೇಶ. ಪ್ರಶಾನ್. ಅಜಾದಿಯಲ್ಲಿ ಪ್ರತ್ಯಯ ಸೇರಿಸುವುದು ಮಾತ್ರ. ಪ್ರಶಾಮೌ—ಪ್ರಶಾಮಃ ಇತ್ಯಾದಿ. ಭ್ಯಾಮಾದಿಗಳಲ್ಲಿ ಪದಸಂಜ್ಞಾ ಇರುವುದರಿಂದ ಮಕಾರಕ್ಕೆ ನಕಾರಾದೇಶ. ಪ್ರಶಾನ್ಭ್ಯಾಮ್—ಇತ್ಯಾದಿ. ಸಪ್ತಮೀ ಬಹುವಚನದಲ್ಲಿ ಪ್ರಶಾನ್ಸು ॥

ಮಕಾರಾಂತ " ಕಿಮ್ " ಶಬ್ದ. (ಯಾರು ?)

ಇದು ಸರ್ವನಾಮಶಬ್ದ. ಕಿಮ್+ಸ್ ಎಂದಿರುವಾಗ ಪ್ರಕೃತಿಗೆ ಆದೇಶ ಹೇಳುತ್ತಾನೆ.

(ಕಿಮಿಗೆ ಕಾದೇಶ ಹೇಳುವ ಸೂತ್ರ)

೭೨೩. ಕಿಮಃ ಕಃ ॥ ೭-೨-೧೦೩ ॥

ಕಿಮಃ ಕಃ ಸ್ಯಾದ್ವಿಭಕ್ತೌ । ಕಃ-ಕೌ-ಕೇ । ಇತ್ಯಾದಿ । ಶೇಷಂ ಸರ್ವವತ್ ॥

ದ್ವಿಪದಸೂತ್ರ । ಕಿಮಃ ಷಷ್ಠೀ. " ಅಷ್ಟನ ಆ ವಿಭಕ್ತೌ " ಸೂತ್ರದಿಂದ " ವಿಭಕ್ತೌ " ಅನುವೃತ್ತಿ. **ಸೂತ್ರಾರ್ಥ**—ಕಿಮ್ ಶಬ್ದಕ್ಕೆ ವಿಭಕ್ತಿಪರವಾದಾಗ ಕ ಎಂಬ ಆದೇಶ ಬರುತ್ತದೆ. ವಿಭಕ್ತಿಯಂದುದರಿಂದ 21 ವಿಭಕ್ತಿಗಳಲ್ಲಿಯೂ ಈ

ಆದೇಶ ಬರುವುದಲ್ಲದೆ ವಿಭಕ್ತಿ ಸಂಜ್ಞೆಯುಳ್ಳ ಇತರ ಪ್ರತ್ಯಯವಿರುವಾಗಲೂ ಕಾಣಿಸಿ ಬರುತ್ತದೆ. ಕ ಅನೇಕಾಲಾದುದರಿಂದ "ಅನೇಕಾಲ್ ಶಿತ್ಸರ್ವಸ್ಯ" ಸೂತ್ರದಿಂದ ಸರ್ವಾದೇಶ. ಕ+ಸ್. ಸಕಾರಕ್ಕೆ ರುತ್ವವಿಸರ್ಗ ಕಃ. ಇನ್ನು ಇದು ಅಕಾರಾಂತ ನಾಗಿ ಸರ್ವನಾಮ ಸಂಜ್ಞೆ ಹೊಂದಿರುವುದರಿಂದ ಸರ್ವಶಬ್ದದಂತೇ ರೂಪಹೊಂದುತ್ತದೆ.

ಪ್ರ—ಕಃ । ಕೌ । ಕೇ ॥ ದ್ವಿ—ಕಮ್ । ಕೌ । ಕಾನ್ ॥ ತೃ—ಕೇನ । ಕಾಭ್ಯಾಮ್ । ಕೈಃ ॥ ಚ—ಕಸ್ಮೈ । ಕಾಭ್ಯಾಮ್ । ಕೇಭ್ಯಃ ॥ ಪಂ—ಕಸ್ಮಾತ್ । ಕಾಭ್ಯಾಮ್ । ಕೇಭ್ಯಃ ॥ ಷ—ಕಸ್ಯ । ಕಯೋಃ । ಕೇಷಾಮ್ ॥ ಸ—ಕಸ್ಮಿನ್ । ಕಯೋಃ । ಕೇಷು ॥

ಮಕಾರಾಂತ "ಇದಮ್" ಶಬ್ದ. (ಇವನು)

ಇದೂ ಸರ್ವನಾಮ ಶಬ್ದ. ಇದಮ್+ಸ್ ಎಂದಿರುವಾಗ ತ್ಯದಾದಿಗಳಲ್ಲಿ ಸೇರಿರುವುದರಿಂದ "ತ್ಯದಾದೀನಾಮಃ" ಸೂತ್ರದಿಂದ ಮಕಾರಕ್ಕೆ ಅಕಾರ ಪ್ರಾಪ್ತವಾದ ಅಪವಾದ ಹೇಳುತ್ತಾನೆ.

(ಇದಮ್ ಶಬ್ದಕ್ಕೆ ಮಕಾರ ಹೇಳುವ ಸೂತ್ರ)

೨೭೪. ಇದಮೋ ಮಃ ॥ ೭—೨—೧೦೮ ॥

ಇದಮೋ ಮಸ್ಯ ಮಃ ಸ್ಯಾತ್ಸೌ ಪರೇ ॥ ತ್ಯದಾದ್ಯತ್ವಾಪವಾದಃ ॥

ಇದಮಃ, ಮಃ ॥ ದ್ವಿಪದ ಸೂತ್ರ. "ತದೋಃ ಸಃ ಸಾವನಂತ್ಯಯೋಃ" ಸೂತ್ರದಿಂದ "ಸೌ" ಅನುವೃತ್ತಿ. **ಸೂತ್ರಾರ್ಥ**—ಇದಮ್ ಶಬ್ದಕ್ಕೆ ಸು ವಿಭಕ್ತಿ ಪರವಾದಾಗ ಮಕಾರಾದೇಶ ಬರುತ್ತದೆ. "ಅಲೋಂತ್ಯಸ್ಯ" ಪರಿಭಾಷೆಯಿಂದ ಅಂತ್ಯವಾದ ಅಕಾರಕ್ಕೆ ಆದೇಶ. ಮಕಾರಕ್ಕೆ ಮಕಾರ ಏಕೆ ಹೇಳಬೇಕು? ವ್ಯರ್ಥವಲ್ಲವೇನು? ಆಂದರೆ "ತ್ಯದಾದೀನಾಮಃ" ಸೂತ್ರದಿಂದ ಬರುವ ಅಕಾರಕ್ಕೆ ಅಪವಾದ. ಮಕಾರ ಹೇಳದಿದ್ದರೆ ಅಕಾರ ಬರುತ್ತಿತ್ತು. ಅಕಾರವನ್ನು ಬಾರದಂತೆ ಮಾಡುವುದೇ ಮಕಾರಕ್ಕೆ ಮಕಾರ ಹೇಳುವುದರ ತಾತ್ಪರ್ಯ. ಇದಮ್+ಸ್ ಎಂದೇ ಇರುವಾಗ ಪ್ರಕೃತ ಅವಯವಕ್ಕೆ ಆದೇಶ ಹೇಳುತ್ತಾನೆ.

(ಇದಮಿನ ಇದಿಗೆ ಆದೇಶ ಹೇಳುವ ಸೂತ್ರ)

೨೭೫. ಇದೋಽಯ್ ಪುಂಸಿ ॥ ೭-೨-೧೧೧ ॥

ಇದಮ ಇದೋಽಯ್ ಸ್ಯಾತ್ ಸೌ ಪುಂಸಿ। ಅಯಮ್ । ತ್ಯದಾದ್ಯತ್ವೇ।

ಇದಃ, ಅಯ್, ಪುಂಸಿ ॥ ತ್ರಿಪದಸೂತ್ರ. "ಯಃ ಸೌ" ಸೂತ್ರದಿಂದ "ಸೌ" ಅನುವೃತ್ತಿ. ಸಪ್ತಮಿಯಾದುದರಿಂದ ಸುಪರವಾದಾಗ ಎಂದರ್ಥ. ಇದಃ ಸ್ಥಾನಾರ್ಥಕಷಷ್ಠ್ಯಂತಪದ. "ಇದಮೋ ಮಃ" ಸೂತ್ರದಿಂದ "ಇದಮಃ" ಅನುವೃತ್ತವಾಗುತ್ತದೆ. **ಸೂತ್ರಾರ್ಥ**—ಪುಲ್ಲಿಂಗದಲ್ಲಿ ಇದಮ್ ಶಬ್ದದ ಇದ್ ಎಂಬುದಕ್ಕೆ ಸುಪರವಾದಾಗ "ಅಯ್" ಆದೇಶ ಬರುತ್ತದೆ. ಅನೇಕಾಲಾದುದರಿಂದ ಇದ್ ಸಂಪೂರ್ಣಕ್ಕೆ ಆದೇಶ. ಇದಮ್+ಸ್ = ಅಯ್ + ಅಮ್ + ಸ್ = ಅಯಮ್ + ಸ್. "ಹಲ್ಙ್ಯಾಭ್ಯೋ—" ಸೂತ್ರದಿಂದ ಸುಲೋಪ. ಅಯಮ್. ಇದಮ್ + ಔ ಎಂದಿರುವಾಗ "ತ್ಯದಾದೀನಾಮಃ" ಸೂತ್ರದಿಂದ ಅತ್ವಬಂದರೆ ಇದ + ಅ + ಔ ಎಂದಾಗುತ್ತದೆ. ಆಗ ಪರರೂಪ ಹೇಳುತ್ತಾನೆ.

(ಗುಣಪರವಾದಾಗ ಪರರೂಪ ಹೇಳುವ ಸೂತ್ರ)

೨೭೬. ಅತೋ ಗುಣೇ ॥ ೬-೧-೯೭ ॥

ಅಪದಾಂತಾದತೋ ಗುಣೇ ಪರರೂಮೇಕಾದೇಶಃ ॥

ಅತಃ, ಗುಣೇ ॥ ದ್ವಿಪದಸೂತ್ರ. "ಏಙಃ ಪರರೂಪಮ್" ಸೂತ್ರದಿಂದ "ಪರರೂಪಮ್" "ಉಸ್ಯಪದಾಂತಾತ್" ಸೂತ್ರದಿಂದ "ಅಪದಾಂತಾತ್" ಅನುವೃತ್ತಿ. "ಏಕಃ ಪೂರ್ವಪರಯೋಃ" ಅಧಿಕಾರ. ಅತಃ ಪಂಚಮೀ. **ಸೂತ್ರಾರ್ಥ**—ಅಪದಾಂತವಾದ (ಪದಾಂತದಲ್ಲಿ ಇಲ್ಲದ) ಅಕಾರದ ಪರದಲ್ಲಿ ಗುಣವಿರುವಾಗ (ಅ-ಏ-ಓ) ಪರರೂಪವು ಏಕಾದೇಶವಾಗಿ ಬರುತ್ತದೆ. ಅಕಾರಕ್ಕೂ ಗುಣಕ್ಕೂ ಒಂದೇ ಪರರೂಪ ಏಕಾದೇಶ. ಪ್ರಕೃತ ಇದ ಎಂಬಲ್ಲಿರುವ ದಕಾರದ ಮೇಲಿನ ಅಕಾರವು ಅಪದಾಂತ ಅಕಾರ. ಇದಕ್ಕೆ ಅಕಾರರೂಪ ಗುಣ ಪರದಲ್ಲಿ ಇದೆ. ಆ ಅಗಳಿಗೆ ಒಂದೇ ಪರದ ಅಕಾರ ಆದೇಶ. ಇದ+ಔ ಎಂದಾಗುತ್ತದೆ. ಈಗ ದಕಾರಕ್ಕೆ ಮಕಾರಾದೇಶ ಹೇಳುತ್ತಾನೆ.

(ಇದಮಿನ ದಕಾರಕ್ಕೆ ಮಕಾರ ಹೇಳುವ ಸೂತ್ರ)

೨೭೭. ದಶ್ಚ ॥ ೭-೨-೧೦೯ ॥

ಇದಮೋ ದಸ್ಯ ಮಃ ಸ್ಯಾದಿಭ್ವಕ್ತೌ । ಇಮೌ । ಇಮೇ । ತ್ಯದಾದೇಃ ಸಂಬೋಧನಂ ನಾಸ್ತೀತ್ಯುತ್ಸರ್ಗಃ ॥ ಇಮಂ—ಇಮೌ—ಇಮಾನ್ ॥

ದಃ ಚ ॥ ದ್ವಿಪದ ಸೂತ್ರ. " ಇದಮೋಮಃ " ಸೂತ್ರದಿಂದ " ಮಃ " " ಅಷ್ಟನ ಆ ವಿಭಕ್ತೌ " ಸೂತ್ರದಿಂದ " ವಿಭಕ್ತೌ " ಅನುವೃತ್ತಿ. ದಃ ಷಷ್ಠೀ. **ಸೂತ್ರಾರ್ಥ**—ಇದಮ್ ಶಬ್ದದ ದಕಾರಕ್ಕೆ ವಿಭಕ್ತಿ ಪರವಾದಾಗ ಮಕಾರಾದೇಶ ಬರುತ್ತದೆ. ಪ್ರಕೃತ ವಿಭಕ್ತಿ ಪರವಾದುದರಿಂದ ದಕಾರಕ್ಕೆ ಮಕಾರ ಬಂದರೆ ಇಮ+ಟ್. " ವೃದ್ಧಿರೇಚಿ " ಸೂತ್ರದಿಂದ ವೃದ್ಧಿ. ಇಮೌ. ಇದಮ್+ಜಸ್ ಎಂದಿರುವಾಗ " ತ್ಯದಾದೀನಾಮಃ " ಸೂತ್ರದಿಂದ ಮಕಾರಕ್ಕೆ ಅಕಾರಾದೇಶ. ಇದ+ಅ+ಜಸ್. " ಅತೋಗುಣೇ " ಪರರೂಪ. ಇದ+ಜಸ್. ಅಕಾರದ ಪರದಲ್ಲಿ ಜಸ್ ಇರುವುದರಿಂದ " ಜಸಃ ಶೀ " ಸೂತ್ರದಿಂದ ಜಸಿಗೆ ಶೀ ಭಾವ. ಶೀಯಲ್ಲಿ ಶಕಾರ ಇತ್. ಇದ+ಈ. " ಆದ್ಗುಣಃ " ಇದೇ. " ದಶ್ಚ " ಸೂತ್ರದಿಂದ ದಕಾರಕ್ಕೆ ಮಕಾರಾದೇಶ. ಇಮೇ. " ತ್ಯದಾದೇರಿತಿ " ॥ ತ್ಯದ್ ಮುಂತಾದ ಶಬ್ದಗಳಲ್ಲಿ ಸಾಮಾನ್ಯವಾಗಿ ಸಂಬೋಧನೆಯಿಲ್ಲ. ಉತ್ಸರ್ಗಃ ಅಂದರೆ ಸಾಮಾನ್ಯವಾಗಿ ಎಂದರ್ಥ. ಹೇ ಸಃ ಎಂದು ಭಾಷ್ಯದಲ್ಲಿ ಪ್ರಯೋಗಿಸಿರುವುದರಿಂದ ಸಂಬೋಧನವಿರುವುದಾದರೂ ಬಹಳ ವಿರಳ. ಪ್ರಕೃತ ಇದಮ್ ತ್ಯದಾದಿಯಲ್ಲಿರುವುದರಿಂದ ಸಂಬೋಧನವಿಲ್ಲ. ದ್ವಿತೀಯಾ ದಲ್ಲಿ ಅಮ್ ಪರವಾದಾಗ ಇದಮ್+ಅಮ್ ಎಂದಿರುವಾಗ ತ್ಯದಾದ್ಯತ್ವ ಪರರೂಪ. ದಕಾರಕ್ಕೆ ಮಕಾರ. ಇಮ+ಅಮ್. " ಅಮಿಪೂರ್ವಃ " ಇಮುಮ್. ಇಮೌ. (ಹಿಂದಿನಂತೆ) ಶಸಿನಲ್ಲಿ ಇದಮ್+ಅಸ್. ಹಿಂದಿನಂತೆ ಕಾರ್ಯಗಳು ಬಂದರೆ ಇಮ+ಅಸ್. " ಪ್ರಥಮಯೋಃ ಪೂರ್ವಸವರ್ಣಃ " ಸೂತ್ರದಿಂದ ದೀರ್ಘ. " ತಸ್ಮಾಚ್ಛಸೋ ನಃ ಪುಂಸಿ " ಸೂತ್ರದಿಂದ ಸಕಾರಕ್ಕೆ ನಕಾರ. ಇಮಾನ್. ತೃತೀಯಾದಲ್ಲಿ ಇದಮ್+(ಟ್)ಆ ಎಂದಿರುವಾಗ " ತ್ಯದಾದೀನಾಮಃ " ಸೂತ್ರದಿಂದ ಅತ್ವ. ಪರರೂಪ. ಇದ+ಆ. ಈಗ ಇದಿಗೆ ಅನ್ ಆದೇಶ ಹೇಳುತ್ತಾನೆ.

(ಇದಮಿನ ಇದಿಗೆ ಅನ್ ಆದೇಶ ಹೇಳುವ ಸೂತ್ರ)

೨೭೮. ಅನಾಪ್ಯಕಃ ॥ ೭-೨-೧೧೨ ॥

ಅಕಕಾರಸ್ಯೇದಮ ಇದೋಽನಾಪಿ ವಿಭಕ್ತೌ ॥ ಆಬಿತಿಪ್ರತ್ಯಾಹಾರಃ ॥ ಅನೇನ ॥

ಅನ್, ಆಪಿ, ಅಕಃ ॥ ತ್ರಿಪದಸೂತ್ರ. ' ನವಿದ್ಯತೇ ಕ್ ಯಸ್ಯ ಸಃ ಅಕ್, ತಸ್ಯ ಅಕಃ ". ಕಕಾರವಿಲ್ಲದ ಎಂದರ್ಥ. " ಇದಮೋಮಃ " ಸೂತ್ರದಿಂದ " ಇದಮಃ " " ಇಮೋಽಯ್‌ಪುಂಸಿ " ಸೂತ್ರದಿಂದ " ಇದಃ " "ಅಷ್ಟನ ಆ ವಿಭಕ್ತೌ " ಸೂತ್ರದಿಂದ " ವಿಭಕ್ತೌ " ಅನುವೃತ್ತಿ. **ಸೂತ್ರಾರ್ಥ**—ಕಕಾರರಹಿತವಾದ ಇದಮ್ ಶಬ್ದದ ಇದ್ ಎಂಬುದಕ್ಕೆ ಆಪ್ ವಿಭಕ್ತಿಪರವಾದಾಗ ಅನ್ ಆದೇಶ ಬರುತ್ತದೆ.

ಅನ್ ಪ್ರತ್ಯಾಹಾರ. ಟಾ ಆರಂಭಿಸಿ ಸುಪ್ ಪರ್ಯಂತ. (ತೃತೀಯಾ, ಚತುರ್ಥೀ ಪಂಚಮೀ, ಷಷ್ಠೀ, ಸಪ್ತಮೀ) ಇದಮ್ ಶಬ್ದಕ್ಕೆ ಅಕಚ್ ಬಂದಾಗ ಕಕಾರದಿಂದ, ಹೊರಡಿರುತ್ತದೆ. ಆಗ ಈ ಆದೇಶ ಬರುವುದಿಲ್ಲ. ಪ್ರಕೃತ ಕಕಾರವಿಲ್ಲದ ಇದಮಿಗೆ ಟಾ ಪರವಾದುದರಿಂದ ಇದ್ ಅಂಶಕ್ಕೆ ಅನ್ ಬಂದರೆ ಅನ+ಆ ಎಂದಾಗುತ್ತದೆ. ಅಕಾರದ ಪರದಲ್ಲಿ ಟಾ ಇರುವುದರಿಂದ " ಟಾಙಸಿಙಸಾಮಿನಾತ್ಸ್ಯಾಃ "—ಸೂತ್ರದಿಂದ ಟಾಕ್ಕೆ ಇನಾದೇಶ. ಅನ+ಇನ, ಗುಣ ಅನೇನ. ಇದಮ್+ಭ್ಯಾಮ್ ಎಂದಿರುವಾಗ ತ್ಯದಾದ್ಯತ್ವ, ಪರರೂಪ. ಇದ+ಭ್ಯಾಮ್. ಈಗ ಇದಿಗೆ ಲೋಪ ಹೇಳುತ್ತಾನೆ.

(ಇದಮಿನ ಇದಿಗೆ ಲೋಪಹೇಳುವ ಸೂತ್ರ)

೨೭೯. ಹಲಿ ಲೋಪಃ ॥ ೭-೨-೧೧೩ ॥

ಅಕಕಾರಸ್ಯೇದಮ ಇದೋ ಲೋಪ ಆಪಿ ಹಲಾದೌ ॥ ನಾನರ್ಥಕೇऽಲೋಂತ್ಯವಿಧಿರನಭ್ಯಾಸವಿಕಾರೇ ॥

ಹಲಿ, ಲೋಪಃ ॥ ದ್ವಿಪದಸೂತ್ರ. ಹಿಂದಿನಿಂದ"ಆಪಿ", "ಅಕಃ" " ಇದಮಃ " " ಇದಃ " ಅನುವೃತ್ತಿ. ಆಪಿ ಎಂಬುದಕ್ಕೆ ಹಲಿ ವಿಶೇಷಣ. ಸಪ್ತಮ್ಯಂತ ಅಲ್ ಆದುದರಿಂದ ತದಾದಿಲಾಭ. ಹಲಾದಿಯಾದ ಆಪ್ ವಿಭಕ್ತಿ. (ಭ್ಯಾಮಾದಿ) **ಸೂತ್ರಾರ್ಥ**—ಕಕಾರರಹಿತವಾದ ಇದಮ್ ಶಬ್ದದ ಇದಿಗೆ ಹಲಾದಿಯಾದ ಟಾದಿ ವಿಭಕ್ತಿಪರವಾದಾಗ ಲೋಪ ಬರುತ್ತದೆ. ಭ್ಯಾಮ್ : ಹಲಾದಿ ಆಪ್ ವಿಭಕ್ತಿಯಾದುದರಿಂದ ಇದಿಗೆ ಲೋಪಬರಬೇಕು. ಇದಿಗೆ ಲೋಪವೆಂದು ಷಷ್ಠೀ ನಿರ್ದೇಶಮಾಡಿರುವುದರಿಂದ " ಅಲೋಂತ್ಯಸ್ಯ " ಸೂತ್ರದಿಂದ ಇದಿನ ಅಂತ್ಯ ದಕಾರಕ್ಕೆ ಲೋಪಪ್ರಾಪ್ತವಾದರೆ ಪರಿಭಾಷೆಯಿಂದ ನಿಷೇಧಹೇಳುತ್ತಾನೆ. " ನಾನರ್ಥಕೇ–"ಇತಿ ॥ ಇದು ಪರಿಭಾಷೆ. ನ ಅನರ್ಥಕೇ ಅಲೋಂತ್ಯವಿಧಿಃ, ಅನಭ್ಯಾಸವಿಕಾರೇ ॥ ಅನರ್ಥಕವಾದ ಶಬ್ದವಿಷಯದಲ್ಲಿ " ಅಲೋಂತ್ಯಸ್ಯ " ಪರಿಭಾಷೆ ಬರುವುದಿಲ್ಲ. ಅಲ್ಲಿ ಅಂತ್ಯಕ್ಕೆಂದು ನಿಯಮಮಾಡುವುದಿಲ್ಲ. " ಅನಭ್ಯಾಸವಿಕಾರೇ ॥ " ಅಭ್ಯಾಸಕ್ಕೆ ಏನಾದರೂ ಕಾರ್ಯ ಮಾಡುವುದಾದರೆ ಅಲ್ಲಿ ಈ ನಿಷೇಧವಿಲ್ಲ. " ಪೂರ್ವೋऽಭ್ಯಾಸಃ " ಸೂತ್ರದಿಂದ ದ್ವಿತ್ವಬಂದಲ್ಲಿ ಪೂರ್ವಕ್ಕೆ ಅಭ್ಯಾಸ ಸಂಜ್ಞೆ ಹೇಳುತ್ತಾನೆ. ಇಲ್ಲಿ ಅರ್ಥವಿಲ್ಲವಾದರೂ " ಅಲೋಂತ್ಯಸ್ಯ " ಪರಿಭಾಷೆ ಬಂದೇಬರುತ್ತದೆ. ಇತರ ಕಡೆಯಲ್ಲಿ ಮಾತ್ರ ಅನರ್ಥಕ ವಿಷಯದಲ್ಲಿ ಬರುವುದಿಲ್ಲ. ಪ್ರಕೃತ ಇದಮ್ ಶಬ್ದದ ಭಾಗವಾದ ಇದಿಗೆ ಅರ್ಥವಿಲ್ಲ. ಇದು ಅಭ್ಯಾಸವಲ್ಲ. ಆದುದರಿಂದ ಆ ಪರಿಭಾಷೆ ಬಂದು ಅಂತ್ಯಕ್ಕೆಂದು ನಿಯಮ ಮಾಡುವುದಿಲ್ಲ. ಇದ್ ಸಂಪೂರ್ಣಕ್ಕೆ ಲೋಪ. ಆಗ ಅ+ಭ್ಯಾಮ್ ಎಂದು

ಉಳಿಯುತ್ತವೆ. ಇಲ್ಲಿ ದೀರ್ಘ ಹೇಳುವುದಕ್ಕೋಸ್ಕರ ವ್ಯವದೇಶಿವದ್ಭಾವನನ್ನು ಹೇಳುತ್ತಾನೆ.

(ವ್ಯವದೇಶಿವದ್ಭಾವನನ್ನು ಹೇಳುವ ಸೂತ್ರ)

೨೬೦. ಆದ್ಯಂತವದೇಕಸ್ಮಿನ್ ॥ ೧-೧-೨೧ ॥

ಏಕಸ್ಮಿನ್ ಕ್ರಿಯಮಾಣಂ ಕಾರ್ಯಮಾದಾವಿವಾಂತ ಇವ ಚ ಸ್ಯಾತ್।
ಸುಪಿ ಚೇತಿ ದೀರ್ಘಃ। ಆಭ್ಯಾಮ್ ॥

ಆದ್ಯಂತವತ್, ಏಕಸ್ಮಿನ್ ॥ ದ್ವಿಪದಸೂತ್ರ. ಇಲ್ಲಿ ಏಕ ಶಬ್ದ ಆನಂತರ್ಯವೆಂಬ ಅರ್ಥವನ್ನು ತಿಳಿಸುತ್ತದೆ. ಇವಾರ್ಥದಲ್ಲಿ ವತಿಪ್ರತ್ಯಯ. ಇದು ದ್ವಂದ್ವವನ್ನು ಕೊನೆಯಲ್ಲಿರುವುದರಿಂದ ಪ್ರತ್ಯೇಕಾನ್ವಯ. ಆದಿವತ್, ಅಂತವತ್ ಎಂದು ಮಾಡಿಕೊಳ್ಳಬೇಕು. **ಸೂತ್ರಾರ್ಥ**–ಒಂದುಶಬ್ದ ಆಥವಾ ವರ್ಣವು ಆದಿಯಾಗಿರುವುದಕ್ಕೆ ಆಥವಾ ಅಂತವಾಗಿರುವುದಕ್ಕೆ ಹೇಳಿದ ಕಾರ್ಯವು ಅನಪಾಯಕವಾದ ಒಂದರಲ್ಲಿ ಬರುತ್ತದೆ. ಅವೇ ಆದಿಯಾಗಿರುವುದಕ್ಕೂ ಅದಕ್ಕೂ ಬರುತ್ತದೆ. ತದಾದಿತದಂತಕ್ಕೆ ಮಾಡುವ ಕಾರ್ಯವು ಅದಕ್ಕೂ ಬರುವುದೆಂದರ್ಥ. ಧಾತುವಿನ ಅವಯವವಾದ ಋಕಾರಾಂತದ ಬಳಿಕ ಛಪ್ ಬರುತ್ತದೆಯೆಂದು ಹೇಳಿದೆ. ಆಗ ಧಾತುವಿನ ಅವಯವಗಳು ಎರಡು ಇರಬೇಕು ಎಂದರ್ಥವಾಗುತ್ತದೆ. ಋಕಾರ ಅವಯವವೊಂದು. ಇನ್ನೊಂದು. ಹೀಗಿದ್ದರೆ ಮಾತ್ರ ಬರುತ್ತದೆಯಾದುದರಿಂದ ದುಹ್ ಎಂಬಲ್ಲಿ ಬಾರದೇ ಹೋಗಬೇಕಾಗುತ್ತದೆ. ಈ ಸೂತ್ರದಿಂದ ಅಲ್ಲಿಯೂ ಬರುತ್ತದೆ. ಋಕಾರಾಂತವಾದ ಧಾತುವಿನ ಅವಯವವೂ ಅದೇ. ಅದೇ ಅಂತವಾದ ಧಾತುವೂ ಅದೇ. ಒಬ್ಬನೇ ಮಗನಿದ್ದರೆ ಜ್ಯೇಷ್ಠನೂ ಅವನೇ ಕನಿಷ್ಠನೂ ಅವನೇ. ಜ್ಯೇಷ್ಠಾದಿವ್ಯವಹಾರಮಾಡಬೇಕಾದರೆ [ಮಾತ್ರವಾಗಿ ಚಿತ್ತವನಿರಬೇಕು. ಇಲ್ಲದಾಗ ಎಲ್ಲವೂ ಅವನಲ್ಲಿಯೇ ಆರೋಪ. ಪ್ರಕೃತ "ಸುಪಿ ಚ" ಸೂತ್ರದಲ್ಲಿ ಹ್ರಸ್ವಾಕಾರಾಂತವಾದ ಅಂಗಕ್ಕೆ ಯಞಾದಿಸುಪ್ ಪರವಾದಾಗ ದೀರ್ಘವೆಂದಿದೆ. ತದಂತಮಾದುದಕ್ಕೆ ಕಾರ್ಯ ಹೇಳಿದೆ ಹ್ರಸ್ವವೇ ಅಂತವಾದ ಅಂಗಕ್ಕೆ ಕಾರ್ಯವೆಂದರ್ಥ. ಪ್ರಕೃತ ಅ+ಭ್ಯಾಮ್. ಎಂಬಲ್ಲಿ ಹ್ರಸ್ವರೂಪ ಅಂಗವಿದೆ ಹ್ರಸ್ವಾಂತವಾದ ಅಂಗ ಜೀರೊಂದಿಲ್ಲ. ಆದುದರಿಂದ ದೀರ್ಘಪ್ರಾಪ್ತಿ ಇಲ್ಲವೆಂದರೆ ಈ ವ್ಯವಹಾರದಿಂದ ದೀರ್ಘ ಬರುತ್ತದೆ. ಅಜೇ ಅಂತವಾದುದಕ್ಕೆ ಹೇಳಿದಕಾರ್ಯ ಇದಕ್ಕೂ ಬರುವುದೆಂದುದರಿಂದ ಹ್ರಸ್ವಾಂತವಾದ ಅಂಗಕ್ಕೆ ಹೇಳಿದ ಕಾರ್ಯ ಹ್ರಸ್ವರೂಪ ಅಂಗಕ್ಕೂ ಬರುತ್ತವೆ. ಹೀಗೆ "ಸುಪಿ ಚ" ಸೂತ್ರದಿಂದ ದೀರ್ಘಬಂದರೆ ಆಭ್ಯಾಮ್. ಇದಮ್+ಭಿಸ್ ಎಂದಿರುವಾಗ ತ್ಯದಾದ್ಯತ್ವ. ಪರರೂಪ. ಇದ+ಭಿಸ್. "ಹಲಿಲೋಪಃ" ಸೂತ್ರದಿಂದ ಇದಿಗೆ ಲೋಪಬಂದರೆ ಅ+ಭಿಸ್ ಎಂದಾಗುತ್ತದೆ. ಇಲ್ಲಿ ಅಕಾರದಪರದಲ್ಲಿ ಭಿಸ್ ಬಂದುದರಿಂದ "ಅತೋ ಭಿಸ ಐಸ್" ಸೂತ್ರದಿಂದ ಐಸ್ ಆದೇಶ ಪ್ರಾಪ್ತವಾದರೆ ನಿಷೇಧಹೇಳುತ್ತಾನೆ.

(ಭಿಸಿಗೆ ಐಸ್ ನಿಷೇಧ ಹೇಳುವ ಸೂತ್ರ)

೨೬೧. ನೇದಮದಸೋರಕೋಃ ॥ ೭-೧-೧೧ ॥

ಅಕಃಕಾರಯೋರಿದಮದಸೋರ್ಭಿಸ ಐಸ್ ನ। ವಿಭಿ॥ ಅಸ್ಮೈ। ವಿಭ್ಯಃ
ಅಸ್ಮಾತ್। ಅಸ್ಯ। ಅನಯೋಃ। ವಿಷಾಮ್। ಅಸ್ಮಿನ್। ಅನಯೋಃ।
ವಿಷು ॥

ನ. ಇದಮದಸೋಃ, ಅಕೋಃ ॥ ತ್ರಿಪದ ಸೂತ್ರ. ನ ವಿದ್ಯತೇ ಕಕಾರಃ ಯಯೋಃ ಅಕೋಃ ಕಕಾರವಿಲ್ಲದವುಗಳು. "ಅತೋ ಭಿಸ ಐಸ್" ಸೂತ್ರದಿಂದ ಭಿಸಃ, "ಐಸ್" ಅನುವೃತ್ತವಾಗುತ್ತವೆ. **ಸೂತ್ರಾರ್ಥ**–ಕಕಾರರಹಿತವಾದ ಇದಮ್, ಅದಸ್ ಶಬ್ದಗಳ ಸಂಬಂಧಿಯಾದ ಭಿಸಿಗೆ ಐಸ್ ಬರುವುದಿಲ್ಲ. ಐಸ್ ಆದೇಶ ಬಾರದಿದ್ದಲ್ಲಿ "ಬಹುವಚನೇ ಝಲ್ಯೇತ್" ಸೂತ್ರದಿಂದ ಏಕಾರಕ್ಕೆ ಏತ್ವ. ಏಭಿಸ್. ಋತ್ವ ವಿಸರ್ಗ. ಏಭಿಃ ॥ ಚತುರ್ಥಿ ಏಕವಚನ ಪರವಾದಾಗ ತ್ಯದಾದ್ಯತ್ವ, ಪರರೂಪ. ಇದ+ಙೇ. "ಸರ್ವನಾಮ್ನಃ ಸ್ಮೈ" ಸೂತ್ರದಿಂದ ಙೇ ವಿಭಕ್ತಿಗೆ ಅದಂತದ ಸರಲ್ಲಿರುವುದರಿಂದ ಸ್ಮೈ ಆದೇಶ. ಇದ+ಸ್ಮೈ. ಈಗ ಸಲಾದಿ ವಿಭಕ್ತಿಯಾದುದರಿಂದ ಇದಿಗೆ ಲೋಪ. (ಹಲಿಲೋಪಃ) ಅಸ್ಮೈ। ಅಭ್ಯಾಮ್. ಹಿಂದಿನಂತೆ ಪ್ರಕ್ರಿಯಾ. ಏಭ್ಯಃ. ಹಿಂದಿನಂತೆ "ಹಲಿಲೋಪಃ" ಸೂತ್ರದಿಂದ ಇದಿಗೆ ಲೋಪ ಆನಾಮೇಲೆ ಏತ್ವ ॥ ಪಂಚಮೀ ಏಕವಚನದಲ್ಲಿ ಹಿಂದಿನಂತೆ ಇದ+ಙಸಿ ಮಾಡಿದ ಮೇಲೆ ಅದಂತದ ಪರದಲ್ಲಿರುವುದರಿಂದ "ಙಸಿಙ್ಯೋಃಸ್ಮಾತ್ಸ್ಮಿನೌ" ಸೂತ್ರದಿಂದ ವಿಭಕ್ತಿಗೆ ಸ್ಮಾತ್ ಆದೇಶ. ಆಗ ಹಲಾದಿಯಾದುದರಿಂದ ಇದಿಗೆ ಲೋಪ. ಅಸ್ಮಾತ್. ಅಭ್ಯಾಮ್–ಏಭ್ಯಃ॥ ಷಷ್ಠೀ ಏಕವಚನದಲ್ಲಿ ಐಸ್ ಪರವಾದಾಗ ತ್ಯದಾದ್ಯತ್ವ ಪರರೂಪ ಬಂದಮೇಲೆ ಅದಂತವಾದುದರಿಂದ "ಟಾಙಸಿಙಸಾಮಿನಾತ್ಸ್ಯಾಃ" ಸೂತ್ರದಿಂದ ಪ್ರತ್ಯಯಕ್ಕೆ ಸ್ಯ ಆದೇಶ. ಆಗ ಹಲಾದಿಯಾದುದರಿಂದ ಇದಿಗೆ ಲೋಪ. ಅಸ್ಯ ॥ ಇದಮ್+ಓಸ್. ಎಂದಿರುವಾಗ ತ್ಯದಾದ್ಯತ್ವ ಪರರೂಪ. ಇದ+ಓಸ್. ಇಲ್ಲಿ ಹಲಾದಿಯಾಗಾದಿರುವುದರಿಂದ ಇದಿಗೆ ಲೋಪವಿಲ್ಲ. ಆಗ "ಅನಾಪ್ಯಕಃ" ಸೂತ್ರದಿಂದ ಇದಿಗೆ ಅನ್ ಆದೇಶ. ಅನ+ಓಸ್. "ಓ ಸಿಚ" ಸೂತ್ರದಿಂದ ಅಂಕಕ್ಕೆ ಏಕಾರ. ಅನೇ+ಓಸ್. "ಏಙೋಯಾಯಾವಃ" ಸೂತ್ರದಿಂದ ಏಕಾರಕ್ಕೆ ಅಯಾದೇಶ ಸಕಾರಕ್ಕೆ ರುತ್ವ ವಿಸರ್ಗ. ಅನಯೋಃ ॥ ಇದಮ್+ಆಮ್ ಎಂದಿರುವಾಗ ಆತ್ವ, ಪರರೂಪ. ಇದ+ಆಮ್. ಸರ್ವನಾಮವಾದುದರಿಂದ "ಆಮಿಸರ್ವನಾಮ್ನಃ

ಸುಟ್ " ಸೂತ್ರದಿಂದ ಆಮಿಗೆ ಸುಡಾಗಮ. ಟಿತ್ತಾದುದರಿಂದ ಆದ್ಯವಯವವಾಗಿ ಬಂದರೆ ಇದ+ಸಾಮ್ ಎಂದಾಗುತ್ತದೆ. ಈಗ ಪ್ರತ್ಯಯ ಹಲಾದಿಯಾದುದರಿಂದ " ಹಲಿಲೋಪಃ " ಸೂತ್ರದಿಂದ ಇದಿಗೆ ಲೋಪ. ಅ + ಸಾಮ್. ಝಲಾದಿಯಾದ ಬಹುವಚನ ಪರದಲ್ಲಿರುವುದರಿಂದ ಹಿಂದಿನಂತೆ ಏತ್ವ. ಏಸಾಮ್. ಇಣ್ನಿನಸರದ್ಲಿ ಸಕಾರವಿರುವುದರಿಂದ " ಆದೇಶಪ್ರತ್ಯಯಯೋಃ " ಸೂತ್ರದಿಂದ ಷತ್ವ. ಏಷಾಮ್ ॥

ಸಪ್ತಮೀ ಏಕವಚನದಲ್ಲಿ ಙಿಪರವಾದಾಗ ಅತ್ವ, ಪರರೂಪ ಬಂದರೆ ಇದ+ಇ ಎಂದಿರುವಾಗ ಪ್ರತ್ಯಯಕ್ಕೆ ಪಂಚಮಿಯಲ್ಲಿ ಹೇಳಿದಂತೆ ಸ್ಮಿನ್ಆದೇಶ. ಹಲಾದಿಯಾದುದರಿಂದ ಇದಿಗೆ ಲೋಪ. ಅಸ್ಮಿನ್. ಅನಯೋಃ ಹಿಂದಿನಂತೇ ಆಗುತ್ತದೆ. ಸುಪ್ ಪರವಾದಾಗ " ಹಲಿಲೋಪಃ " ಸೂತ್ರದಿಂದ ಇದಿಗೆ ಲೋಪ. " ಬಹುವಚನೇ ಝಲ್ಯೇತ್ " ಸೂತ್ರದಿಂದ ಏತ್ವ. " ಆದೇಶಪ್ರತ್ಯಯಯೋಃ " ಸೂತ್ರದಿಂದ ಸಕಾರಕ್ಕೆ ಷತ್ವ. ಏಷು. ॥ ಕಕಾರ ಬಂದರೆ ಇದಕಮ್ ಶಬ್ದವಾಗುತ್ತದೆ. ಇದು ಅಯಕಮ್ + ಇಮಕಾ—ಇಮಕೇ | ಇತ್ಯಾದಿ ಸರ್ವಶಬ್ದದಂತೆ ರೂಪಹೊಂದುತ್ತದೆ. ಈ ಶಬ್ದದಲ್ಲಿ ಇದಿಗೆ ಲೋಪವಾಗಲೀ, ಅನಾದೇಶವಾಗಲೀ ಇಲ್ಲ. ಹಾಗೆ ಭಿಸ್ ಐಸ್ ನಿಷೇಧವೂ ಇಲ್ಲ. ಇಮಕೇನ ಇಮಕಾಭ್ಯಾಮ್—ಇಮಕೈಃ ॥ ಹೀಗೆ ರೂಪಗಳಾಗುತ್ತವೆ. ಇದಮ್ ಶಬ್ದಕ್ಕೆ ದ್ವಿತೀಯಾದಿಯಲ್ಲಿ ಏನಾದೇಶ ಹೇಳುತ್ತಾನೆ.

(ಏನಾದೇಶ ಹೇಳುವ ಸೂತ್ರ)

೨೮೨. ದ್ವಿತೀಯಾಟೌಸ್ಸ್ವೇನಃ ॥ ೨-೪-೩೪ ॥

ದ್ವಿತೀಯಾಯಾಂ, ಟೌಸೋಶ್ಚ ಪರತಃ ಇದಮೇತದೋರೇನಾದೇಶಃ ಸ್ಯಾದನ್ವಾದೇಶೇ ॥

ಕಂಚಿತ್ಕಾರ್ಯಂ ವಿಧಾತುಮುಪಾತ್ತಸ್ಯ ಕಾರ್ಯಾಂತರಂ ವಿಧಾತುಂ ಪುನರುಪಾದಾನಮನ್ವಾದೇಶಃ | ಯಥಾ—ಅನೇನ ವ್ಯಾಕರಣಮಧೀತಮೇನಂ ಛಂದೋಽಧ್ಯಾಪಯೇತಿ | ಅನಯೋಃ ಪವಿತ್ರಂ ಕುಲಮೇನಯೋಃ ಪ್ರಭೂತಂ ಸ್ವಮಿತಿ ॥ ಏನಮ್ | ಏನೌ | ಏನಾನ್ ॥ ಏನೇನ | ಏನಯೋಃ | ಏನಯೋಃ ॥

ದ್ವಿತೀಯಾಟೌಸ್ಸು, ಏನಃ ॥ ದ್ವಿಪದ ಸೂತ್ರ. " ಇದಮೋಽನ್ವಾದೇಶೇ " ಸೂತ್ರದಿಂದ " ಇದಮಃ " " ಅನ್ವಾದೇಶೇ " ಅನುವೃತ್ತವಾಗುತ್ತವೆ. " ದ್ವಿತೀಯಾಚ, ಟೌಚ, ಓಸ್ಚ, ದ್ವಿತೀಯಾ ಟೌಸಃ, ತೇಷು, ದ್ವೀತಿಯಾಟೌಸ್ಸು." ದ್ವಿತೀಯಾ

ವಿಭಕ್ತಿ, ತೃತೀಯಾ ಏಕವಚನ ಟಾ, ಷಷ್ಠೀ, ಸಪ್ತಮೀ ದ್ವಿವಚನ ಓಸ್ ಇವು ಪರವಾದಾಗ ಎಂದರ್ಥ. " ಏತದಃ " ಹಿಂದಿನ ಸೂತ್ರದಿಂದ (ಏತದಸ್ತ್ರತಸೋಃ) ಅನುವೃತ್ತಿ. **ಸೂತ್ರಾರ್ಥ**—ಇದಮ್, ಏತದ್ ಶಬ್ದಗಳಿಗೆ ದ್ವಿತೀಯಾ, ಟಾ, ಓಸ್ ಈ ವಿಭಕ್ತಿಗಳು ಪರವಾದಾಗ ಅನ್ವಾದೇಶ ವಿಷಯದಲ್ಲಿ "ಏನ್" ಎಂಬ ಆದೇಶ ಬರುತ್ತದೆ. ಅನ್ವಾದೇಶವೆಂದರೇನೆಂಬುದನ್ನು "ಕಿಂಚಿತ್ಕಾರ್ಯಂ—" ಎಂಬ ವಾಕ್ಯದಿಂದ ವಿವರಿಸುತ್ತಾನೆ. ಒಂದು ಅಪೂರ್ವವಾದ ಕಾರ್ಯವನ್ನು ವಿಧಾನಮಾಡಲು ಒಬ್ಬನನ್ನು ಮೊದಲು ತೆಗೆದುಕೊಂಡು, ಪುನಃ ಇನ್ನೊಂದು ಕಾರ್ಯವನ್ನು ಹೇಳಲು ಪುನಃ ಅವನನ್ನೇ ತೆಗೆದುಕೊಳ್ಳುವುದಕ್ಕೆ ಅನ್ವಾದೇಶವೆಂದು ಹೆಸರು. ಹೇಗೆಂದರೆ—ಇವನಿಂದ ವ್ಯಾಕರಣವು ಚನ್ನಾಗಿ ಕಲಿಯಲ್ಪಟ್ಟಿದೆ. ಇವನಿಗೆ ಛಂದಃಶಾಸ್ತ್ರವನ್ನು ಹೇಳಿಕೊಡು. ಇದೊಂದು ಅನ್ವಾದೇಶ. ಇವರಿಬ್ಬರ ಕುಲವು ಪವಿತ್ರವಾಗಿದೆ. ಇವರಿಬ್ಬರಲ್ಲಿ ಬೇಕಾದಷ್ಟು ಹಣವಿದೆ. ಇದೂ ಅನ್ವಾದೇಶ. ಮೊದಲನೇ ವಾಕ್ಯದಲ್ಲಿ ವ್ಯಾಕರಣಾಧ್ಯಯನರೂಪಕಾರ್ಯ ತಿಳಿಸಲು ಒಂದುಸಲ ಉಪಾತ್ತನಾದವನನ್ನೇ ತಿರುಗಿ ಛಂದಸ್ಸು ಹೇಳಲು ಪುನಃ ಉಪಾದಾನಮಾಡಿದೆ. ಹಾಗೆಯೇ ಎರಡನೇ ವಾಕ್ಯದಲ್ಲಿಯೂ ಮೊದಲಿನ ವ್ಯಕ್ತಿಗಳನ್ನೇ ಪುನಃ ತೆಗೆದುಕೊಂಡಿದ್ದಾರೆ. ಹಾಗೆ ಎರಡನೇ ಸಲ ಅವರನ್ನು ಹೇಳುವಾಗ ಅನ್ವಾದೇಶವಿರುವುದರಿಂದ ಏನಾದೇಶ ಹೇಳಬೇಕು. ಮೊದಲನೇಸಲ ಕೇವಲ ಆಯಾಯ ಶಬ್ದಗಳ ರೂಪವನ್ನೇ ಹೇಳಬೇಕು. ಎರಡನೇಸಲ ಅವರನ್ನೇ ಹೇಳುವುದಾದುದರಿಂದ ಏನಾದೇಶ. ಅನೇಕಾಲಾದುದರಿಂದ ಸರ್ವಾದೇಶ. ದ್ವಿತೀಯಾದಲ್ಲಿ ಅಮ್‌ಪರವಾದಾಗ ಏನ+ಅಮ್ ಎಂದಿರುವಾಗ " ಅಮಿಪೂರ್ವಃ " ಸೂತ್ರದಿಂದ ಪೂರ್ವರೂಪ. ಏನಮ್. ಏನ+ಔ ಎಂದಿರುವಾಗ ದ್ವಿವಚನದಲ್ಲಿ ವೃದ್ಧಿ. ಏನೌ. ಬಹುವಚನ ಶಸ್‌ಪರವಾದಾಗ ಪೂರ್ವಸವರ್ಣದೀರ್ಘ. ಸಕಾರಕ್ಕೆ ನಕಾರ. ಏನ + ಅಸ್ = ಏನಾಸ್ = ಏನಾನ್ ॥ ತೃತೀಯಾ ಟಾ ಪರವಾದಾಗ ಏನಾದೇಶ. ಅದಂತದ ಪರದಲ್ಲಿರುವುದರಿಂದ ಟಾ ವಿಭಕ್ತಿಗೆ ಇನಾದೇಶ. ಗುಣ. ಏನ + ಆ = ಏನ + ಇನ = ಏನೇನ. ಓಸ್ ಪರವಾದಾಗ ಏನಾದೇಶ. ಏನ+ಓಸ್. " ಓಸಿಚ " ಸೂತ್ರದಿಂದ ಆಕಾರಕ್ಕೆ ಏತ್ವ. ಅಯಾದೇಶ. ಏನಯೋಃ. ಸಪ್ತಮೀ ದ್ವಿವಚನದಲ್ಲಿಯೂ ಹೀಗೆ ಏನಯೋಃ. ಹೀಗೆ ಇಲ್ಲಿ ಹೇಳಿದ ವಿಭಕ್ತಿಗಳಲ್ಲಿ ಎರಡೆರಡು ರೂಪಗಳಾಗುತ್ತವೆ.

ನಕಾರಾಂತ ರಾಜನ್ ಶಬ್ದ (ರಾಜನು)

ರಾಜಾ.

ರಾಜನ್ ಶಬ್ದದ ಮೇಲೆ ಪ್ರಥಮಾ ಸು ಬಂದಾಗ ಸರ್ವನಾಮಸ್ಥಾನವಾದುದರಿಂದ " ಸರ್ವನಾಮಸ್ಥಾನೇ ಚಾಸಂಬುದ್ಧೌ " ಸೂತ್ರದಿಂದ ಉಪಧಾದೀರ್ಘ.

(ಅಂತ್ಯದ ಹಿಂದಿನ ವರ್ಣ ಉಪಧಾ) ರಾಜಾನ್+ಸ್. " ಹಲ್‌ಜ್ಯಾಭ್ಯೋ—" ಸೂತ್ರದಿಂದ ಸುಲೋಪ. ರಾಜಾನ್. ಪದಾಂತದಲ್ಲಿ ನಕಾರವಿರುವುದರಿಂದ " ನಲೋಪಃ ಪ್ರಾತಿಪದಿಕಾಂತಸ್ಯ " ಸೂತ್ರದಿಂದ ನಕಾರಕ್ಕೆ ಲೋಪ. ರಾಜಾ. ಸಂಬುದ್ಧಿಯ ಪದವಾದಾಗಲೂ ಹೀಗೆ ಲೋಪಪ್ರಾಪ್ತವಾದರೆ ನಿಷೇಧ ಹೇಳುತ್ತಾನೆ.

(ಸಂಬುದ್ಧಿಯಲ್ಲಿ ನಲೋಪ ನಿಷೇಧ ಹೇಳುವ ಸೂತ್ರ)

೨೮೩. ನ ಜಿಸಂಬುದ್ಧ್ಯೋಃ ॥ ಲ-೨-೮ ॥

ನಸ್ಯ ಲೋಪೋ ನ ಜಿ ಸಂಬುದ್ಧೌ ಚ ॥ ಹೇ ರಾಜನ್ (ಜಾವುತ್ತರ ಪದೇ ಪ್ರತಿಷೇಧೋ ವಕ್ತವ್ಯಃ) ಬ್ರಹ್ಮನಿಷ್ಠಃ ॥ ರಾಜಾನೌ ॥ ರಾಜಾನಃ । ರಾಜ್ಞಃ ।

ನ, ಜಿಸಂಬುದ್ಧ್ಯೋಃ ॥ ದ್ವಿಪದಸೂತ್ರ. " ಜಿ ಚ ಸಂಬುದ್ಧಿಶ್ಚ ಜಿಸಂಬುದ್ಧೀ–ತಯೋಃ ಜಿಸಂಬುದ್ಧ್ಯೋಃ " ಜಿ, ಸಂಬುದ್ಧಿ ಪರದಲ್ಲಿರುವಾಗ ಎಂದರ್ಥ. " ನ ಲೋಪಃ–" ಸೂತ್ರದಿಂದ " ನ " " ಲೋಪಃ " ಅನುವೃತ್ತವಾಗುತ್ತವೆ. ಎಂಬಲ್ಲಿ ಷಷ್ಠೀಲೋಪವಾಗಿದೆ. ನಕಾರಕ್ಕೆ ಎಂದರ್ಥ. **ಸೂತ್ರಾರ್ಥ**—ಜಿಮತ್ತು ಸಂಬುದ್ಧಿ ಪರದಲ್ಲಿರುವಾಗ ನಾಂತಪದದ ನಕಾರಕ್ಕೆ ಲೋಪಬರುವುದಿಲ್ಲ. ಪ್ರಕೃತ ಸಂಬುದ್ಧಿ ಪರವಾದುದರಿಂದ ನಕಾರಕ್ಕೆ ಲೋಪವಿಲ್ಲ. " ಸರ್ವನಾಮಸ್ಥಾನೇಚ್ಚಾ ಸಂಬುದ್ಧೌ " ಸೂತ್ರದಲ್ಲಿ " ಅಸಂಬುದ್ಧೌ " ಎಂದು ಸಂಬುದ್ಧಿಯಲ್ಲಿ ನಿಷೇಧಮಾಡಿರುವುದರಿಂದ ಉಪಧಾದೀರ್ಘವೂ ಇಲ್ಲ. " ಹಲ್‌ಜ್ಯಾಭ್ಯೋ —" ಸೂತ್ರದಿಂದ ಸುವಿನ ಲೋಪ. ಹೇ ರಾಜನ್. ಛಂದಸ್ಸಿನಲ್ಲಿ ಜಿಪರವಾದಾಗ ಲೋಪನಿಷೇಧಕ್ಕೆ ಉದಾಹರಣೆ ಸಿಗುತ್ತದೆ. ಪದಾಂತದಲ್ಲಿ ಜಿಪರವಾದಾಗ ಲೋಪಬರುವುದಿಲ್ಲವೆಂಬುದಕ್ಕೆ ವಾರ್ತಿಕದಿಂದ ನಿಷೇಧ ಹೇಳುತ್ತಾನೆ. " ಜಾವುತ್ತರೇತಿ– ॥ " ವಾರ್ತಿಕಾರ್ಥ. ಉತ್ತರಪದಪರದಲ್ಲಿರುವಾಗ ಯಾವ ಜಿ ಇದೆಯೋ ಅದು ಪರವಾದಾಗ " ನಜಿ ಸಂಬುದ್ಧ್ಯೋಃ " ಎಂಬ ನಿಷೇಧವು ಬರುವುದಿಲ್ಲ. ಹೀಗಿರುವಾಗ ನ ಲೋಪ ಬರುವುದೆಂದರ್ಥ. ಸಮಾಸದಲ್ಲಿ ಇದರ ಉದಾಹರಣೆ ಸಿಗುತ್ತದೆ. ಬ್ರಹ್ಮನಿಷ್ಠಃ. " ಬ್ರಹ್ಮಣಿ ನಿಷ್ಠಾ ಯಸ್ಯ ಸಃ " ಇಲ್ಲಿ ಬ್ರಹ್ಮನ್+ಜಿ, ನಿಷ್ಠಾಸು ಎಂದು ಆಲೌಕಿಕ ವಿಗ್ರಹವಾಕ್ಯ. ಇಲ್ಲಿ ಜಿಗೆ ನಿಷ್ಠಾ ಎಂಬ ಉತ್ತರಪದಪರದಲ್ಲಿದೆ. ಆದುದರಿಂದ ನಲೋಪ ಬರುತ್ತದೆ. ಸಮಾಸದಲ್ಲಿ ಸುಪಿಗೆ ಲುಕ್. ಅಂತ್ಯಕ್ಕೆ ಹ್ರಸ್ವ. ಬ್ರಹ್ಮ

ನಿಷ್ಠ ಎಂದಾದಮೇಲೆ ಸಮಾಸವಾದುದರಿಂದ ಪ್ರಾತಿಪದಿಕಸಂಜ್ಞೆ ಬಂದು ಅದರಮೇಲೆ ಸು ಮೊದಲಾದವುಗಳು ಬರುತ್ತವೆ. ಬ್ರಹ್ಮನಿಷ್ಠಃ ॥

ರಾಜನ್+ಔ ಎಂದಿರುವಾಗ " ಸರ್ವನಾಮಸ್ಥಾನೇ ಚ್ಚಾಸಂಬುದ್ಧೌ " ಸೂತ್ರದಿಂದ ಉಪಧಾದೀರ್ಘ. ರಾಜಾನೌ. ರಾಜನ್+(ಜ್)ಅಸ್. ಇಲ್ಲಿಯೂ ಹಾಗೇ ದೀರ್ಘ. ಜೆಟ್ಟನ ವರೆಗೆ ದೀರ್ಘ. ರಾಜಾನಸ್. ರುತ್ವವಿಸರ್ಗ. ರಾಜಾನಃ ॥ ಸಂಬೋಧನಾ ದ್ವಿಬಹುವಚನಗಳಲ್ಲಿ ಹೀಗೇ ರೂಪ. ಹೇ ರಾಜಾನೌ–ಹೇ ರಾಜಾನಃ ॥ ದ್ವಿತೀಯಾದಲ್ಲಿ ರಾಜಾನಮ್–ರಾಜಾನೌ. ರಾಜನ್+ಶಸ್=ರಾಜನ್+ಅಸ್ ಎಂದಿರುವಾಗ ಸರ್ವನಾಮಸ್ಥಾನವಿಲ್ಲವಾದುದರಿಂದ ದೀರ್ಘವಿಲ್ಲ. ಅಜಾದಿ ಪ್ರತ್ಯಯ ಪರವಾದುದರಿಂದ " ಯಚಿಭಮ್ " ಸೂತ್ರದಿಂದ ಭ ಸಂಜ್ಞೆ ಬರುತ್ತದೆ. ಆಗ " ಅಲ್ಲೋಪೋನಃ " ಸೂತ್ರ (248)ದಿಂದ ಅನಿನ ಅಕಾರಕ್ಕೆ ಲೋಪ. ರಾಜ್+ನ್+ಅಸ್. ನಕಾರಕ್ಕೆ " ಸ್ತೋಃ ಶ್ಚುನಾ ಶ್ಚುಃ " ಸೂತ್ರದಿಂದ ಞಕಾರಾದೇಶ. ಜ ಞ ಸೇರಿದರೆ ಜ್ಞ ಆಗುತ್ತದೆ. ರಾಜ್ಞಃ ॥

ಇನ್ನು ಅಜಾದಿಯಲ್ಲಿ ಎಲ್ಲಾ ಕಡೆಯಲ್ಲಿಯೂ ಅನಿನ ಅಕಾರಕ್ಕೆ ಲೋಪ ತೃತೀಯಾ ಏಕವಚನದಲ್ಲಿ ರಾಜನ್+(ಟ್)ಆ=ರಾಜ್ಞಾ. ರಾಜನ್+ಭ್ಯಾಮ್ " ನಲೋಪಃ " ಸೂತ್ರದಿಂದ ನಲೋಪ. ರಾಜಭ್ಯಾಮ್. ಇನ್ನು ಹಲಾದಿ ವಿಭಕ್ತಿಗಳಲ್ಲಿ ಪದಸಂಜ್ಞೆಯಿರುವುದರಿಂದ ನಲೋಪ. ರಾಜಭಿಃ ॥ ಚ–ರಾಜನ್+ಏ ರಾಜ್ಞೇ-ರಾಜಭ್ಯಾಮ್–ರಾಜಭ್ಯಃ ॥ ಪಂ–ರಾಜನ್ + ಅಸ್=ರಾಜ್ಞಃ—ರಾಜಭ್ಯಾಮ್—ರಾಜಭ್ಯಃ ॥ ಷ–ರಾಜ್ಞಃ–ರಾಜ್ಞೋಃ–ರಾಜ್ಞಾಮ್. ॥ ಸಪ್ತಮೀ ಏಕವಚನದಲ್ಲಿ ಜಿ ಪರವಾದಾಗ ನಿತ್ಯವಾಗಿ ಲೋಪ ಪ್ರಾಪ್ತವಾದರೆ " ವಿಭಾಷಾ ಜಿಶ್ಯೋಃ " ಸೂತ್ರ (250)ದಿಂದ ವಿಕಲ್ಪಲೋಪ. ಲೋಪ ಬಂದರೆ ರಾಜ್ಞಿ. ಬಾರದಿದ್ದರೆ ರಾಜನಿ–ರಾಜ್ಞೋಃ–ರಾಜಸು.

ರಾಜ+ಭ್ಯಾಮ್ ಎಂದಿರುವಾಗ ಅಕಾರದ ಪರದಲ್ಲಿ ಸುಪ್ಪಿರುವುದರಿಂದ " ಸುಪಿ ಚ " ಸೂತ್ರದಿಂದ ದೀರ್ಘವೂ, ರಾಜ+ಭ್ಯಸ್ ಎಂದಿರುವಾಗ " ಬಹುವಚನೇಝ್ಯಲ್ಯೋತ್ " ಸೂತ್ರದಿಂದ ಏತ್ವವೂ, ರಾಜ+ಭಿಸ್ ಎಂದಿರುವಾಗ " ಅತೋ ಭಿಸ ಐಸ್ " ಸೂತ್ರದಿಂದ ಭಿಸಿಗೆ ಐಸ್ತ್ವವೂ ಏಕೆ ಬರಬಾರದು? ನಲೋಪವಾದ ಮೇಲೆ ಎಲ್ಲಾ ಕಡೆಯಲ್ಲಿಯೂ ಅಕಾರಾಂತವಾಗಿದೆ, ಅಂದರೆ ನಲೋಪ ಅಸಿದ್ಧವಾದುದರಿಂದ ಬರುವುದಿಲ್ಲವೆನ್ನಬೇಕು. " ಸುಪಿ ಚ " ಮುಂತಾದ ಸೂತ್ರಗಳು ಸಪಾದ ಸಪ್ತಾಧ್ಯಾಯಿಯಲ್ಲಿವೆ. ನಲೋಪ ಹೇಳುವ ಸೂತ್ರವು ತ್ರಿಪಾದಿಯಲ್ಲಿದೆ. " ಪೂರ್ವತ್ರಾಸಿದ್ಧಮ್" ಸೂತ್ರವು ತ್ರಿಪಾದಿ ಅಸಿದ್ಧವೆಂದು ಹೇಳಿದೆ. ನಲೋಪ ಅಸಿದ್ಧವಾದುದರಿಂದ " ಸುಪಿಚ " ಮುಂತಾದ ಸೂತ್ರಗಳು ಅಲ್ಲಿ ನಕಾರವಿದೆಯೆಂದೇ ತಿಳಿದಿರುತ್ತವೆ.

ನಾಂತವಾದುದರಿಂದ ಅದಂತವಾಗಲಿಲ್ಲ. ಆದುದರಿಂದ ಆತ್ವ, ಏತ್ವ, ಐಸ್ತ್ವಗಳು ಬರುವುದಿಲ್ಲ. ಹೀಗೆ ಸಾಮಾನ್ಯವಾಗಿ ನ ಲೋಪವು ಅಸಿದ್ಧವಾದುದರಿಂದ ನಕಾರ ವಿದ್ದಂತೇ ಪೂರ್ವ ಸೂತ್ರಗಳು (ಸಪಾದ ಸಪ್ತಾಧ್ಯಾಯೀ) ತಿಳಿದಿರುವುದರಿಂದ ಯಾವ ಕಾರ್ಯಗಳೂ ಬಾರದೇ ಹೋದರೆ ನಲೋಪ ವಿಷಯದಲ್ಲಿ ಮಾತ್ರ ಕೆಲವು ಕಡೆಗಳಲ್ಲಿ ಅಸಿದ್ಧವೆಂದೂ ಇನ್ನು ಕೆಲವು ಕಡೆಯಲ್ಲಿ ಅದು ಸಿದ್ಧವೇ ಆಗುತ್ತದೆಂದೂ ಸೂತ್ರದಿಂದ ನಿಯಮ ಮಾಡುತ್ತಾನೆ.

(ನಲೋಪಕ್ಕೆ ಅಸಿದ್ಧತ್ವವನ್ನು ನಿಯಮಮಾಡುವ ಸೂತ್ರ)

೨೮೪. ನಲೋಪಃ ಸುಪ್ ಸ್ವರಸಂಜ್ಞಾತುಗ್ವಿಧಿಷು ಕೃತಿ ॥ ೮-೨-೨ ॥

ಸುಬ್ವಿಧಾ, ಸ್ವರವಿಧಾ, ಕೃತಿ ತುಗ್ವಿಧೌ ಚ ನಲೋಪೋಽಸಿದ್ಧೋ ನಾನ್ಯತ್ರ-ರಾಜಾಶ್ವ ಇತ್ಯಾದೌ। ಇತ್ಯಸಿದ್ಧತ್ವಾದಾತ್ವಮೇತ್ವ ಮೈಸ್ತ್ವಂ ಚ ನ ॥ ರಾಜಭ್ಯಾಮ್. ಇತ್ಯಾದಿ ॥

ತ್ರಿಪದಸೂತ್ರ. "ನಸ್ಯಲೋಪಃ ನಲೋಪಃ". "ಸುಪ್ಚ ಸ್ವರಶ್ಚ ಸಂಜ್ಞಾಚ ತುಕ್ಚ-ಸುಪ್ಸ್ವರಸಂಜ್ಞಾತುಕಃ"-"ಸು....ತುಕಾಂ ವಿಧಯಃ ಸುಪ್ಸ್ವರ ಸಂಜ್ಞಾತುಕ್ವಿಧಯಃ"। ತೇಷು. "ಪೂರ್ವತ್ರಾ ಸಿದ್ಧಮ್" ಹಿಂದಿನ ಸೂತ್ರಾನುವೃತ್ತಿಯಿದೆ. ಕೃತಿ ಎಂಬುದುಕ್ಕೆ ತುಕಿನಲ್ಲಿ ಮಾತ್ರ ಸಂಬಂಧ. ಸುಬಾದಿಗಳಲ್ಲಿ ಅಸಂಭವವಾದುದರಿಂದ ವಿಶೇಷಣವಿಲ್ಲ. **ಸೂತ್ರಾರ್ಥ**—ಸುಪನು ಆಶ್ರಯಿಸಿ ಮಾಡುವ ಕಾರ್ಯದಲ್ಲಿಯೂ, ಸ್ವರ ವಿಧಾನಮಾಡುವಾಗಲೂ, ಸಂಜ್ಞಾ ವಿಧಾನಮಾಡುವಾಗಲೂ, ಕೃತ್ಪ್ರತ್ಯಯ ಪರವಾದಾಗ ಮಾಡುವ ತುಕ್‌ವಿಧಿಯಲ್ಲಿಯೂ ನಲೋಪವು ಅಸಿದ್ಧವಾಗುತ್ತದೆ- ಇತರ ಕಾರ್ಯಮಾಡುವಾಗ ಅಸಿದ್ಧವಾಗುವುದಿಲ್ಲ. ಪೂರ್ವಸೂತ್ರದಿಂದಲೇ ನಲೋಪವು ಅಸಿದ್ಧವೆಂದು ತಿಳಿದಮೇಲೆ ಈ ಸೂತ್ರವು ಪುನಃ ಅಸಿದ್ಧಭಾವ ಹೇಳಿದುದರಿಂದ "ಸಿದ್ಧೇ ಸತ್ಯಾರಭ್ಯಮಾಣೋ ವಿಧಿಃ ನಿಯಮಾಯ" ಎಂಬಂತೆ ನಿಯಮಮಾಡುತ್ತದೆ. ಇಲ್ಲಿ ಹೇಳಿದ ಕಾರ್ಯ ಮಾಡುವಾಗಮಾತ್ರ ಅಸಿದ್ಧ. ಬೇರೆ ಕಾರ್ಯಮಾಡುವಾಗ ಅಸಿದ್ಧವಾಗುವುದಿಲ್ಲ ಎಂದು ನಿಯಮದ ಫಲ. ಪ್ರಕೃತ ಸುಬಾಶ್ರಯ ವಿಧಿಯಾದುದರಿಂದ ನಲೋಪ ಅಸಿದ್ಧವಾಗುತ್ತದೆ. ಆದುದರಿಂದ ಆತ್ವ, ಏತ್ವ, ಐಸ್ತ್ವಕಾರ್ಯಗಳು ಬರುವುದಿಲ್ಲ. ಇತರ ಕಡೆಯಲ್ಲಿ ಅಸಿದ್ಧವಾಗುವುದಿಲ್ಲವೆಂದುದರಿಂದ ರಾಜಾಶ್ವ ಎಂಬಲ್ಲಿ ಸವರ್ಣ ದೀರ್ಘ ಬಂದಿದೆ. "ರಾಜನ್+ಅಸ್+ಅಶ್ವ+ಸ್" ಎಂದು ಅಲೌಕಿಕ ವಿಗ್ರಹ

ವಾಕ್ಯ. ಇಲ್ಲಿ ಸುಲೋಪವಾದಮೇಲೆ ನಲೋಪ. ನಲೋಪವಾದದ್ದು ಸವರ್ಣ ದೀರ್ಘ ವಿಧಾಯಕ ಸೂತ್ರಕ್ಕೆ ಸಿದ್ಧವಾದುದರಿಂದ ಬರಲು ತೊಂದರೆ ಇಲ್ಲ. ರಾಜಾಶ್ವಃ ॥

ನಕಾರಾಂತ ಯಜ್ವನ್ ಶಬ್ದ. (ಯಾಗಮಾಡುವವನು.)

ಯಜ್ವಾ-ಯಜ್ವಾನೌ-ಯಜ್ವಾನಃ।

ಸರ್ವನಾಮಸ್ಥಾನದವರೆಗೆ (ಸು-ಔಟ್) ರಾಜನ್ ಶಬ್ದದಂತೇ ರೂಪ. ನ ಲೋಪದೀರ್ಘ. ಯಜ್ವಾ-ಯಜ್ವಾನೌ-ಯಜ್ವಾನಃ ॥ ಹೇ ಯಜ್ವನ್-ಹೇ ಯಜ್ವಾನೌ-ಹೇ ಯಜ್ವಾನಃ ॥ ಯಜ್ವಾನಂ-ಯಜ್ವಾನೌ- ॥ ಯಜ್ವನ್ಸ್+(ಶ್) ಎಂದಿರುವಾಗ "ಅಲ್ಲೋಪೋಽನಃ" ಸೂತ್ರದಿಂದ ಅಕಾರಲೋಪಪ್ರಾಪ್ತವಾದರೆ ನಿಷೇಧಹೇಳುತ್ತಾನೆ.

(ಅಲ್ಲೋಪಕ್ಕೆ ನಿಷೇಧ ಹೇಳುವ ಸೂತ್ರ)

೨೮೫. ನ ಸಂಯೋಗಾದ್ವಮಂತಾತ್ ॥ ೬-೪-೧೩೭ ॥

ವಮಂತಸಂಯೋಗಾದನೋಽಕಾರಸ್ಯ ಲೋಪೋ ನ। ಯಜ್ವನಃ। ಯಜ್ವನಾ। ಯಜ್ವಭ್ಯಾಮ್ ॥ ಬ್ರಹ್ಮಣಃ। ಬ್ರಹ್ಮಣಾ ॥

ನ, ಸಂಯೋಗಾತ್, ವಮಂತಾತ್ ॥ ತ್ರಿಪದಸೂತ್ರ. "ವಶ್ಚ ಮ್ಚ ವಮೌ. ವಮೌ ಅಂತೌ ಯಸ್ಯ ಸಃ ವಮಂತಃ, ತಸ್ಮಾತ್ ವಮಂತಾತ್". ವಕಾರಮಕಾರಗಳೇ ಕೊನೆಯಲ್ಲಿರುವ ಎಂದರ್ಥ. "ಅಲ್ಲೋಪೋಽನಃ" ಅನುವೃತ್ತಿ. **ಸೂತ್ರಾರ್ಥ**-ವಕಾರವೇ ಅಂತವಾದ ಅಥವಾ ಮಕಾರವೇ ಅಂತವಾದ ಸಂಯೋಗದ ಪರದಲ್ಲಿರುವ ಅನಿನ ಅಕಾರಕ್ಕೆ ಲೋಪ ಬರುವುದಿಲ್ಲ. ಯಜ್ವನ್+ಅಸ್ ಎಂಬಲ್ಲಿ (ಯಜ್+ವ್+ಅನ್+ಅಸ್) ವಕಾರವೇ ಅಂತವಾದ ಸಂಯೋಗ ಆಂದರೆ ಜ್+ವ್ ಆದರ ಪರದಲ್ಲಿ ಅನ್ ಬಂದುದರಿಂದ ಅಕಾರಕ್ಕೆ ಲೋಪವಿಲ್ಲ. ಯಜ್ವನಃ ॥ ಇನ್ನು ಆಜಾದಿಯಲ್ಲಿ ಕೇವಲ ವಿಭಕ್ತಿ ಸೇರಿಸುವುದು ಮಾತ್ರ. ಹಲಾದಿಯಲ್ಲಿ ನಲೋಪ. ತೃ॥ ಯಜ್ವನಾ-ಯಜ್ವಭ್ಯಾಮ್-ಯಜ್ವಭಿಃ ॥ ಚ-ಯಜ್ವನೇ ಯಜ್ವಭ್ಯಾಮ್-ಯಜ್ವಭ್ಯಃ ॥ ಙ-ಯಜ್ವನಃ-ಯಜ್ವಭ್ಯಾಮ್-ಯಜ್ವಭ್ಯಃ ॥ ಷ. ಯಜ್ವನಃ-ಯಜ್ವನೋಃ-ಯಜ್ವನಾಮ್॥ ಸ-ಯಜ್ವನಿ-ಯಜ್ವನೋಃ-ಯಜ್ವಸು॥ ಮಕಾರಾಂತ

ಸಂಯೋಗದ ಪರದ ಅನಿಗೆಲೋಪ ಬರುವುದಿಲ್ಲವೆಂದು ಸೂಚಿಸಲು " ಬ್ರಹ್ಮಣಃ ಬ್ರಹ್ಮಣಾ" । ಉದಾಹರಣೆ ಕೊಡುತ್ತಾನೆ. ಬ್ರಹ್ಮನ್ ಶಬ್ದ. ಸುಟ್ ವರೆಗೆ ರಾಜನ್‌ಶಬ್ದದಂತೆ. ಪ್ರ. ಬ್ರಹ್ಮಾ–ಬ್ರಹ್ಮಾಣೌ–ಬ್ರಹ್ಮಾಣಃ॥ ದ್ವಿ. ಬ್ರಹ್ಮಾಣಂ–ಬ್ರಹ್ಮಾಣೌ–ಬ್ರಹ್ಮನ್ + ಅಸ್ ಎಂದಿರುವಾಗ ಅನಿನ ಅಕಾರಕ್ಕೆ ಲೋಪವಿಲ್ಲ. ಹ್ಮ್ ಸಂಯೋಗ. ಇದು ಮಕಾರಾಂತವಾಗಿದೆ. ಇದರ ಪರದಲ್ಲಿರುವುದರಿಂದ ಲೋಪ ವಿಲ್ಲ. ಯಜ್ವನ್ ಶಬ್ದದಂತೇ. ಬ್ರಹ್ಮಣಃ॥ ತೃ–ಬ್ರಹ್ಮಣಾ–ಇತ್ಯಾದಿ.

ನಕಾರಾಂತ " ವೃತ್ರಹನ್ " ಶಬ್ದ. (ಇಂದ್ರ)

" ವೃತ್ರಂ ಹತವಾನ್. " ಇಂದ್ರನನ್ನು ಕೊಂದವನು. ಹನ್ ಧಾತುವಿಗೆ ಕ್ವಿಪ್ ಪ್ರತ್ಯಯ. ಕೃದಂತವಾದುದರಿಂದ ಪ್ರಾತಿಪದಿಕ ಸಂಜ್ಞೆ. ಸು ಪರವಾದಾಗ ದೀರ್ಘ ಪ್ರಾಪ್ತವಾದರೆ ನಿಯಮ ಮಾಡುತ್ತಾನೆ.

(ಉಪಧಾದೀರ್ಘ ನಿಯಮ ಮಾಡುವ ಸೂತ್ರ)

೨೪೬. ಇನ್‌ಹನ್‌ಪೂಷಾರ್ಯಮ್ಣಾಂ ಶೌ ॥ ೬-೪-೧೨ ॥

ಏಷಾಂ ಶಾವೇವೋಪಧಾಯಾ ದೀರ್ಘೋ ನಾನ್ಯತ್ರ ॥ ಇತಿ ನಿಷೇಧೇ ಪ್ರಾಪ್ತೇ ॥

ದ್ವಿಪದ ಸೂತ್ರ. " ಧ್ರಲೋಪೇ–ದೀರ್ಘೋ೭ಣಃ " ಸೂತ್ರದಿಂದ " ದೀರ್ಘಃ" " ನೋಪಧಾಯಾಃ " ಸೂತ್ರದಿಂದ " ಉಪಧಾಯಾಃ ', ಪದಗಳಿಗೆ ಅನುವೃತ್ತಿ. ಇನ್ ಚ, ಹನ್ ಚ, ಪೂಷಾ ಚ, ಅರ್ಯಮಾ ಚ, " ಇನ್ ಹನ್ ಪೂಷಾರ್ಯಮಣಃ " ತೇಷಾಂ. " ಅಂಗಸ್ಯ " ಅಧಿಕಾರ. ಇನ್ನಾದಿಗಳು ಅಂಗಕ್ಕೆ ವಿಶೇಷಣ. ಇನ್ನಾದ್ಯಂತ ಅಂಗಕ್ಕೆ ಎಂದರ್ಥವಾಗುತ್ತದೆ. **ಸೂತ್ರಾರ್ಥ**—ಇನ್ ಹನ್, ಪೂಷನ್, ಅರ್ಯಮನ್ ಅಂತವಾದ ಅಂಗದ ಉಪಧೆಗೆ ಶೀ ಪರವಾದಾಗ ಮಾತ್ರ ದೀರ್ಘ, ಇತರ ಕಡೆಯಲ್ಲಿ ದೀರ್ಘ ಬರುವುದಿಲ್ಲ. " ಸರ್ವನಾಮ ಸ್ಥಾನೇ ಚಾಸಂಬುದ್ಧಾ " ಸೂತ್ರದಿಂದ ದೀರ್ಘ ಬರುತ್ತಿರುವಾಗ ಈ ಸೂತ್ರದಿಂದ ಪುನಃ ದೀರ್ಘ ಹೇಳದುದು ವ್ಯರ್ಥವಾಗಿ " ಸಿದ್ಧೇಸತ್ಯಾರಭ್ಯಮಾಣೋ ವಿಧಿಃ ನಿಯಾಮಯ " ಎಂಬಂತೆ ನಿಯಮವನ್ನು ಮಾಡುತ್ತದೆ. ಶಿ ರೂಪ ಸರ್ವನಾಮ ಸ್ಥಾನದಲ್ಲಿ ಮಾತ್ರ ಉಪಧಾದೀರ್ಘ. ಇತರ ಸರ್ವನಾಮಸ್ಥಾನಗಳಲ್ಲಿ ದೀರ್ಘವಿಲ್ಲ.

ಇದೇ ನಿಯಮ. ಪ್ರಕೃತ ಇಲ್ಲಿ ಶಿ ಸರ್ವನಾಮಸ್ಥಾನವಿಲ್ಲ. ಸುವಿದೆ. ಆದುದರಿಂದ ನಿಷೇಧ ಪ್ರಾಪ್ತವಾದರೆ.

(ಸುವಿನಲ್ಲಿ ಉಪಧಾದೀರ್ಘ ಹೇಳುವಸೂತ್ರ)

೨೪೭. ಸೌ ಚ ॥ ೬-೪-೧೩ ॥

ಇನ್ಹಾದೀನಾಮುಪಧಾಯಾ ದೀರ್ಘೋ೭ಸಂಬುದ್ಧೌ ಸೌ ॥ ವೃತ್ರಹಾ

ದ್ವಿಪದ ಸೂತ್ರ. ಹಿಂದಿನ ಸೂತ್ರವೇ ಅನುವೃತ್ತವಾಗುತ್ತದೆ. " ಸರ್ವನಾಮ ಸ್ಥಾನೇಚಾ೭ಸಂಬುದ್ಧೌ " ಸೂತ್ರದಿಂದ " ಅಸಂಬುದ್ಧೌ " ಅನುವೃತ್ತಿ. ಹಿಂದಿನ ಸೂತ್ರದಿಂದ ನಿಷೇಧ ಬಂದರೆ ಇದು ಪುನಃ ಕಾರ್ಯ ಹೇಳುತ್ತದೆ. **ಸೂತ್ರಾರ್ಥ**—ಸಂಬುದ್ಧಿಯಲ್ಲದ ಸುಪರವಾದಾಗ ಇನ್ನಾದ್ಯಂತ ಅಂಗದ ಉಪಧೆಗೆ ದೀರ್ಘ ಬರುತ್ತದೆ. ಸರ್ವನಾಮಸ್ಥಾನ ಸಂಪೂರ್ಣದಲ್ಲಿ ನಿಷೇಧ ಬಂದರೆ ಸುವಿನಲ್ಲಿ ಮಾತ್ರ ಬರಬಹುದೆಂದು ಈ ಸೂತ್ರ ಹೇಳುತ್ತದೆ. ಪ್ರಕೃತ ಹನ್ನಂತ ಅಂಗ ವೃತ್ರಹನ್. ಅದಕ್ಕೆ ಸುಪರವಾದುದರಿಂದ ದೀರ್ಘ. ವೃತ್ರಹಾನ್ + ಸ್. " ಹಲ್‌ಙ್ಯಾಬ್ಭ್ಯೋ "—ಸೂತ್ರದಿಂದ ಸುವಿಗೆ ಲೋಪ. " ನಲೋಪಃ–" ಸೂತ್ರದಿಂದ ನಲೋಪ. ವೃತ್ರಹಾ. ಸಂಬುದ್ಧಿ ಸುವಿನಲ್ಲಿ " ಅಸಂಬುದ್ಧೌ " ಎಂದು ನಿಷೇಧಮಾಡಿರುವುದರಿಂದ ಸುವಿನಲ್ಲಿ ದೀರ್ಘವಿಲ್ಲ. " ನಜಿಸಂಬುದ್ಧ್ಯೋಃ " ಸೂತ್ರದಿಂದ ನಲೋಪ ನಿಷೇಧ. ಹೇ ವೃತ್ರಹನ್. ವೃತ್ರಹನ್ + ಔ ಎಂದಿರುವಾಗ ಹಿಂದಿನಸೂತ್ರದ ನಿಯಮದಿಂದ ದೀರ್ಘವಿಲ್ಲ. " ವೃತ್ರಹನೌ. ರೇಫನಕಾರಗಳ ಮಧ್ಯದಲ್ಲಿ ಅಟ್ ಮಾತ್ರ ವ್ಯವಧಾನವಿದ್ದರೂ " ಅಟ್‌ಕುಪ್ವಾಙ್‌ನುಮ್‌ವ್ಯವಾಯೇ೭ಪಿ " ಸೂತ್ರದಿಂದ ನಕಾರಕ್ಕೆ ಣತ್ವ ಬರುವುದಿಲ್ಲ. ಅಲ್ಲಿ " ಸಮಾನಪದೇ"=ಒಂದೇ ಪದದಲ್ಲಿ ನಿಮಿತ್ತನಿಮಿತ್ತಿ ಇರಬೇಕು ಎಂದಿದೆ. ಇಲ್ಲಿ ಎರಡು ಪದಗಳಿದ್ದು ನಿಮಿತ್ತ ಒಂದು ಪದದಲ್ಲಿ ಸ್ಥಾನಿ ಒಂದು ಪದದಲ್ಲಿ ಇದೆ. ಆದುದರಿಂದ ಣತ್ವವಿಲ್ಲ, ಅದಕ್ಕೋಸ್ಕರ ಅನ್ಯಸೂತ್ರದಿಂದ ಇಲ್ಲಿ ಣತ್ವ ಹೇಳುತ್ತಾನೆ.

(ನಕಾರಕ್ಕೆ ಣಕಾರ ಹೇಳುವ ಸೂತ್ರ)

೨೪೮. ಏಕಾಜುತ್ತರಪದೇ ಣಃ ॥ ೮-೪-೧೨ ॥

ಏಕಾಜುತ್ತರಪದಂ ಯಸ್ಯ ತಸ್ಮಿನ್ ಸಮಾಸೇ ಪೂರ್ವಪದಸ್ಥಾನ್ನಿಮಿತ್ತಾತ್ಪರಸ್ಯ ಪ್ರಾತಿಪದಿಕಾಂತ ನುಮ್ ವಿಭಕ್ತಿಸ್ಥಸ್ಯ ನಸ್ಯ ಣಃ ॥ ವೃತ್ರಹಣಾ ॥

ದ್ವಿಪದ ಸೂತ್ರ. " ಪ್ರಾತಿಪದಿಕಾಂತನುಮ್ ವಿಭಕ್ತಿಷು ಚ " ಹಿಂದಿನ ಸೂತ್ರವೇ ಅನುವೃತ್ತವಾಗುತ್ತದೆ. " ಪೂರ್ವಪದಾತ್ಸಂಜ್ಞಾಯಾಮಗಃ " ಸೂತ್ರದಿಂದ " ಪೂರ್ವಪದಾತ್ " ಅನುವೃತ್ತಿ. " ಪೂರ್ವಂ ಪದಂ ಯಸ್ಯ ತತ್ ಪೂರ್ವಪದಮ್ ". ತಸ್ಮಾತ್. ದ್ವಿವಚನಾಂತವಾಗಿ ವಿಪರಿಣಾಮ ಮಾಡಿಕೊಳ್ಳಬೇಕು. ಪೂರ್ವಪದದಲ್ಲಿರುವ ನಿಮಿತ್ತದ ಪರದಲ್ಲಿರುವ ಎಂದರ್ಥ. " ಏಕಃ ಅಚ್ ಯಸ್ಮಿನ್ ತತ್, ಏಕಾಚ್. " " ಏಕಾಚ್ ಉತ್ತರಪದಂ ಯಸ್ಯ ಸಃ " ಏಕಾಜುತ್ತರಪದಃ ತಸ್ಮಿನ್ ಏಕಾಜುತ್ತರಪದೇ. ಒಂದೇ ಅಚ್ಚುಳ್ಳ ಉತ್ತರ ಪದವುಳ್ಳ ಸಮಾಸದಲ್ಲಿ ಎಂದರ್ಥ. **ಸೂತ್ರಾರ್ಥ**—ಒಂದೇ ಅಚ್ಚುಳ್ಳ ಉತ್ತರ ಪದವುಳ್ಳ ಸಮಾಸದಲ್ಲಿ ಪೂರ್ವಪದದಲ್ಲಿರುವ ನಿಮಿತ್ತದ ಆಂದರೆ ರೇಫ ಷಕಾರಗಳ ಪರದಲ್ಲಿರುವ ಪ್ರಾತಿಪದಿಕದ ಕೊನೆಯಲ್ಲಿರುವ, ನುಮ್ ಸಂಬಂಧಿಯಾದ, ವಿಭಕ್ತಿಯಲ್ಲಿರುವ ನಕಾರಕ್ಕೆ ಣಕಾರ ಬರುತ್ತದೆ. ನಕಾರವು ಮೂರು ರೀತಿಯಾಗಿದ್ದರೂ ಬರುತ್ತದೆ. ವೃತ್ರಹಣೌ ಎಂಬಲ್ಲಿ (ವೃತ್ರ್+ಅ) ಉತ್ತರಪದವಾದ ಹನ್ ಏಕಾಜಾಗಿದೆ. ನಕಾರವು ಪ್ರಾತಿಪದಿಕದ ಕೊನೆಯಲ್ಲಿದೆ. ಅದಕ್ಕೆ ಣತ್ವ ಬಂದಿದೆ ವೃತ್ರಹಣೌ—ಜಸಿನಲ್ಲಿಯೂ ಹೀಗೇ **ಣತ್ವ.** ವೃತ್ರಹಣಃ | ದ್ವಿ—ವೃತ್ರಹಣಂ—ವೃತ್ರಹಣೌ. | ಬಹುವಚನದಲ್ಲಿ ವೃತ್ರಹನ್ + (ಶ್ಯ) ಅಸ್ ಎಂದಿರುವಾಗ ಭಸಂಜ್ಞಾ ಇರುವುದರಿಂದ " ಅಲ್ಲೋಪೋಽನಃ " ಸೂತ್ರದಿಂದ ಅನಿನ ಅಕಾರಕ್ಕೆ ಲೋಪ. ವೃತ್ರಹ್ನ್+ಅಸ್ ಎಂದಾಗುತ್ತದೆ. ಇಲ್ಲಿ ಹಕಾರಕ್ಕೆ ಘಕಾರಾದೇಶ ಹೇಳುತ್ತಾನೆ.

(ಹನ್ ಧಾತುವಿನ ಹಕಾರಕ್ಕೆ ಘಕಾರ ಹೇಳುವ ಸೂತ್ರ)

೨೪೯. ಹೋ ಹಂತೇರ್ಞ್ಣ್ನೇಷು ॥ ೭-೩-೫೪॥

ಞ್ಣಿತಿ ಣಿತಿ ಪ್ರತ್ಯಯೇ, ನಕಾರೇ ಚ ಪರೇ ಹಂತೇರ್ಹಕಾರಸ್ಯ ಕುತ್ವಮ್ ॥ ವೃತ್ರಘ್ನಃ ಇತ್ಯಾದಿ ॥ ಏವಂ ಶಾರ್ಜ್ಞಿನ್, ಯಶಸ್ವಿನ್, ಅರ್ಯಮನ್, ಪೂಷನ್ ॥

ಹಃ, ಹಂತೇಃ, ಞ್ಣ್ನೇಷು ॥ ತ್ರಿಪದಸೂತ್ರ. ಹಃ ಸ್ಥಾನಾರ್ಥದಲ್ಲಿ ಷಷ್ಠೀ ಬಂದಿದೆ. ಹಕಾರದ ಸ್ಥಾನದಲ್ಲಿ ಎಂದರ್ಥ. ಹಂತೇಃ ಅವಯವ ಷಷ್ಠೀ. ಹನ್ ಧಾತುವಿನಅವಯವವಾದ ಎಂದರ್ಥ. ಶ್ತಪಿನಿಂದ ಧಾತುವಿನದೇಶಮಾಡಿರುತ್ತಾನೆ. " ಞ್ಚ ಞ್ ಚ ಞ್ಞಾ. ಞ್ಞಾ ಇತಾ ಯಯೋಸ್ತಾ ಞ್ಞಾತೌ. ಞ್ಞಾತೌ ಚ ಪ್ರತ್ಯೇಕಾನ್ವಯ. ಞ್ಞಾತ್, ಣಿತ್, ನಕಾರ ಇವು ಪರವಾದಾಗ ಎಂದರ್ಥ.

ಞ್ಞಾತ್, ಣಿತ್, ಪ್ರತ್ಯಯ. ಅಂಗಾಧಿಕಾರದಲ್ಲಿ ಹೇಳಿರುವುದರಿಂದ ಪರದಲ್ಲಿ ಇರಲೇಬೇಕು. **ಸೂತ್ರಾರ್ಥ**—ಞ್ಞಾತ್, ಣಿತ್ ಆದ ಪ್ರತ್ಯಯ ನಕಾರವೂ ಪರದಲ್ಲಿರುವಾಗ ಹನ್ ಧಾತುವಿನ ಹಕಾರಕ್ಕೆ ಕುತ್ವ ಬರುತ್ತದೆ. " ಚಜೋಃ ಕು ಘಿಣ್ಯತೋಃ " ಸೂತ್ರದಿಂದ ' ಕುಃ ' ಅನುವೃತ್ತಿ. ಪ್ರಕೃತ ನಿಮಿತ್ತವಾದ ನಕಾರ ಪರವಾಗಿದೆ. ಆದುದರಿಂದ ಹಕಾರಕ್ಕೆ ಕುತ್ವ. ಕು ಅಂದರೆ ಕವರ್ಗ. ಆ ಐದರಲ್ಲಿ ಘೋಷ, ನಾದ, ಸಂವಾರ, ಮಹಾಪ್ರಾಣ ಯತ್ನಸಾಮ್ಯ ದಿಂದ ಹಕಾರಕ್ಕೆ ಘಕಾರವೇ ಬರುತ್ತದೆ. ವೃತ್ರಘ್ನ್+ಅಸ್=ವೃತ್ರಘ್ನಸ್=ವೃತ್ರಘ್ನಃ ॥ ಇನ್ನು ಅಜಾದಿಗಳಲ್ಲಿ ಅಲ್ಲೋಪ. ಈ ಸೂತ್ರದಿಂದ ಹಕಾರಕ್ಕೆ ಘಕಾರಾದೇಶ. ವೃತ್ರಘ್ನೌ ॥ ವೃತ್ರಘ್ನಾ—ಹಲಾದಿಯಲ್ಲಿ ನಲೋಪ. ವೃತ್ರಘ್ನೇ—ವೃತ್ರಹಭ್ಯಾಮ್—ವೃತ್ರಹಭ್ಯಃ ॥ ಪಂ—ವೃತ್ರಘ್ನಃ—ವೃತ್ರಹಭ್ಯಾಮ್—ವೃತ್ರಹಭ್ಯಃ ॥ ಷ—ವೃತ್ರಘ್ನಃ—ವೃತ್ರಘ್ನೋಃ—ವೃತ್ರಘ್ನಾಮ್. ॥ ಸ—ವೃತ್ರಘ್ನಿ—ವೃತ್ರಹಣಿ | ವೃತ್ರಘ್ನೋಃ—ವೃತ್ರಹಸು ॥

" ಶಾರ್ಜಂ ಅಸ್ಯ ಅಸ್ತಿ ಇತಿ ಶಾರ್ಜ್ಞೀ ". (ವಿಷ್ಣು) " ಶಾರ್ಜ್ಞಿನ್ " ಶಬ್ದ. ಇದು ಇನ್ನಂತವಾದುದಂದ ನಿಯಮಕ್ಕೆ ಒಳಪಡುತ್ತದೆ. ಹಿಂದಿನಂತೆ ಸುವಿನಲ್ಲಿ ಮಾತ್ರದೀರ್ಘ. ರೇಫವಿರುವುದರಿಂದ " ಆಟ್ಕುಪ್ವಾಙ್— " ಸೂತ್ರದಿಂದ ನಕಾರಕ್ಕೆ ಣಕಾರಾದೇಶ. ಪ್ರ—ಶಾರ್ಜ್ಞೀ—ಶಾರ್ಜ್ಞಿಣೌ—ಶಾರ್ಜ್ಞಿಣಃ ॥ ದ್ವಿ—ಶಾರ್ಜ್ಞಿಣಂ-ಶಾರ್ಜ್ಞಿಣೌ-ಶಾರ್ಜ್ಞಿಣಃ| ತೃ-ಶಾರ್ಜ್ಞಿಣಾ-ಶಾರ್ಜ್ಞಭ್ಯಾಮ್. ಶಾರ್ಜ್ಞಿಭಿಃ॥ ಇತ್ಯಾದಿ. " ಯಶಃ ಅಸ್ಯ ಅಸ್ತಿ ಇತಿ " ಯಶಸ್ವೀ. " ಯಶಸ್ವಿನ್ " ಶಬ್ದ. ಇನ್ನಂತವಾದುದರಿಂದ ಶಾರ್ಜ್ಞಿನ್ ಶಬ್ದದಂತೇರೂಪ. ಅರ್ಯಮನ್-ಪೂಷನ್. ಸೂರ್ಯನ ಹೆಸರು. ಇವೆರಡು ಶಬ್ದಗಳೂ ಸೂತ್ರದಲ್ಲಿ ಸೇರಿರುವುದರಿಂದ ನಿಯಮದಿಂದ ಸುವಿನಲ್ಲಿ ಮಾತ್ರದೀರ್ಘ. ರೇಫಷಕಾರ ನಿಮಿತ್ತವಿರುವುದರಿಂದ " ಆಟ್ಕುಪ್ವಾಙ್— " ಸೂತ್ರದಿಂದ ನಕಾರಕ್ಕೆ ಣತ್ವ. ಅರ್ಯಮಾ. ಅರ್ಯಮಣೌ ಅರ್ಯಮಣಃ ||| ಶಸಾದಿ ಅಜಾದಿಗಳಲ್ಲಿ ಅನ್ನಿನ ಅಕಾರಕ್ಕೆ " ಅಲ್ಲೋಪೋಽನಃ " ಸೂತ್ರದಿಂದ ಲೋಪ. ಅರ್ಯಮ್ಣಃ—ಅರ್ಯಮ್ಣಾ—ಇತ್ಯಾದಿ ॥ ಪೂಷಾ—ಪೂಷಣೌ ಪೂಷಣಃ| ಪೂಷಣಂ—ಪೂಷಣೌ—ಪೂಷ್ಣಃ ॥ ಇತ್ಯಾದಿ. ಹಿಂದಿನಂತೇ ತಿಳಿಯಬೇಕು.

ನಕಾರಾಂತ ಮಘವನ್ ಶಬ್ದ. (ಇಂದ್ರ)

೨೯೦. ಮಘವಾ ಬಹುಲಮ್ ॥ ೬-೪-೧೨೭ ॥

ಮಘವನ್ ಶಬ್ದಸ್ಯ ವಾ ತೃ ಇತ್ಯಂತಾದೇಶಃ ॥ ಋ ಇತ್ ॥

ದ್ವಿಪದಸೂತ್ರ. " ಋರ್ವಣಸ್ತ್ರಾವನಞಃ. " ಸೂತ್ರದಿಂದ "ತೃ" ಅನುವೃತ್ತಿ ವಾಗುತ್ತದೆ. ತೃ ಎಂಬಲ್ಲಿ ಪ್ರಥಮೂಲಪ್ರತ್ಯಯವಾಗಿದೆ. ಮಘವಾ ಎಂಬಲ್ಲಿ ಷಷ್ಠ್ಯರ್ಥದಲ್ಲಿ ಪ್ರಥಮಾವಿಭಕ್ತಿ ಬಂದಿದೆ. ಮಘವನ್ ಶಬ್ದಕ್ಕೆ ಎಂದರ್ಥ. **ಸೂತ್ರಾರ್ಥ—** ಮಘವನ್ ಶಬ್ದಕ್ಕೆ ವಿಕಲ್ಪವಾಗಿ ತೃ ಆದೇಶಬರುತ್ತದೆ. " ಅಲೋಂತ್ಯಸ್ಯ " ಪರಿಭಾಷೆಯಿಂದ ಅಂತ್ಯವಾದ ನಕಾರಕ್ಕೆ ಆದೇಶ. ಇದನ್ನೇ ವೃತ್ತಿಯಲ್ಲಿ ಅಂತಾದೇಶವೆಂದಿರುತ್ತಾನೆ. ತೃ ಎಂಬಲ್ಲಿ " ಉಪದೇಶೇಜನುನಾಸಿಕ ಇತ್ " ಸೂತ್ರದಿಂದ ಋಕಾರ ಇತ್ತಾಗುತ್ತದೆ. ಮಘವತ್ ಶಬ್ದವಾಯಿತು. ನಾಂತ ಹೋಗಿತಾಂತವಾಯಿತು. ಮಘವತ್+ಸ್ ಎಂದಿರುವಾಗ ನುಮಾಗಮ ಹೇಳುತ್ತಾನೆ.

(ನುಮಾಗಮ ಹೇಳುವ ಸೂತ್ರ)

೨೯೧. ಉಗಿದಚಾಂ ಸರ್ವನಾಮಸ್ಥಾನೇಽಧಾತೋಃ

॥ ೭-೧-೭೦ ॥

ಅಧಾತೋರುಗಿತೋ ನಲೋಪಿನೋಽಞ್ಚ್ವತೇಶ್ಚ ನುಮ್ ಸ್ಯಾತ್ ಸರ್ವನಾಮಸ್ಥಾನೇ ಪರೇ ॥ ಮಘವಾನ್–ಮಘವಂತೌ–ಮಘವಂತಃ ॥ ಹೇ ಮಘವನ್ । ಮಘವದ್ಭ್ಯಾಮ್ । ತೃತ್ವಾಭಾವೇ ಮಘವಾ । ಸುಟಿರಾಜವತ್ ॥

ಉಗಿದಚಾಂ, ಸರ್ವನಾಮಸ್ಥಾನೇ, ಅಧಾತೋಃ ॥ ತ್ರಿಪದ ಸೂತ್ರ. " ಉಕ್ ಇತ್ ಯೇಷಾಂತೇ " ಉಗಿತಃ. ಉಕ್ ಪ್ರತ್ಯಾಹಾರ. (ಉ, ಋ, ೪) ಇವುಗಳಲ್ಲಿ ಯಾವುದಾದರೂ ಇತ್ ಆಗಿರುವುದು ಉಗಿತ್. " ಉಗಿತಶ್ಚ, ಅಚ್ಚ, " ಉಗಿದಚಃ, ತೇಷಾಂ ಉಗಿದಚಾಮ್. ಅಞ್ಚುಗತಿಪೂಜನಯೋಃ, ಧಾತು. ಅಲ್ಲಿ ನಲೋಪ ಮಾಡಿದರೆ ಅಚ್ ಎಂದಾಗುತ್ತದೆ. ನಲೋಪನಾಡಿದ ಅಂಚುಧಾತು ಇಲ್ಲಿ ಹೇಳಿರುವುದು ಅಧಾತೋಃ ಎಂಬುದು ಉಗಿತ್ತಿಗೆ ಮಾತ್ರ ವಿಶೇಷಣ. ಅಂಚುವಿನಲ್ಲಿ ಅಸಂಭವವಾದುದರಿಂದ ವಿಶೇಷಣವಿಲ್ಲ. " ಇದಿತೋ ನುಮ್ ಧಾತೋಃ " ಸೂತ್ರದಿಂದ "ನುಮ್" ಅನುವೃತ್ತಿ. **ಸೂತ್ರಾರ್ಥ—** ಧಾತುಭಿನ್ನವಾದ ಉಕ್ ಇತ್ತಾದ ಶಬ್ದಕ್ಕ್ಕೂ, ನಲೋಪವನ್ನು ಹೊಂದಿದ ಅಂಚುಧಾತುವಿಗೂ ಸರ್ವನಾಮಸ್ಥಾನ ಪರವಾಗ ನುಮಾಗಮ ಬರುತ್ತದೆ. ಮಘವತ್‌ಶಬ್ದ ಉಗಿತ್. ತೃ ಅಂತವಾದುದರಿಂದ ಅಲ್ಲಿ ಋಕಾರ ಇತ್ತಾಗಿದೆ. ಋಕಾರ ಉಕಿನಲ್ಲಿ ಸೇರಿದೆ. ಸರ್ವನಾಮಸ್ಥಾನ ಪರದಲ್ಲಿದೆ. ಆದುದರಿಂದ ನುಮ್. ನುಮಿನಲ್ಲಿ ಮಕಾರ "ಹಲಂತ್ಯಮ್ " ಸೂತ್ರದಿಂದ ಇತ್. ಉಕಾರ ಉಚ್ಚಾರಣಾರ್ಥವಾಗಿದೆ. ನ್ ಉಳಿಯುತ್ತದೆ. ಮಿತ್ತಾದುದರಿಂದ

" ಮಿದಚೋಂತ್ಯಾತ್ಪರಃ " ಸೂತ್ರದಿಂದ ಮಘವತಿನ ಅಂತ್ಯಾಚಿನ ಪರಕ್ಕೆ ಬರುತ್ತದೆ. ಅಂತ್ಯಾಚ್ ವಕಾರದ ಮೇಲಿರುವ ಅಕಾರ. ಅದರ ಪರಕ್ಕೆ ನುಮ್ ಬಂದರೆ ಮಘವನ್ತ್+ಸ್ ಎಂದಾಗುತ್ತದೆ. " ಹಲ್‌ಙ್ಯಾಭ್ಭ್ಯೋ " ಸೂತ್ರದಿಂದ ಸುವಿಗೆ ಲೋಪ. ಮಘವನ್ತ್. ಸಂಯೋಗಾಂತ ಪದವಾದುದರಿಂದ " ಸಂಯೋಗಾಂತಸ್ಯ ಲೋಪಃ" ಸೂತ್ರದಿಂದ ಅಂತ್ಯ ತಕಾರಕ್ಕೆ, ಲೋಪ. ಮಘವನ್. ಈಗ ನಾಂತವಾದುದರಿಂದ " ಸರ್ವನಾಮಸ್ಥಾನೇ ಚಾಸಂಬುದ್ಧೌ " ಸೂತ್ರದಿಂದ ಉಪಧಾದೀರ್ಘ. ಮಘವಾನ್. ನ ಲೋಪ ಮಾತ್ರ ಬರುವುದಿಲ್ಲ. ಸಂಯೋಗಾಂತಲೋಪವು ಅಸಿದ್ಧವಾದುದರಿಂದ " ನಲೋಪಃ ಪ್ರಾತಿಪದಿಕಾಂತಸ್ಯ " ಸೂತ್ರವು ತಕಾರವಿದೆಯಂದೇ ತಿಳಿದಿರುವುದರಿಂದ ಬರುವುದಿಲ್ಲ. ಹಾಗಾದಾರೆ ದೀರ್ಘ ಹೇಗೆ ಬಂತು ? " ಸರ್ವನಾಮಸ್ಥಾನೇ ಚಾಸಂಬುದ್ಧೌ " ಸೂತ್ರ ಸಪಾದ ಸಪ್ತಾಧ್ಯಾಯಿಯಲ್ಲಿದೆ. ತ್ರಿಪಾದಿಯಕಾರ್ಯ ಆದಕ್ಕೆ ಹೇಗೆ ಸೊತ್ತಾಗುತ್ತದೆ ? ಅಂದರೆ ದೀರ್ಘ ವಿಷಯದಲ್ಲಿ ಮಾತ್ರ ಲೋಪಸಿದ್ಧವಾಗುತ್ತದೆ. ಇತರ ಕಾರ್ಯದಲ್ಲಿ ಅಸಿದ್ಧ. ಇದು " ಮಘವಾ ಬಹುಲಮ್ " ಎಂಬ ಸೂತ್ರದಲ್ಲಿ ಬಹುಲಗ್ರಹಣದಿಂದ ತಿಳಿಯುತ್ತದೆ. ಬಹುಳವೆಂದರೆ ಸಾಮಾನ್ಯವಾಗಿ ವಿಕಲ್ಪವೆಂದರ್ಥ. ಅಂದರೆ " ಬಹೂನ್ ಅರ್ಥಾನ್ ಲಾತಿ " ಬಹುಲಮ್ ಎಂದು ಪ್ರಯವಾರ್ಥವಿರುವುದರಿಂದ ಕೆಲವು ಕಡೆ ವಿಶೇಷಾರ್ಥವನ್ನು ಕೊಡುತ್ತದೆ. ಆದುದರಿಂದ ಇಲ್ಲಿ ಈ ರೀತಿ ವಿಶೇಷಾರ್ಥ ಆ ಪದದಿಂದಲೇ ಸಿಕ್ಕಿದೆ. ಅದಕ್ಕೋಸ್ಕರ " ಕ್ವಚಿತ್‌ಪ್ರವೃತ್ತಿಃ, ಕ್ವಚಿದಪ್ರವೃತ್ತಿಃ, ಕ್ವಚಿದ್ವಿಭಾಷಾ, ಕ್ವಚಿದನ್ಯದೇವ ॥ ತಿಷ್ಟ ಪ್ರಯೋಗಾನನುಸೃತ್ಯ ಲೋಕೇ ವಿಜ್ಞೇಯಮೇತತ್ ಬಹುಲಗ್ರಹೇತು ॥ " ಎಂದು ಬಹುಲಗ್ರಹಣವಿದ್ದಲ್ಲಿ ಈ ರೀತಿ ಅರ್ಥ ಹೇಳುತ್ತಾರೆ. ಕೆಲವುಕಡೆ ಬರುತ್ತದೆ ಯಂಬ ಅಂಶಮಾತ್ರ. ಕೆಲವುಕಡೆ ಬರುವುದಿಲ್ಲವೆಂಬ ಅಂಶಮಾತ್ರ. ಕೆಲವುಕಡೆ ಬರುತ್ತದೆ ಬರುವುದಿಲ್ಲ ಎರಡು ಅಂಶಗಳು. ಕೆಲವುಕಡೆ ವ್ಯತ್ಯಸ್ತಕಾರ್ಯ. ಹೀಗೆ ಬಹುಲಂ ಎಂದು ಹೇಳಿದಾಗ ನಾನಾ ರೀತಿಯಾಗಿ ರೂಪನೋಡಿ ತಿಳಿದುಕೊಳ್ಳಬೇಕು. ಪ್ರಕೃತ " ಕ್ವಚಿದನ್ಯದೇವ " ಎಂಬ ಅಂಶಮಾತ್ರ ಬರುತ್ತದೆ. ಹೀಗೆ ಬಹುಳ ಗ್ರಹಣದಿಂದ ದೀರ್ಘವಿಷಯದಲ್ಲಿ ಮಾತ್ರ ಸಂಯೋಗಾಂತಲೋಪವು ಅಸಿದ್ಧವಾಗುವುದಿಲ್ಲ. ಮಘವತ್+ಔ ಎಂದಿರುವಾಗ ಹಿಂದಿನ ಸೂತ್ರದಿಂದ ನುಮ್. ಮಘವನ್ತ್+ಔ. ನಕಾರಕ್ಕೆ " ನಶ್ಚಾಪದಾಂತಸ್ಯ ಝಲಿ " ಸೂತ್ರದಿಂದ ಅನುಸ್ವಾರ. " ಅನುಸ್ವಾರಸ್ಯ ಯಯಿ ಪರಸವರ್ಣಃ " ಸೂತ್ರದಿಂದ ಪರಸವರ್ಣ. ನಕಾರ. ಮಘವನ್ತೌ–ಸರ್ವನಾಮಸ್ಥಾನಗಳಲ್ಲಿ ಹೀಗೇ ನುಮ್. ನಕಾರಕ್ಕೆ ಅನುಸ್ವಾರ, ಪರಸವರ್ಣ. ಮಘವನ್ತಃ ॥ ಸಂಬುದ್ಧಿಯಲ್ಲಿ " ಅಸಂಬುದ್ಧೌ " ನಿಷೇಧಮಾಡಿರುವುದರಿಂದ ದೀರ್ಘವಿಲ್ಲ. ಹೇ ಮಘವನ್–ಹೇ ಮಘವನೌ–ಹೇ ಮಘವನ್ತಃ ॥ ಮಘವನ್ತಂ–ಮಘವನೌ–ಮಘವತಃ ॥ ಅಜಾದಿಯಲ್ಲಿ ಪ್ರತ್ಯಯ ಸೇರಿಸುವುದು ಮಾತ್ರ. ತೃ॥ ಮಘವತಾ ಹಲಾದಿಯಲ್ಲಿ ತಕಾರಕ್ಕೆ "ಝಲಾಂ ಜಶೋಂತೇ " ಸೂತ್ರದಿಂದ ಜಶ್ತ್ವ. ದಕಾರ.

ಮಘವದ್ಭ್ಯಾಮ್–ಮಘವದ್ಭಿಃ ॥ ಚ–ಮಘವತೇ–ಮಘವದ್ಭ್ಯಾಮ್–ಮಘವದ್ಭ್ಯಃ॥ ಸಂ–ಮಘವತಃ–ಮಘವದ್ಭ್ಯಾಮ್–ಮಘವದ್ಭ್ಯಃ॥ ಷ–ಮಘವತಃ–ಮಘವತೋಃ–ಮಘವತಾಮ್ । ಸ । ಮಘವತಿ । ಮಘವತೋಃ–ಮಘವತ್ಸು ॥

ತೃತ್ವ ವಿಕಲ್ಪವಾದುದರಿಂದ ಬಾರದಿದ್ದರೆ ಮಘವನ್ ನಾಂತವಾಗಿಯೇ ಇರುತ್ತದೆ. ಸುಟಿನಲ್ಲಿ (ಸರ್ವನಾಮಸ್ಥಾನ) ರಾಜನ್ ಶಬ್ದದಂತೇ ರೂಪ. ಪ್ರ. ಮಘವಾ–ಮಘವಾನೌ–ಮಘವಾನಃ ॥ ಸಂ–ಹೇ ಮಘವನ್– ॥ ದ್ವಿ. ಮಘವಾನಮ್ ಮಘವಾನೌ– । ಮಘವನ್ + ಶಸ್ ಎಂದಿರುವಾಗ ವಿಶೇಷಕಾರ್ಯ ಹೇಳುತ್ತಾನೆ.

(ಶ್ವಾದಿಗಳಿಗೆ ಸಂಪ್ರಸಾರಣ ಹೇಳುವ ಸೂತ್ರ)

೨೯೨ ಶ್ವಯುವ ಮಘೋನಾಮತದ್ಧಿತೇ ॥ ೬-೪-೧೩೩॥

ಅನ್ನಂತಾನಾಂ ಭಸಂಜ್ಞಕಾನಾಮೇಷಾಮತದ್ಧಿತೇ ಸಂಪ್ರಸಾರಣಂ ಸ್ಯಾತ್ ॥ ಮಘೋನಃ । ಮಘವಭ್ಯಾಮ್ । ಇತ್ಯಾದಿ । ಏವಂ ಶ್ವನ್, ಯುವನ್ ॥

ಶ್ವಯುವಮಘೋನಾಂ, ಅತದ್ಧಿತೇ ॥ "ವಸೋಃ ಸಂಪ್ರಸಾರಣಮ್" ಸೂತ್ರದಿಂದ "ಸಂಪ್ರಸಾರಣಮ್" ಅನುವೃತ್ತಿ. "ಅಲ್ಲೋಪೋಽನಃ" ಸೂತ್ರದಿಂದ "ಅನಃ" ಅಪಕರ್ಷ. ಅದು ಮುಂದಿನ ಸೂತ್ರವಾದುದರಿಂದ ಅಪಕರ್ಷ. "ಭಸ್ಯ" ಅಧಿಕಾರ. "ಶ್ವಾಚ, ಯುವಾಚ, ಮಘವಾಚ," ಶ್ವಯುವಮಘವಾನಃ. ತೇಷಾಂ ಶ್ವಯುವಮಘೋನಾಂ. "ಅನಃ" ಎಂಬುದು ಪ್ರತ್ಯೇಕವಾಗಿ ಅಲ್ಲಿ ಅನ್ವಯ ಹೊಂದುತ್ತದೆ. ವಿಶೇಷಣವಾದುದರಿಂದ ತದಂತವಿಧಿ. **ಸೂತ್ರಾರ್ಥ**—ಭಸಂಜ್ಞೆ ಯುಳ್ಳ ಅನ್ನಂತವಾದ ಶ್ವನ್, ಯುವನ್, ಮಘವನ್ ಶಬ್ದಗಳಿಗೆ ತದ್ಧಿತ ಪ್ರತ್ಯಯ ಪರದಲ್ಲಿ ಇಲ್ಲದೇ ಇರುವಾಗ ಸಂಪ್ರಸಾರಣ ಬರುತ್ತದೆ. (ಯಚಿ ಭಮ್–ಭ ಸಂಜ್ಞಾ) ಅಜಾದಿ ಪ್ರತ್ಯಯ ಪರವಾದುದರಿಂದ ಭಸಂಜ್ಞೆ ಇದೆ. ತದ್ಧಿತ ಪ್ರತ್ಯಯ ಇಲ್ಲಿ ಪರವಾಗಿಲ್ಲ. ಮಘವನ್ ಅನ್ನಂತವಾಗಿದೆ. ಸಂಪ್ರಸಾರಣ ಬಂದರೆ (ಇಗ್ಯಣಃ ಸಂಪ್ರಸಾರಣಮ್) ಮಘವನ್ ಎಂಬಲ್ಲಿ ವಕಾರಕ್ಕೆ ಉಕಾರ. ಮಘ+ಉ+ಅನ್ + ಅಸ್. "ಆದ್ಗುಣಃ" ಸೂತ್ರದಿಂದ ಗುಣ. ಮಘೋನಸ್. ರುತ್ವವಿಸರ್ಗ. ಮಘೋನಃ ॥ ತೃತೀಯಾ ಅಜಾದಿಗಳಲ್ಲಿ ಇನ್ನು ಮುಂದೆ ಹೀಗೆ ಕಾರ್ಯ ಬಂದು ಮಘೋನ್ ರೂಪವಾಗಿ ಆಯಾಯ ಪ್ರತ್ಯಯ ಸೇರಿಸುವುದು ಮಾತ್ರ. ಮಘವನ್ ಶಬ್ದಕ್ಕೆ ತಕಾರಾದೇಶ ಬಂದಾಗ ಅದು ಅನ್ನಂತವಾಗದಿರುವುದರಿಂದ ಅಲ್ಲಿ ಬರುವುದಿಲ್ಲ. ತೃ–ಮಘೋನಾ–ಹಲಾದಿಯಲ್ಲಿ "ನಲೋಪಃ ಪ್ರಾತಿಪದಿಕಾಂತಸ್ಯ" ಸೂತ್ರದಿಂದ ನಲೋಪ. ಮಘವ

ಭ್ಯಾಮ್–ಮಘವಭಿಃ ॥ ಚ–ಮಘೋನೇ–ಮಘವಭ್ಯಾಮ್–ಮಘವಭ್ಯಃ ॥ ಪಂ–ಮಘೋನಃ–ಮಘವಭ್ಯಾಮ್–ಮಘವಭ್ಯಃ ॥ ಷ–ಮಘೋನಃ–ಮಘೋನೋಃ–ಮಘೋನಾಮ್ ॥ ಸ–ಮಘೋನಿ–ಮಘೋನೋಃ–ಮಘವಸು ॥ ಹೀಗೆಯೇ ಶ್ವನ್, ಯುವನ್ ಶಬ್ದ ತಿಳಿಯಬೇಕು. ಶ್ವನ್ ಶಬ್ದ ಸುಟಿನಲ್ಲಿ ರಾಜನ್ ಶಬ್ದದಂತೇ ಆಗುತ್ತದೆ. ಶ್ವಾ–ಶ್ವಾನೌ–ಶ್ವಾನಃ । ಹೇ ಶ್ವನ್– ॥ ದ್ವಿ. ಶ್ವಾನಂ–ಶ್ವಾನೌ ॥ ಶ್ವನ್+ಅಸ್ ಎಂದಿರುವಾಗ ಈ ಸೂತ್ರದಿಂದ ಸಂಪ್ರಸಾರಣ, ಪೂರ್ವರೂಪ ಬಂದರೆ ಶ್+ಉ+ಅನ್+ಅಸ್ ಶುನಸ್=ಶುನಃ । ಶುನಾ–ಶ್ವಭ್ಯಾಮ್–ಶ್ವಭಿಃ ॥ ಇತ್ಯಾದಿ. ಯುವನ್ ಶಬ್ದವೂ ಸುಟಿನಲ್ಲಿ ರಾಜನ್ ಶಬ್ದದಂತೇ ಆಗುತ್ತದೆ. ಯುವಾ-ಯುವಾನೌ-ಯುವಾನಃ ॥ ಹೇ ಯುವನ್ ॥ ದ್ವಿ–ಯುವಾನಂ–ಯುವಾನೌ–ಯುವನ್+(ಶ್) ಅಸ್ ಎಂದಿರುವಾಗ ಈ ಸೂತ್ರದಿಂದ ಸಂಪ್ರಸಾರಣ ಬರಬೇಕು. ಆದರೆ ಯಣಿಗೆ ಇಕ್ ಬರುವುದೇ ಸಂಪ್ರಸಾರಣವೆಂದುದರಿಂದ ಇಲ್ಲಿ ಯಣ್ ಎರಡಿದೆ. ಯಕಾರ, ವಕಾರ. ಯಾವುದಕ್ಕೆ ಬರಬೇಕು? ಅಂದರೆ ಇದನ್ನು ವ್ಯವಸ್ಥೆಮಾಡಲು ಸೂತ್ರ ಹೇಳುತ್ತಾನೆ.

(ಸಂಪ್ರಸಾರಣನಿಯಮ ಮಾಡುವ ಸೂತ್ರ)

೨೯೩. ನ ಸಂಪ್ರಸಾರಣೇ ಸಂಪ್ರಸಾರಣಮ್ ॥ ೬-೧-೩೭॥

ಸಂಪ್ರಸಾರಣೇ ಪರತಃ ಪೂರ್ವಸ್ಯ ಯಣಃ ಸಂಪ್ರಸಾರಣಂ ನ ಸ್ಯಾತ್ । ಇತಿ ಯಕಾರಸ್ಯ ನೇತ್ವಮ್। ಅತ ಏವ ಜ್ಞಾಪಕಾದಂತ್ಯಸ್ಯ ಯಣಃ ಪೂರ್ವಂ ಸಂಪ್ರಸಾರಣಮ್ । ಯೂನಃ । ಯೂನಾ । ಯುವಭ್ಯಾಮ್ । ಇತ್ಯಾದಿ । ಅರ್ವಾ । ಹೇ ಅರ್ವನ್ ॥

ತ್ರಿಪದ ಸೂತ್ರ । **ಸೂತ್ರಾರ್ಥ**–ಸಂಪ್ರಸಾರಣಪರದಲ್ಲಿರುವಾಗ ಅದರ ಪೂರ್ವಕ್ಕೆ ಸಂಪ್ರಸಾರಣ ಬರುವುದಿಲ್ಲ. ಹೀಗೆ ಈ ಸೂತ್ರ ಹೇಳಿದುದರಿಂದಲೇ ಪರಕ್ಕೆ ಮೊದಲು ಸಂಪ್ರಸಾರಣ ಮಾಡಬೇಕೆಂದು ತಿಳಿಯುತ್ತದೆ. ವಕಾರಕ್ಕೆ ಮೊದಲು ಸಂಪ್ರಸಾರಣ ಮಾಡಿದರೆ ಯು+ಉ + ಅನ್=ಅಸ್ ಎಂದಿರುವಾಗ "ಸಂಪ್ರಸಾರಣಾಚ್ಚ" ಸೂತ್ರದಿಂದ ಪೂರ್ವರೂಪ. ಯು+ಉನ್+ಅಸ್. ಯಕಾರಕ್ಕೆ ಸಂಪ್ರಸಾರಣ ಇಕಾರ ಬರಲಿ ಎಂದರೆ ಈಗ ಬರುವುದಿಲ್ಲ. ಈಗ ಅದಕ್ಕೆ ಸಂಪ್ರಸಾರಣಪರವಾದುದರಿಂದ ಈ ಸೂತ್ರದಿಂದ ನಿಷೇಧ. ಸವರ್ಣದೀರ್ಘ. ಯೂನಸ್=ಯೂನಃ ॥ ಇನ್ನು ಅಜಾದಿಯಲ್ಲಿ ಯೂನ್ ಅಂಗ. ಪ್ರತ್ಯಯ ಸೇರಿಸುವುದು ಮಾತ್ರ. ತೃ॥ ಯೂನಾ–ಯುವಭ್ಯಾಮ್ ಯುವಭಿಃ ॥ ಚ ಯೂನೇ—ಯುವಭ್ಯಾಮ್—ಯುವಭ್ಯಃ ॥ ಪಂ—ಯೂನಃ—

ಯುವಭ್ಯಾಮ್—ಯುವಭ್ಯಃ ॥ ಷ—ಯೂನಃ—ಯೂನೋಃ—ಯೂನಾಮ್ ॥
ಸ—ಯೂನಿ—ಯೂನೋಃ—ಯುವಸು ॥

ನಕಾರಾಂತ ಅರ್ವನ್ ಶಬ್ದ (ಕುದುರೆ)

ಅರ್ವನ್+ಸ್ ಎಂದಿರುವಾಗ "ಸರ್ವನಾಮಸ್ಥಾನೇ ಚಾಸಂಬುದ್ಧೌ" ಸೂತ್ರದಿಂದ ಉಪಧಾದೀರ್ಘ. "ಹಲ್‌ಜ್ಯಾಭ್ಯೋ"—ಸೂತ್ರದಿಂದ ಸುಲೋಪ. "ನಲೋಪಃ ಪ್ರಾತಿಪದಿಕಾಂತಸ್ಯ" ಸೂತ್ರದಿಂದ ನಲೋಪ, ಅರ್ವಾ. ದ್ವಿವಚನಾದಿಗಳಲ್ಲಿ ತೃ ಆದೇಶ ಹೇಳುತ್ತಾನೆ.

(ಅರ್ವನ್ ಶಬ್ದಕ್ಕೆ ತೃ ಆದೇಶ ಹೇಳುವ ಸೂತ್ರ)

೨೯೪. ಅರ್ವಣಸ್ತ್ರಸಾವನಡ್ಹಃ ॥ ೬-೪-೧೨೭ ॥

ನಡ್ಹಾರಹಿತಸ್ಯ ಅರ್ವನ್ನಿತ್ಯಸ್ಯಾಂಗಸ್ಯ ತೃ ಇತ್ಯಂತಾದೇಶೋ ನ ತು ಸೌ॥
ಅರ್ವಂತೌ । ಅರ್ವಂತಃ ॥ ಅರ್ವಂತಂ । ಅರ್ವತಃ ॥ ಅರ್ವತಾ । ಅರ್ವದ್ಭ್ಯಾಮ್ । ಇತ್ಯಾದಿ ॥

ಅರ್ವಣಃ, ತೃ, ಅಸೌ, ಅನಡ್ಹಃ ॥ ನಾಲ್ಕುಪದವುಳ್ಳ ಸೂತ್ರ. ನವಿದ್ಯತೇ ನಡ್ ಯಸ್ಯಸಃ ಅನಡ್. ತಸ್ಯ ಅನಡ್ಹಃ ॥ ನಡ್ ಇಲ್ಲದಿರುವ ಎಂದರ್ಥ. "ಅಂಗಸ್ಯ" ಅಧಿಕಾರ. ನಸೌ. ಅಸೌ, ಸುಪರವಾದಾಗ ಇಲ್ಲ. **ಸೂತ್ರಾರ್ಥ**—ನಡ್ ಇಲ್ಲದಿರುವ ಅರ್ವನ್ ರೂಪವಾದ ಅಂಗಕ್ಕೆ ತೃ ಅಂತಾದೇಶವಾಗಿ ಬರುತ್ತದೆ. ಆದರೆ ಸುಪರದಲ್ಲಿದ್ದರೆ ಬರುವುದಿಲ್ಲ. ಅಂಗಕ್ಕೆ ಆದೇಶವೆಂದರೆ "ಅಲೋಂತ್ಯಸ್ಯ" ಪರಿಭಾಷೆಯಿಂದ ಅಂಗದ ಅಂತ್ಯಕ್ಕೆಂದುದರಿಂದ ವೃತ್ತಿಯಲ್ಲಿ ಅಂತಾದೇಶವೆಂದಿರುತ್ತಾನೆ. ಪ್ರಕೃತ ನಡ್ ಇಲ್ಲ. ಸುಪರದಲ್ಲಿಯೂ ಇಲ್ಲ. ಅರ್ವನ್+ಔ ಎಂದಿರುವಾಗ ತೃ ಅಂತಾದೇಶ. ತೃವಿನಲ್ಲಿ ಯಕಾರ ಇತ್. ನಕಾರಕ್ಕೆ ತಕಾರ ಬಂದರೆ ಅರ್ವತ್+ಔ ಎಂದು ನಕಾರಾಂತ ಹೋಗಿ ತಕಾರಾಂತವಾಗುತ್ತದೆ ತೃವಿನಲ್ಲಿ ಋಕಾರ ಇತ್ತಾದುದರಿಂದ ಉಗಿತ್ತಾಯಿತು. ಆಗ ಸರ್ವನಾಮ ಸ್ಥಾನದಲ್ಲಿ ಮಘವತ್ ಶಬ್ದದಂತೇ "ಉಗಿದಚಾಂ ಸರ್ವನಾಮಸ್ಥಾನೇಧಾತೋಃ" ಸೂತ್ರದಿಂದ ನುಮಾಗಮ. ಮಿತ್ತಾದುದರಿಂದ ಅಂತ್ಯಾಚಿನಪರವಾಗಿ ಬರುತ್ತದೆ. ಅರ್ವನ್ತ್+ಔ ನಕಾರಕ್ಕೆ ಅನುಸ್ವಾರ, ಪರಸವರ್ಣ. ಅರ್ವನ್ತೌ—ಅರ್ವನ್ತಃ ॥ ಸು—ಪ್ರ—ಹೇಅರ್ವನ್—ಹೇ ಅರ್ವನ್ತೌ—ಹೇ ಅರ್ವನ್ತಃ॥ ದ್ವಿ—ಅರ್ವನ್ತಂ। ಅರ್ವನ್ತೌ. ಅರ್ವತಃ॥ ಕೇವಲ ತೃ ಅಂತಾದೇಶ. ತೃ—ಅರ್ವತಾ ಅರ್ವದ್ಭ್ಯಾಮ್ "ಝಲಾಂ ಜಶೋಂತೇ" ಸೂತ್ರದಿಂದ ತಕಾರಕ್ಕೆ ದಕಾರಾದೇಶ. ಅರ್ವದ್ಭಿಃ ॥ ಅರ್ವತೇ—ಇತ್ಯಾದಿ. ಅರ್ವತ್ ಅಂಗ ಪ್ರತ್ಯಯ ಸೇರಿಸುವುದು ಮಾತ್ರ.

ನಕಾರಾಂತ "ಪಥಿನ್" ಶಬ್ದ (ದಾರಿ)

ಪಥಿನ್+ ಸು ಎಂದಿರುವಾಗ ಆತ್ವ ಹೇಳುತ್ತಾನೆ.

(ಪಥಿನ್ ಮುಂತಾದವುಗಳಿಗೆ ಆತ್ವಹೇಳುವ ಸೂತ್ರ)

೨೯೫. ಪಥಿಮಥ್ಯೃಭುಕ್ಷಾಮಾತ್ ॥ ೭-೧-೮೫ ॥

ಏಷಾಮಾಕಾರೋಽನ್ತಾದೇಶಃ ಸ್ಯಾತ್ ಸೌ ಪರೇ ॥

ಪಥಿಮಥ್ಯೃಭುಕ್ಷಾಮ್, ಆತ್ ॥ ದ್ವಿಪದ ಸೂತ್ರ. "ಸಾವನಡುಹಃ" ಸೂತ್ರದಿಂದ "ಸೌ" ಅನುವೃತ್ತಿ. "ಪಂಥಾಶ್ಚ, ಮಂಥಾಶ್ಚ, ಋಭುಕ್ಷಾಶ್ಚ" ಪಥಿಮಥ್ಯೃಭುಕ್ಷಾಣಃ. ತೇಷಾಂ ಪಥಿಮಥ್ಯೃಭುಕ್ಷಾಮ್. ಆತ್ ತಪರ ಮಾಡಿರುವುದರಿಂದ "ತಪರಸ್ತತ್ಕಾಲಸ್ಯ" ಸೂತ್ರದಿಂದ ದೀರ್ಘ ಮಾತ್ರ ತೆಗೆದುಕೊಳ್ಳಬೇಕು. **ಸೂತ್ರಾರ್ಥ**—ಪಥಿನ್, ಮಥಿನ್, ಋಭುಕ್ಷಿನ್ ಈ ಶಬ್ದಗಳಿಗೆ ಸುಪರವಾದಾಗ ಆಕಾರ ಅಂತಾದೇಶವಾಗಿ ಬರುತ್ತದೆ. "ಅಲೋಂತ್ಯಸ್ಯ" ಪರಿಭಾಷೆಯಿಂದ ಅಂತಾದೇಶವೆಂದು ಲಬ್ಧವಾಗುತ್ತದೆ. ನಕಾರಕ್ಕೆ ಆಕಾರ ಬಂದರೆ ಪಥಿಆ+ಸ್ ಎಂದಾಗುತ್ತದೆ. ಈಗ ಇಕಾರಕ್ಕೆ ಅಕಾರ ಹೇಳುತ್ತಾನೆ.

(ಪಥಿನ್ ಮುಂತಾದವುಗಳ ಇಕಾರಕ್ಕೆ ಅಕಾರ ಹೇಳುವ ಸೂತ್ರ)

೨೯೬. ಇತೋಽತ್ಸರ್ವನಾಮಸ್ಥಾನೇ ॥ ೭-೧-೮೬ ॥

ಪಥ್ಯಾದೇರಿಕಾರಸ್ಯ ಅಕಾರಸ್ಯಾತ್ ಸರ್ವನಾಮಸ್ಥಾನೇ ಪರೇ ॥

ಇತಃ, ಅತ್, ಸರ್ವನಾಮಸ್ಥಾನೇ ॥ ತ್ರಿಪದಸೂತ್ರ. ಹಿಂದಿನ ಸೂತ್ರದಿಂದ "ಪಥಿಮಥ್ಯೃಭುಕ್ಷಾಂ" ಅನುವೃತ್ತಿ. "ಅತ್" ತಪರಮಾಡಿರುವುದರಿಂದ ಹ್ರಸ್ವ ಅಕಾರಮಾತ್ರವೆಂದು ಬೋಧಿತವಾಗುತ್ತದೆ. ವಿಧಿಸಲ್ಪಡುವುದರಿಂದ ಸವರ್ಣಗ್ರಹಣವಿಲ್ಲ. ಸ್ಪಷ್ಟಪ್ರತಿಪತ್ತಿಗೋಸ್ಕರ ತಪರಮಾಡಿರುತ್ತಾನೆ. **ಸೂತ್ರಾರ್ಥ**—ಪಥಿನ್,ಮಥಿನ್, ಋಭುಕ್ಷಿನ್ ಈ ಮೂರು ಶಬ್ದಗಳ ಇಕಾರಕ್ಕೆ ಸರ್ವನಾಮಸ್ಥಾನ (ಸುಟ್) ಪರವಾದಾಗ ಅಕಾರ ಬರುತ್ತದೆ. ಪಥಿ+ಆ+ಸ್ ಎಂದಿರುವಾಗ ಇಕಾರಕ್ಕೆ ಅಕಾರಬಂದರೆ ಪಥ+ಆ–ಸ್ ಎಂದಾಗುತ್ತದೆ. ಇಲ್ಲಿ ಥಕಾರಕ್ಕೆ ನ್ಥ ಆದೇಶ ಹೇಳುತ್ತಾನೆ.

(ಥಕಾರಕ್ಕೆ ನ್ಥ ಆದೇಶ ಹೇಳುವ ಸೂತ್ರ)

೨೯೭. ಥೋ ನ್ಥಃ ॥ ೭-೧-೮೭ ॥

ಪಥಿಮಥೋಸ್ಥಸ್ಯ ನ್ಥಾದೇಶಃ ಸ್ಯಾತ್ ಸರ್ವನಾಮಸ್ಥಾನೇ ಪರೇ ॥
ಪನ್ಥಾಃ । ಪನ್ಥಾನೌ । ಪನ್ಥಾನಃ ॥ ಪನ್ಥಾನಂ । ಪನ್ಥಾನೌ ॥

ಥಃ ನ್ಥಃ ॥ ದ್ವಿಪದಸೂತ್ರ. ಥ್–ಥಾ–ಥಃ ॥ ಥಃ–ಥೋಃ ಥಾಮ್ ॥ ಷಷ್ಠೀ. ನ್ಥಃ ಪ್ರಥಮಾ. ಅಲ್ಲಿ ಆಕಾರ ಉಚ್ಚಾರಣಾರ್ಥ. ಹಿಂದಿನ ಸೂತ್ರದಿಂದ ಪಥಿಮಥಿ ಎರಡು ಶಬ್ದಗಳು ಮಾತ್ರ ಅನುವೃತ್ತವಾಗುತ್ತವೆ. ಋಭುಕ್ಷಿನ್ ಶಬ್ದದಲ್ಲಿ ಥಕಾರವಿಲ್ಲದುದರಿಂದ ಅದಕ್ಕೆ ಇಲ್ಲಿ ಅನುವೃತ್ತಿಯಿಲ್ಲ. ಹಿಂದಿನ ಸೂತ್ರದಿಂದ "ಸರ್ವನಾಮಸ್ಥಾನೇ" ಅನುವೃತ್ತಿ. **ಸೂತ್ರಾರ್ಥ**–ಪಥಿನ್ ಮಥಿನ್ ಶಬ್ದಗಳ ಥಕಾರಕ್ಕೆ ಸರ್ವನಾಮಸ್ಥಾನ ಪರವಾದಾಗ ನ್ಥಾದೇಶ ಬರುತ್ತದೆ. ಥ್‌ಗೆ ನ್ಥ್ ಆದೇಶ. ಪಥ್+ಆ+ಸ್. ಪನ್ಥ+ಆ+ಸ್ ಆಗುತ್ತದೆ. ಸವರ್ಣದೀರ್ಘ. ಪನ್ಥಾಸ್. "ಸಸಜುಷೋರುಃ" ರುತ್ವ. "ಖರವಸಾನಯೋಃ–" ಸೂತ್ರದಿಂದ ವಿಸರ್ಗ. ಪನ್ಥಾಃ ॥ ಹೀಗೇ ಸರ್ವನಾಮಸ್ಥಾನಗಳಲ್ಲಿ ಹಿಂದೆ ಹೇಳಿದಂತೆ ಇಕಾರಕ್ಕೆ ಅಕಾರ. ಥಕಾರಕ್ಕೆ ನ್ಥಾದೇಶ. ಪಥಿನ್+ಔ. ಪಥನ್ + ಔ = ಪನ್ಥನ್+ಔ. "ಸರ್ವನಾಮಸ್ಥಾನೇ ಚಾಸಂಬುದ್ಧೌ" ಸೂತ್ರದಿಂದ ಉಪಧಾದೀರ್ಘ. ಪನ್ಥಾನೌ–ನಕಾರಕ್ಕೆ ಆಕಾರ ಸುವಿನಲ್ಲಿ ಮಾತ್ರ. ಪಥಿನ್+(ಜ್ಞ) ಅಸ್ = ಪಥನ್+ಅಸ್-ಪನ್ಥನ್+ಅಸ್. ದೀರ್ಘ. ಪನ್ಥಾನಃ ॥ ಸಂಬೋಧನೆಯಲ್ಲಿ ಹೇ ಪಂಥಾಃ ಹೇ ಪಂಥಾನೌ-ಹೇ ಪಂಥಾನಃ ॥ ದ್ವಿ. ಪಂಥಾನಂ-ಪಂಥಾನೌ–ಪಥಿನ್+(ಶ್) ಅಸ್ ಎಂದಿರುವಾಗ (ಇಮ ಸರ್ವನಾಮಸ್ಥಾನವಲ್ಲ) ಟಲೋಪ ಹೇಳುತ್ತಾನೆ.

(ಪಥಿನ್ ಮುಂತಾದವುಗಳ ಟಿಗೆ ಲೋಪ ಹೇಳುವ ಸೂತ್ರ)

೨೯೮. ಭಸ್ಯ ಟೇರ್ಲೋಪಃ ॥ ೭-೧-೮೮ ॥

ಭಸ್ಯ ಪಥ್ಯಾದೇಷ್ಟೇರ್ಲೋಪಃ ॥ ಪಥಃ । ಪಥಾ । ಪಥಿಭ್ಯಾಮ್ ॥
ಏವಂ ಮಥಿನ್, ಋಭುಕ್ಷಿನ್ ॥

ಭಸ್ಯ, ಟೇಃ, ಲೋಪಃ ॥ ತ್ರಿಪದಸೂತ್ರ. "ಪಥಿಮಥ್ಯೃಭುಕ್ಷಾಮ್" ಪೂರ್ವಸೂತ್ರದಿಂದ ಅನುವೃತ್ತಿ. **ಸೂತ್ರಾರ್ಥ**—ಭಸಂಜ್ಞೆಯಿರುವ (ಯಾದಿ, ಅಜಾದಿ ಪ್ರತ್ಯಯಪರವಾದಾಗ) ಪಥಿನ್, ಮಥಿನ್, ಋಭುಕ್ಷಿನ್ ಶಬ್ದಗಳ ಟಿಗೆ

ಲೋಪ ಬರುತ್ತದೆ. ಪ್ರಕೃತ ಅಜಾದಿ ಪ್ರತ್ಯಯ ಪರವಾದುದರಿಂದ ಭಸಂಜ್ಞೆಯಿದೆ. "ಅಚ್ಸೋಂತ್ಯಾದಿಟ್ಟಿ" ಸೂತ್ರದಿಂದ ಟಿ ಸಂಜ್ಞೆ ಹೇಳಿದೆ. ಪಥಿನ್ ಶಬ್ದದಲ್ಲಿ ಇನ್ ಟಿ. ಅದಕ್ಕೆ ಲೋಪ ಬಂದರೆ ಪಥ್ + ಅಸ್ = ಪಥಃ ॥ ಇನ್ನು ಅಜಾದಿಯಲ್ಲೆಲ್ಲಾ ಟಿಗೆ ಲೋಪ. ಹಲಾದಿಯಲ್ಲಿ ನಲೋಪ. ತೃ–ಪಥಾ–ಪಥಿ-ಭ್ಯಾಮ್–ಪಥಿಭಿಃ । ಚ–ಪಥೇ–ಪಥಿಭ್ಯಾಮ್–ಪಥಿಭ್ಯಃ ॥ ಪಂ–ಪಥಃ–ಪಥಿಭ್ಯಾಮ್ ಪಥಿಭ್ಯಃ ॥ ಷ–ಪಥಃ—ಪಥೋಃ—ಪಥಾಮ್ ॥ ಸ. ಪಥಿ–ಪಥೋಃ–ಪಥಿಷು. ಹೀಗೆಯೇ ಮಥಿನ್ ಶಬ್ದ. ಮಂಥಾಃ–ಮಂಥಾನೌ–ಮಂಥಾನಃ ॥ ಇತ್ಯಾದಿ. ಭ ಸಂಜ್ಞೆ ಇರುವಲ್ಲಿ. ಮಥಃ–ಇತ್ಯಾದಿ. (ಕಡಗೋಲು ಅರ್ಥ) ಹೀಗೆಯೇ ಋಭುಕ್ಷಿನ್ ಶಬ್ದ. ಇಲ್ಲಿ ಥಕಾರವಿಲ್ಲದುದರಿಂದ ಅದರ ಕಾರ್ಯವಿಲ್ಲ. ಋಭುಕ್ಷಾಃ–ಋಭುಕ್ಷಾಣೌ–ಋಭುಕ್ಷಾಣಃ ॥ "ಅಟ್‌ಕುಪ್ವಾಙ್ನುಮ್" ಸೂತ್ರದಿಂದ ಷಕಾರ ನಿಮಿತ್ತವಿರುವುದರಿಂದ ನಕಾರಕ್ಕೆ ಣಕಾರಾದೇಶ. ಭ ಸಂಜ್ಞೆಯಿರುವಲ್ಲಿ ಋಭುಕ್ಷಿನ್ + ಅಸ್ = ಋಭುಕ್ಷಃ–ಋಭುಕ್ಷಾ–ಇತ್ಯಾದಿ–

ನಕಾರಾಂತ,– " ಪಂಚನ್– " ಶಬ್ದ (ಐದು)

ಇದು ಬಹುತ್ವ ಸಂಖ್ಯಾವಾಚಕವಾದುದರಿಂದ ಯಾವಾಗಲೂ ಬಹುವಚನಾಂತವಾಗಿಯೇ ಇರುತ್ತದೆ. ಈಗ ಇದಕ್ಕೆ " ಷಟ್ " ಸಂಜ್ಞಾ ಹೇಳುತ್ತಾನೆ.

(" ಷಟ್ " ಸಂಜ್ಞಾ ಹೇಳುವ ಸೂತ್ರ)

೨೯೯. ಷ್ಣಾಂತಾ ಷಟ್ ॥ ೧-೧-೨೪ ॥

ಷ್ಣಾಂತಾ ನಾಂತಾ ಚ ಸಂಖ್ಯಾ ಷಟ್‌ಸಂಜ್ಞಾ ಸ್ಯಾತ್ ॥ ಪಂಚನ್ ಶಬ್ದೋ ನಿತ್ಯಂ ಬಹುವಚನಾಂತಃ ॥ ಪುಂಚ । ಪಂಚ । ಪಂಚಭಿಃ । ಪಂಚಭ್ಯಃ । ಪಂಚಭ್ಯಃ ॥ ನುಟ್ ॥

ಷ್ಣಾಂತಾ, ಷಟ್ ॥ ದ್ವಿಪದ ಸೂತ್ರ. " ಬಹುಗಣವತುಡತಿ ಸಂಖ್ಯಾ " ಸೂತ್ರದಿಂದ " ಸಂಖ್ಯಾ " ಅನುವೃತ್ತಿ. ಷ್ ಚ, ನಶ್ಚ–ಷ್ಣಾ (ಷ್ಟುತ್ವದಿಂದ ನಕ್ಕೆ ಣ) ಷ್ಣಾ ಅಂತೇ ಯಸ್ಯಾಃ ಸಾ ಷ್ಣಾಂತಾ ॥ ಅನುವೃತ್ತವಾದ ಸಂಖ್ಯಾವೆಂಬುದಕ್ಕೆ ಸಂಜ್ಞಾ ಎಂದಿದ್ದರೂ ಇಲ್ಲಿ ಅದರ ಅರ್ಥ ತೆಗೆದುಕೊಳ್ಳಬೇಕು. ಸಂಖ್ಯಾ ಹೇಳುವ ಪಂಚ ಷಟ್, ಮುಂತಾದವುಗಳನ್ನು ತೆಗೆದುಕೊಳ್ಳಬೇಕು. **ಸೂತ್ರಾರ್ಥ**—ಷಕಾರಾಂ

ತವಾದ ನಕಾರಾಂತವಾದ ಸಂಖ್ಯಾವಾಚಕ ಶಬ್ದಗಳು " ಷಟ್ " ಸಂಜ್ಞೆಯನ್ನು ಹೊಂದುತ್ತವೆ. ಪ್ರಕೃತ ಪಂಚನ್ ಎಂಬುದು ನಾಂತವಾದ ಸಂಖ್ಯಾವಾಚಕ ಶಬ್ದವಾದುದರಿಂದ ಷಟ್ ಸಂಜ್ಞೆಯನ್ನು ಹೊಂದುತ್ತದೆ. ಇದು ನಿತ್ಯಬಹುವಚನಾಂತವೆಂದು ಹೇಳಿದೆ. ಪಂಚನ್ + ಜಸ್ ಎಂದಿರುವಾಗ ಷಟ್ ಸಂಜ್ಞೆಯಿರುವುದರಿಂದ " ಷಡ್ಭ್ಯೋಲುಕ್ " ಸೂತ್ರದಿಂದ ಪರದಲ್ಲಿರುವ ಜಸ್ ಶಸ್‌ಗಳಿಗೆ ಲುಕ್ ಬರುತ್ತದೆ. ಆಗ ಪಂಚನ್ ಉಳಿಯುತ್ತದೆ. ಈಗ ನಾಂತವಾದ ಪದಸಂಜ್ಞೆಯುಳ್ಳ ಪ್ರಾತಿಪದಿಕವಾದುದರಿಂದ " ನಲೋಪಃ ಪ್ರಾತಿಪದಿಕಾಂತಸ್ಯ " ಸೂತ್ರದಿಂದ ನಲೋಪ. ಪಂಚ. ಶಸಿಗೂ ಲುಕ್ ಬರುವುದರಿಂದ ಹೀಗೇ ಪಂಚ ರೂಪವಾಗುತ್ತದೆ. ಭಿಸಾದಿಗಳಲ್ಲಿ ಮೇಲೆ ಹೇಳಿದ ಸೂತ್ರದಿಂದ ನಲೋಪ. ಪಂಚಭಿಃ ।। ಚ–ಪಂಚಭ್ಯಃ । ಪಂಚಭ್ಯಃ ॥ ಷಷ್ಠಿಯಲ್ಲಿ ಪಂಚನ್ + ಆಮ್ ಎಂದಿರುವಾಗ " ಷ್ಟ್ಚತುರ್ಭ್ಯಶ್ಚ " ಸೂತ್ರ (267)ದಿಂದ ಆಮಿಗೆ ನುಟ್‌ಆಗಮ. ಟಿತ್ತಾದುದರಿಂದ ಅವ್ಯವಯವ. ಪಂಚನ್+ನಾಮ್ ಎಂದಿರುವಾಗ ಉಪಧೆಗೆ ದೀರ್ಘ ಹೇಳುತ್ತಾನೆ.

(ನಾಂತದ ಉಪಧೆಗೆ ದೀರ್ಘ ಹೇಳುವ ಸೂತ್ರ)

೩೦೦. ನೋಪಧಾಯಾಃ ॥ ೬-೪-೭ ॥

ನಾಂತಸ್ಯೋಪಧಾಯಾಃ ದೀರ್ಘೋ ನಾಮಿ ॥ ಪಂಚಾನಾಮ್ ॥ ಪಂಚಸು ॥

ನ, ಉಪಧಾಯಾಃ ॥ ದ್ವಿಪದಸೂತ್ರ. " ಅಂಗಸ್ಯ " ಅಧಿಕಾರ. ನ ಎಂಬುದು ಲುಪ್ತಷಷ್ಠೀಕಪದ. ಅಲ್ಲಿ ಷಷ್ಠಿಲುಪ್ತವಾಗಿದೆ. ಅದು ಅಂಗಕ್ಕೆ ವಿಶೇಷಣವಾದುದರಿಂದ ತದಂತಲಾಭ. ನಕಾರಾಂತವಾದ ಅಂಗಕ್ಕೆ ಎಂದರ್ಥ. "ಷ್ಠ್ಯಾಲೋಪೇ" ಸೂತ್ರದಿಂದ " ದೀರ್ಘಃ " ಪದವೂ " ನಾಮಿ " ಸೂತ್ರವೂ ಅನುವೃತ್ತವಾಗುತ್ತದೆ. **ಸೂತ್ರಾರ್ಥ.**—ನಾಮ್ ಪರದಲ್ಲಿರುವಾಗ ನಕಾರಾಂತವಾದ ಅಂಗದ ಉಪಧೆಗೆ ದೀರ್ಘ ಬರುತ್ತವೆ. ಪ್ರಕೃತ ನಾಮ್ ಪರವಾದುದರಿಂದ ನಾಂತವಾದ ಅಂಗ ಪಂಚನ್. ಅದರ ಉಪಧೆಯೆಂದರೆ ಚಕಾರದ ಮೇಲಿರುವ ಅಕಾರ. ಅದಕ್ಕೆ ದೀರ್ಘ ಬಂದರೆ ಪಂಚಾನ್ + ನಾಮ್. " ನಲೋಪಃ ಪ್ರಾತಿಪದಿಕಾಂತಸ್ಯ " ಸೂತ್ರದಿಂದ ನಲೋಪ. ಪಂಚಾನಾಮ್. ಸ ॥ ಪಂಚಸು. ಇಣೆನಪರದಲ್ಲಿಲ್ಲದಿರುವುದರಿಂದ ಷತ್ವವಿಲ್ಲ.

ನಕಾರಾಂತ ಅಷ್ಟನ್ ಶಬ್ದ (ಎಂಟು)

ಇದು ನಿತ್ಯ ಬಹುವಚನಾಂತಶಬ್ದ. ಅಷ್ಟನ್+ಜಸ್ ಎಂದಿರುವಾಗ ಆತ್ವ ಬರುವ ವಿಧಾನವನ್ನು ತಿಳಿಸುತ್ತಾನೆ.

(ಅಷ್ಟನ್ ಶಬ್ದಕ್ಕೆ ಆಕಾರ ಹೇಳುವ ಸೂತ್ರ)

೩೦೧. ಅಷ್ಟನ ಆ ವಿಭಕ್ತೌ ॥ ೭-೨-೮೪॥

ಅಷ್ಟನಃ ಆತ್ವಂ ವಾಸ್ಯದ್ಧಲಾದೌ ವಿಭಕ್ತೌ ಪರತಃ॥

ಅಷ್ಟನಃ, ಆ, ವಿಭಕ್ತೌ ॥ ತ್ರಿಪದ ಸೂತ್ರ. " ರಾಯೋ ಹಲಿ " ಸೂತ್ರದಿಂದ " ಹಲಿ " ಎಂಬುದಕ್ಕೆ ಅಪಕರ್ಷ .ಅದು ಸಪ್ತಮ್ಯಂತವಾಗಿ "ವಿಭಕ್ತೌ" ಎಂಬುದಕ್ಕೆ ವಿಶೇಷಣವಾದುದರಿಂದ " ಯಸ್ಮಿನ್ ವಿಧಿಸ್ತದಾದಾವಲ್ಗ್ರಹಣೇ " ಪರಿಭಾಷೆಯಿಂದ ತದಾದಿಲಾಭ. ಹಲಾದಿಯಾದ ವಿಭಕ್ತಿ ಪರದಲ್ಲಿರುವಾಗ ಎಂದರ್ಥ. ಆ ಎಂಬುದು ವಿಧಿಸಲ್ಪಡುವುದರಿಂದ ಸವರ್ಣಗ್ರಹಣವಿಲ್ಲ. ವಾ ಎಂಬುದು ಜ್ಞಾಪಕದಿಂದ ಸಿದ್ಧವಾದುದು. **ಸೂತ್ರಾರ್ಥ**—ಅಷ್ಟನ್ ಶಬ್ದಕ್ಕೆ ಹಲಾದಿವಿಭಕ್ತಿ ಪರದಲ್ಲಿರುವಾಗ ವಿಕಲ್ಪವಾಗಿ ಆತ್ವ ಬರುತ್ತದೆ. ಷಷ್ಠ್ಯಂತಕ್ಕೆ ಹೇಳಿದುದರಿಂದ " ಅಲೋಂತ್ಯಸ್ಯ " ಪರಿಭಾಷೆಯಿಂದ ಅಂತ್ಯನಕಾರಕ್ಕೆ ಬರುತ್ತದೆ. ಪ್ರಕೃತ ಹಲಾದಿಪ್ರತ್ಯಯವಿಲ್ಲವಾದುದರಿಂದ ಆತ್ವಕ್ಕೆ ಪ್ರಸಕ್ತಿಯಿಲ್ಲ. ಅದು ಬರುವ ಉಪಾಯವನ್ನು ಮುಂದೆ ಹೇಳುತ್ತಾನೆ.

(ಅಷ್ಟನ್ ಶಬ್ದದ ಜಶ್ಶಸ್‌ಗಳಿಗೆ ಔಕಾರ ಹೇಳುವ ಸೂತ್ರ)

೩೦೨. ಅಷ್ಟಾಭ್ಯ ಔಶ್ ॥ ೭-೧-೨೧ ॥

ಕೃತಾಕಾರಾದಷ್ಟನಃ ಪರಯೋಃ ಜಸ್‌ಶಸೋಃ ಔಶ್ ಸ್ಯಾತ್ ಅಷ್ಟಭ್ಯ ಇತಿ ವಕ್ತವ್ಯೇ ಕೃತಾSತ್ವನಿರ್ದೇಶೋ ಜಶ್ಶಸೋರ್ವಿಷಯೇ ಆತ್ವಂ ಜ್ಞಾಪಯತಿ । ಅಷ್ಟೌ । ಅಷ್ಟಾ । ಅಷ್ಟಾಭಿಃ । ಅಷ್ಟಾಭ್ಯಃ । ಅಷ್ಟಾಭ್ಯಃ । ಅಷ್ಟಾನಾಮ್ । ಅಷ್ಟಾಸು । ಆತ್ವಾಭಾವೇ ಅಷ್ಟ ಪಂಚವತ್ ॥

ಅಷ್ಟಾಭ್ಯಃ ಔಶ್ ॥ ದ್ವಿಪದಸೂತ್ರ. "ಜಶ್ಶಸೋಃಶಿಃ " ಸೂತ್ರದಿಂದ "ಜಶ್ಶಸೋಃ" ಅನುವೃತ್ತಿ. ಅಷ್ಟಾಭ್ಯಃ ಎಂದು ದೀರ್ಘ ಹೇಳಿದುದರಿಂದ ಅಷ್ಟಾ ಎಂಬ ದೀರ್ಘಾಂತವು ಇಲ್ಲಿ ವಿವಕ್ಷಿತ. ಪಂಚಮಿಯಾದುದರಿಂದ " ತಸ್ಮಾದಿತ್ಯುತ್ತರಸ್ಯ" ಪರಿಭಾಷೆಯಿಂದ ಪರಕ್ಕೆ ಕಾರ್ಯವೆಂದು ತಿಳಿಯಬೇಕು. **ಸೂತ್ರಾರ್ಥ**–ಮಾಡಲ್ಪಟ್ಟ

ಆಕಾರವುಳ್ಳ ಅಷ್ಟನ್‌ಶಬ್ದದ ಪರದಲ್ಲಿರುವ ಜಸ್‌ಶಸ್‌ಗಳಿಗೆ ಔಶ್ ಆದೇಶ ಬರುತ್ತದೆ. ಔಶಿನಲ್ಲಿ ಶಕಾರ ಇತ್. ಶಿತ್ತಾದುದರಿಂದ ಸರ್ವಾದೇಶ. (ಅನೇಕಾಲ್‌ಶಿತ್ ಸರ್ವಸ್ಯ) ಇಲ್ಲಿ ಆಕಾರಾದೇಶ ಹೊಂದಿದ ಅಷ್ಟನ್ ಶಬ್ದದ ಪರದ ಜಶ್ ಶಸ್‌ಗಳಿಗೆ ಔತ್ವ ಹೇಳಲ್ಪಟ್ಟಿಲ್ಲ. ಕೂಡುವುದಿಲ್ಲ. ಆತ್ವ ಹಲಾದಿ ವಿಭಕ್ತಿ ಪರವಾದಾಗ ಮಾತ್ರ ಹೇಳಿದೆ. ಹೀಗಿರುವಾಗ ಹೇಗೆ ಇದು ಸಮಂಜಸವಾಗುತ್ತದೆ ? ಅಂದರೆ " ಅಷ್ಟಭ್ಯ " ವಾಕ್ಯದಿಂದ ಸಮಾಧಾನ ಹೇಳುತ್ತಾನೆ. ಆಷ್ಟಭ್ಯ ಔಶ್ ಎಂದು ಸೂತ್ರಮಾಡುವುದನ್ನು ಬಿಟ್ಟು ಅಷ್ಟಾಭ್ಯೌಶ್ ಎಂದು ದೀರ್ಘಹೇಳಿದುದರಿಂದ ಜಸ್ ಶಸ್ ಪರವಾದಾಗಲೂ ಆತ್ವ ಬರುತ್ತದೆ. ಎಂದು ಜ್ಞಾಪಿತವಾಗುತ್ತದೆ. ಲಾಘವನ್ನಪೇಕ್ಷಿಸುವವರು ವೈಯಾಕರಣರು. ಆತ್ವವಿಕಲ್ಪವಾದುದರಿಂದ ಲಾಘವವಾಗಿ ಆಷ್ಟಭ್ಯಃ ಎಂದೇ ಹೇಳಬಹುದಿತ್ತು. ಹಾಗೆ ಹೇಳದೆ ದೀರ್ಘಹೇಳಿದುದರಿಂದ ಇಲ್ಲಿಯೂ ಆತ್ವ ಬರುತ್ತದೆ ಎಂದು ಪಾಣಿನಿಯು ಸೂಚಿಸಿರುತ್ತಾನೆ. ಅಷ್ಟನ್+ಜಸ್ ಎಂದಿರುವಾಗ ನಕಾರಕ್ಕೆ ಜ್ಞಾಪಿತವಾದ ಆಕಾರಾದೇಶ. ಅಷ್ಟಾ+ಜಸ್. ಇಲ್ಲಿ ಆಕಾರಪರದಲ್ಲಿ ಜಸ್ ಇರುವುದರಿಂದ ಆದಕ್ಕೆ ಔಶ್. ಅಷ್ಟಾ+ಔ " ವೃದ್ಧಿರೇಚಿ " ಅಷ್ಟೌ. ಶಸಿನಲ್ಲಿಯೂ ಇದೇರೂಪ. ಅಷ್ಟೌ. ಅಷ್ಟನ್+ಭಿಸ್ ಎಂದಿರುವಾಗ " ಅಷ್ಟನ ಆ ವಿಭಕ್ತೌ " ಸೂತ್ರದಿಂದ ಆತ್ವ. ಅಷ್ಟಾಭಿಃ. ಹಲಾದಿಯಲ್ಲೆಲ್ಲಾ ಆತ್ವ. ಚ॥ ಅಷ್ಟಾಭ್ಯಃ । ಅಷ್ಟಾಭ್ಯಃ ॥ ಷಷ್ಠಿಯಲ್ಲಿ ಆಮ್ ಪರವಾದಾಗ ಅಷ್ಟನ್+ಆಮ್ ಎಂದಿರುವಾಗ " ಷಷ್ಠ್ಯಾಶ್ಚ ತುರ್ಯಶ್ಚ " ಸೂತ್ರದಿಂದ ಆಮಿಗೆ ನುಟ್‌ಆಗಮ. ಅಷ್ಟನ್+ನಾಮ್. ಈಗ ಹಲಾದಿಯಾದುದರಿಂದ ನಕಾರಕ್ಕೆ ಆತ್ವ. ಅಷ್ಟಾನಾಮ್. ಸ॥ ಅಷ್ಟಾಸು. ॥ ಆತ್ವವಿಕಲ್ಪವೆಂದುದರಿಂದ ಆತ್ವಬಾರದಿದ್ದರೆ ಜಸ್ ಶಸ್‌ಗಳಿಗೆ ಔತ್ವವೂ ಇಲ್ಲ. ಪಂಜನ್ ಶಬ್ದದಂತೇ ರೂಪ. ಷಟ್‌ಸಂಜ್ಞಾ ಇರುವುದರಿಂದ ಜಸ್‌ಶಸ್‌ಗಳಿಗೆ ಲುಕ್. " ನಲೋಪಃ– " ಸೂತ್ರದಿಂದ ನಲೋಪ. ಪ್ರ॥ ಅಷ್ಟ॥ ದ್ವಿ। ಅಷ್ಟ ॥ ಹಲಾದಿಯಲ್ಲಿ ನಲೋಪ. ಅಷ್ಟಭಿಃ॥ ಚ–ಅಷ್ಟಭ್ಯಃ ॥ ಪಂ. ಅಷ್ಟಭ್ಯಃ ॥ ಷ. ಅಷ್ಟಾನಾಮ್ ॥ ಸ. ಅಷ್ಟಸು ॥

ಇತಿ ನಾಂತಾಃ ॥

ಜಕಾರಾಂತ, ಋತ್ವಿಜ್ ಶಬ್ದ. ॥

(ಕ್ವಿನ್ ವಿಧಾಯಕ ಸೂತ್ರ)

೩೦೩. ಋತ್ವಿಗ್ದಧೃಕ್ ಸ್ರಗ್‌ದಿಗುಷ್ಣಿಗಞ್ಚ್ಯುಯುಜಿ ಕ್ರುಞ್ಚಾಂ ಚ ॥ ೩-೨-೫೯ ॥

ನಿಭ್ಯಃ ಕ್ವಿನ್, ಅಂಚೇಃ ಸುಪ್ಯುಪಪದೇ, ಯುಜಿಕ್ರುಂಚೋಃ ಕೇವಲಯೋಃ ಕ್ರುಂಚೇರ್ನಲೋಪಾಭಾವಶ್ಚ ನಿಪಾತ್ಯತೇ ॥ ಕನಾವಿತೌ ॥

ಋತ್ವಿಕ್, ದಧೃಕ್, ಸ್ರಕ್, ದಿಕ್, ಉಷ್ಣಿಕ್, ಅಂಚು, ಯುಜ, ಕ್ರುಂಚಾಂ, ಚ. ॥ ದ್ವಿಪದ ಸೂತ್ರ. " ಧಾತೋಃ " ಅಧಿಕಾರ. " ಸ್ಪೃಶೋನುದಕೇ ಕ್ವಿನ್ " ಅನುವೃತ್ತಿ. " ಋತ್ವಿ....ಂಚಾಂ " ಎಂಬಲ್ಲಿ ಪಂಚಮ್ಯರ್ಥದಲ್ಲಿ ಷಷ್ಠಿ ಬಂದಿದೆ.

ಸೂತ್ರಾರ್ಥ— ಋತ್ವಪೂರ್ವಪದವಾಗಿರುವ ಯಜ್ ಧಾತುವಿಗೂ, ದೃಷ್, ಸೃಜ್, ದಿಶ್, ಷ್ಣಿಹ್, ಅಂಜು, ಯುಜ್, ಕ್ರುಂಚ್ ಧಾತುಗಳಿಗೂ ಕ್ವಿನ್ ಪ್ರತ್ಯಯಬರುತ್ತದೆ. ಸಾಮಾನ್ಯ ಈ ಧಾತುಗಳಿಗೆ ಕ್ವಿನ್ ಹೇಳಿದರೂ ಕೆಲವು ಕಾರ್ಯಗಳು ನಿಪಾತಿತವಾಗಿವೆ. ಸೂತ್ರಾಂತರದಿಂದ ಬಾರದಿರುವ ಕೆಲವು ಕಾರ್ಯಗಳನ್ನು ಸೇರಿಸಿ ಕ್ವಿನ್ ಪ್ರತ್ಯಯ ಹೇಳಿರುತ್ತಾನೆ. ಋತು ಉಪಪದವಾಗಿರುವಾಗ ಯಜ್ ಧಾತುವಿಗೆ ಕ್ವಿನ್ ಬಂದಾಗ ಸಂಪ್ರಸಾರಣ, ಕುತ್ವ. ದೃಷ್ ಧಾತುವಿಗೆ ಕ್ವಿನ್ ಬಂದಾಗ ದ್ವಿತ್ವ. ಸೃಜ್ ಧಾತುವಿಗೆ ಅಮಾಗಮ. ದಿಶ್ ಧಾತುವಿಗೆ ಕರ್ಮಣಿಯಲ್ಲಿ ಕ್ವಿನ್. ಉತ್ ಉಪಸರ್ಗಪೂರ್ವಕವಾದ ಸ್ನಿಹ್ ಧಾತುವಿಗೆ ಕ್ವಿನ್ ಬಂದಾಗ ಉದಿನ ದಕಾರಕ್ಕೆ ಲೋಪ. ಷತ್ವ. ಅಂಚು ಧಾತುವಿಗೆ ಸುಬಂತ ಉಪಪದವಾಗಿರುವಾಗ ಮಾತ್ರ ಕ್ವಿನ್. ಯುಜ್ ಧಾತು ಕೇವಲವಾಗಿರುವಾಗ ಕ್ವಿನ್. ಕ್ರುಂಚ್ ಕೇವಲಕ್ಕೆ ಕ್ವಿನ್ ಬಂದಾಗ ನಲೋಪ ಬರಬೇಕಾದಾಗ ನಲೋಪಾಭಾವ. ಇಷ್ಟು ಕಾರ್ಯಗಳು ನಿಪಾತಿತವಾಗಿವೆ. ಪ್ರಕೃತ ಋತು ಉಪಪದವಾದ ಯಜಿಗೆ ಕ್ವಿನ್ ಬಂದಾಗ ಸಂಪ್ರಸಾರಣ ಪೂರ್ವರೂಪ ಯಣ್ ಬಂದರೆ ಋತ್ವಿಜ್+ಕ್ವಿನ್ ಎಂದಾಗುತ್ತದೆ. ಕನಾವಿತೌ. " ಹಲಂತ್ಯಮ್ " ಸೂತ್ರದಿಂದ ನಕಾರವೂ " ಲಶಕ್ವತದ್ಧಿತೇ " ಸೂತ್ರದಿಂದ ಕಕಾರವೂ ಇತ್ಸಾಗಿ ಲೋಪವಾಗುತ್ತವೆ. ಇಕಾರ ಉಚ್ಚಾರ್ಣಗೋಸ್ಕರ ಹೇಳಿದೆ. ಆಗ ವಕಾರ ಉಳಿಯುತ್ತದೆ. ಅದಕ್ಕೂ ಲೋಪ ಹೇಳಲು ಕೃತ್ ಸಂಜ್ಞೆ ಹೇಳುತ್ತಾನೆ.

(ಕೃತ್ ಸಂಜ್ಞಾ ಹೇಳುವ ಸೂತ್ರ)

೩೦೪. ಕೃದತಿಙ್ । ೩-೧-೯೩ ॥

ಅತ್ರ ಧಾತ್ವಧಿಕಾರೇ ತಿಙ್‌ಭಿನ್ನಃ ಪ್ರತ್ಯಯಃ ಕೃತ್‌ಸಂಜ್ಞಃ ಸ್ಯಾತ್ ॥

ಕೃತ್, ಅತಿಙ್ ॥ ದ್ವಿಪದ ಸೂತ್ರ. " ಧಾತೋಃ " " ಪ್ರತ್ಯಯಃ " ಅಧಿಕಾರಗಳು. " ಧಾತೋಃ " ವಿಹಿತ ವಿಶೇಷಣವೆಂದು ತಿಳಿಯಬೇಕು. ಧಾತುವಿಗೆ ವಿಹಿತವಾದ ಪ್ರತ್ಯಯ ಎಂದರ್ಥ. ನ ತಿಙ್ ಅತಿಙ್. ತಿಙ್ ಭಿನ್ನವಾದ ಎಂದರ್ಥ. " ಧಾತೋಃ " ಎಂಬ ಅಧಿಕಾರ ಸೂತ್ರಗಳು ಮೂರಿವೆ. ಅದರಲ್ಲಿ ಇದರ ಅವ್ಯವಹಿತ

ಪೂರ್ವದಲ್ಲಿ ಹೇಳಿದ "ಧಾತೋಃ" ಎಂಬ ಅಧಿಕಾರವನ್ನು ತೆಗೆದುಕೊಳ್ಳಬೇಕು. ಅದಕ್ಕೋಸ್ಕರ ಈ ಧಾತ್ವಧಿಕಾರದಲ್ಲಿ ಎಂದು ವೃತ್ತಿಯಲ್ಲಿ ಬರೆದಿರುತ್ತಾನೆ. **ಸೂತ್ರಾರ್ಥ**–ಸ್ನಿಹಿತವಾದ ಧಾತ್ವಧಿಕಾರದಲ್ಲಿ ಹೇಳಿದ ತಿಙ್‌ಭಿನ್ನವಾದ ಪ್ರತ್ಯಯವು ಕೃತ್ ಎಂಬ ಸಂಜ್ಞೆಯನ್ನು ಹೊಂದುತ್ತದೆ. 3-1-93ರಿಂದ ಮೂರನೇ ಅಧ್ಯಾಯ ಮುಗಿಯುವವರೆಗೂ ಧಾತುವಿಗೆ ಪ್ರತ್ಯಯ ಹೇಳುವುದರಿಂದ ಅವು ಎಲ್ಲಾ ಕೃತ್ ಎಂಬ ಸಂಜ್ಞೆ ಹೊಂದುತ್ತವೆ. ಪ್ರಕೃತ ಕ್ವಿನ್ ಧಾತ್ವಧಿಕಾರಕ್ಕೆ ಒಳಪಟ್ಟು ವಿಹಿತವಾದುದರಿಂದ ಅದು ಕೃತ್ ಸಂಜ್ಞೆಯನ್ನು ಹೊಂದುತ್ತದೆ.

(ವಕಾರಕ್ಕೆ ಲೋಪ ಹೇಳುವ ಸೂತ್ರ)

೩೦೫. ವೇರಪೃಕ್ತಸ್ಯ ॥ ೬-೧-೬೭ ॥

ಅಪೃಕ್ತಸ್ಯ ವಸ್ಯ ಲೋಪಃ ॥

ವೇಃ, ಅಪೃಕ್ತಸ್ಯ ॥ ದ್ವಿತೀಯ ಸೂತ್ರ. "ಲೋಪೋ ವ್ಯೋರ್ವಲಿ" ಸೂತ್ರದಿಂದ "ಲೋಪಃ" ಅನುವೃತ್ತಿ. **ಸೂತ್ರಾರ್ಥ**–ಅಪೃಕ್ತವಾದ ವಕಾರಕ್ಕೆ ಲೋಪ ಬರುತ್ತದೆ. "ಅಪೃಕ್ತ ಏಕಾಲ್ ಪ್ರತ್ಯಯಃ" ಎಂದು ಒಂದು ಅಲ್‌ರೂಪವಾದ ಪ್ರತ್ಯಯಕ್ಕೆ ಅಪೃಕ್ತ ಸಂಜ್ಞೆ ಹಿಂದೆ ಹೇಳಿದೆ. ಪ್ರಕೃತ ಕ್ವಿನ್‌ನಿನ್ನಲ್ಲಿ ನ್ ಮಾತ್ರ ಉಳಿದುದರಿಂದ ಅದು ಅಪೃಕ್ತವಾಗುತ್ತದೆ. ಆದುದರಿಂದ ಅದಕ್ಕೆ ಲೋಪ. ಋತ್ವಿಜ್ ಎಂದೇ ಉಳಿಯುತ್ತದೆ. ಕೃದಂತವಾದುದರಿಂದ ಪ್ರಾತಿಪದಿಕಸಂಜ್ಞೆ. ಜಾಂತ ಶಬ್ದ. ಋತ್ವಿಜ್ + ಸು ಎಂದಿರುವಾಗ "ಹಲ್‌ಙ್ಯಾಭ್ಯೋ–" ಸೂತ್ರದಿಂದ ಸುಲೋಪವಾದಾಗ ಕುತ್ವ ಹೇಳುತ್ತಾನೆ.

(ಕ್ವಿನ್ನಂತಕ್ಕೆ ಕುತ್ವಹೇಳುವ ಸೂತ್ರ)

೩೦೬. ಕ್ವಿನ್‌ಪ್ರತ್ಯಯಸ್ಯ ಕುಃ ॥ ೮-೨-೬೨ ॥

ಕ್ವಿನ್ ಪ್ರತ್ಯಯೋ ಯಸ್ಮಾತ್ತಸ್ಯ ಕವರ್ಗೋಽಂತಾದೇಶಃ ಸ್ಯಾತ್ಪದಾಂತೇ ॥ ಅಸ್ಯ ಅಸಿದ್ಧತ್ವಾತ್ ಜೋಃ ಕುರಿತಿ ಕುತ್ವಮ್ ॥ ಋತ್ವಿಕ್ ಋತ್ವಿಗ್ ॥ ಋತ್ವಿಜೌ–ಋತ್ವಿಗ್ಭ್ಯಾಮ್ ॥

ಕ್ವಿನ್‌ಪ್ರತ್ಯಯಸ್ಯ ಕುಃ ॥ ದ್ವಿತೀಯಸೂತ್ರ. "ಪದಸ್ಯ" ಅಧಿಕಾರ. "ಝಲಾಂಜಶೋಽಂತೇ" ಸೂತ್ರದಿಂದ "ಅಂತೇ" ಅನುವೃತ್ತಿ. ಕ್ವಿನ್‌ಪ್ರತ್ಯಯೋ

ಯಸ್ಮಾತ್ ಸಃ ಕ್ವಿನ್‌ಪ್ರತ್ಯಯಃ | ಕ್ವಿನ್‌ಪ್ರತ್ಯಯವು ಯಾವುದರ ಮೇಲೆ ವಿಹಿತವಾಗಿರುವುದೋ ಅದು ಕ್ವಿನ್ ಪ್ರತ್ಯಯ. ಆಗ ಕ್ವಿನ್ ಪ್ರತ್ಯಯ ಅಂತದಲ್ಲಿರಬೇಕು ಎಂದರ್ಥ ಬಂದಾಗುವುದಿಲ್ಲ. ನಂತರಕ್ಕೆ ಬಂದು ಅದು ಲೋಪವಾದರೂ ಕ್ವಿನ್‌ಪ್ರತ್ಯಯ. ಪ್ರಕೃತ ಋತ್ವಿಜ್ ಕ್ವಿನ್‌ಪ್ರತ್ಯಯ. ಕ್ವಿನ್ ಲುಪ್ತವಾದರೂ ಋತ್ವಿಜನ ಮೇಲೆ ಅದು ವಿಹಿತವಾಗಿದೆ. **ಸೂತ್ರಾರ್ಥ**–ಕ್ವಿನ್‌ಪ್ರತ್ಯಯವು ಯಾವುದರ ಮೇಲೆ ವಿಹಿತವಾಗಿದೆಯೋ ಅದಕ್ಕೆ ಪದಾಂತದಲ್ಲಿ ಕವರ್ಗವು ಬರುತ್ತದೆ. "ಅಲೋಂತ್ಯಸ್ಯ" ಪರಿಭಾಷೆಯಿಂದ ಅಂತ್ಯಕ್ಕೆ ಬರುತ್ತದೆ. ಕು ಎಂಬಲ್ಲಿ ಉದಿತ್ ಮಾಡಿದುದರಿಂದ ಕವರ್ಗ ತೆಗೆದುಕೊಳ್ಳಬೇಕು. ಕ್ವಿನ್‌ಪ್ರತ್ಯಯ ಋತ್ವಿಜನ ಮೇಲೆ ವಿಹಿತವಾಗಿದೆ. ಪ್ರಕೃತ ಪದಾಂತವಾದುದರಿಂದ ಅದಕ್ಕೆ ಕುತ್ವ. "ಸ್ಥಾನೇಂತರತಮಃ" ಪರಿಭಾಷೆಯಿಂದ ಜಕಾರಕ್ಕೆ ಗಕಾರ. ಋತ್ವಿಗ್. "ಅಸ್ಯಚ್ವಿದ್ಧತ್ವಾದಿತಿ" ॥ ಹೀಗೆ ಈ ಸೂತ್ರದಿಂದ ಕುತ್ವ ಮಾಡಿದರೂ ಇದು ಚ್ವಿದಂತ ಸೂತ್ರವಾದುದರಿಂದ "ಜೋಃ ಕುಃ" ಎಂಬ ಸೂತ್ರದಿಂದಲೇ (ಸೂ. 308) ಕುತ್ವ ಹೇಳಬೇಕು. ಪದಾಂತದಲ್ಲಿ ಜವರ್ಗಕ್ಕೆ ಕವರ್ಗಾದೇಶ ಆ ಸೂತ್ರ ಹೇಳುತ್ತದೆ. ಆ ಸೂತ್ರದೃಷ್ಟಿಯಲ್ಲಿ ಕುತ್ವ ಆಗಿದ್ದಾದುದರಿಂದ ಜಕಾರವೇ ಇರುವುದರಿಂದ ಕುತ್ವ ಹೇಳುತ್ತದೆ. ಗಕಾರ ಬಂದರೆ ಋತ್ವಿಗ್ ಎಂದಾಗುತ್ತದೆ. ಇದಕ್ಕೆ "ವಾವಸಾನೇ" ಸೂತ್ರದಿಂದ ವಿಕಲ್ಪವಾಗಿ ಚರ್ ಬಂದರೆ ಋತ್ವಿಕ್ ಬಾರದಿದ್ದರೆ ಋತ್ವಿಗ್ ಹೀಗೆ ಎರಡು ರೂಪಗಳಾಗುತ್ತವೆ. ಅಜಾದಿಯಲ್ಲಿ ವಿಭಕ್ತಿ ಸೇರಿಸುವುದು ಮಾತ್ರ. ಋತ್ವಿಜೌ–ಋತ್ವಿಜಃ ॥ ದ್ವಿ. ಋತ್ವಿಜಮ್–ಋತ್ವಿಜೌ–ಋತ್ವಿಜಃ ॥ ತೃ. ಋತ್ವಿಜಾ–ಹಲಾದಿಯಲ್ಲಿ ಕುತ್ವ. ಋತ್ವಿಗ್ಭ್ಯಾಂ–ಋತ್ವಿಗ್ಭಿಃ ॥ ಸಪ್ತಮೀ–ಋತ್ವಿಜೋಃ–ಋತ್ವಿಕ್ಷು ॥ ಋತ್ವಿಜ್+ಸು ಎಂದಿರುವಾಗ ಕುತ್ವ. ಋತ್ವಿಗ್+ಸು. "ಖರಿಚ" ಋತ್ವಿಕ್+ಸು. "ಆದೇಶಪ್ರತ್ಯಯಯೋಃ" ಸೂತ್ರದಿಂದ ಕವರ್ಗಪರದಲ್ಲಿರುವುದರಿಂದ ಸಕಾರಕ್ಕೆ ಷತ್ವ. ಕಷ ಸೇರಿದರೆ ಕ್ಷ ಆಗುತ್ತದೆ ॥

ಜಕಾರಾಂತ ಯುಜ್‌ಶಬ್ದ. (ಸೇರಿಸುವವನು)

ಯುಜ್‌ಧಾತುವಿಗೆ ಹಿಂದಿನ ಸೂತ್ರದಿಂದ ಕ್ವಿನ್. ಕೃದಂತವಾದುದರಿಂದ ಪ್ರಾತಿಪದಿಕ ಸಂಜ್ಞಾ. ಕ್ವಿನ್‌ಸರ್ವನಾಮಸ್ಥಾನಗಳಲ್ಲಿ ನುಮಾಗಮ ಹೇಳುತ್ತಾನೆ.

(ಯುಜಿಗೆ ನುಮಾಗಮ ಹೇಳುವ ಸೂತ್ರ)

೩೦೭. ಯುಜೇರಸಮಾಸೇ ॥ ೭-೧-೭೧ ॥

ಯುಜೇಃ ಸರ್ವನಾಮಸ್ಥಾನೇ ನುಮ್ ಸ್ಯಾದಸಮಾಸೇ॥ ಸುಲೋಪಃ॥ ಸಂಯೋಗಾಂತಲೋಪಃ ॥ ಕುತ್ವೇನ ನಸ್ಯ ಜಃ । ಯುಜ್। ಅನುಸ್ವಾರ ಪರಸವರ್ಣೌ । ಯುಞ್ಜೌ ಯುಞ್ಜಃ॥ ಯುಗ್ಭ್ಯಾಮ್ ॥

ಯುಜೇಃ, ಅಸಮಾಸೇ ॥॥ ದ್ವಿಪದಸೂತ್ರ. " ಇದಿತೋ ನುಮ್ ಧಾತೋಃ " ಸೂತ್ರದಿಂದ "ನುಮ್" "ಉಗಿದಚಾ—" ಸೂತ್ರದಿಂದ " ಸರ್ವನಾಮಸ್ಥಾನೇ " ಅನುವೃತ್ತಿ. **ಸೂತ್ರಾರ್ಥ—**ಸಮಾಸದಲ್ಲಿಲ್ಲದೇ ಇರುವ ಯುಜಿಗೆ ಸರ್ವನಾಮಸ್ಥಾನ ಪರವಾದಾಗ ನುಮಾಗಮ ಬರುತ್ತದೆ. (ಸುಟ್ ಸರ್ವನಾಮಸ್ಥಾನ) ಪ್ರಕೃತ ಸಮಾಸವಾಗದ ಯುಜ್‌ಗೆ ಸರ್ವನಾಮಸ್ಥಾನ ಪರವಾಗಿದೆ. ನುಮ್ ಮಿತ್ತಾದುದರಿಂದ ಅಂತ್ಯಾಚಿನ ಪರವಾಗಿ ಬಂದದೆ ಯುನ್–ಜ್ + ಸ್ ಎಂದಾಗುತ್ತದೆ. "ಹಲ್ ಜ್ಯಾಭ್ಯೋ"—ಸೂತ್ರದಿಂದ ಸುಲೋಪ ಯುನ್‌ಜ್. ಸಂಯೋಗಾಂತಪದವಾದುದರಿಂದ " ಸಂಯೋಗಾಂತಸ್ಯ ಲೋಪಃ " ಸೂತ್ರದಿಂದ ಸಂಯೋಗದ ಅಂತ್ಯವಾದ ಜಕಾರಕ್ಕೆ ಲೋಪ. ಯುನ್. ಇದರಮೇಲೆ ಕ್ವಿನ್‌ಪ್ರತ್ಯಯ ವಿಧಾನಮಾಡಿದುದರಿಂದ ಯುಜ್ ಕ್ವಿನ್ ಪ್ರತ್ಯಯ. ಆದುದರಿಂದ "ಕ್ವಿನ್‌ಪ್ರತ್ಯಯಸ್ಯ ಕುಃ" ಸೂತ್ರದಿಂದ ಯುನ್ನಿಗೆ ಕುತ್ವ. ನಕಾರಕ್ಕೆ ಸದೃಶವಾದ ಜಕಾರ ಬಂದರೆ ಯುಜ್. ಔಪರವಾದಾಗ ಯುಜ್+ಔ ಎಂದಿರುವಾಗ ಸರ್ವನಾಮಸ್ಥಾನವಾದುದರಿಂದ ನುಮ್. ಯುನ್‌ಜ್+ಔ. ಸಂಯೋಗಾಂತವಾದ ಪದವಾಗದಿರುವುದರಿಂದ ಜಕಾರಲೋಪವಿಲ್ಲ. ಅಸನಾಂತವಲ್ಲಿ ನಕಾರವಿರುವುದರಿಂದ " ನಶ್ಚಾಪದಾಂತಸ್ಯ ಝಲಿ " ಸೂತ್ರದಿಂದ ನಕಾರಕ್ಕೆ ಅನುಸ್ವಾರ. ಯುಂಜ್+ಔ. ಅನುಸ್ವಾರಕ್ಕೆ ಯಯ್ ಪರವಾದುದರಿಂದ " ಅನುಸ್ವಾರಸ್ಯ ಯಯಿ ಪರಸವರ್ಣಃ " ಸೂತ್ರದಿಂದ ಪರಸವರ್ಣ. ಸ್ಥಾನಸಾಮ್ಯದಿಂದ ಞಕಾರ. ಯುಞ್ಜ್. ಅಜಾದಿಯಲ್ಲೆಲ್ಲಾ (ಸುಟೆನಲ್ಲಿ) ಹೀಗೆ ಕಾರ್ಯಗಳು. ಯುಜ್ + ಜಸ್. ಯುಞ್ಜಃ ॥ ದ್ವಿ. ಯುಞ್ಜ ಮ್–ಯುಞ್ಜ್ + ಶಸ್. ಶಸ್ ಸರ್ವನಾಮಸ್ಥಾನವಲ್ಲ. ಆದುದರಿಂದ ನುಮಾದಿಗಳಿಲ್ಲ. ಯುಜಃ ॥ ತೃ. ॥ ಅಜಾದಿಯಲ್ಲಿಲ್ಲಾ ಪ್ರತ್ಯಯ ಸೇರಿಸುವುದುಮಾತ್ರ. ಯುಜಾ–ಯುಜ್ + ಭ್ಯಾಮ್ ಕುತ್ವ. ಯುಗ್ಭ್ಯಾಮ್–ಯುಗ್ಭಿಃ ॥ ಚ–ಯುಜೇ–ಯುಗ್ಭ್ಯಾಮ್–ಯುಗ್ಭ್ಯಃ ॥ ಸಂ–ಯುಜಃ–ಯುಗ್ಭ್ಯಾಮ್–ಯುಗ್ಭ್ಯಃ ॥ ಷ–ಯುಜಃ–ಯುಜೋಃ–ಯುಜಾಮ್॥ ಸ–ಯುಜಿ–ಯುಜೋಃ ಯುಜ್ + ಸು. ಕುತ್ವ. (ಸೂ 306) ಯುಗ್ + ಸು. " ಖರಿಚ " ಯುಕ್ + ಸು. ಷತ್ವ. (ಸೂ 150) ಯುಕ್ + ಷು. ಯುಕ್ಷು.

ಜಕಾರಾಂತ " ಸುಯುಜ್ ಶಬ್ದ. (ಚೆನ್ನಾಗಿ ಜೋಡಿಸುವನನು)
ಕೇವಲವಾದ ಯುಜಿಗೆ ಕ್ವಿನ್ ಹೇಳಿರುವುದರಿಂದ ಸುಪೂರ್ವಕವಾದ ಯುಜಿಗೆ ಕ್ವಿನ್ ಬರುವುದಿಲ್ಲ. ಕ್ವಿಪ್ ಪ್ರತ್ಯಯ. ಇದರಲ್ಲಿಯೂ ಸರ್ವಲೋಪ. ಕೃದಂತ

ವಾದುದರಿಂದ ಪ್ರಾತಿಪದಿಕ. ಸುಯುಜ್ + ಸ್. " ಹಲ್‌ಜ್ಯಾಭ್ಯೋ— " ಸೂತ್ರದಿಂದ ಸುಲೋಪ ಜಕಾರಕ್ಕೆ ಕುತ್ವಹೇಳುತ್ತಾನೆ.

(ಚವರ್ಗಕ್ಕೆ ಕವರ್ಗ ಹೇಳುವ ಸೂತ್ರ)

೩೦೮. ಚೋಃ ಕುಃ ॥ ೮-೨-೩೦ ॥

ಚವರ್ಗಸ್ಯ ಕವರ್ಗಃ ಸ್ಯಾಜ್ಝಲಿ ಪದಾಂತೇ ಚ ॥ ಸುಯುಕ್ ಸುಯುಗ್ । ಸುಯುಜೌ । ಸುಯುಗ್ಭ್ಯಾಮ್ ॥ ಖನ್ । ಖಞ್ಜೌ । ಖನ್ಭ್ಯಾಮ್ ॥

ದ್ವಿಪದಸೂತ್ರ. ಚೋಃ ಷಷ್ಠೀ. ಉದಿತ್ತಾದುದರಿಂದ ಚವರ್ಗ, ಕವರ್ಗತೆಗೆದುಕೊಳ್ಳಬೇಕು. " ಝಲೋ ಝಲಿ " ಸೂತ್ರದಿಂದ " ಝಲಿ " " ಸ್ಕೋಃ ಸಂಯೋಗಾದ್ಯೋರಂತೇಚ " ಸೂತ್ರದಿಂದ " ಅಂತೇ " ಅನುವೃತ್ತವಾಗುತ್ತದೆ. " ಪದಸ್ಯ " ಅಧಿಕಾರ. **ಸೂತ್ರಾರ್ಥ**— ಚವರ್ಗಕ್ಕೆ ಝಲ್‌ಪರದಲ್ಲಿರುವಾಗಲೂ ಪದಾಂತದಲ್ಲಿಯೂ ಕವರ್ಗಾದೇಶ ಬರುತ್ತದೆ. ಪ್ರಕೃತ ಪದಾಂತದಲ್ಲಿ ಜಕಾರವಿರುವುದರಿಂದ ಕವರ್ಗದಲ್ಲಿನ ಗಕಾರಬರುತ್ತದೆ. ಸುಯುಗ್. " ವಾವಸಾನೇ " ಸೂತ್ರದಿಂದ ವಿಕಲ್ಪವಾಗಿ ಗಕಾರಕ್ಕೆ ಚರಿನ ಕಕಾರಾದೇಶ. ಸುಯುಕ್. ಇನ್ನು ಅಜಾದಿಯಲ್ಲಿ ಪ್ರತ್ಯಯ ಸೇರಿಸುವುದುಮಾತ್ರ. ಸುಯುಜೌ ಸುಯುಜಃ ॥ ಇತ್ಯಾದಿ. ಹೆಲಾದಿಯಲ್ಲಿ " ಸ್ವಾದಿಷ್ವಸರ್ವನಾಮಸ್ಥಾನೇ " ಸೂತ್ರದಿಂದ ಪದಸಂಜ್ಞಾ ಇರುವುದರಿಂದ ಕುತ್ವ. ಸುಯುಗ್ಭ್ಯಾಮ್ ಸುಯುಗ್ಭಿಃ ॥ ಇತ್ಯಾದಿ.

ಖಜಿ ಗತಿವೈಕಲ್ಯೇ ಧಾತು. ಇದಕ್ಕೆ ಕ್ವಿಪ್ ಪ್ರತ್ಯಯ. ಧಾತು ಇದಿತ್ತಾದುರಿಂದ ನುಮಾಗಮ. ಖಿನ್‌ಜ್. ಜಕಾರಾಂತ ಶಬ್ದ. ಸುಪರವಾದಾಗ "ಹಲ್‌ಜ್ಯಾದಿ" ಸೂತ್ರದಿಂದ ಸುವಿಗೆ ಲೋಪ. ಸಂಯೋಗಾಂತ ಪದವಾದುದರಿಂದ " ಸಂಯೋಗಾಂತಸ್ಯಲೋಪಃ " ಸೂತ್ರದಿಂದ ಜಕಾರಕ್ಕೆ ಲೋಪ. ಖನ್. ಖನ್‌ಜ್ + ಔ ಎಂದಿರುವಾಗ ನಕಾರಕ್ಕೆ ಅನುಸ್ವಾರ (ಸೂ. 78) ಅನುಸ್ವಾರಕ್ಕೆ ಪರಸವರ್ಣ. (ಸೂ. 79) ಖಞ್ಜೌ—ಖಞ್ಜಃ ಇತ್ಯಾದಿ. ಹಲಾದಿಯಲ್ಲಿ ಖನ್‌ಜ್ + ಭ್ಯಾಮ್ ಎಂದಿರುವಾಗ "ಸ್ವಾದಿಷ್ವಸರ್ವನಾಮಸ್ಥಾನೇ " ಸೂತ್ರದಿಂದ ಪದಸಂಜ್ಞಾ ಬರುವುದರಿಂದ ಸಂಯೋಗಾಂತ ಲೋಪ. ಖನ್ಭ್ಯಾಮ್. ಖನ್ಭಿಃ ಇತ್ಯಾದಿ.

ಜಕಾರಾಂತ " ರಾಜ್ " ಶಬ್ದ. (ರಾಜ, ಪ್ರಕಾಶಿಸುವನು)

ರಾಜೃ ದೀಪ್ತೌ ಧಾತು. ಕ್ವಿಪ್‌ಪ್ರತ್ಯಯ. ಕ್ವಿಪ್‌ನಲ್ಲಿ ಸರ್ವಲೋಪ. ಕ್ವದಂತವಾದುದರಿಂದ ಪ್ರಾತಿಪದಿಕ ಸಂಜ್ಞೆ. ರಾಜ್+ಅಸ್ ಎಂದಿರುವಾಗ ಷತ್ವ ಹೇಳುತ್ತಾನೆ.

(ವ್ರಶ್ಚಾದಿಗಳಿಗೆ ಷತ್ವ ಹೇಳುವ ಸೂತ್ರ)

೩೦೯. ವ್ರಶ್ಚಭ್ರಸ್ಜಸೃಜ ಮೃಜಯಜರಾಜಭ್ರಾಜಚ್ಛಶಾಂ, ಷಃ ॥ ಲ-ತ್ರಿ-ಷಿ ॥

ಝಲಿ ಪದಾಂತೇ ಚ ॥ ಜಶ್ತ್ವ ಚರ್ತ್ವೇ ॥ ರಾಟ್, ರಾಡ್ । ರಾಜ್ಞೌ । ರಾಜ್ಞಃ ॥ ರಾಡ್ಭ್ಯಾಮ್ ॥ ಏವಂ ವಿಭ್ರಾಟ್, ದೇವೇಟ್, ವಿಶ್ವಸೃಟ್ ॥

ವಾ ॥ (ಪರೌ ವ್ರಜೇಃ ಷಃ ಪದಾಂತೇ) ಪರಾವುಪಪದೇ ವ್ರಜೇಃ ಕ್ವಿಪ್ ಸ್ಯಾದ್ದೀರ್ಘಶ್ಚ ಪದಾಂತೇ ಷತ್ವಮಪಿ॥ ಪರಿವ್ರಾಟ್। ಪರಿವ್ರಾಜೌ ॥

ದ್ವಿಪದ ಸೂತ್ರ. ವ್ರಶ್ಚ, ಭ್ರಸ್ಜ, ಸೃಜ, ಮೃಜ, ಯಜ, ರಾಜ, ಭ್ರಾಜ, ಇವು ಏಳು ಧಾತುಗಳು. ಛ ಶ ಇನೆರಡು ವರ್ಣಗಳು. ಶಬ್ದರೂಪ ಅಧ್ಯಾಹಾರಮಾಡಿಕೊಂಡು ಅವುಗಳನ್ನು ವಿಶೇಷಣನನ್ನಾಗಿ ಮಾಡಿದರೆ ಛಕಾರಾಂತ, ಶಕಾರಾಂತ ಶಬ್ದಗಳಿಗೆ ಎಂದರ್ಥವಾಗುತ್ತದೆ. " ಪದಸ್ಯ " ಅಧಿಕಾರ. " ಸ್ಕೋಃ ಸಂಯೋಗಾದ್ಯೋರಂತೇಚ " ಸೂತ್ರದಿಂದ " ಅಂತೇ " " ಝಲೋ ಝಲಿ " ಸೂತ್ರದಿಂದ " ಝಲಿ " ಅನುವೃತ್ತಿ. **ಸೂತ್ರಾರ್ಥ**—ವ್ರಶ್ಚಾದಿಗಳಿಗೂ ಛಾಂತ, ಶಾಂತ ಶಬ್ದಗಳಿಗೂ ಝಲ್ ಪರದಲ್ಲಿರುವಾಗಲೂ ಪದಾಂತದಲ್ಲಿಯೂ ಷಕಾರಾದೇಶ ಬರುತ್ತದೆ. "ಅಲೋಂತ್ಯಸ್ಯ" ಪರಿಭಾಷೆಯಿಂದ ಅಂತಾದೇಶ. ರಾಜ್+ಸ್ ಎಂದಿರುವಾಗ " ಹಲ್‌ಜ್ಯಾಭ್ಯೋ " ಸೂತ್ರದಿಂದ ಸುಲೋಪವಾದಾಗ ಪದಾಂತವಾದುದರಿಂದ ಈ ಸೂತ್ರದಿಂದ ಜಕಾರಕ್ಕೆ ಷಕಾರಾದೇಶ. ರಾಷ್. ಷಕಾರ ಝಲಿನಲ್ಲಿ ಸೇರುವುದರಿಂದ "ಝಲಾಂ ಜಶೋಂತೇ" ಸೂತ್ರದಿಂದ ಷಕಾರಕ್ಕೆ ಜಶ್ತ್ವ. ಸ್ಥಾನಸಾಮ್ಯದಿಂದ ಡಕಾರ. ರಾಡ್ "ವಾವಸಾನೇ" ಸೂತ್ರದಿಂದ ವಿಕಲ್ಪವಾಗಿ ಚರ್ ಬಂದರೆ ರಾಟ್. ಅಜಾದಿಯಲ್ಲಿ ಪ್ರತ್ಯಯ ಸೇರಿಸುವುದು ಮಾತ್ರ. ರಾಜ್ಞೌ–ರಾಜ್ಞಃ ಇತ್ಯಾದಿ. ಭ್ಯಾಮಾದಿ ಹಲಾದಿಯಲ್ಲಿ ಪದಾಂತತ್ವವಿರುವುದರಿಂದ ಹಿಂದಿನ ಸೂತ್ರದಿಂದ ಜಕಾರಕ್ಕೆ ಷತ್ವ. ರಾಷ್+ಭ್ಯಾಮ್ ಎಂದಿರುವಾಗ ಹಿಂದಿನಂತೆ ಜಶ್ತ್ವಚರ್ತ್ವ. ರಾಡ್ಭ್ಯಾಮ್. ಚರ್ತ್ವಕ್ಕೆ ನಿಮಿತ್ತವಿಲ್ಲ. ಸಪ್ತಮೀ ಸುವಿನಲ್ಲಿ ರಾಜ್+ಸು. ತ್ವ. ರಾಷ್–ಸು. ಜಶ್ತ್ವಷ. ರಾಡ್+ಸು. "ಡಃ ಸಿ ಧುಟ್" ಸೂತ್ರದಿಂದ ಸಕಾರಕ್ಕೆ ವಿಕಲ್ಪವಾಗಿ ಧುಟ್ಆಗಮ. ರಾಡ್+ಧ್ಸು. " ಖರಿಚ "

ಖರದುಬಾರಿ ಬಂದು ರಾಟ್ತ್ಸು. ಧುಟ್ ಬಾರದಿದ್ದರೆ ರಾಟ್ಸು. ಹೀಗೆಯೇ ವಿಭ್ರಾಜ್ ಶಬ್ದ. ಭ್ರಾಜಧಾತು ವ್ರಶ್ಚಾದಿ ಸೂತ್ರದಲ್ಲಿ ಸೇರಿರುವುದರಿಂದ ಷತ್ವ. ಜಶ್ತ್ವ. ವಿಭ್ರಾಟ್–ವಿಭ್ರಾಜೌ ವಿಭ್ರಾಜಃ ॥ ಸ–ಬ–ವಿಭ್ರಾಟ್ತ್ಸು–ವಿಭ್ರಾಟ್ಸು ॥ ದೇವೇಜ್ ಶಬ್ದ. (ದೇವರನ್ನು ಪೂಜಿಸುವವನು) ಯಜ ಧಾತು ಸೂತ್ರದಲ್ಲಿ ಸೇರಿರುವುದರಿಂದ ಷತ್ವಾದಿ. ದೇವೇಜ್. ಇತ್ಯಾದಿ. ಸೃಜಧಾತುವೂ ಸೇರಿರುವುದರಿಂದ ಷತ್ವಾದಿ. ವಿಶ್ವಸೃಟ್–ವಿಶ್ವಸೃಜೌ–ವಿಶ್ವಸೃಜಃ ಇತ್ಯಾದಿ. ಪರಿವ್ರಾಜ್ ಶಬ್ದ. (ಸನ್ಯಾಸಿ) ಸರ್ವಂ ಪರಿತ್ಯಜ್ಯ ವ್ರಜತಿ. ಎಲ್ಲವನ್ನೂ ಬಿಟ್ಟು ಹೋಗುತ್ತಾನೆ. ಪರಿವ್ರಜ್. ಪರಿ ಉಪಸರ್ಗಪೂರ್ವಕವಾದ ವ್ರಜಧಾತು. (ವ್ರಜಗತೌ) ಇದಕ್ಕೆ ದೀರ್ಘ, ಷತ್ವ ವಾರ್ತಿಕದಿಂದ ಸಿದ್ಧವಾಗುತ್ತವೆ. ವಾರ್ತಿಕಾರ್ಥ. ಪರಿಯಂಬುಮ ಉಪಪದವಾಗಿರುವಾಗ (ಸಮೀಪದಲ್ಲಿರುವಾಗ) ವ್ರಜಧಾತುವಿಗೆ ಕ್ವಿಪ್, ದೀರ್ಘವೂ ಬರುತ್ತದೆ. ಪದಾಂತ ವಿಷಯದಲ್ಲಿ ಷತ್ವವೂ ಬರುತ್ತದೆ. ಪರಿವ್ರಾಜ್ ಎಂದಾಗುತ್ತದೆ. ಸು ಬಂದು ಲೋಪವಾದಾಗ ಪದಾಂತವಾದುದರಿಂದ ಷತ್ವ. ಪರಿವ್ರಾಷ್–ಜಶ್ತ್ವ. ಪರಿವ್ರಾಡ್. " ವಾವಸಾನೇ " ಪರಿವ್ರಾಟ್. ಅಜಾದಿಯಲ್ಲಿ ಷತ್ವವಿಲ್ಲ. ಪರಿವ್ರಾಜೌ–ಪರಿವ್ರಾಜಃ ಇತ್ಯಾದಿ. ಸಪ್ತಮೀ ಸುವಿನಲ್ಲಿ ಪರಿವ್ರಾಟ್ತ್ಸು–ಪರಿವ್ರಾಟ್ಸು ॥

ಜಕಾರಾಂತ ವಿಶ್ವರಾಜ್ ಶಬ್ದ. (ಈಶ್ವರ)

ವಿಶ್ವಸ್ಮಿನ್ ರಾಜತೇ. ಪ್ರಪಂಚದಲ್ಲಿ ಪ್ರಕಾಶಿಸುವವನು. ವಿಶ್ವಶಬ್ದ ಉಪಪದವಾಗಿರುವಾಗ ರಾಜೃ ಧಾತುವಿಗೆ ಕ್ವಿಪ್. ವಿಶ್ವರಾಜ್ ಶಬ್ದ. ಇದಕ್ಕೆ ಪದಾಂತದಲ್ಲಿ ದೀರ್ಘ ಹೇಳುತ್ತಾನೆ.

(ವಿಶ್ವ ಶಬ್ದಕ್ಕೆ ದೀರ್ಘ ಹೇಳುವ ಸೂತ್ರ)

೩೧೦. ವಿಶ್ವಸ್ಯ ವಸುರಾಟೋಃ ॥ ೬-೩-೧೩೮ ॥

ವಿಶ್ವಶಬ್ದಸ್ಯ ದೀರ್ಘೋಽಂತಾದೇಶಃ ಸ್ಯಾದ್ವಸೌ ರಾಟ್‌ಶಬ್ದೇ ಚ ಪರೇ॥ ವಿಶ್ವಾರಾಟ್ । ವಿತ್ವಾರಾಡ್ । ವಿಶ್ವರಾಜೌ । ವಿಶ್ವಾರಾಡ್ಭ್ಯಾಮ್ ॥ ಇತ್ಯಾದಿ ॥

ದ್ವಿಪದಸೂತ್ರ. " ಝಲೋಪೇ– " ಸೂತ್ರದಿಂದ " ದೀರ್ಘಃ " ಪದಕ್ಕೆ ಅನುವೃತ್ತಿ. ವಸುಶ್ಚರಾಟ್ಚ ವಸುರಾಟೌ–ತಯೋಃ ವಸುರಾಟೋಃ. ವಸು, ರಾಟ್‌ಶಬ್ದಗಳು. **ಸೂತ್ರಾರ್ಥ**—ವಿಶ್ವಶಬ್ದಕ್ಕೆ ವಸುಶಬ್ದ ರಾಟ್‌ಶಬ್ದಗಳು ಪರವಾದಾಗ

ದೀರ್ಘ ಬರುತ್ತದೆ. "ಆಲೋಂತ್ಯಸ್ಯ" ಪರಿಭಾಷೆಯಿಂದ ಅಂತಾದೇಶ. ಇಲ್ಲಿ ರಾಟ್‌ಶಬ್ದ ಪರವಲ್ಲಿರಬೇಕು ಎಂದುದರಿಂದ ರಾಟ್ ರೂಪವಾಗುವುದು ಪದಾಂತಜ್ಞೆಯಿಂದ ಆದುದರಿಂದ ಪದಾಂತದಲ್ಲಿ ಎಂದು ಅರ್ಥವಾಗುತ್ತದೆ. ಆಗ ಪದಾಂತದಲ್ಲಿ ಮಾತ್ರ ದೀರ್ಘವೆಂದು ತಿಳಿಯಬೇಕು. ವಿಶ್ವರಾಜ್. "ವ್ರಶ್ಚಭ್ರಸ್ಜ —" (ಸೂ. 310) ಸೂತ್ರದಲ್ಲಿ ರಾಜ್ ಶಬ್ದ ಸೇರಿರುವುದರಿಂದ ಪದಾಂತದಲ್ಲಿ ಜಕಾರಕ್ಕೆ ಷಕಾರ. ವಿಶ್ವಾರಾಷ್. "ಝಲಾಂಜಶೋಽಂತೇ" ಸೂತ್ರದಿಂದ ಷಕಾರಕ್ಕೆ ಡಕಾರ. "ವಾವಸಾನೇ" ಸೂತ್ರದಿಂದ ವಿಕಲ್ಪವಾಗಿ ಚರ್ತ್ವ. ವಿಶ್ವಾರಾಟ್. ಅಜಾದಿರ್ಯಲ್ಲಿ ರಾಟ್ ರೂಪವಾಗುವುದಿಲ್ಲ. ಪದಾಂತತ್ವ ಇಲ್ಲ. ಕೇವಲ ಪ್ರತ್ಯಯ ಸೇರಿಸುವುದಷ್ಟೆ ಮಾತ್ರ." ವಿಶ್ವರಾಜಾ ವಿಶ್ವರಾಜಃ। ಇತ್ಯಾದಿ. ವಿಶ್ವರಾಜ್ + ಭ್ಯಾಮ್ ಎಂದಿರುವಾಗ ಪದಾಂತತ್ವವಿದೆ (ಸ್ವಾದಿಷ್ವಸರ್ವನಾಮಸ್ಥಾನೇ) ಆದುದರಿಂದ "ವ್ರಶ್ಚಭ್ರಸ್ಜ —" ಸೂತ್ರದಿಂದ ಷತ್ವ. ಜಶ್ತ್ವ. ವಿಶ್ವರಾಡ್ + ಭ್ಯಾಮ್. ಈ ಸೂತ್ರದಿಂದ ದೀರ್ಘ. ವಿಶ್ವರಾಡ್ಭ್ಯಾಮ್–ವಿಶ್ವರಾಡ್ಭಿಃ ಇತ್ಯಾದಿ. ಸಪ್ತಮಿ ಸುವಿನಲ್ಲಿ ವಿಶ್ವಾರಾಟ್ಸು" ವಿಶ್ವಾರಾಟ್ಸು॥

ಜಕಾರಾಂತ "ಭ್ರಸ್ಜ್" ಶಬ್ದ (ಹುರಿಯುವವನು)

ಭ್ರಸ್ಜ್ + ಸ್ ಎಂದಿರುವಾಗ "ಸಂಯೋಗಾಂತಸ್ಯ ಲೋಪಃ" ಸೂತ್ರದಿಂದ ಜಕಾರಕ್ಕೆ ಲೋಪ ಪ್ರಾಪ್ತವಾದರೆ ಅದಕ್ಕೆ ಅಪವಾದವಾಗಿ ಸಕಾರಕ್ಕೆ ಲೋಪ ಹೇಳುತ್ತಾನೆ.

(ಸಂಯೋಗಾದಿಯ ಸಕಾರ ರಕಾರಗಳಿಗೆ ಲೋಪಹೇಳುವ ಸೂತ್ರ)

೫೧೧. ಸ್ಕೋಃ ಸಂಯೋಗಾದ್ಯೋರಂತೇ ಚ॥ ಲ-೨-೭೯॥

ಪದಾಂತೇ ಝಲಿ ಚ ಯಃ ಸಂಯೋಗಸ್ತದಾದ್ಯೋಃ ಸ್ಕೋರ್ಲೋಪಃ। ಭ್ರಸ್ಟ್। ಸಸ್ಯ ಶ್ಚುತ್ವೇನ ಶಃ। ಝಲಾಂ ಜಶ್ ಝಶಿ ಇತಿ ಶಸ್ಯ ಜಃ। ಭ್ರಜ್ಜೌ। ಭ್ರಡ್ಭ್ಯಾಮ್। ಇತ್ಯಾದಿ.

ಸ್ಕೋಃ, ಸಂಯೋಗ, ಆದ್ಯೋಃ, ಅಂತೇ, ಚ॥ ಐದು ಪದಗಳುಳ್ಳ ಸೂತ್ರ. "ಪದಸ್ಯ" ಅಧಿಕಾರ. "ಝಲೋರ್ಝಲಿ" ಸೂತ್ರದಿಂದ " ಝಲಿ " "ಸಂಯೋಗಾಂತಸ್ಯ ಲೋಪಃ" ಸೂತ್ರದಿಂದ " ಲೋಪಃ" ಅನುವೃತ್ತವಾಗುತ್ತವೆ. ಸಂಯೋಗ ಎಂಬುದು ಲುಪ್ತಷಷ್ಠೀಕ ಪದ. "ಝಲಿ," "ಪದಾಂತೇ" ಎರಡು ಪದಗಳು

ಸಂಯೋಗ ಎಂಬಲ್ಲಿ ಅನ್ವಯಹೊಂದುತ್ತವೆ. " ಸ್‌ಚ, ಕ್‌ಜ, ಸ್ಕ್ಯಾ, ತಯೋಃ ಸ್ಕೋಃ." **ಸೂತ್ರಾರ್ಥ**—ಪದಾಂತ ವಿಷಯದಲ್ಲಿಯೂ ಝಲ್ ಪರದಲ್ಲಿರುವಾಗಲೂ ರೂಪ ಸಂಯೋಗವಿದೆಯೋ ಅದರ ಆದಿಯಲ್ಲಿರುವ ಸಕಾರ ಕಕಾರಗಳಿಗೆ ಲೋಪ ಬರುತ್ತದೆ. ಭ್ರಸ್‌ಜ್ + ಸ್ ಎಂದಿರುವಾಗ "ಹಲ್‌ಜ್ಯಾಭ್ಯೋ—" ಸೂತ್ರದಿಂದ ಸುಲೋಪವಾದಮೇಲೆ ಭ್ರಸ್‌ಜ್ ಪದಾಂತವಾಗುತ್ತದೆ. ಪದಾಂತದಲ್ಲಿ ಸಂಯೋಗವಿದೆ. ಅದರ ಆದಿಯ ಸಕಾರಕ್ಕೆ ಈ ಸೂತ್ರದಿಂದ ಲೋಪ. ಭೃಜ್. "ವ್ರಶ್ಚಭ್ರಸ್ಜ"— ಸೂತ್ರದಲ್ಲಿ ಸೇರಿರುವುದರಿಂದ ಜಕಾರಕ್ಕೆ ಷಕಾರ. " ಝಲಾಂ ಜಶೋಂತೇ " ಸೂತ್ರದಿಂದ ಷಕಾರಕ್ಕೆ ಡಕಾರ. ಭೃಡ್. "ವಾವಸಾನೇ" ಸೂತ್ರದಿಂದ ವಿಕಲ್ಪ ಚರ್ತ್ವ. ಭೃಟ್. ಭೃಸ್‌ಜ್+ಕ್ತಿ ಎಂದಿರುವಾಗ " ಸ್ಕೋಃ ಶ್ಚುನಾ ಶ್ಚುಃ " ಸೂತ್ರದಿಂದ ಸಕಾರಕ್ಕೆ ಜಕಾರ ಯೋಗವಿರುವುದರಿಂದ ಶಕಾರಾದೇಶ. ಭೃಶ್‌ಜ್+ಕ್ತಿ. ಇಲ್ಲಿ "ಝಲಾಂ ಜಶ್ ಝಶಿ" ಸೂತ್ರ (19)ದಿಂದ ಝಶ್ ಪರದಲ್ಲಿರುವುದರಿಂದ ಝಲ್ಲಾದ ಶಕಾರಕ್ಕೆ ಜಕಾರಾದೇಶ. ಭೃಜ್ಜ್. ಇನ್ನು ಅಜಾದಿಯಲ್ಲಿಲ್ಲಾ ಹೀಗೇ ರೂಪ. ಭೃಜ್ಜಃ॥ ದ್ವಿ. ಭೃಜ್ಜಂ–ಇತ್ಯಾದಿ. ಭ್ಯಾಮ್‌ಪರವಾದಾಗ " ಸ್ವಾದಿಷ್ವಸರ್ವನಾಮಸ್ಥಾನೇ " ಸೂತ್ರದಿಂದ ಪದಸಂಜ್ಞಾ ಇರುವುದರಿಂದ ಹಿಂದಿನಂತೆ "ಸ್ಕೋಃ ಸಂಯೋಗಾದ್ಯೋರಂತೇಚ " ಸೂತ್ರದಿಂದ ಸಕಾರಲೋಪ. ಜಕಾರಕ್ಕೆ ಷತ್ವ. ಡತ್ವ. ಭೃಸ್‌ಜ್+ಭ್ಯಾಮ್. ಭೃಜ್+ಭ್ಯಾಮ್–ಭೃಷ್‌ಭ್ಯಾಮ್–ಭೃಡ್ಭ್ಯಾಮ್–ಭೃಡ್ಭಿಃ. ಇನ್ನು ಹಲಾದಿಯಲ್ಲಿ ಹೀಗೇ ರೂಪ. ಸಪ್ತಮೀ ಬಹುವಚನದಲ್ಲಿ ಭೃಟ್‌ತ್ಸು–ಭೃಟ್ಸು. ಎರಡು ರೂಪಗಳು.

ಇತಿ ಜಾಂತಾಃ

ದಕಾರಾಂತ "ತ್ಯದ್" ಶಬ್ದ. (ಅವನು)

ತ್ಯದಾದ್ಯತ್ವಂ। ಪರರೂಪತ್ವಂ ಚ ॥

ತ್ಯದ್ ಸರ್ವನಾಮಶಬ್ದ. ಇದಕ್ಕೆ ವಿಭಕ್ತಿಪರವಾದಾಗ " ತ್ಯದಾದೀನಾಮಃ " ಸೂತ್ರ (193) ದಿಂದ ಅಕಾರಾಂತಾದೇಶ. ತದ್+ಸ್ ಎಂದಿರುವಾಗ ತ್ಯ+ಅ+ಸ್ ಎಂದಾಗುತ್ತದೆ. "ಅತೋ ಗುಣೇ" ಸೂತ್ರ (277) ದಿಂದ ಪರರೂಪ. ತ್ಯ+ಸ್ ಎಂದಿರುವಾಗ ಆದಿಯ ತಕಾರಕ್ಕೆ ಸಕಾರ ಹೇಳುತ್ತಾನೆ.

(ತ್ಯದಾದಿಗಳ ತ, ದಗಳಿಗೆ ಸಕಾರಹೇಳುವ ಸೂತ್ರ)

೫೧೨. ತದೋಃ ಸಃ ಸಾವನನ್ತ್ಯಯೋಃ ॥ ೭-೨-೧೦೬ ॥

ತ್ಯದಾದೀನಾಂ ತಕಾರ ದಕಾರಯೋರನಂತ್ಯಯೋಃ ಸಃ ಸ್ಯಾತ್ಸೌ॥ ಸ್ಯಃ। ತ್ಯೌ। ತ್ಯೇ॥ ಸಃ। ತೌ। ತೇ॥ ಯಃ। ಯೌ। ಯೇ॥ ವಿಷಃ। ವಿಶೌ। ವಿಶೇ॥

ತಯೋಃ, ಸಃ, ಸೌ, ಅನಂತ್ಯಯೋಃ॥ ನಾಲ್ಕು ಪದಗಳುಳ್ಳ ಸೂತ್ರ. "ತ್ಯದ್ ಚ ತದ್ಚ." ತಯೋಃ ತಮೋಃ. ತಕಾರ ದಕಾರಗಳಿಗೆ ಎಂದರ್ಥ. ತಕಾರದ ಮೇಲಿರುವ ಉಕಾರ ಉಚ್ಚಾರಣಾರ್ಥ. "ತ್ಯದಾದೀನಾಮಃ" ಸೂತ್ರದಿಂದ "ತ್ಯದಾದೀನಾಮ್" ಅನುವೃತ್ತಿ. **ಸೂತ್ರಾರ್ಥ.**—ತ್ಯದಾದಿಗಳಿಗೆ ಸು ಪರವಲ್ಲಿರುವಾಗ ಆವುಗಳ ಅಂತ್ಯದಲ್ಲಿ ಇಲ್ಲಿವೆ ಇರುವ ತಕಾರ ದಕಾರಗಳಿಗೆ ಸಕಾರ ಆದೇಶ ಬರುತ್ತವೆ. ಪ್ರಕೃತ್ಯ ತ್ಯ+ಸ್ ಎಂದಿರುವಾಗ ಸು ಪರದಲ್ಲಿದೆ. ತಕಾರ ಅಂತ್ಯವಲ್ಲಿ ಇಲ್ಲ ಆದುದರಿಂದ ತಕಾರಕ್ಕೆ ಸಕಾರ. ಸ್ಯಸ್. ಸಕಾರಕ್ಕೆ ರುತ್ವವಿಸರ್ಗ. ಸು ಪರದಲ್ಲಿರುವಾಗ ಮಾತ್ರ ಸತ್ವ. ಇತರ ವಿಭಕ್ತಿಗಳಲ್ಲಿ ಇಲ್ಲ. ಇನ್ನು ಎಲ್ಲಾ ವಿಭಕ್ತಿಗಳಲ್ಲಿಯೂ ತ್ಯದಾದ್ಯತ್ವ, ಪರರೂಪ ಬಂದು ತ್ಯ ಎಂದು ಏಕಾರಾಂತವಾಗುತ್ತವೆ. ಆಗ ಸರ್ವ ಶಬ್ದದಂತೆ ರೂಪ ತಿಳಿಯಬೇಕು. ಸ್ಯೇ—ತ್ಯೌ—ತ್ಯೈ॥ ದ್ವಿ. ತ್ಯಂ—ತ್ಯೌ—ತ್ಯಾನ್॥ ತೃ-ತ್ಯೇನ-ತ್ಯಾಭ್ಯಾಂ-ತ್ಯೈಃ॥ ಚ-ತ್ಯಸ್ಮೈ—ತ್ಯಾಭ್ಯಾಮ್—ತ್ಯೇಭ್ಯಃ॥ ಪಂ—ತ್ಯಸ್ಮಾತ್—ತ್ಯಾಭ್ಯಾಮ್—ತ್ಯೇಭ್ಯಃ॥ ಷ. ತ್ಯಸ್ಯ—ತ್ಯಯೋಃ—ತ್ಯೇಷಾಂ॥ ಸ. ತ್ಯಸ್ಮಿನ್—ತ್ಯಯೋಃ—ತ್ಯೇಷು॥

ದಕಾರಾಂತ ತದ್ ಶಬ್ದ. (ಅವನು.)

ತ್ಯದ್ ಶಬ್ದದಂತೆ ಪ್ರಕ್ರಿಯಾ ಹೊಂದುತ್ತದೆ. ಅಂತ್ಯವಲ್ಲದ ತಕಾರಕ್ಕೆ ನುವಿನಲ್ಲಿ ಸಕಾರಾದೇಶ. ಸಃ—ತೌ—ತೇ ಇತ್ಯಾದಿ.॥ ತ್ಯದಿನಂತೆ ತಿಳಿಯಬೇಕು.

ದಕಾರಾಂತ "ಯದ್" ಶಬ್ದ. (ಯಾರು. ಪ್ರಶ್ನೆಯಲ್ಲು.)

ಇಲ್ಲಿ ಚತ್ವ, ಪರರೂಪ ಮಾತ್ರ. ತಕಾರ ದಕಾರಗಳಲ್ಲ. ಯ ಏಕಾರಾಂತವಾದ ಮೇಲೆ ಸರ್ವಶಬ್ದದಂತೆ ರೂಪ. ಯಃ—ಯೌ—ಯೇ. ಇತ್ಯಾದಿ.

ದಕಾರಾಂತ, "ಏತದ್" ಶಬ್ದ (ಇವನು)

ಏತದ್+ಸ್ ಎಂದಿರುವಾಗ "ತ್ಯದಾದೀನಾಮಃ" ಸೂತ್ರದಿಂದ ಅತ್ವ, "ಅತೋಗುణೇ" ಪರರೂಪ. ಏತ+ಸ್. ಅನಂತ್ಯದ ತಕಾರಕ್ಕೆ "ತದೋಃ ಸಾವನಂತ್ಯಯೋಃ" ಸೂತ್ರದಿಂದ ಸಕಾರ. ಏಸ+ಸ್. ಇಷ್ಟಿನ ಪರದಲ್ಲಿ ಆದೇಶ ಸಕಾರವಿರುವುದರಿಂದ "ಆದೇಶಪ್ರತ್ಯಯಯೋಃ" ಸೂತ್ರದಿಂದ ಷತ್ವ. ಏಸಸ್. ರುತ್ವ, ವಿಸರ್ಗ. ಏಷಃ। ಇನ್ನು ತ್ಯದಾದ್ಯತ್ವ ಪರರೂಪ. ಅದಂತಶಬ್ದವಾಗುತ್ತದೆ. ಸರ್ವ ಶಬ್ದದಂತೆ ರೂಪ. ಏತೌ-ಏತೇ ಇತ್ಯಾದಿ. ಅನ್ವಾದೇಶದಲ್ಲಿ (ಇದಮ್ ಶಬ್ದದಲ್ಲಿ ಇದರ ವಿಚಾರ ಬಂದಿದೆ) ಏನಾದೇಶ. ದ್ವಿ. ಏತಂ, ಏನಂ-ಏತೌ-ಏನೌ-ಏತಾನ್, ಏನಾನ್. ತೃ. ಏತೇನ, ಏನೇನ-ಏತಾಭ್ಯಾಂ-ಏತೈಃ॥ ಚ-ಏತಸ್ಮೈ-ಏತಾಭ್ಯಾಮ್-ಏತೇಭ್ಯಃ॥ ಪಂ. ಏತಸ್ಮಾತ್-ಏತಾಭ್ಯಾಮ್-ಏತೇಭ್ಯಃ॥ ಷ. ಏತಸ್ಯ-ಏತಯೋಃ-ಏನಯೋಃ-ಏತೇಷಾಮ್॥ ಸ. ಏತಸ್ಮಿನ್ ಏತಯೋಃ, ಏನಯೋಃ-ಏತೇಷು॥

ದಕಾರಾಂತ. ಯುಷ್ಮದ್, ಅಸ್ಮದ್, ಶಬ್ದಗಳು (ನೀನು, ನಾನು)

ಇವುಗಳ ಪ್ರಕೃತಿಯನ್ನು ಒಟ್ಟಿಗೆ ಹೇಳುತ್ತಾ ಹೋಗುತ್ತಾನೆ. ಪ್ರತಿಯೊಂದು ವಿಭಕ್ತಿಯಲ್ಲಿಯೂ ಇವುಗಳಿಗೆ ಪ್ರಕೃತಿಯೆ ಇದೆ. ಒಂದೂ ಪ್ರಕೃತಿಗೆ ಆದೇಶ, ಆಥವಾ ಪ್ರತ್ಯಯಕ್ಕೆ ಆದೇಶ. ಹೀಗೆ ಆದೇಶ ಬಂದು ಮೂಲಸ್ವರೂಪವೇ ಬೇರೆಯಾಗುವುದಿದೆ. ಯುಷ್ಮದ್+ಸ್, ಅಸ್ಮದ್+ಸ್ ಎಂದಿರುವಾಗ ಪ್ರತ್ಯಯಗಳಿಗೆ ಆದೇಶ ಹೇಳುತ್ತಾನೆ.

(ಜಸ್ ಪ್ರಥಮಾಪ್ರತ್ಯಯಗಳಿಗೆ ತಮಾದೇಶ ಹೇಳುವ ಸೂತ್ರ)

೪೧೩. ಜಶೇಪ್ರಥಮಯೋರಮ್ ॥ ೭-೧-೨೪ ॥

ಯುಷ್ಮದಸ್ಮದ್ಭ್ಯಾಂ ಪರಸ್ಯ ಜಶ್ ಇತ್ಯೇತಸ್ಯ ಪ್ರಥಮಾದ್ವಿತೀಯಯೋಃ ಶಾಮಾದೇಶಃ ॥

ಜಶ್ಃ, ಪ್ರಥಮಯೋಃ, ಅಮ್ ॥ ತ್ರಿಪದಸೂತ್ರ. ಜಶ್ ಎಂಬುದು ಲುಪ್ತಷಷ್ಠೀಕ ಪದ. "ಪ್ರಥಮಾ ಚ ಪ್ರಥಮಾ ಚ ಪ್ರಥಮೇ. ಪ್ರಥಮಾದ್ವಿತೀಯಾ ವಿಭಕ್ತಿಗಳು. ತಯೋಃ, "ಪ್ರಥಮಾದ್ವಿತೀಯಯೋಃ" "ಯುಷ್ಮದಸ್ಮದ್ಭ್ಯಾಂ ಜಸ್ಯೋಸ್" ಸೂತ್ರದಿಂದ "ಯುಷ್ಮದಸ್ಮದ್ಭ್ಯಾಮ್" ಅನುವೃತ್ತಿ. **ಸೂತ್ರಾರ್ಥ**—ಯುಷ್ಮದಸ್ಮದ್ ಶಬ್ದಗಳ ಪರದಲ್ಲಿರುವ ಜಶ್ ವಿಭಕ್ತಿಗೂ ಪ್ರಥಮಾದ್ವಿತೀಯಾ ವಿಭಕ್ತಿಗಳ ಮೂರು ವಚನಗಳಿಗೂ ಅಮ್ ಆದೇಶ ಬರುತ್ತದೆ. ಅನೇಕಾಲಾದುದರಿಂದ ಸರ್ವಾದೇಶ. "ನ ವಿಭಕ್ತಾವುಸ್ಮಾಕ್" ಸೂತ್ರದಿಂದ ಮಕಾರಕ್ಕೆ ಇತ್ಸಂಜ್ಞಾ

ಬರುವುದಿಲ್ಲ. ಯುಷ್ಮದ್ + ಅಮ್, ಅಸ್ಮದ್ + ಅಮ್ ಎಂದಾದಾಗ ಪ್ರಕೃತ ಆದೇಶ ಹೇಳುತ್ತಾನೆ.

(ಮಪರ್ಯಂತಕ್ಕೆ ಆದೇಶಹೇಳುವ ಸೂತ್ರ)

೩೧೪. ತ್ವಾಹೌ ಸೌ ॥ ೭-೨-೯೪ ॥

ಅನಯೋರ್ಮಪರ್ಯಂತಸ್ಯ ತ್ವಾಹೌ ಆದೇಶೌ ಸ್ತಃ ॥

ದ್ವಿಪದ ಸೂತ್ರ. "ಮಪರ್ಯಂತಸ್ಯ" ಅಧಿಕಾರ. ಮುಂದೆ ಹೇಳುವ ಆದೇಶಗಳು ಯುಷ್ಮದ್, ಅಸ್ಮದಿನಮಪರ್ಯಂತಕ್ಕೆ ಎಂದು ಅಧಿಕಾರದ ಅರ್ಥ. ಯುಷ್ಮ್, ಅಸ್ಮ್ ಇವುಗಳಿಗೆ ಬರುತ್ತವೆ. "ಯುಷ್ಮದಸ್ಮದೋರನಾದೇಶೇ" ಸೂತ್ರದಿಂದ "ಯುಷ್ಮದಸ್ಮದೋಃ" ಅನುವೃತ್ತಿ. **ಸೂತ್ರಾರ್ಥ**—ಸು ಪರದಲ್ಲಿರುವಾಗ ಯುಷ್ಮದ್ ಅಸ್ಮದ್ ಶಬ್ದಗಳ ಮಪರ್ಯಂತಕ್ಕೆ ತ್ವ. ಅಹ ಆದೇಶಗಳು ಕ್ರಮವಾಗಿ ಬರುತ್ತವೆ. ಪ್ರಕೃತ ಸುಪರದಲ್ಲಿರುವುದರಿಂದ ಆದೇಶಬಂದರೆ ತ್ವ + ಅದ್ + ಅಮ್. ಅಹ + ಅದ್ + ಅಮ್ ಎಂದಾಗುತ್ತದೆ. ಈಗ ಅದ್ ಎಂಬುದಕ್ಕೆ ಲೋಪ ಹೇಳುತ್ತಾನೆ.

(ಯುಷ್ಮದಸ್ಮದ್‌ಗಳ ಅವಿಗೆ ಲೋಪಹೇಳುವ ಸೂತ್ರ)

೩೧೫. ಶೇಷೇ ಲೋಪಃ ॥ ೭-೨-೯೦ ॥

ಶೇಷೇ ವಿಭಕ್ತೌ ಏತಯೋಷ್ಟಿಲೋಪಃ॥ ತ್ವಮ್। ಅಹಮ್॥

ದ್ವಿಪದಸೂತ್ರ. "ಯುಷ್ಮದಸ್ಮದೋಃ" (324) ಅನುವೃತ್ತಿ. "ಅಷ್ಟನ ಆ ವಿಭಕ್ತೌ" ಸೂತ್ರದಿಂದ "ವಿಭಕ್ತೌ" ಅನುವೃತ್ತಿ. ಶೇಷೇ ಎಂಬುದಕ್ಕೆ ವಿಭಕ್ತಿಯಲ್ಲಿ ಅನ್ವಯ. ಹಿಂದೆ ಹೇಳಿ ಬಿಟ್ಟದ್ದು ಶೇಷ. ಹಿಂದೆ ಆತ್ವ ಯತ್ವಕ್ಕೆ ನಿಮಿತ್ತಗಳಾದ ವಿಭಕ್ತಿ ಹೇಳಿವೆ. ಈಗ ಶೇಷಪದದಿಂದ ಆತ್ವ ಯತ್ವಗಳಿಗೆ ನಿಮಿತ್ತವಾಗದ ವಿಭಕ್ತಿ ಎಂದರ್ಥವಾಗುತ್ತದೆ. **ಸೂತ್ರಾರ್ಥ**—ಆತ್ವ ಯತ್ವಗಳಿಗೆ ನಿಮಿತ್ತವಾಗದ ವಿಭಕ್ತಿಪರದಲ್ಲಿರುವಾಗ ಯುಷ್ಮದ್, ಅಸ್ಮದ್ ಶಬ್ದಗಳ ಟಿಗೆ ಲೋಪಬರುತ್ತದೆ. ಪ್ರಕೃತ ಸುವಿಗೆ ಬಂದ ಅನ್ಯ ಆತ್ವಕ್ಕಾಗಲೀ ಯತ್ವಕ್ಕಾಗಲೀ ನಿಮಿತ್ತವಾಗಿಲ್ಲ. ಆದುದರಿಂದ ಟಿಗೆ ಲೋಪ. "ಅಚೋಂತ್ಯಾದಿ ಟಿ" ಸೂತ್ರದಿಂದ ಟಿಯಂದರೆ ಅದ್. ಲೋಪಬಂದರೆ ತ್ವ + ಅಮ್, ಅಹ + ಅಮ್. ಎಂದಾಗುತ್ತದೆ. "ಅಮಿಪೂರ್ವಃ" ಸೂತ್ರದಿಂದ ಪೂರ್ವರೂಪ. ತ್ವಮ್. ಅಹಮ್.

ಯುಷ್ಮದ್ + ಔ, ಅಸ್ಮದ್ + ಔ ಎಂದಿರುವಾಗ "ಜ್ಞೋ ಪ್ರಥಮಯೋರಮ್" ಸೂತ್ರದಿಂದ ವಿಭಕ್ತಿಗೆ ಅಮಾದೇಶ. ಯುಷ್ಮದ್ + ಅಮ್, ಅಸ್ಮದ್ + ಅಮ್. ಈ ಮಪರ್ಯಂತಕ್ಕೆ ಆದೇಶ ಹೇಳುತ್ತಾನೆ.

(ಮಪರ್ಯಂತಕ್ಕೆ ಯುವ, ಆವ ಆದೇಶ ಹೇಳುವ ಸೂತ್ರ)

೩೧೬. ಯುವಾವೌ ದ್ವಿವಚನೇ ॥ ೭-೨-೯೭ ॥

ದ್ವಯೋರುಕ್ತ್ವಾ ಅನಯೋರ್ಮಪರ್ಯಂತಸ್ಯ ಯುವಾವೌ ಸ್ತಃ ವಿಭಕ್ತ್ವಾ ॥

ದ್ವಿಪದಸೂತ್ರ. ಯುವಶ್ಚ, ಆವಶ್ಚ, ಯುವೌ. "ಯುಷ್ಮದಸ್ಮದೋರನಾದೇಶೇ" ಸೂತ್ರದಿಂದ "ಯುಷ್ಮದಸ್ಮದೋಃ" ಅನುವೃತ್ತಿ. "ಮಪರ್ಯಂತಸ್ಯ" ಅಧಿಕಾರ. ದ್ವಯೋರ್ಯಜನಮ್ ದ್ವಿವಚನಮ್. ಇದು ಯುಷ್ಮದಸ್ಮದೋಃ ಎಂಬಲ್ಲಿ ಅನ್ವಯ ಹೊಂದುತ್ತದೆ. ದ್ವಿವಚನದಲ್ಲಿರುವ ಯುಷ್ಮದಸ್ಮದೋಃ ಎಂದರ್ಥ. ದ್ವಿವಚನವಲ್ಲಿರುವುದೆಂದರೆ ದ್ವಿತ್ವ ಸಂಖ್ಯೆಯನ್ನು ಹೇಳುವವುಗಳು ಎಂದರ್ಥ. ದ್ವಿವಚನ ಪರದಲ್ಲಿರುವಾಗ ಎಂದರ್ಥವಲ್ಲ. ಹಾಗೆ ಹೇಳಿದರೆ ನಿನ್ನನ್ನು ಅತಿಕ್ರಮಿಸಿದವರಿಬ್ಬರು ಎಂದರ್ಥ ವಿವಕ್ಷಾಮಾಡಿದಾಗ ಅತಿಯುಷ್ಮದ್ + ಔ ಎಂದಿರುವಾಗ ಆದೇಶ ಬರಬೇಕಾಗುತ್ತದೆ. ಆದರೆ ಅಲ್ಲಿ ಯುಷ್ಮದ್ ಏಕತ್ವ ಸಂಖ್ಯಾ ವಿಶಿಷ್ಟಾರ್ಥ ವಾಚಕವಾದುದರಿಂದ ಬರುವುದಿಲ್ಲ. **ಸೂತ್ರಾರ್ಥ**—ದ್ವಿತ್ವಸಂಖ್ಯಾ ವಿಶಿಷ್ಟಾರ್ಥವಾಚಕವಾದ ಯುಷ್ಮದ್, ಅಸ್ಮದ್‌ಗಳ ಮಪರ್ಯಂತಕ್ಕೆ ವಿಭಕ್ತಿ ಪರದಲ್ಲಿರುವಾಗ ಕ್ರಮವಾಗಿ ಯುವ, ಆವ, ಆದೇಶ ಬರುತ್ತವೆ. ಇಲ್ಲಿ ಈ ಎರಡು ಶಬ್ದಗಳು ದ್ವಿತ್ವಸಂಖ್ಯಾ ವಿಶಿಷ್ಟಾರ್ಥವಾಚಕಗಳಾಗಿವೆ. ಮಪರ್ಯಂತಕ್ಕೆ ಆದೇಶ ಬಂದರೆ ಯುವ + ಅದ್ + ಅಮ್, ಆವ + ಅದ್ + ಅಮ್. ಎಂದಾಗುತ್ತದೆ. ಗುಣವಾದ ಆಕಾರಪರದಲ್ಲಿರುವುದರಿಂದ "ಅತೋಗುಣೇ" ಸೂತ್ರದಿಂದ ಪರರೂಪ. ಯುವದ್ + ಅಮ್, ಆವದ್ + ಅಮ್. ಈಗ ದಕಾರಕ್ಕೆ ಆತ್ವಹೇಳುತ್ತಾನೆ.

(ಔ ಪರವಾದಾಗ ಆತ್ವ ಹೇಳುವ ಸೂತ್ರ)

೩೧೭. ಪ್ರಥಮಾಯಾಶ್ಚ ದ್ವಿವಚನೇ ಭಾಷಾಯಾಮ್ ॥ ೭-೨-೮೮ ॥

ಔಜ್ಞೇತಯೋರಾತ್ವಂ ಲೋಕೇ॥ ಯುವಾಮ್। ಆವಾಮ್॥

ಪ್ರಥಮಾಯಾಃ, ಚ, ದ್ವಿವಚನೇ, ಭಾಷಾಯಾಮ್॥ ನಾಲ್ಕು ಪದಗಳುಳ್ಳ ಸೂತ್ರ. ಇಲ್ಲಿ ದ್ವಿವಚನವೆಂದೆ ಔ ವಿಭಕ್ತಿ. ಪ್ರಥಮಾ ಎಂಬುದು ಪ್ರಥಮ್ಯೈ ದ್ವಿತೀಯಾ ವಿಭಕ್ತಿ ಬೋಧಕವೆಂದು ಹಿಂದಿನಸೂತ್ರದಲ್ಲಿ ಹೇಳಿದೆ. "ಅಷ್ಟನ ಆವಿಭಕ್ತೌ" ಸೂತ್ರದಿಂದ "ಆ" ಅನುವೃತ್ತಿ. "ಯುಷ್ಮದಸ್ಮದ್ಭ್ಯೋಙಃ" ಅನುವೃತ್ತಿ ಇದ್ದೇ ಇವೆ. ಇನ್ನುಮುಂದೆ ಎಲ್ಲಾ ಕಡೆಯಲ್ಲಿಯೂ "ಯುಷ್ಮದಸ್ಮದ್ಭ್ಯೋರನಾದೇಶ್ಯೇ" ಸೂತ್ರದಿಂದ "ಯುಷ್ಮದಸ್ಮದ್ಭ್ಯೋಙ" ಅನುವೃತ್ತಿಯಂದು ತಿಳಿಯಬೇಕು. "ಭಾಷಾಯಾಂ" ಎಂಬುದಕ್ಕೆ ಲೋಕದಲ್ಲಿ ಎಂದರ್ಥ. ವೇದದಲ್ಲಿ ಈ ಆದೇಶವಿಲ್ಲ. **ಸೂತ್ರಾರ್ಥ**—ಪ್ರಥಮಾ ದ್ವಿತೀಯಾಗಳ ದ್ವಿವಚನವಾದ ಔ ಪರವಾದಾಗ ಯುಷ್ಮದ್ ಅಸ್ಮದ್ ಶಬ್ದಗಳಿಗೆ ಆಕಾರಾದೇಶ ಬರುತ್ತದೆ. "ಅಲೋಂತ್ಯಸ್ಯ" ಸೂತ್ರದಿಂದ ಅಂತ್ಯಾದೇಶ ದಕಾರಕ್ಕೆ ಆಕಾರಬಂದರೆ ಯುವ+ಔ+ಅಮ್. ಆವ+ಆ+ಅಮ್. ಸವರ್ಣದೀರ್ಘ. ಯುವಾಮ್. ಆವಾಮ್.

ಯುಷ್ಮದ್+ಜಸ್, ಅಸ್ಮದ್+ಜಸ್ ಎಂದಿರುವಾಗ "ಜ್ಶೋ ಪ್ರಥಮಯೋರಮ್" ಸೂತ್ರದಿಂದ ಪ್ರತ್ಯಯಕ್ಕೆ ಅಮಾದೇಶ. ಈಗ ಪ್ರಕೃತಿಗೆ ಆದೇಶ ಹೇಳುತ್ತಾನೆ.

(ಯೂಯ, ವಯ, ಆದೇಶ ಹೇಳುವ ಸೂತ್ರ)

೪೧೮. ಯೂಯವಯೌ, ಜಸಿ ॥ ೭-೨-೯೩ ॥

ಅನಯೋರ್ಮಪರ್ಯಂತಸ್ಯ । ಯೂಯಮ್ । ವಯಮ್ ॥

ದ್ವಿಪದ ಸೂತ್ರ. "ಯುಷ್ಮದಸ್ಮದ್ಭ್ಯೋಙಃ" ಅನುವೃತ್ತಿ. "ಮಪರ್ಯಂತಸ್ಯ" ಅಧಿಕಾರ. **ಸೂತ್ರಾರ್ಥ**—ಜಸ್ ಪರವಲ್ಲಿರುವಾಗ ಯುಷ್ಮದ್ ಅಸ್ಮದ್ಗಳ ಮಪರ್ಯಂತಕ್ಕೆ ಯೂಯ, ವಯ ಆದೇಶಗಳು ಬರುತ್ತವೆ. ಯುಷ್ಮದ್+ಅಮ್ ಅಸ್ಮದ್+ಅಮ್ ಎಂದಿರುವಾಗ ಮಪರ್ಯಂತಕ್ಕೆ ಆದೇಶ ಬಂದರೆ ಯೂಯ+ಅದ್+ಅಮ್, ವಯ+ಅದ್+ಅಮ್ ಎಂದಾಗುತ್ತದೆ. ಇಲ್ಲಿ ಆತ್ವ ಯತ್ವಕ್ಕೆ ನಿಮಿತ್ತವಲ್ಲದ ವಿಭಕ್ತಿ ಪರವಾದುದರಿಂದ "ಶೇಷೇ ಲೋಪಃ" ಸೂತ್ರದಿಂದ ಮಪರ್ಯಂತದ ಪರದ ಶೇಷವಾದ ಅದಿಗೆ ಲೋಪ. ಯೂಯ+ಅಮ್, ವಯ+ಅಮ್. "ಅವಿಪೂರ್ವಃ" ಸೂತ್ರದಿಂದ ಪೂರ್ವರೂಪ. ಯೂಯಮ್ ವಯಮ್. ಸರ್ವನಾಮ ಶಬ್ದಗಳಿಗೆ ಸಂಬೋಧನೆ ಇಲ್ಲವೆಂದು ಹಿಂದೆ ಹೇಳಿದೆ. ದ್ವಿತೀಯಾ ವಿಭಕ್ತಿಯ ಏಕವಚನದಲ್ಲಿ ಅಮ್ ಪರವಾದಾಗ ಯುಷ್ಮದ್+ಅಮ್, ಅಸ್ಮದ್+ಅಮ್ ಎಂದಿರುವಾಗ ಪ್ರಕೃತಿಗೆ ಆದೇಶಹೇಳುತ್ತಾನೆ.

(ಮಪರ್ಯಂತಕ್ಕೆ ತ್ವ, ಮ ಆದೇಶ ಹೇಳುವ ಸೂತ್ರ)

೪೧೯. ತ್ವಮಾವೇಕವಚನೇ ॥ ೭-೨-೯೨ ॥

ಏಕಸ್ಯೋಕ್ತೇ ಅನಯೋರ್ಮಪರ್ಯಂತಸ್ಯ ತ್ವಮಾವಾದೇಶೌ ವಿಭಕ್ತೌ ॥

ತ್ವಮೌ, ಏಕವಚನೇ ॥ ದ್ವಿಪದಸೂತ್ರ. "ಮಪರ್ಯಂತಸ್ಯ" ಅಧಿಕಾರ. "ಯುಷ್ಮದಸ್ಮದ್ಭ್ಯೋಙಃ" ಅನುವೃತ್ತಿ. ಇಲ್ಲಿ ಏಕವಚನ ಶಬ್ದ ಯುಷ್ಮದ್ ಅಸ್ಮದ್ಗಳಿಗೆ ವಿಶೇಷಣ. ಏಕವಚನ ಪರದಲ್ಲಿರುವಾಗ ಎಂದರ್ಥವಲ್ಲ. ಏಕತ್ವಸಂಖ್ಯಾವಿಶಿಷ್ಟಾರ್ಥಕವಾದ ಯುಷ್ಮದಸ್ಮದ್ಗಳು ಎಂದರ್ಥ. **ಸೂತ್ರಾರ್ಥ**—ವಿಭಕ್ತಿ ಪರದಲ್ಲಿರುವಾಗ ಏಕತ್ವಸಂಖ್ಯಾವಿಶಿಷ್ಟಾರ್ಥಕಗಳಾದ ಯುಷ್ಮದ್ ಅಸ್ಮದ್ಗಳ ಮಪರ್ಯಂತಗಳಿಗೆ ಕ್ರಮವಾಗಿ ತ್ವ, ಮ ಆದೇಶಗಳು ಬರುತ್ತವೆ. ಪ್ರಕೃತ ಈ ಶಬ್ದಗಳು ಏಕತ್ವವನ್ನು ಹೇಳುತ್ತವೆ. ಮಪರ್ಯಂತಕ್ಕೆ ಆದೇಶ ಬಂದರೆ ತ್ವ+ಅದ್+ಅಮ್, ಮ+ಅದ್+ಅಮ್, ಎಂದಾಗುತ್ತದೆ. "ಆತೋಗುಣೇ" ಸೂತ್ರದಿಂದ ಪರರೂಪ. ತ್ವದ್+ಅಮ್, ಮದ್+ಅಮ್. ಈಗ ಆತ್ವ ಹೇಳುತ್ತಾನೆ.

(ದ್ವಿತೀಯಾವಿಭಕ್ತಿಯಲ್ಲಿ ಆತ್ವ ಹೇಳುವ ಸೂತ್ರ)

೪೨೦. ದ್ವಿತೀಯಾಯಾಂ ಚ ॥ ೭-೨-೮೬ ॥

ಅನಯೋರಾತ್ ಸ್ಯಾತ್ ॥ ತ್ವಾಮ್, ಮಾಮ್ ॥

ದ್ವಿಪದ ಸೂತ್ರ. "ಯುಷ್ಮದಸ್ಮದ್ಭ್ಯೋಙಃ" ಅನುವೃತ್ತಿ. "ಅಷ್ಟನ ಆವಿಭಕ್ತೌ" ಸೂತ್ರದಿಂದ "ಆ" ಅನುವೃತ್ತವಾಗುತ್ತದೆ. **ಸೂತ್ರಾರ್ಥ**—ದ್ವಿತೀಯಾವಿಭಕ್ತಿ ಪರದಲ್ಲಿರುವಾಗ ಯುಷ್ಮದ್, ಅಸ್ಮದ್ ಶಬ್ದಗಳಿಗೆ ಆಕಾರ ಬರುತ್ತದೆ. "ಅಲೋಂತ್ಯಸ್ಯ" ಪರಿಭಾಷೆಯಿಂದ ದಕಾರಕ್ಕೆ ಆಕಾರಾದೇಶ. ತ್ವ+ಆ+ಅಮ್. ಮ+ಆ+ಅಮ್ ಸವರ್ಣದೀರ್ಘ. ತ್ವಾಮ್. ಮಾಮ್ ॥ ದ್ವಿತೀಯಾ ದ್ವಿವಚನದಲ್ಲಿ ಪ್ರಥಮಾ ದ್ವಿವಚನದಂತೇ ರೂಪ. "ಜ್ಶೋ ಪ್ರಥಮಯೋರಮ್" ಸೂತ್ರದಿಂದ ಔಗೆ ಅಮಾದೇಶ. ಮಪರ್ಯಂತಕ್ಕೆ ಯುವ, ಆವ ಆದೇಶ. ದಕಾರಕ್ಕೆ "ಪ್ರಥಮಾಯಾಶ್ಚ—" (ಸೂ. 317) ಸೂತ್ರದಿಂದ ಆತ್ವ. ಯುವಾಂ, ಆವಾಮ್.

ಬಹುವಚನದಲ್ಲಿ ಯುಷ್ಮದ್+ಶಸ್, ಅಸ್ಮದ್+ಶಸ್ ಎಂದಿರುವಾಗ ಶಸಿಗೆ ಅಮಾದೇಶವಾಪ್ತವಾದರೆ ಅದಕ್ಕೆ ಅಪವಾದವಾಗಿ ನಕಾರಹೇಳುತ್ತಾನೆ.

(ಶಸಿಗೆ ನಕಾರ ಹೇಳುವ ಸೂತ್ರ)

೫೨೧. ಶಸೋ ನ ॥ ೨-೧-೭೯ ॥

ಆಭ್ಯಾಂ ಶಸಃ ನಃ ಸ್ಯಾತ್ । ಅಮೋಽಪವಾದಃ । ಆದೇಃ ಪರಸ್ಯ ॥ ಸಂಯೋಗಾಂತಲೋಪಃ । ಯುಷ್ಮಾನ್ ಅಸ್ಮಾನ್ ॥

ಶಸಃ, ನ ॥ ದ್ವಿಪದ ಸೂತ್ರ. ನ ಎಂಬುದು ಅವಿಭಕ್ತಿಕಪದ. ಪ್ರಥಮಾ ವಿಭಕ್ತಿಹೇಳಬೇಕಿತ್ತು. " ಯುಷ್ಮದಸ್ಮಾದ್ಭ್ಯಾಂಜಸೋಽಶ್ " ಸೂತ್ರದಿಂದ "ಯುಷ್ಮದಸ್ಮದ್ಭ್ಯಾಂ " ಎಂಬ ಪಂಚಮ್ಯಂತಪದಾನುವೃತ್ತಿ. **ಸೂತ್ರಾರ್ಥ**—ಯುಷ್ಮದ್ ಅಸ್ಮದ್ ಶಬ್ದಗಳ ಪರದಲ್ಲಿರುವ ಶಸಿಗೆ ನಕಾರ ಬರುತ್ತದೆ. ಪರಕ್ಕೆ ವಿಧಾನಮಾಡಿರುವುದರಿಂದ " ಆದೇಃ ಪರಸ್ಯ " ಸೂತ್ರದಿಂದ ಪರದ ಆದಿಗೆ ಆದೇಶ. ಯುಷ್ಮದ್ + ಶಸ್, ಅಸ್ಮದ್ + ಶಸ್ ಎಂಬಲ್ಲಿ ಶಕಾರ (ಲಶಕ್ವತದ್ಧಿತೇ) ಇತ್ತಾದರೆ ಅಸ್ ಉಳಿಯುತ್ತದೆ. ಅಸಿನ ಆದಿ ಅಕಾರಕ್ಕೆ ನಕಾರಾದೇಶ ಆಗ ಯುಷ್ಮದ್ + ನ್ಸ್, ಅಸ್ಮದ್ + ನ್ಸ್ ಎಂದಾಗುತ್ತದೆ. " ದ್ವಿತೀಯಾಯಾಂ ಚ " ಸೂತ್ರದಿಂದ (320) ದಕಾರಕ್ಕೆ ಆಕಾರಾದೇಶ. ಯುಷ್ಮಾ+ನ್ಸ್, ಅಸ್ಮಾ+ನ್ಸ್. ಸಂಯೋಗಾಂತಪದವಾದುದರಿಂದ " ಸಂಯೋಗಾಂತಸ್ಯ ಲೋಪಃ " ಸೂತ್ರದಿಂದ ಅಂತ್ಯದ ಸಕಾರಕ್ಕೆ ಲೋಪ. ಯುಷ್ಮಾನ್, ಅಸ್ಮಾನ್. ತೃತೀಯಾದಲ್ಲಿ ಯುಷ್ಮದ್ + ಟಾ, ಅಸ್ಮದ್ + ಟಾ ಎಂದಿರುವಾಗ " ಚುಟೂ " ಸೂತ್ರದಿಂದ ಟಕಾರಕ್ಕೆ ಇತ್ ಸಂಜ್ಞೆ ಬಂದು ಲೋಪ. ಆ ಉಳಿಯುತ್ತದೆ. " ತ್ವಮಾವೇಕವಚನೇ " ಸೂತ್ರದಿಂದ ಮಪರ್ಯಂತಕ್ಕೆ ತ್ವ, ಮಾ ಆದೇಶ. ತ್ವ + ಅದ್ + ಆ + ಮಾ + ಅದ್ + ಆ ಎಂದಿರುವಾಗ " ಅತೋ ಗುಣೇ " ಸೂತ್ರದಿಂದ ಪರರೂಪ. ತ್ವದ್ + ಆ, ಮದ್ + ಆ ಎಂದಿರುವಾಗ ದಕಾರಕ್ಕೆ ಯಕಾರ ಹೇಳುತ್ತಾನೆ.

(ಯುಷ್ಮದ್ ಅಸ್ಮದ್‌ಗಳಿಗೆ ಯಕಾರ ಹೇಳುವ ಸೂತ್ರ)

೫೨೨. ಯೋಽಚಿ ॥ ೨-೧-೮೯ ॥

ಅನಯೋರ್ಯಕಾರಾದೇಶಃ ಸ್ಯಾದನಾದೇಶೇಽಜಾದೌ ಪರತಃ॥ ತ್ವಯಾ ಮಯಾ॥

ಯಃ, ಅಚಿ॥ ದ್ವಿಪದಸೂತ್ರ। " ಯುಷ್ಮದಸ್ಮದ್ಭೋರನಾದೇಶೇ " ಸೂತ್ರವೂ "ಅಷ್ಟನ ಆ ವಿಭಕ್ತೌ" ಸೂತ್ರದಿಂದ "ವಿಭಕ್ತೌ" ಪದವೂ ಅನುವೃತ್ತವಾಗುತ್ತವೆ.

ಆಚಿ ಸಪ್ತಮ್ಯಂತವು ವಿಭಕ್ತೌ ಸಪ್ತಮ್ಯಂತಕ್ಕೆ ವಿಶೇಷಣ. "ಯಸ್ಮಿನ್ ವಿಧಿಃ—" ಪರಿಭಾಷೆಯಿಂದ ತದಾದಿಲಾಭ. **ಸೂತ್ರಾರ್ಥ**— ಆದೇಶವಲ್ಲದ ಅಜಾದಿ ವಿಭಕ್ತಿ ಪರದಲ್ಲಿರುವಾಗ ಯುಷ್ಮದ್, ಅಸ್ಮದ್‌ಶಬ್ದಗಳಿಗೆ ಯಕಾರಾದೇಶ ಬರುತ್ತದೆ. "ಅಲೋಂತ್ಯಸ್ಯ" ಪರಿಭಾಷೆಯಿಂದ ಅಂತಾದೇಶ. ತ್ವದ್ + ಆ ಮದ್ + ಆ ಎಂದಿರುವಾಗ ಯಾವ ಆದೇಶವೂ ಬಂದಿಲ್ಲ. ಅನಾದೇಶವಾದ ಅಜಾದಿ ವಿಭಕ್ತಿಗೆ ಯಕಾರಾದೇಶ ಬಂದರೆ ತ್ವಯ್ + ಆ + ತ್ವಯಾ. ಮಯ್ + ಆ + ಮಯಾ. ಎಂದಾಗುತ್ತದೆ. ಭ್ಯಾಮ್ ಪರವಾದಾಗ ಯುಷ್ಮದ್ + ಭ್ಯಾಮ್, ಅಸ್ಮದ್ + ಭ್ಯಾಮ್ ಎಂದಿರುವಾಗ ಮಪರ್ಯಂತಕ್ಕೆ " ಯುವಾವೌ ದ್ವಿವಚನೇ " ಸೂತ್ರದಿಂದ ಯುವ, ಆವಾದೇಶ. ಯುವ + ಅದ್ + ಭ್ಯಾಮ್, ಆವ + ಅದ್ + ಭ್ಯಾಮ್. "ಅತೋಗುಣೇ" ಪರರೂಪ. ಯುವದ್ + ಭ್ಯಾಮ್. ಆವದ್ + ಭ್ಯಾಮ್. ಈಗ ದಕಾರಕ್ಕೆ ಆಕಾರಾದೇಶ ಹೇಳುತ್ತಾನೆ. ಆದೇಶಕ್ಕೆ ನಿಮಿತ್ತವಾದ ವಿಭಕ್ತಿ ಪರದಲ್ಲಿರುವುದರಿಂದ "ಶೇಷೇ ಲೋಪಃ" ಸೂತ್ರದಿಂದ ಲೋಪವಿಲ್ಲ.

(ಹಲಾದಿವಿಭಕ್ತಿಯಲ್ಲಿ ಆತ್ವ ಹೇಳುವ ಸೂತ್ರ)

೫೨೩. ಯುಷ್ಮದಸ್ಮದೋರನಾದೇಶೇ ॥ ೨-೩-೯೬ ॥

ಅನಯೋರಾತ್ ಸ್ಯಾದನಾದೇಶೇ ಹಲಾದೌ ವಿಭಕ್ತೌ ॥ ಯುವಾಭ್ಯಾಮ್ ॥ ಆವಾಭ್ಯಾಮ್ ॥ ಯುಷ್ಮಾಭಿಃ । ಅಸ್ಮಾಭಿಃ ॥

ಯುಷ್ಮದಸ್ಮದೋಃ ಅನಾದೇಶೇ ॥ ದ್ವಿಪದ ಸೂತ್ರ. " ಅಷ್ಟನ ಆ ವಿಭಕ್ತೌ " ಸೂತ್ರದಿಂದ " ಆ, " " ವಿಭಕ್ತೌ " ಪದಗಳೂ " ರಾಯೋ ಹಲಿ " ಸೂತ್ರದಿಂದ " ಹಲಿ " ಎಂಬುದೂ ಅನುವೃತ್ತವಾಗುತ್ತವೆ. ಹಲಿಯಂಬ ಸಪ್ತಮ್ಯಂತವು ವಿಭಕ್ತೌ ಎಂಬುದಕ್ಕೆ ವಿಶೇಷಣವಾದುದರಿಂದ " ಯಸ್ಮಿನ್‌ವಿಧಿಸ್ತದಾದಾವಲ್ಗ್ರಹಣೇ " ಪರಿಭಾಷೆಯಿಂದ ತದಾದಿಲಾಭ. ಹಲಾದಿ ವಿಭಕ್ತಿ ಪರದಲ್ಲಿರುವಾಗ ಎಂದರ್ಥ. **ಸೂತ್ರಾರ್ಥ**—ಆದೇಶವಲ್ಲದ ಹಲಾದಿಯಾದ ವಿಭಕ್ತಿ ಪರದಲ್ಲಿರುವಾಗ ಯುಷ್ಮದ್ ಅಸ್ಮದ್‌ಗಳಿಗೆ ಆಕಾರ ಬರುತ್ತದೆ. " ಅಲೋಂತ್ಯಸ್ಯ " ಪರಿಭಾಷೆಯಿಂದ ಅಂತ್ಯಕ್ಕೆ ಆದೇಶ. ಯುವ + ಆ + ಭ್ಯಾಮ್. ಆವ + ಆ + ಭ್ಯಾಮ್. ಸವರ್ಣದೀರ್ಘ. ಯುವಾಭ್ಯಾಮ್, ಆವಾಭ್ಯಾಮ್. ಯುಷ್ಮದ್ + ಭಿಸ್ ಅಸ್ಮದ್ + ಭಿಸ್ ಎಂದಿರುವಾಗ ಪ್ರಕೃತಿ ಪ್ರತ್ಯಯಗಳಿಗೆ ಯಾವ ಆದೇಶವೂ ಇಲ್ಲ. ಅನಾದೇಶ ಹಲಾದಿವಿಭಕ್ತಿ ಪರವಾದುದರಿಂದ ಹಿಂದೆ ಹೇಳಿದ ಸೂತ್ರದಿಂದ ಆಕಾರ ಅಂತಾದೇಶ. ಯುಷ್ಮ + ಆ + ಭಿಸ್. ಅಸ್ಮ + ಆ + ಭಿಸ್. ಸವರ್ಣದೀರ್ಘ. ಯುಷ್ಮಾಭಿಃ, ಅಸ್ಮಾಭಿಃ, (ಸಕಾರಕ್ಕೆ ರುತ್ವ ವಿಸರ್ಗ.)

ಚತುರ್ಥಿಯಲ್ಲಿ ಯುಷ್ಮದ್+ಜಸ್, ಅಸ್ಮತ್+ದ್ಜಸ್ ಎಂದಿರುವಾಗ "ಜಸ್ಶಸೋ ಪ್ರಥಮಯೋರಮ್" ಸೂತ್ರದಿಂದ ಜಸ್ ವಿಭಕ್ತಿಗೆ ಅನುದೇಶ. ಯುಷ್ಮದ್ + ಅಮ್ ಅಸ್ಮದ್+ಅಮ್ ಎಂದಿರುವಾಗ ಮಪರ್ಯಂತಕ್ಕೆ ಆದೇಶ ಹೇಳುತ್ತಾನೆ.

(ಜಸ್‌ಪರವಾದಾಗ ಮಪರ್ಯಂತಕ್ಕೆ ಆದೇಶ ಹೇಳುವ ಸೂತ್ರ)

೩೨೪. ತುಭ್ಯಮಹ್ಯೌ ಜಯಿ ॥ ೭-೨-೯೫ ॥

ಅನಯೋರ್ಮಪರ್ಯಂತಸ್ಯ॥ ಟ ಲೋಪಃ। ತುಭ್ಯಮ್ ಮಹ್ಯಮ್॥

ದ್ವಿಪದ ಸೂತ್ರ, ತುಭ್ಯಶ್ಚ ಮಹ್ಯಶ್ಚ ತುಭ್ಯಮಹ್ಯೌ, ಜಸ್ ವಿಭಕ್ತ್ಯರ್ಥಸಪ್ತಮ್ಯಂತರೂಪ "ಜಯಿ" "ಯುಷ್ಮದಸ್ಮದ್ಭ್ಯೋಃ" ಅನುವೃತ್ತಿ. "ಮಪರ್ಯಂತಸ್ಯ" ಅಧಿಕಾರ. **ಸೂತ್ರಾರ್ಥ**—ಚತುರ್ಥೀಏಕವಚನಪರವಾದಾಗ ಯುಷ್ಮದ್ ಅಸ್ಮದ್‌ಗಳ ಮಪರ್ಯಂತಕ್ಕೆ ಕ್ರಮವಾಗಿ ತುಭ್ಯ, ಮಹ್ಯ ಆದೇಶಗಳು ಬರುತ್ತವೆ. ಆಗ ತುಭ್ಯ+ಅದ್+ಅಮ್. ಮಹ್ಯ+ಅದ್+ಅಮ್. ಎಂದಾಗುತ್ತದೆ. ಇಲ್ಲಿ ಆತ್ವ, ಯತ್ವಗಳಿಗೆ ನಿಮಿತ್ತವಾಗದ ವಿಭಕ್ತಿಪರದಲ್ಲಿರುವುದರಿಂದ "ಶೇಷೇ ಲೋಪಃ" ಸೂತ್ರದಿಂದ ಟಗೆ(ಅದ್)ಲೋಪ. ತುಭ್ಯ+ಅಮ್ ಮಹ್ಯ+ಅಮ್. "ಅಮಿಪೂರ್ವಃ" ಸೂತ್ರದಿಂದ ಪೂರ್ವರೂಪ. ತುಭ್ಯಮ್, ಮಹ್ಯಮ್, ಭ್ಯಾಮ್ ಪರವಾದಾಗ ತೃತೀಯಾದ್ವಿವಚನದಂತೇ ರೂಪ. ಮಪರ್ಯಂತಕ್ಕೆ ಯುನ, ಆವ ಆದೇಶ. ದಕಾರಕ್ಕೆ ಆತ್ವ. ಯುವಾಭ್ಯಾಮ್-ಆವಾಭ್ಯಾಮ್. ಚತುರ್ಥೀಬಹುವಚನದಲ್ಲಿ ಯುಷ್ಮದ್+ಭ್ಯಸ್, ಅಸ್ಮದ್+ಭ್ಯಸ್ ಎಂದಿರುವಾಗ ವಿಭಕ್ತಿಗೆ ಆದೇಶಹೇಳುತ್ತಾನೆ.

(ಭ್ಯಸಿಗೆ ಭ್ಯಮಾದೇಶಹೇಳುವ ಸೂತ್ರ)

೩೨೫. ಭ್ಯಸೋಽಭ್ಯಮ್ ॥ ೭-೧-೩೦ ॥

ಆಭ್ಯಾಂ ಪರಸ್ಯ ಭ್ಯಸಃ ಅಭ್ಯಮ್ ಸ್ಯಾತ್ ॥ ಯುಷ್ಮಭ್ಯಮ್, ಅಸ್ಮಭ್ಯಮ್ ॥

ಭ್ಯಸಃ, ಅಭ್ಯಮ್ ॥ ದ್ವಿಪದ ಸೂತ್ರ. "ಯುಷ್ಮದಸ್ಮದ್ಭ್ಯಾಂ ಜಸೋಽಶ್" ಸೂತ್ರದಿಂದ "ಯುಷ್ಮದಸ್ಮದ್ಭ್ಯಾಮ್" ಅನುವೃತ್ತಿ. ಪಂಚಮಿಯಾದುದರಿಂದ ಪರಕ್ಕೆ ಎಂದು ತಿಳಿಯುತ್ತದೆ. **ಸೂತ್ರಾರ್ಥ**—ಯುಷ್ಮದ್, ಅಸ್ಮದ್‌ಗಳ ಪರದಲ್ಲಿರುವ ಭ್ಯಸಿಗೆ ಅಭ್ಯಮ್ ಆದೇಶ ಬರುತ್ತದೆ. ಭ್ಯಸಿಗೆ ಅಭ್ಯಮ್ ಆದೇಶ ಬಂದರೆ ಯುಷ್ಮದ್+ಅಭ್ಯಮ್. ಅಸ್ಮದ್+ಅಭ್ಯಮ್ ಎಂದಾಗುತ್ತದೆ. ಇಲ್ಲಿ ಆದೇಶ

ವಾಗಿ ಬಂದ ವಿಭಕ್ತಿಪರದಲ್ಲಿರುವುದರಿಂದ "ಯುಷ್ಮದ್"-(ಸೂ 323) ಸೂತ್ರದಿಂದ ಆತ್ವ ಬರುವುದಿಲ್ಲ. "ಶೇಷೇ ಲೋಪಃ" ಸೂತ್ರದಿಂದ ಟಗೆ (ಅದ್) ಲೋಪ ಬಂದರೆ ಯುಷ್ಮಭ್ಯಮ್, ಅಸ್ಮಭ್ಯಮ್ ಎಂದಾಗುತ್ತದೆ

ಪಂಚಮಿಯಲ್ಲಿ ಯುಷ್ಮದ್ + ಜಸಿ, ಅಸ್ಮದ್ + ಜಸಿ ಎಂದಿರುವಾಗ ವಿಭಕ್ತಿಗೆ ಆದೇಶ ಹೇಳುತ್ತಾನೆ.

(ಪಂಚಮೀ ಏಕವಚನಕ್ಕೆ ಆದೇಶ ಹೇಳುವ ಸೂತ್ರ)

೩೨೬. ಏಕವಚನಸ್ಯ ಚ ।' ೭-೧-೩೨ ।।

ಆಭ್ಯಾಂ ಜಸೇರತ್॥ ತ್ವತ್, ಮತ್॥

ದ್ವಿಪದಸೂತ್ರ. "ಪಂಚಮ್ಯಾ ಅತ್" ಸೂತ್ರದಿಂದ "ಪಂಚಮ್ಯಾಃ" "ಯುಷ್ಮದಸ್ಮದ್ಭ್ಯಾಂ" – ಸೂತ್ರದಿಂದ "ಯುಷ್ಮದಸ್ಮದ್ಭ್ಯಾಂ" ಅನುವೃತ್ತಿ. **ಸೂತ್ರಾರ್ಥ**.– ಯುಷ್ಮದ್ ಅಸ್ಮದ್‌ಗಳ ಪರದಲ್ಲಿರುವ ಪಂಚಮೀ ಏಕವಚನವಾದ ಜಸಿಗೆ ಅತ್ ಆದೇಶ ಬರುತ್ತದೆ. ಆಗ ಯುಷ್ಮದ್ + ಅತ್, ಅಸ್ಮದ್ + ಅತ್ ಎಂದಾಗುತ್ತದೆ. "ತ್ವಮಾವೇಕವಚನೇ" ಸೂತ್ರದಿಂದ ಮಪರ್ಯಂತಕ್ಕೆ ತ್ವ, ಮ ಆದೇಶ. ತ್ವ+ಅದ್+ಅತ್. ಮ+ಅದ್+ಅತ್. ಆತ್ವಾದಿಗಳಿಗೆ ನಿಮಿತ್ತವಿಲ್ಲ. ಆದೇಶವಾದ ಅಜಾದಿ ಪ್ರತ್ಯಯವಾದುದರಿಂದ ಯತ್ವವಿಲ್ಲ. "ಶೇಷೇಲೋಪಃ" ಸೂತ್ರದಿಂದ ಅದಿಗೆ ಲೋಪ. ತ್ವ+ಅತ್. ಮ+ಅತ್. "ಅತೋಗುಣೇ" ಸೂತ್ರದಿಂದ ಪರರೂಪ. ತ್ವತ್. ಮತ್. ದ್ವಿವಚನದಲ್ಲಿ ಭ್ಯಾಮ್ ಪರವಾದಾಗ ತೃತೀಯಾ, ಚತುರ್ಥೀ ದ್ವಿವಚನದಂತೇ ರೂಪ. ಯುವಾಭ್ಯಾಮ್. ಆವಾಭ್ಯಾಮ್, ಬಹುವಚನದಲ್ಲಿ ಭ್ಯಸ್‌ಪರವಾದಾಗ ಅದಕ್ಕೆ ಆದೇಶಹೇಳುತ್ತಾನೆ.

(ಪಂಚಮಿಯ ಭ್ಯಸಿಗೆ ಆದೇಶ ಹೇಳುವ ಸೂತ್ರ)

೩೨೭. ಪಂಚಮ್ಯಾ ಅತ್ ॥ ೭-೧-೩೧ ॥

ಆಭ್ಯಾಂ ಪಂಚಮ್ಯಾ ಭ್ಯಸೋಽತ್ಸ್ಯಾತ್ ॥ ಯುಷ್ಮತ್ । ಅಸ್ಮತ್ ॥

ಪಂಚಮ್ಯಾಃ, ಅತ್ ॥ ದ್ವಿಪದ ಸೂತ್ರ. "ಯುಷ್ಮದಸ್ಮದ್ಭ್ಯಾಂ" ಅನುವೃತ್ತಿ. "ಭ್ಯಸೋಽಭ್ಯಮ್" ಸೂತ್ರದಿಂದ "ಭ್ಯಸಃ" ಅನುವೃತ್ತಿ. **ಸೂತ್ರಾರ್ಥ**— ಯುಷ್ಮದಸ್ಮದಿನ ಪರದಲ್ಲಿರುವ ಪಂಚಮೀ ಬಹುವಚನವಾದ ಭ್ಯಸಿಗೆ ಅತ್ ಆದೇಶ

ಬರುತ್ತದೆ. "ನ ವಿಭಕ್ತಾ ತುಸ್ಮಾಃ" ಸೂತ್ರದಿಂದ ಅತಿನಲ್ಲಿರುವ ತಕಾರಕ್ಕೆ ಲೋಪ ಬರುವುದಿಲ್ಲ. ಯುಷ್ಮದ್+ಅತ್. ಅಸ್ಮದ್+ಅತ್. ಆದೇಶವಾದ ವಿಭಕ್ತಿಯ ಪರದಲ್ಲಿರುವುದರಿಂದ ಆತ್ವ ಬರುವುದಿಲ್ಲ. "ಶೇಷೇಲೋಪಃ" ಸೂತ್ರದಿಂದ ಅದಿಗೆ ಲೋಪ. ಯುಷ್ಮ+ಅತ್. ಅಸ್ಮ+ಅತ್. "ಅತೋಗುಣೇ" ಸೂತ್ರದಿಂದ ಪರರೂಪ. ಯುಷ್ಮತ್. ಅಸ್ಮತ್.

ಷಷ್ಠಿಯಲ್ಲಿ ಯುಷ್ಮದ್+ಜಸ್. ಅಸ್ಮದ್+ಜಸ್ ಎಂದಿರುವಾಗ ಪ್ರಕೃತಿಗೆ ಆದೇಶ ಹೇಳುತ್ತಾನೆ,

(ತವ, ಮಮ, ಆದೇಶ ಹೇಳುವ ಸೂತ್ರ)

೩೨೮. ತವಮಮೌ. ಜಸಿ ॥ ೭-೨-೯೬ ॥

ಅನಯೋರ್ಮಪರ್ಯಂತಸ್ಯ ತವ ಮಮೌ ಸ್ತಃ ಜಸಿ ॥

ದ್ವಿಪದ ಸೂತ್ರ. "ಮಪರ್ಯಂತಸ್ಯ" ಅಧಿಕಾರ. "ಯುಷ್ಮದಸ್ಮದ್ಭ್ಯೋಃ" ಅನುವೃತ್ತಿ. ಜಸಿ ಷಷ್ಠೀ ಏಕವಚನದ ಸಪ್ತಮೀರೂಪ. "ತಸ್ಮಿನ್ನಿತಿನಿರ್ದಿಷ್ಟೇ ಪೂರ್ವಸ್ಯ" ಪರಿಭಾಷೆಯಿಂದ ಪೂರ್ವಕ್ಕೆ ಕಾರ್ಯವೆಂದು ತಿಳಿಯಬೇಕು. **ಸೂತ್ರಾರ್ಥ**—ಷಷ್ಠೀಏಕವಚನ ಜಸ್ ಪರವಾದಾಗ ಯುಷ್ಮದಸ್ಮದ್‌ಗಳ ಮಪರ್ಯಂತಕ್ಕೆ ಕ್ರಮವಾಗಿ ತವ, ಮಮ ಆದೇಶಗಳು ಬರುತ್ತವೆ. ಆಗ ತವ+ಅದ್+ಅಸ್. ಮಮ+ಅದ್+ಅಸ್ ಎಂದಾಗುತ್ತದೆ. ಈಗ ಪ್ರತ್ಯಯಕ್ಕೆ ಆದೇಶ ಹೇಳುತ್ತಾನೆ.

(ಜಸಿಗೆ ಅಶಾದೇಶ ಹೇಳುವ ಸೂತ್ರ)

೩೨೯. ಯುಷ್ಮದಸ್ಮದ್ಭ್ಯಾಂ ಜಸೋಽಶ್ ॥ ೭-೧-೨೭ ॥

ಸ್ಪಷ್ಟಮ್ ॥ ತವ, ಮಮ। ಯುವಯೋಃ, ಆವಯೋಃ ॥

ಯುಷ್ಮದಸ್ಮದ್ಭ್ಯಾಂ, ಜಸಃ, ಅಶ್ ॥ ತ್ರಿಪದಸೂತ್ರ. ಅನುವೃತ್ತ್ಯಾದಿಗಳು ಇಲ್ಲದಿರುವುದರಿಂದ ಸ್ಪಷ್ಟವಾಗಿದೆ. **ಸೂತ್ರಾರ್ಥ**—ಯುಷ್ಮದಸ್ಮದ್‌ಗಳ ಪರದಲ್ಲಿರುವ ಷಷ್ಠೀ ಏಕವಚನವಾದ ಜಸಿಗೆ ಅಶಾದೇಶ ಬರುತ್ತದೆ. ಅಶಿನಲ್ಲಿ ಶಕಾರ "ಹಲಂತ್ಯಮ್" ಸೂತ್ರದಿಂದ ಇತ್ಸಾಗುತ್ತದೆ. ಶಿತ್ವಾದುದರಿಂದ ಸರ್ವಾದೇಶ. ತವ+ಅದ್+ಅ. ಮಮ+ಅದ್+ಅ. ಎಂದಾಗುತ್ತದೆ. ಆದೇಶವಾದ ವಿಭಕ್ತಿಪರದಲ್ಲಿರುವುದರಿಂದ ಯಾದೇಶ ಬರುವುದಿಲ್ಲ. "ಶೇಷೇಲೋಪಃ" ಸೂತ್ರದಿಂದ ಆದಿಗೆ ಲೋಪ. ತವ+ಅ. ಮಮ+ಅ. "ಅತೋಗುಣೇ" ಸೂತ್ರದಿಂದ ಪರರೂಪ. ತವ. ಮಮ. ॥ ದ್ವಿವಚನದಲ್ಲಿ ಯುಷ್ಮದ್+ಓಸ್, ಅಸ್ಮದ್+ಓಸ್ ಎಂದಿರುವಾಗ ಮಪರ್ಯಂತಕ್ಕೆ

"ಯುವಾವೌ ದ್ವಿವಚನೇ" ಸೂತ್ರದಿಂದ ಯುವ, ಆವ ಆದೇಶ. ಯುವ+ಅದ್+ಓಸ್. ಆವ+ಅದ್+ಓಸ್. "ಅತೋಗುಣೇ" ಸೂತ್ರದಿಂದ ಪರರೂಪ. ಯುವದ್+ಓಸ್. ಆವದ್+ಓಸ್. ಇಲ್ಲಿ ಅನಾದೇಶವಾದ ಆಜಾದಿ ವಿಭಕ್ತಿ ಪರವಾದುದರಿಂದ "ಯೋಽಚಿ" ಸೂತ್ರದಿಂದ ಯಕಾರ ಆಂತಾದೇಶ. ದಕಾರಕ್ಕೆ ಯಕಾರಬಂದರೆ ಯುವಯ್ + ಓಸ್.+ಯುವಯೋಃ. ಆವಯ್+ಓಸ್ ಆವಯೋಃ. ಎಂದಾಗುತ್ತದೆ. ಬಹುವಚನದಲ್ಲಿ ಯುಷ್ಮದ್+ಆಮ್, ಅಸ್ಮದ್+ಆಮ್ ಎಂದಿರುವಾಗ ಪ್ರತ್ಯಯಕ್ಕೆ ಆದೇಶಹೇಳುತ್ತಾನೆ.

(ಆಕಮ್ ಆದೇಶ ಹೇಳುವ ಸೂತ್ರ)

೩೩೦. ಸಾಮು ಆಕಮ್ ॥ ೭-೧-೩೩ ॥

ಆಭ್ಯಾಂ ಪರಸ್ಯ ಸಾಮು ಆಕಂ ಸ್ಯಾತ್। ಯುಷ್ಮಾಕಂ। ತ್ವಯಿ। ಮಯಿ। ಯುವಯೋಃ। ಆವಯೋಃ। ಯುಷ್ಮಾಸು। ಅಸ್ಮಾಸು ॥

ಸಾಮುಃ, ಆಕಮ್. ದ್ವಿಪದಸೂತ್ರ. "ಯುಷ್ಮದಸ್ಮದ್ಭ್ಯಾಮ್" ಅನುವೃತ್ತಿ. **ಸೂತ್ರಾರ್ಥ**—ಯುಷ್ಮದಸ್ಮದ್ ಶಬ್ದಗಳ ಪರದಲ್ಲಿರುವ ಸುಟ್ ಸಹಿತವಾದ ಆಮ್ ಪ್ರತ್ಯಯಕ್ಕೆ ಆಕಮ್ ಆದೇಶ ಬರುತ್ತದೆ. ಪ್ರಕೃತ ಕೇವಲ ಆಮ್ ಇದೆ. ಮುಂದೆ ಬರಬಹುದಾದ ಸುಟ್‌ನ್ನು ಸೇರಿಸಿ ಈಗಲೇ ಆಕಮ್ ಆದೇಶ ಹೇಳಿರುತ್ತಾನೆ. ಆಕಮ್ ಆದೇಶ ಹೇಳಿದ ಮೇಲೆ ದಕಾರಕ್ಕೆ ಲೋಪವಾದಾಗ ಅದಂತವಾಗುವುದರಿಂದ "ಆಮಿಸರ್ವನಾಮ್ನಃ ಸುಟ್" ಸೂತ್ರದಿಂದ ಸುಟಾಗಮ ಬರುತ್ತಿತ್ತು. ಅದನ್ನು ಹೋಗಲಾಡಿಸಲು ಹೀಗೆ ಹೇಳಿರುತ್ತಾನೆ. ಇದರಿಂದ ಮುಂದೆ ಅದಂತವಾದರೂ ಸುಟ್ ಬರುವುದಿಲ್ಲವೆಂದು ತಿಳಿಸಿದಂತಾಗುತ್ತದೆ. ಹೀಗೆ ಆಕಮ್ ಆದೇಶ ಬಂದರೆ ಯುಷ್ಮದ್+ಆಕಮ್. ಅಸ್ಮದ್+ಆಕಮ್. ಆದೇಶವಾದ ಆಜಾದಿ ಪ್ರತ್ಯಯವಾದುದರಿಂದ ಯಾದೇಶವಿಲ್ಲ. "ಶೇಷೇ ಲೋಪಃ" ಸೂತ್ರದಿಂದ ಆದಿಗೆ ಲೋಪ. ಯುಷ್ಮ್+ಆಕಮ್ = ಯುಷ್ಮಾಕಮ್. ಅಸ್ಮ್+ಆಕಮ್ = ಅಸ್ಮಾಕಮ್.

ಸಪ್ತಮಿಏಕವಚನದಲ್ಲಿ ಜಾಪರವಾದಾಗ "ತ್ವಮಾವೇಕವಚನೇ" ಸೂತ್ರದಿಂದ ಮಪರ್ಯಂತಕ್ಕೆ ತ್ವ. ಮ ಆದೇಶ. ತ್ವ+ಅದ್+ಇ. ಮ+ಅದ್+ಇ. "ಅತೋಗುಣೇ" ಪರರೂಪ. ತ್ವದ್+ಇ. ಮದ್+ಇ. ಅನಾದೇಶವಾದ ಆಜಾದಿ ಪ್ರತ್ಯಯ ಇರುವುದರಿಂದ "ಯೋಽಚಿ" ಸೂತ್ರದಿಂದ ದಕಾರಕ್ಕೆ ಯಕಾರಾದೇಶ. ತ್ವಯಿ. ಮಯಿ. ದ್ವಿವಚನದಲ್ಲಿ ಷಷ್ಠೀದ್ವಿವಚನದಂತೇ ರೂಪ.

ಯುವಯೋಃ, ಆವಯೋಃ. ಬಹುವಚನದಲ್ಲಿ ಸುಪ್ ಪರವಾದಾಗ ಪ್ರತ್ಯಯ ಗಳಿಗೆ ಯಾವ ಆದೇಶವೂ ಇಲ್ಲ. " ಯುಷ್ಮದಸ್ಮದೋರನಾದೇಶೇ " ಸೂತ್ರದಿಂದ ಅಂತ್ಯಕ್ಕೆ ಆಕಾರಾದೇಶ. ದಕಾರಕ್ಕೆ ಸಕಾರ ಬಂದಿದೆ ಯುಷ್ಮ+ಅ+ಸು. ಅಸ್ಮ+ಅ+ಸು. ಸವರ್ಣದೀರ್ಘ. ಯುಷ್ಮಾಸು. ಅಸ್ಮಾಸು ॥

ಈಗ ಈ ಎರಡು ಶಬ್ದಗಳಿಗೆ ಕೆಲವು ವಿಭಕ್ತಿಗಳಲ್ಲಿ (ವಿಭಕ್ತ್ಯಂತಗಳಿಗೆ) ಆದೇಶ ಗಳನ್ನು ಹೇಳುತ್ತಾನೆ.

(ವಾಂ, ನೌ ಆದೇಶ ಹೇಳುವ ಸೂತ್ರ)

೪೩೧. ಯುಷ್ಮದಸ್ಮದೋಃ ಷಷ್ಠೀ ಚತುರ್ಥೀ ದ್ವಿತೀಯಾಸ್ಥಯೋರ್ವಾಂನಾವೌ ॥ ೮-೧-೨೦ ॥

ಪದಾತ್ಪರಯೋರಪಾದಾದೌ ಸ್ಥಿತಯೋಃ ಷಷ್ಠ್ಯಾದಿವಿಶಿಷ್ಟಯೋಃ ವಾಂ ನೌ ಇತ್ಯಾದೇಶೌ ಸ್ತಃ ॥

ಯುಷ್ಮದಸ್ಮದೋಃ, ಷಷ್ಠೀಚತುರ್ಥೀದ್ವಿತೀಯಾಸ್ಥಯೋಃ, ವಾಂನಾವೌ. ॥ ತ್ರಿಪದ ಸೂತ್ರ. " ಪದಾತ್ " " ಅನುದಾತ್ತಂ ಸರ್ವಮಪಾದಾದೌ " ಎರಡು ಅಧಿಕಾರ ಸೂತ್ರಗಳು. ಇವುಗಳ ಮುಂದೆ ಹೇಳುವ ಕಾರ್ಯಗಳು ಪದದ ಪರದಲ್ಲಿರುವಾಗ, ಪಾದದ ಆದಿಯಲ್ಲಿ ಇಲ್ಲದಿರುವಾಗ ಎಂದು ಇವುಗಳು ತಿಳಿಸುತ್ತವೆ. " ಷಷ್ಠೀ ಚತುರ್ಥೀದ್ವಿತೀಯಾಭಿಃ ಸಹ ತಿಷ್ಠತಃ " ಇತಿ ಷಷ್ಠೀಚತುರ್ಥೀದ್ವಿತೀಯಾಸ್ಥಯೋಃ. ಷಷ್ಠೀ ಚತುರ್ಥೀ, ದ್ವಿತಿಯಾ ವಿಭಕ್ತಿಗಳಿಂದ ಕೂಡಿದ ಯುಷ್ಮದ್ ಅಸ್ಮದ್‌ಗಳಿಗೆ ಎಂದರ್ಥ. " ವಾಂ, ಚ, ನೌ ಚ ವಾಂನಾವೌ. " **ಸೂತ್ರಾರ್ಥ**—ಪದದ ಪರದಲ್ಲಿರುವ, ಪಾದದ ಆದಿಯಲ್ಲಿ ಇಲ್ಲದಿರುವ ಷಷ್ಠೀ, ಚತುರ್ಥೀ, ದ್ವಿತೀಯಾ ವಿಭಕ್ತಿ ವಿಶಿಷ್ಟವಾದ ಯುಷ್ಮದಸ್ಮದ್ ಶಬ್ದಗಳಿಗೆ ವಾಂ, ನೌ ಆದೇಶಗಳು ಕ್ರಮವಾಗಿ ಬರುತ್ತವೆ. ಯಾವುದಾವೊಂದು ಪದದ ಪರದಲ್ಲಿ ಈ ಶಬ್ದಗಳು ಬಂದಿರಬೇಕು. ಶ್ಲೋಕದ ಪಾದದ ಆದಿಯಲ್ಲಿ ಬಂದಿರಬಾರದು. ಹೀಗಿದ್ದರೆ ಆದೇಶಗಳು ಬರುತ್ತವೆ. ಇವುಗಳಿಗೆ ಉದಾಹರಣೆ ಮುಂದೆ ಹೇಳುವುವುಗಳನ್ನೂ ಸೇರಿಸಿ ಒಟ್ಟಿಗೆ ಶ್ಲೋಕದಲ್ಲಿ ತೋರಿಸುತ್ತಾನೆ.

(ಬಹುವಚನಕ್ಕೆ ವಸ್ ನಸ್ ಆದೇಶ ಹೇಳುವ ಸೂತ್ರ)

೪೩೨. ಬಹುವಚನಸ್ಯ ವಸ್ನಸೌ ॥ ೮-೧-೨೧ ॥

ಉಕ್ತವಿಧಯೋರನಯೋಃ ಷಷ್ಠ್ಯಾದಿಬಹುವಚನಾಂತಯೋರ್ವಸ್ನಸೌ ಸ್ತಃ ॥

ದ್ವಿಪದಸೂತ್ರ. ಹಿಂದೆ ಹೇಳಿದ ಅಧಿಕಾರದಲ್ಲಿ ವಿಹಿತವಾಗಿದೆ. ಹಿಂದೆ ಸಾಮಾನ್ಯ ಮೂರು ವಿಭಕ್ತ್ಯಂತಗಳಿಗೆ ಆದೇಶಹೇಳಿದರೆ ಇದರಿಂದ ಬಹುವಚನದಲ್ಲಿ ಅಪವಾದರೂಪವಾಗಿ ಬೇರೆ ಆದೇಶ ಹೇಳುತ್ತಾನೆ. **ಸೂತ್ರಾರ್ಥ**—ಪದದ ಪರದಲ್ಲಿರುವ ಪಾದದ ಆದಿಯಲ್ಲಿರದ ಷಷ್ಠೀಚತುರ್ಥೀ, ದ್ವಿತೀಯಾ ವಿಭಕ್ತಿಗಳ ಬಹುವಚನಾಂತವಾದ ಯುಷ್ಮದಸ್ಮದ್‌ಗಳಿಗೆ ಕ್ರಮವಾಗಿ ವಸ್‌ನಸ್ ಆದೇಶಗಳು ಬರುತ್ತವೆ. ಆಗ ವಾಂ, ನೌ ಆದೇಶ ಷಷ್ಠೀ ಚತುರ್ಥೀ ದ್ವಿತೀಯಾಗಳ ದ್ವಿವಚನ, ಏಕವಚನಗಳಲ್ಲಿ ಮಾತ್ರವೆಂದು ತಿಳಿಯುತ್ತದೆ.

(ಏಕವಚನಕ್ಕೆ ತೇ, ಮೇ ಆದೇಶ ಹೇಳುವ ಸೂತ್ರ)

೪೩೩. ತೇ ಮಯಿ ಏಕವಚನಸ್ಯ ॥ ೮-೧-೨೨ ॥

ಉಕ್ತವಿಧಯೋರನಯೋಷ್ಷಷ್ಠೀ ಚತುರ್ಥ್ಯೇಕವಚನಾಂತಯೋಸ್ತೇ ಮೇ ಏತೌ ಸ್ತಃ॥

ತೇಮಯಿ, ಏಕವಚನಸ್ಯ॥ ದ್ವಿಪದಸೂತ್ರ. ಈ ಸೂತ್ರವೂ ಹಿಂದಿನ ಸೂತ್ರವೂ ವಾಂನೌ ಆದೇಶಗಳಿಗೆ ಅಪವಾದವಾಗಿ ಬೇರೆ ಆದೇಶ ಹೇಳುತ್ತವೆ. ಏಕವಚನ, ದ್ವಿವಚನಗಳಲ್ಲಿ ವಾಂನೌ ಪ್ರಾಪ್ತವಾದರೆ ಈ ಸೂತ್ರ ಏಕವಚನದಲ್ಲಿ ಇತರ ಆದೇಶ ಹೇಳುತ್ತದೆ. **ಸೂತ್ರಾರ್ಥ**—ಪದದ ಪರದಲ್ಲಿರುವ, ಪಾದದ ಆದಿಯಲ್ಲಿ ಇಲ್ಲದ ಷಷ್ಠೀ, ಚತುರ್ಥೀ, ದ್ವಿತೀಯಾ ಏಕವಚನಾಂತಗಳಾದ ಯುಷ್ಮದಸ್ಮದ್‌ಗಳಿಗೆ ತೇ, ಮೇ ಆದೇಶಗಳು ಬರುತ್ತವೆ. ಈ ಆದೇಶ ಹೇಳಿದ ಮೇಲೆ ವಾಂ, ನೌ ಆದೇಶಗಳು ಕೇವಲ ಆ ಮೂರು ವಿಭಕ್ತಿಗಳ ದ್ವಿವಚನದಲ್ಲಿ ಮಾತ್ರವೆಂದು ತಿಳಿಯಬೇಕು.

(ದ್ವಿತೀಯಾದಲ್ಲಿ ತ್ವಾ, ಮಾ ಆದೇಶ ಹೇಳುವ ಸೂತ್ರ)

೪೩೪. ತ್ವಾಮೌ ದ್ವಿತೀಯಾಯಾಃ ॥ ೮-೧-೨೩ ॥

ದ್ವಿತೀಯೈಕವಚನಾಂತಯೋಸ್ತ್ವಾಮಾ ಇತ್ಯಾದೇಶೌ ಸ್ತಃ॥

ದ್ವಿಪದಸೂತ್ರ. ಇದು ಹಿಂದಿನ ಸೂತ್ರಕ್ಕೆ ಅಪವಾದ. **ಸೂತ್ರಾರ್ಥ**—ಪದದ ಪರದಲ್ಲಿರುವ ಪಾದದ ಆದಿಯಲ್ಲಿ ಇಲ್ಲದ ದ್ವಿತೀಯಾ ಏಕವಚನಾಂತವಾದ ಯುಷ್ಮದ್

ಅಸ್ಮದ್‌ಗಳಿಗೆ ತ್ವಾ, ಮಾ ಆದೇಶಗಳು ಬರುತ್ತದೆ. ಏಕವಚನ ಸಾಮಾನ್ಯದಲ್ಲಿ ತೇ, ಮೇ ಆದೇಶಗಳು ಪ್ರಾಪ್ತವಾದರೆ ದ್ವಿತೀಯಾ ಏಕವಚನದಲ್ಲಿ ಮಾತ್ರ ಅವುಗಳಿಗೆ ಅಪವಾದವಾಗಿ ತ್ವಾ, ಮಾ ಆದೇಶಗಳು ಬರುತ್ತವೆ. ಆಗ ತೇ, ಮೇ ಆದೇಶಗಳು ಚತುರ್ಥೀ ಏಕವಚನದಲ್ಲಿ ಮಾತ್ರವೆಂದು ತಿಳಿಯಬೇಕು. ಈಗ ಈ ಎಲ್ಲಾ ಆದೇಶಗಳಿಗೆ ಶ್ಲೋಕದಲ್ಲಿ ಉದಾಹರಣೆ ಹೇಳುತ್ತಾನೆ.

ಶ್ರೀಶಸ್ತ್ವಾವತು ಮ್ಮಾಪೀಹ ದತ್ತಾತ್ತೇ ಮೇಽಪಿ ಶರ್ಮ ನಃ ॥
ಸ್ವಾಮೀ ತೇ ಮೇಽಪಿ ಸ ಹರಿಃ ಪಾತು ವಾಮಪಿ ನೌ ವಿಭುಃ ॥
ಸುಖಂ ವಾಂ ನೌ ದದಾತ್ವೀಶಃ ಪತಿರ್ವಾಮಪಿ ನೌ ಹರಿಃ ॥
ಸೋಽವ್ಯಾದ್ವೋ ನಃ ಶಿವಂ ವೋ ನೋ ದದ್ಯಾತ್ ಸೇವ್ಯೋಽತ್ರ ವಃ ಸ ನಃ ॥

ದ್ವಿತೀಯಾ, ಚತುರ್ಥೀ, ಷಷ್ಠೀ, ವಿಭಕ್ತಿಗಳಿಗೆ ಕ್ರಮವಾಗಿ ಉದಾಹರಣೆ ಹೇಳಿರುತ್ತಾನೆ. ಇಲ್ಲಿ ಎಲ್ಲಾ ಆದೇಶಗಳು ಒಂದು ಪದದ ಪರದಲ್ಲಿಯೇ ಬಂದಿವೆ. ಪಾದದ ಆದಿಯಲ್ಲಿ ಬಂದಿಲ್ಲ. 1) "ಶ್ರೀಶಃ ತ್ವಾ ಮಾ ಅಪಿ ಅವತು. " ಲಕ್ಷ್ಮೀಪತಿಯು ನಿನ್ನನ್ನೂ ನನ್ನನ್ನೂ ಕಾಪಾಡಲಿ. ದ್ವಿತೀಯಾ ಏಕವಚನಾಂತಕ್ಕೆ ತ್ವಾ, ಮಾ ಆದೇಶಗಳು ಬಂದಿವೆ. 2) "ಸಃ ತೇ, ಮೇ, ಅಪಿ ಶರ್ಮ ದತ್ತಾತ್." ಅವನು ನಿನಗೋಸ್ಕರ, ನನಗೋಸ್ಕರ ಸುಖ ಕೊಡಲಿ. ಇಲ್ಲಿ ಚತುರ್ಥೀ ಏಕವಚನಾಂತಕ್ಕೆ ತೇ, ಮೇ ಆದೇಶಗಳು ಬಂದಿವೆ. 3) " ಸ ಹರಿಃ ತೇ, ಮೇ ಅಪಿ ಸ್ವಾಮೀ " ಆ ವಿಷ್ಣುವು ನಿನಗೂ ನನಗೂ ಒಡೆಯನು. ಇಲ್ಲಿ ಷಷ್ಠೀ ಏಕವಚನಾಂತಕ್ಕೆ ತೇ, ಮೇ ಆದೇಶ ಬಂದುದನ್ನು ತೋರಿಸಿರುತ್ತಾನೆ. 4) " ವಿಭುಃ ವಾಂ (ಅಪಿ) ನೌ ಪಾತು. " ಸರ್ವವ್ಯಾಪಿಯಾದ ಆತನು ನಿಮ್ಮಿಬ್ಬರನ್ನೂ ನಮ್ಮಿಬ್ಬರನ್ನೂ ಕಾಪಾಡಲಿ. ಇಲ್ಲಿ ದ್ವಿತೀಯಾ ದ್ವಿವಚನಾಂತಕ್ಕೆ ಆದೇಶ ಬಂದಿವೆ. 5) " ಈಶಃ ವಾಂ, ನೌ ಸುಖಂ ದದಾತು " ಹರಿಯು ನಿಮ್ಮಿಬ್ಬರಿಗೋಸ್ಕರ, ನಮ್ಮಿಬ್ಬರಿಗೋಸ್ಕರ ಸುಖವನ್ನು ಕೊಡಲಿ. ಇಲ್ಲಿ ಚತುರ್ಥೀ ದ್ವಿವಚನಾಂತಕ್ಕೆ ವಾಂ, ನೌ ಆದೇಶಗಳು ಬಂದಿವೆ. 6) " ಹರಿ ವಾಂ (ಅಪಿ) ನೌ ಪತಿಃ". ವಿಷ್ಣುವು ನಿಮ್ಮಿಬ್ಬರಿಗೂ ನಮ್ಮಿಬ್ಬರಿಗೂ ಒಡೆಯನು. ಇಲ್ಲಿ ಷಷ್ಠೀ ದ್ವಿವಚನಾಂತಕ್ಕೆ ವಾಂ, ನೌ ಆದೇಶಗಳು ಬಂದಿವೆ. 7) "ಸಃ ವಃ, ನಃ ಅವ್ಯಾತ್." ಅವನು ನಿಮ್ಮನ್ನೂ ನಮ್ಮನ್ನೂ ಕಾಪಾಡಲಿ. ಇಲ್ಲಿ ದ್ವಿತೀಯಾ ಬಹುವಚನಾಂತಕ್ಕೆ ವಃ, ನಃ, ಆದೇಶಗಳು ಬಂದಿವೆ. 8) "ವಃ, ನಃ ಶಿವಂ ದದ್ಯಾತ್" ನಿಮಗೋಸ್ಕರ, ನಮಗೋಸ್ಕರ ಮಂಗಳವನ್ನು ಕೊಡಲಿ. ಚತುರ್ಥೀ ಬಹುವಚನಾಂತಗಳಿಗೆ ವಃ, ನಃ ಆದೇಶಗಳು ಬಂದಿವೆ. 9) ಅತ್ರ ವಃ, ನಃ ಸಃ ಸೇವ್ಯಃ. ಈ ಲೋಕದಲ್ಲಿ ನಿಮಗೂ, ನಮಗೂ ಅವನು ಸೇವಿಸಲು ಯೋಗ್ಯನು. ಇಲ್ಲಿ ಷಷ್ಠೀ ಬಹುವಚನಾಂತಕ್ಕೆ

ವಃ ನಃ ಆದೇಶಗಳು ಬಂದಿವೆ. ಇವೆರಡು ಶಬ್ದಗಳೂ ವ್ಯವಹಾರದಲ್ಲಿ ಉಪಯೋಗಿಸಲ್ಪಡುತ್ತವೆ.

ಯುಷ್ಮದ್—(ನೀನು)

ಪ್ರ–ತ್ವಂ. । ಯುವಾಂ । ಯೂಯಂ. ॥ ದ್ವಿ–ತ್ವಾಂ ತ್ವಾ । ಯುವಾಂ ವಾಂ। ಯುಷ್ಮಾನ್ ವಃ । ತೃ–ತ್ವಯಾ । ಯುವಾಭ್ಯಾಂ । ಯುಷ್ಮಾಭಿಃ ॥ ಚ–ತುಭ್ಯಂ ತೇ। ಯುವಾಭ್ಯಾಂ ವಾಂ । ಯುಷ್ಮಭ್ಯಂ ವಃ । ಪಂ–ತ್ವತ್ । ಯುವಾಭ್ಯಾಮ್ । ಯುವಯೋಃ । ಯುಷ್ಮಾಸು. ॥ ಷ–ತವ ತೇ । ಯುವಯೋಃ ವಾಂ । ಯುಷ್ಮಾಕಂ ವಃ ॥ ಸ–ತ್ವಯಿ.

ಅಸ್ಮದ್–(ನಾನು)

ಪ್ರ–ಅಹಂ। ಆವಾಂ । ವಯಂ ॥ ದ್ವಿ–ಮಾಂ ಮಾ । ಆವಾಂ ನೌ। ಅಸ್ಮಾನ್ ನಃ॥ ತೃ–ಮಯಾ । ಆವಾಭ್ಯಾಂ । ಅಸ್ಮಾಭಿಃ ॥ ಚ–ಮುಹ್ಯಂ ಮೇ । ಆವಾಭ್ಯಾಂ ನೌ। ಅಸ್ಮಭ್ಯಂ ನಃ ॥ ಪಂ–ಮತ್ । ಆವಾಭ್ಯಾಂ । ಅಸ್ಮತ್. ॥ ಷ–ಮಮ ಮೇ । ಆವಯೋಃ ನೌ । ಅಸ್ಮಾಕಂ ನಃ ॥ ಸ–ಮಯಿ. । ಆವಯೋಃ । ಅಸ್ಮಾಸು ॥

(ನಾ. ॥ (ಏಕವಾಕ್ಯೇ ಯುಷ್ಮದಸ್ಮದಾದೇಶಾ ವಕ್ತವ್ಯಾಃ)

ಏಕತಿಙ್ ವಾಕ್ಯಮ್ । ಓದನಂ ಪಚ. ತವ ಭವಿಷ್ಯತಿ ॥

ವಾರ್ತಿಕಕಾರರು ಈ ಆದೇಶ ವಿಷಯದಲ್ಲಿ ನಿಯಮಮಾಡುತ್ತಾರೆ. ಪದದ ಪರದಲ್ಲಿರಬೇಕೆಂದು ಹೇಳಿದೆಯಷ್ಟೆ. ಆಗ ಅದು ನಿಮಿತ್ತವಾಯಿತು. ಆ ಪದವೂ ಯುಷ್ಮದಸ್ಮದ್ ಶಬ್ದಗಳೂ ಒಂದೇ ವಾಕ್ಯದಲ್ಲಿರಬೇಕು. ಹಾಗಿಲ್ಲದೆ ಬೇರೆ ಬೇರೆ ವಾಕ್ಯಗಳಲ್ಲಿ ಇದ್ದರೆ ಆಗ ಆದೇಶ ಬರುವುದಿಲ್ಲ. " ಏಕತಿಙ್‌ವಾಕ್ಯಮ್ " ವಾಕ್ಯದ ಲಕ್ಷಣ ಹೇಳುತ್ತಾನೆ. ಒಂದು ತಿಙಂತ ಪದದಿಂದ ಕೂಡಿದ್ದು ವಾಕ್ಯ. "ಸ ಭವತಿ." ಇದು ವಾಕ್ಯ. "ಓದನಂ ಪಚ, ತವ ಭವಿಷ್ಯತಿ." ಅನ್ನಮಾಡು. ನಿನಗೆ ಆಗುವುದು. ಎಂದರ್ಥ, ಇಲ್ಲಿ ಪಚ ಎಂಬ ಪದದ ಪರದಲ್ಲಿ ಯುಷ್ಮದ್ ಶಬ್ದ ಬಂದರೂ ಆ ಪದವುಳ್ಳ ವಾಕ್ಯವೇ ಒಂದು. ಯುಷ್ಮದಿರುವ ವಾಕ್ಯ ಇನ್ನೊಂದು. ಒಂದೊಂದು ತಿಙಂತ ಘಟಿತವಾಗಿರುವುದರಿಂದ ಅಲ್ಲಿ ಎರಡು ವಾಕ್ಯಗಳಿವೆ.ಒಂದೊಂದು ವಾಕ್ಯದಲ್ಲಿ ಒಂದೊಂದಿರುವುದರಿಂದ ಆದೇಶ ಬರುವುದಿಲ್ಲ. ತವ ಎಂದೇ ಹೇಳಬೇಕು ತೇ ಎಂದು ಹೇಳಬಾರದು.

ವಾ॥ (ಏತೇ ವಾನ್ನಾವಾದಯೋಽನನ್ವಾದೇಶೇ ವಾ ವಕ್ತವ್ಯಾಃ॥)

ಅನ್ವಾದೇಶೇ ತು ನಿತ್ಯಂ ಸ್ಯಾ| ಧಾತಾ ತೇ ಭಕ್ತೋಽಸ್ತಿ, ಧಾತಾ ತವ ಭಕ್ತೋಽಸ್ತಿ ವಾ| ತಸ್ಮೈ ತೇ ನಮಃ ಇತ್ಯೇವ ॥

ವಾರ್ತಿಕಾರ್ಥ. ಈ ವಾಂ ನೌ ಮುಂತಾದ ಆದೇಶಗಳು ಅನನ್ವಾದೇಶದಲ್ಲಿ ವಿಕಲ್ಪವಾಗಿ ಹೇಳಬೇಕು. ಒಂದುಕಾರ್ಯ ಹೇಳಿ ಇನ್ನೊಂದು ಕಾರ್ಯ ಹೇಳಲು ಅವನನ್ನೇ ಪುನಃ ತೆಗೆದುಕೊಳ್ಳುವುದಕ್ಕೆ ಅನ್ವಾದೇಶವೆಂದು ಹೇಳಿದೆ. ಈ ಅನಾದೇಶ ತೋರದಿರುವಾಗ ವಾಂ ನೌ ಮುಂತಾದ ಆದೇಶಗಳು ವಿಕಲ್ಪವಾಗಿ ಬರುತ್ತವೆ. ಅನ್ವಾದೇಶದಲ್ಲಿ ನಿತ್ಯವಾಗಿ ಬರುತ್ತವೆ. "ಧಾತಾ ತೇ-"–ಉದಾಹರಣೆ. ಬ್ರಹ್ಮನ್ನನ್ನ ನಿನ್ನ ಭಕ್ತನಾಗಿದ್ದಾನೆ ಎಂದು ವಾಕ್ಯಾರ್ಥ. ಇದು ಅನನ್ವಾದೇಶವಾಕ್ಯ. ಮೊದಲು ಒಂದರ್ಥವನ್ನು ತಿಳಿಸುತ್ತದೆ. ಇಲ್ಲಿ ಧಾತಾ ಎಂಬ ಪದದ ಪರವಲ್ಲಿರುವುದರಿಂದ ಆದೇಶ ಬಂದರೂ ಬರಬಹುದು. ಬಾರದಿದ್ದರೂ ಇರಬಹುದು. ತವ, ಅಥವಾ ತೇ ಎಂದು ಹೇಳಬಹುದು. "ತಸ್ಮೈ ತೇ ನಮಃ" ಇದು ಅನ್ವಾದೇಶವಾಕ್ಯ. ಅಂಥ ನಿನಗೆ ನಮಸ್ಕಾರ. ಬ್ರಹ್ಮನು ನಿನ್ನ ಭಕ್ತನಾಗಿರುತ್ತಾನೆ ಎಂದು ಮೊದಲು ಒಂದು ಬಾರಿ ತೆಗೆದುಕೊಂಡ ವಿಷ್ಣುವೇ ಎರಡನೇಕಾರ್ಯ ಅಂದರೆ ನಮಸ್ಕಾರಮಾಡಲು ಪುನಃ ತೆಗೆದುಕೊಂಡುದರಿಂದ ಅನ್ವಾದೇಶ. ಇಲ್ಲಿ ತೇ ಎಂಬ ಆದೇಶವನ್ನೇ ಹೇಳಬೇಕು. "ತಸ್ಮೈ ತುಭ್ಯಂ ನಮಃ" ಎನ್ನಬಾರದು. ಹೀಗೆ ನಿಯಮಗಳನ್ನರಿತು ಈ ಆದೇಶಗಳನ್ನು ಪ್ರಯೋಗಿಸಬೇಕು.

ದಕಾರಾಂತ, "ಸುಪಾದ್" ಶಬ್ದ. (ಸುಂದರವಾದ ಕಾಲುಳ್ಳವನು)

ಸುಪಾತ್, ಸುಪಾದ್ | ಸುಪಾದೌ | ಸುಪಾದಃ ॥ ಸುಪಾದಂ | ಸುಪಾದೌ ॥

ಶೋಭನೌ ಪಾದೌ ಯಸ್ಯ ಸಃ | ಸುಪಾತ್. ಸುಂದರವಾದ ಕಾಲು ಯಾರಿಗಿದೆಯೋ ಅವನು ಸುಪಾತ್, ಸಮಾಸವಾದಾಗ "ಸಂಖ್ಯಾ ಸುಪೂರ್ವಸ್ಯ" ಸೂತ್ರದಿಂದ ಪಾದ ಶಬ್ದದ ಅಂತ್ಯಕ್ಕೆ (ಅ) ಲೋಪ ಬಂದು ಸುಪಾದ್ ಶಬ್ದವಾಗಿದೆ. ಪ್ರಥಮಾ ಸುವಿನಲ್ಲಿ "ವಾವಸಾನೇ" ಸೂತ್ರದಿಂದ ವಿಕಲ್ಪವಾಗಿ ದಕಾರಕ್ಕೆ ತಕಾರಾದೇಶ. ಸುಪಾತ್–ಸುಪಾದ್. ಅಜಾದಿಯಲ್ಲಿ ಪ್ರತ್ಯಯ ಸೇರಿಸುವುದು ಮಾತ್ರ. ಸುಪಾದೌ–ಸುಪಾದಃ ॥ ದ್ವಿ. ಸುಪಾದಮ್–ಸುಪಾದೌ–ಸುಪಾದ್ + ಶಸ್ ಎಂದಿರುವಾಗ ಶಕಾರಕ್ಕೆ "ಲಶಕ್ವತದ್ಧಿತೇ" ಸೂತ್ರದಿಂದ ಇತ್ ಸಂಜ್ಞಾ. ಸುಪಾದ್+ಅಸ್ ಎಂದಿರುವಾಗ ಪದಾದೇಶ ಹೇಳುತ್ತಾನೆ.

೪೫೫. ಪಾದಃ ಪತ್ ॥ ೬-೪-೧೩೦ ॥

ಪಾಚ್ಛಬ್ದಾಂತಂ ಯದಂಗಂ ಭಂ ತದವಯವಸ್ಯ ಪಾಚ್ಛಬ್ದಸ್ಯ ಪದಾದೇಶಃ | ಸುಪದಃ| ಸುಪದಾ| ಸುಪಾದ್ಭ್ಯಾಮ್॥ ಅಗ್ನಿಮತ್ ಅಗ್ನಿಮದ್ ॥ ಅಗ್ನಿಮಥೌ | ಅಗ್ನಿಮಥಃ ॥ ಅಗ್ನಿಮದ್ಭ್ಯಾಮ್॥ ಇತ್ಯಾದಿ ॥

ದ್ವಿಪದ ಸೂತ್ರ. "ಭಸ್ಯ" "ಅಂಗಸ್ಯ" ಅಧಿಕಾರ. ಪಾದ್ ಎಂಬುದು ಅಂಗಕ್ಕೆ ವಿಶೇಷಣ. ಪಾದ್ ಶಬ್ದಅಂತವಾದ ಭ ಸಂಜ್ಞೆಯುಳ್ಳ (ಯಚಿಭಮ್.) ಅಂಗಕ್ಕೆ ಎಂದರ್ಥವಾಗುತ್ತದೆ. ಪಾದ್ ಶಬ್ದಾಂತ ಅಂಗಕ್ಕೆ ಆದೇಶಹೇಳಿದರೂ "ನಿರ್ದಿಶ್ಯಮಾನಸ್ಯಾದೇಶಾ ಭವಂತಿ" ಪರಿಭಾಷೆಯಿಂದ ಸೂತ್ರದಲ್ಲಿ ನಿರ್ದೇಶಮಾಡಿದ ಪಾದ್ ಎಂಬುದಕ್ಕೆ ಮಾತ್ರ ಪದ್ ಆದೇಶ ಬರುತ್ತದೆ. **ಸೂತ್ರಾರ್ಥ**—ಪಾಚ್ಛಬ್ದವೇ ಅಂತವಾದ ಭ ಸಂಜ್ಞೆಯುಳ್ಳ (ಯಾದಿ ಅಜಾದಿ ಪ್ರತ್ಯಯ ಪರವಾದ) ಅಂಗದ ಅವಯವವಾದ ಪಾದ್ ಎಂಬುದಕ್ಕೆ ಪದ್ ಎಂಬ ಆದೇಶ ಬರುತ್ತದೆ. ಪ್ರಕೃತ ಸುಪಾದ್ ಎಂಬುದು ಪಾಚ್ಛಬ್ದಾಂತವಾಗಿದೆ. ಅಸ್ ಅಜಾದಿಪ್ರತ್ಯಯಪರವಾದುದರಿಂದ ಭ ಸಂಜ್ಞೆ ಇದೆ. ಪಾದ್ ಎಂಬುದಕ್ಕೆ ಪದ್ ಆದೇಶ ಬಂದರೆ ಸುಪದ್+ಅಸ್=ಸುಪದಃ ಎಂದಾಗುತ್ತದೆ. ಇನ್ನು ಅಜಾದಿಯಲ್ಲೆಲ್ಲಾ ಹೀಗೆ ಪದಾದೇಶ. ತೃ. ಸುಪದಾ–ಸುಪಾದ್ಭ್ಯಾಮ್–ಸುಪಾದ್ಭಿಃ ಇತ್ಯಾದಿ. ಹಲಾದಿಯಲ್ಲಿ ಭಸಂಜ್ಞೆ ಇಲ್ಲದಿರುವುದರಿಂದ ಪದಾದೇಶವಿಲ್ಲ. ಸಪ್ತಮೀ ಸುಪಿನಲ್ಲಿ ಸುಪಾತ್ಸು ಎಂದಾಗುತ್ತದೆ. "ಖರಿ ಚ" ಸೂತ್ರದಿಂದ ದಕಾರಕ್ಕೆ ತಕಾರಾದೇಶ.

ಥಕಾರಾಂತ "ಅಗ್ನಿಮಥ್" ಶಬ್ದ. (ಅಗ್ನಿಯನ್ನು ಕಡೆಯುವವನು)

"ಅಗ್ನಿಂ ಮಥ್ನಾತಿ" ಇತಿ ಅಗ್ನಿಮಥ್. ಮಂಥ ವಿಲೋಡನೇ ಧಾತು. ಕ್ವಿಪ್ ಪ್ರತ್ಯಯ ಬಂದರೆ ಅಗ್ನಿಮಥ್ ಎಂದಾಗುತ್ತದೆ. ಕೃದಂತವಾದುದರಿಂದ ಪ್ರಾತಿಪದಿಕ. ಸುಪರವಾದಾಗ "ಝಲಾಂಜಶೋಂತೇ" ಸೂತ್ರದಿಂದ ಥಕಾರಕ್ಕೆ ಜಶ್ತ್ವ. ದಕಾರ. "ವಾವಸಾನೇ" ಸೂತ್ರದಿಂದ ವಿಕಲ್ಪ ಚರ್ತ್ವ. ಅಗ್ನಿಮತ್–ಅಗ್ನಿಮದ್ ಅಜಾದಿಯಲ್ಲಿ ಪ್ರತ್ಯಯ ಸೇರಿಸುವುದುಮಾತ್ರ. ಅಗ್ನಿಮಥೌ ಇತ್ಯಾದಿ. ಹಲಾದಿ

ಯಲ್ಲಿ ಪದಸಂಜ್ಞೆಯಿರುವುದರಿಂದ ಹಿಂದಿನಂತೆ ಜಶ್ತ್ವ ಅಗ್ನಿಮದ್ಭ್ಯಮ್ ಇತ್ಯಾದಿ ಸಪ್ತಮೀಸುವಿನಲ್ಲಿ ಜಶ್ತ್ವ, ಚರ್ತ್ವ. ಅಗ್ನಿಮತ್ಸು ॥

ಚಕಾರಾಂತ ಪ್ರಾಞ್ಚ್ ಶಬ್ದ. (ಚನ್ನಾಗಿ ಹೋಗುವವನು)

" ಪ್ರ ಅಂಚತಿ " ಎಂಬರ್ಥದಲ್ಲಿ " ಋತ್ವಿಕ್ ದಧೃಕ್–" ಸೂತ್ರ (ಸೂ 303) ದಿಂದ ಪ್ರ ಉಪಪದವಾಗಿರುವಾಗ ಅಂಚು ಗತಿ ಪೂಜನಯೋಃ ಧಾತುವಿಗೆ ಕ್ವಿನ್ ಪ್ರತ್ಯಯ. ಕ್ವಿನ್ನಿನಲ್ಲಿ ಸರ್ವಲೋಪವೆಂದು ಹಿಂದೆ ಹೇಳಿದೆ. ಪ್ರಾಞ್ಚ್. ಇಲ್ಲಿ ಅನ್ಚ್ ಎಂದಿರುವುದು. ನಕಾರಕ್ಕೆ ಅನುಸ್ವಾರ ಪರಸವರ್ಣ ಬಂದು ಅಞ್ಚ್ ಎಂದಾಗಿದೆ. ಈಗ ನಲೋಪ ಹೇಳುತ್ತಾನೆ.

(ಉಪಧಾ ನಕಾರಕ್ಕೆ ಲೋಪ ಹೇಳುವ ಸೂತ್ರ)

೩೩೬. ಅನಿದಿತಾಂ ಹಲ ಉಪಧಾಯಾಃ ಕ್ಙಿತಿ ॥ ೬-೪-೨೪ ॥

ಹಲಂತಾನಾಮನಿದಿತಾಮಂಗನಾಮುಪಧಾಯಾ ನಸ್ಯ ಲೋಪಃ ಸ್ಯಾತ್ ಕಿತಿ ಙಿತಿ ॥ ನುಮ್ । ಸಂಯೋಗಾಂತಸ್ಯ ಲೋಪಃ । ನಸ್ಯ ಕುತ್ವೇನ ಞಃ । ಪ್ರಾಞ್ಚ್ । ಪ್ರಾಞ್ಚೌ । ಪ್ರಾಞ್ಚಃ ॥

ನಾಲ್ಕು ಪದಗಳುಳ್ಳ ಸೂತ್ರ. " ಅಂಗಸ್ಯ " ಅಧಿಕಾರ. ಇಲ್ಲಿ ಬಹುವಚನಾಂತವಾಗಿ ವಿಪರಿಣತವಾಗುತ್ತದೆ. ಹಲಃ ಅದಕ್ಕೆ ವಿಶೇಷಣ. ಹಲಾಂತಾನಾಮಂಗಾನಾಂ,– ಹಲಂತವಾದ ಅಂಗಗಳಿಗೆ ಎಂದರ್ಥವಾಗುತ್ತದೆ. " ಅನಿದಿತಾಂ " ಎಂಬುದೂ ಅದಕ್ಕೆ ವಿಶೇಷಣ. ಇತ್ ಅಂದರೆ ಹ್ರಸ್ವ ಇಕಾರವು ಇತ್ = ಇತ್ ಸಂಜ್ಞೆಯುಳ್ಳದ್ದು ಯೇಷಾಂ ತಾನಿ = ಯಾರಿಗೆ ಇದೆಯೋ ಅವುಗಳು ಇದಿಂತಿ. ನ ಇದಿಂತಿ, ಅನಿದಿಂತಿ, ತೇಷಾಂ ಅನಿದಿತಾಂ. ಹ್ರಸ್ವ ಇಕಾರ ಇತ್ತಾಗಿಲ್ಲದಿರುವವುಗಳು. ಕ್ ಚ ಜ್ ಚ ಕ್ಷ್ ಕ್ಷ್ ಇತೌ ಯಸ್ಯ ಸಃ ಕ್ಙಿತ್. ತಸ್ಮಿನ್ ಕ್ಙಿತಿ. ಕಕಾರ ಙಕಾರ ಇತ್ತಾಗಿರುವುದು ಪರವಲ್ಲಿರುವಾಗ ಎಂದರ್ಥ. ಇತ್ ದ್ವಂದ್ವದ ಅಂತ್ಯದಲ್ಲಿರುವುದರಿಂದ ಪ್ರತ್ಯೇಕಾನ್ವಯ- ಕಿತಿ ಙಿತಿ. ಎಂದಾಗುತ್ತವೆ. ಅಂಗಾನಾಂ ಅವಯವಾರ್ಥದಲ್ಲಿ ಷಷ್ಠೀ. **ಸೂತ್ರಾರ್ಥ**—ಹ್ರಸ್ವ ಇಕಾರ ಇತ್ತಾಗದಿರುವ ಹಲಂತವಾದ ಅಂಗಗಳ ಅವಯವವಾದ ನಕಾರಕ್ಕೆ ಕಿತ್ತಾದ ಯಾ ಙಿತ್ತಾದ ಪ್ರತ್ಯಯ ಪರದಲ್ಲಿರುವಾಗ ಲೋಪ ಬರುತ್ತದೆ. " ಶ್ನಾನ್ನಲೋಪಃ " ಸೂತ್ರದಿಂದ " ನ, " " ಲೋಪಃ " ಅನುವೃತ್ತಿ. ಅಲ್ಲಿ ನ ಎಂಬುದು ಲುಪ್ತಷಷ್ಠ್ಯೇಕ. ಪ್ರಕೃತ ಪ್ರಾಞ್ಚ್ ಎಂಬುದು ಹಲಂತವಾಗಿನೆ. ಇಲ್ಲಿ ಪ್ರತ್ಯಯಸ್ಯ ಇಕಾರ ಇತ್ತಾಗಲಿಲ್ಲ. ಇಲ್ಲಿ ಉಪಧೆ (ಅಂತ್ಯವರ್ಣದ ಪೂರ್ವ ವರ್ಣ) ನಕಾರ ವಿದೆ. (ಪ್ರಾನ್ಚ್) ಅದಕ್ಕೆ ಕಿತ್ತಾದ ಪ್ರತ್ಯಯ ಪರದಲ್ಲಿನೆ. ಕ್ವಿನ್ ಕಿತ್ತಾದ ಪ್ರತ್ಯಯ. ಆದುದರಿಂದ ನಕಾರ ಲೋಪ ಬಂದರೆ ಪ್ರಾಚ್ ಎಂದಾಗುತ್ತದೆ. ಪ್ರಾಚ್+ಸ್ ಎಂದಿರುವಾಗ ಅಂಚು ಧಾತುವಿನಲ್ಲಿ ಉಕಾರ ಇತ್ತಾದುದರಿಂದ ಇದು ಉಗಿತ್. ಆಗ " ಉಗಿದಚಾಂ ಸರ್ವನಾಮಸ್ಥಾನೇಧಾತೋಃ " (ಸೂತ್ರ 291) ಸೂತ್ರದಿಂದ ನುಮಾಗಮ ಬರುತ್ತದೆ. ನುಮಿನಲ್ಲಿ ನುಕಾರ " ಹಲಂತ್ಯಮ್ " ಸೂತ್ರದಿಂದ ಇತ್. ಉಕಾರ ಉಚ್ಚಾರಣಾರ್ಥ. ಮಿತ್ತಾದುದರಿಂದ "ಮಿದಚೋಂತ್ಯಾತ್ಪರಃ" ಸೂತ್ರದಿಂದ ಅಂತ್ಯಾಚೆನ ಪರಕ್ಕೆ ಅವಯವವಾಗಿ ಬರುತ್ತದೆ. ಆಗ ಪ್ರಾನ್ಚ್+ಸ್ ಎಂದಾಗುತ್ತದೆ. ಸುವಿಗೆ " ಹಲ್ಙ್ಯಾಭ್ಯೋ "—ಸೂತ್ರದಿಂದ ಲೋಪ. ಆಗ ಸಂಯೋಗಾಂತವಾದ ಪದವಾದುದರಿಂದ " ಸಂಯೋಗಾಂತಸ್ಯ ಲೋಪಃ " ಸೂತ್ರದಿಂದ ಸಂಯೋಗಾಂತನಾದ ಚಕಾರಕ್ಕೆ ಲೋಪ. ಪ್ರಾನ್. ಇದು ಕ್ವಿನ್‌ಪ್ರತ್ಯಯನನ್ನು ಹೊಂದಿರುವುದರಿಂದ " ಕ್ವಿನ್‌ಪ್ರತ್ಯಯಸ್ಯಕುಃ " ಸೂತ್ರದಿಂದ ಕುತ್ವ. ನಕಾರಕ್ಕೆ ಸ್ಥಾನಸಾಮ್ಯದಿಂದ ಕವರ್ಗದಲ್ಲಿ ಞಕಾರ ಬಂದರೆ ಪ್ರಾಞ್. ಎಂದಾಗುತ್ತದೆ. ಪ್ರಾನ್ಚ್+ಔ. ಎಂದಿರುವಾಗ ಹಿಂದಿನಂತೇ "ಅನಿದಿತಾ—" ಸೂತ್ರದಿಂದ ನಲೋಪ. ಪ್ರಾಚ್+ಔ. " ಉಗಿದಚಾಂ–"ಸೂತ್ರದಿಂದ ನುಮ್. ಪ್ರಾನ್ಚ್+ಔ. "ನಶ್ಚಾಪದಾಂತಸ್ಯ ಝಲಿ" ಸೂತ್ರದಿಂದ ಅಪದಾಂತ ನಕಾರಕ್ಕೆ ಅನುಸ್ವಾರ. "ಅನುಸ್ವಾರಸ್ಯ ಯಯಿ ಪರಸವರ್ಣಃ" ಸೂತ್ರದಿಂದ ಅದಕ್ಕೆ ಪರದ ಚಕಾರದ ಸವರ್ಣ ಅಂದರೆ ಞಕಾರ ಬರುತ್ತದೆ. ಪ್ರಾಞ್ಚೌ । ಪ್ರಾನ್ಚ್+ಜಸ್. ಹಿಂದಿನಂತೇ ಪ್ರಕ್ರಿಯೆ ಬಂದರೆ ಪ್ರಾಞ್ಚಃ ॥ ದ್ವಿತೀಯಾದಲ್ಲಿಯೂ ಏಕವಚನ, ದ್ವಿವಚನ ಪ್ರತ್ಯಯ ಸರ್ವನಾಮಸ್ಥಾನವಾದುದರಿಂದ ಹಿಂದಿನಂತೇ ನಲೋಪ, ನುಮ್, ಅನುಸ್ವಾರ, ಪರಸವರ್ಣ. ಪ್ರಾಞ್ಚಂ–ಪ್ರಾಞ್ಚೌ ॥ ಪ್ರಾನ್ಚ್+(ಶ್) ಅಸ್ ಎಂದಿರುವಾಗ "ಅನಿದಿತಾಂ"—ಸೂತ್ರದಿಂದ ನಲೋಪ. ಪ್ರ ಅಚ್+ಅಸ್. (ಪ್ರ+ಅನ್ಚ್+ಅಸ್) ಈಗ ಭಸಂಜ್ಞೆಯಿರುವುದರಿಂದ ಅಕಾರ ಲೋಪ. ಹೇಳುತ್ತಾನೆ.

(ಅಂಚಿನ ಅಕಾರ ಲೋಪ ಹೇಳುವ ಸೂತ್ರ)

೩೩೭. ಅಚಃ ॥ ೬-೪-೧೩೮ ॥

ಲುಪ್ತನಕಾರಸ್ಯಾಞ್ಚತೇರ್ಭಸ್ಯಾಕಾರಸ್ಯ ಲೋಪಃ ॥

ಏಕಪದಸೂತ್ರ. "ಭಸ್ಯ" ಅಧಿಕಾರ. ಅಚಃ ಎಂಬುದು ಅಂಚುಧಾತುವಿಗೆ

ನಲೋಪವಾದಾಗ ಷಷ್ಠೀ ಬಂದು ಆಗಿದೆ. ಅಚಃ ಎಂದು ನಿರ್ದೇಶಮಾಡಿರುವುದರಿಂದ ನಲೋಪವಾದನೇರೆ ಕಾರ್ಯವೆಂದು ತಿಳಿಯಬೇಕು. "ಅಲ್ಲೋಪೋಽನಃ" ಸೂತ್ರದಿಂದ "ಅತಃ" "ಲೋಪಃ" ಅನುವೃತ್ತವಾಗುತ್ತವೆ. **ಸೂತ್ರಾರ್ಥ**—ನಕಾರ ಲೋಪ ಹೊಂದಿದ ಅಂಚುಧಾತುವಿನ ಅಕಾರಕ್ಕೆ ಭಸಂಜ್ಞಾ ಇರುವಾಗ ಲೋಪ ಬರುತ್ತದೆ. (ಯಚಿ ಭಮ್) ಪ್ರಕೃತ ಅಜಾದಿ ಪ್ರತ್ಯಯ ಪರವಾದುದರಿಂದ ಭಸಂಜ್ಞೆ ಇದೆ. ಅಂಚುವಿನಲ್ಲಿ ನಕಾರಲೋಪವೂ ಆಗಿದೆ. ಪ್ರ+ಅಚ್+ಅಸ್ ಎಂದಿರುವಾಗ ಅಕಾರಕ್ಕೆ ಲೋಪ. ಪ್ರ+ಚ್+ಅಸ್ ಎಂದಿರುವಾಗ ಪ್ರ ಎಂಬುದರ ಅಕಾರಕ್ಕೆ ದೀರ್ಘ ಹೇಳುತ್ತಾನೆ.

(ಅಚಿನ ಪೂರ್ವಕ್ಕೆ ದೀರ್ಘ ಹೇಳುವ ಸೂತ್ರ)

೩೫೮. ಚೌ ॥ ೬-೩-೧೩೮

ಲುಪ್ತಾಕಾರನಕಾರೇಞ್ಚತೌಪರೇ ಪೂರ್ವಸ್ಯಾಣೋ ದೀರ್ಘಃ । ಪ್ರಾಚಾ । ಪ್ರಾಗ್ಭ್ಯಾಮ್ ॥ ಪ್ರತ್ಯಚ್ । ಪ್ರತ್ಯಞ್ಚೌ । ಪ್ರತೀಚಃ । ಪ್ರತ್ಯಗ್ಭ್ಯಾಮ್। ಉದಚ್। ಉದಞ್ಚೌ।

ಏಕಪದಸೂತ್ರ. ಇದು ನಕಾರ, ಅಕಾರ ಲೋಪಹೊಂದಿದ ಅಂಚುಧಾತುವಿನ ಸಪ್ತಮೀ ಏಕವಚನಾಂತರೂಪ. "ಡ್ಯಲೋಪೇ ಪೂರ್ವಸ್ಯ ದೀರ್ಘೋಣಃ" ಸೂತ್ರದಿಂದ "ಪೂರ್ವಸ್ಯ, ದೀರ್ಘಃ, ಅಣಃ" ಅನುವೃತ್ತಿ. **ಸೂತ್ರಾರ್ಥ**—ಲುಪ್ತವಾದ ಅಕಾರನಕಾರವುಳ್ಳ ಅಂಚು ಧಾತು ಪರದಲ್ಲಿರುವಾಗ ಪೂರ್ವದಲ್ಲಿರುವ ಅಣ್ (ಅ, ಇ, ಉ)ಗೆ, ದೀರ್ಘ ಬರುತ್ತದೆ. ಪ್ರ+ಚ್+ಅಸ್ ಎಂಬಲ್ಲಿ ಅಕಾರ ನಕಾರಲೋಪ ಹೊಂದಿದ ಅಂಚುಧಾತು ಪರದಲ್ಲಿರುವುದರಿಂದ ಪೂರ್ವದ ಅಣ್ ಪ್ರ್+ಅ ದಲ್ಲಿರುವ ಅಕಾರ, ಅದಕ್ಕೆ ದೀರ್ಘ ಬಂದರೆ ಪ್ರಾಚ್+ಅಸ್=ಪ್ರಾಚಃ ಎಂದಾಗುತ್ತದೆ ಇನ್ನು ಮುಂದೆ ಅಜಾದಿಯಲ್ಲೆಲ್ಲಾ ಭಸಂಜ್ಞೆಯಿರುವುದರಿಂದ "ಅಚಃ" ಸೂತ್ರದಿಂದ ಅಕಾರ ಲೋಪ. "ಚೌ" ಸೂತ್ರದಿಂದ ಪೂರ್ವಕ್ಕೆ ದೀರ್ಘ. ಹಲಾದಿಯಲ್ಲಿ "ಅನಿದಿತಾಂ-" ಸೂತ್ರದಿಂದ ನಲೋಪಬಂದ ಮೇಲೆ ಚಕಾರಕ್ಕೆ "ಜೋಃಕುಃ" (ಸೂ. 309) ಸೂತ್ರದಿಂದ ಕುತ್ವ. ಅಂದರೆ ಕಕಾರ. ಕಕಾರಕ್ಕೆ "ಝಲಾಂ ಜಶೋಂತೇ" ಸೂತ್ರದಿಂದ ಜಶ್ತ್ವ. ಗಕಾರ. ತೃ॥ ಪ್ರಾಚಾ-ಪ್ರಾಗ್ಭ್ಯಾಮ್-ಪ್ರಾಗ್ಭಿಃ। ಚ। ಪ್ರಾಚೇ-ಪ್ರಾಗ್ಭ್ಯಾಮ್-ಪ್ರಾಗ್ಭ್ಯಃ। ಪಂ ಪ್ರಾಚಃ-ಪ್ರಾಗ್ಭ್ಯಾಮ್-ಪ್ರಾಗ್ಭ್ಯಃ। ಷ. ಪ್ರಾಚಃ-ಪ್ರಾಚೋಃ ಪ್ರಾಚಾಮ್। ಸ. ಪ್ರಾಚಿ-ಪ್ರಾಚೋಃ-ಪ್ರಾಕ್ಷು॥ ಪ್ರಾಚ್+ಸು ಎಂದಿರುವಾಗ "ಜೋಃ ಕುಃ" ಸೂತ್ರದಿಂದ ಚಕಾರಕ್ಕೆ ಕಕಾರ. "ಆದೇಶ ಪ್ರತ್ಯಯಯೋಃ" ಸೂತ್ರದಿಂದ ಸಕಾರಕ್ಕೆ ಷಕಾರ. ಕ್+ಷ್ ಸೇರಿದರೆ ಕ್ಷ ಆಗುತ್ತೆ.

ಚಕಾರಾಂತ ಪ್ರತ್ಯಞ್ಚ್ ಶಬ್ದ. (ಪಶ್ಚಿಮದೇಶದಲ್ಲಿರುವುದು ಅಥವಾ ವಿರುದ್ಧಗಾಮಿ ॥

ಪ್ರತಿಪೂರ್ವದಲ್ಲಿರುವಾಗ ಅಂಚುಧಾತುವಿಗೆ ಹಿಂದಿನಂತೆ ಕ್ವಿನ್ ಪ್ರತ್ಯಯ. ಪ್ರತ್ಯಞ್ಚ್+ಕ್ವಿನ್ ಎಂದಿರುವಾಗ "ಅನಿದಿತಾಂ"—ಸೂತ್ರದಿಂದ ನಲೋಪ. ಕ್ವಿನ್ನಿನಲ್ಲಿ ಸರ್ವಲೋಪ. ಸು ಮುಂತಾದ (5) ಸರ್ವನಾಮಸ್ಥಾನಪ್ರತ್ಯಯ ಪರವಾದಾಗ "ಉಗಿದಚಾಂ"-ಸೂತ್ರದಿಂದ ನುಮಾಗಮ. ಪ್ರತ್ಯನ್ಚ್+ಸ್ ಎಂದಿರುವಾಗ "ಹಲ್ಙ್ಯಾಭ್ಯೋ"-ಸೂತ್ರದಿಂದ ಸುಲೋಪ. "ಸಂಯೋಗಾಂತಸ್ಯ ಲೋಪಃ" ಸೂತ್ರದಿಂದ ಚಕಾರಕ್ಕೆ ಲೋಪ. ಪ್ರತ್ಯನ್ ಎಂದಿರುವಾಗ "ಕ್ವಿನ್ ಪ್ರತ್ಯಯಸ್ಯ ಕುಃ" ಸೂತ್ರದಿಂದ ನಕಾರಕ್ಕೆ ಕುತ್ವ ಅಂದರೆ ಞಕಾರಾದೇಶ. ಪ್ರತ್ಯಞ್ ಪ್ರತ್ಯಞ್ಚೌ-ಪ್ರತ್ಯಞ್ಚಃ ॥ ದ್ವಿ.ಪ್ರತ್ಯಞ್ಚಂ-ಪ್ರತ್ಯಞ್ಚೌ-ಇಲ್ಲಿ ನುಮಿನ ನಕಾರಕ್ಕೆ ಅನುಸ್ವಾರ ಪರಸವರ್ಣ. ಪ್ರತ್ಯಚ್=(ಶ್) ಅಸ್ ಎಂದಿರುವಾಗ "ಅಚಃ" ಸೂತ್ರದಿಂದ ಅಚಿನ. ಅಕಾರಕ್ಕೆ ಲೋಪ. ಪ್ರತಿ ಚ್+ಅಸ್. "ಚೌ" ಸೂತ್ರದಿಂದ ಪೂರ್ವದ ಅಣ್ಣಾದ ಇಕಾರಕ್ಕೆ ದೀರ್ಘ. ಪ್ರತೀಚಃ ॥ ಪ್ರತೀಚಾ-ಪ್ರತ್ಯಗ್ಭ್ಯಾಮ್-ಪ್ರತ್ಯಗ್ಭಿಃ ॥ ಇತ್ಯಾದಿ. ಚಕಾರಕ್ಕೆ ಕುತ್ವ, ಜಶ್ತ್ವ.

ಚಕಾರಾಂತ. ಉದಞ್ಚ್ ಶಬ್ದ. (ಉತ್ತರದೇಶದಲ್ಲಿರುವುದು)

ಉತ್ ಅಂಚತಿ ಎಂಬರ್ಥದಲ್ಲಿ ಉತ್ ಉಪಪದವಾಗಿರುವಾಗ ಅಂಚುಧಾತುವಿಗೆ ಕ್ವಿನ್ ಪ್ರತ್ಯಯ. ಹಿಂದಿನಂತೇ ಕಾರ್ಯಗಳು. ಉದಙ್-ಉದಞ್ಚೌ-ಉದಞ್ಚಃ। ದ್ವಿ. ಉದಞ್ಚಂ-ಉದಞ್ಚೌ. ಉದಚ್+(ಶ್) ಅಸ್ ಎಂದಿರುವಾಗ ಪೂರ್ವದಲ್ಲಿ ಅಣ್ ಇಲ್ಲದಿರುವುದರಿಂದ ದೀರ್ಘಾದಿಗಳು ಬರುವುದಿಲ್ಲ. ಅಚಿನ ಅಕಾರಕ್ಕೆ ಈತ್ವ ಹೇಳುತ್ತಾನೆ.

(ಅಚಿನ ಅಕಾರಕ್ಕೆ ಈಕಾರ ಹೇಳುವ ಸೂತ್ರ)

೩೫೯. ಉದ ಈತ್ ॥ ೬-೪-೧೩೯ ॥

ಉಚ್ಚಾಬ್ದ್ವಾತ್ವರಸ್ಯ ಲುಪ್ತನಕಾರಸ್ಯಾಞ್ಚತೇರ್ಭಸ್ಯಾಕಾರಸ್ಯ ಈತ್ ॥ ಉದೀಚಃ । ಉದೀಚಾ । ಉದಗ್ಭ್ಯಾಮ್ ॥

ಉದಃ ಈತ್ ॥ ದ್ವಿಪದ ಸೂತ್ರ. " ಅಚಃ " ಸೂತ್ರವು ಅನುವೃತ್ತವಾಗುತ್ತದೆ. " ಅಲ್ಲೋಪೋಽನಃ " ಸೂತ್ರದಿಂದ " ಅತ್ " ಅನುವೃತ್ತಿ. ಅದು ಲುಪ್ತಷಷ್ಠೀಕ. ಅತಃ ಎಂದಿರಬೇಕಿತ್ತು. " ಭಸ್ಯ " ಅಧಿಕಾರ. ಉದಃ ಪಂಚಮೀ. ಪರಕ್ಕೆ ಎಂದು ಲಬ್ಧವಾಗುತ್ತದೆ. **ಸೂತ್ರಾರ್ಥ**– ಉದ್ ಎಂಬ ಪದದ (ಉಪಸರ್ಗ) ಪರದಲ್ಲಿರುವ ಭ ಸಂಜ್ಞೆಯುಳ್ಳ ನಕಾರ ಲೋಪ ಹೊಂದಿದ ಅಂಚು ಧಾತುವಿನ ಅಕಾರಕ್ಕೆ ಈಕಾರಾದೇಶ ಬರುತ್ತದೆ. ಅಜಾದಿ ಪ್ರತ್ಯಯದಲ್ಲಿರುವುದರಿಂದ ಭ ಸಂಜ್ಞೆ ಇವೆ. ಉದ್ + ಅಚ್ + ಅಸ್ ಎಂದಿರುವಾಗ ಅಚಿನ ಅಕಾರಕ್ಕೆ ಈಕಾರ ಬಂದರೆ ಉದೀಚಃ ಎಂದಾಗುತ್ತದೆ. ಹೀಗೇ ಅಜಾದಿ ಪ್ರತ್ಯಯ ಪರದಲ್ಲಿರುವಾಗ ಅಚಿನ ಅಕಾರಕ್ಕೆ ಈತ್ವ. ತೃ = ಉದೀಚಾ–ಉದಗ್ಭ್ಯಾಮ್–ಉದ್ಭಿಃ ಇತ್ಯಾದಿ. ಇಲ್ಲಿ ಚಕಾರಕ್ಕೆ ಜಶ್ತ್ವ, ಕುತ್ವ ಬಂದಿವೆ.

ಚಕಾರಾಂತ ಸಮ್ಯಞ್ಚ್ ಶಬ್ದ. (ಚನ್ನಾಗಿ ಹೋಗುವವನು)

ಸಮ್=ಸಮ್ಯಕ್ ಅಂಚತಿ (ಚನ್ನಾಗಿ ನಡೆಯುತ್ತಾನೆ) ಎಂದರ್ಥವಿವಕ್ಷಾ ಮಾಡಿದಾಗ ಸಮ್ ಪೂರ್ವದಲ್ಲಿರುವಾಗ ಅಂಚು ಧಾತುವಿಗೆ ಕ್ವಿನ್. ಸಮ್ಯಞ್ಚ್ ಶಬ್ದ. ಇಲ್ಲಿ ಸಮ್+ಅಞ್ಚ್ ಎಂದಿರುವಾಗ ಸಮಞ್ಚ್ ಎಂದಾಗಬೇಕಿತ್ತು. ಅದಕ್ಕೋಸ್ಕರ ಸಮ್ ಎಂಬುದಕ್ಕೆ ಸಮಿ ಆದೇಶ ಹೇಳುತ್ತಾನೆ.

(ಸಮ್ ಗೆ ಸಮಿ ಆದೇಶ ಹೇಳುವ ಸೂತ್ರ)

೩೪೦. ಸಮಃ ಸಮಿ ॥ ೬-೩ ೯೩ ॥

ವಪ್ರತ್ಯಯಾಂತೇಽಞ್ಚೌ ॥ ಸಮ್ಯಙ್ | ಸಮ್ಯಞ್ಚೌ | ಸಮೀಚಃ | ಸಮ್ಯಗ್ಭ್ಯಾಮ್ ॥ ಇತ್ಯಾದಿ.

ದ್ವಿಪದ ಸೂತ್ರ. ಸಮಿ ಲುಪ್ತಪ್ರಥಮಾಕ. ಅಲ್ಲಿ ಪ್ರಥಮಾವಿಭಕ್ತಿಲುಪ್ತವಾಗಿದೆ. " ವಿಷ್ವಕ್‌ದೇವ "–ಸೂತ್ರದಿಂದ " ವಪ್ರತ್ಯಯೇ " ಅನುವೃತ್ತಿ. " ಅಪ್ರತ್ಯಯೇ " ಎಂದೂ ಒಂದುಮತ. ಪ್ರತ್ಯಯವಾದುದರಿಂದ " ಪ್ರತ್ಯಯಗ್ರಹಣೇ ತದಂತಗ್ರಹಣಮ್ " ಪರಿಭಾಷೆಯಿಂದ ತದಂತವನ್ನು ತೆಗೆದುಕೊಳ್ಳಬೇಕು. ಆಗ ವಪ್ರತ್ಯಯಾಂತಪದ ಪರದಲ್ಲಿರುವಾಗ ಎಂದರ್ಥವಾಗುತ್ತದೆ. ಕ್ವಿನ್ನಿನಲ್ಲಿ ವಕಾರವಿರುವುದರಿಂದ ವ ಪ್ರತ್ಯಯಾಂತಪದ ಅಞ್ಚ್ ಆಗುತ್ತದೆ. " ಅಪ್ರತ್ಯಯಾಂತೇ " ಎಂದು ಅರ್ಥಮಾಡಿದರೂ ಅಞ್ಚ್ ಆಗುತ್ತದೆ. ಆಗ ಯಾವಪ್ರತ್ಯಯವೂ ಇಲ್ಲದಿದ್ದು

ಎಂದರ್ಥ. ಕ್ವಿನ್ನಿನಲ್ಲಿ ಎಲ್ಲವೂ ಲೋಪವಾಗುವುದರಿಂದ ಅಞ್ಚ್ ಅಪ್ರತ್ಯಯಾಂತವಾಗುತ್ತದೆ. **ಸೂತ್ರಾರ್ಥ**—ಸಮ್ ಶಬ್ದಕ್ಕೆ ವಪ್ರತ್ಯಯಾಂತವಾದ ಅಞ್ಚ್ ಧಾತುಪರವಾದಾಗ ಸಮಿ ಆದೇಶ ಬರುತ್ತದೆ. ಪ್ರಕೃತ ಅಞ್ಚ್ ಹಾಗಿರುವುದರಿಂದ ಸಮಿ ಆದೇಶ ಬಂದರೆ ಸಮಿ + ಅಞ್ಚ್. ಹಿಂದಿನಂತೆ ನಲೋಪ. ನುಮ್. ಕುತ್ವ. ಸಮ್ಯಙ್. ಕ್ಟಿ ಮುಂತಾದ ಅಜಾದಿಯಲ್ಲಿ ನಶ್ಚೋಪ, ನುಮ್, ಅನುಸ್ವಾರ ಪರಸವರ್ಣ ಸಮ್ಯಞ್ಚೌ–ಸಮ್ಯಞ್ಚಃ ಇತ್ಯಾದಿ ಹಿಂದಿನಂತೇ ತಿಳಿಯಬೇಕು. ಶಸಾದಿ ಪರವಾದಾಗ ಭಸಂಜ್ಞೆಯಿರುವುದರಿಂದ " ಅಚಃ " ಸೂತ್ರದಿಂದ ಅಚಿನ ಅಕಾರಕ್ಕೆ ಲೋಪ. " ಚೌ " ಸೂತ್ರದಿಂದ ಪೂರ್ವದಲ್ಲಿರುವ ಸಮಿನ ಇಕಾರಕ್ಕೆ (ಆಣ್) ದೀರ್ಘ. ಸಮೀಚಃ ॥ ತೃ, ಸಮೀಚಾ–ಸಮ್ಯಗ್ಭ್ಯಾಮ್–ಇತ್ಯಾದಿ ಹಿಂದಿನಂತೇ ತಿಳಿಯಬೇಕು.

ಚಕಾರಾಂತ " ಸಧ್ರ್ಯಞ್ಚ್ " ಶಬ್ದ. (ಒಟ್ಟಿಗೆ ಹೋಗುವವನು)

ಸಹ ಉಪಪದವಾಗಿರುವಾಗ ಅಂಚು ಧಾತುವಿಗೆ ಕ್ವಿನ್ ಪ್ರತ್ಯಯ. ಸಹ+ಅಞ್ಚ್ ಎಂದಿರುವಾಗ ಸಹ ಎಂಬುದಕ್ಕೆ ಸಧ್ರಿ ಆದೇಶ ಹೇಳುತ್ತಾನೆ.

(ಸಹಕ್ಕೆ ಸಧ್ರಿ ಆದೇಶ ಹೇಳುವ ಸೂತ್ರ)

೩೪೧. ಸಹಸ್ಯ ಸಧ್ರಿಃ ॥ ೬-೩-೯೫ ॥

ತಥಾ ॥ ಸಧ್ರ್ಯಙ್ ॥ ಇತ್ಯಾದಿ.

ದ್ವಿಪದ ಸೂತ್ರ. ಹಿಂದಿನಂತೇ " ವಪ್ರತ್ಯಯೇ " ಅನುವೃತ್ತಿ. ಹಿಂದಿನಂತೇ ಅನುವೃತ್ಯಾದಿಗಳಿರುವುದರಿಂದ ತಥಾ ಅಂದರೆ ಹಾಗೆ ಎಂದು ವೃತ್ತಿ ಬರೆದಿರುತ್ತಾನೆ. **ಸೂತ್ರಾರ್ಥ**—ವಪ್ರತ್ಯಯಾಂತವಾದ ಅಞ್ಚುಧಾತು ಪರವಾದಾಗ ಸಹ ಎಂಬುದಕ್ಕೆ ಸಧ್ರಿ ಆದೇಶ ಬರುತ್ತದೆ. ಪ್ರಕೃತ ಹಾಗೆ ಆದೇಶ ಬಂದರೆ ಸಧ್ರಿ + ಅಞ್ಚ್. ಯಣ್. ಸಧ್ರ್ಯಞ್ಚ್ ಎಂದಾಗುತ್ತದೆ. ಹಿಂದಿನಂತೇ ನಶ್ಚೋಪ, ನುಮ್, ಕುತ್ವಾದಿಕಾರ್ಯ ತಿಳಿಯಬೇಕು. ಸಧ್ರ್ಯಙ್–ಸಧ್ರ್ಯಞ್ಚೌ ಸಧ್ರ್ಯಞ್ಚಃ ಇತ್ಯಾದಿ. ಶಸಾದಿಗಳಲ್ಲಿ ಅಚಿನ ಅಕಾರಕ್ಕೆ ಲೋಪ ಬಂದು ಹಿಂದಿನ ಇಕಾರಕ್ಕೆ ದೀರ್ಘ ಬಂದರೆ ಸಧ್ರೀಚಃ ಸಧ್ರೀಚಾ ಇತ್ಯಾದಿ ರೂಪಗಳು ಹಿಂದಿನಂತೇ ಆಗುತ್ತವೆ. ಹಲಾದಿಯಲ್ಲಿ ಜಶ್ತ್ವ ಕುತ್ವ. ಸಧ್ರ್ಯಗ್ಭ್ಯಾಮ್ ಇತ್ಯಾದಿ.

ಚಕಾರಾಂತ ಪುಲ್ಲಿಂಗ " ತಿರ್ಯಞ್ಚ್ " ಶಬ್ದ. (ಅಡ್ಡವಾಗಿ ಹೋಗುವುದು ಪಶುಪಕ್ಷ್ಯಾದಿ)

ತಿರ್ಯಕ್ ಅಂಚತಿ. ಅಡ್ಡವಾಗಿ ಹೋಗುತ್ತದೆ ಎಂಬ ಅರ್ಥದಲ್ಲಿ ತಿರಸ್ ಎಂಬ ಪದವು ಉಪಪದವಾಗಿರುವಾಗ ಅಂಚು ಧಾತುವಿಗೆ ಕ್ವಿನ್ ಪ್ರತ್ಯಯ. ತಿರಸ್+ಅಞ್ಚ್ ಎಂದಿರುವಾಗ ತಿರಸ್ ಶಬ್ದಕ್ಕೆ ತಿರಿ ಆದೇಶ ಹೇಳುತ್ತಾನೆ.

(ತಿರಸ್ ಶಬ್ದಕ್ಕೆ ತಿರಿ ಆದೇಶ ಹೇಳುವ ಸೂತ್ರ)

೪೪೩. ತಿರಸಸ್ತಿರ್ಯಲೋಪೇ ॥ ೬-೩-೯೪ ॥

ಅಲುಪ್ತಾಕಾರೇಽಞ್ಚತೌ ವಪ್ರತ್ಯಯಾಂತೇ ತಿರಸಸ್ತಿರ್ಯಾದೇಶಃ ॥
ತಿರ್ಯಙ್। ತಿರ್ಯಞ್ಚೌ। ತಿರಶ್ಚಃ। ತಿರ್ಯಗ್ಭ್ಯಃ॥

ತಿರಸಃ ತಿರಿ, ಅಲೋಪೇ॥ ತ್ರಿಪದಸೂತ್ರ. ತಿರಿ ಲುಪ್ತಪ್ರಥಮಾಕ. (ತಿರಿಃ) ಪ್ರಥಮಾಲುಪ್ತವಾಗಿವೆ. "ವಿಷ್ವಗ್ದೇವ–"ಸೂತ್ರದಿಂದ "ಅಞ್ಚತೌ" "ಅಪ್ರತ್ಯಯೇ" ಅನುವೃತ್ತಿ. "ನವಿದ್ಯತೇ ಅಲೋಪಃ ಯಸ್ಮಿನ್ಸಃ" ಅಲೋಪಃ. ತಸ್ಮಿನ್ ಅಲೋಪೇ. ಅಲೋಪವಿಲ್ಲದಿರುವ ಅಂಚುಧಾತು ಪರವಾದಾಗ ಎಂದರ್ಥ. **ಸೂತ್ರಾರ್ಥ**—ಅಕಾರ ಲೋಪ ಹೊಂದದಿರುವ ವಪ್ರತ್ಯಯಾಂತವಾದ ಅಞ್ಚ್ ಧಾತುಪರದಲ್ಲಿರುವಾಗ ತಿರಸ್ ಶಬ್ದಕ್ಕೆ ತಿರಿ ಎಂಬ ಆದೇಶ ಬರುತ್ತದೆ. ಪ್ರಕೃತ ಅಂಚಿನ ಅಕಾರಲೋಪಬಂದಿಲ್ಲ. ಕ್ವಿನ್ನಂತವಾದುದರಿಂದ ವಪ್ರತ್ಯಯಾಂತವಾಗಿದೆ. ತಿರಿ ಆದೇಶ ಬಂದರೆ ತಿರಿ+ಅಞ್ಚ್ ಎಂದಾದಾಗ ಯಣ್. ತಿರ್ಯಞ್ಚ್. ಕ್ಞಿಸುಮುಂತಾದ ಸರ್ವನಾಮಸ್ಥಾನ ಪರವಾದಾಗ ನಲೋಪ. ನುಮ್. ಅನುಸ್ವಾರ, ಪರಸವರ್ಣ ಕಾರ್ಯಗಳು ಹಿಂದಿನಂತೆ. ತಿರ್ಯಙ್ ತಿರ್ಯಞ್ಚೌ–ತಿರ್ಯಞ್ಚಃ ಇತ್ಯಾದಿ. ಶಸಾದಿ ಅಜಾದಿಯಲ್ಲಿ ಭಸಂಜ್ಞೆಯಿರುವುದರಿಂದ "ಅಚಃ" ಸೂತ್ರದಿಂದ ಅಞ್ಚುವಿನ ಅಕಾರಕ್ಕೆ ಲೋಪ. ಆಗ ಅಲೋಪ ಹೊಂದಿದ ಅಞ್ಚು ಧಾತು ಪರವಾದುದರಿಂದ ತಿರಸ್ಶಬ್ದಕ್ಕೆ ತಿರಿ ಆದೇಶ ಬರುವುದಿಲ್ಲ. ತಿರಸ್ಚ್+ಅಸ್. ಸಕಾರಕ್ಕೆ ಚವರ್ಗದ (ಚ) ಯೋಗವಿರುವುದರಿಂದ "ಸ್ತೋಃ ಶ್ಚುನಾಶ್ಚುಃ" ಸೂತ್ರದಿಂದ ಸಕಾರಕ್ಕೆ ಶಕಾರಾದೇಶ. ತಿರಶ್ಚಃ। ತೃ–ತಿರಶ್ಚಾ–ಇತ್ಯಾದಿ. ಹಲಾದಿಯಲ್ಲಿ ಅಲೋಪವಾಗದಿರುವುದರಿಂದ ತಿರಸ್ಶಬ್ದಕ್ಕೆ ತಿರಿ ಆದೇಶಬರುತ್ತದೆ. ತಿರ್ಯಗ್ಭ್ಯಃ ಇತ್ಯಾದಿ. ಇದುವರೆಗೆ ಸುಬಂತ ಉಪಪದವಾಗಿರುವಾಗ ಅಂಚುಧಾತುವಿಗೆ ಕ್ವಿನ್ ಹೇಳಿ ರೂಪವನ್ನು ಹೇಳಿರುತ್ತಾನೆ. ಅಂಚು ಧಾತುವಿಗೆ ಎರಡು ಅರ್ಥಗಳವೆ. "ಅಂಚು, ಗತಿಪೂಜನಯೋಃ" ಗತ್ಯರ್ಥ, ಪೂಜಾರ್ಥ, ಈ ಎರಡು ಅರ್ಥಗಳಲ್ಲಿ ಅಂಚುಧಾತುವಿದೆ. ಇದುವರೆಗೆ ಹೇಳಿದರೂಪಗಳು ಗತ್ಯರ್ಥದಲ್ಲಿ ಮಾತ್ರ. ಪೂಜಾರ್ಥದಲ್ಲಿ ಕ್ವಿನ್ ಬಂದಾಗ ವಿಶೇಷ ಹೇಳುತ್ತಾನೆ.

೪೪೪. ನಾಞ್ಚೇಃ ಪೂಜಾಯಾಮ್ ॥ ೬-೪-೩೦ ॥

ಪೂಜಾರ್ಥಸ್ಯ ಅಂಚೇರುಪಧಾಯಾ ನಸ್ಯ ಲೋಪೋ ನ। ಪ್ರಾಜ್।
ಪ್ರಾಞ್ಚೌ। ನಲೋಪಾಭಾವಃ ಪಲೋಪೋ ನ। ಪ್ರಾಞ್ಚಃ। ಪ್ರಾಜ್ಭ್ಯಾಮ್। ಪ್ರಾಜ್ಷು ॥ ಏವಂ ಪೂಜಾರ್ಥೇ ಪ್ರತ್ಯಜ್ಞಾದಯಃ।
ಕ್ರುಙ್। ಕ್ರುಞ್ಚೌ। ಕ್ರುಙ್ಭ್ಯಾಮ್ ॥ ಪಯೋಮುಕ್, ಪಯೋಮುಗ್। ಪಯೋಮುಚೌ। ಪಯೋಮುಗ್ಭ್ಯಮ್ ॥

ನ, ಅಂಚೇಃ, ಪೂಜಾಯಾಮ್ ॥ ತ್ರಿಪದ ಸೂತ್ರ. " ಅನಿದಿತಾಂ– " ಸೂತ್ರದಿಂದ " ಉಪಧಾಯಾಃ " " ಕ್ಞಿತಿ " ಎಂದೂ " ಶ್ನಾನ್ನಲೋಪಃ " ಸೂತ್ರದಿಂದ " ನ ಲೋಪಃ " ಎಂದೂ ಅನುವೃತ್ತವಾಗುತ್ತದೆ. **ಸೂತ್ರಾರ್ಥ**—ಪೂಜಾರ್ಥದಲ್ಲಿರುವ ಅಂಚು ಧಾತುವಿನ ಉಪಧೆಯಾದ ನಕಾರಕ್ಕೆ ಕಿತ್ ಙಿತ್ ಆದ ಪ್ರತ್ಯಯ ಪರವಾದಾಗ ಲೋಪ ಬರುವುದಿಲ್ಲ. ಪ್ರಾನ್ಜ್ ಎಂದಿರುವಾಗ ನಲೋಪ ಬಾರದಿದ್ದರೆ ಸಂಯೋಗಾಂತವಾದುದರಿಂದ " ಸಂಯೋಗಾಂತಸ್ಯ ಲೋಪಃ " ಸೂತ್ರದಿಂದ ಚಕಾರಕ್ಕೆ ಲೋಪ. " ಕ್ವಿನ್ಪ್ರತ್ಯಯಸ್ಯ ಕುಃ " ಸೂತ್ರದಿಂದ ನಕಾರಕ್ಕೆ ಕುತ್ವ ಬಂದರೆ ಜಕಾರ. ಪ್ರಾಜ್. ದ್ವಿವಚನಾದಿಗಳಲ್ಲಿ ಯಾವ ಕಾರ್ಯವೂ ಇಲ್ಲ. ಪ್ರಾಞ್ಚೌ–ಪ್ರಾಞ್ಚಃ ಇತ್ಯಾದಿ. ಶಸಾದಿಯಲ್ಲಿ ನಲೋಪ ಬಾರದಿರುವುದರಿಂದ ಅಂಚುವಿನ ಅಕಾರಕ್ಕೆ ಲೋಪವಿಲ್ಲ. ಅಕಾರಕ್ಕೆ ಲೋಪ ಬಾರದಿದ್ದರೆ ಪೂರ್ವಕ್ಕೆ ದೀರ್ಘಾದಿಕಾರ್ಯಗಳೂ ಇಲ್ಲ. ಪ್ರಾಞ್ಚಃ। ತೃ. ಪ್ರಾಞ್ಚಾ ಇತ್ಯಾದಿ. ಹಲಾದಿಯಲ್ಲಿ ಪದಸಂಜ್ಞೆಯಿರುವುದರಿಂದ ಪ್ರಾಞ್ಚ್+ಭ್ಯಾಮ್ ಎಂದಿರುವಾಗ ಸಂಯೋಗಾಂತ ಲೋಪ. ಪ್ರಾನ್+ಭ್ಯಾಮ್. ಕುತ್ವ. ಪ್ರಾಜ್ಭ್ಯಾಮ್. ಇತ್ಯಾದಿ. ಪ್ರಾನಚ್+ಸು ಎಂದಿರುವಾಗ ಸಂಯೋಗಾಂತ ಲೋಪ. ಕುತ್ವ. ಪ್ರಾಜ್+ಸು. " ಜಶ್ಶೋಃ ಕುಕ್ ಟುಕ್ ಶರಿ " ಸೂತ್ರದಿಂದ "ಶರ್"(ಸು) ಪರದಲ್ಲಿರುವುದರಿಂದ ಜಕಾರಕ್ಕೆ ಕುಕ್ ಆಗಮ. ಕಿತ್ತಾ ಮುದರಿಂದ ಅಂತಾವಯವನವಾಗಿ ಬರುತ್ತದೆ. ಪ್ರಾಜ್ಕ್ಸು. " ಆದೇಶಪ್ರತ್ಯಯೋಃ " ಸೂತ್ರದಿಂದ ಸಕಾರಕ್ಕೆ ಷತ್ವ. ಪ್ರಾಜ್ಕ್ಷು. ಪ್ರಾಜ್ಚ್ಚು. ಪ್ರಾಜ್ಕ್ಷು ಎಂದಿರುವಾಗ " ಚಯೋಃ ದ್ವಿತೀಯಾ ಶರಿ ಪೌಷ್ಕರಸಾದೇರಿತಿ ವಾಚ್ಯಮ್ " ವಾರ್ತಿಕದಿಂದ ಕಕಾರಕ್ಕೆ ವಿಕಲ್ಪವಾಗಿ ದ್ವಿತೀಯಾಕ್ಷರ ಖಕಾರ ಬರುತ್ತದೆ. ಬಂದರೆ ಪ್ರಾಜ್ಖ್ಷು. ಬಾರದಿದ್ದರೆ ಪ್ರಾಚ್ಚು. ಕುಕಾಗಮ ವಿಕಲ್ಪವಾದುದರಿಂದ ಪ್ರಾಚ್ಚು. ಹೀಗೆ ಮೂರು ರೂಪಗಳಾಗುತ್ತವೆ. ಪೂಜಾರ್ಥದಲ್ಲಿ ಹಿಂದೆ ಹೇಳಿದ ಪ್ರತ್ಯಜ್ಞಾದಿ ಶಬ್ದಗಳಲ್ಲಿಯೂ ಉಪಧಾನಲೋಪ ಬರುವುದಿಲ್ಲ. ಹಿಂದಿನಂತೇ ರೂಪವಾಗುತ್ತದೆ. ಪ್ರತ್ಯಙ್–

ಪ್ರತ್ಯಞ್ಚೌ–ಪ್ರತ್ಯಞ್ಚಃ ಇತ್ಯಾದಿ. ಹಲಾದಿಯಲ್ಲಿ ಪ್ರತ್ಯಙ್ಭ್ಯಾಮ್ ಇತ್ಯಾದಿ. ಸುವಿನಲ್ಲಿ ಪ್ರತ್ಯಙ್ಕ್ಷ–ಪ್ರತ್ಯಙ್ಙ್ಷು–ಪ್ರತ್ಯಙ್ಷು. ॥

ಚಕಾರಾಂತ ಕ್ರುಞ್ಚ್ ಶಬ್ದ. (ನೀರಿನಲ್ಲಿರುವ ಪಕ್ಷಿವಿಶೇಷ)

ಕ್ರುಞ್ಚ್=ಕೌಟಿಲ್ಯೆ ಅಲ್ಪೀ ಭಾವಯೋಃ. ಧಾತು "ಋತ್ವಿಕ್‌ದಧೃಕ್" ಸೂತ್ರದಿಂದ ಕ್ವಿನ್ ಪ್ರತ್ಯಯ. ನಲೋಪಾಭಾವವು ಅದರಿಂದಲೇ ನಿಪಾತಿತವಾಗಿದೆ. ಸುವಿನಲ್ಲಿ ಸಂಯೋಗಾಂತಲೋಪ. "ಕ್ವಿನ್ ಪ್ರತ್ಯಯಸ್ಯ ಕುಃ" ಸೂತ್ರದಿಂದ ಇಕಾರಕ್ಕೆ ಕುತ್ವ. ಜಕಾರ. ಇದು ನೋಪಧವಲ್ಲ. ಇಕಾರೋಪಧವಾದ ಧಾತು. ಕ್ರುಞ್ಚ್–ಕ್ರುಞ್ಚೌ–ಕ್ರುಞ್ಚಃ ಇತ್ಯಾದಿ. ಹಲಾದಿಯಲ್ಲಿ ಸಂಯೋಗಾಂತಲೋಪ ಬಂದಾಗ ಹಿಂದಿನಂತೆ ಕುತ್ವ. ಕ್ರುಞ್ಭ್ಯಾಮ್ ಇತ್ಯಾದಿ. ಸಪ್ತಮೀ ಸುವಿನಲ್ಲಿ ಕ್ರುಞ್ಕ್ಷು. ಕ್ರುಞ್ಙ್ಷು, ಕ್ರುಞ್ಷು. ಹೀಗೆ ಮೂರು ರೂಪಗಳನ್ನು ಹಿಂದಿನಂತೇ ತಿಳಿಯಬೇಕು.

ಚಕಾರಾಂತ ಪಯೋಮುಚ್‌ಶಬ್ದ. (ಮೋಡ)

ಪಯಃ ಮುಂಚತಿ=ನೀರು ಬಿಡುವುದು. ಮುಚ್ಲೃ ಮೋಕ್ಷಣೇ ಧಾತು ಕ್ವಿಪ್‌ಪ್ರತ್ಯಯ. ಪಯೋಮುಚ್+ಸ್. "ಹಲ್‌ಙ್ಯಾಭ್ಯೋ"—ಸೂತ್ರದಿಂದ ಸುಲೋಪ. "ಚೋಃ ಕುಃ" ಸೂತ್ರದಿಂದ ಚಕಾರಕ್ಕೆ ಕಕಾರಾದೇಶ. "ಝಲಾಂ ಜಶೋಂತೇ" ಸೂತ್ರದಿಂದ ಕಕಾರಕ್ಕೆ ಗಕಾರಾದೇಶ. ಪಯೋಮುಗ್. "ವಾವಸಾನೇ" ಸೂತ್ರದಿಂದ ಗಕಾರಕ್ಕೆ ವಿಕಲ್ಪವಾಗಿ ಚರ್ ಬಂದರೆ ಪಯೋಮುಕ್ ಎಂದಾಗುತ್ತದೆ. ಅಜಾದಿಯಲ್ಲಿ ಪ್ರತ್ಯಯ ಸೇರಿಸುವುದು ಮಾತ್ರ. ಪಯೋಮುಚೌ ಪಯೋಮುಚಃ ಇತ್ಯಾದಿ. ಸಪ್ತಮೀಸುವಿನಲ್ಲಿ ಪಯೋಮುಚ್+ಸು ಎಂದಿರುವಾಗ "ಝಲಾಂ ಜಶೋಂತೇ" ಸೂತ್ರದಿಂದ ಚಕಾರಕ್ಕೆ ಜಕಾರ. "ಚೋಃಕುಃ" ಸೂತ್ರದಿಂದ ಕುತ್ವ ಬಂದರೆ ಜಕಾರಕ್ಕೆ ಗಕಾರ ಬರುತ್ತದೆ. "ಖರಿಚ" ಸೂತ್ರದಿಂದ ಅದಕ್ಕೆ ಕಕಾರಾದೇಶ. ಪಯೋಮುಕ್+ಸು "ಆದೇಶಪ್ರತ್ಯಯಯೋಃ" ಸೂತ್ರದಿಂದ ಕವರ್ಗದ ಪರದಲ್ಲಿರುವುದರಿಂದ ಸಕಾರಕ್ಕೆ ಷತ್ವ. ಪಯೋಮುಕ್+ಷು=ಪಯೋಮುಕ್ಷು.

ಇತಿ ಚಾಂತಾಃ

ತಕಾರಾಂತ ಮಹತ್ ಶಬ್ದ. (ದೊಡ್ಡದು)

ಮಹ ಪೂಜಾಯಾಮ್. ಧಾತು. ಕ್ತಿನ್ ಪ್ರತ್ಯಯ. ಶತೃಪ್ರತ್ಯಯದಂತೆ ಕಾರ್ಯವಾಗುತ್ತದೆ ಎಂದು ಉಣಾದಿಸೂತ್ರದಲ್ಲಿ ಹೇಳಿದೆ. ಆಗ ಮಹತ್ ಉಗಿತ್ತಾಗುತ್ತದೆ. ಉಗಿತ್ತಾದುದರಿಂದ ಸರ್ವನಾಮ ಸ್ಥಾನ ಪರವಾದಾಗ (ಸುಟ್) "ಉಗಿದಚಾಂ"–ಸೂತ್ರದಿಂದ ನುಮಾಗಮ. ಮಹನ್‌ತ್+ಸ್. ಈಗ ನಕಾರದ ಪೂರ್ವಕ್ಕೆ ದೀರ್ಘಹೇಳುತ್ತಾನೆ.

(ನಕಾರದ ಉಪಧೆಗೆ ದೀರ್ಘ ಹೇಳುವ ಸೂತ್ರ)

೩೪೪. ಸಾಂತಮಹತಃ ಸಂಯೋಗಸ್ಯ॥ ೬-೪-೧೦ ॥

ಸಾಂತಸಂಯೋಗಸ್ಯ ಮಹತಶ್ಚ ಯೋ ನಕಾರಸ್ತಸ್ಯೋಪಧಾಯಾ ದೀರ್ಘೋಽಸಂಬುದ್ಧೌ ಸರ್ವನಾಮಸ್ಥಾನೇ॥ ಮಹಾನ್। ಮಹಾಂತೌ। ಮಹಾಂತಃ। ಹೇ ಮಹನ್। ಮಹದ್ಭ್ಯಾಮ್॥

ಸಾಂತ, ಮಹತಃ, ಸಂಯೋಗಸ್ಯ ॥ ತ್ರಿಪದಸೂತ್ರ. "ಸರ್ವನಾಮಸ್ಥಾನೇಚಾಸಂಬುದ್ಧೌ" ಸೂತ್ರವೂ "ಷ್ಟ್ರಲೋಪೇ"–ಸೂತ್ರದಿಂದ "ದೀರ್ಘಃ" ಪದವೂ "ನೋಪಧಾಯಾಃ" ಸೂತ್ರವೂ ಅನುವೃತ್ತವಾಗುತ್ತವೆ. ನ ಎಂಬುದು ಲುಪ್ತಷಷ್ಠೀಕವೆಂದು ಹಿಂದೆ ಹೇಳಿದೆ. ಉಪಧೆಯಲ್ಲಿ ಅದಕ್ಕೆ ಅನ್ವಯ. ನಕಾರದ ಉಪಧೆಗೆ ಎಂದರ್ಥ. ಸಾಂತವೆಂಬುದೂ ಷಷ್ಠ್ಯಂತಪದ. ಅಲ್ಲಿ ಷಷ್ಠೀ ಲೋಪವಾಗಿದೆ. ಸಂಯೋಗಸ್ಯ ಎಂಬಲ್ಲಿ ಇದಕ್ಕೆ ಅಭೇದಾನ್ವಯ. ಮಹತಃ ಅವಯವ ಷಷ್ಠೀ. ನಕಾರದಲ್ಲಿ ಅದಕ್ಕೆ ಅನ್ವಯ. **ಸೂತ್ರಾರ್ಥ**– ಸಂಬುದ್ಧಿಯಲ್ಲದ ಸರ್ವನಾಮಸ್ಥಾನಪರದಲ್ಲಿರುವಾಗ ಸಕಾರಾಂತವಾದ ಸಂಯೋಗದ ಉಪಧೆಗೂ ಮಹತ್ ಶಬ್ದಾವಯವವಾದ ನಕಾರದ ಉಪಧೆಗೂ ದೀರ್ಘಬರುತ್ತದೆ. ಮಹನ್‌ತ್+ಸ್ ಎಂದಿರುವಾಗ ಸರ್ವನಾಮಸ್ಥಾನಪರದಲ್ಲಿದೆ. ಅಲ್ಲಿ ಮಹಚ್ಛಬ್ದದ ನಕಾರದ ಉಪಧೆಯಂದರೆ ಹಕಾರದ ಮೇಲಿರುವ ಅಕಾರ. ಅದಕ್ಕೆ ದೀರ್ಘಬಂದರೆ ಮಹಾನ್‌ತ್+ಸ್ ಎಂದಾಗುತ್ತದೆ. "ಹಲ್‌ಙ್ಯಾಭ್ಯೋ"–ಸೂತ್ರದಿಂದ ಸುಲೋಪ. "ಸಂಯೋಗಾಂತಸ್ಯ ಲೋಪಃ" ಸೂತ್ರದಿಂದ ತಕಾರಲೋಪ. ಈ ಲೋಪಬಂದುದು ಅಸಿದ್ಧವಾದುದರಿಂದ "ನ ಲೋಪಃ ಪ್ರಾತಿಪದಿಕಾಂತಸ್ಯ" ಸೂತ್ರದಿಂದ ನ ಲೋಪ ಬರುವುದಿಲ್ಲ. ಮಹನ್. ಮಹತ್+ಔ ಎಂದಿರುವಾಗ "ಉಗಿದಚಾಂ"–ಸೂತ್ರದಿಂದ ನುಮಾಗಮ. "ಸಾಂತಮಹತಃ"–ಸೂತ್ರದಿಂದ ನಕಾರದ ಉಪಧೆಗೆ ದೀರ್ಘ. ಮಹಾನ್‌ತ್+ಔ ಎಂದಿರುವಾಗ ಅಪದಾಂತನಕಾರಕ್ಕೆ "ನಶ್ಚಾಪದಾಂತಸ್ಯ"–ಸೂತ್ರದಿಂದ ಅನುಸ್ವಾರ. "ಅನುಸ್ವಾರಸ್ಯ ಯಯಿ"–ಸೂತ್ರದಿಂದ ಅನುಸ್ವಾರಕ್ಕೆ ಪರ

ಸವರ್ಣ. (ನ) ಮಾಹಾನ್ತೌ. ಮಹತ್+(ಜ್) ಅಸ್ ಎಂದಿರುವಾಗ ಹೀಗೇ ಕಾರ್ಯ ಬಂದರೆ ಮಹಾನ್ತಃ ಎಂದಾಗುತ್ತದೆ. ಸಂಬುದ್ಧಿಯಲ್ಲಿ ನಿಷೇಧಮಾಡಿರುವುದರಿಂದ ದೀರ್ಘವಿಲ್ಲ. ಹೇ ಮಹನ್-ಹೇಮಹಾನ್ತೌ-ಹೇ ಮಹಾನ್ತಃ ॥ ದ್ವಿ-ಮಹಾನ್ತಮ್-ಮಹಾನ್ತೌ-ಶಸಾದಿ ಅಜಾದಿಗಳಲ್ಲಿ ಕೇವಲಪ್ರತ್ಯಯ ಸೇರಿಸುವುದು ಮಾತ್ರ. ಮಹತಃ । ತೃ.—ಮಹತಾ. ಭ್ಯಾಮಾದಿಗಳಲ್ಲಿ ಪದಸಂಜ್ಞೆಯಿರುವುದರಿಂದ "ಝಲಾಂ ಜಶೋಂತೇ" ಸೂತ್ರದಿಂದ ತಕಾರಕ್ಕೆ ಜಶ್ತ್ವ. ಮಹದ್ಭ್ಯಾಮ್ ಮಹದ್ಭಿಃ । ಇತ್ಯಾದಿ. ಸಪ್ತಮೀಸುವಿನಲ್ಲಿ ತಕಾರಕ್ಕೆ ಜಶ್ತ್ವ ಬಂದಾಗ "ಖರಿಚ" ಸೂತ್ರದಿಂದ ಅದಕ್ಕೆ ಪುನಃ ತಕಾರ ಮಹತ್ಸು.

ತಕಾರಾಂತ ಧೀಮತ್ ಶಬ್ದ. (ಬುದ್ಧಿವಂತ)

ಧೀಃ ಅಸ್ಯ ಅಸ್ತಿ ಇತಿ ಧೀಮಾನ್. ಬುದ್ಧಿ ಇವನಿಗೆ ಇದೆ ಎಂಬರ್ಥದಲ್ಲಿ ಧೀ ಶಬ್ದದಮೇಲೆ ಮತುಪ್‌ಪ್ರತ್ಯಯ. ಧೀಮತ್‌ಶಬ್ದ. ಇದಕ್ಕೆ ಸುಪರವಾದಾಗ ದೀರ್ಘ ಹೇಳುತ್ತಾನೆ.

(ಅತ್ವಂತ, ಅಸಂತಗಳಿಗೆ ದೀರ್ಘ ಹೇಳುವ ಸೂತ್ರ)

೩೪೫, ಅತ್ವಸಂತಸ್ಯ ಚಾಧಾತೋಃ॥ ೬-೪-೧೪॥

ಅತ್ವಂತಸ್ಯೋಪಧಾಯಾ ದೀರ್ಘೋ ಧಾತುಭಿನ್ನಾಸಂತಸ್ಯ ಚಾಸಂಬುದ್ಧೌ ಸೌ ಪರೇ॥ ಉಗಿತ್ತ್ವಾನ್ನುಮ್। ಧೀಮಾನ್। ಧೀಮಂತೌ। ಧೀಮಂತಃ। ಹೇ ಧೀಮನ್। ಶಸಾದೌ ಮಹದ್ವತ್॥ ಭಾತೇರ್ಡವತುಃ। ಡಿತ್ವಸಾಮರ್ಥ್ಯಾದಭಸ್ಯಾಪಿ ಟೇರ್ಲೋಪಃ। ಭವಾನ್ ಭವಂತೌ। ಭವಂತಃ। ಶತ್ರಂತಸ್ಯ ಭವನ್॥

ಅತು, ಅಸಂತಸ್ಯ, ಚ, ಅಧಾತೋಃ ॥ ನಾಲ್ಕು ಪದಗಳುಳ್ಳ ಸೂತ್ರ. ಅತು ಎಂಬುದು ಲುಪ್ತ ಷಷ್ಠೀಕ. ಅಲ್ಲಿ ಷಷ್ಠೀಲೋಪವಾಗಿದೆ, ಅತೋಃ ಎಂದಿರಬೇಕಿತ್ತು "ಅಂಗಸ್ಯ" ಅಧಿಕಾರ. ಇದಕ್ಕೆ ಅತು ವಿಶೇಷಣ. ಅತು ಅಂತವಾದ ಅಂಗದ ಎಂದರ್ಥವಾಗುತ್ತದೆ. "ಅಧಾತೋಃ" ಎಂಬುದು "ಅಸಂತಸ್ಯ" ಎಂಬಲ್ಲಿ ಅನ್ವಯ ಹೊಂದುತ್ತದೆ. ಧಾತುಭಿನ್ನವಾದ ಅಸಂತದ ಎಂದರ್ಥ. "ಸರ್ವನಾಮಸ್ಥಾನೇ ಚಾಸಂಬುದ್ಧೌ" ಸೂತ್ರದಿಂದ "ಅಸಂಬುದ್ಧೌ" "ಸೌಚ" ಸೂತ್ರದಿಂದ "ಸೌ"

"ನೋಪಧಾಯಾಃ" ಸೂತ್ರದಿಂದ "ಉಪಧಾಯಾಃ" "ಢ್ರಲೋಪೇ—" ಸೂತ್ರದಿಂದ "ದೀರ್ಘಃ" ಪದಗಳು ಅನುವೃತ್ತವಾಗುತ್ತವೆ. **ಸೂತ್ರಾರ್ಥ**—ಸಂಬುದ್ಧಿಭಿನ್ನವಾದ ಸುಪರದಲ್ಲಿರುವಾಗ ಅತು ಅಂತವಾದ ಅಂಗದ ಉಪಧೆಗೂ, ಧಾತುಭಿನ್ನವಾದ ಅಸಂತದ ಉಪಧೆಗೂ ದೀರ್ಘ ಬರುತ್ತದೆ. ಪ್ರಕೃತ ಮತುಪ್ ಪ್ರತ್ಯಯ ಬಂದುದರಿಂದ ಧೀಮತ್ ಅತುಅಂತವಾಗಿದೆ. ಸುಪರವಾದುದರಿಂದ ಉಪಧಾ ಅಂದರೆ ತಕಾರದ ಹಿಂದಿನ ಅಕಾರಕ್ಕೆ ದೀರ್ಘ. ಧೀಮಾತ್+ಸ್. ಉಗಿತ್ತಾದುದರಿಂದ "ಉಗಿದಚಾಂ—" ಸೂತ್ರದಿಂದ ನುಮಾಗಮ ಧೀಮಾನ್‌ತ್+ಸ್. "ಹಲ್‌ಙ್ಯಾಭ್ಯೋ—" ಸೂತ್ರದಿಂದ ಸುಲೋಪ. ಸಂಯೋಗಾಂತ ಪದವಾದುದರಿಂದ "ಸಂಯೋಗಾಂತಸ್ಯ ಲೋಪಃ" ಸೂತ್ರದಿಂದ ತಕಾರಕ್ಕೆ ಲೋಪ. ಇದು ಅಸಿದ್ಧವಾದುದರಿಂದ "ನಲೋಪಃ ಪ್ರಾತಿಪದಿಕಾಂತಸ್ಯ" ಸೂತ್ರದಿಂದ ನಲೋಪ ಬರುವುದಿಲ್ಲ. ಧೀಮಾನ್. ಇನ್ನು ಔ ಮುಂತಾದ ಸರ್ವನಾಮಸ್ಥಾನ ಪರವಾದಾಗ "ಉಗಿದಚಾಂ—" ಸೂತ್ರದಿಂದ ನುಮಾಗಮ. ಧೀಮನ್+ತ್+ಔ. ನಕಾರಕ್ಕೆ ಅನುಸ್ವಾರ, ಪರಸವರ್ಣ. ಸುವಿನಲ್ಲಿ ಮಾತ್ರ ದೀರ್ಘಹೇಳಿರುವುದರಿಂದ ದೀರ್ಘವಿಲ್ಲ. ಧೀಮನ್ತೌ—ಧೀಮನ್ತಃ ॥ ಅಸಂಬುದ್ಧೌ ಎಂದುದರಿಂದ ಸಂಬುದ್ಧಿಸುವಿನಲ್ಲಿ ದೀರ್ಘವಿಲ್ಲ. ಹೇ ಧೀಮನ್-ಹೇ ಧೀಮನ್ತೌ-ಹೇ ಧೀಮನ್ತಃ॥ ದ್ವಿ-ಧೀಮನ್ತಮ್-ಧೀಮನ್ತೌ-ಧೀಮತಃ । ಅಜಾದಿಯಲ್ಲಿ ಪ್ರತ್ಯಯ ಸೇರಿಸುವುದು ಮಾತ್ರ. ಹಲಾದಿಯಲ್ಲಿ ಜಶ್ತ್ವ. ಮಹತ್‌ಶಬ್ದದಂತೇ ರೂಪ. ತೃ-ಧೀಮತಾ-ಧೀಮದ್ಭ್ಯಾಮ್-ಧೀಮದ್ಭಿಃ ಇತ್ಯಾದಿ.

ತಕಾರಾಂತ ಭವತ್‌ಶಬ್ದ. (ಆಗುವವನು)

ಭವತ್‌ಶಬ್ದ ಎರಡು ರೀತಿಯಾಗಿದೆ. ಭಾ ದೀಪ್ತೌ ಧಾತು. ಇದಕ್ಕೆ ಡವತು ಪ್ರತ್ಯಯ. ಡವತು ಎಂಬಲ್ಲಿ ಉಕಾರ ಉಚ್ಚಾರಣಾರ್ಥ. "ಚುಟೂ" ಸೂತ್ರದಿಂದ ಡಕಾರ ಇತ್ತಾಗುತ್ತದೆ. ಡಿತ್ತಾದುದರಿಂದ ಭಾ ಧಾತುವಿನ ಟಿಗೆಲೋಪ. ಭ್+ಅವತ್+ಭವತ್. "ಡಿತ್ವಸಾಮರ್ಥ್ಯಾದಭಸ್ಯಾಪಿ ಟೇರ್ಲೋಪಃ" ಟಿಗೆ ಲೋಪ ಬರಬೇಕಾದರೆ ಭಸಂಜ್ಞಾ ಇರಬೇಕು. ಡವತು ಪ್ರತ್ಯಯ ಸ್ವಾದಿಕಪ್ರತ್ಯಯಾವಧಿಯಲ್ಲಿ ಸೇರಿಲ್ಲ. ಹೇಗೆ ಟಿಲೋಪಹೇಳಿದೆ? ಅಂದರೆ ಡವತುವಿನಲ್ಲಿ ಡಿತ್‌ಮಾಡಿದುದು ವ್ಯರ್ಥವಾಗುತ್ತೆ. ಅದನ್ನು ನಿಮಿತ್ತೀಕರಿಸಿ ಟಿಲೋಪ ಹೇಳುವುದಾದರೆ ಸಫಲವಾಗುತ್ತದೆ. ಡಿತ್ ಮಾಡಿದುದರಿಂದ ಟಿಲೋಪವೆಂದು ಹೇಳಬೇಕು. ಭವತ್ ಉಗಿತ್ತಾದುದರಿಂದ ಧೀಮತ್‌ಶಬ್ದದಂತೇ ಆಗುತ್ತದೆ. ಸುವಿನಲ್ಲಿ "ಅತ್ವಸಂತಸ್ಯ ಚಾಧಾತೋಃ" ಸೂತ್ರದಿಂದ ದೀರ್ಘ. "ಉಗಿದಚಾಂ"-ಸೂತ್ರದಿಂದ ನುಮ್. ಸಂಯೋಗಾಂತಲೋಪ. ಭವಾನ್. ಸರ್ವನಾಮಸ್ಥಾನದಲ್ಲಿ ನುಮ್. ಅನುಸ್ವಾರ, ಪರಸವರ್ಣ. ಭವನ್ತೌ-

ಭವನ್ತಃ ಇತ್ಯಾದಿ. ಇನ್ನೊಂದು ಭವತ್‌ಶಬ್ದ ಭೂಧಾತುವಿನಿಂದ ಆಗುತ್ತದೆ. ಭೂ ಸತ್ತಾಯಾಂ–ಧಾತು. ಶತೃಪ್ರತ್ಯಯ. ಶತೃವಿನಲ್ಲಿ ಅತ್ ಉಳಿಯುತ್ತದೆ. ಭೂ+ಅತ್ ಎಂದಿರುವಾಗ ಮಧ್ಯೇ ಅ ವಿಕರಣ ಬರುತ್ತದೆ, ಭೂ+ಅ+ಅತ್. ಅ।ನಿಮಿತ್ತೀ ಕರಿಸಿ ಗುಣ. ಆವಾದೇಶ. ಭವ್+ಅ+ಅತ್. ಭವ+ಅತ್. "ಅತೋಗುಣೇ" ಸೂತ್ರದಿಂದ ಪರರೂಪ. ಭವತ್. ಇಲ್ಲಿ ಸುಪರವಾದಾಗ ದೀರ್ಘ ಬರುವುದಿಲ್ಲ. ಅತ್ತು ಅಂತವಾದುದಕ್ಕೆ ಹಿಂದಿನ ಸೂತ್ರದಿಂದ ದೀರ್ಘಹೇಳಿದೆ. ಇದು ಅತ್ ಅಂತವಾಗಿದೆ. ಅತ್ ಋಕಾರಾಂತವಾಗಿಲ್ಲ. ಶತೃವಿನಲ್ಲಿ ಋಕಾರ ಇತ್ತಾದುದರಿಂದ ಉಗಿತ್ತಾಗಿದೆ. ನುಮಾದಿಗಳು ಹಿಂದಿನಂತೆ ಬರುತ್ತವೆ. ಭವನ್—ಭವನ್ತೌ—ಭವನ್ತಃ ॥ ದ್ವಿ ಭವನ್ತಂ–ಭವನ್ತೌ–ಭವತಃ ಇತ್ಯಾದಿ.

ತಕಾರಾಂತ ದದತ್‌ಶಬ್ದ +(ಕೊಡುವವನು)

ದದಾತಿ ಇತಿ ದದತ್. ದಾನಮಾಡುವವನು. ಡುದಾಞ್‌ದಾನೇ. ಧಾತು. ಶತೃಪ್ರತ್ಯಯ. ಅತ್‌ಉಳಿಯುತ್ತದೆ. ಈ ಧಾತು ಜುಹೋತ್ಯಾದಿ ಗಣದಲ್ಲಿ ಸೇರಿರುವುದರಿಂದ ಧಾತುವಿಗೆ ದ್ವಿತ್ವಾದಿಗಳು ಬಂದು ದದತ್ ಎಂದಾಗುತ್ತದೆ. ನುಮಾದಿಗಳು ಪ್ರಾಪ್ತವಾದರೆ ಅದಕ್ಕೆ ನಿಷೇಧ ಹೇಳುತ್ತಾನೆ. ಅದಕ್ಕೆ ಮೊದಲು ಅಭ್ಯಸ್ತಸಂಜ್ಞೆ ಹೇಳುತ್ತಾನೆ.

(ಅಭ್ಯಸ್ತಸಂಜ್ಞಾ ಹೇಳುವ ಸೂತ್ರ)

೩೪೬. ಉಭೇ ಅಭ್ಯಸ್ತಮ್ ॥ ೬-೧-೫ ॥

ಷಾಷ್ಠದ್ವಿತ್ವ ಪ್ರಕರಣೇ ಯೇ ದ್ವೇ ವಿಹಿತೇ ತೇ ಉಭೇ ಸಮುದಿತೇ ಅಭ್ಯಸ್ತಸಂಜ್ಞೇ ಸ್ತಃ॥

ದ್ವಿಪದಸೂತ್ರ. "ಏಕಾಜ್ಞೋ ದ್ವೇ ಪ್ರಥಮಸ್ಯ" ಸೂತ್ರದಿಂದ "ದ್ವೇ" ಅನುವೃತ್ತಿ. ದ್ವಿತ್ವ ಎರಡುಕಡೆ ಹೇಳಿದೆ. ಆರನೇ ಅಧ್ಯಾಯದಲ್ಲಿ ಒಂದು ದ್ವಿತ್ವ. ಎಂಟನೇ ಅಧ್ಯಾಯದಲ್ಲಿ ಒಂದುದ್ವಿತ್ವ. ಇಲ್ಲಿ ಆರನೇ ಅಧ್ಯಾಯದಲ್ಲಿ ಹೇಳಿದ ದ್ವಿತ್ವವೇ ಉಪಾದೇಯವಾಗಿದೆ. **ಸೂತ್ರಾರ್ಥ**–ಆರನೇ ಅಧ್ಯಾಯದ ದ್ವಿತ್ವ ಪ್ರಕರಣದಲ್ಲಿ ಯಾವುದು ಎರಡು ಹೇಳಿದೆಯೋ ದ್ವಿತ್ವಹೊಂದಿದ ಆ ಎರಡೂ ಸೇರಿ ಅಭ್ಯಸ್ತವೆಂಬ ಸಂಜ್ಞೆಯನ್ನು ಹೊಂದುತ್ತವೆ. ದದತ್ ಎಂಬಲ್ಲಿ ಆರನೇ ಅಧ್ಯಾಯದಲ್ಲಿ ಹೇಳಿದ "ತ್ರಾ" ಸೂತ್ರದಿಂದ ದ್ವಿತ್ವ ಬಂದಿರುವುದರಿಂದ ಇದಕ್ಕೆ ಅಭ್ಯಸ್ತಸಂಜ್ಞೆ ಬರುತ್ತದೆ.

ಅಭ್ಯಸ್ತಸಂಜ್ಞೆ ಇರುವುದರಿಂದ ನುಮಿಗೆ ನಿಷೇಧವನ್ನು ಮುಂದಿನ ಸೂತ್ರದಿಂದ ಹೇಳುತ್ತಾನೆ.

(ಶತೃಬಂದಾಗ ನುಮ್ ನಿಷೇಧ ಹೇಳುವ ಸೂತ್ರ)

೩೪೭. ನಾಭ್ಯಸ್ತಾಚ್ಛತುಃ ॥ ೭-೧-೭೮ ॥

ಅಭ್ಯಸ್ತಾತ್ಪರಸ್ಯ ಶತುರ್ನುಮ್ ನ। ದದತ್ ದದದ್। ದದತೌ। ದದತಃ ॥

ನ, ಅಭ್ಯಸ್ತಾತ್, ಶತುಃ ॥ ತ್ರಿಪದ ಸೂತ್ರ. "ಇದಿತೋನುಮ್ ಧಾತೋಃ" ಸೂತ್ರದಿಂದ "ನುಮ್" ಅನುವೃತ್ತವಾಗುತ್ತದೆ. ಶತೃಪ್ರತ್ಯಯದ ಷಷ್ಠೀ ಶತುಃ ಗಮ ಬರುವುದಿಲ್ಲ. ಪ್ರಕೃತ "ದದತ್" ಅಭ್ಯಸ್ತ. ಇಲ್ಲಿ ಶತೃಪ್ರತ್ಯಯ ಬಂದಿದೆ ಉಗಿತ್ತಾದುದರಿಂದ (ಋ ಇತ್) ನುಮ್ ಬರುತ್ತಿದ್ದರೆ ಈ ಸೂತ್ರದಿಂದ ನಿಷೇಧ ಹೇಳಿರುವುದರಿಂದ ನುಮ್ ಬರುವುದಿಲ್ಲ. ಪದಾಂತದಲ್ಲಿ ಜಶ್ತ್ವಬಂದರೆ "ವಾವಸಾನೇ" ಸೂತ್ರದಿಂದ ವಿಕಲ್ಪ ಚರ್ತ್ವ. ದದತ್ ದದದ್. ಕೇವಲ ಪ್ರತ್ಯಯವನ್ನು ಸೇರಿಸುವುದು ಮಾತ್ರ. ದದತೌ–ದತಃ ಇತ್ಯಾದಿ. ಭ್ಯಾಮಾದಿಗಳಲ್ಲಿ "ಝಲಾಂ ಜಶೋಂತೇ" ಸೂತ್ರದಿಂದ ಜಶ್ತ್ವ. ದದದ್ಭ್ಯಾಮ್–ದದದ್ಭಿಃ ಇತ್ಯಾದಿ. ಸಪ್ತಮೀ ಸುವಿನಲ್ಲಿ ಜಶ್ತ್ವಬಂದಮೇಲೆ "ಖರಿಚ" ಸೂತ್ರದಿಂದ ಚರ್ ಬಂದರೆ ದದತ್ಸು ಎಂದಾಗುತ್ತದೆ.

ತಕಾರಾಂತ ಜಕ್ಷತ್ ಶಬ್ದ. (ತಿನ್ನುವವ, ಅಥವಾ ನಗುವವನು)

ಜಕ್ಷ=ಭಕ್ಷಹಸನಯೋಃ ಧಾತು. ಶತೃಪ್ರತ್ಯಯ ಬಂದರೆ ಜಕ್ಷತ್ ಎಂದಾಗುತ್ತದೆ. ಇಲ್ಲಿ ಆರನೇ ಅಧ್ಯಾಯದಲ್ಲಿ ಹೇಳಿದ ಸೂತ್ರದಿಂದ ದ್ವಿತ್ವಬಂದಿಲ್ಲ. ಆದುದರಿಂದ "ಉಭೇ ಅಭ್ಯಸ್ತಮ್" ಸೂತ್ರದಿಂದ ಅಭ್ಯಸ್ತಸಂಜ್ಞೆ ಬಾರದಿರುವುದರಿಂದ ಅಧಿಕವಾಗಿ ಈ ಶಬ್ದವೇ ಮೊದಲಾದ ಏಳುಶಬ್ದಗಳಿಗೆ ಅಭ್ಯಸ್ತಸಂಜ್ಞೆ ಹೇಳುತ್ತಾನೆ.

(ಜಕ್ಷ ಮುಂತಾದವುಗಳಿಗೆ ಅಭ್ಯಸ್ತ ಸಂಜ್ಞೆ ಹೇಳುವ ಸೂತ್ರ)

೩೪೮. ಜಕ್ಷಿತ್ಯಾದಯಃ, ಷಟ್ ॥ ೬-೧-೬ ॥

ಷಡ್‌ಧಾತವೋ ಅನ್ಯೇ ಜಕ್ಷಿತಿಶ್ಚ ಸಪ್ತಮು ಏತೇ ಅಭ್ಯಸ್ತಸಂಜ್ಞಾಃ

ಸ್ಯುಃ ॥ ಜಕ್ಷತ್-ಜಕ್ಷದ್ । ಜಕ್ಷತೌ-ಜಕ್ಷತಃ ॥ ಏವಂ ಜಾಗ್ರತ್ । ದರಿದ್ರತ್ । ಶಾಸತ್ । ಚಕಾಸತ್ ॥ ಗುಪ್, ಗುಬ್ । ಗುಪೌ । ಗುಪಃ । ಗುಬ್ಭ್ಯಾಮ್ । ಇತ್ಯಾದಿ.

ದ್ವಿಪದ ಸೂತ್ರ. "ಉಭೇ ಅಭ್ಯಸ್ತಮ್" ಸೂತ್ರದಿಂದ ಅನುವೃತ್ತವಾದ "ಅಭ್ಯಸ್ತ" ಪದವು ಬಹುವಚನಾಂತವಾಗಿ ವಿಪರಿಣತವಾಗುತ್ತದೆ. "ಜಕ್ಷಿತಿಃ ಆದಿಃ ಏಷಾಂತೇ" ಜಕ್ಷಿತ್ಯಾದಯಃ ಇದು ಬಹುವ್ರೀಹಿ ಸಮಾಸ. ಬಹುವ್ರೀಹಿಯಲ್ಲಿ ಅನ್ಯ ಪದಾರ್ಥಕ್ಕೆ ಪ್ರಾಧಾನ್ಯ. ನೀಲವಾದ ಬಟ್ಟೆಯುಳ್ಳವನು ಯಾರೋ ಅವನು ನೀಲಾಂಬರ. ಆತನು ನೀಲ ಬಟ್ಟೆಗಳಿಂದ ಬೇರೆಯಾದವನು. ಇದರಲ್ಲಿ ಎರಡು ವಿಧ. ತದ್ಗುಣ ಸಂವಿಜ್ಞಾನ ಬಹುವ್ರೀಹಿ. ಅತದ್ಗುಣಸಂವಿಜ್ಞಾನ ಬಹುವ್ರೀಹಿ. ಲಂಬವಾದ ಉದರವುಳ್ಳವನು ಲಂಬೋದರ. ಇದು ತದ್ಗುಣಸಂವಿಜ್ಞಾನ ಬಹುವ್ರೀಹಿ ಚಿತ್ರ ಬಣ್ಣಗಳುಳ್ಳ ಹಸುವುಳ್ಳವನು ಚಿತ್ರಗು. ಇದು ಅತದ್ಗುಣ ಸಂವಿಜ್ಞಾನ ಬಹುವ್ರೀಹಿ. ಮೊದಲನೇದರಲ್ಲಿ ವಿಗ್ರಹದಲ್ಲಿರುವ ಪದಗಳಿಗೂ ಕ್ರಿಯಾನ್ವಯ ಇರುತ್ತದೆ. ಲಂಬೋದರನನ್ನು ಕರೆತಾ ಎಂದರೆ ಹೊಟ್ಟೆ ಬಿಟ್ಟು ಆತ ಬರುವುದಿಲ್ಲ. ಆಗಮನಕ್ರಿಯೆಯಲ್ಲಿ ಹೊಟ್ಟೆಗೂ ಅನ್ವಯವಿದೆ. ಎರಡನೇದರಲ್ಲಿ ವಿಗ್ರಹದ ಪದಾರ್ಥಗಳಿಗೆ ಅನ್ವಯವಿಲ್ಲ. ಚಿತ್ರಗುವನ್ನು ಕರೆತಾ ಎಂದರೆ ಗೋಪ ಮಾತ್ರ ಬರುತ್ತಾನೆ. ಅಲ್ಲಿ ಹಸುಗಳು ಬರುವುದಿಲ್ಲ. ಹೀಗೆ ಬಹುವ್ರೀಹಿಯಲ್ಲಿ ಎರಡು ವಿಧ. ಇಲ್ಲಿ ತದ್ಗುಣಸಂವಿಜ್ಞಾನ ಬಹುವ್ರೀಹಿಯನ್ನು ತೆಗೆದುಕೊಂಡರೆ ಜಕ್ಷ್ ಸೇರಿ ಆರು ಆಗಬೇಕಾಗುತ್ತದೆ, ಆದುದರಿಂದ ಅತದ್ಗುಣಸಂವಿಜ್ಞಾನವೆಂದು ಸ್ವೀಕರಿಸಬೇಕು. ಆಗ ಸಮುದಾಯದಲ್ಲಿ ಜಕ್ಷ್ ಸೇರುವುದಿಲ್ಲ. ಅದಕ್ಕೋಸ್ಕರ ಜಕ್ಷ್ ಎಂದು ಒಂದು ಪದ. ಇತ್ಯಾದಯಃ ಎಂದು ಬೇರೊಂದುಪದವೆಂದು ಮಾಡಿಕೊಳ್ಳಬೇಕು. ಇತಿ ಪದದಿಂದ ಹಿಂದಿನ ಜಕ್ಷ್ ತೆಗೆದುಕೊಳ್ಳಬೇಕು. **ಸೂತ್ರಾರ್ಥ**—ಜಕ್ಷ್ ಧಾತು ಅಭ್ಯಸ್ತಸಂಜ್ಞೆ ಹೊಂದುತ್ತದೆ; ಜಕ್ಷ್ ಮುಂತಾದ ಆರು ಧಾತುಗಳು ಅಭ್ಯಸ್ತಸಂಜ್ಞೆಯನ್ನು ಹೊಂದುತ್ತವೆ. ಜಕ್ಷ್ ಮುಂತಾದ ಎನ್ನುವಾಗ ಅತದ್ಗುಣಸಂವಿಜ್ಞಾನ ಬಹುವ್ರೀಹ್ಯಾಶ್ರಯಣದಿಂದ ಜಕ್ಷ್ ಸಮುದಾಯದಲ್ಲಿ ಸೇರುವುದಿಲ್ಲ. ಇತರ ಆರು ಧಾತುಗಳು, ಜಕ್ಷ್ ಧಾತು, ಹೀಗೆ ಏಳು ಧಾತುಗಳು ದ್ವಿತ್ವ ಹೊಂದಿದ್ದರೂ ಅಭ್ಯಸ್ತಸಂಜ್ಞೆಯನ್ನು ಹೊಂದುತ್ತವೆ. ಜಕ್ಷತ್, ಜಾಗ್ರತ್, ದರಿದ್ರತ್, ಚಕಾಸತ್, ಶಾಸತ್, ದೀಧ್ಯತ್, ವೇವ್ಯತ್ ಹೀಗೆ ಏಳು ಶಬ್ದಗಳಿಗೆ ಅಭ್ಯಸ್ತಸಂಜ್ಞೆ ಬರುವುದರಿಂದ ಶತೃ ಉಗಿತ್ತಾದರೂ ಹಿಂದಿನ ಸೂತ್ರದಿಂದ ನಿಷೇಧ ಹೇಳಿರುವುದರಿಂದ ನುಮಾಗಮ ಬರುವುದಿಲ್ಲ. ಸುವಿನಲ್ಲಿ "ಝಲಾಂ ಜಶೋಂತೇ" ಸೂತ್ರದಿಂದ ಜಶ್ತ್ವ ಬಂದಾಗ "ವಾವಸಾನೇ" ಸೂತ್ರದಿಂದ ವಿಕಲ್ಪವಾಗಿ ಚರ್ತ್ವ. ಜಕ್ಷತ್-ಜಕ್ಷದ್. ಮುಂದೆ ಕೇವಲ ಪ್ರತ್ಯಯ ಸೇರಿಸುವುದು ಮಾತ್ರ. ಜಕ್ಷತೌ-ಜಕ್ಷತಃ ಇತ್ಯಾದಿ. ಹೀಗೆ ಜಾಗ್ರತ್ ಮುಂತಾದ ಶಬ್ದಗಳ ರೂಪವನ್ನು ತಿಳಿಯಬೇಕು.

ಪಕಾರಾಂತ. "ಗುಪ್" ಶಬ್ದ. (ರಕ್ಷಿಸುವವನು)

ಗುಪೂ+ರಕ್ಷಣೇ- ಧಾತು. ಕ್ವಿಪ್‌ಪ್ರತ್ಯಯ. ಗುಪ್+ಕ್ವಿಪ್. ಕ್ವಿಪಿನಲ್ಲಿ ಸರ್ವಲೋಪ. ಗುಪ್ ಪಾಂತವಾಗುತ್ತದೆ. ಸುಪರವಾದಾಗ "ಝಲಾಂಜಶೋಂತೇ" ಸೂತ್ರದಿಂದ ಜಶ್ತ್ವ. ಗುಬ್. "ವಾವಸಾನೇ" ಸೂತ್ರದಿಂದ ವಿಕಲ್ಪಚರ್ತ್ವ. ಗುಪ್. ಇನ್ನು ಪ್ರತ್ಯಯ ಸೇರಿಸುವುದು ಮಾತ್ರ. ಗುಪೌ-ಗುಪಃ ಇತ್ಯಾದಿ. ಭ್ಯಾಮಾದಿಯಲ್ಲಿ ಜಶ್ತ್ವ. ಗುಬ್ಭ್ಯಾಮ್-ಗುಬ್ಭಿಃ ಇತ್ಯಾದಿ. ಸಪ್ತಮೀ ಸುವಿನಲ್ಲಿ ಜಶ್ತ್ವ, ಚರ್ತ್ವ-ಗುಪ್‌ಸು.

ಶಕಾರಾಂತ. ತಾದೃಶ್ ಶಬ್ದ. (ಆ ರೀತಿಯವನು)

ಈ ಶಬ್ದದ ವ್ಯುತ್ಪತ್ತಿಯನ್ನು ತೋರಿಸುತ್ತಾನೆ.

(ತ್ಯದಾದಿಗಳು ಇರುವಾಗ ದೃಶಿಗೆ ಕ್ವಿನ್ ಹೇಳುವ ಸೂತ್ರ)

೩೪೯. ತ್ಯದಾದಿಷು ದೃಶೋಽನಾಲೋಚನೇ ಕಞ್ಚ ॥

॥೩-೨-೬೦॥

ತ್ಯದಾದಿಷೂಪಪದೇಷು ಅಜ್ಞಾನಾರ್ಥಾದ್ ದೃಶೇಃ ಕಞ್ ಸ್ಯಾತ್॥ ಚಾತ್ ಕ್ವಿನ್॥

ತ್ಯದಾದಿಷು, ದೃಶಃ, ಅನಾಲೋಚನೇ, ಕಞ್, ಚ ॥ ಐದುಪದಗಳುಳ್ಳ ಸೂತ್ರ. ಹಿಂದೆ ಸ್ಪೃಶೋಽನುದಕೇಕ್ವಿನ್" ಸೂತ್ರವಿದೆ. ಚಕಾರದಿಂದ ಅಲ್ಲಿನ ಕ್ವಿನ್ ಅನುವೃತ್ತವಾಗುತ್ತದೆ. ಇಲ್ಲಿ ಆಲೋಚನ ಶಬ್ದಕ್ಕೆ ಜ್ಞಾನವೆಂದರ್ಥ. ಅನಾಲೋಚನೇ ಎಂದುದರಿಂದ ಜ್ಞಾನಾರ್ಥವನ್ನು ಕೊಡದ ಎಂದರ್ಥ. **ಸೂತ್ರಾರ್ಥ**—ತ್ಯದಾದಿಗಳು ಉಪಪದವಾಗಿರುವಾಗ ಜ್ಞಾನಾರ್ಥವನ್ನು ಕೊಡದಿರುವ ದೃಶ್‌ಧಾತುವಿಗೆ ಕಞ್ ಪ್ರತ್ಯಯವೂ ಕ್ವಿನ್‌ಪ್ರತ್ಯಯವೂ ಬರುತ್ತದೆ. ತ್ಯದ್ ತದ್ ಮುಂತಾದವುಗಳು ಸರ್ವನಾಮಗಣದಲ್ಲಿ ಹೇಳಿವೆ. ಪ್ರಕೃತ ತದ್‌ಶಬ್ದವು ಉಪಪದವಾಗಿರುವಾಗ ದೃಶ್ ಧಾತುವಿಗೆ ಕ್ವಿನ್ ಬಂದರೆ ತದ್+ದೃಶ್+ಕ್ವಿನ್ ಎಂತಾಗುತ್ತದೆ. ಹಿಂದಿನಂತೆ ಕ್ವಿನಿನಲ್ಲಿ ಸರ್ವಲೋಪ. ತದ್+ದೃಶ್ ಎಂದಿರುವಾಗ ಆತ್ವ ಹೇಳುತ್ತಾನೆ.

(ದೃಶಾದಿಗಳು ಪರವಾದಾಗ ಆತ್ವ ಹೇಳುವ ಸೂತ್ರ)

೩೫೦. ಆ ಸರ್ವನಾಮ್ನಃ ॥ ೬-೩-೯೧ ॥

ಸರ್ವನಾಮ್ನ ಆಕಾರೋಽನ್ತಾದೇಶಃ ಸ್ಯಾತ್ ದೃಗ್‌ದೃಶವತುಷು । ತಾದೃಕ್, ತಾದೃಗ್ । ತಾದೃಶಾ । ತಾದೃಶಃ । ತಾದೃಗ್ಭ್ಯಾಮ್ ॥ ವ್ರಶ್ಚೇತಿ ಷಃ । ಜಶ್ತ್ವ ಚರ್ತ್ವೇ । ವಿಟ್-ವಿಡ್ । ವಿಶೌ । ವಿಶಃ । ವಿಡ್ಭ್ಯಾಮ್ ॥

ದ್ವಿಪದ ಸೂತ್ರ. "ದೃಗ್ ದೃಶವತುಷು" ಸೂತ್ರಾನುವೃತ್ತವಾಗುತ್ತದೆ. "ಆ" ವಿಭಕ್ತಿಯಿಲ್ಲದೆ ನಿರ್ದೇಶ ಮಾಡಿರುತ್ತಾನೆ. **ಸೂತ್ರಾರ್ಥ**—ದೃಗ್, ದೃಶಶಬ್ದಗಳೂ ವತುಪ್ರತ್ಯಯವೂ ಪರದಲ್ಲಿರುವಾಗ ಸರ್ವನಾಮಪದಗಳಿಗೆ ಆಕಾರ ಅಂತಾದೇಶವಾಗಿ ಬರುತ್ತದೆ "ಅಲೋಂತ್ಯಸ್ಯ" ಪರಿಭಾಷೆ ಬರುವುದರಿಂದ ಅಂತಾದೇಶವೆಂದು ಲಬ್ಧವಾಗಿದೆ. ತದ್ + ದೃಶ್ ಎಂದಿರುವಾಗ ತದ್ ಸರ್ವನಾಮ. ಅಲ್ಲಿದಕಾರಕ್ಕೆ ಆಕಾರ ಬಂದರೆ ತ+ಅ+ದೃಶ್ ಆಗುತ್ತದೆ. ಸವರ್ಣದೀರ್ಘ. ತಾದೃಶ್. ಇದಕ್ಕೆ ಸುಪರವಾದಾಗ "ಹಲ್‌ಜ್ಯಾಭ್ಯೋ"—ಸೂತ್ರದಿಂದ ಸುಲೋಪ. ಕ್ವಿನ್ ಪ್ರತ್ಯಯಾಂತವಾದುದರಿಂದ "ಕ್ವಿನ್ ಪ್ರತ್ಯಯಸ್ಯ ಕುಃ" ಸೂತ್ರದಿಂದ ಕುತ್ವ ಪ್ರಾಪ್ತವಾದರೆ ಅದು ಅಸಿದ್ಧವಾದುದರಿಂದ "ವ್ರಶ್ಚಭೃಜ್ಜಸೃ"—(ಸೂ. 309) ಸೂತ್ರದಿಂದ ಶಕಾರಕ್ಕೆ ಷಕಾರಾದೇಶ. ತಾದೃಷ್. "ಝಲಾಂ ಜಶೋಽನ್ತೇ" ಸೂತ್ರದಿಂದ ಷಕಾರಕ್ಕೆ ಡಕಾರ. ತಾದೃಡ್. ಆಮೇಲೆ "ಕ್ವಿನ್‌ಪ್ರ—" ಸೂತ್ರದಿಂದ ಕುತ್ವ. ತಾದೃಗ್. "ವಾವಸಾನೇ" ಸೂತ್ರದಿಂದ ವಿಕಲ್ಪ ಚರ್ತ್ವ. ತಾದೃಕ್. ಹೀಗೆ ಎರಡುರೂಪ. ಇನ್ನು ಪ್ರತ್ಯಯಸೇರಿಸುವುದು ಮಾತ್ರ. ತಾದೃಶಾ—ತಾದೃಶ್+ಟಾ ಇತ್ಯಾದಿ. ಭ್ಯಾಮಾದಿಗಳಲ್ಲಿ ಹಿಂದಿನಂತೆ ಶಕಾರಕ್ಕೆ "ವ್ರಶ್ಚ—" ಸೂತ್ರದಿಂದ ಷತ್ವ. ಷಕಾರಕ್ಕೆ ಜಶ್ತ್ವದಿಂದ ಡಕಾರಾದೇಶ. ಡಕಾರಕ್ಕೆ ಕುತ್ವದಿಂದ ಗಕಾರ. ತಾದೃಗ್ಭ್ಯಾಮ್—ತಾದೃಗ್+ಭ್ಯಃ ಇತ್ಯಾದಿ. ಸಪ್ತಮೀಸುವಿನಲ್ಲಿ ತಾದೃಗ್+ಸು ಎಂದಾದಾಗ "ಖರಿಚ" ಸೂತ್ರದಿಂದ ಚರ್ತ್ವ. ತಾದೃಕ್+ಸು. "ಆದೇಶಪ್ರತ್ಯಯಯೋಃ" ಸೂತ್ರದಿಂದ ಸಕಾರಕ್ಕೆ ಷಕಾರಾದೇಶ. ಕಷಸೇರಿದರೆ ಕ್ಷ ಆಗುತ್ತದೆ. ತಾದೃಕ್ಷು.

ಶಕಾರಾಂತ "ವಿಶ್" ಶಬ್ದ. (ವೈಶ್ಯ)

ವಿಶ್+ಸ್ ಎಂದಿರುವಾಗ "ಹಲ್‌ಜ್ಯಾಭ್ಯೋ—" ಸೂತ್ರದಿಂದ ಸುಲೋಪ.

ಪದದ ಕೊನೆಯಲ್ಲಿರುವುದರಿಂದ "ವ್ರಶ್ಚಭೃಜ್ಜ—" (ಸೂ. 309) ಸೂತ್ರದಿಂದ ಅದಕ್ಕೆ ಷಕಾರ. ವಿಷ್. "ಝಲಾಂ ಜಶೋಽನ್ತೇ" ಸೂತ್ರದಿಂದ ಷಕಾರಕ್ಕೆ ಡಕಾರಾದೇಶ. ವಿಡ್. "ವಾವಸಾನೇ" ಸೂತ್ರದಿಂದ ವಿಕಲ್ಪವಾಗಿ ಚರ್ ಬಂದರೆ ವಿಟ್. ಅಜಾದಿ ಪ್ರತ್ಯಯ ಪರವಾದಾಗ ಇತರ ಕಾರ್ಯವಿಲ್ಲ. ವಿಶೌ—ವಿಶಃ ಇತ್ಯಾದಿ. ಭ್ಯಾಮಾದಿಗಳಲ್ಲಿ ಷತ್ವ, ಜಶ್ತ್ವ ಹಿಂದಿನಂತೇ ತಿಳಿಯಬೇಕು. ವಿಡ್ಭ್ಯಾಮ್ ಇತ್ಯಾದಿ. ಸಪ್ತಮೀ ಸುವಿನಲ್ಲಿ ಷತ್ವ, ಜಶ್ತ್ವ ಬಂದಾಗ ವಿಡ್‌ಸು ಎಂದಿರುವಾಗ "ಡಃ ಸಿ ಧುಟ್" ಸೂತ್ರದಿಂದ ಡಕಾರದ ಪರದ ಸಕಾರಕ್ಕೆ ಧುಡಾಗನು. ವಿಡ್ಧ್‌ಸು. "ಖರಿಚ" ಸೂತ್ರ ಎರಡುಬಾರಿ ಬಂದರೆ ವಿಡ್ತ್‌ಸು. ಎಂದಾಗುತ್ತದೆ. ಧುಡಾಗಮ ಅನಿತ್ಯವಾದುದರಿಂದ ಬಾರದಿದ್ದರೆ ವಿಟ್‌ಸು. ಎಂದಾಗುತ್ತದೆ.

ಶಕಾರಾಂತ "ನಶ್" ಶಬ್ದ. (ನಾಶಹೊಂದುವವನು)

ಣಶ=ಅದರ್ಶನೇ ಧಾತು. ಕ್ವಿಪ್‌ಪ್ರತ್ಯಯ. ನಶ್ ರೂಪವಾಗುತ್ತದೆ. ಸುಪರವಾದಾಗ "ಹಲ್‌ಜ್ಯಾಭ್ಯೋ—" ಸೂತ್ರದಿಂದ ಸುಲೋಪ. ನಶ್ ಎಂದಿರುವಾಗ ವಿಕಲ್ಪವಾಗಿ ಕುತ್ವ ಹೇಳುತ್ತಾನೆ.

(ನಶಿಗೆ ಕುತ್ವ ಹೇಳುವ ಸೂತ್ರ)

೩೫೧. ನಶೇರ್ವಾ । ೮-೨-೬೩ ॥

ನಶೇಃ ಕವರ್ಗೋಽನ್ತಾದೇಶೋ ವಾ ಪದಾನ್ತೇ॥ ಕ್ವಿನ್. ನಗ್. ನಟ್-ನಡ್। ನಶೌ। ನಶಃ। ನಗ್ಭ್ಯಾಮ್-ನಡ್ಭ್ಯಾಮ್॥

ನಶೇಃ, ವಾ॥ ದ್ವಿಪದಸೂತ್ರ. "ಕ್ವಿನ್‌ಪ್ರತ್ಯಯಸ್ಯ ಕುಃ" ಸೂತ್ರದಿಂದ "ಕುಃ" "ಸ್ಕೋಃ ಸಂಯೋ—" ಸೂತ್ರದಿಂದ "ಅನ್ತೇ" ಪದಗಳು ಅನುವೃತ್ತವಾಗುತ್ತವೆ. "ಪದಸ್ಯ" ಅಧಿಕಾರ. **ಸೂತ್ರಾರ್ಥ**—ನಶಿಗೆ ಪದಾನ್ತದಲ್ಲಿ ಕುತ್ವ ಬರುತ್ತದೆ. "ಅಲೋಂತ್ಯಸ್ಯ" ಸೂತ್ರದಿಂದ ನಶಿನ ಅಂತವಾದ ಶಕಾರಕ್ಕೆ ಕುತ್ವ ಬರುತ್ತದೆ. ಶಕಾರಕ್ಕೆ ಸ್ಥಾನಸಾಮ್ಯದಿಂದ ಖಕಾರ ಬಂದರೆ "ಝಲಾಂ ಜಶೋಽನ್ತೇ" ಸೂತ್ರದಿಂದ ಅದಕ್ಕೆ ಗಕಾರಾದೇಶ. "ವಾವಸಾನೇ" ಎಂಬುದರಿಂದ ಅದಕ್ಕೆ ವಿಕಲ್ಪವಾಗಿ ಚರ್ತ್ವ ಬಂದರೆ ನಕ್. ನಗ್. ಕುತ್ವವಿಕಲ್ಪವಾದುದರಿಂದ ಹಿಂದಿನಂತೆ "ವ್ರಶ್ಚಭೃಜ್ಜ—" ಸೂತ್ರದಿಂದ ಶಕಾರಕ್ಕೆ ಷಕಾರಬಂದು ಅದಕ್ಕೆ ಜಶ್ತ್ವ ಚರ್ತ್ವಬಂದರೆ ನಟ್-ನಡ್ ಎಂದು ಎರಡು ರೂಪಗಳಾಗುತ್ತವೆ. ಅಜಾದಿಯಲ್ಲಿ ವಿಶೇಷಕಾರ್ಯವಿಲ್ಲ. ನಶೌ—ನಶಃ ಇತ್ಯಾದಿ.

ಭ್ಯಾಮಾದಿಗಳಲ್ಲಿ ಪದಸಂಜ್ಞೆಯಿರುವುದರಿಂದ "ನಶೇರ್ವಾ" ಸೂತ್ರದಿಂದ ವಿಕಲ್ಪವಾಗಿ ಕುತ್ವ. ನಗ್ಭ್ಯಾಮ್. ಬಾರದಿದ್ದ ಪಕ್ಷ ಹಿಂದಿನಂತೆ ಶಕಾರಕ್ಕೆ "ವ್ರಶ್ಚ—" ಸೂತ್ರದಿಂದ ಷತ್ವಬಂದು ಅದಕ್ಕೆ ಜಶ್ತ್ವಬಂದರೆ ನಡ್ಭ್ಯಾಮ್ ಎಂದು ಎರಡೆರಡು ರೂಪಗಳಾಗುತ್ತವೆ. ಸಪ್ತಮೀ ಸುವಿನಲ್ಲಿ ಕುತ್ವಬಂದಾಗ ನಕ್+ಸು. ನಕ್+ಷು. ನಷ್ಟು ಎಂದೂ ಷತ್ವಬಂದು ಜಶ್ತ್ವಬಂದಾಗ ನಡ್+ಸು ಎಂದಿರುವಾಗ ವಿಕಲ್ಪವಾಗಿ ಧುಡ್ ಬಂದು. "ಖರಿಚ" ಸೂತ್ರದಿಂದ ಚರ್ತ್ವಬಂದರೆ ನಟ್ತ್ಸು ಎಂದೂ ಧುಟ್ ಬಾರದಿದ್ದರೆ ನಡ್ಸು ಎಂದೂ ಮೂರು ರೂಪಗಳಾಗುತ್ತವೆ.

ಶಕಾರಾಂತ ಘೃತಸ್ಪೃಶ್ ಶಬ್ದ. (ತುಪ್ಪ ಮುಟ್ಟುವನನು)

(ಸ್ಪೃಶ್ ಧಾತುವಿಗೆ ಕ್ವಿನ್ ಹೇಳುವ ಸೂತ್ರ)

೩೫೨. ಸ್ಪೃಶೋऽನುದಕೇ ಕ್ವಿನ್ ॥ ೩-೨-೫೮ ॥

ಅನುದಕೇ ಸುಪ್ಯುಪಪದೇ ಸ್ಪೃಶೇಃ ಕ್ವಿನ್ ॥ ಘೃತಸ್ಪೃಕ್, ಘೃತಸ್ಪೃಗ್ । ಘೃತಸ್ಪೃಶೌ–ಘೃತಸ್ಪೃಶಃ ॥ ದಧೃಗ್–ದಧೃಕ್ । ದಧೃಷೌ । ದಧೃಗ್ಭ್ಯಾಮ್ ॥ ರತ್ನಮುಟ್–ರತ್ನಮುಡ್ । ರತ್ನಮುಷೌ । ರತ್ನಮುಡ್ಭ್ಯಾಮ್ ॥ ಷಟ್, ಷಡ್ । ಷಡ್ಭಿಃ । ಷಡ್ಭ್ಯಃ । ಷಣ್ಣಾಮ್ । ಷಟ್ತ್ಸು, ಷಟ್ಸು ॥

ಸ್ಪೃಶಃ, ಅನುದಕೇ, ಕ್ವಿನ್ ॥ ತ್ರಿಪದ ಸೂತ್ರ. "ಸುಸಿ ಸ್ಥಃ" ಸೂತ್ರದಿಂದ ಸುಪಿ ಅನುವೃತ್ತಿ. ಪ್ರತ್ಯಯವಾದುದರಿಂದ ತದಂತವನ್ನು ತೆಗೆದುಕೊಳ್ಳಬೇಕು. "ನ ಉದಕಂ ಅನುದಕಂ" ತಸ್ಮಿನ್ ಅನುದಕೇ. **ಸೂತ್ರಾರ್ಥ**—ಉದಕ ಶಬ್ದ ಭಿನ್ನವಾದ ಸುಬಂತ ಪದ ಉಪಪದವಾಗಿರುವಾಗ ಸ್ಪೃಶ್ ಧಾತುವಿಗೆ ಕ್ವಿನ್ ಪ್ರತ್ಯಯ ಬರುತ್ತದೆ. ಘೃತಂಸ್ಪೃಶತಿ (ತುಪ್ಪಮುಟ್ಟುತ್ತಾನೆ) ಎಂಬರ್ಥದಲ್ಲಿ ಘೃತ ಎಂಬ ಪದ ಉಪಪದವಾಗಿರುವಾಗ ಸ್ಪೃಶ್ ಧಾತುವಿಗೆ ಕ್ವಿನ್. ಘೃತಸ್ಪೃಶ್+ಕ್ವಿನ್. ಹಿಂದೆ ಹೇಳಿದಂತೆ (ಸೂ. 304) ಕ್ವಿನ್ನಿನಲ್ಲಿ ಸರ್ವವೂ ಲೋಪ ಹೊಂದುತ್ತವೆ. ಸು ಪರವಾದಾಗ "ಹಲ್ಙ್ಯಾಭ್ಯೋ–" ಸೂತ್ರದಿಂದ ಸುವಿಗೆ ಲೋಪ. ಕ್ವಿನ್ ಪ್ರತ್ಯಯ ಹೊಂದುವುದರಿಂದ "ಕ್ವಿನ್ ಪ್ರತ್ಯಯಸ್ಯ ಕುಃ" ಸೂತ್ರದಿಂದ ಕುತ್ವ. ಘೃತಸ್ಪೃಕ್. (ಮಹಾಪ್ರಾಣ ನಾಮ್ಯದಿಂದ ಖಕಾರ) ಪದಾಂತದಲ್ಲಿ ಜಶ್ತ್ವ. ಘೃತಸ್ಪೃಗ್. "ವಾವಸಾನೇ" ವಿಕಲ್ಪ ಚರ್ತ್ವ. ಘೃತಸ್ಪೃಕ್. ಅಜಾದಿಯಲ್ಲಿ ಪ್ರತ್ಯಯ ಸೇರಿಸುವುದು ಮಾತ್ರ.

ಘೃತಸ್ಪೃಶೌ–ಘೃತಸ್ಪೃಶಃ ಇತ್ಯಾದಿ. ಭ್ಯಾಮಾದಿಗಳಲ್ಲಿ ಕುತ್ವ. ಜಶ್ತ್ವ. ಘೃತಸ್ಪೃಗ್ಭ್ಯಾಮ್–ಘೃತಸ್ಪೃಡ್ಭಿಃ ಇತ್ಯಾದಿ. ಸಪ್ತಮೀ ಸುವಿನಲ್ಲಿ ಘೃತಸ್ಪೃಕ್ಷು.

ಇತಿ ಶಾಂತಾಃ

ಷಕಾರಾಂತ ದಧೃಷ್ ಶಬ್ದ. (ಧರ್ಷಣ ಮಾಡುವವನು, ಉದ್ಧತ)

"ಞಿಧೃಷಾ ಪ್ರಾಗಲ್ಭ್ಯೇ" ಧಾತು. ಇದಕ್ಕೆ "ಋತ್ವಿಕ್–" (ಸೂ 303) ಸೂತ್ರದಿಂದ ಕ್ವಿನ್ ಪ್ರತ್ಯಯ, ದ್ವಿತ್ವ, ಅಂತೋದಾತ್ತಸ್ವರ, ಇವುಗಳು ನಿಪಾತಿತವಾಗಿವೆ. ದಧೃಷ್ ಎಂದಾಗುತ್ತದೆ. ಸು ಪರವಾದಾಗ "ಝಲಾಂ ಜಶೋಂತೇ" ಸೂತ್ರದಿಂದ ಷಕಾರಕ್ಕೆ ಡಕಾರ. "ಕ್ವಿನ್ ಪ್ರತ್ಯಯಸ್ಯ ಕುಃ" ಸೂತ್ರದಿಂದ. ಡಕಾರಕ್ಕೆ ಗಕಾರಾದೇಶ. "ವಾವಸಾನೇ" ಸೂತ್ರದಿಂದ ವಿಕಲ್ಪ ಚರ್ತ್ವ. ದಧೃಕ್–ದಧೃಗ್–ದಧೃಕ್ಷೌ–ದಧೃಕ್ಷಃ ॥ ಇತ್ಯಾದಿ. ಭ್ಯಾಮಾದಿಯಲ್ಲಿ ದಧೃಗ್ಭ್ಯಾಮ್. ಇತ್ಯಾದಿ. ಸಪ್ತಮೀ ಸುವಿನಲ್ಲಿ ದಧೃಕ್ಷು ಎಂದಾಗುತ್ತದೆ.

ಷಕಾರಾಂತ "ರತ್ನಮುಷ್" ಶಬ್ದ. (ರತ್ನಕದಿಯುವನನು)

ರತ್ನಂ ಮುಷ್ಣಾತಿ ಇತಿ ರತ್ನಮುಟ್. (ರತ್ನವನ್ನು ಕದಿಯುತ್ತಾನೆ) ಮುಷ ಸ್ತೇಯೇ ಧಾತು. ಕ್ವಿಪ್ ಪ್ರತ್ಯಯ. ರತ್ನಮುಷ್ ಶಬ್ದ. ಸುಪರವಾದಾಗ "ಹಲ್ಙ್ಯಾಭ್ಯೋ"–ಸೂತ್ರದಿಂದ ಅದಕ್ಕೆ ಲೋಪ. "ಝಲಾಂ ಜಶೋಂತೇ" ಸೂತ್ರದಿಂದ ಷಕಾರಕ್ಕೆ ಜಶ್ತ್ವ. "ವಾವಸಾನೇ" ವಿಕಲ್ಪಚರ್ತ್ವ. ರತ್ನಮುಟ್–ರತ್ನಮುಡ್. ಅಜಾದಿಯಲ್ಲಿ ಕಾರ್ಯವಿಲ್ಲ. ಹಲಾದಿಯಲ್ಲಿ ಜಶ್ತ್ವ. ರತ್ನಮುಡ್ಭ್ಯಾಮ್ ಇತ್ಯಾದಿ.

ಷಕಾರಾಂತ ಷಷ್ ಶಬ್ದ. (ಆರು)

ಬಹುತ್ವಸಂಖ್ಯಾವಾಚಿಯಾದುದರಿಂದ ನಿತ್ಯಬಹುವಚನಾಂತ. ಷಾಂತಶಬ್ದವಾದುದರಿಂದ "ಷ್ಣಾಂತಾ ಷಟ್" ಸೂತ್ರದಿಂದ ಇದಕ್ಕೆ ಷಟ್ ಎಂಬ ಸಂಜ್ಞೆ ಬರುತ್ತದೆ. ಷಷ್+ಜಸ್. ಷಷ್+ಶಸ್ ಎಂದಿರುವಾಗ "ಷಡ್ಭ್ಯೋಲುಕ್"

ಸೂತ್ರದಿಂದ ಜಸ್‌ಶಸ್‌ಗಳಿಗೆ ಲುಕ್ ಬರುತ್ತದೆ. ಆಗ ಷಷ್ ಎಂದೇ ಉಳಿಯುತ್ತದೆ. ಪದಾಂತದಲ್ಲಿ ಷಕಾರವಿರುವುದರಿಂದ " ಝಲಾಂಜಶೋಂತೇ " ಸೂತ್ರದಿಂದ ಜಶ್ತ್ವ ಬಂದರೆ ಷಡ್. " ವಾವಸಾನೇ " ವಿಕಲ್ಪಚರ್ತ್ವ. ಷಟ್. ಭಿಸ್, ಭ್ಯಸ್ ಪರವಾದಾಗ ಪದಸಂಜ್ಞೆಯಿರುವುದರಿಂದ ಹಿಂದೆ ಹೇಳಿದಂತೆ ಜಶ್ತ್ವ. ಷಡ್ಭಿಃ । ಷಡ್ಭ್ಯಃ । ಷಡ್ಭ್ಯಃ । ಷಷ್+ಆಮ್ ಎಂದಿರುವಾಗ ಷಟ್ ಸಂಜ್ಞೆಯಿರುವುದರಿಂದ " ಷಟ್ ಚತುರ್ಭ್ಯಶ್ಚ " ಸೂತ್ರದಿಂದ ಆಮಿಗೆ ನುಟ್‌ಆಗಮ. ಟಿತ್ತಾದುದರಿಂದ ಆದ್ಯವಯವ. ಷಷ್+ನಾಮ್. ಈಗ ಹಲಾದಿಪ್ರತ್ಯಯವಿರುವುದರಿಂದ ಪದಸಂಜ್ಞೆ ಬರುತ್ತದೆ, ಆಗ ಜಶ್ತ್ವ. ಷಡ್+ನಾಮ್. "ಪ್ರತ್ಯಯೇಭಾಷಾಯಾಂ ನಿತ್ಯಂ" ವಾರ್ತಿಕದಿಂದ ಡಕಾರಕ್ಕೆ ಅನುನಾಸಿಕ ಣಕಾರ. ನಾಮಿನ ನಕಾರಕ್ಕೆ ಟವರ್ಗದ ಯೋಗ ಏರುವುದರಿಂದ " ಷ್ಟುನಾ ಷ್ಟುಃ " ಸೂತ್ರದಿಂದ ಷ್ಟುತ್ವಬಂದರೆ ಷಣ್ + ನಾಮ್ + ಷಣ್ಣಾಮ್. ಷಷ್ + ಸು ಎಂದಿರುವಾಗ ಜಶ್ತ್ವ. ಷಡ್ + ಸು. " ಡಃ ಸಿ ಧುಟ್ " ಸೂತ್ರದಿಂದ ವಿಕಲ್ಪವಾಗಿ ಸಕಾರಕ್ಕೆ ಧುಟ್. ಷಡ್+ಧ್‌ಸು. "ಖರಿಚ" ಸೂತ್ರ ಎರಡುಸಲ ಬಂದು ಷಟ್‌ತ್‌ಸು, ಧುಟ್ ಬಾರದಿದ್ದರೆ ಷಟ್‌ಸು.

ಷಕಾರಾಂತ "ಪಿಪಠಿಷ್" ಶಬ್ದ. (ಓದಲು ಬಯಸುವನನ್ನು)

ಪಠಿತುಂ ಇಚ್ಛತಿ (ಓದಲು ಬಯಸುತ್ತಾನೆ) ಎಂದು ಅರ್ಥವಿವಕ್ಷಾಮಾಡಿದಾಗ ಪಠ್‌ಧಾತುವಿಗೆ ಸನ್‌ಪ್ರತ್ಯಯ ಬಂದು ಪಿಪಠಿಷ್ ಎಂದಾಗಿದೆ. ಇದಕ್ಕೆ ಸುಪರವಾದಾಗ "ಹಲ್‌ಙ್ಯಾಭ್ಭ್ಯೋ—"ಸೂತ್ರದಿಂದ ಅದಕ್ಕೆ ಲೋಪ. ಈಗ ಪದಾಂತದಲ್ಲಿ ಇಕಿಗೆ ದೀರ್ಘ ಹೇಳುತ್ತಾನೆ.

(ಧಾತುವಿನ ಉಪಧೆ ಇಕ್ಕಿಗೆ ದೀರ್ಘಹೇಳುವ ಸೂತ್ರ)

೩೫೩. ವೋರುಪಧಾಯಾ ದೀರ್ಘ ಇಕಃ॥ ಲ-೨-೭೬॥

ರೇಫವಾಂತಯೋರ್ಧಾತ್ವೋರುಪಧಾಯಾ ಇಕೋ ದೀರ್ಘಃ ಪದಾಂತೇ॥ ಪಿಪಠೀಃ। ಪಿಪಠಿಷಾ। ಪಿಪಠೀರ್ಭ್ಯಾಮ್॥

ವೋಃ, ಉಪಧಾಯಾಃ, ದೀರ್ಘಃ, ಇಕಃ॥ ನಾಲ್ಕು ಪದಗಳುಳ್ಳ ಸೂತ್ರ. "ರ್‌ಚವ್‌ಚ" ವೌ. ತಯೋಃ. ವೋಃ. "ಸಿಪಿಧಾತೋರುರ್ವಾ" ಸೂತ್ರದಿಂದ "ಧಾತೋಃ" ಅನುವೃತ್ತಿ. "ವೋಃ" ಧಾತುವಿಗೆ ವಿಶೇಷಣವಾದುದರಿಂದ ತದಂತಲಾಭ. "ಪದಸ್ಯ" ಅಧಿಕಾರ. "ಸ್ಯೋಃಸಂಯೋ"—ಸೂತ್ರದಿಂದ " ಅಂತೇ " ಅನುವೃತ್ತಿ.

ಸೂತ್ರಾರ್ಥ—ರೇಫಾಂತ, ಮತ್ತು ಷಕಾರಾಂತ ಧಾತುವಿನ ಉಪಧೆಯಾದ ಇಕ್ಕಿಗೆ ಪದಾಂತದಲ್ಲಿ ದೀರ್ಘ ಬರುತ್ತದೆ. ಪಿಪಠಿಷ್ ಎಂಬಲ್ಲಿ " ಆದೇಶ ಪ್ರತ್ಯಯಯೋಃ " ಸೂತ್ರದಿಂದ ಸಕಾರಕ್ಕೆ ಷಕಾರಬಂದಿರುತ್ತದೆ. " ಸಸಜುಷೋರುಃ " ಸೂತ್ರದಿಂದ ಈ ಷತ್ವವು " ಪೂರ್ವತ್ರಾಸಿದ್ಧಮ್" ಸೂತ್ರದಿಂದ ಅಸಿದ್ಧವಾಗುತ್ತದೆ. ಆಗ ಸಕಾರ ವಿದ್ದಂತೇ ಆಗುವುದರಿಂದ ಪಿಪಠಿಸ್ ಎಂಬಲ್ಲಿ ಪದಾಂತ ಸಕಾರವಿರುವುದರಿಂದ ಅದಕ್ಕೆ ರುತ್ವ ಬರುತ್ತದೆ. ಪಿಪಠಿರ್. ಈಗ ರೇಫಾಂತಧಾತು ಪಿಪಠಿರ್. ಇದರ ಉಪಧೆಯಾದ ಇಕ್ಕೆಂದರೆ ಶಕಾರದ ಮೇಲಿರುವ ಇಕಾರ. ಇದಕ್ಕೆ ದೀರ್ಘಬಂದರೆ ಪಿಪಠೀರ್. ಆಗುತ್ತದೆ. "ಖರವಸಾನಯೋಃ—" ಸೂತ್ರದಿಂದ ರುವಿನ ರೇಫಕ್ಕೆ ವಿಸರ್ಗ. ಪಿಪಠೀಃ. ಅಜಾದಿಯಲ್ಲಿ ವಿಶೇಷವಿಲ್ಲ. ಪಿಪಠಿಷೌ। ಪಿಪಠಿಷಃ॥ ದ್ವಿ.–ಪಿಪಠಿಷಂ। ಪಿಪಠಿಷೌ। ಪಿಪಠಿಷಃ॥ ತೃ–ಪಿಪಠಿಷಾ। ಪಿಪಠಿಷ್ + ಭ್ಯಾಮ್ ಎಂದಿರುವಾಗ ಹಿಂದಿನಂತೆ ಷಕಾರ ಅಸಿದ್ಧವಾದುದರಿಂದ ಸಕಾರಕ್ಕೆ ರುತ್ವ. " ವೋರುಪಧಾಯಾಃ"—ಸೂತ್ರದಿಂದ ಉಪಧಾ ಇಕ್ಕಿಗೆ ದೀರ್ಘ. ಪಿಪಠೀರ್ಭ್ಯಾಮ್। ಪಿಷಠೀರ್ಭಿಃ॥ ಚ। ಪಿಪಠಿಷೇ ಪಿಪಠೀರ್ಭ್ಯಾಮ್। ಪಿಪಠೀರ್ಭ್ಯಃ॥ ಪಂ–ಪಿಪಠಿಷಃ। ಪೀಪಠೀರ್ಭ್ಯಾಮ್। ಪಿಪಠೀರ್ಭ್ಯಃ॥ ಷ–ಪಿಪಠಿಷಃ। ಪಿಪಠಿಷೋಃ। ಪಿಪಠಿಷಾಮ್॥ ಸ–ಪಿಪಠಿಷಿ। ಪಿಪಠಿಷೋಃ ಪಿಪಠಿಷ್ + ಸು ಎಂದಿರುವಾಗ ಹಿಂದಿನಂತೆ ಷಕಾರ ಅಸಿದ್ಧವಾದುದರಿಂದ ಸಕಾರಕ್ಕೆ ರುತ್ವ. ಪಿಪಠಿರ್+ಸು. ಉಪಧೆಗೆ ದೀರ್ಘ. ಪಿಪಠೀರ್ + ಸು. ಸುಪ್‌ಪರವಾದಾಗ ರುವಿಗೆ ಮಾತ್ರವಿಸರ್ಗವೆಂದುದರಿಂದ "ರೋಃಸುಪಿ" (ಸೂ 270) ಸೂತ್ರದಿಂದ ರೇಫಕ್ಕೆ ವಿಸರ್ಗ. ಪಿಪಠೀಃ+ಸು. "ವಾಶರಿ" ಸೂತ್ರದಿಂದ ವಿಸರ್ಗಕ್ಕೆ ವಿಸರ್ಗವೇ ಬಂದರೆ ಪಿಪಠೀಃಸು ಎಂದಿರುವಾಗ, "ವಿಸರ್ಜನೀಯಸ್ಯ ಸಃ" ಸೂತ್ರದಿಂದ ವಿಸರ್ಗಕ್ಕೆ ಸಕಾರಾದೇಶ ಬಂದರೆ ಪಿಪಠೀಸ್‌ಸು, ಎಂದಿರುವಾಗಲೂ ಸುವಿನ ಸಕಾರಕ್ಕೆ ಷತ್ವ ಹೇಳುತ್ತಾನೆ.

(ನುಮಾದಿವ್ಯವಧಾನವಿರುವಾಗ ಸಕಾರಕ್ಕೆ ಷತ್ವ ಹೇಳುವ ಸೂತ್ರ)

೩೫೪. ನುಮ್‌ವಿಸರ್ಜನೀಯ ಶರ್ವ್ಯವಾಯೇಪಿ ॥ ಲ-೩-೫೮ ॥

ಏತೈಃ ಪ್ರತ್ಯೇಕಂ ವ್ಯವಧಾನೇಪಿ ಇಣ್‌ಕುಭ್ಯಾಂ ಪರಸ್ಯ ಸಸ್ಯ ಮೂರ್ಧನ್ಯಾದೇಶಃ ॥ ಷ್ಟುತ್ವೇನ ಪೂರ್ವಸ್ಯ ಷಃ । ಪಿಪಠೀಷ್ಸು, ಪಿಪಠೀಃಷು । ಚಿಕೀಃ ಚಿಕೀರ್ಷೌ । ಚಿಕೀರ್ಷಃ । ಚಿಕೀರ್‌ಭ್ಯಾಮ್। ಚಿಕೀರ್ಷು ॥

ನುಮ್, ವಿಸರ್ಜನೀಯ, ಶರ್, ವ್ಯವಾಯೇ ಅಪಿ ॥ ದ್ವಿಪದಸೂತ್ರ. "ಇಣ್ಕೋಃ" "ಅಪದಾಂತಸ್ಯ ಮೂರ್ಧನ್ಯಃ" ಅಧಿಕಾರ ವ್ಯವಾಯವೆಂದರೆ ವ್ಯವಧಾನ. ನುಮ್, ವಿಸರ್ಜನೀಯ, ಶರ್, ಈ ಮೂರರನ್ಯವಧಾನದಲ್ಲಿ ಎಂದಿರುವಾಗ ಪ್ರತ್ಯೇಕ ಒಂದೊಂದರ ವ್ಯವಧಾನವು ಇಲ್ಲಿ ವಿವಕ್ಷಿತವೆಂದು ಭಾಷ್ಯದಲ್ಲಿ ಹೇಳಿದೆ. **ಸೂತ್ರಾರ್ಥ**—ನುಮ್, ವಿಸರ್ಗ, ಶರ್ (ಶಷಸ) ಇವುಗಳಿಂದ ಒಂದೊಂದರ ವ್ಯವಧಾನವಿರುವಾಗ ಇಣ್‌ಕವರ್ಗದ ಪರದಲ್ಲಿರುವ ಸಕಾರಕ್ಕೆ ಮೂರ್ಧನ್ಯಾದೇಶ (ಷ) ಬರುತ್ತದೆ. ಪ್ರಕೃತ ವಿಸರ್ಗವಿರುವ ರೂಪದಲ್ಲಿ ಇಣ್ ಎಂದರೆ ಕಾರದ ಮೇಲಿರುವ ಇಕಾರ. ಅದಕ್ಕೂ ಸಕಾರಕ್ಕೂ ವಿಸರ್ಗವ್ಯವಧಾನವಿರುವುದರಿಂದ ಸಕಾರಕ್ಕೆ ಷಕಾರ ಬಂದರೆ ಪಿಪಠೀಃ ಷು ಎಂದಾಗುತ್ತದೆ. ವಿಸರ್ಗಕ್ಕೆ ಸತ್ವಬಂದಾಗ ಮಧ್ಯದಲ್ಲಿ ಶರ್ ವ್ಯವಧಾನವಿದೆಎಂದು ಸಕಾರಕ್ಕೆ ಷತ್ವ ಪಿಪಠೀಸ್ಷು, ವಿಸರ್ಗದ ಸಕಾರಕ್ಕೆ ಷಕಾರದ ಯೋಗವಿರುವುದರಿಂದ "ಷ್ಟುನಾ ಷ್ಟುಃ" ಸೂತ್ರದಿಂದ ಷ್ಟುತ್ವ ಪಿಪಠೀಷ್ಟ್ಸು ಎಂದು ಎರಡನೇರೂಪ.

ಷಕಾರಾಂತ "ಚಿಕೀರ್ಷ್" ಶಬ್ದ. (ಮಾಡಲು ಬಯಸುವವನು)

ಕರ್ತುಂ ಇಚ್ಛತಿ (ಮಾಡಲು ಬಯಸುತ್ತಾನೆ) ಎಂಬರ್ಥದಲ್ಲಿ ಕೃಞ್ ಧಾತುವಿಗೆ ಸನ್ ಪ್ರತ್ಯಯ ಬಂದು ಚಿಕೀರ್ಷ ಎಂದಾಗುತ್ತದೆ. ಇದಕ್ಕೆ ಕ್ವಿಪ್ ಬಂದರೆ ಚಿಕೀರ್ಷ್ ಶಬ್ದವಾಗುತ್ತದೆ. ಕೃದಂತವಾದುದರಿಂದ ಪ್ರಾತಿಪದಿಕ ಸಂಜ್ಞಾ. ಚಿಕೀರ್ಷ್+ಸ್ ಎಂದಿರುವಾಗ "ಹಲ್‌ಙ್ಯಾಭ್ಭ್ಯಃ—" ಸೂತ್ರದಿಂದ ಸುಲೋಪ. ಇಲ್ಲಿಯೂ ಸಸಿನ ಸಕಾರಕ್ಕೆ ಷತ್ವ ಬಂದುದು ಅಸಿದ್ಧವಾದುದರಿಂದ ಸಕಾರವಿದ್ದಂತೇ ಇರುವುದರಿಂದ ಚಿಕೀರ್‌ಸ್ ಎಂದಿರುವಾಗ ರೇಫದ ಪರದಲ್ಲಿ ಸಕಾರ ಬಂದುದರಿಂದ "ರಾತ್ಸಸ್ಯ" ಸೂತ್ರದಿಂದ ಸಂಯೋಗಾಂತ್ಯದ ಸಕಾರಕ್ಕೆ ಲೋಪ. ಚಿಕೀರ್. ಅವಸಾನದಲ್ಲಿ "ಖರವಸಾನಯೋರ್ವಿಸರ್ಜನೀಯಃ" ಸೂತ್ರದಿಂದ ರೇಫಕ್ಕೆ ವಿಸರ್ಗ. ಚಿಕೀಃ. ಅಜಾದಿಯಲ್ಲಿ ಪ್ರತ್ಯಯ ಸೇರಿಸುವುದು ಸೂತ್ರ. ಚಿಕೀರ್ಷಾ—ಚಿಕೀರ್ಷಃ ಇತ್ಯಾದಿ. ಹಲಾದಿಯಲ್ಲಿಯೂ ಪದಸಂಜ್ಞೆಯಿರುವುದರಿಂದ "ರಾತ್ಸಸ್ಯ" ಸೂತ್ರದಿಂದ ಸಕಾರಕ್ಕೆ ಲೋಪ. ಚಿಕೀರ್ಭ್ಯಾಮ್—ಚಿಕೀರ್ಭಿಃ । ಇತ್ಯಾದಿ. ಸಪ್ತಮೀ ಸುವಿನಲ್ಲಿ ಚಿಕೀರ್ಷ್+ಸು ಎಂದಿರುವಾಗ ಹಿಂದಿನಂತೆ ಸಕಾರಕ್ಕೆ ಲೋಪ. ಚಿಕೀರ್+ಸು. ಇಲ್ಲಿ ಸ್ವಾಭಾವಿಕ ರೇಫವಿರುವುದರಿಂದ ಇದಕ್ಕೆ ವಿಸರ್ಗ ಬರುವುದಿಲ್ಲ. ಸುಪ್ ಪರವಾದಾಗ ರುವಿನ ರೇಫಕ್ಕೆ ವಿಸರ್ಗವೆಂದು "ಟೋಃ ಸುಪಿ" ಸೂತ್ರದಿಂದ ನಿಯಮಮಾಡಿರುವುದರಿಂದ ಇಲ್ಲಿ ಸಕಾರಕ್ಕೆ ರು ಬಂದು ರೇಫವಾಗಿಲ್ಲ. ಆದುದರಿಂದ ಚಿಕೀರ್‌ಸು ಎಂದೇ ಇರುವಾಗ "ಆದೇಶಪ್ರತ್ಯಯಯೋಃ" ಸೂತ್ರದಿಂದ ಸಕಾರಕ್ಕೆ ಷತ್ವ. ಚಿಕೀರ್ಷು.

ವಿದ್ವಾನ್ । ವಿದ್ವಾಂಸೌ । ವಿದ್ವಾಂಸಃ । ಹೇ ವಿದ್ವನ್। ವಿದ್ವಾಂಸೌ । ವಿದ್ವಾಂಸಮ್।

ವಿದ ಜ್ಞಾನೇ ಧಾತು. ಇದಕ್ಕೆ ಶತೃ ಪ್ರತ್ಯಯ ಬಂದಾಗ ಅದಕ್ಕೆ ವಸುರಾದೇಶ. ವಸುವಿನಲ್ಲಿ ಉಕಾರ ಇತ್. ವಿದ್ವಸ್ ಸಾಂತವಾಗುತ್ತದೆ. ವಿದ್ವಸ್+ಸ್ ಎಂದಿರುವಾಗ ಉಗಿತ್ತಾದುದರಿಂದ "ಉಗಿದಚಾಂ"—ಸೂತ್ರದಿಂದ ನುಮಾಗಮ. ವಿದ್ವನ್ಸ್+ಸ್. "ಸಾಂತಮಹತಃ"—ಸೂತ್ರದಿಂದ ನಾಂತದ ಉಪಧೆಗೆ ದೀರ್ಘ. ವಿದ್ವಾನ್ಸ್+ಸ್ "ಹಲ್‌ಙ್ಯಾಭ್ಭ್ಯೋ"—ಸೂತ್ರದಿಂದ ಸುಲೋಪ. "ಸಂಯೋಗಾಂತಸ್ಯ ಲೋಪಃ" ಸೂತ್ರದಿಂದ ಸಕಾರಲೋಪ. ವಿದ್ವಾನ್. ಸರ್ವನಾಮಸ್ಥಾನಪರವಾದಾಗ ನುಮಾಗಮ ದೀರ್ಘ. ವಿದ್ವಾನ್ಸ್+ಔ. "ನಶ್ಚಾಪದಾಂತಸ್ಯ ಝಲಿ" ಸೂತ್ರದಿಂದ ನಕಾರಕ್ಕೆ ಅನುಸ್ವಾರ. ವಿದ್ವಾಂಸೌ—ವಿದ್ವಾಂಸಃ ॥ ಸಂಬುದ್ಧಿಯಲ್ಲಿ "ಅಸಂಬುದ್ಧೌ" ಎಂದು ದೀರ್ಘನಿಷೇಧಮಾಡಿರುವುದರಿಂದ ದೀರ್ಘರ್ಬಾವುದಿಲ್ಲ. ಹೇ ವಿದ್ವನ್—ಹೇ ವಿದ್ವಾಂಸೌ—ಹೇ ವಿದ್ವಾಂಸಃ ॥ ದ್ವಿತೀಯಾದಲ್ಲಿ ಅಮ್+ಔಗಳಲ್ಲಿ ಹಿಂದಿನಂತೆ ಕಾರ್ಯಬರುತ್ತವೆ. ವಿದ್ವಾಂಸಮ್—ವಿದ್ವಾಂಸೌ. ವಿದ್ವಸ್+(ಶ್) ಅಸ್ ಎಂದಿರುವಾಗ ವಕಾರಕ್ಕೆ ಉತ್ವ ಹೇಳುತ್ತಾನೆ.

(ವಸುಪ್ರತ್ಯಯಾಂತಕ್ಕೆ ಸಂಪ್ರಸಾರಣ ಹೇಳುವ ಸೂತ್ರ)

೩೫೫. ವಸೋಃ ಸಂಪ್ರಸಾರಣಮ್ ॥ ೬-೪-೧೩೧ ॥

ವಸ್ವಂತಸ್ಯ ಭಸ್ಯ ಸಂಪ್ರಸಾರಣಂ ಸ್ಯಾತ್ । ವಿದುಷಃ ॥ ವಸುಸ್ರಂಸ್ವಿತಿದಃ ॥ ವಿದ್ವದ್ಭ್ಯಾಮ್ ॥ ಇತ್ಯಾದಿ.

ದ್ವಿಪದ ಸೂತ್ರ. "ಭಸ್ಯ" ಅಧಿಕಾರ. ವಸುಪ್ರತ್ಯಯ. "ಪ್ರತ್ಯಯಗ್ರಹಣೇ ತದಂತಗ್ರಹಣಮ್" ಪರಿಭಾಷೆಯಿಂದ ವಸ್ವಂತವೆಂದು ತೆಗೆದುಕೊಳ್ಳಬೇಕು. **ಸೂತ್ರಾರ್ಥ**—ವಸ್ವಂತವಾದ ಭ ಸಂಜ್ಞೆಯುಳ್ಳ ಅಂಗಕ್ಕೆ ಸಂಪ್ರಸಾರಣ ಬರುತ್ತದೆ. "ಇಗ್ಯಣಃ ಸಂಪ್ರಸಾರಣಮ್" ಸೂತ್ರದಿಂದ ಯಣಿನ ಸ್ಥಾನಕ್ಕೆ ಬರುವ ಇಕ್ಕಿಗೆ ಸಂಪ್ರಸಾರಣವೆಂದು ಹೆಸರು. ಪ್ರಕೃತ ವಸ್ವಂತವಾದ ಅಂಗ ವಿದ್ವಸ್. ಇದಕ್ಕೆ ಶಸಾದಿ ವಿಭಕ್ತಿ ಪರದಲ್ಲಿರುವುದರಿಂದ "ಯಚಿ ಭಮ್" ಸೂತ್ರದಿಂದ ಭ ಸಂಜ್ಞೆಯಿರುವುದರಿಂದ ವಿದ್‌ವಸಿನಲ್ಲಿರುವ ವಕಾರಕ್ಕೆ ಸಂಪ್ರಸಾರಣ ಉಕಾರ ಬರು

ತ್ತವೆ. ವಿದ್+ಉಸ್+ಅಸ್. "ಆದೇಶಪ್ರತ್ಯಯಯೋಃ" ಸೂತ್ರದಿಂದ ಇಣಿನ ಪರದಲ್ಲಿ ಸಕಾರ ಬಂದುದರಿಂದ ಅದಕ್ಕೆ ಷತ್ವ. ವಿದುಷಸ್. ಅಂತ್ಯ ಸಕಾರಕ್ಕೆ ರುತ್ವ ವಿಸರ್ಗ. ವಿದುಷಃ. ಇನ್ನು ಅಜಾದಿಯಲ್ಲಿ ಭ ಸಂಜ್ಞೆಯಿರುವುದರಿಂದ ಹೀಗೆ ಸಂಪ್ರ ಸಾರಣ ಷತ್ವ. ತೃ ॥ ವಿದುಷಾ–ವಿದ್ವಸ್+ಭ್ಯಾಮ್ ಎಂದಿರುವಾಗ ವಸ್ವಂತವಾದುದರಿಂದ "ವಸುಸ್ರಂಸು–" (ಸೂ 264) ಸೂತ್ರದಿಂದ ಸಕಾರಕ್ಕೆ ದಕಾರಾದೇಶ. ವಿದ್ವದ್ಭ್ಯಾಮ್–ವಿದ್ವದ್ಭಿಃ ॥ ಚ–ವಿದುಷೇ–ವಿದ್ವದ್ಭ್ಯಾಮ್–ವಿದ್ವದ್ಭ್ಯಃ ॥ ಪಂ– ವಿದುಷಃ–ವಿದ್ವದ್ಭ್ಯಾಮ್–ವಿದ್ವದ್ಭ್ಯಃ ॥ ಷ–ವಿದುಷಃ–ವಿದುಷೋಃ–ವಿದುಷಾಮ್ ಸ–ವಿದುಷಿ–ವಿದುಷೋಃ–ವಿದ್ವತ್+ಸು ಎಂದಿರುವಾಗ ಹಿಂದಿನಂತೆ ಸಕಾರಕ್ಕೆ ದತ್ವ. ವಿದ್ವದ್+ಸು. "ಖರಿಚ" ಸೂತ್ರದಿಂದ ದಕಾರಕ್ಕೆ ಚರ್ತ್ವ. ವಿದ್ವತ್ಸು.

ಸಕಾರಾಂತ ಪುಂಸ್ ಶಬ್ದ. (ಪುರುಷ)

ಪೂಜ್ ಪವನೇ ಧಾತು. ಇದಕ್ಕೆ ಡುಮ್‌ಸುನ್ ಪ್ರತ್ಯಯಬಂದು ಪುಂಸ್ ಶಬ್ದವಾಗಿದೆ. ಇದಕ್ಕೆ ಸುಮುಂತಾದ ಸರ್ವನಾಮಸ್ಥಾನಪರವಾದಾಗ ಅಸುಜ್ ಆದೇಶ ಹೇಳುತ್ತಾನೆ.

(ಪುಂಸ್‌ಶಬ್ದಕ್ಕೆ ಅಸುಜ್ ಆದೇಶ ಹೇಳುವ ಸೂತ್ರ)

೫೫೬. ಪುಂಸೋಽಸುಜ್॥ ೭-೧-೮೯॥

ಸರ್ವನಾಮಸ್ಥಾನೇ ವಿವಕ್ಷಿತೇ ಪುಂಸೋಽಸುಜ್ ಸ್ಯಾತ್। ಪುಮಾನ್। ಹೇ ಪುಮನ್। ಪುಮಾಂಸೌ–ಪುಮಾಂಸಃ॥ ಪುಂಸಃ। ಪುಮ್‌ಭ್ಯಾಮ್। ಪುಂಸು ॥ ಋದುಶನೇತ್ಯನಜ್। ಉಶನಾ। ಉಶನಸೌ। ವಾ॥ (ಅಸ್ಯ ಸಂಬುದ್ಧೌ ವಾನಜ್, ನಲೋಪಶ್ಚ ವಾ ವಾ ಚ್ಯಃ।) ಹೇ ಉಶನ, ಹೇ ಉಶನನ್, ಹೇ ಉಶನಃ। ಹೇ ಉಶನಸೌ। ಉಶನೋಭ್ಯಾಮ್। ಉಶನಸ್ಸು॥ ಅನೇಹಾ। ಅನೇಹಸೌ–ಅನೇಹಸಃ। ಹೇ ಅನೇಹಃ ॥ ವೇಧಾಃ। ವೇಧಸೌ। ಹೇ ವೇಧಃ। ವೇಧೋಭ್ಯಾಮ್॥

ಪುಂಸಃ, ಅಸುಜ್॥ ದ್ವಿಪದಸೂತ್ರ. "ಇತೋತ್ಸರ್ವನಾಮಸ್ಥಾನೇ" ಸೂತ್ರದಿಂದ "ಸರ್ವನಾಮಸ್ಥಾನೇ" ಎಂಬ ಪದ ಅನುವೃತ್ತವಾಗುತ್ತದೆ. ಸಪ್ತಮಿಯಿರುವುದರಿಂದ

ಪರಸಪ್ತಮಿಯಂದು ಲಬ್ಧವಾದರೂ ಇಲ್ಲಿ ವಿವಕ್ಷಿತೇ ಎಂದು ಅಧ್ಯಾಹಾರಮಾಡಿಕೊಳ್ಳಬೇಕು. ಹೀಗೆ ಮಾಡುವುದರಿಂದ ಸ್ವರದಲ್ಲಿ ಪ್ರಯೋಜನವಿದೆ. **ಸೂತ್ರಾರ್ಥ–** ಸರ್ವನಾಮಸ್ಥಾನ (ಸುಟ್) ವಿವಕ್ಷಾಮಾಡಿದಾಗ ಪುಂಸ್ ಶಬ್ದಕ್ಕೆ ಅಸುಜ್ ಆದೇಶ ಬರುತ್ತದೆ. ಅಸುಜ್ ಎಂಬಲ್ಲಿ ಅಸ್ ಉಳಿಯುತ್ತದೆ. ಜಕಾರ "ಹಲಂತ್ಯಮ್" ಸೂತ್ರದಿಂದ ಇತ್. ಉಕಾರ ಉಚ್ಚಾರಣಾರ್ಥ. ಇದು ಅನೇಕಾಚಾದರೂ ಜಾತ್ಯಾ ಮದರಿಂದ "ಜಾಶ್ಚ" ಸೂತ್ರದಿಂದ ಅಂತಾದೇಶವಾಗಿ ಬರುತ್ತದೆ. ಪುಮ್‌ಸ್ ಎಂಬಲ್ಲಿ ಸಕಾರಕ್ಕೆ ಅಸ್ ಆದೇಶಬಂದರೆ ಪುಮಸ್ ಎಂದಾಗುತ್ತದೆ. ಸುಪರವಾದಾಗ ಉಗಿತ್ವಾ ಮದರಿಂದ (ಅಸುಜಾನಲ್ಲಿ ಉಕಾರ ಇತ್) "ಉಗಿದಚಾಂ ಸರ್ವನಾ"—ಸೂತ್ರದಿಂದ ನುಮಾಗಮ. ಪುಮನ್‌ಸ್+ಸ್. ಸಾಂತ ಸಂಯೋಗವಾದುದರಿಂದ "ಸಾಂತ ಮಹತಃ ಸಂಯೋಗಸ್ಯ" ಸೂತ್ರದಿಂದ ನಕಾರದ ಉಪಧಿಗೆ (ಮಕಾರದಮೇಲಿರುವ ಅಕಾರಕ್ಕೆ) ದೀರ್ಘ. ಪುಮಾನ್‌ಸ್+ಸ್. "ಹಲ್‌ಙ್ಯಾಭ್ಯೋ"—ಸೂತ್ರದಿಂದ ಸುಲೋಪ. "ಸಂಯೋಗಾಂತಸ್ಯಲೋಪಃ" ಸೂತ್ರದಿಂದ ಅಂತ್ಯದ ಸಕಾರಕ್ಕೆ ಲೋಪ. ಪುಮಾನ್. ಪುಂಸ್+ಔ ಎಂದಿರುವಾಗ ಹಿಂದಿನಂತೆ ಅಸುಜ್. ನುಮ್. ದೀರ್ಘ. ಪುಮಾನ್‌ಸ್+ಔ, ಪದಸಂಜ್ಞೆಯಿಲ್ಲದಿರುವುದರಿಂದ ಸಂಯೋಗಾಂತಲೋಪ ಬರುವುದಿಲ್ಲ. ನಕಾರಕ್ಕೆ "ನಶ್ಚಾಪದಾಂತಸ್ಯ—" ಸೂತ್ರದಿಂದ ಅನುಸ್ವಾರ. ಪುಮಾಂಸೌ– ಪುಮಾಂಸಃ। ಸಂಬುದ್ಧಿಯಲ್ಲಿ "ಅಸಂಬುದ್ಧೌ" ಎಂದು ನಿಷೇಧಮಾಡಿರುವುದರಿಂದ ದೀರ್ಘ ಬರುವುದಿಲ್ಲ. ಹೇ ಪುಮನ್. ಹೇ ಪುಮಾಂಸೌ–ಹೇ ಪುಮಾಂಸಃ ॥ ದ್ವಿ–ಪುಮಾಂಸೌ–ಇಲ್ಲಿಯವರೆಗೆ ಸರ್ವನಾಮಸ್ಥಾನವಾದುದರಿಂದ ಹಿಂದೆ ಹೇಳಿದ ಕಾರ್ಯಗಳೇ ಬರುತ್ತವೆ. ಶಸಾದಿಯಲ್ಲಿ ಕಾರ್ಯವಿಲ್ಲ. ಪುಂಸ್+ಅಸ್ ಪುಂಸಃ॥ ತೃ–ಪುಂಸಾ–ಪುಮ್‌ಸ್+ಭ್ಯಾಮ್ ಎಂದಿರುವಾಗ "ಸಂಯೋಗಾಂತಸ್ಯ ಲೋಪಃ" ಸೂತ್ರದಿಂದ. ಸಕಾರಲೋಪ. "ನಶ್ಚಾಪದಾಂತಸ್ಯ ಝಲಿ" ಸೂತ್ರದಿಂದ ಮಕಾರಕ್ಕೆ ಅನುಸ್ವಾರ. ಪುಂಭ್ಯಾಮ್. "ಅನುಸ್ವಾರಸ್ಯ—" ಸೂತ್ರದಿಂದ ಅದಕ್ಕೆ ಪರಸವರ್ಣ (ಮ) ಪುಮ್‌ಭ್ಯಾಮ್–ಹಲಾದಿಯಲ್ಲಿ ಹೀಗೆ ಎರಡುಕಾರ್ಯ. ಪುಮ್‌ಭಿಃ. ಚ॥ ಪುಂಸೇ—ಪುಮ್‌ಭ್ಯಾಮ್–ಪುಮ್‌ಭ್ಯಃ। ಪಂ–ಪುಂಸಃ–ಪುಮ್‌ಭ್ಯಾಮ್. ಪುಮ್‌ಭ್ಯಃ। ಷ–ಪುಂಸಃ–ಪುಂಸೋಃ–ಪುಂಸಾಮ್.। ಸ–ಪುಂಸಿ–ಪುಂಸೋಃ–ಪುಂಸು. ಇಲ್ಲಿ ಯಯ್ ಪರವಾಗದಿರುವುದರಿಂದ ಪರಸವರ್ಣ ಬರುವುದಿಲ್ಲ.

ಸಕಾರಾಂತ ಉಶನಸ್‌ಶಬ್ದ. (ಶುಕ್ರಾಚಾರ್ಯ)

ಉಶನಸ್+ಸ್ ಎಂದಿರುವಾಗ "ಋದುಶನ"—(ಸೂ. 205) ಸೂತ್ರದಿಂದ ಅನಜ್ ಆದೇಶ. ಜಾತ್ಯಾದುದರಿಂದ ಅಂತಾದೇಶ. ಉಶನ+ಅನ್+ಸ್. "ಅತೋ

ಗುಣೇ." ಪರರೂಪ. ಉಶನಸ್+ಸ್. ನಾಂತವಾದುದರಿಂದ "ಸರ್ವನಾಮಸ್ಥಾನೇ ಚಾಸಂಬುದ್ಧೌ" ಸೂತ್ರದಿಂದ ಉಪಧಾದೀರ್ಘ. ಉಶನಾನ್+ಸ್. "ಹಲ್ ಜ್ಯಾಭ್ಯೋ"—ಸೂತ್ರದಿಂದ ಸುಲೋಪ. "ನಲೋಪಃ ಪ್ರಾತಿಪದಿಕಾಂತಸ್ಯ" ಸೂತ್ರದಿಂದ ಕೊನೆಯ ನಕಾರಕ್ಕೆ ಲೋಪ. ಉಶನಾ. ಸುವಿನಲ್ಲಿಪೂತ್ರ ಅನಜಾದೇಶ. ಇನ್ನು ಅಜಾದಿಯಲ್ಲಿ ಕಾರ್ಯವಿಲ್ಲ. ಉಶನಸೌ–ಉಶನಸಃ॥ ಸಂಬುದ್ಧಿಯಲ್ಲಿ ಉಶನಸ್+ಸ್ ಎಂದಿರುವಾಗ ವಾರ್ತಿಕದಿಂದ ವಿಶೇಷಕಾರ್ಯ ಹೇಳುತ್ತಾನೆ. ನಾರ್ತಿಕಾರ್ಥ ಉಶನಸ್ ಶಬ್ದಕ್ಕೆ ಸಂಬುದ್ಧಿ (ಸ) ಪರದಲ್ಲಿರುವಾಗ ವಿಕಲ್ಪವಾಗಿ ಅನಜ್ ಆದೇಶವೂ ವಿಕಲ್ಪವಾಗಿ ನಲೋಪವೂ ಬರುತ್ತವೆ. ಅನಜ್ ಬಂದರೆ ಉಶನಸ್+ಸ್. ಇಲ್ಲಿ ಸಂಬುದ್ಧಿಯಲ್ಲಿ ದೀರ್ಘ ನಿಷೇಧಮಾಡಿರುವುದರಿಂದ ದೀರ್ಘ ಬರುವುದಿಲ್ಲ. "ಹಲ್ ಜ್ಯಾ—" ಸೂತ್ರದಿಂದ ಸುಲೋಪಬಂದಮೇಲೆ ಹಿಂದಿನಂತೆ ಪದಾಂತದ ನಕಾರಕ್ಕೆ ಲೋಪಬರಬೇಕು. ವಾರ್ತಿಕದಿಂದ ವಿಕಲ್ಪಲೋಪವೆಂದುದರಿಂದ ಲೋಪಬಂದರೆ ಹೇ ಉಶನ. ಬಾರದಿದ್ದರೆ ಹೇ ಉಶನಸ್. ಅನಜ್‌ವಿಕಲ್ಪವೆಂದುದರಿಂದ ಉಶನಸ್ ಎಂದೇ ಉಳಿಯುತ್ತದೆ. ಆಗ ಪದಾಂತ ಸಕಾರಕ್ಕೆ ರುತ್ವ ವಿಸರ್ಗ. ಹೇ ಉಶನಃ. ಹೀಗೆ ಮೂರುರೂಪಗಳಾಗುತ್ತವೆ. ಹೇ ಉಶನಸೌ–ಹೇ ಉಶನಸಃ। ದ್ವಿ–ಉಶನಸಮ್–ಉಶನಸೌ–ಉಶನಸಃ। ತೃ–ಉಶನಸಾ ಉಶನಸ್+ಭ್ಯಾಮ್ ಎಂದಿರುವಾಗ "ಸಪಜುಷೋರುಃ" ಸೂತ್ರದಿಂದ ಸಕಾರಕ್ಕೆ ರುತ್ವ, ಉಶನರ್+ಭ್ಯಾಮ್. "ಹಶಿಚ" ಸೂತ್ರದಿಂದ ಆ ರುವಿಗೆ ಉತ್ವ. ಉಶನ+ಉ+ಭ್ಯಾಮ್. "ಆದ್ಗುಣಃ" ಉಶನೋಭ್ಯಾಮ್. ಹಲಾದಿಯಲ್ಲಿ ಹೀಗೇ ರುತ್ವ, ಉತ್ವ, ಗುಣ. ಉಶನೋಭಿಃ॥ ಚ॥ ಉಶನಸೇ–ಉಶನೋಭ್ಯಾಮ್–ಉಶನೋಭ್ಯಃ। ಪಂ–ಉಶನಸಃ–ಉಶನೋಭ್ಯಾಮ್–ಉಶನೋಭ್ಯಃ। ಷ–ಉಶನಸಃ–ಉಶನಸೋಃ–ಉಶನಸಾಮ್॥ ಸ–ಉಶನಸಿ–ಉಶನಸೋಃ–ಉಶನಸ್+ಸು ಎಂದಿರುವಾಗ ಸಕಾರಕ್ಕೆ ಹಿಂದಿನಂತೆ ರುತ್ವ. ಉಶನರ್+ಸು. ಇಲ್ಲಿ ಹಶ್ ಪರದಲ್ಲಿ ಇಲ್ಲದಿರುವುದರಿಂದ ರುವಿಗೆ ಉತ್ವವಿಲ್ಲ. ಖರ್ ಪರದಲ್ಲಿರುವುದರಿಂದ "ರೋಃಸುಪಿ" ಸೂತ್ರದಿಂದ ವಿಸರ್ಗ. ಉಶನಃ ಸು. "ವಿಸರ್ಜನೀಯಸ್ಯ ಸಃ" ವಿಸರ್ಗಕ್ಕೆ ಸತ್ವ. ಉಶನಸ್ಸು.

ಸಕಾರಾಂತ "ಅನೇಹಸ್" ಶಬ್ದ. (ಕಾಲ)

ಅನೇಹಸ್+ಸ್ ಎಂದಿರುವಾಗ "ಋದುಶನ—"(ಸೂ 205) ಸೂತ್ರದಿಂದ ಅನಜ್ ಆದೇಶ. ಅನಜಾನಲ್ಲಿ ಅನ್ ಉಳಿಯುತ್ತದೆ. ಜಾತ್ವಾದುದರಿಂದ ಅಂತ್ಯವಾದ ಸಕಾರಕ್ಕೆ ಆಸೇಶಬಂದೆ ಅನೇಹನ್+ಸ್ ಎಂದಾಗುತ್ತದೆ. "ಸರ್ವನಾಮಸ್ಥಾನೇ ಚಾಸಂಬುದ್ಧೌ" ಸೂತ್ರದಿಂದ ನಂತದ ಉಪಧೆಗೆ ದೀರ್ಘ. ಅನೇಹಾನ್+ಸ್.

"ಹಲ್ ಜ್ಯಾಭ್ಯೋ—" ಸೂತ್ರದಿಂದ ಸುಲೋಪ. "ನಲೋಪಃ ಪ್ರಾತಿಪದಿಕಾಂತಸ್ಯ" ಸೂತ್ರದಿಂದ ನಲೋಪ ಅನೇಹಾ. ಇನ್ನು ಅಜಾದಿಯಲ್ಲಿ ಕಾರ್ಯವಿಲ್ಲ. ಅನೇಹಸೌ–ಅನೇಹಸಃ। ಸಂಬುದ್ಧಿಯಲ್ಲಿ ನಿಷೇಧಮಾಡಿರುವುದರಿಂದ ಅನಜ್ ಆದೇಶವಿಲ್ಲ. ಹೇ ಅನೇಹಸ್ ಎಂದಿರುವಾಗ ಸಕಾರಕ್ಕೆ ರುತ್ವವಿಸರ್ಗ ಹೇ ಅನೇಹಃ ಹೇ ಅನೇಹಸೌ–ಹೇ ಅನೇಹಸಃ। ದ್ವಿ। ಅನೇಹಸಮ್–ಅನೇಹಸೌ–ಅನೇಹಸಃ। ತೃ–ಅನೇಹಸಾ–ಅನೇಹಸ್+ಭ್ಯಾಮ್ ಎಂದಿರುವಾಗ ಸಕಾರಕ್ಕೆ ರುತ್ವ. "ಹಶಿಚ" ಸೂತ್ರದಿಂದ ಅದಕ್ಕೆ ಉತ್ವ. ಅನೇಹ+ಉ+ಭ್ಯಾಮ್ ಗುಣ. ಅನೇಹೋಭ್ಯಾಮ್–ಅನೇಹೋಭಿಃ ಇತ್ಯಾದಿ. ಉಶನಸ್ ಶಬ್ದದಂತೆ ರೂಪ ತಿಳಿಯಬೇಕು.

ಸಕಾರಾಂತ ವೇಧಸ್ ಶಬ್ದ. (ಬ್ರಹ್ಮನು)

ವೇಧಸ್+ಅಸ್ ಎಂದಿರುವಾಗ ಅಸಂತವಾಗಿರುವುದರಿಂದ "ಅತ್ವಸಂತಸ್ಯ ಚಾಧಾತೋಃ" ಸೂತ್ರದಿಂದ ಉಪಧಾದೀರ್ಘ. ವೇಧಾಸ್+ಸ್. "ಹಲ್ ಜ್ಯಾಭ್ಯೋ—" ಸೂತ್ರದಿಂದ ಸುಲೋಪ ವೇಧಾಸ್. ಸಕಾರಕ್ಕೆ ರುತ್ವವಿಸರ್ಗ. ವೇಧಾಃ. ಅಜಾದಿಯಲ್ಲಿ ವಿಶೇಷಕಾರ್ಯವಿಲ್ಲ. ಭ್ಯಾಮಾದಿಗಳಲ್ಲಿ ಸಕಾರಕ್ಕೆ ಹಿಂದಿನಂತೆ ರುತ್ವ ಬಂದಾಗ "ಹಶಿಚ" ಸೂತ್ರದಿಂದ ಅದಕ್ಕೆ ಉತ್ವ. ಅಕಾರೋಕಾರಗಳಿಗೆ ಗುಣ. ಪ್ರ. ವೇಧಾಃ–ವೇಧಸೌ–ವೇಧಸಃ। ಸಂಬುದ್ಧಿಯಲ್ಲಿ "ಅಸಂಬುದ್ಧೌ" ಎಂದು ದೀರ್ಘ ನಿಷೇಧಮಾಡಿರುವುದರಿಂದ ದೀರ್ಘವಿಲ್ಲ. ಹೇ ವೇಧಃ–ಹೇ ವೇಧಸೌ–ಹೇ ವೇಧಸಃ॥ ದ್ವಿ–ವೇಧಸಂ–ವೇಧಸೌ–ವೇಧಸಃ। ತೃ–ವೇಧಸಾ–ವೇಧೋಭ್ಯಾಮ್–ವೇಧೋಭಿಃ ಇತ್ಯಾದಿ ಹಿಂದಿನಂತೇ ತಿಳಿಯಬೇಕು ಸ॥ ವೇಧಸಿ–ವೇಧಸೋಃ–ವೇಧಸ್ಸು॥

ಸಕಾರಾಂತ ಅದಸ್ ಶಬ್ದ. (ಇವನು)

ಇದು ಸರ್ವನಾಮ ಶಬ್ದ. ಅದಸ್+ಸ್ ಎಂದಿರುವಾಗ ಔಕಾರಾದೇಶ ಸುಲೋಪ ಹೇಳುತ್ತಾನೆ.

(ಅದಿಸಿಗೆ ಔತ್ವ, ಸುಲೋಪ ಹೇಳುವ ಸೂತ್ರ)

೫೫೭. ಅದಸ ಔ ಸುಲೋಪಶ್ಚ ॥ ೭-೨-೧೦೭ ॥

ಅದಸಃ ಔಕಾರೋನ್ತಾದೇಶಃ ಸ್ಯಾತ್ಸೌ ಪರೇ ಸುಲೋಪಶ್ಚ। ತದೋರಿತಿ

ಸಃ । ಅಸೌ । ತ್ಯದಾದ್ಯತ್ವಮ್ । ಪರರೂಪತ್ವಮ್ । ವೃದ್ಧಿಃ ।

ಅದಸಃ, ಔ, ಸುಲೋಪಃ, ಚ ॥ ನಾಲ್ಕು ಪದಗಳುಳ್ಳ ಸೂತ್ರ. " ತದೋಃ ಸಃ ಸಾವನಂತ್ಯಯೋಃ " ಸೂತ್ರದಿಂದ " ಸೌ " ಅನುವೃತ್ತಿ. ಅದಸಃ ಷಷ್ಠೀ. **ಸೂತ್ರಾರ್ಥ**– ಸು ಪರದಲ್ಲಿರುವಾಗ ಅದಸ್ ಶಬ್ದಕ್ಕೆ ಔಕಾರ ಅಂತಾದೇಶವಾಗಿ ಬರುತ್ತದೆ. ಪರದ ಸುವಿಭಕ್ತಿಗೆ ಲೋಪವೂ ಆಗುತ್ತದೆ " ಅಶೋಂತ್ಯಸ್ಯ " ಪರಿಭಾಷೆ ಇಲ್ಲಿ ಬರುವುದರಿಂದ ಅಂತಾದೇಶವೆಂದು ಲಬ್ಧವಾಗಿದೆ. ಸಕಾರಕ್ಕೆ ಔ ಬಂದರೆ ಅದ+ಔ. ಅಕಾರಕ್ಕೆ ಔ ಪರವಾದುದರಿಂದ " ವೃದ್ಧಿರೇಚಿ " ಸೂತ್ರದಿಂದ ವೃದ್ಧಿ. ಅದೌ. ಅದಸ್ ಶಬ್ದ ತ್ಯದಾದಿಗಳಲ್ಲಿ ಸೇರಿರುವುದರಿಂದ ತ್ಯದಾದಿಗಳ ತಕಾರ ದಕಾರಗಳಿಗೆ ಸು ಪರವಾದಾಗ ಸಕಾರವನ್ನು " ತದೋಃ ಸಃ– " ಸೂತ್ರವು ಹೇಳುವುದರಿಂದ ಇಲ್ಲಿ ದಕಾರಕ್ಕೆ ಸಕಾರ. ಅಸೌ. ಅದಸ್+ಔ ಎಂದಿರುವಾಗ " ತ್ಯದಾದ್ಯತ್ವಮ್ = ತ್ಯದಾದೀನಾಮಃ " ಸೂತ್ರದಿಂದ ನಿಭಕ್ತಿ ಪರವಾದಾಗ ಆಕಾರ ಅಂತಾದೇಶ. ಇದು ತ್ಯದಾದಿಯಲ್ಲಿ ಸೇರಿರುವುದರಿಂದ ಕೊನೆಯ ಸಕಾರಕ್ಕೆ ಆಕಾರ. ಅದ+ಅ+ಔ. ಅಕಾರಕ್ಕೆ ಆಕಾರರೂಪ ಗುಣಪರವಾದುದರಿಂದ " ಅತೋಗುಣೇ " ಸೂತ್ರದಿಂದ ಪರರೂಪ. ಅದ+ಔ. " ವೃದ್ಧಿರೇಚಿ " ಸೂತ್ರದಿಂದ ವೃದ್ಧಿ. ಅದೌ. ಈಗ ದಕಾರಕ್ಕೆ ಮಕಾರ ಔಕಾರಕ್ಕೆ ಊಕಾರ ಹೇಳುತ್ತಾನೆ.

(ಅದಸಿನ ದಕಾರಕ್ಕೆ ಮತ್ವ. ಮಕಾರದ ಪರಕ್ಕೆ ಉ ಊ ಹೇಳುವ ಸೂತ್ರ)

೩೫೮. ಅದಸೋಽಸೇರ್ದಾದು ದೋಮಃ ॥ ೮-೨-೮೦ ॥

ಅದಸೋಽಸಾನ್ತಸ್ಯ ದಾತ್ಪರಸ್ಯ ಉದೂತೌ ಸ್ತಃ ದಸ್ಯ ಮುಶ್ಚ । ಅಂತರತಮ್ಯಾತ್ ಹ್ರಸ್ವಸ್ಯ ಉಃ ದೀರ್ಘಸ್ಯ ಊಃ॥ ಅಮೂ ॥ ಜಸಃಶೀ॥ ಗುಣಃ ॥

ಅದಸಃ, ಅಸೇಃ, ದಾತ್, ಉ, ದಃ, ಮಃ ॥ ಆರುಪದಗಳುಳ್ಳ ಸೂತ್ರ. ಅದಸಃ ಎಂಬಲ್ಲಿ ಅವಯವಾರ್ಥದಲ್ಲಿ ಷಷ್ಠೀ ಬಂದಿದೆ. " ಅಸೇಃ " ಎಂಬುದು ಅದಕ್ಕೆ ವಿಶೇಷಣ. " ನವಿದ್ಯತೇಸಿಃ ಯಸ್ಯಸಃ " ಅಸಿಃ ತಸ್ಯ ಅಸೇಃ ಸಕಾರವಿಲ್ಲದಿರುವ ಎಂದರ್ಥ. ಸಿ ಎಂಬಲ್ಲಿ ಇಕಾರ ಉಚ್ಚಾರಣಾರ್ಥ. ದಾತ್ ಪಂಚಮಿಯಾದುದರಿಂದ ಪರಸ್ಯ ಎಂದು ಲಬ್ಧವಾಗುತ್ತದೆ. **ಸೂತ್ರಾರ್ಥ**—ಸಕಾರಾನ್ತವಾಗದಿರುವ ಅದಸ್ ಶಬ್ದಾವಯವವಾದ ದಕಾರದ ಪರಕ್ಕೆ ಉಕಾರ, ಊಕಾರಗಳು ಬರುತ್ತವೆ, ದಕಾರಕ್ಕೆ ಮಕಾರವೂ ಬರುತ್ತದೆ. ಸೂತ್ರದಲ್ಲಿ ಉ ಎಂಬುದು ಉ, ಊ ಎರಡನ್ನೂ ಬೋಧಿಸುತ್ತದೆ. ಉಶ್ಚ ಊಶ್ಚ ತದೋಃ ಸಮಾಹಾರಃ ಉ, ಸಮಾಹಾರ ದ್ವಂದ್ವ

ಸಮಾಸ. ದಕಾರದ ಪರದಲ್ಲಿ ಹ್ರಸ್ವವಿದ್ದರೆ ಹ್ರಸ್ವ ಉಕಾರವೂ, ದೀರ್ಘವಿದ್ದರೆ ದೀರ್ಘ ಊಕಾರವೂ ಸಾಮ್ಯದಿಂದ ಬರುತ್ತದೆಎಂದು ತಿಳಿಯಬೇಕು. ಪ್ರಕೃತ ಅದೌ ಎಂಬಲ್ಲಿ ದಕಾರದ ಪರದಲ್ಲಿ ದೀರ್ಘ ಔಕಾರವಿರುವುದರಿಂದ ಊಕಾರ ಬಂದು ದಕಾರಕ್ಕೆ ಮಕಾರ ಬಂದರೆ ಅಮೂ ಎಂದಾಗುತ್ತದೆ. ಅದಸ್+ಜಸ್ ಎಂದಿರುವಾಗ ಹಿಂದಿನಂತೆ " ತ್ಯದಾದೀನಾಮಃ " ಸೂತ್ರದಿಂದ ಅಂತ್ಯಸಕಾರಕ್ಕೆ ಅಕಾರ. ಅದ+ಜಸ್. ಈಗ ಅದಂತವಾದ ಸರ್ವನಾಮದ ಪರದಲ್ಲಿ ಜಸ್ ಎಂಬುದರಿಂದ " ಜಸಃ ಶೀ " ಸೂತ್ರದಿಂದ ಜಸಿಗೆ ಶೀ ಆದೇಶ. ಅದ+ಈ. ಶೀ ಎಂಬಲ್ಲಿ " ಲಶಕ್ವತದ್ಧಿತೇ " ಸೂತ್ರದಿಂದ ಶಕಾರಕ್ಕೆ ಇತ್ ಸಂಜ್ಞೆ. ಇತ್ ಸಂಜ್ಞೆ ಬರಬೇಕಾದರೆ ಮೊದಲು ಅನೇಕಾಲಾದುದರಿಂದ ಸರ್ವಾದೇಶ ಬಂದಿದೆ. ಗುಣ. ಅದೇ ಎಂದಿರುವಾಗ ಏಕಾರಕ್ಕೆ ಈತ್ವ ಹೇಳುತ್ತಾನೆ.

(ಬಹುವಚನದಲ್ಲಿ ಅದಸಿನ ದಕಾರದ ಪರಕ್ಕೆ ಈತ್ವಹೇಳುವಸೂತ್ರ)

೩೫೯. ಏತ ಈದ್ಬಹುವಚನೇ ॥ ೮-೨-೮೧॥

ಅದಸಃ ದಾತ್ಪರಸ್ಯೈತ ಈದ್ದಸ್ಯ ಚ ಮೋ ಬಹ್ವರ್ಥೋಕ್ತೌ ॥ ಅಮೀ ॥ ಪೂರ್ವತ್ರಾಸಿದ್ಧಮಿತಿ ವಿಭಕ್ತಿಕಾರ್ಯಂ ಪ್ರಾಕ್ ಪಶ್ಚಾದುತ್ವಮತ್ವೇ॥ ಅಮುಮ್। ಅಮೂ। ಅಮೂನ್। ಮುತ್ವೇ ಕೃತೇ ಘಿಸಂಜ್ಞಾಯಾಂ ನಾಭಾವಃ॥

ಏತಃ, ಈತ್, ಬಹುವಚನೇ॥ ತ್ರಿಪದಸೂತ್ರ. ಹಿಂದಿನಸೂತ್ರದಿಂದ ಅದಸಃ, ದಾತ್, ದಃ, ಮುಃ, ಈ ನಾಲ್ಕುಪದಗಳು ಅನುವೃತ್ತವಾಗುತ್ತವೆ. ಬಹುವಚನೇ ಎಂದಿದ್ದರೂ ಇದು ಪರಸಪ್ತಮಿಯಲ್ಲ. ಯೌಗಿಕವಾದ ಅರ್ಥವನ್ನು ತೆಗೆದುಕೊಳ್ಳಬೇಕು. ಬಹುವಚನ ಪರವಾದಾಗ ಎಂದು ಅರ್ಥಹೇಳಿದರೆ ಅದೇ ಎಂದು ರೂಪವಾದುದರಿಂದ ಇದಕ್ಕೆ ಬೇರೊಂದು ಬಹುವಚನಪರದಲ್ಲಿ ಇಲ್ಲದಿರುವುದರಿಂದ ಕಾರ್ಯಬಾರದೇ ಹೋಗಬೇಕಾಗುತ್ತದೆ. ಆದುದರಿಂದ ಬಹುತ್ವ ಹೇಳುವಾಗ ಎಂದರ್ಥ ಮಾಡಬೇಕು. **ಸೂತ್ರಾರ್ಥ**—ಅದಸ್ಶಬ್ದ ಬಹುತ್ವಸಂಖ್ಯಾ ಹೇಳುತ್ತಿರುವಾಗ ಅದಸಿನ ಅವಯವವಾದ ದಕಾರದ ಪರದಲ್ಲಿರುವ ಏಕಾರಕ್ಕೆ ಈಕಾರವೂ ದಕಾರಕ್ಕೆ ಮಕಾರವೂ ಬರುತ್ತವೆ. ಅದೇ ಎಂಬಲ್ಲಿ ಏಕಾರಕ್ಕೆ ಈಕಾರ ದಕಾರಕ್ಕೆ ಮಕಾರ ಬಂದರೆ ಅಮೀ ಎಂದಾಗುತ್ತದೆ. ಪ್ರ–ಅಸೌ–ಅಮೂ–ಅಮೀ. ತ್ಯದಾದಿಗಳಿಗೆ ಸಂಬೋಧನೆಯಿಲ್ಲವೆಂದು ಹಿಂದೆ ಹೇಳಿದೆ.

ದ್ವಿತೀಯಾದಲ್ಲಿ ಅದಸ್+ಅಮ್ ಎಂದಿರುವಾಗ " ತ್ಯದಾದೀನಾಮಃ "

ಅತ್ವ, ಪರರೂಪ. ಅದ+ಅಮ್. "ಅಮಿಪೂರ್ವಃ" ಪೂರ್ವರೂಪ. ಅದಮ್. ಇಲ್ಲಿ ದಕಾರದ ಪರದಲ್ಲಿ ಹ್ರಸ್ವವಿರುವುದರಿಂದ "ಅದಸೋಸೇ"—ಸೂತ್ರದಿಂದ ಹ್ರಸ್ವ ಉಕಾರ. ದಕಾರಕ್ಕೆ ಮಕಾರ. ಅಮುಮ್. ಅದಸ್+ಟಾ. ಪಥಮಾ ದ್ವಿವಚನ ನದಂತೇ ಪ್ರಕ್ರಿಯಾ. ಅಮೂ. ಅದಸ್+(ಶ್) ಅಸ್. ತ್ಯದಾದ್ಯತ್ವ. ಪರರೂಪ. ಅದ+ಅಸ್. "ಪ್ರಥಮಯೋಃ"—ಸೂತ್ರದಿಂದ ಪೂರ್ವಸವರ್ಣದೀರ್ಘ. ಅದಾಸ್. ಪೂರ್ವಸವರ್ಣದೀರ್ಘದ ಪರದಲ್ಲಿ ಶಸಿನ ಸಕಾರ ಬಂದಿರುವುದರಿಂದ "ತಸ್ಮಾಚ್ಛಸೋಃ"—ಸೂತ್ರದಿಂದ ಸಕಾರಕ್ಕೆ ನಕಾರ ಅದಾನ್. ಈಗ "ಆದಸೋಸೇಃ"—ಸೂತ್ರದಿಂದ ದಕಾರದಪರದ ಆಕಾರಕ್ಕೆ ಊಕಾರ. ಅಮೂನ್.

ಇಲ್ಲಿ ಮೊದಲೇ ಉತ್ವಮತ್ವ ಏಕೆಮಾಡಬಾರದು ಎಂಬ ಶಂಕೆ ಬರುತ್ತದೆ. ಹಾಗೆ ಮೊದಲೇ ಉತ್ವಮತ್ವ ಬಂದರೆ ಇಷ್ಟರೂಪವಾಗಲಾರದು. ಅದಸ್+ಟಾ ಎಂದು ಇರುವಾಗ ತ್ಯದಾದ್ಯತ್ವ, ಪರರೂಪ. ಆದ+ಟಾ. ಈಗ ಉತ್ವಮತ್ವ ಬಂದರೆ ಅಮು+ಟಾ ಎಂದಾಗುತ್ತದೆ. ಹೀಗಿರುವಾಗ ಯಣ್ ಬಂದು ಅನಿಷ್ಟರೂಪ ವಾಗಬೇಕಾಗುತ್ತದೆ. ಅದಕ್ಕೋಸ್ಕರ "ಪೂರ್ವತ್ರಾಸಿದ್ಧಂ"—ಎಂಬ ವಾಕ್ಯದಿಂದ ಕಾರ್ಯವಿನೇಕನ್ನು ಹೇಳುತ್ತಾನೆ. "ಪೂರ್ವತ್ರಾಸಿದ್ಧಮ್" ಸೂತ್ರದಿಂದ ಸಪಾದ ಸಪ್ತಾಧ್ಯಾಯಿ ಕಾರ್ಯಗಳಿಗೆ ತ್ರಿಪಾದಿಕಾರ್ಯ ಅಸಿದ್ಧವಾಗುತ್ತದೆ ಎಂದು ಹೇಳಿವೆ. ಉತ್ವ ಮತ್ವಹೇಳುವ ಸೂತ್ರ ತ್ರಿಪಾದಿಯಲ್ಲಿಸೆ. ಅದು ವಿಭಕ್ತಿ ಕಾರ್ಯಗಳಿಗೆ ಅಸಿದ್ಧವಾಗುವುದರಿಂದ ಮೊದಲು ವಿಭಕ್ತಿ ಕಾರ್ಯಗಳು ಬರುತ್ತವೆ. ಕೊನೆಯಲ್ಲಿ ಉತ್ವಮತ್ವ ಹೇಳಬೇಕು. ಆದರೆ ಉತ್ವಮತ್ವವನ್ನು ನಿಮಿತ್ತೀಕರಿಸಿ ಏನಾದರೂ ವಿಭಕ್ತಿಕಾರ್ಯ ಬರುವುದಾದರೆ ಆಗ ಅಲ್ಲಿ ಉತ್ವಮತ್ವ ಅಸಿದ್ಧವಾಗುವುದಿಲ್ಲವೆಂದು ತಿಳಿಯಬೇಕು. ನಿಮಿತ್ತವಾಗದಿರುವಾಗ ಅಸಿದ್ಧವೆಂದು ತಿಳಿಯಬೇಕು. ಆದುದರಿಂದಲೇ "ಮುತ್ವೇ ಕೃತೇ ಘಿಸಂಜ್ಞಾಯಾಂ ನಾಭಾವಃ "ಎಂದು ಹೇಳಿರುತ್ತಾನೆ. ತೃತೀಯಾ ಏಕವಚನದಲ್ಲಿ ಉತ್ವಮತ್ವ ಬಂದಮೇಲೆ ವಿಭಕ್ತಿಕಾರ್ಯ ಹೇಳಬೇಕು. ಅಲ್ಲಿ ಅಸಿದ್ಧವಾಗುವುದಿಲ್ಲ. ಅದಸ್+(ಟ್) ಅ ಎಂದಿರುವಾಗ. ತ್ಯದಾದ್ಯತ್ವ, ಪರರೂಪ. ಅದ+ಅ. ಈಗ "ಅದ ಸೋಸೇ"—ಸೂತ್ರದಿಂದ ದಕಾರಕ್ಕೆ ಮಕಾರ, ಪರದ ಅಕಾರಕ್ಕೆ ಉಕಾರ. ಅಮು+ಅ. ಇದಕ್ಕೆ ಹ್ರಸ್ವ ಉಕಾರಾಂತವಾದುದರಿಂದ "ಶೇಷೋಘ್ಯಸಖಿ" ಸೂತ್ರದಿಂದ ಘಿಸಂಜ್ಞಾ ಬರುವುದರಿಂದ "ಆಜಸೋನ್ಯಾಸ್ತ್ರಿಯಾಂ" ಸೂತ್ರದಿಂದ ವಿಭಕ್ತಿಗೆ ನಾ ಆದೇಶ. ಅಮುನಾ. ಇಲ್ಲಿ ಉಕಾರ ಅಸಿದ್ಧವಾದುದರಿಂದ ಹೇಗೆ ಘಿಸಂಜ್ಞಾ ಬರುತ್ತದೆ? ಅಂದರೆ ನಿಮಿತ್ತವಾಗುವ ವಿಷಯದಲ್ಲಿ ಅಸಿದ್ಧವಿಲ್ಲವೆಂದು ತಿಳಿಸುತ್ತಾನೆ.

(ಮು ಭಾವಕ್ಕೆ ಅಸಿದ್ಧತ್ವವಿಲ್ಲವೆಂದು ತಿಳಿಸುವ ಸೂತ್ರ)

೪೬೦. ನ ಮು ನೇ ॥ ಲ-೨-೪ ॥

ನಾಭಾವೇ ಕರ್ತವ್ಯೇ ಕೃತೇ ಚ ಮುಭಾವೋ ನಾಸಿದ್ಧಃ । ಅಮುನಾ । ಅಮೂಭ್ಯಾಂ ೩ ॥ ಅಮೀಭಿಃ । ಅಮುಷ್ಮೈ । ಅಮೀಭ್ಯಃ ೨ । ಅಮುಷ್ಮಾತ್ । ಅಮುಷ್ಯ । ಅಮುಯೋಃ ೨ । ಅಮೀಷಾಮ್ । ಅಮುಷ್ಮಿನ್ । ಅಮೀಷು ॥

ಮೂರು ಪದಗಳುಳ್ಳ ಸೂತ್ರ. "ಪೂರ್ವತ್ರಾಸಿದ್ಧಮ್" ಸೂತ್ರದಿಂದ "ಅಸಿದ್ಧಮ್" ಅನುವೃತ್ತವಾಗುತ್ತದೆ. "ಮುಚ ಉತ್ವ ತಯೋಃ ಸಪಾಹಾರಃ ಮು." ಸಮೂಹಾರದ್ವಂದ್ವ. ನಾ ಎಂಬುದರ ಸಪ್ತಮೀ ನೇ. **ಸೂತ್ರಾರ್ಥ**—ನಾ ಆದೇಶ ಮಾಡುವಾಗಲೂ ಮಾಡಿದ ಮೇಲೂ ಮು ಭಾವವು ಅಸಿದ್ಧವಾಗುವುದಿಲ್ಲ. ನಾಭಾವ ಮಾಡುವಾಗ ಮಾತ್ರ ಅಸಿದ್ಧವಾಗುವುದಿಲ್ಲವೆಂದು ಹೇಳಿದರೆ ನಾಭಾವ ಬಂದಮೇಲೆ ಅಮುನಾ ಎಂದಾದರೂ "ಸುಪಿಚ" ಎಂಬ ಸೂತ್ರಕ್ಕೆ ಮುಭಾವ ಬಂದುದು ಅಸಿದವಾದುದರಿಂದ ಅಕಾರವಿಸೆಯುಂದು ಅದಕ್ಕೆ ಯಞಾದಿ ಸುಪ್ ಪರವಾದುದರಿಂದ ದೀರ್ಘ ಬರಬೇಕಾಗುತ್ತದೆ. ಆದುದರಿಂದ ಮಾಡಿದ ಮೇಲೂ ಅಸಿದ್ಧವಾಗುವುದಿಲ್ಲ ವೆನ್ನಬೇಕು. ಹೀಗೆ ಹೇಳಿದರೆ ಉಕಾರ ಬಂದುದು ಗೊತ್ತಿರುವುದರಿಂದ ಅಕಾರವಿಲ್ಲದಿರುವುದರಿಂದ ದೀರ್ಘ ಬರುವುದಿಲ್ಲ. ಅಮುನಾ. ಅದಸ್+ಭ್ಯಾಮ್ ಎಂದಿರುವಾಗ ತ್ಯದಾದ್ಯತ್ವ, ಪರರೂಪ. ಅದ+ಭ್ಯಾಮ್. "ಸುಪಿಚ" ಸೂತ್ರದಿಂದ ಅದಂತಕ್ಕೆ ದೀರ್ಘ. ಅದಾಭ್ಯಾಮ್. "ಅದಸೋಸೇಃ—" ಸೂತ್ರದಿಂದ ಊತ್ವಮತ್ವ. ಅಮೂಭ್ಯಾಮ್. ಅದಸ್+ಭಿಸ್. ತ್ಯದಾದ್ಯತ್ವ, ಪರರೂಪ. ಅದ+ಭಿಸ್. ಅದಂತದ ಪರದಲ್ಲಿ ಭಿಸ್ ಇರುವುದರಿಂದ ಐಸ್ ಪ್ರಾಪ್ತವಾದರೆ "ನೇದಮದಸೋರಕೋಃ" ಸೂತ್ರದಿಂದ ಐಸಿಗೆ ನಿಷೇಧ. "ಬಹುನಚಸೇ ಝ್ಯೋತ್" ಸೂತ್ರದಿಂದ ಅಕಾರಕ್ಕೆ ಏತ್ವ. ಆದೇಭ್ಯಃ "ಏತಈತ್ ಬಹುವಚನೇ" ಸೂತ್ರದಿಂದ ಏಕಾರಕ್ಕೆ ಈತ್ವ. ದಕಾರಕ್ಕೆ ಮತ್ವ. ಅಮೀಭಿಃ ॥ ಜ-ಅದಸ್+ಜಿಃ. ತ್ಯದಾದ್ಯತ್ವ, ಪರರೂಪ. ಅದ+ಜಿಃ "ಸರ್ವನಾಮ್ನಃ ಸ್ಮೈ" ಸೂತ್ರದಿಂದ ಜಿಃಗೆ ಸ್ಮೈ ಆದೇಶ. ಅದಸ್ಮೈ. ಈಗ ಉತ್ವಮತ್ವ. ಅಮುಸ್ಮೈ. "ಆದೇಶಪ್ರತ್ಯಯಯೋಃ" ಸೂತ್ರದಿಂದ ಸಕಾರಕ್ಕೆ ಷಕಾರ. ಅಮುಷ್ಮೈ. ಭ್ಯಾಮಿನಲ್ಲಿ ಹಿಂದಿನಂತೇ ರೂಪ. ಅಮೂಭ್ಯಾಮ್. ಭ್ಯಸಿನಲ್ಲಿ ಭಿಸಿನಂತೇ ರೂಪ. ಅಮೀಭ್ಯಃ ॥ ಪಂ-ಅದಸ್+ಜಸಿ. ತ್ಯದಾದ್ಯತ್ವ, ಪರರೂಪ. ಅದ+ಜಸಿ. "ಜಸಿಜ್ಯೋಃ ಸ್ಮಾತ್ ಸ್ಮಿನೌ" ಸೂತ್ರದಿಂದ ಜಸಿಗೆ ಸ್ಮಾತ್ ಆದೇಶ. ಉತ್ವಮತ್ವ, ಷತ್ವ. ಅಮುಷ್ಮಾತ್. ಭ್ಯಾಮ್ ಭ್ಯಸ್‌ಗಳಲ್ಲಿ ಹಿಂದಿನಂತೇ ರೂಪ. ಅಮೂಭ್ಯಾಮ್—ಅಮೀಭ್ಯಃ । ಷ-ಅದಸ್+ಙಸ್. ತ್ಯದಾದ್ಯತ್ವ, ಪರರೂಪ, "ಟಾಙಸಿಙಸಾಮ್—" ಸೂತ್ರದಿಂದ ವಿಭಕ್ತಿಗೆ ಸ್ಯಾದೇಶ. ಅದಸ್ಯ. ಉತ್ವ, ಮತ್ವ. ಷತ್ವ. ಅಮುಷ್ಯ. ಅದಸ್+ಓಸ್. ತ್ಯದಾದ್ಯತ್ವ ಪರರೂಪ. ಅದ+ಓಸ್. "ಓಸಿಚ"

ಸೂತ್ರದಿಂದ ಏತ್ವ. ಅನೇ+ಓಸ್. ಅಯಾದೇಶ. ಅದಯೋಃ ಉತ್ವಮತ್ವ ಅಮುಯೋಃ. ಅದಸ್ ಆ+ಮ್. ಅತ್ವ, ಪರರೂಪ. ಅದ+ಆಮ್. "ಆಮಿ ಸರ್ವನಾಮ್ನಃ ಸುಟ್" ಸೂತ್ರದಿಂದ ಆಮಿಗೆ ಸುಡಾಗನು. ಟಿತ್ತಾದುದರಿಂದ ಆದ್ಯವಯವವಾಗಿ ಬರುತ್ತದೆ. ಅಮೀಷಾಮ್ ॥ ಸ–ಅತ್ವ, ಪರರೂಪ. ಜಾಗೆ ಸ್ಮಿನ್ನಾದೇಶ. ಅದಸ್ಮಿನ್. ಉತ್ವಮತ್ವ. ಷತ್ವ. ಅಮುಷ್ಮಿನ್. ಜಸಿನಲ್ಲಿ ಹಿಂದಿನಂತೆ. ಅಮುಯೋಃ. ಸುಪಿನಲ್ಲಿತ್ವದಾದ್ಯತ್ವ, ಪರರೂಪ, ಏತ್ವ. ಅದೇಸು. "ಏತಈತ್"–ಏಕಾರಕ್ಕೆ ಈತ್ವ ದಕಾರಕ್ಕೆ ಮತ್ವ. ಷತ್ವ. ಅಮೀಷು ॥ ಇತಿ ಸಾಂತಾಃ ॥

ಇತಿ ಹಲಂತಪುಲ್ಲಿಂಗ ಪ್ರಕರಣಮ್ ॥

ಶ್ರೀಃ

ಅಥ ಹಲಂತ ಸ್ತ್ರೀಲಿಂಗ ಪ್ರಕರಣಮ್

ಇನ್ನು ಹಲಂತಗಳಾದ ಸ್ತ್ರೀಲಿಂಗ ಶಬ್ದಗಳನ್ನು ಹೇಳುತ್ತಾನೆ. ಇಲ್ಲಿಯೂ ಹಕಾರಾದಿಕ್ರಮದಿಂದಲೇ ಶಬ್ದಗಳನ್ನು ತೋರಿಸುತ್ತಾನೆ. ಹಕಾರಾಂತ ಉಪಾನಹ್ ಶಬ್ದ. (ಪಾದರಕ್ಷೆ.) ಣಹ ಬಂಧನೇ. ಧಾತು. ಕ್ವಿಪ್ ಪ್ರತ್ಯಯ. ಉಪ ಸರ್ಗಕ್ಕೆ ದೀರ್ಘ. ಉಪಾನಹ್ ಎಂದಾಗುತ್ತದೆ. ಉಪ+ನಹ್ ಎಂದಿರುವಾಗ ದೀರ್ಘ ಹೇಳುವ ಸೂತ್ರವನ್ನು ಹೇಳುತ್ತಾನೆ.

(ನಹ್ಯಾದಿಗಳು ಪರವಾದಾಗ ಪೂರ್ವಪದಕ್ಕೆ ದೀರ್ಘ ಹೇಳುವ ಸೂತ್ರ)

೫೬೧. ನಹಿವೃತಿವೃಷಿವ್ಯಧಿರುಚಿ ಸಹಿತನಿಷು ಕ್ವೌ ॥ ೬-೩-೧೧೬ ॥

ಕ್ವಿಬಂತೇಷು ಪೂರ್ವಪದಸ್ಯ ದೀರ್ಘಃ ॥ ಉಪಾನಹ್.

ದ್ವಿಪದ ಸೂತ್ರ. ಕ್ವಿಪ್ರತ್ಯಯ. ನಹ್ಯಾದಿಗಳಿಗೆ ವಿಶೇಷಣ. ತದಂತಲಾಭ. "ಧ್ರಲೋಪೇ–" ಸೂತ್ರದಿಂದ "ದೀರ್ಘಃ" ಅನುವೃತ್ತಿ. **ಸೂತ್ರಾರ್ಥ**—ಕ್ವಿಪ್‌ಪ್ರತ್ಯಯಾಂತವಾದ, ನಹ್, ವೃತ್, ವೃಷ್, ವ್ಯಧ್, ರುಚ್, ಸಹ್, ತಸ್, ಎಂಬ ಏಳುಧಾತುಗಳು ಪರವಾದಾಗ ಪೂರ್ವಪದಕ್ಕೆ ದೀರ್ಘ. ಪ್ರಕೃತ ಉಪ ಪೂರ್ವಪದ. ಕ್ವಿಬಂತವಾದ ನಹ್ ಪರದಲ್ಲಿದೆ. ದೀರ್ಘ ಬಂದರೆ ಉಪಾನಹ್. ಇದಕ್ಕೆ ಸುಪರದಲ್ಲಿರುವಾಗ "ಹೋಢಃ" ಸೂತ್ರದಿಂದ ಸಾಮಾನ್ಯ ಹಕಾರಕ್ಕೆ ಢಕಾರ ಪ್ರಾಪ್ತವಾದರೆ ಅಪವಾದವಾಗಿ ಹಕಾರಕ್ಕೆ ಧಕಾರ ಹೇಳುತ್ತಾನೆ.

(ನಹಿನ ಹಕಾರಕ್ಕೆ ಧಕಾರ ಹೇಳುವ ಸೂತ್ರ)

೫೬೨. ನಹೋ ಧಃ ಲ-೨-೩೪ ॥

ನಹೋ ಹಸ್ಯ ಧಃ ಸ್ಯಾತ್ ಝಲಿ ಪದಾಂತೇ ಚ ॥ ಉಪಾನತ್, ಉಪಾನದ್ । ಉಪಾನಹೌ । ಉಪಾನತ್ಸು ॥

ನಹಃ, ಧಃ । ದ್ವಿಪದ ಸೂತ್ರ. "ಪದಸ್ಯ" ಅಧಿಕಾರ. "ಅಂತೇ" "ಝಲೋ ಝಲಿ" ಸೂತ್ರದಿಂದ "ಝಲಿ" ಎಂಬುದಕ್ಕೆ ಅನುವೃತ್ತಿ. "ಹೋಢಃ" ಸೂತ್ರದಿಂದ ಹಃ ಎಂಬುದು ಇದ್ದೇ ಇದೆ. **ಸೂತ್ರಾರ್ಥ**—ಝಲ್ ಪರದಲ್ಲಿರುವಾಗಲೂ ಪದಾಂತದಲ್ಲಿಯೂ ನಹ್ ಎಂಬುದರ ಹಕಾರಕ್ಕೆ ಧಕಾರಾದೇಶ ಬರುತ್ತದೆ. ಪ್ರಕೃತ "ಹಲ್‌ಜ್ಯಾಭ್ಯೋ–" ಸೂತ್ರದಿಂದ ಸುಲೋಪವಾದಮೇಲೆ ಪದಾಂತವಾದುದರಿಂದ ಹಕಾರಕ್ಕೆ ಧಕಾರ ಬಂದರೆ ಉಪಾನಧ್. "ಝಲಾಂ ಜಶೋಂತೇ" ಉಪಾನದ್. "ವಾವಸಾನೇ" ಸೂತ್ರದಿಂದ ವಿಕಲ್ಪ ಚರ್ತ್ವ. ಉಪಾನತ್. ಅಜಾದಿಯಲ್ಲಿ ಕಾರ್ಯವಿಲ್ಲ. ಲಿಹ್ ಶಬ್ದದಂತೇರೂಪ. ಉಪಾನಹೌ–ಉಪಾನಹಃ ಇತ್ಯಾದಿ. ಭ್ಯಾಮಾದಿಗಳಲ್ಲಿ "ನಹೋಢಃ" ಸೂತ್ರದಿಂದ ಹಕಾರಕ್ಕೆ ಢಕಾರ ಬಂದಾಗ ಜಶ್ತ್ವ. ಉಪಾನದ್ಭ್ಯಾಮ್–ಉಪಾನದ್ಭಿಃ ಇತ್ಯಾದಿ. ಸಪ್ತಮೀ ಸುವಿನಲ್ಲಿ ಹಿಂದಿನಂತೆ ಬಂದ ಜಶ್ತ್ವಕ್ಕೆ "ಖರಿಚ" ಸೂತ್ರದಿಂದ ಚರ್ತ್ವ ಬಂದರೆ ಉಪಾನತ್ಸು ಎಂದಾಗುತ್ತದೆ.

ಹಕಾರಾಂತ ಉಷ್ಣಿಹ್ ಶಬ್ದ. (ಛಂದಸ್ಸು)

ಕ್ವಿನ್ನಂತತ್ವಾತ್ ಕುತ್ವೇನ ಷ್ಟುಃ । ಉಷ್ಣಿಕ್, ಉಷ್ಣಿಗ್ । ಉಷ್ಣಿಹೌ । ಉಷ್ಣಿಗ್ಭ್ಯಾಮ್ ॥ ದ್ಯೌಃ। ದಿವೌ । ದಿವಃ । ದ್ಯುಭ್ಯಾಮ್ ॥ ಗೀಃ।

ಗಿರೌ । ಗಿರಃ ॥ ಏವಂ ಪೂಃ ॥ ಚತಸ್ರಃ । ಚತಸೃಣಾಮ್ ॥ ಕಾ । ಕೇ । ಕಾಃ । ಸರ್ವಾವತ್ ॥

"ಋತ್ವಿಕ್ ದಧೃಕ್–" ಸೂತ್ರದಲ್ಲಿ ಉಷ್ಣಿಹ್ ಎಂದು ಕ್ವಿನ್ನಂತವಾಗಿ ನಿಪಾತಿತವಾಗಿದೆ. ಇದು ಛಂದೋ ವಿಶೇಷವನ್ನು ಹೇಳುತ್ತದೆ. ಉಷ್ಣಿಹ್+ಸ್ ಎಂದಿರುವಾಗ "ಹಲ್ಙ್ಯಾಭ್ಯೋ"–ಸೂತ್ರದಿಂದ ಸುಲೋಪ. ಕ್ವಿನ್ ಪ್ರತ್ಯಯಾಂತವಾದುದರಿಂದ "ಕ್ವಿನ್ಪ್ರತ್ಯಯಸ್ಯ ಕುಃ" ಸೂತ್ರದಿಂದ ಹಕಾರಕ್ಕೆ ಕುತ್ವ. ಘೋಷನಾದ ಸಂವಾರ, ಮಹಾಪ್ರಾಣ ಯತ್ನಸಾಮ್ಯದಿಂದ ಕವರ್ಗದಲ್ಲಿ ಘಕಾರ ಬಂದರೆ. ಉಷ್ಣಿಘ್. "ಝಲಾಂ ಜಶೋಽನ್ತೇ" ಸೂತ್ರದಿಂದ ಘಕಾರಕ್ಕೆ ಜಶ್ತ್ವ. ಉಷ್ಣಿಗ್. "ವಾವಸಾನೇ" ವಿಕಲ್ಪಚರ್ತ್ವ. ಉಷ್ಣಿಕ್. ಆಜಾದಿಯಲ್ಲಿ ಪ್ರತ್ಯಯಸೇರಿಸುವುದುಮಾತ್ರ. ಉಷ್ಣಿಹೌ–ಉಷ್ಣಿಹಃ ಇತ್ಯಾದಿ. ಭ್ಯಾಮಾದಿಗಳಲ್ಲಿ ಹಿಂದಿನಂತೆ ಕುತ್ವ. ಉಷ್ಣಿಘ್+ಭ್ಯಾಮ್. ಜಶ್ತ್ವ. ಉಷ್ಣಿಗ್ಭ್ಯಾಮ್–ಉಷ್ಣಿಗ್ಭಿಃ ಇತ್ಯಾದಿ. ಸಪ್ತಮೀ ಸುವಿನಲ್ಲಿ ಘ, ಗ, ಕ, ಷ ಬಂದರೆ ಉಷ್ಣಿಕ್ಷು ಎಂದಾಗುತ್ತದೆ.

ವಕಾರಾಂತ ಸ್ತ್ರೀಲಿಂಗ ದಿವ್‌ಶಬ್ದ. (ಸ್ವರ್ಗ ಅಥವಾ ಆಕಾಶ)

ದಿವ್+ಸ್ ಎಂದಿರುವಾಗ "ದಿವೌತ್" ಸೂತ್ರದಿಂದ ಸುಪರವಾದಾಗ ವಕಾರಕ್ಕೆ ಔಕಾರಾದೇಶ. ದಿ+ಔ+ಸ್. ಯಣ್. ದ್ಯೌಸ್. ಸಕಾರಕ್ಕೆ ರುತ್ವವಿಸರ್ಗ. ದ್ಯೌಃ. ದಿವ್+ಔ–ದಿವೌ–ದಿವಃ ಇತ್ಯಾದಿ. ದಿವ್+ಭ್ಯಾಮ್ ಎಂದಿರುವಾಗ "ದಿವಉತ್" ಸೂತ್ರದಿಂದ ವಕಾರಕ್ಕೆ ಉಕಾರ. ದಿ+ಉ+ಭ್ಯಾಮ್ ಯಣ್. ದ್ಯುಭ್ಯಾಮ್, ಹಲಾದಿಯಲ್ಲೆಲ್ಲಾ ಇದೇಕಾರ್ಯ. ದ್ಯುಭಿಃ। ಚ ದಿವೇ–ದ್ಯುಭ್ಯಾಮ್–ದ್ಯುಭ್ಯಃ॥ ಪಂ–ದಿವಃ–ದ್ಯುಭ್ಯಾಮ್–ದ್ಯುಭ್ಯಃ॥ ಷ–ದಿವಃ–ದಿವೋಃ–ದಿವಾಮ್. ಸ–ದಿವಿ–ದಿವೋಃ–ದ್ಯುಷು॥

ರೇಫಾಂತ ಸ್ತ್ರೀಲಿಂಗ ಗಿರ್‌ಶಬ್ದ. (ಮಾತು)

ಗಿರ್+ಸ್ ಎಂದಿರುವಾಗ "ಹಲ್ಙ್ಯಾಭ್ಯೋ"—ಸೂತ್ರದಿಂದ ಸುಲೋಪ. ರೇಫಾಂತವಾವ ಧಾತುವಾದುದರಿಂದ "ವೋರುಪಧಾಯಾಃ ದೀರ್ಘ ಇಕಃ" ಸೂತ್ರದಿಂದ ಉಪಧೆಯಾದ ಇಕ್ಕಿಗೆ ದೀರ್ಘ. ಗೀರ್. "ಖರವಸಾನಯೋರ್ವಿಸರ್ಜನೀಯಃ" ಸೂತ್ರದಿಂದ ವಿಸರ್ಗ. ಗೀಃ. ಅಜಾದಿಯಲ್ಲಿ ಪ್ರತ್ಯಯಸೇರಿಸುವುದುಮಾತ್ರ.

ಗಿರೌ–ಗಿರಃ. ದ್ವಿ॥ ಗಿರಂ–ಗಿರೌ–ಗಿರಃ. ತೃ–ಗಿರಾ ಗಿರ್–ಭ್ಯಾಮ್ ಎಂದಿರುವಾಗ ಹಿಂದಿನಂತೆ ಉಪಧೆಗೆ ದೀರ್ಘ. ಗೀರ್ಭಾಮ್. ಗೀರ್ಭಿಃ। ಚ–ಗಿರೇ–ಗೀರ್ಭ್ಯಾಮ್–ಗೀರ್ಭ್ಯಃ॥ ಪಂ–ಗಿರಃ–ಗೀರ್ಭ್ಯಾಮ್–ಗೀರ್ಭ್ಯಃ॥ ಷ–ಗಿರಃ–ಗಿರೋಃ–ಗಿರಾಮ್.। ಸ। ಗಿರಿ–ಗಿರೋಃ–ಗೀರ್ಷು. ಇಲ್ಲಿ ಸ್ವಾಭಾವಿಕ ರೇಫವಾದುದರಿಂದ ಅದಕ್ಕೆ ಖರ್ ಪರವಾದರೂ ವಿಸರ್ಗವಿಲ್ಲ. "ರೋಃಸುಪಿ" ಸೂತ್ರದಿಂದ ರುವಿವ ರೇಫಕ್ಕೆ ಮಾತ್ರ ವಿಸರ್ಗವೆಂದು ನಿಯಮಮಾಡಿದೆ. ಹೀಗೆಯೇ ರೇಫಾಂತ ಸ್ತ್ರೀಲಿಂಗ ಪುಂಶಬ್ದ. ಹಲಾದಿಯಲ್ಲಿ ಉಪಧಾದೀರ್ಘ. ಪೂಃ–ಪುರೌ–ಪುರಃ ಇತ್ಯಾದಿ.

ರೇಫಾಂತ ಸ್ತ್ರೀಲಿಂಗ "ಚತುರ್" ಶಬ್ದ. (ನಾಲ್ಕು ಸ್ತ್ರೀತ್ವ ವಿಶಿಷ್ಟವಾದುದು)

ಬಹುತ್ವ ಸಂಖ್ಯಾವಾಚಕವಾದುದರಿಂದ ನಿತ್ಯ ಬಹುವಚನಾಂತ. ಚತುರ್+ಜಸ್ ಎಂದಿರುವಾಗ "ತ್ರಿಚತುರೋಃ"—ಸೂತ್ರದಿಂದ ಚತಸೃ ಆದೇಶ. ಚತಸೃ+ಅಸ್. "ಜಸಿಚ" ಸೂತ್ರದಿಂದ ಗುಣಪ್ರಾಪ್ತವಾದರೆ "ಅಚಿರಋತಃ" ಸೂತ್ರದಿಂದ ಋಕಾರಕ್ಕೆ ರೇಫಾದೇಶ. ಚತಸ್ರಃ, ಶಸಿನಲ್ಲಿಯೂ ಚತಸ್ರಃ॥ ತೃ। ಚತಸೃಭಿಃ। ಚ। ಚತಸೃಭ್ಯಃ। ಪಂ–ಚತಸೃಭ್ಯಃ। ಷ–ಚತಸೃ+ಆಮ್ ಎಂದಿರುವಾಗ "ಹ್ರಸ್ವನದ್ಯಾಪೋನುಟ್" ಸೂತ್ರದಿಂದ ಆಮಿಗೆ ನುಡಾಗಮ. ಚತಸೃ+ನಾಮ್. "ನಾಮಿ" ದೀರ್ಘ ಪ್ರಾಪ್ತವಾದರೆ "ನತಿಸೃಚತಸೃ" ಸೂತ್ರದಿಂದ ನಿಷೇಧ. "ಋವರ್ಣಾನ್ನಸ್ಯ ಣತ್ವಂ ವಾಚ್ಯಮ್" ವಾರ್ತಿಕದಿಂದ ಋಕಾರದ ಪರದಲ್ಲಿರುವ ನಕಾರಕ್ಕೆ ಣತ್ವಂ. ಚತಸೃಣಾಮ್॥ ಸ–ಚತಸೃಷು.

ಮಕಾರಾಂತ ಸ್ತ್ರೀಲಿಂಗ "ಕಿಮ್" ಶಬ್ದ. (ಯಾವಳು ?)

ಇದು ಸರ್ವನಾಮಶಬ್ದ. ಇದಕ್ಕೆ ವಿಭಕ್ತಿ ಪರವಾದಾಗ "ಕಿಮಃ ಕಃ" ಸೂತ್ರದಿಂದ ಕ ಆದೇಶ. ಆಗ ಅದಂತವಾದುದರಿಂದ "ಅಜಾದ್ಯತಷ್ಟಾಪ್" ಸೂತ್ರದಿಂದ ಸ್ತ್ರೀಲಿಂಗದಲ್ಲಿ ಟಾಪ್. ಕಾ. ಕಾ+ಸ್ ಎಂದಿರುವಾಗ "ಹಲ್ಙ್ಯಾಭ್ಯೋ"—ಸೂತ್ರದಿಂದ ಸುಲೋಪ. ಇದು ಅಕಾರಾಂತವಾದ ಸರ್ವಾ ಶಬ್ದದಂತೇ ಆಗುತ್ತದೆ. (ಸ್ತ್ರೀಲಿಂಗ ಸರ್ವಾಶಬ್ದ ನೋಡಿರಿ.)

ಪ್ರ–ಕಾ–ಕೇ–ಕಾಃ ದ್ವಿ–ಕಾಂ–ಕೇ–ಕಾಃ ತೃ–ಕಯಾ–ಕಾಭ್ಯಾಮ್–ಕಾಭಿಃ ಚ–ಕಸ್ಯೈ–ಕಾಭ್ಯಾಂ–ಕಾಭ್ಯಃ ಪಂ–ಕಸ್ಯಾಃ–ಕಾಭ್ಯಾಂ–ಕಾಭ್ಯಃ ಷ–ಕಸ್ಯಾಃ–ಕಯೋಃ–ಕಾಸಾಮ್. ಸ–ಕಸ್ಯಾಮ್–ಕಯೋಃ–ಕಾಸು.

ಮಕಾರಾಂತ ಸ್ತ್ರೀಲಿಂಗ "ಇದಮ್" ಶಬ್ದ. (ಇವಳು)

ಇದಮ್ + ಸ್ ಎಂದಿರುವಾಗ ತ್ಯದಾದ್ಯತ್ವಕ್ಕೆ ಅಪವಾದವಾಗಿ "ಇದಮೋಮ್ಃ" ಸೂತ್ರದಿಂದ ಮಕಾರಕ್ಕೆ ಮಕಾರವೇ ಬರುತ್ತದೆ. ಆಗ "ಹಲ್ಙ್ಯಾಭ್ಯೋ"— ಸೂತ್ರದಿಂದ ಸುಲೋಪ. ಸುಪರವಾದಾಗ ದಕಾರಕ್ಕೆ ಯಕಾರಾದೇಶ ಹೇಳುತ್ತಾನೆ.

(ಇದಮಿನ ದಕಾರಕ್ಕೆ ಯಕಾರ ಹೇಳುವ ಸೂತ್ರ)

ಷಟ್ಕ ಯಃ ಸೌ॥ ೭-೨ ೧೧೦॥

ಇದಮೋ ದಸ್ಯ ಯಃ।ಇಯಮ್। ತ್ಯದಾದ್ಯತ್ವಮ್। ಪರರೂಪತ್ವಮ್। ಟಾಪ್। ದಶ್ಚೇತಿ ಮಃ। ಇಮೇ। ಇಮಾಃ। ಇಮಾಮ್। ಅನಯಾ। ಹಲಿಲೋಪಃ। ಆಭ್ಯಾಮ್। ಆಭಿಃ। ಅಸ್ಯೈ। ಅಸ್ಯಾಃ। ಅನಯೋಃ। ಆಸಾಮ್। ಅಸ್ಯಾಮ್ ಆಸು॥ ತ್ಯದಾದ್ಯತ್ವಮ್। ಟಾಪ್। ಸ್ಯಾಃ। ತ್ಯೇ। ತ್ಯಾಃ॥ ಏವಂ ತದ್ ಏತದ್॥ ವಾಕ್, ವಾಗ್॥ ವಾಚಾ। ವಾಗ್ಭ್ಯಾಮ್। ವಾಕ್ಷು॥ ಅಸ್ಶಬ್ದೋ ನಿತ್ಯಂ ಬಹುವಚನಾಂತಃ। ಅಸ್ತೃನ್ನಿತಿ ದೀರ್ಘಃ। ಆಪಃ। ಅಪಃ॥

ದ್ವಿಪದಸೂತ್ರ. "ಇದಮೋಮಃ" ಸೂತ್ರದಿಂದ "ಇದಮಃ" "ದಶ್ಚ" ಸೂತ್ರದಿಂದ "ದಃ" ಆನುವೃತ್ತಿ. **ಸೂತ್ರಾರ್ಥ**— ಸುಪರದಲ್ಲಿರುವಾಗ ಇದಮಿನ ದಕಾರಕ್ಕೆ ಯಕಾರಾದೇಶ ಬರುತ್ತದೆ. ಇಯಮ್. ಇದಮ್ + ಸ್ ಎಂದಿರುವಾಗ "ತ್ಯದಾದೀನಾಮಃ" ಸೂತ್ರದಿಂದ ಮಕಾರಕ್ಕೆ ಅತ್ವ. ಇದ+ಅ+ಸ್. "ಅತೋಗುಣೇ" ಪರರೂಪ. ಇದ+ಸ್. ಈಗ ಅದಂತವಾದುದರಿಂದ ಟಾಪ್. ಇದಾ+ಸ್. "ಜಸಿ ಆಪಃ" ಸೂತ್ರದಿಂದ ಸುವಿಭಕ್ತಿಗೆ ಶೀಭಾವ. ಶಕಾರಇತ್. ಈ ಉಳಿಯುತ್ತದೆ ಇದ+ಈ ಆದ್ಗುಣಃ, ಇದೇ "ದಶ್ಚ" ಸೂತ್ರದಿಂದ ದಕಾರಕ್ಕೆ ಮತ್ವ. ಇಮೇ ಇದಮ್+ಜಸ್. ತ್ಯದಾದ್ಯತ್ವ, ಪರರೂಪ, ಟಾಪ್. "ಪ್ರಥಮಯೋಃ ಪೂರ್ವಸವರ್ಣಃ" ಪೂರ್ವಸವರ್ಣದೀರ್ಘ. "ದಶ್ಚ" ದಕಾರಕ್ಕೆ ಮಕಾರ. ಇಮಾಸ್. ಸಕಾರಕ್ಕೆ ರುತ್ವವಿಸರ್ಗ. ಇಮಾಃ॥ ಇದಮ್ + ಅಮ್. ಅತ್ವ, ಪರರೂಪ, ಟಾಪ್, ಮತ್ವಗಳು ಬಂದಮೇಲೆ "ಅಮಿಪೂರ್ವಃ" ಸೂತ್ರದಿಂದ ಪೂರ್ವರೂಪ. ಇಮಾಮ್, ದ್ವಿವಚನದಲ್ಲಿ ಹಿಂದಿನಂತೇ ರೂಪ. ಇಮೇ. ಶಸಿನಲ್ಲಿ ಜಸಿನಂತೇ ರೂಪ. ಇಮಾಃ ಪುಲ್ಲಿಂಗವಾಗದಿರುವುದರಿಂದ ಶಸಿನ ಸಕಾರಕ್ಕೆ ನತ್ವವಿಲ್ಲ. ತೃತೀಯಾದಲ್ಲಿ ಇದಮ್ + (ಟ್) ಆ ಎಂದಿರುವಾಗ ಅತ್ವ, ಪರರೂಪ, ಟಾಪ್. ಇದಾ+ಆ "ಅನ್ಯಾಸ್ಯಕ್ಃ"

ಸೂತ್ರದಿಂದ ಇದಿಗೆ ಅನ್ ಆದೇಶ. ಆನಾ + ಆ—"ಆಜ್ಞಾಚಾಪಃ" ಸೂತ್ರದಿಂದ ಟಾಪಿಗೆ ಪರವಾದುದರಿಂದ ಆಪಿಗೆ ಏಕಾರಾದೇಶ. ಅನೇ+ಆ. ಅಯಾದೇಶ. ಅನಯಾ. ಇದಮ್+ಭ್ಯಾಮ್. ತ್ಯದಾದ್ಯತ್ವ, ಪರರೂಪ. ಇದಾ+ಭ್ಯಾಮ್. "ಹಲಿಲೋಪಃ" ಸೂತ್ರದಿಂದ ಇದ್ ಎಂಬುದಕ್ಕೆ ಲೋಪ. ಆಭ್ಯಾಮ್. ಹಲಾದಿಯಲ್ಲಿ ಹೀಗೇ ಅತ್ವ, ಪರರೂಪ, ಟಾಪ್, ಇದ್‌ಲೋಪ. ಆಭಿಃ॥ ಚ-ಅಜಾದಿಯಲ್ಲಿ ಇದಿಗೆ ಅನಾದೇಶ. ಇದಮ್ + ಏ ಎಂದಿರುವಾಗ ಅತ್ವ, ಪರರೂಪ, ಟಾಪ್. ಇದಾ + ಏ "ಸರ್ವನಾಮ್ನಃ ಸ್ಯಾಟ್" ಸೂತ್ರದಿಂದ ಏಗೆ ಸ್ಯಾಟಾಗಮ. ಆಪಿಗೆ ಹ್ರಸ್ವ. ಇದ+ಸ್ಯಾ+ಏ ವೃದ್ಧಿ. ಇದಸ್ಯೈ- ಈಗ ಹಲಾದಿ ಪ್ರತ್ಯಯ ಪರವಾದುದರಿಂದ "ಹಲಿಲೋಪಃ" ಸೂತ್ರದಿಂದ ಇದಿಗೆ ಲೋಪ. ಅಸ್ಯೈ-ಆಭ್ಯಾಮ್. ಅಭ್ಯಃ॥ ಪಂ-ಇದಮ್+ಜಸಿ. ಅತ್ವ, ಪರರೂಪ, ಟಾಪ್. ಇದಾ+ಅಸ್. ಸ್ಯಾಟಾಗಮ, ಹ್ರಸ್ವ. ಇದ್‌ಲೋಪ. ಅಸ್ಯಾಃ ಆಭ್ಯಾಮ್-ಆಭ್ಯಃ॥ ಷ-ಏಕವಚನ ಹಿಂದಿನಂತೆಯೇ. ಅಸ್ಯಾಃ, ಇದಮ್ + ಓಸ್. ಎಂದಿರುವಾಗ ತ್ಯದಾದ್ಯತ್ವ, ಪರರೂಪ. ಟಾಪ್. ಇದಾ+ಓಸ್. ಇದಿಗೆ ಅನಾದೇಶ. ಆನಾ+ಓಸ್. "ಆಜ್ಞಾಚಾಪಃ" ಸೂತ್ರದಿಂದ ಟಾಪಿಗೆ ಏಕಾರ. ಅಯಾದೇಶ. ಅನಯೋಃ ಇದಮ್ + ಆಮ್. ತ್ಯದಾದ್ಯತ್ವ. ಪರರೂಪ. ಇದಾ + ಆಮ್. "ಆಮಿಸರ್ವನಾಮ್ನಃ ಸುಟ್" ಸೂತ್ರದಿಂದ ಆಮಿಗೆ ಸುಟಾಗನು. ಇದಾ + ನಾಮ್. ಈಗ ಹಲಾದಿ ವಿಭಕ್ತಿಯಾನುದರಿಂದ ಇದಿಗೆ ಲೋಪ. ಆಸಾಮ್. ಸ-ಇದಮ್+ಜಿ ಎಂದಿರುವಾಗ ತ್ಯದಾದ್ಯತ್ವ, ಪರರೂಪ. ಇದಾ + ಇ. "ಜಶೇರಾಮ್ ನದ್ಯಾಮ್ನೀಭ್ಯಃ" ಸೂತ್ರದಿಂದ ಜಿಗೆ ಆಮ್ ಆದೇಶ, ಅದಕ್ಕೆ ಸ್ಯಾಟ್ ಆಗಮ. ಆಪಿಗೆ ಹ್ರಸ್ವ. ಇದ+ಸ್ಯಾಮ್. ಹಲಾದಿಯಾದುದರಿಂದ ಇದಿಗೆ ಲೋಪ. ಅಸ್ಯಾಮ್. ಜಸಿನಲ್ಲಿ ಹಿಂದಿನಂತೇರೂಪ. ಅನಯೋಃ. ಇದಮ್ + ಸ್ ಎಂದಿರುವಾಗ, ತ್ಯದಾದ್ಯತ್ವ, ಪರರೂಪ, ಟಾಪ್. ಇದ್‌ಲೋಪ. ಆಸು.

ಜಕಾರಾಂತ, ಸ್ರಜ್ ಶಬ್ದ. (ಮಾಲೆ)

ಸ್ರಜ್ + ಸ್ ಎಂದಿರುವಾಗ " ಹಲ್ಙ್ಯಾಭ್ಯೋ—" ಸೂತ್ರದಿಂದ ಸುಲೋಪ. " ಚೋಃ ಕುಃ " ಸೂತ್ರದಿಂದ ಜಕಾರಕ್ಕೆ ಗಕಾರಾದೇಶ. ಸ್ರಗ್. " ವಾವಸಾನೇ " ಚರ್ತ್ವ. ಸ್ರಕ್. ಅಜಾದಿಯಲ್ಲಿ ಕಾರ್ಯವಿಲ್ಲ. ಸ್ರಜೌ-ಸ್ರಜಃ ಇತ್ಯಾದಿ. ಹಲಾದಿಯಲ್ಲಿ ಕುತ್ವ. ಸ್ರಗ್ಭ್ಯಾಮ್ ಇತ್ಯಾದಿ. ಸಪ್ತವೀ ಸುವಿನಲ್ಲಿ ಕುತ್ವ ಬಂದಾಗ " ಖರಿ ಚ " ದಿಂದ ಗಕಾರಕ್ಕೆ ಕಕಾರ. ಸ್ರಕ್+ಸು. " ಆದೇಶಪ್ರತ್ಯಯೋಃ " ಸ್ರಕ್+ಷು. ಸ್ರಕ್ಷು.—

ದಕಾರಾಂತ. ತ್ಯದ್‌ಶಬ್ದ. (ಅವಳು)

ತ್ಯದ್, ತದ್, ಏತದ್ ಈ ಮೂರು ಸರ್ವನಾಮ ಶಬ್ದಗಳು. ತ್ಯದ್+ಸ್ ಎಂದಿರುವಾಗ "ತ್ಯದಾದೀನಾಮಃ" ಸೂತ್ರದಿಂದ ಅತ್ವ. ತ್ಯ+ಅ+ಸ್. "ಅತ್ರೋ ಗುಣೇ" ಪರರೂಪ. ತ್ಯ+ಸ್. ಅದಂತವಾದುದರಿಂದ ಸ್ತ್ರೀಲಿಂಗದಲ್ಲಿ ಟಾಪ್. ತ್ಯಾ+ಸ್. ಆಬಂತದ ಪರದಲ್ಲಿರುವುದರಿಂದ "ಹಲ್‌ಜ್ಯಾಭ್ಯೋ–" ಸೂತ್ರದಿಂದ ಸುಲೋಪ. ತ್ಯಾ. "ತದೋಃ ಸಾವನಂತ್ಯಯೋಃ" ಸೂತ್ರದಿಂದ ಆದಿಯ ತಕಾರಕ್ಕೆ ಸಕಾರಾದೇಶ. ಸ್ಯಾ. ಇನ್ನು ಸರ್ವಾ ಶಬ್ದದಂತೇ ರೂಪವಾಗುತ್ತದೆ. ಹೀಗೆಯೇ ತದ್ ಶಬ್ದ. ತ್ಯದಾದ್ಯತ್ವ. ಪರರೂಪ. ಟಾಪ್. ತಕಾರಕ್ಕೆ ಸಕಾರ. ಸುಲೋಪ. ಸಾ—ತೇ—ತಾಃ ಸರ್ವನಾಮ ಶಬ್ದದಂತೇ ರೂಪ. ಸು ಪರವಾದಾಗ ಮಾತ್ರ ತಕಾರಕ್ಕೆ ಸಕಾರ. ಇತರ ಕಡೆಯಲ್ಲಿ ಇಲ್ಲ. ಹೀಗೆಯೇ ಏತದ್ ಶಬ್ದ. (ಇವಳು.) ಅತ್ವ, ಪರರೂಪ. ಸತ್ವ, ಟಾಪ್. ಏಸಾ. "ಆದೇಶಪ್ರತ್ಯಯಯೋಃ" ಸೂತ್ರದಿಂದ ಸಕಾರಕ್ಕೆ ಷಕಾರಾದೇಶ. ಏಷಾ–ಏತೇ–ಏತಾಃ ॥ ದ್ವಿತೀಯಾ, ಟಾ, ಓಸಿನಲ್ಲಿ "ದ್ವಿತೀಯಾಟೌಸ್ಯೇನಃ" ಸೂತ್ರದಿಂದ ಏನಾದೇಶ.

ದ್ವಿ ಏತಾಂ ಏನಾಂ । ಏತೇ ಏನೇ । ಏತಾಃ ಏನಾಃ ॥ ತೃ–ಏತಯಾ ಏನಯಾ। ಏತಾಭ್ಯಾಮ್ । ಏತಾಭಿಃ ॥ ಚ–ಏತಸ್ಮೈ । ಏತಾಭ್ಯಾಮ್ । ಏತಾಭ್ಯಃ ॥ ಪಂ–ಏತಸ್ಯಾಃ । ಏತಾಭ್ಯಾಮ್ । ಏತಾಭ್ಯಃ ॥ ಷ–ಏತಸ್ಯಾಃ । ಏತಯೋಃ ಏನಯೋಃ । ಏತಾಸಾಮ್ ॥ ಸ–ಏತಸ್ಯಾಮ್ । ಏತಯೋಃ ಏನಯೋಃ । ಏತಾಸು ॥ ಸರ್ವಾದಂತಿ ಪ್ರಕ್ರಿಯಾ ॥

ಚಕಾರಾಂತ "ವಾಚ್" ಶಬ್ದ. (ಮಾತು)

ವಾಚ್+ಸ್ ಎಂದಿರುವಾಗ "ಹಲ್‌ಜ್ಯಾಭ್ಯೋ"–ಸೂತ್ರದಿಂದ ಸುಲೋಪ. "ಚೋಃ ಕುಃ" ಸೂತ್ರದಿಂದ ಪದಾಂತದಲ್ಲಿ ಕುತ್ವ, ವಾಕ್. "ಝಲಾಂ ಜಶೋಂತೇ" ವಾವಸಾನೇ" ವಾಕ್. ವಾಚೌ–ವಾಚಃ ಇತ್ಯಾದಿ. ಭ್ಯಾಮಾದಿಗಳಲ್ಲಿ ಕುತ್ವ, ಜಶ್ತ್ವ. ವಾಗ್ಭ್ಯಾಮ್ ಇತ್ಯಾದಿ. ಸಸ್ತಮೀ ಸುವಿನಲ್ಲಿ ಕುತ್ವ. ಜಶ್ತ್ವ, ಚರ್ತ್ವ, ಷತ್ವ. ವಾಕ್ಷು ॥

ಪಕಾರಾಂತ. ಅಪ್. ಶಬ್ದ, (ನೀರು)

ಇದು ನಿತ್ಯ ಬಹುವಚನಾಂತವಾಗುತ್ತದೆ. ಅಪ್+ಜಸ್ ಎಂದಿರುವಾಗ "ಅಪ್‌ತೃನ್"–(ಸೂ. 206) ದಿಂದ ಉಪಧಾವೀರ್ಘ ಆಪ್+ಅಸ್. ಸಕಾರಕ್ಕೆ

ರುತ್ವವಿಸರ್ಗ. ಆಪಃ. ಅಪ್ (ಶ್) ಅಸ್. ರುತ್ವ, ವಿಸರ್ಗಃ. ಆಪಃ ।
ಅಪ್+ಭಿಸ್ ಎಂದಿರುವಾಗ ಪಕಾರಕ್ಕೆ ದಕಾರ ಹೇಳುತ್ತಾನೆ.

(ಅಪ್ ಶಬ್ದಕ್ಕೆ ದಕಾರ ಹೇಳುವ ಸೂತ್ರ)

೫೬೪. ಅಪ್ಪೋ ಭಿ ॥ ೭-೪-೪೮ ॥

ಅಪಸ್ತಕಾರೋ ಭಾದೌ ಪ್ರತ್ಯಯೇ ॥ ಅದ್ಭಿಃ । ಅದ್ಭ್ಯಃ । ಅದ್ಭ್ಯಃ । ಅಪಾಮ್ । ಅಪ್ಸು ॥ ದಿಕ್, ದಿಗ್ ದಿಶಾ। ದಿಶಃ । ದಿಗ್ಭ್ಯಾಮ್। ದಿಕ್ಷು ॥ ತ್ಯದಾದಿಷ್ವಿತಿ ದೃಶೇಃ ಕ್ವಿನ್‌ವಿಧಾನಾದನ್ಯತ್ರಾಪಿ ಕುತ್ವಮ್। ದೃಕ್–ದೃಗ್ । ದೃಶೌ–ದೃಶಃ । ದೃಗ್ಭ್ಯಾಮ್ । ದೃಕ್ಷು ॥ ತ್ವಿಟ್, ತ್ವಿಡ್ । ತ್ವಿಷೌ । ತ್ವಿಡ್ಭ್ಯಾಮ್ । ತ್ವಿಟ್ತ್ಸು, ತ್ವಿಟ್ಸು ॥ ಸಸ ಜುಷೋ ರುರಿತಿ ರುತ್ವಮ್। ಸಜೂಃ। ಸಜುಷೌ । ಸಜೂರ್ಭ್ಯಾಮ್॥ ಆಶೀಃ । ಆಶಿಷೌ । ಆಶೀರ್ಭ್ಯಾಮ್ ॥ ಅಸೌ । ಉತ್ವಮತ್ವೇ । ಅಮೂ । ಅಮೂಃ । ಅಮುಯಾ । ಅಮೂಭ್ಯಾಮ್ ॥ ೩ ॥ ಅಮೂಭಿಃ । ಅಮುಷ್ಮೈ । ಅಮೂಭ್ಯಃ ೨ ॥ ಅಮುಷ್ಮಾತ್ ೨ ॥ ಅಮುಯೋಃ ೨ ॥ ಅಮೂಷಾಮ್ । ಅಮುಷ್ಯಾಮ್ । ಅಮೂಷು ॥

ಇತಿ ಹಲಂತಸ್ತ್ರೀಲಿಂಗಾಃ ॥

ಅಪಃ, ಭಿ ॥ ದ್ವಿಪದ ಸೂತ್ರ. ಅಂಗಾಧಿಕಾರದಲ್ಲಿ ಈ ಸೂತ್ರವಿರುವುದರಿಂದ "ಪ್ರತ್ಯಯೇ" ಎಂಬುದು ಆಕ್ಷೇಪದಿಂದ ಸಿಗುತ್ತದೆ. ಅದಕ್ಕೆ ಭಿ ಎಂಬ ಸಪ್ತಮ್ಯಂತ ವಿಶೇಷಣವಾದುದರಿಂದ ಭಕಾರಾದಿಪ್ರತ್ಯಯಪರವಾದಾಗ ಎಂದರ್ಥವಾಗುತ್ತದೆ. "ಅಚ ಉಪಸರ್ಗಾತ್ತಃ" ಸೂತ್ರದಿಂದ "ತಃ" ಅನುವೃತ್ತಿ. **ಸೂತ್ರಾರ್ಥ**–ಅಪ್ ಶಬ್ದಕ್ಕೆ ಭಕಾರಾದಿಪ್ರತ್ಯಯಪರವಾದಾಗ ತಕಾರಾದೇಶ ಬರುತ್ತದೆ. "ಅಲೋಂತ್ಯಸ್ಯ" ಪರಿಭಾಷೆಯಿಂದ ಅಂತ್ಯಕ್ಕೆ ಆದೇಶ ಅದ್ಭಿಃ ॥ ಭಕಾರಾದಿ ಪ್ರತ್ಯಯಗಳಲ್ಲಿ ಹೀಗೆ, ತಕಾರಾದೇಶ. ಅದಕ್ಕೆ "ಝಲಾಂ ಜಶೋಂತೇ" ಸೂತ್ರದಿಂದ ಜಶ್ತ್ವ. ಅದ್‌ಭ್ಯಃ ಅದ್ಭ್ಯಃ, ಅಪಾಮ್. ಅಪ್ಸು.

ಶಕಾರಾಂತ. "ದಿಶ್" ಶಬ್ದ. (ದಿಕ್ಕು)

ದಿಶ ಅತಿಸರ್ಜನೇ. ಧಾತು. "ಋಕ್ವಿಕ್ ದಧೃಕ್"—ಸೂತ್ರದಿಂದ ಕ್ವಿನ್ ಪ್ರತ್ಯಯ. ಕ್ವಿನಿನಲ್ಲಿ ಸರ್ವಲೋಪ. ದಿಶ್+ಸ್. "ಹಲ್‌ಜ್ಯಾಭ್ಯೋ"—ಸೂತ್ರದಿಂದ ಸುಲೋಪ. "ವ್ರಶ್ಚಭ್ರಸ್ಜ"—ಸೂತ್ರದಿಂದ ಶಕಾರಕ್ಕೆ ಷಕಾರಾದೇಶ. "ಝಲಾಂ ಜಶೋಂತೇ" ಸೂತ್ರದಿಂದ ಷಕಾರಕ್ಕೆ ಡಕಾರಾದೇಶ. "ಕ್ವಿನ್ ಪ್ರತ್ಯಯಸ್ಯ ಕುಃ" ಸೂತ್ರದಿಂದ ಡಕಾರಕ್ಕೆ ಗಕಾರಾದೇಶ. ದಿಗ್. "ವಾವಸಾನೇ" ದಿಕ್ ದಿಶೌ—ದಿಶಃ ಇತ್ಯಾದಿ. ಭ್ಯಾಮಾದಿಗಳಲ್ಲಿ ಷತ್ವ, ಜಶ್ತ್ವ, ಕುತ್ವ. ದಿಗ್ಭ್ಯಾಮ್—ದಿಗ್ಭಿಃ ಇತ್ಯಾದಿ. ಸುವಿನಲ್ಲಿ ಷತ್ವ, ಜಶ್ತ್ವ, ಕುತ್ವ. "ಖರಿಚ" ಚರ್ತ್ವ. "ಆದೇಶಪ್ರತ್ಯಯಯೋಃ" ಷತ್ವ. ದಿಕ್ಷು ॥

ಶಕಾರಾಂತ ದೃಶ್ ಶಬ್ದ (ಕಣ್ಣು).

ದೃಶಿರ್ ಪ್ರೇಕ್ಷಣೇ. ಧಾತು. ಕ್ವಿಪ್‌ಪ್ರತ್ಯಯ. ಕ್ವಿಪಿನಲ್ಲಿ ಸರ್ವಲೋಪ ದೃಶ್+ಸ್ ಎಂದಿರುವಾಗ ದಿಶ್‌ಶಬ್ದದಂತೇ ರೂಪ. ದೃಶ್. ದೃಗ್—ದೃಕ್ಷ್—ದೃಶಃ. ಇತ್ಯಾದಿ. ಭ್ಯಾಮಾದಿಗಳಲ್ಲಿ ದೃಗ್ಭ್ಯಾಮ್—ದೃಗ್ಭಿಃ ಇತ್ಯಾದಿ. ಸಪ್ತಮೀ ಸುವಿನಲ್ಲಿ ದೃಕ್ಷು. ಇಲ್ಲಿ ಒಂದು ಆಶಂಕೆ ಬರುತ್ತದೆ. ದೃಶ್ ಧಾತುವಿಗೆ ಕ್ವಿನ್ ಬರಲಿಲ್ಲ. ಬಂದದ್ದು ಕ್ವಿಪ್‌ಪ್ರತ್ಯಯ. ಹೀಗಿರುವಾಗ ಜಶ್ತ್ವ ಬಂದಮೇಲೆ ದೃಡ್ ಎಂದಿರುವಾಗ "ಕ್ವಿನ್‌ಪ್ರತ್ಯಯಸ್ಯ ಕುಃ" ಎಂಬುದು ಬಹುಪ್ರೀತಿಯಂದು ಹಿಂದೆ ಹೇಳಿದೆ. ಇದನ್ನೇ "ತ್ಯದಾದಿಷು"—ಎಂಬ ವಾಕ್ಯದಿಂದ ವಿವರಿಸುತ್ತಾನೆ. "ತ್ಯದಾದಿಷು ದೃಶೋನಾಲೋಚನೇ ಕಞ್ಚ" ಸೂತ್ರದಿಂದ ತ್ಯದಾದಿಗಳು ಉಪಪದವಾಗಿರುವಾಗ ದೃಶಿಗೆ ಕ್ವಿನ್ ಹೇಳಿರುತ್ತಾನೆ. ಆದುದರಿಂದ ದೃಶ್ ಕ್ವಿನ್ ಹೊಂದುವುದಾಯಿತು. ಈಗ ತ್ಯದಾದಿಗಳು ಸಮೀಪದಲ್ಲಿ ಇಲ್ಲದಿದ್ದರೂ ಕ್ವಿನ್ ಹೊಂದಲು ಯೋಗ್ಯತೆಯಿರುವುದರಿಂದ ಕುತ್ವ ಬರುತ್ತದೆಯಂದು ತಿಳಿಯಬೇಕು.

ಷಕಾರಾಂತ ತ್ವಿಷ್ ಶಬ್ದ. (ಕಾಂತಿ)

ತ್ವಿಷ್+ಸ್ ಎಂದಿರುವಾಗ "ಹಲ್‌ಜ್ಯಾಭ್ಯೋ"—ಸೂತ್ರದಿಂದ ಸುಲೋಪ. "ಝಲಾಂ ಜಶೋಂತೇ" ಸೂತ್ರದಿಂದ ಷಕಾರಕ್ಕೆ ಡಕಾರ. "ವಾವಸಾನೇ" ಸೂತ್ರದಿಂದ ಅವಕ್ಕೆ ವಿಕಲ್ಪ ಟಕಾರ. ತ್ವಿಡ್, ತ್ವಿಟ್—ತ್ವಿಷೌ—ತ್ವಿಷಃ ಇತ್ಯಾದಿ.

ಭ್ಯಾಮಾದಿಗಳಲ್ಲಿ ಜಶ್ತ್ವಮಾತ್ರ. ತ್ವಿಡ್ಭ್ಯಾಮ್—ತ್ವಿಡ್ಭಿಃ ಇತ್ಯಾದಿ. ಸುಪರವಾದಾಗ ಜಶ್ತ್ವ. ತ್ವಿಡ್‌ಸು. "ಡಃಸಿಧ್ಮುಟ್" ಸೂತ್ರದಿಂದ ಸಕಾರಕ್ಕೆ ವಿಕಲ್ಪಧುಡಾಗಮ. ಅದಕ್ಕೆ ಚರ್ತ್ವ. ತ್ವಿಟ್‌ತ್‌ಸು. ಧುಡಾಗಮ ಬಾರದಿದ್ದರೆ ಡಕಾರಕ್ಕೆ ಚರ್ತ್ವ. ತ್ವಿಟ್‌ಸು.

ಷಕಾರಾಂತ ಸಜುಷ್ ಶಬ್ದ. (ಸ್ನೇಹಿತಳು)

ಸಜುಷ್+ಸ್ ಎಂದಿರುವಾಗ. "ಹಲ್‌ಜ್ಯಾಭ್ಯೋ"—ಸೂತ್ರದಿಂದ ಸುಲೋಪ. "ಸಸಜುಷೋರುಃ" ಸೂತ್ರದಿಂದ ಪದಾಂತದಲ್ಲಿ ಷಕಾರಕ್ಕೆ ರುತ್ವ. ಸಜುರ್. "ಅತೋರುಪಧಾಯಾ ದೀರ್ಘ ಇಕಃ" ಸೂತ್ರದಿಂದ ರೇಫಾಂತ ಧಾತುವಾದುದರಿಂದ ಉಪಧೆಯಾದ ಉಕಾರಕ್ಕೆ (ಇಕ್) ದೀರ್ಘ. ಸಜೂರ್. "ಖರವಸಾನಯೋಃ"—ಸೂತ್ರದಿಂದ ವಿಸರ್ಗ. ಸಜೂಃ—ಸಜುಷೌ—ಸಜುಷಃ। ಸಜುಷಮ್—ಸಜುಷೌ—ಸಜುಷಃ। ತೃ—ಸಜುಷಾ—ಭ್ಯಾಮಾದಿಗಳಲ್ಲಿ ಹಿಂದಿನಂತೆ ರುತ್ವ, ಉಪಧೆಗೆ ದೀರ್ಘ. ಖರ್ ಅವಸಾನಪರದಲ್ಲಿಲ್ಲದಿರುವುದರಿಂದ ರೇಫಕ್ಕೆ ವಿಸರ್ಗವಿಲ್ಲ. ಸಜೂರ್ಭ್ಯಾಮ್. ಸಜೂರ್ಭಿಃ ಇತ್ಯಾದಿ. ಸುವಿನಲ್ಲಿ ಖರ್‌ಪರವಾದುದರಿಂದ ವಿಸರ್ಗ. ಸಜೂಃಸು. "ವಾಶರಿ" ಸೂತ್ರದಿಂದ ವಿಸರ್ಗಕ್ಕೆ ವಿಕಲ್ಪವಾಗಿ ವಿಸರ್ಗ. ಇದು ಬಾರದಿದ್ದರೆ "ವಿಸರ್ಜನೀಯಸ್ಯ ಸಃ" ಸೂತ್ರದಿಂದ ವಿಸರ್ಗಕ್ಕೆ ಸಕಾರ. ಸಜೂಸ್‌ಸು. ಎರಡು ರೂಪಗಳಲ್ಲಿಯೂ "ನುಮ್ ವಿಸರ್ಜನೀಯ ಶರ್‌ವ್ಯವಾಯೇಪಿ" ಸೂತ್ರದಿಂದ ವಿಸರ್ಗ ಶರ್‌ವ್ಯವಧಾನವಿರುವುದರಿಂದ ಸುವಿನ ಸಕಾರಕ್ಕೆ ಷತ್ವ. ಸಜೂಃಷು, ಸಜೂಷ್ಸು.

ಷಕಾರಾಂತ, ಆಶಿಷ್ ಶಬ್ದ. (ಆಶೀರ್ವಾದ)

ಆಶಿಷ್+ಸ್. "ಹಲ್‌ಜ್ಯಾಭ್ಯೋ—" ಸೂತ್ರದಿಂದ ಸುಲೋಪ. ಆಶಿಷ್ ಎಂಬಲ್ಲಿ ಆಙ್ ಉಪಸರ್ಗ. ಶಾಸ್ ಧಾತುವಿಗೆ ಕ್ವಿಪ್. ಇದು ಪರವಾದಾಗ ಇತ್ವ. ಆಶಿಸ್. "ಶಾಸಿನಸಿಘಸೀನಾಂ ಚ" ಸೂತ್ರದಿಂದ ಸಕಾರಕ್ಕೆ ಷತ್ವ. "ಸಸಜುಷೋರುಃ" ಸೂತ್ರಕ್ಕೆ ಈ ಷತ್ವ ಬಂದುದು "ಪೂರ್ವತ್ರಸಿದ್ಧಾಮ್" ಸೂತ್ರರೀತ್ಯಾ ಆಸಿದ್ಧವಾದುದರಿಂದ ನಕಾರವಿದೆಯಂದು ಪದಾಂತದಲ್ಲಿ ರುತ್ವ ಬರುತ್ತದೆ. ಆಶಿರ್. "ವ್ಯೋರುಪಧಾಯಾಃ—" ಸೂತ್ರದಿಂದ ಉಪಧಾ ಇಕ್ಕಿಗೆ ದೀರ್ಘ. ಆಶೀರ್. ರೇಫಕ್ಕೆ "ಖರವ—" ಸೂತ್ರದಿಂದ ವಿಸರ್ಗ. ಆಶೀಃ—ಆಶಿಷೌ—ಆಶಿಷಃ ಇತ್ಯಾದಿ. ಭ್ಯಾಮಾದಿಗಳಲ್ಲಿಯೂ ಹೀಗೆ ರುತ್ವ. ಆಶೀರ್ಭ್ಯಾಮ್. ಆಶೀರ್ಭಿಃ ಇತ್ಯಾದಿ. ಸುವಿನಲ್ಲಿ ಸಜೂಷ್ ಶಬ್ದದಂತೆ ಆಶೀಃಷು, ಆಶೀಷ್ಸು. ಎರಡುರೂಪಗಳು.

ಸಕಾರಾಂತ ಅದಸ್ ಶಬ್ದ. (ಇವಳು)

ಸರ್ವನಾಮಶಬ್ದಗಳು ಮೂರುಲಿಂಗಗಳಲ್ಲಿಯೂ ಇರುವುದರಿಂದ ಈಗ ಸ್ತ್ರೀಲಿಂಗದಲ್ಲಿ ಪ್ರಕ್ರಿಯಾ ಹೇಳುತ್ತಾನೆ. ಅದಸ್+ಸ್ ಎಂದಿರುವಾಗ ಪುಲ್ಲಿಂಗದಂತೇ ರೂಪ. ಅಸ್ಯಾ, (“ಅದಸ ಔಸುಲೋಪಶ್ಚ”) ಅದಸ್+ಔ ಎಂದಿರುವಾಗ ತ್ಯದಾದ್ಯತ್ವ, ಪರರೂಪ. ಟಾಪ್. ಔ. “ಔಜಸ ಆಪಃ” ಸೂತ್ರದಿಂದ ಔಗೆ ಶೀಭಾವ. ಶಕಾರಇತ್. ಅದಾ+ಈ. ಗುಣ ಅದೇ. “ಅದಸೋಸೇರ್ದಾದುಸೋಮಃ” ಸೂತ್ರದಿಂದ ದಕಾರಕ್ಕೆ ಮಕಾರ, ಏಕಾರಕ್ಕೆ ಊಕಾರ. ಅಮೂ ಎಲ್ಲಾ ವಿಭಕ್ತಿ ಪರವಾದಾಗಲೂ ತ್ಯದಾದ್ಯತ್ವ, ಪರರೂಪ, ಟಾಪ್, ಈ ಮೂರು ಕಾರ್ಯಗಳು ಮೊದಲು ಬರುತ್ತವೆ. ಅದಾ+ಜಸ್. ಸವರ್ಣ ದೀರ್ಘ, ಅದಾಸ್. ಸಕಾರಕ್ಕೆ ರುತ್ವವಿಸರ್ಗ. ಅದಾಃ. ಈಗ “ಅದಸೋಃ”—ಸೂತ್ರದಿಂದ ದಕಾರಕ್ಕೆ ಮತ್ವ, ಆಕಾರಕ್ಕೆ ಊತ್ವ. ಅಮೂಃ. ಅದಂತದ ಪರದಲ್ಲಿ ಇಲ್ಲದಿರುವುದರಿಂದ ಜಸಿಗೆ ಶೀ ಭಾವವಿಲ್ಲ. ಅದಸ್+ಅಮ್. ಅದಾ+ಅಮ್. “ಅಮಿಪೂರ್ವ” ಪೂರ್ವರೂಪ ಅದಾಮ್. ಊತ್ವ, ಮತ್ವ. ಅಮೂಮ್. ಅಮೂ (ಹಿಂದಿನಂತೇ ಪ್ರಕ್ರಿಯಾ) ಅಮೂಃ (ಜಸಿನಂತೇ ರೂಪ) ಅದಾ+ಆ. “ಆಜಿಚಾಪಃ” ಸೂತ್ರದಿಂದ ಆಪಿಗೆ ಏಕಾರ. ಅದೇ+ಆ. ಅಯಾದೇಶ. ಅದಯಾ. ಊತ್ವ, ಮತ್ವ. ಅಮುಯಾ. ಅದಾ+ಭ್ಯಾಮ್. ಊತ್ವ, ಮತ್ವ. ಅಮೂಭ್ಯಾಮ್. ಅದಾ+ಭಿಸ್. ಅಮೂಭಿಃ॥ ಚ–ಅದಾ+ಙೀ. “ಸರ್ವನಾಮ್ನಃ”—ಸೂತ್ರದಿಂದ ಙೀಗೆ ಸ್ಯಾಟ್ಆಗಮ. ಆಪಿಗೆ ಹ್ರಸ್ವ. ಅದ+ಸ್ಯಾ+ಏ. ವೃದ್ಧಿ. ಅದಸ್ಯೈ. ಉತ್ವಮತ್ವ. ಅಮುಸ್ಯೈ “ಆದೇಶಪ್ರತ್ಯಯಯೋಃ” ಸೂತ್ರದಿಂದ ಷತ್ವ. ಅಮುಷ್ಯೈ ಅಮೂಭ್ಯಾಮ್–ಅಮೂಭ್ಯಃ। ಪಂ–ಅದಾ+ಜಸಿ. ಹಿಂದಿನಂತೇ ಸ್ಯಾಟ್, ಹ್ರಸ್ವ. ವೃದ್ಧಿ. ಅದಸ್ಯಾಃ. ಉತ್ವ, ಮತ್ವ, ಷತ್ವ, ಅಮುಷ್ಯಾಃ–ಅಮೂಭ್ಯಾಮ್. ಅಮೂಭ್ಯಃ। ಷ. ಏಕವಚನದಲ್ಲಿ ಹಿಂದಿನಂತೇರೂಪ. ಅಮುಷ್ಯಾಃ–ಅದಾ+ಓಸ್. “ಓಸಿಚ” ಸೂತ್ರದಿಂದ ಆಪಿಗೆ ಏಕಾರ. ಅದೇ+ಓಸ್. ಅಯಾದೇಶ. ಅದಯೋಸ್. ಉತ್ವ, ಮತ್ವ. ಸಕಾರಕ್ಕೆ ರುತ್ವವಿಸರ್ಗ ಅಮುಯೋಃ. ಅದಾ+ಅಮ್. “ಆಮಿಸರ್ವನಾಮ್ನ”—ಸೂತ್ರದಿಂದ ಆಮಿಗೆ ಸುಡಾಗಮ. ಅದಾಸಾಮ್. ಊತ್ವ, ಮತ್ವ, ಅಮೂಸಾಮ್ “ಆದೇಶ”–ಷತ್ವ. ಅಮೂಷಾಮ್। ಸ। ಅದಾ+ಙಿ. “ಙಿಸರ್ವನಾಮ್”—ಸೂತ್ರದಿಂದ ಙಿಗೆ ಆಮಾದೇಶ. ಆದಕ್ಕೆ ಹಿಂದಿನಂತೆ ಸ್ಯಾಡಾಗಮ ವೃದ್ಧಿ. ಆಪಿಗೆ ಹ್ರಸ್ವ. ಅದಸ್ಯಾಮ್. ಉತ್ವ, ಷತ್ವ, ಅಮುಷ್ಯಾಮ್. ಅಮುಯೋಃ ಹಿಂದಿನಂತೇ ಆಗುತ್ತದೆ. ಅದಾ+ಸು. ಊತ್ವ. ಮತ್ವ, ಷತ್ವ. ಅಮೂಷು.

ಅಥ ಹಲಂತ ನಪುಂಸಲಿಂಗ ಪ್ರಕರಣಮ್ ॥

ಇಲ್ಲಿಯೂ ವರ್ಣಸಮಾಮ್ನಾಯದ ಕ್ರಮದಂತೇ ಹಲಂತ ಶಬ್ದಗಳ ರೂಪವನ್ನು ಹೇಳುತ್ತಾನೆ. ಹಕಾರಾಂತ ನಪುಂಸಕಲಿಂಗ ಸ್ವನಡುಹ್ ಶಬ್ದ. ಶೋಭನಾಃ ಅನ್ವಾಹಃ ಯಸ್ಮಿನ್ ತತ್, ಸ್ವನ್ಡುತ್ ಕುಲಮ್. ಸುಂದರಗಳಾದ ಎತ್ತುಗಳು ಇರುವ ಕುಲ. ಸ್ವನ್ಡುಹ್+ಸ್ ಎಂದಿರುವಾಗ ಕಾರ್ಯ ಹೇಳುತ್ತಾನೆ.

ಸ್ವಮೋರ್ಲುಕ್ । ದತ್ವಮ್ । ಸ್ವನಡುತ್, ಸ್ವನಡುದ್ । ಸ್ವನಡುಹೀ। ಚತುರನಡುಹೋರಿತ್ಯಾಮ್। ಸ್ವನಡ್ವಾಂಹಿ । ಪುನಸ್ತದ್ವತ್ । ಶೇಷಂ ಪುಂವತ್ । ವಾಃ । ವಾರೀ । ವಾರಿ । ವಾಭ್ಯಾಮ್ ॥ ಚತ್ವಾರಿ ॥ ಕಿಮ್ । ಕೇ । ಕಾನಿ ॥ ಇದಮ್ । ಇಮೇ । ಇಮಾನಿ ॥

ವಾ ॥ (ಅನ್ವಾದೇಶೇ ನಪುಂಸಕೇ ವಾ ಏನದ್ವಕ್ತವ್ಯಃ) ಏನತ್ । ಏನೇ । ಏನಾನಿ । ಏನೇನ । ಏನಯೋಃ ॥ ಅಹಃ । ವಿಭಾಷಾ ಙಿಶ್ಯೋಃ । ಅಹ್ನೀ, ಅಹನೀ । ಅಹಾನಿ ॥

“ಸ್ವಮೋರ್ನಪುಂಸಕಾತ್” ಸೂತ್ರದಿಂದ ಸು, ಅಮ್‌ಗಳಿಗೆ ಲುಕ್. ಸ್ವನಡುಹ್. ಪದಾಂತವಾದುದರಿಂದ “ವಸುಸ್ರಂಸುಧ್ವಂಸ್ವನಡುಹಾಂದಃ” ಸೂತ್ರದಿಂದ ಹಕಾರಕ್ಕೆ ದಕಾರಾದೇಶ. ಸ್ವನಡುದ್. “ವಾವಸಾನೇ” ಸ್ವನಡುತ್. ಸ್ವನಡುಹ್+ಔ ಎಂದಿರುವಾಗ “ನಪುಂಸಕಾಚ್ಚ” ಸೂತ್ರದಿಂದ ಔಗೆ ಶೀ ಆದೇಶ. ಶಕಾರ ಇತ್. ಸ್ವನಡುಹೀ. ಸ್ವನಡುಹ್+ಜಸ್ ಎಂದಿರುವಾಗ “ಜಶ್ಶಸೋಃ ಶಿಃ” ಸೂತ್ರದಿಂದ ಜಸ್ ಶಸ್‌ಗಳಿಗೆ ಶಿ ಆದೇಶ. ಇ ಉಳಿಯುತ್ತದೆ. “ಶಿ ಸರ್ವನಾಮಸ್ಥಾನಮ್” ಸೂತ್ರದಿಂದ ಶಿಗೆ ಸರ್ವನಾಮಸ್ಥಾನ ಸಂಜ್ಞೆಯಿರುವುದರಿಂದ “ನವುಂಸಕಸ್ಯ ಝಲಚಃ” (ಸೂ 240) ಸೂತ್ರದಿಂದ ನುಮಾಗಮ. ಮಿತ್ತಾದುದರಿಂದ ಅಂತ್ಯಾಚಿನ ಪರವಾಗಿ ಬಂದರೆ ಸ್ವನಡುನ್ಹ್+ಇ. “ಚತುರನಡುಹೋರಾಮ್ ಉದಾತ್ತಃ” (ಸೂ 260) ಸೂತ್ರದಿಂದ ಆಮಾಗಮ. ಇದೂ ಅಂತ್ಯಾಚಿನ ಪರವಾಗಿ ಬಂದರೆ ಸ್ವನಡು+ಆನ್ಹ್+ಇ. ಯಣ್. ಸ್ವನಡ್ವಾನ್ಹ್+ಇ. “ನಶ್ಚಾಪದಾಂತಸ್ಯ ಝಲಿ” ಸೂತ್ರದಿಂದ ನಕಾರಕ್ಕೆ ಅನುಸ್ವಾರ. ಸ್ವನಡ್ವಾಂಹಿ. ಸು–ಅಮ್‌ಗಳಿಗೆ ಲುಕ್ ಹೇಳಿದುದರಿಂದಲೂ, ಔಗೆ ಶೀ ಭಾವ, ಜಸ್ ಶಸ್‌ಗಳಿಗೆ ಶಿಭಾವ ಹೇಳಿದುದ

ರಿಂದಲೂ ದ್ವಿತೀಯಾದಲ್ಲಿಯೂ ಹೀಗೆ ರೂಪವಾಗುತ್ತದೆ. ಸ್ವನಡುತ್–ದ್ । ಸ್ವನಡುಹೀ–ಸ್ವನಡ್ವಾಂಹಿ. ತೃತೀಯಾದಿಗಳಲ್ಲಿ ನಪುಂಸಕದ ಕಾರ್ಯವಿಲ್ಲದಿರುವುದರಿಂದ ಪುಲ್ಲಿಂಗದಂತೇ ರೂಪವಾಗುತ್ತದೆ. ಹಲಾದಿ ವಿಭಕ್ತಿಗಳಲ್ಲಿ ಹಕಾರಕ್ಕೆ ದಕಾರ. ಸ್ವನಡುದ್ಭ್ಯಾಮ್. ಇತ್ಯಾದಿ. ಅಜಾದಿಯಲ್ಲಿ ಪ್ರತ್ಯಯ ಸೇರಿಸುವುದು ಮಾತ್ರ.

ರೇಫಾಂತ. ವಾರ್ ಶಬ್ದ. (ನೀರು)

ಸು, ಅಮ್‌ಗಳಿಗೆ "ಸ್ವಮೋರ್ನಪುಂಸಕಾತ್" ಸೂತ್ರದಿಂದ ಲುಕ್. ವಾರ್. ಅವಸಾನವಿರುವುದರಿಂದ "ಖರವಸಾನಯೋರ್ವಿಸರ್ಜನೀಯಃ" ಸೂತ್ರದಿಂದ ರೇಫಕ್ಕೆ ವಿಸರ್ಗ. ವಾಃ, ಔಗೆ "ನಪುಂಸಕಾಚ್ಚ" ದಿಂದ ಶೀ ಭಾವ. ವಾರೀ. ಜಸ್ ಶಸ್‌ಗಳಿಗೆ "ಜಶ್ಶಸೋಃ ಶಿಃ" ಸೂತ್ರದಿಂದ ಶಿಭಾವ. ವಾರಿ. ಝಲಂತವಾಗದಿರುವುದರಿಂದ ನುಮಾಗಮವಿಲ್ಲ. ದ್ವಿತೀಯಾದಲ್ಲಿಯೂ ಹೀಗೆ ರೂಪ. ವಾಃ–ವಾರೀ–ವಾರಿ ॥ ತೃ. ವಾರಾ–ವಾರ್‌ಭ್ಯಾಮ್–ವಾರ್ಭಿಃ ಇತ್ಯಾದಿ. ಸುಪಿನಲ್ಲಿ ಸ್ವಾಭಾವಿಕ ರೇಫವಾದುದರಿಂದ ವಿಸರ್ಗವಿಲ್ಲ, ವಾರ್ಷು ॥

ರೇಫಾಂತ ಚತುರ್ ಶಬ್ದ. (ನಾಲ್ಕು)

ಇದು ನಿತ್ಯ ಬಹುವಚನ ಹೇಳುವುದರಿಂದ ಜಸ್ ಪ್ರತ್ಯಯಬಂದರೆ ಅದಕ್ಕೆ ಶಿ ಆದೇಶ. ಚತುರ್+(ಶ್) ಇ ಎಂದಿರುವಾಗ "ಚತುರನಡುಹೋರಾಮ್ ಉದಾತ್ತಃ" ಸೂತ್ರದಿಂದ ಆಮ್ ಆಗಮ. ಮಿತ್ತಾದುದರಿಂದ ಅಂತ್ಯಾಚಿನ ಪರವಾಗಿ ಬಂದರೆ ಚತುಆರ್+ಇ. ಯಣ್. ಚತ್ವಾರಿ. ಶಸಿಗೂ ಶಿ ಆದೇಶ ಬರುವುದರಿಂದ ಚತ್ವಾರಿ ರೂಪವಾಗುತ್ತದೆ. ಭಿಸಾದಿಗಳಲ್ಲಿ ಪುಲ್ಲಿಂಗದಂತೇ ಪ್ರಕ್ರಿಯೆ. ಚತುರ್ಭಿಃ, ಚತುರ್ಭ್ಯಃ, ಚತುರ್ಭ್ಯಃ । ಚತುರ್ಣಾಮ್. ಚತುರ್ಷು.

ಮಕಾರಾಂತ ಕಿಮ್ ಶಬ್ದ. (ಯಾವುದು?)

"ಸ್ವಮೋರ್ನಪುಂಸಕಾತ್" ಸೂತ್ರದಿಂದ ಸು, ಅಮ್‌ಗಳಿಗೆ ಲುಕ್. ಕಿಮ್ ಎಂದೇ ಉಳಿಯುತ್ತದೆ. ಔ ವಿಭಕ್ತಿಗೆ "ನಪುಂಸಕಾಚ್ಚ" ಸೂತ್ರದಿಂದ ಶೀಭಾವ. "ಕಿಮಃ ಕಃ" ಸೂತ್ರದಿಂದ ಕ ಆದೇಶ. ಕ+ಈ ಎಂದಿರುವಾಗ ಗುಣ. ಕೇ. ಕಿಮ್+ಜಸ್. ಕಿಮಿಗೆ ಕಾದೇಶ. ಜಸಿಗೆ ಶಿ ಆದೇಶ. ಕ+ಇ ಎಂದಿರುವಾಗ

"ನಪುಂಸಕಸ್ಯಝಲಚಃ" ಸೂತ್ರದಿಂದ ನುಮಾಗಮ. ಕನ್+ಇ. "ಸರ್ವನಾಮಸ್ಥಾನೇ ಚಾಸಂಬುದ್ಧೌ" ಸೂತ್ರದಿಂದ ಉಪಧಾದೀರ್ಘ. ಕಾನಿ. ದ್ವಿತೀಯಾದಲ್ಲಿಯೂ ಇದೇ ರೂಪ. ಕಿಮ್–ಕೇ–ಕಾನಿ. ತೃತೀಯಾದಿಂದ ಪುಲ್ಲಿಂಗದಂತೇ ರೂಪ. ಕೇನ–ಕಾಭ್ಯಾಮ್–ಕೈಃ ಇತ್ಯಾದಿ.

ಮಕಾರಾಂತ "ಇದಮ್" ಶಬ್ದ. (ಇದು)

ಇದಮಿನ ಪರದಲ್ಲಿರುವ ಸು, ಅಮ್‌ಗಳಿಗೆ ಲೋಪ. ಆಗ ಸುವಿನಲ್ಲಿ ಇದಮ್ ಎಂದೇ ರೂಪ. ಇದಮ್+ಔ ಎಂದಿರುವಾಗ ಹಿಂದಿನಂತೆ ಔ ವಿಭಕ್ತಿಗೆ ಶೀ ಆದೇಶ. "ತ್ಯದಾದೀನಾಮಃ" ಸೂತ್ರದಿಂದ ಮಕಾರಕ್ಕೆ ಅ ಆದೇಶ. "ಅತೋಗುಣೇ" ಪರರೂಪ. ಇದ+ಈ. "ಆದ್ಗುಣಃ" ಗುಣ. ಇದೇ. "ದಶ್ಚ" ಸೂತ್ರದಿಂದ ದಕಾರಕ್ಕೆ ಮಕಾರಾದೇಶ ಇಮೇ. ಇದಮ್+ಜಸ್. ಜಸ್ ಶಸ್‌ಗಳಿಗೆ ಹಿಂದಿನಂತೆ ಶಿ ಆದೇಶ. ಇದಮ್+ಇ. ತ್ಯದಾದ್ಯತ್ವ, ಪರರೂಪ. ಇದ+ಇ. ಶಿಗೆ ಸರ್ವನಾಮಸ್ಥಾನ ಸಂಜ್ಞೆಯಿರುವುದರಿಂದ "ನಪುಂಸಕಸ್ಯಝಲಚಃ" ಸೂತ್ರದಿಂದ ಇದ ಎಂಬುದಕ್ಕೆ ನುಮಾಗಮ. ಇದನ್+ಇ. "ಸರ್ವನಾಮಸ್ಥಾನೇ–" ಸೂತ್ರದಿಂದ ಉಪಧಾದೀರ್ಘ. ಇದಾನಿ. "ದಶ್ಚ" ಸೂತ್ರದಿಂದ ದಕಾರಕ್ಕೆ ಮಕಾರಾದೇಶ. ಇಮಾನಿ. ದ್ವಿತೀಯಾದಲ್ಲಿಯೂ ಹೀಗೇ ರೂಪ. ತೃತೀಯಾದಿಂದ ಪುಲ್ಲಿಂಗದಂತೆ ರೂಪ. ದ್ವಿತೀಯಾ, ಟಾ, ಓಸ್ ವಿಭಕ್ತಿಗಳಲ್ಲಿ ಇದಮ್ ಶಬ್ದಕ್ಕೆ ಏನಾದೇಶ ಹಿಂದೆ ಹೇಳಿದೆ. (ಸೂ 282) ಇಲ್ಲಿ ವಾರ್ತಿಕಕಾರರು ಏನಾದೇಶಕ್ಕೆ ಅಪವಾದವಾಗಿ ಏನತ್ ಆದೇಶ ಹೇಳುತ್ತಾರೆ ವಾರ್ತಿಕಾರ್ಥ. ಇದಮ್, ಏತದ್‌ಶಬ್ದಗಳಿಗೆ ಅನ್ವಾದೇಶ ವಿಷಯದಲ್ಲಿ ಏನತ್ ಆದೇಶ ವಿಕಲ್ಪವಾಗಿ ಹೇಳಬೇಕು. ಅನ್ವಾದೇಶವೆಂದರೆ ಒಂದು ಕಾರ್ಯಕ್ಕೋಸ್ಕರ ಒಬ್ಬನನ್ನು ತೆಗೆದುಕೊಂಡು ಇನ್ನೊಂದು ಕಾರ್ಯ ಹೇಳಲು ಪುನಃ ಅವನನ್ನೇ ತೆಗೆದುಕೊಳ್ಳುವುದು ಎಂದು ಹಿಂದೆ ಹೇಳಿದೆ. ಏನತ್ ಆದೇಶದ ಪ್ರಯೋಜನ ದ್ವಿತೀಯಾ ಏಕವಚನದಲ್ಲಿ ಮಾತ್ರ ಸ್ಪಷ್ಟವಾಗಿದೆ. ಅಲ್ಲಿ ಏನತ್+ಅಮ್ ಎಂದಿರುವಾಗ ಅಮಿಗೆ "ಸ್ವಮೋರ್ನಪುಂಸಕಾತ್" ಸೂತ್ರದಿಂದ ಲುಕ್ ಬರುವುದರಿಂದ ವಿಭಕ್ತಿ ಪರದಲ್ಲಿಲ್ಲದುದರಿಂದ ತ್ಯದಾದ್ಯತ್ವ ಬರುವುದಿಲ್ಲ. ಇತರ ವಿಭಕ್ತಿಗಳಲ್ಲಿ ತ್ಯದಾದ್ಯತ್ವ ಪರರೂಪ ಬಂದು ಏನ ಎಂದೇ ಆಗುತ್ತದೆ. ಔಗೆ ಶೀ ಆದೇಶಬಂದು ಗುಣ. ಏನ+ಈ. ಏನೇ. ಶಸಿಗೆ ಶಿ ಆದೇಶ. ನುಮ್. ಉಪಧಾದೀರ್ಘ. ಏನಾನಿ. ಇತರ ವಿಭಕ್ತಿಗಳಲ್ಲಿ ಪುಲ್ಲಿಂಗದಂತೇ ರೂಪ.

ಪ್ರ—ಇದಮ್ । ಇಮೇ। ಇಮಾನಿ॥ ದ್ವಿ—ಇದಮ್ ಏನತ್ ಏನದ್॥ ಇಮೇ। ಇಮಾನಿ। ತೃ–ಅನೇನ। ಏನೇನ ಆಭ್ಯಾಮ್। ಏಭಿಃ। ಚ–ಅಸ್ಮೈ। ಆಭ್ಯಾಮ್। ಏಭ್ಯಃ।

ಸಂ—ಅಸ್ಮಾತ್। ಆಭ್ಯಾಮ್ ಏಭ್ಯಃ। ಷ—ಅಸ್ಯ। ಅನಯೋಃ ಏನಯೋಃ। ಏಷಾಮ್॥
ಸ—ಅಸ್ಮಿನ್। ಅನಯೋಃ ಏನಯೋಃ। ಏಷು॥

ನಕಾರಾಂತ, ಅಹನ್ ಶಬ್ದ. (ಹಗಲು)

ಅಹನ್+ಸ್ ಎಂದಿರುವಾಗ ಸುವಿಗೆ ಲುಕ್. ಅಹನ್. "ರೋಽಸುಪಿ" (ಸೂ. 110) ಸೂತ್ರದಿಂದ ನಕಾರಕ್ಕೆ ರೇಫಾದೇಶ. ಅಹರ್. "ಖರವಸಾನಯೋರ್ವಿಸರ್ಜನೀಯಃ" ಸೂತ್ರದಿಂದ ರೇಫಕ್ಕೆ ವಿಸರ್ಗ. ಅಹಃ. ಅಹನ್+ಔ. "ನಪುಂಸಕಾಚ್ಚ" ಔಗೆ ಶೀಭಾವ. ಅಹನೀ. "ವಿಭಾಷಾ—ಜಸ್ಶೀಃ" (ಸೂ. 249) ಸೂತ್ರದಿಂದ ಶೀ ಪರವಾದಾಗ ವಿಕಲ್ಪವಾಗಿ ಅನಿನ ಅಕಾರಕ್ಕೆ ಲೋಪ. ಅಹ್ನೀ. ಹೀಗೆ ಎರಡು ರೂಪ. ಅಹನ್+ಜಸ್. ಜಸಿಗೆ ಶಿಭಾವ. ಉಪಧಾದೀರ್ಘ. ಅಹಾನಿ. ದ್ವಿತೀಯಾದಲ್ಲಿಯೂ ಹೀಗೆ ರೂಪ. ಅಹಃ। ಅಹ್ನೀ—ಅಹನೀ। ಅಹಾನಿ. ತೃತೀಯಾದಿ ಅಜಾದಿಗಳಲ್ಲಿ ರಾಜನ್ ಶಬ್ದದಂತೇ ರೂಪ. ಅಹನ್+ಆ. "ಅಲ್ಲೋಪೋನಃ" ದಿಂದ ಅನಿನ ಆಕಾರಕ್ಕೆ ಲೋಪ. ಅಹ್ನಾ—ಅಹನ್+ಭ್ಯಾಮ್ ಎಂದಿರುವಾಗ "ನಲೋಪಃ ಪ್ರಾತಿಪದಿಕಾಂತಸ್ಯ" ಸೂತ್ರದಿಂದ ನಲೋಪ ಪ್ರಾಪ್ತವಾದರೆ ಅದಕ್ಕೆ ಅಪವಾದವಾಗಿ ರುತ್ವ ಹೇಳುತ್ತಾನೆ.

(ಅಹನ್ ಶಬ್ದಕ್ಕೆ ರುತ್ವ ಹೇಳುವ ಸೂತ್ರ)

೩೬೫. ಅಹನ್ ॥ ಲ-೨-೬೮ ॥

ಅಹನ್ನಿತ್ಯಸ್ಯ ರುಃ ಪದಾಂತೇ। ಅಹೋಭ್ಯಾಮ್ ॥ ದಂಡಿ। ದಂಡಿನೀ। ದಂಡೀನಿ। ದಂಡಿನಾ। ದಂಡಿಭ್ಯಾಮ್ ॥ ಸುಪಥಿ। ಟೇಲೋರ್ಲೋಪಃ। ಸುಪಥೀ। ಸುಪಂಥಾನಿ ॥ ಊರ್ಕ್, ಊರ್ಗ್। ಊರ್ಜೀ। ಊರ್ಜಿ। ನರಜಾನಾಂ ಸಂಯೋಗಃ।

ಏಕಪದ ಸೂತ್ರ. "ಸಸಜುಷೋರುಃ" ಸೂತ್ರದಿಂದ ರುಃ ಅನುವೃತ್ತಿ. "ಪದಸ್ಯ" ಅಧಿಕಾರ. "ಸ್ಕೋಃ ಸಂಯೋಗಾದ್ಯೋರಂತೇ ಚ" ಸೂತ್ರದಿಂದ 'ಅಂತೇ' ಅನುವೃತ್ತಿ ಅಹನ್ ಎಂಬುದು ಲುಪ್ತಷಷ್ಠೀಕ. ಷಷ್ಠೀ ಲುಪ್ತವಾಗಿದೆ. **ಸೂತ್ರಾರ್ಥ**—ಅಹನ್ ಶಬ್ದಕ್ಕೆ ಪದಾಂತದಲ್ಲಿ ರುತ್ವ ಬರುತ್ತದೆ. ಅಹನ್+ಭ್ಯಾಮ್. ಎಂದಿರುವಾಗ "ಸ್ವಾದಿಷ್ವಸರ್ವನಾಮಸ್ಥಾನೇ" ಸೂತ್ರದಿಂದ ಪದಸಂಜ್ಞೆ ಬರುತ್ತದೆ. ರುತ್ವ ಒಂದರಿ ಅಹರ್ ಭ್ಯಾಮ್. ಹಶ್ ಪರರಲ್ಲಿರುವುದರಿಂದ "ಹಶಿಚ" ಸೂತ್ರದಿಂದ ರುವಿನ ರೇಫಕ್ಕೆ ಉತ್ವ. ಅಹ+ಉಭ್ಯಾಮ್. ಗುಣ. ಅಹೋಭ್ಯಾಮ್.

ಹೀಗೆ ಹಲಾದಿಯಲ್ಲಿ ರುತ್ವ, ಉತ್ವ, ಗುಣ. ಅಹೋಭಿಃ। ಚ—ಅಹ್ನೇ—ಅಹೋಭ್ಯಾಮ್—ಅಹೋಭ್ಯಃ। ಪಂ—ಅಹ್ನಃ—ಅಹೋಭ್ಯಾಮ್—ಅಹೋಭ್ಯಃ। ಷ—ಅಹ್ನಃ—ಅಹ್ನೋಃ—ಅಹ್ನಾಮ್. ಸ.ಅಹ್ನಿ—ಅಹನಿ (ವಿಭಾಷಾಜಸ್ಶ್ಯೋಃ ಸೂತ್ರದಿಂದ ಅಲ್ಲೋಪವಿಕಲ್ಪ) ಅಹ್ನೋಃ—ಅಹಸ್ಸು. ಅಹಃಸು.

ನಕಾರಾಂತ ದಂಡಿನ್ ಶಬ್ದ. (ದಂಡವುಳ್ಳದ್ದು)

ದಂಡಃ ಅಸ್ಯ ಅಸ್ತಿ ಇತಿ ದಂಡಿ. ದಂಡವುಳ್ಳಕುಲ, ದಂಡಿನ್+ಸ್. ಹಿಂದಿನಂತೆ ಸು, ಅಮ್‌ಗಳಿಗೆ ಲುಕ್. ದಂಡಿನ್. "ನಲೋಪಃ ಪ್ರಾತಿಪದಿಕಾಂತಸ್ಯ" ಸೂತ್ರದಿಂದ ನಲೋಪ. ದಂಡಿ. ಔ ವಿಭಕ್ತಿಗೆ ಶೀ ಭಾವ. ದಂಡಿನೀ. ಜಸ್ ಶಸ್‌ಗಳಿಗೆ ಶಿಭಾವ. ದಂಡಿನ್+ಇ. ಉಪಧಾದೀರ್ಘ. ದಂಡೀನಿ. ದ್ವಿತೀಯಾದಲ್ಲಿಯೂ ಹೀಗೇರೂಪ. ತೃತೀಯಾದಿಂದ ಪುಲ್ಲಿಂಗದಂತೇರೂಪ. ಹಲಾದಿಯಲ್ಲಿ ನಲೋಪ. ದಂಡಿನಾ ದಂಡಿಭ್ಯಾಮ್. ದಂಡಿಭಿಃ ॥ ಇತ್ಯಾದಿ.

ನಕಾರಾಂತ "ಸುಪಥಿನ್" ಶಬ್ದ. (ಒಳ್ಳೆದಾರಿಯುಳ್ಳದ್ದು.)

ಶೋಭನಃ ಪಂಥಾಃ ಯಸ್ಯ ತತ್। ಸುಪಥಿ. ಸುಪಥಿನ್+ಸ್ ಎಂದಿರುವಾಗ ಹಿಂದಿನಂತೆ ಸುಲೋಪ, ನಲೋಪ. ಸುಪಥಿ. ಸುಪಥಿನ್+ಔ. ಔಗೆ ಶೀ ಭಾವ. ಸುಪಥಿನೀ. ಸುಪಥಿನ್+ಜಸ್. ಜಸ್ ಶಸ್‌ಗಳಿಗೆ ಶಿಭಾವ. ಇದಕ್ಕೆ ಸರ್ವನಾಮಸ್ಥಾನ ಸಂಜ್ಞೆಯಿರುವುದರಿಂದ "ಥೋನ್ಥಃ" ಸೂತ್ರದಿಂದ ಥಕಾರಕ್ಕೆ ನ್ಥಾದೇಶ. ಸುಪನ್ಥನ್+ಇ. "ಸರ್ವನಾಮಸ್ಥಾನೇ ಚಾಸಂಬುದ್ಧೌ" ಸೂತ್ರದಿಂದ ಉಪಧಾದೀರ್ಘ ಸುಪನ್ಥಾನಿ. ದ್ವಿತೀಯಾದಲ್ಲಿಯೂ ಹೀಗೇರೂಪ. ತೃತೀಯಾದಿಂದ ಪುಲ್ಲಿಂಗದ ಪಥಿನ್ ಶಬ್ದದಂತೇ ರೂಪ. ಸುಪಥಾ—ಸುಪಥಿ. ಭ್ಯಾಮ್—ಸುಪಥಿಭಿಃ॥ ಇತ್ಯಾದಿ.

ಜಕಾರಾಂತ ಊರ್ಜ್ ಶಬ್ದ. (ಬಲ, ತೇಜಸ್ಸು).

ಸು, ಅಮ್‌ಗಳಿಗೆ "ಸ್ವಮೋಃ—"—ಸೂತ್ರದಿಂದ ಲುಕ್. ಊರ್ಜ್. "ಚೋಃ ಕುಃ" ಸೂತ್ರದಿಂದ ಜಕಾರಕ್ಕೆ ಗಕಾರಾದೇಶ. "ವಾವಸಾನೇ" ಸೂತ್ರದಿಂದ ಅದಕ್ಕೆ ವಿಕಲ್ಪ ಚರ್ತ್ವ. ಊರ್ಗ್, ಊರ್ಕ್. ಔಗೆ ಶೀ ಭಾವ. ಊರ್ಜೀ.

ಊರ್ಜ್+(ಶ್) ಇ ಎಂದಿರುವಾಗ ಝಲಂತವಾದುದರಿಂದ "ನಪುಂಸಕಸ್ಯ ಝಲಚಃ" ಸೂತ್ರದಿಂದ ನುಮಾಗಮ. ಅಂತ್ಯಾಚಿನಪರವಾಗಿ ಬಂದರೆ ಊನರ್ಜ್+ಇ. ಊನರ್ಜಿ. ನ, ರೇಫ, ಜಕಾರಗಳಿಗೆ ಸಂಯೋಗ. ನಕಾರಕ್ಕೆ ಮಧ್ಯೆ ರೇಫವಿರುವುದರಿಂದ ಜಕಾರ ಸಂಬಂಧವಿಲ್ಲ. ಆದುದರಿಂದ ಶ್ಚುತ್ವವಿಲ್ಲ. ತೃತೀಯಾದಿಂದ ಪುಲ್ಲಿಂಗದಂತೇರೂಪ. ಊರ್ಜಾ–ಊರ್ಗ್ಭ್ಯಾಮ್–ಊರ್ಗ್ಭಿಃ ॥ ಇತ್ಯಾದಿ.

ದಕಾರಾಂತ ತದ್ ಶಬ್ದ. (ಅದು)

ತತ್–ತೇ–ತಾನಿ ॥ ಯತ್–ಯೇ–ಯಾನಿ ॥ ಏತತ್–ಏತೇ–ಏತಾನಿ ॥
ಗವಾಕ್, ಗವಾಗ್ । ಗೋಚೇ । ಗವಾಚ್ಚಿ। ಪುನಸ್ತದ್ವತ್ ॥
ಗೋಚಾ । ಗವಾಗ್ಭ್ಯಾಮ್ । ಶಕೃತ್–ಶಕೃತೀ-ಶಕೃನ್ತಿ ॥

ತದ್+ಸ್. "ಸ್ಯಮೋರ್ನಪುಂಸಕಾತ್" ಸುಲುಕ್. ತದ್. "ವಾವಸಾನೇ" ತತ್. ತದ್+ಔ. "ನಪುಂಸಕಾಚ್ಚ" ಔಗೆ ಶೀ ಭಾವ. "ತ್ಯದಾದೀನಾಮಃ," ದಕಾರಕ್ಕೆ ಅತ್ವ. "ಅತೋಗುಣೇ" ಪರರೂಪ. ತ+ಇ. ಗುಣ. ತೇ. ತದ್+ಜಸ್. ಜಸ್ ಶಸ್‌ಗಳಿಗೆ ಶಿಭಾವ. ತ್ಯದಾದ್ಯತ್ರ, ಪರರೂಪ. ತ+ಇ. "ನಪುಂಸಕಸ್ಯ ಝಲಚಃ" ಸೂತ್ರದಿಂದ ಅಜಂತವಾದುದರಿಂದ ನುಮ್ ಆಗಮ. "ಸರ್ವನಾಮಸ್ಥಾನೇ"–ಉಪಧಾದೀರ್ಘ. ತಾನಿ, ದ್ವಿತೀಯಾದಲ್ಲಿಯೂ ಇದೇ ರೂಪ ತೃತೀಯಾದಿಂದ ಪುಲ್ಲಿಂಗವಂತೇ ಪ್ರಕ್ರಿಯಾ. ತೇನ ತಾಭ್ಯಾಮ್–ತೈಃ ಇತ್ಯಾದಿ.

ದಕಾರಾಂತ "ಯದ್" ಶಬ್ದ. (ಯಾವುದು)

ತದ್‌ಶಬ್ದದಂತೇ ಈ ಶಬ್ದದ ಪ್ರಕ್ರಿಯೆ ಪ್ರ–ದ್ವಿ–ಯತ್, ಯದ್—ಯೇ–ಯಾನಿ. ತೃತೀಯಾದಿಂದ ಪುಲ್ಲಿಂಗದಂತೇ ರೂಪ ಯೇನ–ಯಾಭ್ಯಾಮ್–ಯೈಃ ಇತ್ಯಾದಿ.

ದಕಾರಾಂತ "ಏತದ್" ಶಬ್ದ (ಇದು)

ಏತದ್+ಸ್. ಹಿಂದಿನಂತೇ ಸುಲೋಪ. ವಾವಸಾನೇ. ಏತದ್–ಏತತ್. ಏತದ್+ಔ. ತ್ಯತಾದ್ಯತ್ರ. ಪರರೂಪ. ವಿಭಕ್ತಿಗೆ ಶೀ ಭಾವ. ಗುಣ. ಏತೇ. ಏತದ್+ಜಸ್. ಅತ್ವ, ಪರರೂಪ. ವಿಭಕ್ತಿಗೆ ಶಿಭಾವ. ನುವ್. ಉಪಧಾ

ದೀರ್ಘ. ಏತಾನಿ. ದ್ವಿತೀಯಾದಲ್ಲಿ ಏನದ್ ಆದೇಶ. ಅನ್ವಾದೇಶದಲ್ಲಿ ವಿಕಲ್ಪವಾಗಿ ಬರುವುದರಿಂದ ಎರಡುರೂಪಗಳು. ಏತದ್–ಏತತ್–ಏನತ್ ಏನದ್। ಏತೇ–ಏನೇ ಏತಾನಿ, ಏನಾನಿ॥ ಏತೇನ–ಏನೇನ ಇತ್ಯಾದಿ ಪುಲ್ಲಿಂಗದಂತೇ ತಿಳಿಯಬೇಕು.

ಚಕಾರಾಂತ "ಗವಾಞ್ಚ್" ಶಬ್ದ. (ಗೋವನ್ನು ಕುರಿತು ಹೋಗುವುದು)

ಅಞ್ಚು ಧಾತುವಿಗೆ ಕ್ವಿಪ್‌ಪ್ರತ್ಯಯ. ಇದಕ್ಕೆ ಎರಡು ಅರ್ಥಗಳಿವೆ. ಗತಿ ಪೂಜಾ. ಇಲ್ಲಿ ಗತ್ಯರ್ಥದರೂಪವನ್ನು ಮಾತ್ರ ಹೇಳುತ್ತಾನೆ. ಪೂಜಾರ್ಥದಲ್ಲಿ "ನಾಞ್ಚೇಃ ಪೂಜಾಯಾಮ್" ಎಂದು ನಿಷೇಧವಿರುವುದರಿಂದ ನಲೋಪ ಬರುವುದಿಲ್ಲ. ಗತ್ಯರ್ಥದಲ್ಲಿ "ಅನಿದಿತಾಂ ಹಲ ಉಪಧಾಯಾಃ ಕ್ಙಿತಿ" ಸೂತ್ರದಿಂದ ಅಞ್ಚುಧಾತುವಿನ ಉಪಧೆಯಾದ ನಕಾರಕ್ಕೆ ಲೋಪಬರುತ್ತದೆ. ಗವಾಞ್ಚ್+ಕ್ವಿಪ್. ನಲೋಪ. ಕ್ವಿಪಿನಲ್ಲಿ ಸರ್ವಲೋಪ. ಗವಾಚ್. ಸುಪರವಾದಾಗ ಅದಕ್ಕೆ ಲುಕ್. ಗವಾಚ್ ಎಂದೇ ಉಳಿಯುತ್ತವೆ. "ಚೋಕುಃ" ಸೂತ್ರದಿಂದ ಚಕಾರಕ್ಕೆ ಕಕಾರಾದೇಶ. ಗವಾಕ್. ಪದಾಂತದಲ್ಲಿ ಜಶ್ತ್ವ, ಚರ್ತ್ವವಿಕಲ್ಪ. ಗವಾಕ್+ಗವಾಗ್. ಇಲ್ಲಿ ಗೋ+ಅಕ್ ಎಂದಿರುವಾಗ ಅವಙ್ ಬಂದು ಗವಾಕ್ ಆಗಿದೆ. ಪ್ರಕೃತಿ ಭಾವಾದಿಗಳು ಬಂದರೆ ಅನೇಕ ರೂಪಗಳಾದರೂ ಕ್ಲಿಷ್ಟವಾದುದರಿಂದ ಅವುಗಳನ್ನು ಇಲ್ಲಿ ಹೇಳಲಿಲ್ಲ. ಗೋ ಅಞ್ಚ್+ಔ. ಶೀ ಭಾವ. ನಲೋಪ. ಗೋ+ಅಚ್+ಈ. ನಪುಂಸಕದಲ್ಲಿ ಸುಟ್‌ಗೆ (5) ಸರ್ವನಾಮಸ್ಥಾನ ಸಂಜ್ಞೆ ಇಲ್ಲ. ಆದುದರಿಂದ ಅಜಾದಿಪ್ರತ್ಯಯವಿರುವುದರಿಂದ "ಯಚಿ ಭಮ್" ಸೂತ್ರದಿಂದ ಭಸಂಜ್ಞೆ ಬರುತ್ತದೆ. ಆಗ "ಅಚಃ" ಸೂತ್ರದಿಂದ ಅಚಿನ ಅಕಾರಕ್ಕೆ ಲೋಪ. ಗೋಚ್+ಈ. ಗೋಚೀ ಗವಾಚ್+ಜಸ್. ಜಸ್ ಶಸ್‌ಗಳಿಗೆ ಶಿಭಾವ. ಇದಕ್ಕೆ ಸರ್ವನಾಮಸ್ಥಾನ ಸಂಜ್ಞೆಯಿರುವುದರಿಂದ "ಉಗಿದಚಾಂ"ಸೂತ್ರದಿಂದ ಶಿಸರವಾದಾಗ ನುಮಾಗಮ. ಗವಾನ್‌ಚ್+ಇ. "ನಶ್ಚಾಪದಾಂತಸ್ಯ ಝಲಿ" ಸೂತ್ರದಿಂದ ನಕಾರಕ್ಕೆ ಅನುಸ್ವಾರ. "ಅನುಸ್ವಾರಸ್ಯಯಯಿ"—ಸೂತ್ರದಿಂದ ಅನುಸ್ವಾರಕ್ಕೆ ಪರದ ಚಕಾರಸವರ್ಣ ಇಕಾರಾದೇಶ. ಗವಾಞ್ಚ್+ಇ. ಗವಾಞ್ಚಿ॥ ದ್ವಿತೀಯಾದಲ್ಲಿಯೂ ಹೀಗೆಯೇ ರೂಪ. ಗವಾಕ್–ಗವಾಗ್–ಗೋಚೀ–ಗವಾಞ್ಚಿ. ಇನ್ನು ಅಜಾದಿಯಲ್ಲಿ "ಅಚಃ" ಸೂತ್ರದಿಂದ ಅಚಿನ ಅಕಾರಕ್ಕೆ ಲೋಪ. ಆಗ ನಿಮಿತ್ತವಿಲ್ಲದುದರಿಂದ ಅವಙ್ ಇಲ್ಲ. ತೃ. ಗೋಚಾ–ಗವಾಚ್‌ಭ್ಯಾಮ್ ಎಂದಿರುವಾಗ "ಚೋಃಕುಃ" ಸೂತ್ರದಿಂದ ಕುತ್ವ. ಗವಾಕ್+ಭ್ಯಾಮ್. "ಝಲಾಂ ಜಶೋನ್ತೇ" ಗವಾಗ್ಭ್ಯಾಮ್. ಹಲಾದಿಯಲ್ಲಿ ಹೀಗೆ ಕುತ್ವ, ಜಶ್ತ್ವ. ಗವಾಗ್ಭಿಃ॥ ಚ–ಗೋಚೇ–ಗವಾಗ್ಭ್ಯಾಮ್–ಗವಾಗ್ಭ್ಯಃ॥ ಪಂ–ಗೋಚಃ— ಗವಾಗ್ಭ್ಯಾಮ್–ಗವಾಗ್ಭ್ಯಃ। ಷ–ಗೋಚಃ–ಗೋಚೋಃ–ಗೋಚಾಮ್। ಸ–ಗೋಚಿ–ಗೋಚೋಃ

ಗವಾಚ್ + ಸು. ಕುತ್ವ, ಜಶ್ತ್ವ ಚರ್ತ್ವ. ಗವಾಕ್ + ಸು. "ಆದೇಶಪ್ರತ್ಯಯಯೋಃ" ಸುವಿನ ಷಕಾರಕ್ಕೆ ಷತ್ವ. ಕಷಸಂಬಂಧದಿಂದ ಕ್ಷ. ಗವಾಕ್ಷು.

ತಕಾರಾಂತ "ಶಕೃತ್" ಶಬ್ದ. (ಮಲ)

ಸು, ಅಮ್‌ಗಳಿಗೆ ಹಿಂದಿನಂತೆ ಲುಕ್. ಶಕೃತ್. ಔಗೆ ಶೀ ಆದೇಶ. ಶಕೃತೀ. ಜಸ್‌ಶಸ್‌ಗಳಿಗೆ ಶಿ ಆದೇಶ. ಸರ್ವನಾಮಸ್ಥಾನವಾದುದರಿಂದ ನುಮಾಗಮ. ಶಕೃನ್‌ತ್ + ಇ. ನಕಾರಕ್ಕೆ ಅನುಸ್ವಾರ ಪರಸವರ್ಣ. ಶಕೃನ್ತಿ॥ ತೃತೀಯಾದಿಂದ ಪುಲ್ಲಿಂಗದಂತೇ ರೂಪ.

ತಕಾರಾಂತ " ದದತ್ " ಶಬ್ದ (ಕೊಡುವುದು)

ದಾ ಧಾತುವಿಗೆ ಶತೃಪ್ರತ್ಯಯ ಬಂದರೆ ದದತ್ ರೂಪವಾಗುತ್ತದೆ. ಹಿಂದಿನಂತೇ ನಪುಂಸಕದಲ್ಲಿ ಸು, ಅಮ್‌ಗಳಿಗೆ " ಸ್ವಮೋರ್ನಪುಂಸಕಾತ್ " ಸೂತ್ರದಿಂದ ಲುಕ್. ಔ। ವಿಭಕ್ತಿಗೆ ಶೀ ಆದೇಶ. ಜಸ್‌ಶಸ್‌ಗಳಿಗೆ ಶಿ ಆದೇಶ. ದದತ್ (ದದದ್) ದದತೀ. ದದತ್, + ಇ ಎಂದಿರುವಾಗ ನಿತ್ಯವಾಗಿ ನುಮ್ ಪ್ರಾಪ್ತವಾದರೆ ವಿಕಲ್ಪ ನುಮ್ ಹೇಳುತ್ತಾನೆ.

(ನಪುಂಸಕದಲ್ಲಿ ಶತೃ ಬಂದಾಗ ವಿಕಲ್ಪ ನುಮ್ ಹೇಳುವ ಸೂತ್ರ)

೩೬೭. ವಾ ನಪುಂಸಕಸ್ಯ ॥ ೭-೧-೭೯ ॥

ಅಭ್ಯಸ್ತಾತ್ಪರೋ ಯಃ ಶತಾ ತದಂತಸ್ಯ ಕ್ಲೀಬಸ್ಯ ವಾ ನುಮ್ ಸರ್ವನಾಮಸ್ಥಾನೇ ॥ ದದನ್ತಿ ದದತಿ ॥ ತುದತ್ ॥

ದ್ವಿಪದ ಸೂತ್ರ. " ನಾಭ್ಯಸ್ತಾ ಚ್ಛತುಃ " ಸೂತ್ರದಿಂದ " ಅಭ್ಯಸ್ತಾತ್, " "ಶತುಃ," "ಉಗಿದಚಾಂ–"ಸೂತ್ರದಿಂದ " ಸರ್ವನಾಮಸ್ಥಾನೇ " " ಇದಿತೋನುಮ್ ಧಾತೋಃ " ಸೂತ್ರದಿಂದ " ನುಮ್ " ಪದಗಳು ಅನುವೃತ್ತವಾಗುತ್ತವೆ. **ಸೂತ್ರಾರ್ಥ**—ಅಭ್ಯಸ್ತದ ಪರದಲ್ಲಿ ಯಾವ ಶತೃಪ್ರತ್ಯಯಇದಿಯೋ ಅದೇ ಅಂತವಾದ ನಪುಂಸಕ ಅಂಗಕ್ಕೆ ಸರ್ವನಾಮಸ್ಥಾನ ಪರವಾದಾಗ ವಿಕಲ್ಪವಾಗಿ ನುಮಾಗಮ ಬರುತ್ತದೆ. "ಉಭೇ ಅಭ್ಯಸ್ತಮ್" ಸೂತ್ರದಿಂದ ದ್ವಿತ್ವ ಎಲ್ಲಿ ಬಂದಿದೆಯೋ ಅಲ್ಲಿ ಎರಡಕ್ಕೂ ಸೇರಿ ಅಭ್ಯಸ್ತ ಎಂಬ ಸಂಜ್ಞೆಯನ್ನು ಹೇಳಿದುತ್ತಾನೆ. ದದತ್ ಎಂಬಲ್ಲಿ ಧಾತು ಜುಹೋತ್ಯಾದಿ ಗಣದಲ್ಲಿ ಪಠಿತವಾದುದರಿಂದ ಶತೃಬಂದಾಗ ಶ್ಲು ಎಂಬ

ವಿಕರಣ ಬಂದು ದ್ವಿತ್ವ ಬಂದಿದೆ. ಆಗ ದದಾ ಎಂಬುದು ಅಭ್ಯಸ್ತ. ಇದರ ಪರದಲ್ಲಿ ಶತೃ ಬಂದಿದೆ. ಇದೇ ಅಂತವಾದುದು ದದತ್ ಎಂಬ ಅಂಗ (ನಪುಂಸಕವಾಗಿದೆ.) ಇದಕ್ಕೆ ಶಿ ಎಂಬ ಸರ್ವನಾಮಸ್ಥಾನ ಪರವಾದಲ್ಲಿ. ನುಮ್ ವಿಕಲ್ಪವಾಗಿ ಬಂದರೆ ದದನ್‌ತ್ + ಇ. ನಕಾರಕ್ಕೆ ಅನುಸ್ವಾರ ಪರಸವರ್ಣ. ನುಮ್ ಬಾರದಿದ್ದರೆ ದದತಿ. ತೃತೀಯಾದಿಂದ ಪುಲ್ಲಿಂಗದಂತೇ ರೂಪ. ದದನ್ತಿ–ನುಮ್ ಬಾರದಿದ್ದರೆ ದದತಾ ದದದ್ಭ್ಯಾಮ್–ದದದ್ಭಿಃ ಇತ್ಯಾದಿ. ತಕಾರಕ್ಕೆ ಜಶ್ತ್ವ ಬಂದಿದೆ.

ಹೀಗೇ ತುದ (ವ್ಯಥನೇ) ಧಾತುವಿಗೆ ಶತೃಪ್ರತ್ಯಯಬಂದರೆ ತುದತ್ ಶಬ್ದವಾಗುತ್ತದೆ. ವ್ಯಥೆಗೊಳಿಸುವುದು ಎಂದರ್ಥ. ಸುವಿನಲ್ಲಿ ಹಿಂದಿನಂತೇ ರೂಪ. ತುದತ್, ಔಗೆ ಶೀ ಭಾವಬಂದಾಗ ತುದತ್ + ಈ ಎಂದಿರುವಾಗ ವಿಕಲ್ಪ ನುಮ್ ಹೇಳುತ್ತಾನೆ.

(ಶೀ ಪರವಾದಾಗ ವಿಕಲ್ಪನುಮ್ ಹೇಳುವ ಸೂತ್ರ)

೩೬೮. ಆಚ್ಛೀನದ್ಯೋರ್ನುಮ್ ॥ ೭-೧-೮೦ ॥

ಅವರ್ಣಾಂತಾದಂಗಾತ್ಪರೋ ಯಃ ಶತುರವಯವಸ್ತದಂತಸ್ಯ ನುಮ್ ವಾ ಶೀನದ್ಯೋಃ । ತುದಂತೀ–ತುದತೀ । ತುದಂತಿ ॥

ಆತ್. ಶೀನದ್ಯೋಃ, ನುಮ್ । ತ್ರಿಪದಸೂತ್ರ. " ಅಂಗಸ್ಯ " ಅಧಿಕಾರ ಪಂಚಮ್ಯಂತನಾಗಿ ವಿಪರಿಣಾಮವಾಡಿಕೊಳ್ಳಬೇಕು. ಆತ್ ಅದಕ್ಕೆ ವಿಶೇಷಣ. ತದಂತಲಾಭ. ಹಿಂದಿನಂತೆ " ತುಃ " "ವಾ," " ನುಮ್ " ಅನುವೃತ್ತವಾಗುತ್ತವೆ. ಶತುಃ ಎಂಬಲ್ಲಿ ಅನಯವಷಷ್ಠೀ. **ಸೂತ್ರಾರ್ಥ**—ಅಕಾರಾಂತವಾದ ಅಂಗದ ಪರದಲ್ಲಿರುವ ಶತೃಪ್ರತ್ಯಯದ ಅವಯವವೇ ಅಂತವಾದ ನಪುಂಸಕ ಶಬ್ದಕ್ಕೆ ಶೀ, ನದೀ ಪರದಲ್ಲಿರುವಾಗ ವಿಕಲ್ಪವಾಗಿ ನುಮಾಗಮ ಬರುತ್ತದೆ. ತುದ್ + ಶತ ಎಂದಿರುವಾಗ ಮಧ್ಯೆ ಶ ವಿಕರಣ ಬಂದಿದೆ, ಆಗ ತುದ್ + ಅ + ಅತ್. " ಅತೋ ಗುಣೇ " ಸೂತ್ರದಿಂದ ಪರರೂಪ, ತುದತ್. ಇಲ್ಲಿ ಅಕಾರಾಂತವಾದ ಅಂಗ, ತುದ, ಇದರ ಪರದಲ್ಲಿ ಶತೃವಿನ ಅವಯವ ತಕಾರ. ಇದೇ ಅಂತವಾದ ಶಬ್ದ ತುದತ್. ಇದಕ್ಕೆ ಶೀ ಪರದಲ್ಲಿದೆ. ಆಗ ವಿಕಲ್ಪನುಮ್ ಬಂದರೆ ತುದನ್‌ತ್ + ಈ. ನಕಾರಕ್ಕೆ ಅನುಸ್ವಾರ, ಪರಸವರ್ಣ. ತುದನ್ತೀ–ನುಮ್ ಬಾರದಿದ್ದರೆ ತುದತೀ ಎಂದಾಗುತ್ತದೆ. ಜಸ್ ಗೆ ಶಿ ಆದೇಶಬಂದಾಗ " ನಪುಂಸಕಸ್ಯ ಝಲಚಃ " ಸೂತ್ರದಿಂದ ನಿತ್ಯವಾಗಿ ನುಮ್. ಅಭ್ಯಸ್ತಸಂಜ್ಞೆ ಇಲ್ಲಿ ದ್ವಿತ್ವ ಬಾರದಿರುವುದರಿಂದ ಬರುವು

ದಿಲ್ಲ. ತುದನ್ತಿ. ತೃತೀಯಾದಿಂದ ಪುಲ್ಲಿಂಗದಂತೇ ರೂಪ. ತುದತಾ–ತುದದ್ಭ್ಯಾಮ್–ತುದದ್ಭಿಃ ಇತ್ಯಾದಿ.

ತಕಾರಾಂತ "ಪಚತ್" ಶಬ್ದ (ಬೇಯಿಸುವುದು)

ಪಚ್ ಧಾತು. ಶತೃಪ್ರತ್ಯಯ. ಪಚ್ ಅತ್ ಎಂದಿರುವಾಗ ಶಪ್ (ಅ) ವಿಕರಣ. ಪಚ+ಅತ್ "ಅತೋಗುಣೇ" ಪಚತ್. ಸು ಅಮ್‌ಗಳಿಗೆ ಲುಕ್. ಪಚತ್. ಔಗೆ ಶೀ ಆದೇಶಬಂದಾಗ ಪಚತ್+ಈ ಎಂದಿರುವಾಗ ನಿತ್ಯ ನುಮಾಗಮ ಹೇಳುತ್ತಾನೆ.

(ಶೀನದೀಪರವಾದಾಗ ನಿತ್ಯನುಮಾಗಮ ಹೇಳುವಸೂತ್ರ)

ಷಿಲ. ಶಪ್‌ಶ್ಯನೋರ್ನಿತ್ಯಮ್ ॥ ೭-೧-೮೧ ॥

ಶಪ್‌ಶ್ಯನೋರಾತ್ಪರೋ ಯಃ ಶತುರವಯವಸ್ತದಂತಸ್ಯ ನಿತ್ಯಂ ನುಮ್ ಶೀನದ್ಯೋಃ । ಪಚನ್ತೀ । ಪಚನ್ತಿ ॥ ದೀವ್ಯತ್ । ದೀವ್ಯನ್ತೀ । ದೀವ್ಯನ್ತಿ ॥ ಧನುಃ । ಧನುಷೀ । ಸಾನ್ತೇತಿದೀರ್ಘಃ । ನುಮ್‌ವಿಸರ್ಜನೀಯೇತಿ ಷಃ । ಧನೂಂಷಿ । ಧನುಷಾ । ಧನುರ್ಭ್ಯಾಮ್ । ಏವಂ ಚಕ್ಷುರ್ಹವಿರಾದಯಃ ॥ ಪಯಃ । ಪಯಸೀ । ಪಯಾಂಸಿ । ಪಯಸಾ । ಪಯೋಭ್ಯಾಮ್ ॥ ಸಃಪುಮ್ । ಸುಪುಂಸೀ ಸುಪುಮಾಂಸಿ ॥ ಅದಃ । ವಿಭಕ್ತಿಕಾರ್ಯಮ್ । ಉತ್ವಮುತ್ವೇ । ಅಮೂ । ಅಮೂನಿ । ಶೇಷಂ ಪುಂವತ್ ॥

॥ ಇತಿ ಹಲಂತ ನಪುಂಸಕಲಿಂಗ ಪ್ರಕರಣಮ್ ॥

॥ ಇತಿ ಷಡ್ಲಿಂಗಪ್ರಕರಣಮ್ ॥

ಶಪ್‌ಶ್ಯನೋಃ, ನಿತ್ಯಮ್ ॥ ದ್ವಿಪದ ಸೂತ್ರ. "ಆತ್" "ನುಮ್" "ಶತುಃ" ಪೂರ್ವಸೂತ್ರದಿಂದ ಅನುವೃತ್ತಿ. **ಸೂತ್ರಾರ್ಥ**—ಶಪ್ ಶ್ಯನ್ ಸಂಬಂಧಿಯಾದ ಅಕಾರದ ಪರದಲ್ಲಿ ಯಾವ ಶತೃಪ್ರತ್ಯಯದ ಅವಯವವಿದೆಯೋ ಅದೇ ಅಂತವಾದ ನಪುಂಸಕಶಬ್ದಕ್ಕೆ ಶೀನದೀ ಪರವಾದಾಗ ನಿತ್ಯವಾಗಿ ನುಮ್ ಬರುತ್ತದೆ. ಪಚ್+ಈ. ಇಲ್ಲಿ ಶಪ್ ಅಂದರೆ ಪಚ ಎಂಬಲ್ಲಿ ಚಕಾರದ ಮೇಲಿರುವ ಅಕಾರ. ಇದರಪರದಲ್ಲಿ ಶತೃವಿನ ಅವಯವವೆಂದರೆ ತಕಾರ. ಅದೇ ಅಂತವಾದ ಪಚತ್ ಶಬ್ದಕ್ಕೆ ಶೀಪರವಾದುದರಿಂದ ನಿತ್ಯವಾಗಿ ನುಮ್. ಪಚನ್ತ್+ಈ. ನಕಾರಕ್ಕೆ

ಅನುಸ್ವಾರ ಪರಸವರ್ಣ. ಪಚನ್ತೀ ॥ ಜಸಿಗೆ ಶಿ ಆದೇಶ. ಹಿಂದಿನಂತೆ ನುಮ್ ಪಚನ್ತಿ ॥ ದ್ವಿ ॥ ಪಚತ್–ಪಚನ್ತೀ–ಪಚನ್ತಿ ॥ ಪಚತಾ ಪಚದ್ಭ್ಯಾಮ್–ಪಚದ್ಭಿಃ ಪುಲ್ಲಿಂಗದಂತೇ ರೂಪ.

ತಕಾರಾಂತ ದೀವ್ಯತ್ ಶಬ್ದ. (ಪ್ರಕಾಶಿಸುವುದು)

ದಿವ್ ಧಾತು. ಶತೃಪ್ರತ್ಯಯ ಶ್ಯನ್ ವಿಕರಣ. ಯ ಉಳಯುತ್ತದೆ, ಉಪಧಾ ದೀರ್ಘ. ದೀವ್ಯ+ಅತ್ ಪರರೂಪ. ದೀವ್ಯತ್. ಔಗೆ ಶೀ ಆದೇಶಬಂದಾಗ ದೀವ್ಯತ್+ಈ ಎಂದಿರುವಾಗ ಶ್ಯನ್ ಪ್ರತ್ಯಯದ ಅಕಾರದಪರದಲ್ಲಿ ಶತೃವಿನ ಅವಯವವೆಂದರೆ ತಕಾರ, ಅದೇ ಅಂತ್ಯವಾದ ಶಬ್ದ ದೀವ್ಯತ್, ಅದಕ್ಕೆ ಶೀ ಪರವಾದುದರಿಂದ ನಿತ್ಯವಾಗಿ ನುಮ್. ದೀವ್ಯನ್ತೀ ॥ ದೀವ್ಯತ್+ಇ. "ನಪುಂಸಕಸ್ಯಝಲಚಃ" ನುಮ್. ದೀವ್ಯನ್ತಿ ॥ ದ್ವಿತೀಯಾದ ಲ್ಲಿಯೂ ಇದೇ ರೂಪ. ತೃತೀಯಾದಿಂದ ಪುಲ್ಲಿಂಗದಂತೆ ರೂಪ. ದೀವ್ಯತಾ ಇತ್ಯಾದಿ.

ಸಕಾರಾಂತ "ಧನುಸ್" ಶಬ್ದ. (ಬಿಲ್ಲು)

ಧನುಸ್+ಸ್. "ಸ್ವಮೋರ್ನಪುಂಸಕಾತ್" ಸು, ಅಮಿಗೆ ಲುಕ್. ಧನ್ ಧಾತುವಿಗೆ ಉಸ್ ಪ್ರತ್ಯಯ ಬಂದು ಧನುಸ್ ಆಗಿದೆ. "ಆದೇಶಪ್ರತ್ಯಯೋಃ" ಸೂತ್ರದಿಂದ ಸಕಾರಕ್ಕೆ ಷತ್ವ. ಇದು ತ್ರಿಪಾದಿಯಲ್ಲಿರುವುದರಿಂದ "ಸಸಜುಷೋರುಃ" ಸೂತ್ರಕ್ಕೆ ಅಸಿದ್ಧವಾಗುವುದರಿಂದ ಆ ಸೂತ್ರ ದೃಷ್ಟಿಯಿಂದ ಇಲ್ಲಿ ಸಕಾರವೇ ಇರುವುದರಿಂದ ಪದಾಂತದಲ್ಲಿರುವ ಸಕಾರಕ್ಕೆ ಅದರಿಂದ ರುತ್ವ. ಧನುರ್. "ಖರವಸಾನಯೋಃ ವಿಸರ್ಜನೀಯಃ" ಸೂತ್ರದಿಂದ ವಿಸರ್ಗ. ಧನುಃ. ಧನಷ್+ಔ, ಔಗೆ ಶೀ ಆದೇಶ. ಧನುಷೀ. ಧನುಷ್+ಜಸ್. ಶಿ ಆದೇಶ. "ನಪುಂಸಕಸ್ಯ ಝಲಚಃ" ಸೂತ್ರದಿಂದ ನುನೂಗಮ. ಧನುಸ್ (ಸ್)ಷ್+ಇ. ಷತ್ವ ಅಸಿಧವಾದುದರಿಂದ "ಸಾಂತಮಹತಃ ಸಂಯೋಗಸ್ಯ" ಸೂತ್ರದಿಂದ ನಕಾರೋಪಧೆಗೆ ದೀರ್ಘ. ಧನೂನ್ಸ್+ಇ. "ನಶ್ಚಾಪದಾಂತಸ್ಯಝಲಿ" ಸೂತ್ರದಿಂದ ನಕಾರಕ್ಕೆ ಅನುಸ್ವಾರ. ಮಧ್ಯೆ ಅನುಸ್ವಾರ ವ್ಯವಧಾನವಿರುವುದರಿಂದ "ನುಮ್ವಿ–" (ಸೂ 354) ಸೂತ್ರದಿಂದ ಷತ್ವ. ಧನೂಂಷಿ. ದ್ವಿತೀಯಾದಲ್ಲಿಯೂ ಹೀಗೇ ರೂಪ. ಧನುಃ–ಧನುಷೀ–ಧನೂಂಷಿ. ತೃ. ಧನುಷಾ–ಧನುಸ್+ಭ್ಯಾಮ್. "ಸ್ವಾದಿಷ್ವಸರ್ವನಾಮಸ್ಥಾನೇ" ಸೂತ್ರದಿಂದ ಪದಸಂಜ್ಞೆಯಿರುವುದರಿಂದ ಷತ್ವ ಅಸಿದ್ಧವಾದುದರಿಂದ ಸಕಾರಕ್ಕೆ "ಸಸಜುಷೋರುಃ" ಸೂತ್ರದಿಂದ ರುತ್ವ. ಧನುರ್ಭ್ಯಾಮ್–ಹಲಾದಿಯಲ್ಲೆಲ್ಲಾ ಹೀಗೇ ರುತ್ವ. ಧನುರ್ಭಿಃ ॥ ಚ–ಧನುಷೇ–ಧನುರ್ಭ್ಯಾಮ್–ಧನುರ್ಭ್ಯಃ ॥ ಪಂ. ಧನುಷಃ—ಧನುರ್ಭ್ಯಾಮ್—ಧನುರ್ಭ್ಯಃ ॥ ಷ–ಧನುಷಃ–ಧನುಷೋಃ–ಧನುಷಾಮ್ ॥ ಸ–ಧನುಷಿ–ಧನುಷೋಃ—ಧನುಷ್ಸು, ಧನುಃಷು. ಇಲ್ಲಿ ಸಕಾರಕ್ಕೆ ರುತ್ವ ಬಂದು ಅದಕ್ಕೆ ವಿಕಲ್ಪವಾಗಿ ವಿಸರ್ಗ,

ಸತ್ವ ಬಂದಾಗ " ನುಮ್, ವಿಸರ್ಜನೀಯ–" ಸೂತ್ರದಿಂದ ಸುವಿನ ಸಕಾರಕ್ಕೆ ಷತ್ವ. ಇದೇರೀತಿಯಾಗಿ ಚಕ್ಷುಷ್, ಹವಿಷ್ ಮುಂತಾದ ಶಬ್ದಗಳ ರೂಪವನ್ನು ತಿಳಿಯಬೇಕು. ಷಕಾರವು ಅಸಿದ್ಧವಾದುದರಿಂದ ಪದಾಂತದಲ್ಲಿ ರುತ್ವ. ಚಕ್ಷುಃ–ಚಕ್ಷುಷೀ–ಚಕ್ಷೂಂಷಿ. ಇತ್ಯಾದಿ.

ಸಕಾರಾಂತ ಪಯಸ್ ಶಬ್ದ. (ಹಾಲು ಅಥವಾ ನೀರು)

ಪಯಸ್+ಸ್ ಎಂದಿರುವಾಗ ಸುವಿಗೆ ಹಿಂದಿನಂತೆ ಲುಕ್. ಪದಾಂತದಲ್ಲಿ ಸಕಾರವಿರುವುದರಿಂದ "ಸಸಜುಷೋರುಃ" ಸೂತ್ರದಿಂದ ಅದಕ್ಕೆ ರುತ್ವ. ಪಯರ್. "ಖರವಸಾನಯೋರ್ವಿಸರ್ಜನೀಯಃ" ಸೂತ್ರದಿಂದ ರೇಫಕ್ಕೆ ವಿಸರ್ಗ. ಪಯಃ। ಔಗೆ ಶೀಭಾವ. ಪಯಸೀ. ಜಸ್ ಶಸ್‌ಗಳಿಗೆ ಶಿ ಆದೇಶ. "ನಪುಂಸಕಸ್ಯ ಝಲಚಃ" ಸೂತ್ರದಿಂದ ನುಮ್. ಪಯನ್ಸ್+ಇ. "ಸಾಂತಮಹತಃ ಸಂಯೋಗಸ್ಯ" ನಕಾರದ ಉಪಧೆಗೆ ದೀರ್ಘ. ಪಯಾನ್ಸ್+ಇ. "ನಶ್ಚಾಪ"—ಸೂತ್ರದಿಂದ ನಕಾರಕ್ಕೆ ಅನುಸ್ವಾರ. ಪಯಾಂಸಿ.॥ ದ್ವಿ–ಪಯಃ–ಪಯಸೀ–ಪಯಾಂಸಿ। ತೃ–ಪಯಸಾ–ಪಯೋಭ್ಯಾಮ್. ಪದಸಂಜ್ಞೆಯಿರುವುದರಿಂದ ಸಕಾರಕ್ಕೆ ಹಿಂದಿನಂತೆ ರುತ್ವ. ಪಯರ್+ಭ್ಯಾಮ್. "ಹಶಿಚ" ಸೂತ್ರದಿಂದ ಹಶ್‌ಪರದಲ್ಲಿರುವುದರಿಂದ ರುವಿಗೆ ಉಕಾರಾದೇಶ. ಪಯ+ಉ+ಭ್ಯಾಮ್. ಗುಣ. ಪಯೋಭ್ಯಾಮ್–ಹಲಾದಿಯಲ್ಲಿ ಹೀಗೇ ರುತ್ವ, ಉತ್ವ, ಗುಣ. ಪಯೋಭಿಃ॥ ಚ–ಪಯಸೇ–ಪಯೋಭ್ಯಾಮ್–ಪಯೋಭ್ಯಃ॥ ಪಂ–ಪಯಸಃ–ಪಯೋಭ್ಯಾಮ್–ಪಯೋಭ್ಯಃ॥ ಷ–ಪಯಸಃ–ಪಯಸೋಃ–ಪಯಸಾಮ್॥ ಸ–ಪಯಸಿ–ಪಯಸೋಃ ಪಯಸ್ಸು. ಇಲ್ಲಿ ಇಣ್ ಇಲ್ಲದಿರುವುದರಿಂದ ಸಕಾರಕ್ಕೆ ಷತ್ವವಿಲ್ಲ.

ಸಕಾರಾಂತ ಸುಪುಂಸ್. ಶಬ್ದ (ಒಳ್ಳೆಯಪುರುಷನುಳ್ಳದ್ದು)

ಶೋಭನಾಃ ಪುಮಾಂಸಃ ಯಸ್ಯ ತತ್. ಸುಪುಮ್. ಸುವಿಗೆ "ಸ್ವಮೋರ್ನ ಪುಂಸಕಾತ್" ಸೂತ್ರದಿಂದ ಲುಕ್. ಸುಪುನ್ಸ್ ಉಳಿಯುತ್ತದೆ. ಸಕಾರಕ್ಕೆ "ಸಂಯೋಗಾಂತಸ್ಯ ಲೋಪಃ" ಸೂತ್ರದಿಂದ ಲೋಪ. ಸುಪುಮ್. ಸುಪುಮ್ಸ್+ಈ. (ಶೀ)"ನಶ್ಚಾಪದಾಂತಸ್ಯ ಝಲಿ" ಸೂತ್ರದಿಂದ ಮಕಾರಕ್ಕೆ ಅನುಸ್ವಾರ. ಸುಪುಂಸೀ॥ ಸುಪುಮ್ಸ್+ಇ. (ಶಿ) "ನಪುಂಸಕಸ್ಯ ಝಲಚಃ" ಸೂತ್ರದಿಂದ ನುಮಾಗಮ. ಶಿಗೆ ಸರ್ವನಾಮಸ್ಥಾನಸಂಜ್ಞೆಯಿರುವುದರಿಂದ ನುಮಾಗಮವಲ್ಲದೆ "ಪುಂಸೋಽಸುಜ್" ಸೂತ್ರದಿಂದ ಅಸುಜ್ ಆದೇಶ. ಜಿತ್ವಾದುದರಿಂದ ಜಿಚ್ಚ" ಸೂತ್ರದಿಂದ ಅಂತಾ

ದೇಶವಾಗಿ ಬಂದರೆ ಸುಪುಮ್ಸ್+ಇ. ಅಸುಜ್‌ನಲ್ಲಿ ಅಸ್ ಉಳಿಯುತ್ತದೆ. ಆಮೇಲೆ ನುಮ್. ಸುಪುಮನ್ಸ್+ಇ. "ಸಾಂತಮಹತಃ"—ಸೂತ್ರದಿಂದ ದೀರ್ಘ. ಸುಪುಮಾನ್ಸ್+ಇ. ನಕಾರಕ್ಕೆ ಅನುಸ್ವಾರ. ಸುಪುಮಾಂಸಿ. ದ್ವಿತೀಯಾದಲ್ಲಿಯೂ ಸುಪುಮ್–ಸುಪುಂಸೀ–ಸುಪ್ಪುಮಾಂಸಿ ಎಂದು ರೂಪವಾಗುತ್ತದೆ. ತೃತೀಯಾದಿಯಲ್ಲಿ ಪುಲ್ಲಿಂಗದಂತೆ ರೂಪ. ಅಜಾದಿಯಲ್ಲಿ ಕಾರ್ಯವಿಲ್ಲ. ಹಲಾದಿಯಲ್ಲಿ "ಸಂಯೋಗಾಂತಸ್ಯಲೋಪಃ" ಸೂತ್ರದಿಂದ ಸಕಾರಲೋಪ. ಮಕಾರಕ್ಕೆ ಅನುಸ್ವಾರ. ಸುಪುಂಭ್ಯಾಮ್. ಇತ್ಯಾದಿ.

ಸಕಾರಾಂತ "ಅದಸ್" ಶಬ್ದ (ಇದು)

ಅದಸ್+ಸ್. ಸುವಿಗೆ ಲುಕ್ಕಾದಾಗ ಸಕಾರ, ಪದಾಂತವಾದುದರಿಂದ "ಸಸಜುಷೋರುಃ" ಸೂತ್ರದಿಂದ–ರುತ್ವ. ಅದರ್. "ಖರವಸಾನಯೋರ್ವಿಸರ್ಜನೀಯಃ" ಅದಃ. ಅದಸ್+ಔ. ಔಗೆ ಶೀಭಾವ. "ತ್ಯದಾದೀನಾಮಃ" "ಅತೋಗುಣೇ" ಅದ+ಅ+ಈ. ಅದ+ಈ. ಗುಣ. ಅದೇ. ಈಗ "ಅದಸೋಸೇರ್ದಾದುದೋಮಃ" ಸೂತ್ರದಿಂದ ದಕಾರಕ್ಕೆ ಮತ್ವ. ಏಕಾರಕ್ಕೆ ಊತ್ವ. ಅಮೂ. ಪ್ರಥಮಾ ಏಕವಚನದಲ್ಲಿ ಸುವಿಗೆ ಲುಕ್ ಆದುದರಿಂದ "ಅದಸ ಔಸುಲೋಪಶ್ಚ" ಸೂತ್ರದಿಂದ ಔತ್ವವಿಲ್ಲ. ಅದಸ್+ಇ. (ಶಿ) ತ್ಯದಾದ್ಯತ್ವ, ಪರರೂಪ. ಅದ+ಇ. "ನಪುಂಸಕಸ್ಯ ಝಲಚಃ" ಸೂತ್ರದಿಂದ ನುಮಾಗಮ. ಅದನ್+ಇ. "ಸರ್ವನಾಮಸ್ಥಾನೇ ಚಾ ಸಂಬುದ್ಧೌ" ಸೂತ್ರದಿಂದ ಉಪಧಾದೀರ್ಘ. ಅದಾನಿ. "ಅದಸೋಸೇಃ"—ಸೂತ್ರದಿಂದ ದಕಾರಕ್ಕೆ ಮತ್ವ, ಆಕಾರಕ್ಕೆ ಊತ್ವ. ಅಮೂನಿ. ದ್ವಿ–ಅದಃ–ಅಮೂ–ಅಮೂನಿ. ತೃತೀಯಾದಿಂದ ಪುಲ್ಲಿಂಗದಂತೇ ರೂಪ.

ತೃ–ಅಮುನಾ। ಅಮೂಭ್ಯಾಮ್। ಅಮೀಭಿಃ॥ ಜ–ಅಮುಷ್ಮೈ। ಅಮೂಭ್ಯಾಮ್। ಅಮೀಭ್ಯಃ॥ ಪಂ–ಅಮುಷ್ಮಾತ್। ಅಮೂಭ್ಯಾಮ್। ಅಮೀಭ್ಯಃ॥ ಷ–ಅಮುಷ್ಯ। ಅಮುಯೋಃ। ಅಮೀಷಾಮ್॥ ಸ–ಅಮುಷ್ಮಿನ್। ಅಮುಯೋಃ ಅಮೀಷು॥

ಹಲಂತ ನಪುಂಸಕಲಿಂಗ ಶಬ್ದಗಳ ಪ್ರಕ್ರಿಯೆ ಸಮಾಪ್ತವಾಗಿದೆ.

ಈರೀತಿ ಶಬ್ದಗಳು ಅಜಂತಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗ, ಹಲಂತ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕ ಲಿಂಗಗಳೆಂದು ಆರುರೀತಿ ವಿಭಾಗಿಸಲ್ಪಟ್ಟು ಸಂಗ್ರಹವಾಗಿ ವಿವರಿಸಲ್ಪಟ್ಟವೆ.

—ಶ್ರೀಃ—

ಅಥಾವ್ಯಯ ಪ್ರಕರಣಮ್ ॥

ಅವ್ಯಯದ ಲಕ್ಷಣವನ್ನು ಮುಂದೆ ಹೇಳುತ್ತಾನೆ. ಈಗ ಅವ್ಯಯ ಸಂಜ್ಞೆ ಯಾವುದಕ್ಕೆ ಬರುವುದೆಂದು ಸೂತ್ರದಿಂದ ತಿಳಿಸುತ್ತಾನೆ.

(ಅವ್ಯಯ ಸಂಜ್ಞಾ ಹೇಳುವ ಸೂತ್ರ)

೫೬೯. **ಸ್ವರಾದಿನಿಪಾತಮವ್ಯಯಮ್ ॥ ೧-೧-೫೭ ॥**

ಸ್ವರಾದಯೋ ನಿಪಾತಾಶ್ಚ ಅವ್ಯಯ ಸಂಜ್ಞಾಃ ಸ್ಯುಃ ॥ ಸ್ವರ್ । ಅಂತರ್ । ಪ್ರಾತರ್ । ಪುನರ್ ॥ ಸನುತರ್ । ಉಚ್ಚೈಸ್ । ನೀಚೈಸ್ । ಶನೈಸ್ । ಋಧಕ್ । ಋತೇ । ಯುಗಪತ್ । ಆರಾತ್ । ಪೃಥಕ್ । ಹ್ಯಸ್ । ಶ್ವಸ್ । ದಿವಾ । ರಾತ್ರೌ । ಸಾಯಂ । ಚಿರಂ । ಮನಾಕ್ । ಈಷತ್ । ಜೋಷಮ್ । ತೂಷ್ಣೀಮ್ । ಬಹಿಸ್ । ಅವಸ್ । ಸಮಯಾ । ನಿಕಷಾ । ಸ್ವಯಮ್ । ವೃಥಾ । ನಕ್ತಮ್ । ನಞ್ । ಹೇತೌ । ಇದ್ಧಾ । ಅದ್ಧಾ । ಸಾಮಿವತ್ । ಬ್ರಾಹ್ಮಣವತ್ । ಕ್ಷತ್ರಿಯವತ್ । ಸನಾ । ಸನತ್ । ಸನಾತ್ । ಉಪಧಾ । ತಿರಸ್ । ಅಂತರಾ । ಅಂತರೇಣ । ಜ್ಯೋಕ್ । ಕಮ್ । ಶಮ್ । ಸಹಸಾ । ವಿನಾ । ನಾನಾ । ಸ್ವಸ್ತಿ । ಸ್ವಧಾ । ಅಲಮ್ । ವಷಟ್ । ಶ್ರೌಷಟ್ । ವೌಷಟ್ । ಅನ್ಯತ್ । ಅಸ್ತಿ । ಉಸಾಂಕು । ಕ್ಷಮಾ । ವಿಹಾಯಸಾ । ದೋಷಾ । ಮೃಷಾ । ಮಿಥ್ಯಾ । ಮುಧಾ । ಪುರಾ । ಮಿಥೋ । ಮಿಥಸ್ । ಪ್ರಾಯಸ್ । ಮುಹುಸ್ । ಪ್ರಾಹ್ಣಕಮ್ । ಪ್ರವಾಹಿಕಾ । ಆರ್ಯಹಲಮ್ । ಅಭೀಕ್ಷ್ಣಮ್ ಸಾಕಮ್ । ಸಾರ್ಧಮ್ । ನಮಸ್ । ಹಿರುಕ್ । ಧಿಕ್ । ಅಥ । ಅಮ್ । ಅಮ್ । ಪ್ರತಾಮ್ । ಪ್ರಶಾನ್ । ಮಾ । ಮಾಙ್ । ಆಕೃತಿಗಣೋಽಯಮ್ ॥ ಚ । ವಾ । ಹ । ಅಹ ।

ಏವ । ವಿನಮ್ । ನೂನಂ । ಶಶ್ವತ್ । ಯುಗಪತ್ । ಭೂಯಸ್ । ಕೂಪತ್ । ಕುವಿತ್ । ನೇತ್ । ಚೇತ್ । ಚಣ್ । ಕಚ್ಚಿತ್ । ಯತ್ರ । ನಹ । ಹಂತ । ಮಾಕಿಃ । ಮಾಕಿಮ್ । ನಕಿಃ । ನಕಿಮ್ । ಮಾಙ್ । ನಞ್ । ಯಾವತ್ । ತಾವತ್ । ತ್ವೈ । ದ್ವೈ । ರೈ । ಶ್ರೌಷಟ್ । ವೌಷಟ್ । ಸ್ವಾಹಾ । ಸ್ವಧಾ । ವಷಟ್ । ತುಮ್ । ತಥಾಹಿ । ಖಲು । ಕಿಲ । ಅಥೋ । ಅಥ । ಸುಸ್ಮ । ಸ್ಮ । ಆದಹ ।

ಸ್ವರಾದಿನಿಪಾತಂ, ಅವ್ಯಯಮ್ ॥ ದ್ವಿಪದ ಸೂತ್ರ. ಸ್ವರ್ಆದಿಃ ಯೇಷಾಂತೇ ಸ್ವರಾದಯಃ । ಸ್ವರಾದಯಶ್ಚ ನಿಪಾತಾಶ್ಚ ತೇಷಾಂ ಸಮಾಹಾರಃ । ಸ್ವರಾದಿನಿಪಾತಮ್. **ಸೂತ್ರಾರ್ಥ**—ಸ್ವರ್ ಮುಂತಾದವುಗಳೂ ನಿಪಾತಗಳೂ ಅವ್ಯಯವೆಂಬ ಸಂಜ್ಞೆಯನ್ನು ಹೊಂದುತ್ತವೆ. "ಚಾದಯೋಽಸತ್ವೇ" ಸೂತ್ರದಿಂದ ಚ ಮುಂತಾದುವುಗಳಿಗೆ ನಿಪಾತ ಸಂಜ್ಞೆ ಹಿಂದೆ ಹೇಳಿರುತ್ತಾನೆ. ಈಗ ಸ್ವರ್ ಮುಂತಾದ ಪುಗಳನ್ನೂ ಚ ಮುಂತಾದವುಗಳನ್ನೂ ವಿವರಿಸುತ್ತಾನೆ. ಇವುಗಳ ಅರ್ಥ. ಸ್ವರ್=ಸ್ವರ್ಗ. ಅಂತರ್=ಮಧ್ಯ, ಪ್ರಾತರ್=ಬೆಳಿಗ್ಗೆ, ಪುನಃ=ತಿರುಗಿ, ವಿಶೇಷ, ಸನುತರ್=ಅಂತರ್ಧಾನ(ಮಾಯವಾಗುವುದು), ಉಚ್ಚೈಃ=ದೊಡ್ಡದು, ಗಟ್ಟಿಯಾಗಿ, ನೀಚೈಃ=ಅಲ್ಪ, ಕಡಿಮೆ, ಶನೈಃ=ಮೆಲ್ಲನೆ, ಋಧಕ್=ಸತ್ಯ, ಋತೇ=ಬಿಟ್ಟು, ಯುಗಪತ್=ಏಕಕಾಲದಲ್ಲಿ, ಆರಾತ್=ದೂರ, ಸಮೀಪ, ಪೃಥಕ್=ಬೇರೆ, ಅನ್ಯ. ಹ್ಯಸ್=ನಿನ್ನೆ, ಶ್ವಸ್=ನಾಳೆ, ದಿವಾ=ಹಗಲು, ರಾತ್ರೌ=ರಾತ್ರಿ, ಸಾಯಂ=ಸಾಯಂಕಾಲ, ಚಿರಂ=ಬಹುಕಾಲ, ಮನಾಕ್,ಈಷತ್=ಸ್ವಲ್ಪ, ಜೋಷಂ=ಸುಖ, ಮೌನ, ತೂಷ್ಣೀಂ=ಮೌನ, ಬಹಿಸ್, ಅವಸ್=ಹೊರಗೆ, ಸಮಯಾ=ಹತ್ತಿರ, ಸ್ವಯಂ=ತಾನಾಗಿ. ವೃಥಾ=ವ್ಯರ್ಥ, ನಕ್ತಂ=ರಾತ್ರಿ, ನಞ್=ಇಲ್ಲ, ನಿಷೇಧ. ಹೇತೌ=ನಿಮಿತ್ತ, ಕಾರಣ, ಇದ್ಧಾ=ಪ್ರಕಾಶವಾಗಿರುವದು, ಅದ್ಧಾ=ಸ್ಪಷ್ಟ, ನಿಶ್ಚಯ, ಸಾಮಿ=ಅರ್ಧ, ಜಿಗುಪ್ಸಿತ, ವತ್=ಸಾದೃಶ್ಯಾರ್ಥಕಪ್ರತ್ಯಯ, ಇದು ಅಂತವಾದುದು ಅವ್ಯಯ, ಹೇಗೆಂದರೆ ಬ್ರಾಹ್ಮಣವತ್=ಬ್ರಾಹ್ಮಣನಂತೆ, ಕ್ಷತ್ರಿಯವತ್=ಕ್ಷತ್ರಿಯನಂತೆ. ಸನಾ, ಸನತ್, ಸನಾತ್=ನಿತ್ಯ, ಉಪಧಾ=ಭೇದ, ತಿರಸ್=ಅಂತರ್ಧಾನ, ಅಡ್ಡ ತಿರಸ್ಕಾರ, ಅಂತರಾ=ಮಧ್ಯ, ಬಿಟ್ಟು, ಅಂತರೇಣ=ಬಿಟ್ಟು, ಜ್ಯೋಕ್=ಕಾಲಾಧಿಕ್ಯ, ಪ್ರಶ್ನೆ, ಶೀಘ್ರ, ಈಗ. ಕಮ್=ನೀರು, ತಲೆ, ನಿಂದಾ, ಸುಖ. ಶಮ್=ಸುಖ. ಸಹಸಾ=ಆಕಸ್ಮಿಕ, ಅವಿಮರ್ಶ. ವಿನಾ=ವರ್ಜ(ಬಿಟ್ಟು), ನಾನಾ=ಅನೇಕ, ವಿನಾ. ಸ್ವಸ್ತಿ=ಮಂಗಳ, ಸ್ವಧಾ=ಪಿತೃಗಳ ದಾನ ಸೂಚಕ, ಅಲಂ=ಅಲಂಕಾರ, ಸಾಕಮ್ಮು, ಶಕ್ತಿ, ನಿಷೇಧ, ತಡೆ. ವಷಟ್, ಶ್ರೌಷಟ್, ವೌಷಟ್=ಹವಿರ್ದಾನ ಸೂಚಕ. ಅನ್ಯತ್=ಬೇರೆ. ಅಸ್ತಿ=ಇರುವಿಕೆ. ಉಸಾಂಕು=ನಿದಾನೋಚ್ಚಾರಣೆ, ರಹಸ್ಯ.

ಕ್ಷ್ನುವಾ=ಸಹನೆ. ವಿಹಾಯಸಾ=ಆಕಾಶ. ದೋಷಾ=ರಾತ್ರಿ. ಮೃಷಾ, ಮಿಥ್ಯಾ=ಸುಳ್ಳು. ಮುಧಾ=ವ್ಯರ್ಥ. ಪುರಾ=ಸತತ, ಬಹುಕಾಲದ ಹಿಂದೆ, ಮುಂದೆ ಆಗುವುದು, ಆಸನ್ನವಾಮದು. ಮಿಥೋ ಮಿಥಸ್=ಗುಟ್ಟು. ಒಟ್ಟಿಗೆ. ಪ್ರಾಯಸ್=ಸಾಮಾನ್ಯ, ಮುಹುಸ್=ಪುನಃಪುನಃ. ಪ್ರವಾಹುಕಮ್=ಸಮಾನಕಾಲ, ಮೇಲೆ. ಪ್ರವಾಹಿಕಾ ಎಂದರೂ ಇವೇ ಅರ್ಥ. ಅದು ಪಾಠಾಂತರ. ಆರ್ಯಹಲಮ್=ಬಲಾತ್ಕಾರ ಇದು ಭಿನ್ನವಾಗಿಯೂ ಇವೆ. ಆರ್ಯ=ಪ್ರತಿಬಂಧಕ. ಅಲಂ=ಪ್ರತಿಷೇಧ, ವಿವಾದ. ಅಭೀಕ್ಷ್ಣಮ್=ಪೌನಃ ಪುನ್ಯ. ಸಾಕಮ್, ಸಾರ್ಧಮ್=ಒಟ್ಟಿಗೆ. ನಮಸ್=ಬಗ್ಗಿರುವಿಕೆ. ಹಿರುಕ್=ವರ್ಜನ (ಬಿಟ್ಟಿರುವುದು) ಧಿಕ್=ನಿಂದಾ, ಗದರಿಸುವಿಕೆ. ಅಥ=ಆಮೇಲೆ ಅಮ್=ಶೀಘ್ರ, ಅಲ್ಪ. ಆಮ್=ಅಂಗೀಕಾರ. ಪ್ರತಾಮ್=ಬಾಡುವಿಕೆ. ಪ್ರಶಾನ್=ಸಮಾನ. ಪ್ರತಾನ್=ವಿಸ್ತಾರ. ಮಾ ಮಾಙ್=ನಿಷೇಧ, ಆಶಂಕೆ. ಆಕೃತಿಗಣೋಯಮ್=ಈ ಸ್ವರಾದಿಗಳು ಕೆಲವು ಮಾತ್ರ ಇಲ್ಲಿ ಹೇಳಿದೆ. ಆಕೃತಿಯಿಂದ ಇದರಂತೆ ಇರುವ ಇತರ ಶಬ್ದಗಳೂ ಅವ್ಯಯಎಂದು ಊಹಿಸಿ ಕೊಳ್ಳಬೇಕು. ಅವು ಹೇಗೆಂದರೆ–ಕಾಮಂ ಇದು ಸ್ವೆಚ್ಛಂದ ಎಂಬರ್ಥ ಕೊಡುತ್ತದೆ. ಪರಂ=ಆದರೆ. ಸಾಕ್ಷಾತ್=ಪ್ರತ್ಯಕ್ಷ. ಸಾಚಿ=ಅಡ್ಡಲಾಗಿ. ಸತ್ಯಂ=ಅರ್ಧ ಅಂಗೀಕಾರ. ಮಂಕ್ಷು, ಅಶು=ಬೇಗ. ಸಂವತ್=ವರ್ಷ. ಅವಶ್ಯಂ=ನಿಶ್ಚಯ. ಉಷಾ=ರಾತ್ರಿ. ಓಂ=ಅಂಗೀಕಾರ. ಬ್ರಹ್ಮ. ಭೂಃ=ಭೂಮಿ. ಭುವಃ=ಅಂತರಿಕ್ಷ. ಝಟಿತಿ, ಝಕ್, ತರಸಾ=ಬೇಗ. ಸುಷ್ಠು=ಪ್ರಶಂಸೆ. ದುಷ್ಠು=ನಿಷ್ಕೃಷ್ಟ. ಸು=ಪೂಜಾ. ಕು=ಕುತ್ಸಿತ, ಸ್ವಲ್ಪ. ಅಂಜಸಾ=ತತ್ವ, ಬೇಗ ಮಿಥು=ಎರಡು, ಅಸ್ತಂ=ವಿನಾಶ. ಸ್ಥಾನೇ=ಯುಕ್ತ. ವರಂ=ಸ್ವಲ್ಪ, ಉತ್ಕರ್ಷ. ಸುದಿ=ಶುಕ್ಲಪಕ್ಷ. ವದಿ=ಕೃಷ್ಣಪಕ್ಷ.

ಇನ್ನು ಚಾದಿಗಳನ್ನು ಹೇಳುತ್ತಾನೆ. ಚ=ಸಮುಚ್ಚಯ, ಅನ್ವಾಚಯ, ಇತರೇತರಯೋಗ, ಸಮಾಹಾರ. ವಾ=ವಿಕಲ್ಪ, ಉಪಮಾ, ಸಾದೃಶ್ಯ, ಸಮುಚ್ಚಯ. ಹ=ಪ್ರಸಿದ್ಧಿ. ಏವ=ನಿಶ್ಚಯ. ಅನಿಶ್ಚಯ. ಏವಮ್=ಈರೀತಿಯಾಗಿ. ನೂನಮ್=ತರ್ಕ, ನಿಶ್ಚಯ. ಶಶ್ವತ್=ಪುನಃ, ಪುನಃ, ನಿತ್ಯ, ಒಟ್ಟಿಗೆ. ಯುಗಪತ್=ಏಕಕಾಲದಲ್ಲಿ ಭೂಯಸ್=ಪುನಃ ಅಧಿಕ್ಯ. ಕೂಪತ್=ಪ್ರಶ್ನ, ಪ್ರಶಂಸಾ. ಕುವಿತ್=ಅಧಿಕ, ಪ್ರಶಂಸಾ. ನೇತ್=ಶಂಕೆ, ನಿಷೇಧ, ವಿಚಾರ, ಸಮುಚ್ಚಯ. ಚೇತ್=ರೆ, (ಆದರೆ) ಚಣ್=ಒಂದುವೇಳೆ (ರೆ) ಕಚ್ಚಿತ್=ಇಷ್ಟಪ್ರಶ್ನೆ. ಯತ್ರ=ಅನಿಷ್ಟಿತ ಪ್ರದೇಶ, ಅಮರ್ಷ, ನಿಂದಾ, ಆಶ್ಚರ್ಯ. ನಹ=ಪ್ರತ್ಯಾರಂಭ. ಹಂತ=ಹರ್ಷ, ವಿಷಾದ, ಅನುಕಂಪಾ, ವಾಕ್ಯಾರಂಭ. ಮಾಕಿಃ, ಮಾಕಿಂ, ನಕಿಃ, ನಕಿಮ್=ಬಿಟ್ಟು, ಮಾಙ್, ನಞ್=ಸ್ವರಾದ್ಯುಕ್ತಿ. ಯಾವತ್, ತಾವತ್=ಪೂರ್ತಿ, ಅವಧಿ, ಪರಿಮಾಣ. ನಿಶ್ಚಯ. ವ್ಯೈ=ವಿಶೇಷ, ವಿತರ್ಕ, ದ್ವ್ಯೈ=ವಿತರ್ಕ. ನ್ವೈ=ವಿತರ್ಕ.

ಇದುಪಾಠಾಂತರ. ರೈ=ದಾನ, ಅನಾದರ. ಶ್ರೌಷಟ್, ವೌಷಟ್, ಸ್ವಾಹಾ=ಸ್ವರಾದ್ಯುಕ್ತಿಯಲ್ಲಿ ಬರುತ್ತವೆ. ಸ್ವಾಹಾ=ಸೇನತಾ ದಾನದಲ್ಲಿ ಹೇಳುವುದು. ಸ್ವಧಾ=ಪಿತೃಗಳ ದಾನದಲ್ಲಿ ಹೇಳುವುದು. ವಷಟ್=ಮಂತ್ರದಲ್ಲಿ ಹೇಳುವುದು. ತುಮ್=ತುಚ್ಛೀಕರಿಸಿ ಹೇಳುವಾಗ ಉಪಯೋಗಿಸುವುದು. ತಥಾಹಿ=ನಿದರ್ಶನ ಹೇಳುವಾಗ ಬರುವುದು. ಖಲು=ನಿಷೇಧ. ವಾಕ್ಯಾಲಂಕಾರ, ನಿಶ್ಚಯ. ಕಿಲ=ವಾರ್ತಾದಲ್ಲಿ, ಸುಳ್ಳು. ಅಥೋ ಅಥ=ಮಂಗಲ, ಅನಂತರ, ಆರಂಭ, ಪ್ರಶ್ನ, ಪೂರ್ತಿ, ಅಧಿಕಾರ, ಪ್ರತಿಜ್ಞಾ, ಸಮುಚ್ಚಯ. ಸುಷ್ಠು=ಪ್ರಶಂಸಾ. ಸ್ಮ=ಕಳೆದದ್ದು, ಪಾದ ಪೂರಣದಲ್ಲಿ ಬರುವುದು. ಆದಹ=ಉಪಕ್ರಮ, ಹಿಂಸಾ, ನಿಂದಿತ.–

ಉಪಸರ್ಗ ವಿಭಕ್ತಿ ಸ್ವರ ಪ್ರತಿರೂಪಕಾಶ್ಚ ॥ ಅವದತ್ತಂ। ಅಹಂಯುಃ ಅಸ್ತಿಕ್ಷೀರಾ॥

ಕೆಲವು ಅವ್ಯಯಗಳು ಉಪಸರ್ಗದಂತೆಯೂ ವಿಭಕ್ತ್ಯಂತದಂತೆಯೂ ಸ್ವರಗಳಂತೆಯೂ ಇರುತ್ತವೆ. ಉಪಸರ್ಗದಂತಿರುವವುಗಳು. ಅವದತ್ತಂ–ವಿದತ್ತಂ–ಪ್ರದತ್ತಂ, ಸುದತ್ತಂ ಇಲ್ಲಿ ಅವ, ವಿ, ಪ್ರ, ಸು, ಅವ್ಯಯಗಳು. ಇವು ಉಪಸರ್ಗಗಳಂತೆ ಇವೆ. ಉಪಸರ್ಗಗಳಲ್ಲ. ಹಾಗೆಯೇ ವಿಭಕ್ತ್ಯಂತದಂತೆ ಕೆಲವು ಇವೆ. ಅಹಂಯುಃ=ಅಹಂಕಾರಿ. ಅಸ್ತಿಕ್ಷೀರಾ=ಹಾಲುಳ್ಳದ್ದು. ಇವು ವಿಭಕ್ತ್ಯಂತದಂತೆ ತೋರುತ್ತವೆ. ಇನ್ನು ಸ್ವರದಂತಿರುವವುಗಳು.

ಅ । ಆ । ಇ । ಈ । ಉ । ಊ । ಏ ಐ । ಓ । ಔ ।

ಪಶು । ಶುಕಮ್ । ಯಥಾಕಥಾ ಚ । ಪಾಟ್ । ಪ್ಯಾಟ್ । ಅಂಗ । ಹೈ । ಹೇ । ಭೋಃ । ಆಯೇ । ದ್ಯ । ನಿಪು । ವಿಕಪದೇ ॥ ಯುತ್ । ಅತಃ । ಚಾದಿರಸ್ಯಾಕೃತಿಗಣಃ ॥ ತಸಿಲಾದಯಃ ಪ್ರಾಕ್ ಪಾಶಪಃ । ಶಸ್ ಪ್ರಭೃತಯಃ ಪ್ರಾಕ್ ಸಮಾಸಾಂತೇಭ್ಯಃ ॥ ಅಮ್ । ಆಮ್ । ಕೃತ್ವೋರ್ಥಾಃ । ತಸಿವತೀ । ನಾನಾಞೌ । ವಿತದಂತಮವ್ಯಯಮ್ ॥

ಅ=ಕರೆಯುವಾಗ, ನಿಷೇಧದಲ್ಲಿ, ತಿರಸ್ಕರಿಸುವುದರಲ್ಲಿ ಬರುತ್ತದೆ. ಆ=ವಾಕ್ಯಸ್ಮರಣಾರ್ಥಗಳಲ್ಲಿ. ಇ=ಕರೆಯುವಾಗ, ಜುಗುಪ್ಸೆಯಲ್ಲಿ, ಆಶ್ಚರ್ಯದಲ್ಲಿ ಬರುತ್ತದೆ. ಈ ಯಿಂದ ಔವರೆಗೆ ಕರೆಯುವಾಗ ಉಪಯೋಗಿಸಲ್ಪಡುತ್ತವೆ. ಪಶು=ಚನ್ನಾಗಿ ಶುಕಂ=ಬೇಗನೆ. ಯಥಾಕಥಾಚ=ಅನಾದರತಿಳಿಸುವುದು.

ಪಾಟಿನಿಂದ ಆಯೇನರಿಗೆ ಸಂಬೋಧನೆಯಲ್ಲಿ ಉಪಯೋಗಿಸಲ್ಪಡುವವುಗಳು. ದ್ಯ= ಹಿಂಸಾ, ಪ್ರಾತಿಲೋಮ್ಯ, ಪಾದಪೂರಣೆಗಳಲ್ಲಿ ಬರುತ್ತದೆ. ವಿಷು=ನಾನಾ. ಏಕ ಸದೇ=ಏಕಸ್ಮಾತ್ತಾಗಿ. ಯುತ್=ಕುತ್ಸಿತ. ಆತಃ=ಇನ್ನೂ ಹೀಗೆ ಚಾದಿಗಳು ಉಕ್ತವಾಗಿವೆ. ಇದೂ ಆಕೃತಿಗಣ. ಇದರಂತೆ ದೃಷ್ಟವಾದವುಗಳನ್ನು ಹೇಳದಿದ್ದರೂ ಸೇರಿಸಿಕೊಳ್ಳಬೇಕು. ಹೇಗೆಂದರೆ ಯತ್, ತತ್=ಹೇತುವಿನಲ್ಲಿ ಬರುತ್ತವೆ. ಆಹೋಸ್ವಿತ್=ವಿಕಲ್ಪ, ಸೀಮ=ಎಲ್ಲಾರೀತಿಯಿಂದಲೂ, ವ=ಸಾದೃಶ್ಯ. ಪಾದ ಪೂರಕ. ದಿಷ್ಟ್ಯಾ=ಸಂತೋಷದಲ್ಲಿ. ಚಾಟು=ಪ್ರಿಯವಾಕ್ಯ ಹುಂ=ಗದರಿಸು ವಿಕೆ. ಇನ=ಸಾದೃಶ್ಯ. ಅದ್ಯತ್ವೈ=ಈಗ.

ಇನ್ನು ತಸಿಲ್ ಪ್ರತ್ಯಯದಿಂದ ಪಾಶಪ್ ಪ್ರತ್ಯಯದವರೆಗೆ ಎಷ್ಟು ಪ್ರತ್ಯಯ ಹೇಳಿರುವನೋ ಆ ಪ್ರತ್ಯಯಾಂತವಾದವುಗಳೆಲ್ಲಾ ಅವ್ಯಯಗಳು. ವೃಕ್ಷತಃ ಇದು ತಸಿಲಂತ. ವೃಕ್ಷದ ದೆಸೆಯಿಂದ ಎಂದರ್ಥ. ಹೀಗೇ ಶಸ್ ಪ್ರತ್ಯಯದಿಂದ ಆರಂಭಿಸಿ ಸಮಾಸಾಂತಪ್ರತ್ಯಯದವರೆಗೆ ಹೇಳಿರುವ ಪ್ರತ್ಯಯಾಂತ ಶಬ್ದಗಳು ಅವ್ಯಯಗಳು. ಇವು ತದ್ಧಿತದಲ್ಲಿ ಹೇಳಿವೆ. ಕಣಶಃ ಇದು ಶಸಂತ, ಕಣಕಣವಾಗಿ ಎಂದರ್ಥ. ಕೃತ್ವಸುಚ್ ಪ್ರತ್ಯಯಾಂತವಾದುದೂ ಅವ್ಯಯ. ತದರ್ಥಕಪ್ರತ್ಯಯಾಂತವಾದುದೂ ಅವ್ಯಯ. ಕೃತ್ವಸುಚಿಗೆ ಬಾರಿ, ಸಲ ಎಂದರ್ಥ. ಪಂಚಕೃತ್ವಃ=ಐದು ಬಾರಿ (ಸಲ) ದ್ವಿಃ, ತ್ರಿಃ=ಎರಡುಸಲ, ಮೂರುಸಲ. ತಸ್ ವತ್ ಪ್ರತ್ಯಯಾಂತವಾದವು ಗಳು ಅವ್ಯಯ. ವಿನಾ, ನಾನಾ ಉದಾಹರಣೆ. ಹೊರತಾಗಿ, ಅನೇಕರೀತಿ ಅರ್ಥ. ಇನ್ನೂಕೆಲವು ಪ್ರತ್ಯಯಾಂತವಾದವುಗಳನ್ನು ಸೂತ್ರದಿಂದ ನಿರ್ದೇಶಿಸುತ್ತಾನೆ.

(ಕೃದಂತಕ್ಕೆ ಅವ್ಯಯ ಸಂಜ್ಞೆ ಹೇಳುವ ಸೂತ್ರ)

೩೭೦. ಕೃತ್ಮೇಜಂತಃ ॥ ೧-೧-೩೯ ॥

ಕೃದ್ಯೋ ಮಾಂತಃ ಏಜಂತಶ್ಚ ತದಂತಮವ್ಯಯಂ ಸ್ಯಾತ್ । ಸ್ಮಾರಂ ಸ್ಮಾರಂ, । ಜೀವಸೇ । ಪಿಬಧ್ಯೈ ।

ಕೃತ್, ಮೇಜಂತಃ ॥ ಮ್ಚ, ಏಚ್ಚ ಮೇಚೌ । ತೌ ಅಂತೇ ಯಸ್ಯ ಸಃ । ಮೇಜಂತಃ. ಮಕಾರ, ಏಚ್ ಅಂತದಲ್ಲಿರುವವುಗಳು. **ಸೂತ್ರಾರ್ಥ**–ಮಕಾರಾಂತವಾದ, ಏಜಂತವಾದ ಕೃತ್ ಪ್ರತ್ಯಯವೇ ಕೊನೆಯಲ್ಲಿರುವ ಶಬ್ದವು ಅವ್ಯಯ ಸಂಜ್ಞೆಯನ್ನು ಹೊಂದುತ್ತದೆ. ಸ್ಮಾರಂ ಸ್ಮಾರಮ್. ಸ್ಮೃ ಧಾತುವಿಗೆ ಣಮುಲ್ ಪ್ರತ್ಯಯ ಬಂದಿದೆ. ಣಮುಲಿನಲ್ಲಿ ಅಮ್ ಉಳಿಯುತ್ತದೆ. ಆಗ ಮಾಂತವಾದ ಕೃದಂತ ಶಬ್ದ ಸ್ಮಾರಂ ಎಂಬುದು. ಣಮುಲಂತಕ್ಕೆ " ನಿತ್ಯವೀಪ್ಸಯೋಃ " ಎಂಬುದರಿಂದ ದ್ವಿತ್ವ

ಬರುತ್ತದೆ. ಜೀವಸೇ. ಏಜಂತ ಕೃದಂತವಾಗಿದೆ. ಜೀವಧಾತುವಿಗೆ ಅಸೇ ಪ್ರತ್ಯಯ ಬಂದಿದೆ. ಪಿಬಧ್ಯೈ. ಇದೂ ಏಜಂತ ಕೃದಂತ ಅವ್ಯಯ. ಪಾಧಾತುವಿಗೆ ಶಧ್ಯೈ ಪ್ರತ್ಯಯ. ಶಕಾರ ಇತ್. ಪಾಧಾತುವಿಗೆ ಪಿಬಾದೇಶ. ಪಿಬಧ್ಯೈ.

(ಕೃದಂತಗಳಿಗೆ ಅವ್ಯಯ ಹೇಳುವ ಸೂತ್ರ)

೩೭೧. ಕ್ತ್ವಾತೋಸುನ್‌ಕಸುನಃ ॥ ೧-೧-೪೦ ॥

ಏತದಂತಮವ್ಯಯಮ್ । ಕೃತ್ವಾ । ಉದೇತೋಃ । ವಿಸೃಪಃ

ಏಕಪದಸೂತ್ರ. ಇಲ್ಲಿ ಮೂರು ಪ್ರತ್ಯಯಗಳು ಹೇಳಿವೆ. **ಸೂತ್ರಾರ್ಥ**–ಕ್ತ್ವಾ, ತೋಸುನ್, ಕಸುನ್ ಪ್ರತ್ಯಯಾಂತಗಳು ಅವ್ಯಯ ಸಂಜ್ಞೆಯನ್ನು ಹೊಂದುತ್ತವೆ ಕ್ತ್ವಾ=ಕೃತ್ವಾ. ಕೃಞ್ ಧಾತುವಿಗೆ ಕ್ತ್ವಾಪ್ರತ್ಯಯ. ಕಕಾರ ಇತ್. (ಮಾಡಿ ಎಂದರ್ಥ.) ತೋಸುನ್=ಉದೇತೋಃ. ಉತ್ ಉಪಸರ್ಗಸಹಿತವಾದ ಇಣ್ ಧಾತುವಿಗೆ "ಭಾವಲಕ್ಷಣೇ"—ಸೂತ್ರದಿಂದ ತೋಸುನ್ ಪ್ರತ್ಯಯ. ಕಸುನ್=ವಿಸೃಪಃ ಸೃಪಲೃಗತೌ ಧಾತು. ಕಸುನ್ ಪ್ರತ್ಯಯ. "ಲಶಕ್ವತದ್ಧಿತೇ" ಕಕಾರ ಇತ್. "ಹಲಂತ್ಯಮ್" ನಕಾರ ಇತ್. ಅಸ್ ಉಳಿಯುತ್ತದೆ. ಉಕಾರ ಉಚ್ಚಾರಣಾರ್ಥ. ಸೃಪ್ + ಅಸ್. ಸೃಪಸ್. ಸಕಾರಕ್ಕೆ ರುತ್ವವಿಸರ್ಗ. ವಿಸೃಪಃ. ಇದು ಅವ್ಯಯ ವಾಗುತ್ತದೆ.

(ಸಮಾಸದಲ್ಲಿ ಅವ್ಯಯ ಸಂಜ್ಞೆ ಹೇಳುವ ಸೂತ್ರ)

೩೭೨. ಅವ್ಯಯೀಭಾವಶ್ಚ ॥ ೧-೧-೪೧॥

ಅಧಿಹರಿ.

ಅವ್ಯಯೀಭಾವಃ, ಚ. ॥ ದ್ವಿಪದಸೂತ್ರ. "ಅವ್ಯಯಂ" ಅನುವೃತ್ತಿ. **ಸೂತ್ರಾರ್ಥ**–ಅವ್ಯಯೀಭಾವಸಮಾಸವೂ ಅವ್ಯಯಸಂಜ್ಞೆಯನ್ನು ಹೊಂದುತ್ತದೆ. ಅಧಿಹರಿ ಹರೌ=ಅಧಿಹರಿ. ವಿಭಕ್ತ್ಯರ್ಥದಲ್ಲಿ ಅವ್ಯಯೀಭಾವಸಮಾಸ. ಇದು ಅವ್ಯಯ ವಾಗುತ್ತದೆ. ಹೀಗೆ ಅವ್ಯಯಗಳನ್ನು ಹೇಳಿ ಅವುಗಳಮೇಲೆ ಬರುವ ಪ್ರತ್ಯಯಗಳಿಗೆ ಲೋಪಹೇಳುತ್ತಾನೆ.

(ಅವ್ಯಯದ ಮೇಲಿರುವ ಆಪ್‌ಸುಪಿಗೆ ಲೋಪಹೇಳುವಸೂತ್ರ)

೩೭೩. ಅವ್ಯಯಾದಾಪ್‌ಸುಪಃ॥ ೨-೪-೮೨॥

ಅವ್ಯಯಾದ್ವಿಹಿತಸ್ಯಾಪಃ ಸುಪಶ್ಚ ಲುಕ್॥ ತತ್ರ ಶಾಲಾಯಾಮ್।
ಸದೃಶಂ ತ್ರಿಷು ಲಿಂಗೇಷು ಸರ್ವಾಸು ಚ ವಿಭಕ್ತಿಷು॥ ವಚನೇಷು ಚ
ಸರ್ವೇಷು ಯನ್ನವ್ಯೇತಿ ತದವ್ಯಯಮ್ ॥೧॥ ವಷ್ಟಿ ಭಾಗುರಿರ
ಲ್ಲೋಪಮವಾಪ್ಯೋರುಪಸರ್ಗಯೋಃ॥ ಆಪಂ ಚೈವ ಹಲಂತಾನಾಂ
ಯಥಾವಾಚಾ ನಿಶಾ ದಿಶಾ ॥೨॥ ವಗಾಹಃ। ಅವಗಾಹಃ। ಪಿಧಾನಂ।
ಅಪಿಧಾನಂ॥

ಇತಿ ಅವ್ಯಯಪ್ರಕರಣಮ್

ಅವ್ಯಯಾತ್, ಆಪ್‌ಸುಪಃ॥ ದ್ವಿಪದಸೂತ್ರ. ಆಪ್‌ಚ, ಸುಪ್‌ಚ ಆಪ್ ಸುಪ್. ಸಮಾಹಾರದ್ವಂದ್ವ. ತಸ್ಯ ಆಪ್‌ಸುಪಃ "ಣ್ಯಕ್ಷತ್ರಿಯಾರ್ಷ"—ಸೂತ್ರದಿಂದ "ಲುಕ್ ಅನುವೃತ್ತಿ. **ಸೂತ್ರಾರ್ಥ**—ಅವ್ಯಯದಮೇಲೆ ವಿಹಿತವಾದ ಆಪ್‌ಪ್ರತ್ಯಯಕ್ಕೂ, ಸುಪ್‌ಪ್ರತ್ಯಯಕ್ಕೂ ಲುಕ್ ಬರುತ್ತದೆ. ತತ್ರ ಶಾಲಾಯಾಮ್. ತತ್ರ ಅವ್ಯಯ. ಇಲ್ಲಿ ಶಾಲಾಕ್ಕೆ ವಿಶೇಷಣವಾದುದರಿಂದ ಸ್ತ್ರೀಲಿಂಗದಲ್ಲಿ ಆಪ್ ಬರುತ್ತದೆ. ಅದಕ್ಕೆ ಈ ಸೂತ್ರದಿಂದ ಲುಕ್. ತತ್ರ ಎಂದೇ ಉಳಿಯುತ್ತದೆ. ಅಥ ಇಲ್ಲಿ ಸುಪಿಗೆ ಲುಕ್ ಬಂದಿದೆ. ಅವ್ಯಯಗಳಿಗೆ ಲಿಂಗವಿಲ್ಲದುದರಿಂದ ಆಪ್ ಇಲ್ಲಿ ಹೇಳಬೇಕಾಗಿಲ್ಲ ವೆಂದು ವಾರ್ತಿಕಕಾರರಮತ. "ಸದೃಶಂತ್ರಿಷು"—ಶ್ಲೋಕದಿಂದ ಅವ್ಯಯ ಲಕ್ಷಣ ಹೇಳುತ್ತಾನೆ. ಯತ್ = ಯಾವ ಶಬ್ದಸ್ವರೂಪವು ತ್ರಿಷು ಲಿಂಗೇಷು = ಮೂರುಲಿಂಗಗಳ ಲ್ಲಿಯೂ, ಸರ್ವಾಸು ವಿಭಕ್ತಿಷು = ಎಲ್ಲಾ ವಿಭಕ್ತಿಗಳಲ್ಲಿಯೂ, ಸರ್ವೇಷು ವಚನೇಷು = ಎಲ್ಲಾ, ವಚನಗಳಲ್ಲಿಯೂ ಸದೃಶಂ = ಸಮಾನರೂಪವುಳ್ಳದ್ದಾಗಿ, ನವ್ಯೇತಿ = ವಿಕಾರ ಹೊಂದುವುದಿಲ್ಲವೋ, ತತ್ ಅವ್ಯಯಮ್ = ಅದು ಅವ್ಯಯ. ಯಾವವಿಕಾರವಿಲ್ಲದೇ ಒಂದೇ ರೀತಿಯಾಗಿರುವ ಶಬ್ದ ರೂಪವೇ ಅವ್ಯಯ. ಪ್ರಸಂಗಸಂಗತಿಯಿರುವುದರಿಂದ ಕೆಲವು ವಿಷಯಗಳನ್ನು ಹೇಳುತ್ತಾನೆ.

ಭಾಗುರಿಃ = ಭಾಗುರಿಯೆಂಬ ಆಚಾರ್ಯರು. ಅವಾಪ್ಯೋರುಪಸರ್ಗಯೋಃ = ಅವ, ಅಪಿ ಈ ಎರಡು ಉಪಸರ್ಗಗಳ ಅಲ್ಲೋಪಂ = ಆದಿಯ ಅಕಾರಕ್ಕೆ ಲೋಪವನ್ನು ವಷ್ಟಿ = ಬಯಸುತ್ತಾನೆ. ಭಾಗುರಿ ಹೇಳುವುದರಿಂದ ಪಾಣಿನೀಯ್ಯಾ ಲೋಪವಿಲ್ಲ. ಆಗ ವಿಕಲ್ಪವೆಂದಾಗುತ್ತದೆ. ಹಲಂತನಾಂ = ಹಲಂತ ಶಬ್ದಗಳಿಗೆ ಆಪಂಚ = ಆಪ್ ಪ್ರತ್ಯಯವನ್ನೂ ಬಯಸುತ್ತಾರೆ. ಪಾಣಿನಿಯ ಮತದಲ್ಲಿ ಅದಂತ ಶಬ್ದಗಳಿಗೆ ಮಾತ್ರ ಸ್ತ್ರೀತ್ವ ತೋರುವಾಗ ಟಾಪ್, ಹಲಂತಕ್ಕೆ ಟಾಪ್ ಇಲ್ಲ. ಯಥಾ = ಹೇಗೆಂದರೆ ವಾಚಾ, ನಿಶಾ, ದಿಶಾ. ವಾಚ್, ನಿಶ್, ದಿಶ್ ಇವು ಹಲಂತ ಶಬ್ದ. ಇವುಗಳಿಗೆ ಟಾಪ್ ಬಂದರೆ ವಾಚಾ, ನಿಶಾ, ದಿಶಾ ಎಂದಾಗುತ್ತವೆ. ಪಾಣಿನಿ ಮತದಲ್ಲಿ

ಹಲಂತವಾಗಿಯೇ ಇರುತ್ತದೆ. ಉಪಸರ್ಗಗಳ ಅಕಾರಕ್ಕೆ ಲೋಪ ಬಂದುದಕ್ಕೆ ಉದಾಹರಣೆ. ಅಪಿಧಾನಂ, ಅವಗಾಹಃ ಎಂದಿದೆ. ಇಲ್ಲಿ ಅಪಿ, ಅವ ಗಳ ಅಕಾರಕ್ಕೆ ಭಾಗುರಿಗಳ ರೀತ್ಯಾ ಲೋಪಬಂದರಿ ವಗಾಹಃ, ಪಿಧಾನಂ ಎಂದಾಗುತ್ತದೆ. ವಗಾಹಃ (ಇಳಿಯುವಿಕೆ) ಪಿಧಾನಂ = ಮುಚ್ಚಳ " ಪೂರ್ವಾಪರಾ ತೋಯನಿಧೀ ವಗಾಹ್ಯ " ಎಂದು ಕಾಳಿದಾಸನು ಕುಮಾರಸಂಭವದಲ್ಲಿ ಪ್ರಯೋಗಿಸಿರುತ್ತಾನೆ.

ಹೀಗೆ ಅವ್ಯಯ ಪ್ರಕರಣ ವಿಸ್ತೃತವಾಗಿದೆ. ಇದುವರೆಗೆ ನಾಮಪದಗಳ ವಿವರವನ್ನು ತೋರಿಸಿ ಇನ್ನು ಮುಂದೆ ಕ್ರಿಯಾಪದಗಳ ಸ್ವರೂಪವನ್ನು ತೋರಿಸುತ್ತಾನೆ. " ಪಾಣಿನೀಯ ಪ್ರವೇಶಿಕಾ " ವ್ಯಾಖ್ಯಾನದಲ್ಲಿ ಲಘುಸಿದ್ಧಾಂತಕೌಮುದೀ ಪೂರ್ವಭಾಗವು ಸಮಾಪ್ತವಾಗಿದೆ.

ಪಾಣಿನೀಯ ಪ್ರವೇಶಿಕಾ

ಬೆಲೆ : ರೂ. ೩—೮—೦

ಒನೆಯ ಭಾಗ

(ಸಂಜ್ಞಾ, ಸಂಧಿ ಮತ್ತು ಸುಬಂತ ಪ್ರಕರಣಗಳು)

ಬೆಲೆ : ರೂ. ೩—೪—೦

ಎನೆಯ ಭಾಗ

(ದಶವಿಕರಣೀ)

ಬೆಲೆ : ರೂ. ೩—೪—೦

ಮನೆಯ ಭಾಗ

(ಜಿಜಂತಾದಿ ಸ್ತ್ರೀಪ್ರತ್ಯಯಾಂತ)

ಮೂರು ಗ್ರಂಥಗಳನ್ನೂ ಒಟ್ಟಿಗೆ ತರಿಸಿಕೊಳ್ಳುವವರಿಗೆ ರೂ. ೭—೮—೦
ಮಾತ್ರ. ಅಂಚೆ ವೆಚ್ಚ ಪ್ರತ್ಯೇಕ.

ಪ್ರಕಾಶಕರು :

ವಿದ್ವಾನ್ ಜಿ. ವಿಷ್ಣುಮೂರ್ತಿಭಟ್ಟ

'ಶಿವಸ್ವಾಮಿ' ಭವನಮ್

ಪಾಣೀವಿಲಾಸ್ ರೋಡ್, ಮೈಸೂರು